ಸಂಸ್ಕಾರ ತರಂಗಿಣೀ

ಪುಷ್ಪ – 13

ಪಿತೃಮೇಧ ಪ್ರಯೋಗ

ಭಾಗ – 1

ಕನ್ನಡ ಸಾಹಿತ್ಯಲೋಕದಲ್ಲೇ ಪ್ರಪ್ರಥಮ ಬಾರಿಗೆ,
ವಿನೂತನ ವಿಧಾನದಲ್ಲಿ, ಕನ್ನಡದಲ್ಲಿ ಅರ್ಥ ಸಹಿತವಾಗಿ
ಪ್ರಕಟಗೊಳ್ಳುತ್ತಿರುವ,

ಭಾರದ್ವಾಜೀಯ/ಆಪಸ್ತಂಬೀಯ ಯಜುರ್ವೇದ
ಪಿತೃಮೇಧ(ಅಪರ)ಸೂತ್ರ, ಗೋಪಾಲಮುನಿಗಳ
ಮತ್ತು ಕಪರ್ದಿಸ್ವಾಮಿಗಳ ಭಾಷ್ಯ ಹಾಗೂ ಕಾರಿಕೆ
ಹಾಗೂ ಪ್ರಯೋಗಕ್ರಮ ಹಾಗೂ ಮಂತ್ರಗಳಿಗೆ
ಸಾಯಣಾಚಾರ್ಯರ ಭಾಷ್ಯಾರ್ಥ

ಸಂಸ್ಕಾರ ತರಂಗಿಣೀ

ಪುಷ್ಪ – 13

ಪಿತೃಮೇಧ ಪ್ರಯೋಗ

ಭಾಗ – 1

ಕನ್ನಡ ಸಾಹಿತ್ಯಲೋಕದಲ್ಲೇ ಪ್ರಪ್ರಥಮ ಬಾರಿಗೆ,
ದಿನೂತನ ವಿಧಾನದಲ್ಲಿ, ಕನ್ನಡದಲ್ಲಿ ಅರ್ಥ
ಸಹಿತವಾಗಿ ಪ್ರಕಟಗೊಳ್ಳುತ್ತಿರುವ,

ಭಾರದ್ವಾಜೀಯ/ಆಪಸ್ತಂಬೀಯ ಯಜುರ್ವೇದದ ಪಿತೃಮೇಧ (ಅಪರ) ಸೂತ್ರ, ಗೋಪಾಲಮುನಿಗಳ ಮತ್ತು ಕಪರ್ದಿಸ್ವಾಮಿಗಳ ಭಾಷ್ಯ ಹಾಗೂ ಕಾರಿಕೆ ಹಾಗೂ ಪ್ರಯೋಗಕ್ರಮ ಹಾಗೂ ಮಂತ್ರಗಳಿಗೆ ಸಾಯಣಾಚಾರ್ಯರ ಭಾಷ್ಯಾರ್ಥ.

ಅಕ್ಷರ ಜೋಡಣೆ

ಶ್ರೀಮತಿ ಭಾರತೀ ಶರ್ಮಾ

ಸಂಪಾದಕರು, ಅನುವಾದಕರು
ಮತ್ತು ಪ್ರಕಾಶಕರು

ವೇ॥ಬ್ರ॥ ಶ್ರೀ
ಎ.ಸಿ. ಶಕ್ತಿಧರ ಶರ್ಮಾ

ಸಂಚಾಲಕರು

ವಿದ್ವಾನ್ ವೇ॥ಬ್ರ॥ ಶ್ರೀ
ಚಂದ್ರಶೇಖರ ಶರ್ಮಾ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥ ಶ್ರೀ
ಶಿವಕುಮಾರ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥ ಶ್ರೀ
ಕಿರಣ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು

ವೇದವೇದಾಂಗ ವಿದ್ವಾನ್
ವೇ॥ಬ್ರ॥ ಶ್ರೀ ಅಶ್ವತ್ಥನಾರಾಯಣ ಅವಧಾನಿಗಳು

ಸಲಹೆಗಾರರು

ವಿದ್ವಾನ್ ವೇ॥ಬ್ರ॥ ಶ್ರೀ ವೇಂಕಟೇಶ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥ ಶ್ರೀ ಮೀನಾಕ್ಷೀಸುಂದರ ಘನಪಾಠಿಗಳು

ಈ ಗ್ರಂಥದ ಪ್ರಾಯೋಜಕರು

ಶ್ರೀಯುತ ವೆಂಕೋಬರಾವ್ ಅವರು ಚಿಂತಾಮಣಿ ತಾಲ್ಲೂಕು ಬುರುಡುಗುಂಟೆ ಗ್ರಾಮದಲ್ಲಿ 1939 ರಲ್ಲಿ ಜನಿಸಿದರು. ಅವರು ಶ್ರೀಮತಿ ಶಾಕಂಬರೀ ಬಾಯಿಯವರನ್ನು ತಮ್ಮ ಬಾಳಸಂಗಾತಿಯನ್ನಾಗಿ ವರಿಸಿ, ಗೃಹಸ್ಥಾಶ್ರಮವನ್ನು ಸ್ವೀಕರಿಸಿದರು. ತಮ್ಮ ಪ್ರತಿನಿಧಿಗಳಾಗಿ ಇಬ್ಬರು ಪುತ್ರಿಯರು ಹಾಗೂ ಇಬ್ಬರು ಪುತ್ರರನ್ನು ಪಡೆದು, ಅವರೆಲ್ಲರಿಗೂ ಸಾತ್ವಿಕವಾದಂತಹ ಸಂಸ್ಕಾರವನ್ನು ಕೊಟ್ಟು ಬೆಳೆಸಿ, ತಾವೂ ಸಮಾಜಮುಖಿಯಾದಂತಹ ರೀತಿಯಲ್ಲಿ ತುಂಬುಜೀವನವನ್ನು ನಡೆಸಿ, 2015 ರಲ್ಲಿ ತಮ್ಮ ಶರೀರತ್ಯಾಗವನ್ನು ಮಾಡಿ ಇಹಲೋಕವನ್ನು ತ್ಯಜಿಸಿದರು.

ಇವರ ಜ್ಯೇಷ್ಠ ಸುಪುತ್ರರಾದ ಶ್ರೀಮಾನ್ ಕೃಷ್ಣಮೂರ್ತಿ ಮತ್ತು ಶ್ರೀಮತಿ ಜ್ಯೋತಿ ದಂಪತಿಗಳು ಸನಾತನ ಪರಂಪರೆಯ ಬಗ್ಗೆ, ಸಂಸ್ಕೃತಿಗಳ ಬಗ್ಗೆ ಅತೀವವಾದ ಶ್ರದ್ಧೆ-ಭಕ್ತಿಗಳನ್ನು ಹೊಂದಿದವರಾಗಿದ್ದು, ಯಾವಾಗಲೂ ವಿದ್ಯಾರ್ಥಿಯಂತೆಯೇ ಇರಲು ಬಯಸುವ ಇವರು, ನಮ್ಮ ಧರ್ಮದಲ್ಲಿರುವ ತತ್ತ್ವಗಳನ್ನು, ಒಳಚಿಂತನೆಗಳನ್ನು ತಿಳಿದುಕೊಳ್ಳಲು ಸದಾಕಾಲ ಕಾತುರರಾಗಿರುತ್ತಾರೆ. ಮನುಷ್ಯ ತನ್ನಜೀವನದಲ್ಲಿ ಯಶಸ್ಸನ್ನು ಕಾಣಬೇಕಾದರೆ, ಸದ್ವಿದ್ಯೆ-ಸದ್ಬುದ್ಧಿ-ಸತ್ಸಂಸ್ಕಾರಗಳನ್ನು ಕೊಡುವ, ನಿಜವಾದ ಜ್ಞಾನವಾದ ಸನಾತನ ವಿದ್ಯೆಯನ್ನು ತಿಳಿಯಲೇಬೇಕೆಂದು ಬಲವಾಗಿ ನಂಬಿರುವ ಇವರು, "ನ ಹಿ ಜ್ಞಾನೇನ ಸದೃಶಂ" ಎಂಬ ದೇವವಾಣಿಯಿಂದ ಪ್ರಭಾವಿತರಾಗಿ "ಪುಸ್ತಕ ಓದಿ, ಮಸ್ತಕ ತಿದ್ದಿ", ಎಂಬ ಘೋಷವಾಕ್ಯವನ್ನು ತಮ್ಮ ಜೀವನದ ಆದರ್ಶವಾಗಿ ರೂಪಿಸಿಕೊಂಡು, ತಮ್ಮ ಸಂಪರ್ಕಕ್ಕೆ ಬರುವ ಎಲ್ಲರಿಗೂ ಅದರ ಮಹತ್ವವನ್ನು ತಿಳಿಸುತ್ತಾ, ತಮ್ಮ ಮಕ್ಕಳನ್ನೂ ಅದೇ ದಾರಿಯಲ್ಲಿ ಬೆಳೆಸುತ್ತಿದ್ದಾರೆ.

"ಕೇವಲ ಹಣದ ರೂಪದ ಐಶ್ವರ್ಯದಿಂದ ಈ ಲೋಕದಲ್ಲಿ ನಿಜವಾದ ಏನನ್ನೂ ಪಡೆಯಲು ಆಗುವುದಿಲ್ಲವೆಂಬ" ವಾಸ್ತವಸತ್ಯವನ್ನು, ಸಂತಮಹಾತ್ಮರ

ಜೀವನಶೈಲಿಯಿಂದಲೂ, ದೃಷ್ಟಾಂತಗಳಿಂದಲೂ ಅರಿತವರಾದ ಇವರು, ಸರಳವಾದ, ಶುದ್ಧವಾದ ಜೀವನಶೈಲಿಯನ್ನು ಇಷ್ಟಪಟ್ಟು ರೂಢಿಸಿಕೊಳ್ಳುತ್ತಾ ಸಾಗಿದ್ದಾರೆ. ಹಾಗಾಗಿಯೇ ಸರಳತೆಯೇ ಉಸಿರಾದ, ವೈರಾಗ್ಯವೇ ಜೀವನವಾದ, ಜಗತ್ತಿನ ತಂದೆ–ಯಾದ, ಜ್ಞಾನದ ಮೂರ್ತಿಯೇ ಆದ, ದೇವರದೇವನಾದ ಆ ಮಹಾದೇವನ ಬಗ್ಗೆ ಇವರಿಗೆ ವಿಶೇಷವಾದ ಆಕರ್ಷಣೆ. ಆ ಆಕರ್ಷಣೆಯ ಉತ್ಕಟತೆಯೇ, ಮುಗ್ಧತೆಯೇ ಇವರಿಂದ 2015ರಲ್ಲಿ ಮಹಾರುದ್ರಯಾಗವನ್ನೂ ಮಾಡಿಸಿಬಿಟ್ಟಿತು!!.

ಋಷಿಗಳಿಂದ ರಚಿಸಲ್ಪಟ್ಟ, ಭಗವಂತನ ಅಭಿಪ್ರಾಯವೇ ಆದ ಶಾಸ್ತ್ರಗ್ರಂಥಗಳ ಬಗ್ಗೆ ಇವರಿಗೆ ಎಲ್ಲಿಲ್ಲದ ಶ್ರದ್ಧೆ. "ಅವುಗಳಲ್ಲಿರುವ ಸತ್ಯಸಂಗತಿಗಳನ್ನು–ತತ್ವಗಳನ್ನು ತಿಳಿದು, ಅದರಂತೆ ಜೀವನವನ್ನು ರೂಪಿಸಿಕೊಂಡಾಗ ಮಾತ್ರವೇ ಯಶಸ್ಸು ನಮ್ಮದಾಗುತ್ತದೆ", ಎಂದು ಬಲವಾಗಿ ನಂಬಿಕೊಂಡಿರುವ ಇವರು, ವ್ಯಕ್ತಿಯು ಸತ್ತಾಗ ಮಾಡುವ ಅಪರಕರ್ಮದ ವಿಧಿವಿಧಾನಗಳನ್ನು ತಿಳಿಸುವ ಮೂಲ ಆಧಾರಗ್ರಂಥವಾದ, ಶ್ರೀಭಾರದ್ವಾಜ ಮತ್ತು ಶ್ರೀಆಪಸ್ತಂಬ ಮಹರ್ಷಿಗಳಿಂದ ರಚಿತವಾಗಿರುವ ಮತ್ತು ಶ್ರೀಗೋಪಾಲಮುನಿಗಳಿಂದ, ಶ್ರೀಕಪರ್ದಿಸ್ವಾಮಿಗಳಿಂದ ವ್ಯಾಖ್ಯಾನ ಮಾಡಲ್ಪಟ್ಟಿರುವ ಹಾಗೂ ಈ ಕರ್ಮದಲ್ಲಿ ಬಳಸುವ ಮಂತ್ರಗಳಿಗೆ ಶ್ರೀಸಾಯಣಾಚಾರ್ಯರಿಂದ ಬರೆಯಲ್ಪಟ್ಟ ಅರ್ಥಗಳನ್ನು ಒಳಗೊಂಡಿರುವ ಹಾಗೂ ವಿಶೇಷವಾಗಿ ಕನ್ನಡಸಾಹಿತ್ಯಲೋಕದಲ್ಲೇ ಇದುವರೆಗೂ ಪ್ರಕಟವೇ ಆಗದಿರುವ ಈ ಶಾಸ್ತ್ರ ಗ್ರಂಥರತ್ನವನ್ನು ತಮ್ಮ ಕುಟುಂಬ–ಪರಿವಾರದವರ ಪರವಾಗಿ, ತಮ್ಮ ಪೂಜ್ಯ ತಂದೆಯವರ ಪ್ರಥಮವರ್ಷದ ಸಂಸ್ಮರಣೆಯ ಈ ಸಂದರ್ಭದಲ್ಲಿ, ಯತಿವರೇಣ್ಯರ ಸನ್ನಿಧಿಯಲ್ಲಿ ಸಮಾಜಕ್ಕೆ ಕೊಡುಗೆಯಾಗಿ ಸಮರ್ಪಿಸುತ್ತಿದ್ದು, ಈ ಗ್ರಂಥದ ಲಾಭವನ್ನು ಎಲ್ಲಾ ಆಸಕ್ತ ಜಿಜ್ಞಾಸುಗಳು ಪಡೆದು, ಶ್ರೇಯೋವಂತರಾಗಲಿ ಎಂಬ ಅಭಿಲಾಷೆಯನ್ನು ವ್ಯಕ್ತಪಡಿಸುತ್ತಿದ್ದಾರೆ.

"ಅನ್ನದಾನದಿಂದ ಮನುಷ್ಯನಿಗೆ ಕೆಲಗಂಟೆಗಳ ಕಾಲ ಮಾತ್ರ ತೃಪ್ತಿಯಾದರೆ, ಜ್ಞಾನದಾನದಿಂದ ಅನೇಕ ತಲೆಮಾರುಗಳವರೆಗೆ ಸಮಾಜವೇ ತೃಪ್ತಿಪಡುತ್ತದೆ" ಎಂಬ ಸತ್ಯವನ್ನು ತಿಳಿದುಕೊಂಡು, ಜ್ಞಾನಮಾರ್ಗದ ಈ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡ ಶ್ರೀ ಕೃಷ್ಣಮೂರ್ತಿಗಳಿಗೆ ಹಾಗೂ ಅವರ ಕುಟುಂಬ–ಪರಿವಾರದ ಎಲ್ಲರಿಗೂ ಸಹಾ, ಜ್ಞಾನಮಾರ್ಗದ ಜಿಜ್ಞಾಸುಗಳ ಆಶೀರ್ವಾದವೂ, ಸತ್ಪುರುಷರ ಕೃಪೆಯೂ ಹಾಗೂ ದಕ್ಷಿಣಾಮೂರ್ತಿಯಾದ ಆ ಪರಮೇಶ್ವರನ ಸಂಪೂರ್ಣ ಅನುಗ್ರಹವು ಪ್ರಾಪ್ತಿಯಾಗಲೆಂದು ನಾವು ಈ ಸಂದರ್ಭದಲ್ಲಿ ಅಂತರಂಗದಿಂದ ಆಶಿಸುತ್ತಿದ್ದೇವೆ.

ವೇದಬ್ರಹ್ಮ ಶ್ರೀ ಎ. ಸಿ. ಶಕ್ತಿಧರ ಶರ್ಮರು
ಸಂಪಾದಕರು–ಅನುವಾದಕರು ಮತ್ತು ಪ್ರಕಾಶಕರು
ಶ್ರೀ ಚೈತನ್ಯ ಗುರುನಾಥ ಪ್ರಕಾಶನ.

ವಿಷಯ ಸೂಚಿ

ಗ್ರಂಥನಾಮ – i

ಈ ಗ್ರಂಥದ ಪ್ರಾಯೋಜಕರು – iii

ವಿಷಯ ಸೂಚಿ – v

ಗುರುವಂದನೆ – xii

ಕೃತಜ್ಞತೆಗಳು – xiii

ಸಂಪಾದಕೀಯ – xiv

ನಮ್ಮ ಪ್ರಕಟಣೆಗಳು – xv

ಪ್ರತಿಗಳು ದೊರೆಯುವ ಸ್ಥಳಗಳು – xviii

ಹಿರಿಯರ ನುಡಿ – ವೇ॥ಬ್ರ॥ ಶ್ರೀ ಮಾರ್ಕಂಡೇಯಾವಧಾನಿಗಳು – xix

ಪ್ರಾಸ್ತಾವಿಕ ನುಡಿ – ಡಾ॥ವೇ॥ಬ್ರ॥ ಶ್ರೀ ಸುಬ್ರಾಯ ವಿ. ಭಟ್ಟರು – xxii

ಸಂಪಾದಕರ ಮಾತು – ವೇ॥ಬ್ರ॥ ಶ್ರೀ ಎ.ಸಿ. ಶಕ್ತಿಧರ ಶರ್ಮರು – xxvi

1. ಭಾರದ್ವಾಜೀಯ/ಆಪಸ್ತಂಬೀಯ ಯಜುರ್ವೇದ ಪಿತೃಮೇಧ (ಅಪರ)ಸೂತ್ರ ಹಾಗೂ ಗೋಪಾಲಮುನಿಗಳ ಮತ್ತು ಕಪರ್ದಿಸ್ವಾಮಿಗಳ ಭಾಷ್ಯ – 1ನೇ ಪ್ರಶ್ನೆ, 8 ಖಂಡಗಳು (ದಹನಪರ್ಯಂತ ವಿಧಿಗಳು ಮಾತ್ರ)

1. ಭಾರದ್ವಾಜ ಅಪರಸೂತ್ರ – ವಿಮರ್ಶೆ. 1
2. ಆಪಸ್ತಂಬ ಅಪರಸೂತ್ರ – ವಿಮರ್ಶೆ 1 ಮತ್ತು 2 12
3. ಸ್ಮಶಾನ ನಿರ್ಮಾಣ – ತ್ರೇಧಾಗ್ನಿಗಳ ವಿಚಾರ – ಕರ್ಣಮಂತ್ರ ಜಪ – ಶವದ ಕೂದಲು ತೆಗೆಯುವಿಕೆ – ಸ್ನಾನ ವಿಚಾರ. (ಖಂಡ – 1) 24
4. ಶವವನ್ನು ತೆಗೆದುಕೊಂಡು ಹೋಗುವ ವಾಹನ – ಚೆಟ್ಟದ ಲಕ್ಷಣ – ದಾರಿಮಧ್ಯದಲ್ಲಿ ಮಾಡುವ ವಿಧಿಗಳ ವಿಚಾರ. (ಖಂಡ – 2) 83
5. ಸ್ಮಶಾನ ಪ್ರವೇಶ ವಿಚಾರ – ತ್ರೇಧಾಗ್ನಿಗಳನ್ನು ಸ್ಮಶಾನದಲ್ಲಿ ಇಡುವ ರೀತಿ – ವೇದಿಕೆಗಳ ರಚನೆಯ ವಿಚಾರ. (ಖಂಡ – 3) 104

6. ಹಸುವಿನ ಅವಶ್ಯಕತೆಯ ವಿಚಾರ – ಮಹಿಳೆಯ ಭಾಗವಹಿಸುವಿಕೆಯ ವಿಚಾರ. (ಖಂಡ – 4) 119

7. ಹಸುವನ್ನು ಯಜ್ಞಾರ್ಥವಾಗಿ ಬಳಸುವ ವಿಚಾರ – ಮೃತನ ಪತ್ನಿಯು ಶವದ ಜೊತೆ ಮಲಗುವ ವಿಚಾರ – ದಹನಕ್ಕೆ ಸಂಬಂಧಿಸಿದ ವಿಚಾರ. (ಖಂಡ – 5) 130

8. ಶವದ ಅಂಗಗಳ ಮೇಲೆ ವಸ್ತುಗಳನ್ನು ಇಡುವ ವಿಚಾರ – ವಪೆಯ ವಿಚಾರ. (ಖಂಡ – 6) 150

9. ಶವಕ್ಕೆ ಅಗ್ನಿಸ್ಪರ್ಶ ವಿಚಾರ – ಹೊಗೆಯ ಲಕ್ಷಣ. (ಖಂಡ – 7) 169

10. ಬಂಧುಗಳ ನಡವಳಿಕೆಯ ವಿಚಾರ – ಕರ್ತೃವಿನ ದೀಕ್ಷಾನಿಯಮ ವಿಚಾರ. (ಖಂಡ – 8) 182

2. ಯಜುರ್ವೇದ ಕಪರ್ದೀಯ ಅಪರಕಾರಿಕಾ – (ದಹನಪರ್ಯಂತ ವಿಧಿಗಳು ಮಾತ್ರ) 192–214

1. ಸಾಯುವ ಕಡೇದಿನಗಳು ಅಥವಾ ಕಡೇಕ್ಷಣಗಳಲ್ಲಿ, ಪಾಪಗಳ ನಾಶಕ್ಕಾಗಿ ಮಾಡಬೇಕಾದ ಪ್ರಾಯಶ್ಚಿತ್ತಗಳ(ಕೃಚ್ಛ್ರ) ವಿಚಾರ –

2. ದಾನಗಳ ವಿಚಾರ –

3. ಉತ್ಕ್ರಾಂತಿ ಗೋದಾನ ಮತ್ತು ಕರ್ಣಮಂತ್ರ ಜಪ ವಿಚಾರ –

4. ವ್ಯಕ್ತಿಯು ಸತ್ತಾಗ, ಕರ್ತೃಗಳು ಅನುಸರಿಸಬೇಕಾದ ಮೊದಲ ನಡವಳಿಕೆಗಳು –

5. ಅಗ್ನಿಪುನಸ್ಸಂಧಾನ –

6. ಯಾವಯಾವ ಆಶ್ರಮದವರಿಗೆ ಯಾವ ರೀತಿಯ ಅಗ್ನಿಗಳಿಂದ ದಹನ ಆಗಬೇಕೆಂಬ ವಿಚಾರ –

7. ಹೋಮದ ವಿಚಾರ –

8. ಶವಕ್ಕೆ ಮಾಡುವ ಅಲಂಕಾರ ಮತ್ತು ಮಲಗಿಸುವ ವಿಚಾರ –

9. ಸ್ಮಶಾನಕ್ಕೆ ತೆಗೆದುಕೊಂಡು ಹೋಗಬೇಕಾದ ವಸ್ತುಗಳ ವಿಚಾರ –

10. ಚೆಟ್ಟವನ್ನು ಎತ್ತಿಕೊಳ್ಳುವ ವಿಚಾರ –
11. ದಾರಿ ಮಧ್ಯದಲ್ಲಿ ಮಾಡಬೇಕಾದ ವಿಧಿಗಳ ವಿಚಾರ –
12. ಸ್ಮಶಾನವನ್ನು ಸಿದ್ಧಮಾಡಿಕೊಳ್ಳುವ ವಿಚಾರ –
13. ಶವವನ್ನು ಚೆಟ್ಟದಿಂದ ಚಿತೆಯಮೇಲೆ ಮಲಗಿಸುವ ವಿಚಾರ –
14. ಚಿನ್ನವನ್ನು ಶವದ ಅಂಗಗಳ ಮೇಲೆ ಇಡುವ ವಿಚಾರ –
15. ಚಿತೆಗೆ ಅಗ್ನಿಯನ್ನು ಹತ್ತಿಸುವ ರೀತಿ –
16. ಉಪಸ್ಥಾನ –
17. ಚಿತೆಯ ಹೊಗೆಯಿಂದ ಸತ್ತವನ ಮುಂದಿನ ಸ್ಥಿತಿಯನ್ನು ತಿಳಿಯುವ ರೀತಿ–
18. ಮೇಕೆಯ(ಆಡಿನ) ಅವಶ್ಯಕತೆ –
19. ಗುಂಡಿಯ(ಕರ್ಷು) ಸ್ನಾನ –
20. ಸ್ನಾನ ಮತ್ತು ಸೂರ್ಯ ಉಪಸ್ಥಾನ –
21. ಹತ್ತು ದಿನಗಳೂ ಮಾಡಬೇಕಾದ ಕರ್ಮದ ವಿಚಾರ –
22. ದಕ್ಷಿಣೆಯ ವಿಚಾರ –
23. ವಪನ ವಿಚಾರ ಮತ್ತು ಮನೆಗೆ ಹೋಗುವಿಕೆ –

3. ಯಜುರ್ವೇದ ಆಪಸ್ತಂಬಸೂತ್ರಾನುಸಾರಿ ಅನಾಹಿತಾಗ್ನಿ ಅಪರಪ್ರಯೋಗ ಕ್ರಮವು (ದಹನಪರ್ಯಂತ ವಿಧಿಗಳು ಮಾತ್ರ)

1. ಮೊದಲಿಗೆ – 215
2. ಮೃತವ್ಯಕ್ತಿಗೆ ಸಂಬಂಧಿಸಿದ ಕೃಚ್ಛ್ರ(ಪ್ರಾಯಶ್ಚಿತ್ತ) ಮತ್ತು ದಾನಗಳಿಗೆ ಬ್ರಾಹ್ಮಣರಲ್ಲಿ ಅನುಜ್ಞೆಯು – 216
3. ಮೃತನಿಗೆ ಸಂಬಂಧಿಸಿದ ಕೃಚ್ಛ್ರ, ದಶದಾನ, ಷೋಡಶದಾನ, ಉತ್ಕ್ರಾಂತಿ ಗೋದಾನಗಳು – 217

4. ದಾನಗಳ ಮಂತ್ರ(ಶ್ಲೋಕ) – 220

5. ಕರ್ಣಮಂತ್ರ ಜಪವು – 226

6. ಪಿತೃಮೇಧ ಕರ್ಮದ ಕರ್ತೃತ್ವ ಸಂಪಾದನೆಗೆ ಪ್ರಾಯಶ್ಚಿತ್ತವನ್ನು(ಕೃಚ್ಛ್ರ) ಪುತ್ರಾದಿಗಳು ಮಾಡಿಕೊಳ್ಳುವಿಕೆಯು – 228

7. ಪ್ರೇತಾಗ್ನಿ ಪುನಸ್ಸಂಧಾನದ ಮತ್ತು ಔಪಾಸನದ ಯೋಗ್ಯತೆಗೆ ಕೃಚ್ಛ್ರವು– 230

8. ಮೃತನ ಔಪಾಸನಾಗ್ನಿಯ ಪುನಸ್ಸಂಧಾನಕ್ಕಾಗಿ ಮತ್ತು ಔಪಾಸನ ಹೋಮ ಕ್ಕಾಗಿ ಬ್ರಾಹ್ಮಣರಲ್ಲಿ ಅನುಜ್ಞೆ(ಒಪ್ಪಿಗೆ)ಯನ್ನು ಕೇಳುವಿಕೆಯು – 232

9. ಮೃತನ ಔಪಾಸನಾಗ್ನಿಯ ಪುನಸ್ಸಂಧಾನದ ಸಂಕಲ್ಪ ಮತ್ತು ಪ್ರಯೋಗವು – 233

10. ಪ್ರೇತಾಗ್ನಿ ಪುನಸ್ಸಂಧಾನದ ಹೋಮವು – 236

11. ಸಂಜೆ ಮತ್ತು ಬೆಳಗಿನ ಔಪಾಸನ ಹೋಮವು – 239

12. ಆರು ರೀತಿಯ ದೋಷಯುಕ್ತ ಲಕ್ಷಣಗಳಿಂದ ಸತ್ತರೆ, ಆ ದೋಷದ ಪರಿಹಾರಕ್ಕಾಗಿ ದಾನ ಮತ್ತು ಪ್ರಾಯಶ್ಚಿತ್ತ ಹೋಮವು – 240

13. ಮೃತನನ್ನು ಮಂತ್ರದಿಂದ ಮಲಗಿಸುವಿಕೆ – 242

14. ಹೋಮಪಾತ್ರೆಗಳ ಇಡುವಿಕೆ ಮತ್ತು ಪಾತ್ರೆಗಳ ಸಂಸ್ಕಾರ – 243

15. ಚರುವನ್ನು ಮಾಡುವುದು – 244

16. ಮೃತನಿಗೆ ಕ್ಷೌರ, ಸ್ನಾನ, ಅಲಂಕಾರ ಮತ್ತು ಚೆಟ್ಟದಲ್ಲಿ ಮಲಗಿಸುವಿಕೆ – 245

17. ಮೃತನಿಗೆ ಹೊಸಬಟ್ಟೆಯನ್ನು ಹೊದಿಸಿ – ದೇಹದಲ್ಲಿರುವ ಹಳೆಯ ಬಟ್ಟೆಯನ್ನು ತೆಗೆಯುವುದು – 246

18. ಸ್ಮಶಾನಕ್ಕೆ ಹೊರಡುವಿಕೆ – 246

19. ಜೊತೆಯಲ್ಲಿ ತೆಗೆದುಕೊಂಡು ಹೋಗುವ ವಸ್ತುಗಳು – 248

20. ದಾರಿಯ 1 ನೇ ಭಾಗದಲ್ಲಿ ಮಾಡುವ ವಿಧಿಗಳು – 248

21. ದಾರಿಯ 2 ನೇ ಭಾಗದಲ್ಲಿ ಮಾಡುವ ವಿಧಿಗಳು – 251

22. ದಾರಿಯ 3 ನೇ ಭಾಗದಲ್ಲಿ ಮಾಡುವ ವಿಧಿಗಳು – 254

23. ದಹನದೇಶಕ್ಕೆ ಹೋಗುವುದು – 256
24. ದಹನದ ಜಾಗವನ್ನು ಸ್ವಚ್ಛಗೊಳಿಸುವುದು – 257
25. ಚಿತೆಯ ರಚನೆ – 258
26. ಚೆಟ್ಟದಿಂದ ಶವವನ್ನು ಬೇರ್ಪಡಿಸುವ ಕ್ರಮ ಹಾಗೂ ಹೋಮಕ್ಕಾಗಿ ಪಾತ್ರೆಗಳನ್ನು ಇಡುವುದು ಮತ್ತು ಅವುಗಳಿಗೆ ಸಂಸ್ಕಾರ – 259
27. ಸ್ಮಶಾನದಿಂದ ರಾಜಗವಿಯನ್ನು(ಹಸು) ಬಿಟ್ಟೋಡಿಸುವುದು – 260
28. ಮೃತನ ಜೊತೆ ಅವನ ಪತ್ನಿಯು ಮಲಗಿ, ಏಳುವ ಕ್ರಮ – 262
29. ಮೃತನ ಕೈಗಳನ್ನು ಸವರುವುದು – 263
30. ಮೃತನನ್ನು ಚಿತೆಯ ಮೇಲೆ ಮಲಗಿಸುವಿಕೆ, ಇಂದ್ರಿಯಗಳಲ್ಲಿ ಚಿನ್ನವನ್ನು ಹಾಕುವಿಕೆ ಮತ್ತು ಬಾಯಿಗೆ ಅಕ್ಕಿ ಹಾಕುವಿಕೆ – 263
31. ಮೃತನನ್ನು ಅಗ್ನಿಯಿಂದ ದಹಿಸುವುದು – 264
32. ಉಪಸ್ಥಾನ – 265
33. ಆಡಿನ(ಮೇಕೆ) ವಿಷಯ – 266
34. ಹೋಮವು – 267
35. ಸ್ರುಕ್, ಸ್ರುವ ಮತ್ತು ಆಜ್ಯಪಾತ್ರೆಯನ್ನು ಅಗ್ನಿಯಲ್ಲಿ ಹಾಕುವುದು – 269
36. ಮಡಿಕೆಯ ನೀರಿನೊಂದಿಗೆ ಚಿತೆಯನ್ನು ಸುತ್ತುವುದು – 269
37. ಯಮಸೂಕ್ತ ಮಂತ್ರಗಳನ್ನು ಹೇಳುವಿಕೆ – 269
38. ಸ್ಮಶಾನದಲ್ಲಿರುವ ಎಲ್ಲರಿಗೂ ಮೊದಲ ಸ್ನಾನ = ಕರ್ಷು(ಗುಂಡಿ) ಸ್ನಾನ– 271
39. ಎಲ್ಲರೂ ತೋರಣದ ಒಳಗೆ ಹೋಗುವಿಕೆ – 272
40. ಸೂರ್ಯ ಉಪಸ್ಥಾನ – 273
41. ಸ್ಮಶಾನದಿಂದ ಹೊರಡುವಿಕೆ – 274
42. ಊರ ಹೊರಗಿರುವ ಕೆರೆ, ನದಿ...ಗಳಲ್ಲಿ ಎಲ್ಲರಿಗೂ ಎರಡನೇ ಸ್ನಾನ – 274
43. ಕರ್ತೃ ಮತ್ತು ಜ್ಞಾತಿಗಳಿಗೆ ಕ್ಷೌರ ಹಾಗೂ ಮೂರನೇ ಸ್ನಾನ – 275

44. ತರ್ಪಣ – 276
45. ಶ್ರೋತ್ರಿಯರಿಗೆ ದಕ್ಷಿಣೆ ಕೊಡುವ ವಿಷಯ – 277
46. ಮನೆಗೆ ಹೋಗುವಿಕೆ – 278
47. ನಂತರದ ನಿಯಮಗಳು – 278
48. ಇಲ್ಲಿಯವರೆಗಿನ ವಿಧಿಗಳ ಆಚರಣೆಗೆ ಬೇಕಾದ ಪದಾರ್ಥಗಳ ಪಟ್ಟಿ – 279

4. ಪ್ರಯೋಗದಲ್ಲಿ ಕಂಡುಬರುವ ವಿಶೇಷ ವಿಮರ್ಶಾ ವಿಷಯಗಳು ಮತ್ತು ವಿವಿಧ ರೀತಿಯ ಸಾವಿಗೆ ಪ್ರಾಯಶ್ಚಿತ್ತಗಳು –

1. ಕೃಚ್ಛ್ರದ ವಿಷಯ – 280
2. ಉತ್ಕ್ರಾಂತಿ ಗೋದಾನವನ್ನು ಹೇಗೆ ಕೊಡುವುದು ? – 281
3. ಮೃತಶರೀರಕ್ಕೆ ಪ್ರಾಣಪ್ರತಿಷ್ಠೆ ಬೇಕೇ ? – 282
4. ಸರ್ವಸ್ಯ ಪ್ರತಿಶೀವರೀ.., ಎಂಬ ಮಂತ್ರದ ವಿನಿಯೋಗದ ವಿಚಾರ – 284
5. ಚರುವನ್ನು ಯಾವ ಅಗ್ನಿಯಲ್ಲಿ ಮಾಡಬೇಕು ? – 285
6. ಮೃತನು ಧರಿಸಿದ್ದ ಬಟ್ಟೆಯನ್ನು ಏನು ಮಾಡಬೇಕು ? – 285
7. ಅಪೇತವೀತ....., ಎಂಬ ಮಂತ್ರದ ವಿಷಯ – 286
8. ರಾಜಗವಿಯ(ಹಸುವಿನ) ಮತ್ತು ಆಡಿನ ವಿಷಯ – 286
9. ದಹನಕ್ಕೆ ಮಂತ್ರವನ್ನು ಹೇಳಬೇಕೇ, ಬೇಡವೇ ? – 287
10. ನೀರು ತುಂಬಿದ ಮಡಿಕೆಯೊಂದಿಗೆ ಚಿತೆಯನ್ನು ಸುತ್ತುವ ವಿಷಯ– 288
11. ಒಂಭತ್ತು ಸ್ರುವಾಹುತಿಗಳ ಜಿಜ್ಞಾಸೆ – 288
12. ಶವದ ಜೊತೆ ಯಾವರೀತಿ ಹೋಗಬೇಕೆನ್ನುವ ವಿಷಯ – 289
13. ಶವದಮೇಲೆ ಅಗ್ನಿಯೋ ?, ಅಗ್ನಿಯಮೇಲೆ ಶವವೋ ?!! – 289
14. ಕರ್ತೃವಿಗೆ ಕ್ಷೌರವು(ವಪನ)ದಹನಕ್ಕೆ ಮೊದಲೋ, ನಂತರವೋ ? –289
15. ಪ್ರೇತಾಗ್ನಿ ಪುನಸ್ಸಂಧಾನದ ವಿಷಯ – 290
16. ಅಗ್ನಿ ನಷ್ಟದ ವಿಷಯ – 299

17. ಅಗ್ನಿಸಂಧಾನದ ಭೇದಗಳು – 300
18. ಉತ್ತಪನಾಗ್ನಿ ಸಂಧಾನ ಕ್ರಮ – 300
19. ಕಪಾಲಾಗ್ನಿ ಸಂಧಾನ ಕ್ರಮ – 302
20. ಹೆಂಡತಿಯ ಜೊತೆಯಲ್ಲಿ ವಾಸವಿಲ್ಲದ ಗಂಡನು, ತನ್ನ ತಂದೆ/ತಾಯಿಯರಿಗೆ ಸಂಸ್ಕರಿಸುವ ರೀತಿ – 303
21. ಹೆಂಡತಿಯು ಮುಟ್ಟಾದಾಗ ಗಂಡ ಸತ್ತರೆ, ಅಗ್ನಿಸಂಧಾನಕ್ರಮ – 306
22. ರಜಸ್ವಲೆ/ಸೂತಕದಲ್ಲಿ ಮರಣವಾದರೆ – 309
23. ದಕ್ಷಿಣಾಯನದಲ್ಲಿ ಮರಣವಾದರೆ – 314
24. ಕೃಷ್ಣಪಕ್ಷದಲ್ಲಿ ಮರಣವಾದರೆ – 316
25. ರಾತ್ರಿಯಲ್ಲಿ ಮರಣವಾದರೆ – 316
26. ಊರ್ಧ್ವೋಚ್ಛಿಷ್ಟಾದಿ ಮರಣವಾದರೆ – 317
27. ಶವವು ಹಳಸಿದರೆ – 317
28. ನೀರಿನಲ್ಲಿ ಸತ್ತರೆ – 320
29. ಪ್ರಾಣಿಗಳಿಂದ ಸತ್ತರೆ – 320
30. ಹಲ್ಲುಗಳಿಂದ ಕಚ್ಚಲ್ಪಟ್ಟು ಸತ್ತರೆ – 321
31. ಸಿಡಿಲಿನಿಂದ ಸತ್ತರೆ – 322
32. ವಿಷದಿಂದ ಸತ್ತರೆ – 322
33. ವಿಧಿಗಳನ್ನು ತಪ್ಪಾಗಿ/ವ್ಯತ್ಯಾಸವಾಗಿ ಮಾಡಿದರೆ – 323

5. ಪಿತೃಮೇಧ ಮಂತ್ರಗಳಿಗೆ ಶ್ರೀಸಾಯಣಾಚಾರ್ಯರ ಭಾಷ್ಯಾರ್ಥವು (ದಹನದವರೆಗಿನ ಮಂತ್ರಗಳಿಗೆ ಮಾತ್ರ)

1. ಅಪರ ಕರ್ಮದ ಮೊದಲದಿನದ ವಿಧಿಗಳಿಗೆ ಸಂಬಂಧಿಸಿದ 61 ಮಂತ್ರಗಳು ಮತ್ತು ಅವುಗಳ ವಿನಿಯೋಗ ಹಾಗೂ ಆ ಮಂತ್ರಗಳ ಅರ್ಥ 326–365

ಗುರುವಂದನೆ

ಯಜ್ಞದೇಹ ಯಜುಶ್ಶಾಖಾ ಕಲ್ಪಸೂತ್ರ ಪ್ರವರ್ತಕ: ।
ಸಕಲಾಮ್ನಾಯವಿಜ್ಞೇಯಾತ್ ಆಪಸ್ತಂಬೋ ಮಹಾಮುನಿ: ॥
ಬೋಧಾಯನೋ ಯಂ ಭಗವಾನ್ ಮುಖ್ಯಶಿಷ್ಯಮಚೀಕರತ್ ।
ವಿಪಶ್ಚಿದ್ದಾಶತಾನ್ ಮೇಧಾಂ ಆಪಸ್ತಂಬ: ಸ ಮೇ ಮುನಿ: ॥
ಸಂತ: ತತ್ಸೂತ್ರಗಂಭೀರ ವ್ಯಾಖ್ಯಾಪ್ರಖ್ಯಾತ ವೈಭವಾ: ।
ಕಪರ್ದಿ ಧೂರ್ತಸ್ವಾಮ್ಯಾದ್ಯಾ: ಜೇಜೀಯಂತಾಂ ವಿಮತ್ಸರಾ: ॥
ಪ್ರಾಚೀನೇಷು ನಿಬಂಧನೇಷು ಗಹನಾನ್ ಸಂಗೃಹ್ಯಚಾರ್ಥಾನ್ ಬಹೂನ್ ।
ಅಲ್ಪಜ್ಞೇನ ವಿಧಾಸ್ಯತೇ ಪರಮಯಂ ವಿದ್ವಜ್ಜನಾನುಗ್ರಹಾತ್ ॥
ಧೀರಾ ಗ್ರಂಥಮಿಮಂ ವಿಲೋಕ್ಯ ಸುಧಿಯೋ ದೋಷಾನಪಾಸ್ಯಾದರಾತ್ ।
ನೀರಕ್ಷೀರನಯೇನ ಸದ್ಗುಣಗಣಾನ್ ಗೃಹ್ಣಂತ್ವಿತಿ ಪ್ರಾರ್ಥಯೇ ॥
ಜಗದ್ಗುರೂಣಾಂ ಕರುಣಾ ಅವಧೂತಾನುಗ್ರಹಶ್ಚಿರಂ ।
ಧನ್ಯೋಸ್ಮಿ ಶಕ್ತಿಧರೋಽಹಂ ಸುಲಬ್ಧೌಯುಗಪದ್ಮಯಾ ॥

॥ ಅವಧೂತ ಶ್ರೀ ಚಂದ್ರಶೇಖರ ಭಾರತೀ ಪರಮಹಂಸ ಜಗದ್ಗುರವೇ ನಮಃ ॥

॥ ಪೂಜ್ಯ ಶ್ರೀ ಭಾರತೀತೀರ್ಥ ಜಗದ್ಗುರು ಸಾರ್ವಭೌಮಾಯ ನಮಃ ॥

॥ ಶ್ರೀ ವಿಧುಶೇಖರ ಭಾರತೀ ಪರಮಹಂಸ ಜಗದ್ಗುರವೇ ನಮಃ॥

ಜಗದ್ಗುರು ಶ್ರೀ ಆದಿಶಂಕರಾಚಾರ್ಯ ಮಹಾಸಂಸ್ಥಾನಮ್,
ಶಾರದಾ ಪೀಠಮ್, ಶೃಂಗೇರಿ

॥ ವಾತ್ಸಲ್ಯನಿಧಿ ಅವಧೂತ ಶ್ರೀವೇಂಕಟಾಚಲ ಸದ್ಗುರವೇ ನಮಃ ॥
(ಎಲ್ಲವೂ ನಿನ್ನದಯ್ಯ ನನ್ನದೇನು ಇಲ್ಲವಯ್ಯಾ ಗುರುನಾಥ)

॥ ಮೈ ಫಕೀರ್ ಹೂಂ ತೂ ಹೆ ಮಾಲಿಕ್, ಜೋಲೀ ಮೇರಿ ಭರ್‌ದಿ ॥

ಕೃತಜ್ಞತೆಗಳು

ಪವಿತ್ರವಾದ ಈ ಜ್ಞಾನಮಾರ್ಗದ ಕೈಂಕರ್ಯದಲ್ಲಿ ಸದಾ ನಮ್ಮೊಂದಿಗಿದ್ದು ಪ್ರೋತ್ಸಾಹಿಸುತ್ತಾ ಧಾರ್ಮಿಕ ಶ್ರದ್ಧೆಯೊಂದಿಗೆ, ಸಾಮಾಜಿಕ ಕಳಕಳಿಯ ಬದ್ಧತೆಯನ್ನು ತೋರುತ್ತಿರುವ ಈ ಮಹನೀಯರನ್ನು ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ. ಇವರೆಲ್ಲರಿಗೂ ಶ್ರೀ ಗುರುನಾಥರ ಸಾನ್ನಿಧ್ಯದ ಅನುಭೂತಿಯು ಸದಾಕಾಲ ಸಿಗುತ್ತಿರಲೆಂದು ನಾವು ಪ್ರಾರ್ಥಿಸುತ್ತೇವೆ.

1) **ಶ್ರೀಯುತ ಪದ್ಮಶ್ರೀ ವಿ.ಆರ್. ಗೌರೀಶಂಕರ್,** ಆಡಳಿತಾಧಿಕಾರಿಗಳು, ಜಗದ್ಗುರು ಶಾರದಾಪೀಠ ಮಹಾಸಂಸ್ಥಾನಮ್, ಶೃಂಗೇರಿ

2) **ಪೂಜ್ಯ ಶ್ರೀ ಅದ್ವಯಾನಂದೇಂದ್ರ ಸರಸ್ವತಿ ಸ್ವಾಮಿಗಳು,** ಅದ್ವೈತಾಶ್ರಮ ಬೆಂಗಳೂರು

3) **ಶ್ರೀಯುತ ವಿದ್ವಾನ್, ಮಾರ್ಕಂಡೇಯ ಅವಧಾನಿಗಳು,** ಬೃಹಸ್ಪತ್ಯಾಚಾರ್ಯರು, ಮತ್ತೂರು

4) **ಶ್ರೀಯುತ ವಿದ್ವಾನ್ ಡಾ॥ ಸುಬ್ರಾಯ ವಿ. ಭಟ್,** ಮೀಮಾಂಸಾ ಶಾಸ್ತ್ರ ಪ್ರಾಧ್ಯಾಪಕರು, ರಾಜೀವ್‌ಗಾಂಧಿ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠ, ಶೃಂಗೇರಿ

5) **ವೇದಬ್ರಹ್ಮ ಶ್ರೀಯುತ ಭಾನುಪ್ರಕಾಶ ಶರ್ಮರು,** ಶ್ರೀರಂಗಪಟ್ಟಣ.

6) **ವೇದಬ್ರಹ್ಮ ಶ್ರೀ ಕೃಷ್ಣಭಟ್ಟರು,** ಶೃಂಗೇರಿ

7) **ಶ್ರೀಯುತ ಸುಬ್ರಹ್ಮಣ್ಯ ಪ್ರಸಾದ್‌ರವರು,** ಎಸ್.ಎಲ್.ಎನ್. ರೇಡಿಯೋಸ್, ಶಿವಮೊಗ್ಗ

8) **ಶ್ರೀಯುತ ಗಣೇಶ್‌ರವರು,** ಉದ್ಯಮಿಗಳು, ಬೆಂಗಳೂರು

9) **ಶ್ರೀಯುತ ಕೆ. ಅನಂತರಾಮುರವರು,** ಸಾಹಿತಿಗಳು, ಬೆಂಗಳೂರು

10) **ಶ್ರೀಮತಿ ಶಾಂತಲಕ್ಷ್ಮಿ ಶರ್ಮಾ,** ಅಗ್ರಹಾರ

11) **ಶ್ರೀಯುತ ಮಂಜುನಾಥ್‌ರವರು,** S/o ಶ್ರೀಮತಿ ಭಾಗೀರಥಿಯವರು, ಬೆಂಗಳೂರು

ಈ ಗ್ರಂಥವು ಹೊರಬರಲು ಕಾರಣರಾದ ಎಲ್ಲಾ ಮಹನೀಯರಿಗೂ ಕೃತಜ್ಞತೆಗಳು

ಸಂಪಾದಕೀಯ

ಸಂಪಾದಕರು, ಅನುವಾದಕ ಲೇಖಕರು ಮತ್ತು ಪ್ರಕಾಶಕರು
ವೇದಬ್ರಹ್ಮ ಶ್ರೀ ಎ.ಸಿ. ಶಕ್ತಿಧರ ಶರ್ಮಾ, ದೂ : 9686497982

ಸಂಚಾಲಕರು :
ವೇ॥ಬ್ರ॥ ಶ್ರೀ ವಿದ್ವಾನ್ ಚಂದ್ರಶೇಖರ ಶರ್ಮಾ ಅವಧಾನಿಗಳು, ಅಗ್ರಹಾರ.

ಪ್ರಧಾನ ಮಾರ್ಗದರ್ಶಕರು :

ವೇ॥ ಬ್ರ॥ ಶ್ರೀ ವಿದ್ವಾನ್ ಕಿರಣ ಅವಧಾನಿಗಳು, ಮತ್ತೂರು.
ವೇದವೇದಾಂಗ ವಿದ್ವಾನ್ ವೇ॥ ಬ್ರ॥ ಶ್ರೀ ಅಶ್ವತ್ಥನಾರಾಯಣ ಅವಧಾನಿಗಳು, ಮತ್ತೂರು.
ವೇ॥ ಬ್ರ॥ ಶ್ರೀ ವಿದ್ವಾನ್ ಮೀನಾಕ್ಷೀಸುಂದರ ಘನಪಾಠಿಗಳು, ಶ್ರೀಮಠ, ಶೃಂಗೇರಿ
ವೇ॥ ಬ್ರ॥ ಶ್ರೀ ವಿದ್ವಾನ್ ಶಿವಕುಮಾರ ಅವಧಾನಿಗಳು, ಮತ್ತೂರು.
ವೇ॥ ಬ್ರ॥ ಶ್ರೀ ವಿದ್ವಾನ್ ವೇಂಕಟೇಶ ಅವಧಾನಿಗಳು, ರಾಮನಾಥಪುರ.

ಅಕ್ಷರಜೋಡಣೆ	:	ವೇ॥ ಬ್ರ॥ ಶ್ರೀ ಸಿ. ಶ್ರೀನಿವಾಸ ಶಾಸ್ತ್ರೀ, ಶೃಂಗೇರಿ. ಮತ್ತು ಶ್ರೀಮತಿ ಭಾರತೀ ಶರ್ಮಾ. ವೇ॥ ಬ್ರ॥ ಶ್ರೀ ಶಕ್ತಿಧರ ಶರ್ಮಾ
ವರ್ಷ	:	ಸೆಪ್ಟೆಂಬರ್ 2016 (ದುರ್ಮುಖ ಸಂವತ್ಸರ, ಭಾದ್ರಪದಮಾಸ)
ಪ್ರತಿಗಳು	:	1000
ಪುಟಗಳು	:	365 + 30 = 395
ಪುಸ್ತಕದ ಅಳತೆ	:	ಡೆಮ್ಮಿ 1/8
ಪೇಪರ್	:	80 ಜಿ.ಎಸ್.ಎಂ. ಮ್ಯಾಪ್ಲಿತೊ
ಹಕ್ಕುಗಳು	:	ಸಂಪೂರ್ಣ ಲೇಖಕರದ್ದು©
ಮೌಲ್ಯ	:	**ಅಮೂಲ್ಯ**
ಪ್ರೋತ್ಸಾಹಯುತ ಕಾಣಿಕೆ	:	ರೂ. 300/–
ಮುದ್ರಕರು	:	**ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್,** ಬೆಂಗಳೂರು ಇಮೇಲ್ : omkaroffset@gmail.com ಫೋನ್: 080 2670 9026 / 2670 8186

ಶ್ರೀ ಚೈತನ್ಯ ಗುರುನಾಥ ಪ್ರಕಾಶನದವರ ಪ್ರಕಟಣೆಗಳು

1 ಅನುಷ್ಠಾನ ತರಂಗಿಣೀ
(ನಿತ್ಯ ಪೂಜಾವಿಧಿ, ಯತಿ ಆರಾಧನಾ ಪ್ರಯೋಗ ಮತ್ತು ಅವಧೂತಗೀತೆ ಶ್ಲೋಕ ಮತ್ತು ಅರ್ಥಸಹಿತ)

2. ಸಂಸ್ಕಾರ ತರಂಗಿಣೀ ಪುಷ್ಪ–1
(ಪುಂಸವನ ಮತ್ತು ಸೀಮಂತೋನ್ನಯನ)

3. ಸಂಸ್ಕಾರ ತರಂಗಿಣೀ ಪುಷ್ಪ–2
(ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ ಮತ್ತು ಅನ್ನಪ್ರಾಶನ)

4. ಸಂಸ್ಕಾರ ತರಂಗಿಣೀ ಪುಷ್ಪ–3
(ಚೂಡಾಕರ್ಮ, ಅಕ್ಷರಾರಂಭ ಮತ್ತು ಉಪನಯನ)

5. ಸಂಸ್ಕಾರ ತರಂಗಿಣೀ ಪುಷ್ಪ–4
(ಸಖರಾಯಪಟ್ಟಣದ ಪೂಜ್ಯ ಅವಧೂತ ಶ್ರೀ ವೇಂಕಟಾಚಲ ಸದ್ಗುರುನಾಥ ಮಹಾತ್ಮರ ಅಮೃತವಾಣಿ, ಭಗವದ್ಗೀತೆಯಲ್ಲಿ ಕರ್ಮ ಭಾಗದ ವಿಚಾರ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ)

6. ಸಂಸ್ಕಾರ ತರಂಗಿಣೀ ಸರಣಿಯ ಪುಷ್ಪ–5
ಅನುಷ್ಠಾನ ತರಂಗಿಣೀ–ದ್ವಿತೀಯ ಮುದ್ರಣ
(ಸಖರಾಯಪಟ್ಟಣದ ಪೂಜ್ಯ ಅವಧೂತ ಶ್ರೀ ವೇಂಕಟಾಚಲ ಸದ್ಗುರುನಾಥ ಮಹಾತ್ಮರ ಅಮೃತವಾಣಿ, ನಿತ್ಯ ಪೂಜಾವಿಧಿ, ಗುರುಗೀತಾ ಪಾರಾಯಣ ಕ್ರಮ ಅರ್ಥಸಹಿತ, ಯತಿ ಆರಾಧನಾ ಪ್ರಯೋಗ ಮತ್ತು ಅವಧೂತ ಗೀತೆ ಶ್ಲೋಕ ಮತ್ತು ಅರ್ಥಸಹಿತ)

7. ವೇದನಾದ ಸಂಗಮ DVD–1 (ಪ್ರಪ್ರಥಮ ಬಾರಿಗೆ ಧ್ವನಿಸುರುಳಿಯಲ್ಲಿ ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯ ಬ್ರಾಹ್ಮಣ, ಆರಣ್ಯಕ, ಸಂಹಿತೆ, ಕ್ರಮ, ಘನ, ಉದಕಶಾಂತಿ ಮಂತ್ರಗಳು ಹಾಗೂ ದೇವರನಾಮ, ಕೀರ್ತನೆಗಳು.)

8. ಸಂಸ್ಕಾರ ತರಂಗಿಣೀ ಪುಷ್ಪ–6
(ಅನುಜ್ಞೆ, ಸಂಕಲ್ಪ, ಪುಣ್ಯಾಹ, ನಾಂದೀ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ {ಹೋಮ})

9. ಸಂಸ್ಕಾರ ತರಂಗಿಣೀ ಪುಷ್ಪ–7
(ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಅಗ್ನಿಪುನಸ್ಸಂಧಾನ, ಔಪಾಸನ, ಬ್ರಹ್ಮಯಜ್ಞ, ವೈಶ್ವದೇವ, ವಿಧುರಾಗ್ನಿ ಸಂಧಾನ, ತರ್ಪಣ ಕ್ರಮ, ಯಜ್ಞೋಪವೀತ ಧಾರಣ ಕ್ರಮ, ಭೋಜನ ಪರಿಷೇಚನ ಕ್ರಮ)

10. ಸಂಸ್ಕಾರ ತರಂಗಿಣೀ ಪುಷ್ಪ–1, 2 ದ್ವಿತೀಯ ಮುದ್ರಣ
(ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ ಮತ್ತು ಅನ್ನಪ್ರಾಶನ)

11. ಸಂಸ್ಕಾರ ತರಂಗಿಣೀ ಪುಷ್ಪ–3 ದ್ವಿತೀಯ ಮುದ್ರಣ
(ಚೂಡಾಕರ್ಮ, ಅಕ್ಷರಾರಂಭ ಮತ್ತು ಉಪನಯನ)

12. ಸಂಸ್ಕಾರ ತರಂಗಿಣೀ ಪುಷ್ಪ – 8 (ಉಪಾಕರ್ಮ, ಪ್ರಾಯಶ್ಚಿತ್ತ ಪ್ರಕರಣ, ಆಪಸ್ತಂಬ ಗೃಹ್ಯಸೂತ್ರದಲ್ಲಿ ಬರುವ ಪತಿಪತ್ನಿಯರ ಅನ್ಯೋನ್ಯವಿಚಾರ, ಶೀಘ್ರ ಮತ್ತು ಸುಲಭ ಪ್ರಸವವಿಚಾರ, ಕುಷ್ಠ, ಕ್ಷಯಾದಿರೋಗ ನಿವಾರಣಾ ವಿಚಾರ ಹಾಗೂ ಇನ್ನಿತರ ವಿಶೇಷ ವಿಚಾರಗಳು)

13. ವೇದನಾದ ಸಂಗಮ DVD 2
(ಭಜನೆ, ದೇವರನಾಮಗಳು, ಕಲಿಕಾ ವಿಧಾನದಲ್ಲಿ ಯಜುರ್ವೇದ ಸಂಧ್ಯಾವಂದನೆ ಮತ್ತು ನೈಜಧಾರ್ಮಿಕತೆ ಎಂಬ ವಿಷಯದ ಉಪನ್ಯಾಸ)

14. ಸಂಸ್ಕಾರ ತರಂಗಿಣೀ ಪುಷ್ಪ – 9 (ಆಪಸ್ತಂಬೋಕ್ತ ಗೃಹನಿರ್ಮಾಣ – ಗೃಹ ಪ್ರವೇಶ ಮತ್ತು ಸ್ನಾನ, ಸಂಧ್ಯಾವಂದನೆ, ವೈಶ್ವದೇವ, ಬಲಿಹರಣ, ಪಂಚಮಹಾಯಜ್ಞಗಳಲ್ಲಿ ಬರುವ ಮಂತ್ರಗಳು ಮತ್ತು ಅವುಗಳಿಗೆ ಭಾಷ್ಯಾರ್ಥ)

15. ಸಂಸ್ಕಾರ ತರಂಗಿಣೀ ಪುಷ್ಪ – 10 (ಧರ್ಮಸಂದೇಶ – ಸಂಸ್ಕೃತಿ, ಆಚಾರ, ಧರ್ಮಶಾಸ್ತ್ರಗಳ ವಿಶೇಷ ಸ್ವಾರಸ್ಯ ವಿಚಾರಗಳು)

16. ಸಂಸ್ಕಾರ ತರಂಗಿಣೀ ಪುಷ್ಪ–11 (ಪ್ರಾಯಶ್ಚಿತ್ತ ಸರ್ವಶಾಂತಿ ಸಂಗ್ರಹ – ಭಾಗ–1)

17. ಸಂಸ್ಕಾರ ತರಂಗಿಣೀ ಪುಷ್ಪ – 10 – ದ್ವಿತೀಯ ಮುದ್ರಣ (ಧರ್ಮಸಂದೇಶ – ಸಂಸ್ಕೃತಿ, ಆಚಾರ, ಧರ್ಮಶಾಸ್ತ್ರಗಳ ವಿಶೇಷ ಸ್ವಾರಸ್ಯ ವಿಚಾರಗಳು)

18. ಸಂಸ್ಕಾರ ತರಂಗಿಣೀ ಪುಷ್ಪ – 12 ಪ್ರೇತಕಾಂಡ ಭಾಗ–1 (ಶ್ರೀ ವೈದ್ಯನಾಥೀಯ ಸ್ಮೃತಿ ಮುಕ್ತಾಫಲ ಮತ್ತು ಶ್ರೀ ಎಲ್ಲಾಜೀಯ ಅನುಧರ್ಮ ಶಾಸ್ತ್ರ ಹಾಗೂ ವೆಂಕಟರಾಮಾವಧಾನಿಯ ಪ್ರಯೋಗ ರತ್ನಾಕರ)

ಮುಂದಿನ ಪ್ರಕಟಣೆಗಳು

1. ಸಂಸ್ಕಾರ ತರಂಗಿಣೀ ಪುಷ್ಪ – 4 – ದ್ವಿತೀಯ ಮುದ್ರಣ (ವ್ರತಚತುಷ್ಟಯ – ಸಮಾವರ್ತನ – ವಿವಾಹ – ಗರ್ಭಾಧಾನ ಮತ್ತು ಮಂತ್ರಗಳಿಗೆ ಶ್ರೀ ಹರದತ್ತರ ಭಾಷ್ಯಾರ್ಥ ಮತ್ತು ಸೂತ್ರ – ಕಾರಿಕೆ – ಪ್ರಯೋಗ)

2. ಸಂಸ್ಕಾರ ತರಂಗಿಣೀ ಪುಷ್ಪ – 14 ಪಿತೃಮೇಧಪ್ರಯೋಗ ಭಾಗ–2 (ಭಾರದ್ವಾಜೀಯ / ಆಪಸ್ತಂಬೀಯ ಅಪರಸೂತ್ರ – ಗೋಪಾಲಮುನಿಗಳ ಮತ್ತು ಕಪರ್ದಿಸ್ವಾಮಿಗಳ ವ್ಯಾಖ್ಯಾನ ಮತ್ತು ಕಾರಿಕಾವಳಿ ಮತ್ತು ಪ್ರಯೋಗ ಹಾಗೂ ಮಂತ್ರಗಳಿಗೆ ಸಾಯಣಾಚಾರ್ಯರ ಭಾಷ್ಯಾರ್ಥ)

3. ಸಂಸ್ಕಾರ ತರಂಗಿಣೀ ಪುಷ್ಪ – 15 ಪ್ರೇತಕಾಂಡ ಭಾಗ–2 (ಶ್ರೀ ವೈದ್ಯನಾಥೀಯ ಸ್ಮೃತಿ ಮುಕ್ತಾಫಲ ಮತ್ತು ಶ್ರೀ ಎಲ್ಲಾಜೀಯ ಅನುಧರ್ಮ ಶಾಸ್ತ್ರ ಹಾಗೂ ವೆಂಕಟರಾಮಾವಧಾನಿಯ ಪ್ರಯೋಗ ರತ್ನಾಕರ)

4. ಸಂಸ್ಕಾರ ತರಂಗಿಣೀ ಪುಷ್ಪ – 16 (ಪ್ರಾಯಶ್ಚಿತ್ತ ಸರ್ವಶಾಂತಿ ಸಂಗ್ರಹ – ಭಾಗ–2)

5. ಸಂಸ್ಕಾರ ತರಂಗಿಣೀ ಪುಷ್ಪ – 17 ಆಪಸ್ತಂಬೀಯ ಧರ್ಮಸೂತ್ರ –

6. ಸಂಸ್ಕಾರ ತರಂಗಿಣೀ ಪುಷ್ಪ – 18 (ಶ್ರಾದ್ಧ ಪ್ರಕರಣ) –

ಪ್ರತಿಗಳು ದೊರೆಯುವ ಸ್ಥಳಗಳು :

1. ವೇ॥ ಬ್ರ॥ ಶ್ರೀ ಎ.ಸಿ. ಶಕ್ತಿಧರ ಶರ್ಮಾ, ಶಿವಮೊಗ್ಗ
   ಮೊ. : 9686497982, ಈ–ಮೇಲ್: acs.shimoga@gmail.com
   Karnataka Bank A/c. No. : 7322500102385001
   ಸವಳಂಗ ರಸ್ತೆ ಶಾಖೆ, ಶಿವಮೊಗ್ಗ
   IFSC Code : KARB0000732
2. ಶ್ರೀಮಠ ಪುಸ್ತಕಾಲಯ
   ಶಾರದಾಪೀಠಮ್, ಶೃಂಗೇರಿ
3. ವೇದಾಂತ ಬುಕ್ ಹೌಸ್
   ಉಮಾ ಟಾಕೀಸ್ ಹತ್ತಿರ, ಬೆಂಗಳೂರು
4. ಪ್ರಚೇತಾ ಬುಕ್ ಹೌಸ್
   ಹೋಟೆಲ್ ಶಾಂತಿಸಾಗರ್ ಬಿಲ್ಡಿಂಗ್, ಬುಲ್‌ಟೆಂಪಲ್ ರಸ್ತೆ, ಬೆಂಗಳೂರು
5. ಶೃಂಗೇರಿ ಶಂಕರ ಮಠ
   ಉಮಾ ಟಾಕೀಸ್ ಹತ್ತಿರ, ಶಂಕರಪುರಂ, ಬೆಂಗಳೂರು
6. ಸಪ್ನಾ ಬುಕ್ ಹೌಸ್
   ಬೆಂಗಳೂರು, ಮೈಸೂರು ಮತ್ತು ಮಂಗಳೂರು
7. ರಾಜಾರಾಮ್ ಬುಕ್ ಹೌಸ್
   ಶಿವಮೊಗ್ಗ
8. ಉಡುಪಿ ಸ್ಟೋರ್ಸ್
   ಗಾಂಧಿನಗರ, ಶಿವಮೊಗ್ಗ

ಹಿರಿಯರ ನುಡಿ

ಶ್ರೀ ಶಾರದಾ ಗುರು ಅನುಗ್ರಹ ಪಡೆದ ಶ್ರೀ ಶಕ್ತಿಧರ ಶರ್ಮ ನಮ್ಮ ನಾಡಿನ ಒಂದು ಶಕ್ತಿಯೇ ಸೈ. ಅವರ ಪರಿಶ್ರಮದಿಂದ ಪುರೋಹಿತರಿಗೆ ಮತ್ತು ಪ್ರಯೋಕ್ತೃಗಳಿಗೆ ಹಾಗೂ ಕರ್ಮ ಭಾಗದಲ್ಲಿ ಶ್ರದ್ಧೆಯಿರುವ ಎಲ್ಲರಿಗೂ ಸಂಸ್ಕಾರ ತರಂಗಿಣೀ ಎಂಬ ಪೂರ್ವ ಪ್ರಯೋಗ ಪುಸ್ತಕ ಬಂದದ್ದು ತುಂಬಾ ಉಪಕಾರವಾಗಿದೆ. ಈ ಕೈಪಿಡಿಯು ಜೊತೆಯಲ್ಲಿದ್ದರೆ ಗುರುವೇ ಜೊತೆಯಲ್ಲಿದ್ದಂತೆ. ನಿಮಗೆ ಯಾವ ವಿಷಯ ಬೇಕು? ಋಷಿ ವಾಕ್ಯ ಬೇಕೇ, ಕಪರ್ದಿಮುನಿಯ ಕಾರಿಕೆ ಇದೆ. ಸೂತ್ರಕಾರರ ವಾಕ್ಯ ಬೇಕೇ, ಆಪಸ್ತಂಬ ಗೃಹ್ಯಸೂತ್ರ ವಾಕ್ಯ ಇದೆ . ಪ್ರಯೋಗ ಬೇಕೇ, ಅಜಸ್ರಾಗ್ನಿ ಧಾರಕರೂ ಹಾಗೂ ಕರ್ಮಠರೂ ನಡೆಸಿಕೊಂಡು ಬಂದಿರುವ, ಸರಳಮಂತ್ರಾನುಪೂರ್ವಿ ಪ್ರಯೋಗ ಇದೆ. ಅಲ್ಲದೆ ಕಪರ್ದಿಕಾರಿಕೆ – ಅದರ ಕನ್ನಡ ಅರ್ಥ...., ಆಪಸ್ತಂಬ ಗೃಹ್ಯಸೂತ್ರ – ಅದರ ಕನ್ನಡ ಸರಳ ಅನುವಾದ ...., ಪ್ರಯೋಗ ಅದರ ತಿಳಿ ಕನ್ನಡ ಅರ್ಥ . ಈ ರೀತಿಯ ಶೈಲಿ ಇವರ ಎಲ್ಲಾ ಪುಸ್ತಕಗಳಲ್ಲೂ ಬಂದಿರುವುದೇ ವಿಶೇಷತೆಯ ಲಕ್ಷಣವಾಗಿದೆ .

ಈಗಾಗಲೇ ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ, ಅನ್ನಪ್ರಾಶನ, ಚೂಡಾಕರ್ಮ, ಅಕ್ಷರಾರಂಭ, ಉಪನಯನ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ, ಸರಳ ಪೂಜಾಕ್ರಮ, ವಿಸ್ತಾರ ಪೂಜಾಕ್ರಮ, ಅವಧೂತಗೀತೆ, ಗುರುಗೀತೆ, ಯತಿ ಆರಾಧನಾಪ್ರಯೋಗ, ಸಂಕಲ್ಪ, ಪುಣ್ಯಾಹ, ನಾಂದಿ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ (ಹೋಮ), ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಔಪಾಸನ, ಅಗ್ನಿಪುನಸ್ಸಂಧಾನ, ಬ್ರಹ್ಮಯಜ್ಞ, ವೈಶ್ವದೇವ, ತರ್ಪಣಕ್ರಮ, ಭೋಜನವಿಷಯ, ಯಜ್ಞೋಪವೀತ ಧಾರಣ ವಿಚಾರ, ಉಪಾಕರ್ಮ, ಗೃಹಪ್ರವೇಶ, ಪ್ರಾಯಶ್ಚಿತ್ತ ಪ್ರಕರಣ, ಇಷ್ಟೂ ಕರ್ಮಗಳನ್ನು ಒಳಗೊಂಡಂತಹ ಹನ್ನೊಂದು ಗ್ರಂಥಗಳು ಸಮಾಜಕ್ಕೆ ಬಂದಾಗಿದೆ. ಹಾಗೂ ಇವುಗಳಲ್ಲಿ ಮೊದಲ ಎಂಟು ಪುಸ್ತಕಗಳು ದ್ವಿತೀಯ ಮುದ್ರಣವನ್ನೂ ಕಂಡಿವೆ.

ಮತ್ತೂ ಮುಂದಿನವುಗಳಲ್ಲಿ ಅಂತ್ಯೇಷ್ಟಿ, ಶ್ರಾದ್ಧ, ಷೋಡಶ ಸಂಸ್ಕಾರಗಳಲ್ಲಿ ಬರುವ ಅಷ್ಟೂ ಮಂತ್ರಗಳಿಗೆ ಕನ್ನಡದಲ್ಲಿ ಭಾಷ್ಯ ಮತ್ತು ಅರ್ಥ ಇಷ್ಟೂ ಪುಸ್ತಕಗಳು

ಬರಲಿಕ್ಕಿವೆ. ಇದಲ್ಲದೆ ಪ್ರಪ್ರಥಮ ಬಾರಿಗೆ ಸುವ್ಯವಸ್ಥಿತ (ಡಿಜಿಟಲ್ ಸ್ಟುಡಿಯೋ ರೆಕಾರ್ಡಿಂಗ್) ಡಿ.ವಿ.ಡಿ. ಧ್ವನಿಸುರುಳಿಗಳಲ್ಲಿ ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯ ಸಂಪೂರ್ಣ ಬ್ರಾಹ್ಮಣ – ಆರಣ್ಯಕ – 7 ಕಾಂಡಗಳಿಂದ 102 ಸಂಹಿತಾ ಅನುವಾಕ – ಅವುಗಳಿಗೆ ಕ್ರಮಪಾಠ – 100 ಕ್ಕೂ ಹೆಚ್ಚು ಮಂತ್ರಗಳಿಗೆ ಘನಪಾಠ – ಶರ್ಮರ ಮಡದಿಯಾದ ಚಿ.ಸೌ. ಭಾರತಿಯವರ ಭಾವ ಪ್ರಧಾನವಾದ ಉತ್ತಮ ಶಾರೀರದಿಂದ 150 ಕ್ಕೂ ಹೆಚ್ಚು ಭಜನೆ, ದೇವರನಾಮಗಳನ್ನು –'ವೇದನಾದ ಸಂಗಮ' ಎಂಬ ಹೆಸರಿನಿಂದ ಶರ್ಮಾ ದಂಪತಿಗಳು ಹೊರತಂದು, ವೇದ ನಾದಗಳನ್ನು ಹೇಳುವವರಿಗೆ ಮಾತ್ರವಲ್ಲದೆ ಕೇಳುವವರಿಗೂ 'ಶ್ರುತಂ ಹರತಿ ಪಾಪಾನಿ ತಥಾ ಆರೋಗ್ಯಂ ಪ್ರಯಚ್ಛತಿ' ಎಂಬ ಸ್ಮೃತಿ ವಾಕ್ಯದಂತೆ ಆರೋಗ್ಯ ಹಾಗೂ ಯಶಸ್ಸನ್ನು ಪಡೆಯುವ ಉತ್ತಮ ಅವಕಾಶವನ್ನು ಒದಗಿಸಿದ್ದಾರೆ.

ಇದಲ್ಲದೆ ಶೃಂಗೇರಿ ಶಾರದಾಪೀಠ ಸಂಸ್ಥಾನದವರು ಕನ್ನಡ, ತೆಲಗು, ತಮಿಳು, ಇಂಗ್ಲೀಷ್ ಭಾಷೆಗಳಲ್ಲಿ ಬಿಡುಗಡೆ ಮಾಡಿರುವ, ಶಂಕರಾಚಾರ್ಯರ ಜೀವನಚರಿತ್ರೆಯನ್ನು ನಿಖರವಾಗಿ ತಿಳಿಸುವ 'ಸಾಕ್ಷ್ಯಚಿತ್ರ'ದಲ್ಲಿ ಶಂಕರಾಚಾರ್ಯರ ಪಾತ್ರವನ್ನು ಶರ್ಮರು ಅಚ್ಚುಕಟ್ಟಾಗಿ ನಿರ್ವಹಿಸಿರುತ್ತಾರೆ. ಹಾಗೂ ಶ್ರೀಮಠದವರು ಸಮಾಜದ ಸಮಸ್ತ ಜನರಿಗೂ ಕಲಿಕೆಗೆ ಅನುಕೂಲವಾಗುವಂತೆ ಹೊರತಂದಿರುವ 'ಶ್ರೀ ಲಲಿತಾಸಹಸ್ರನಾಮ' , 'ಶ್ರೀ ವಿಷ್ಣು ಸಹಸ್ರನಾಮ' ಧ್ವನಿಸುರುಳಿಗಳಲ್ಲೂ ಮತ್ತು ನಿತ್ಯ ಪೂಜೆಗಳಿಗೆ ಅಗತ್ಯವಾಗಿ ಬೇಕಾದ ಮಂತ್ರ ಭಾಗಗಳಾದ ರುದ್ರ, ಚಮಕ, ಪುರುಷಸೂಕ್ತ, ಶ್ರೀಸೂಕ್ತ, ನಾರಾಯಣಸೂಕ್ತ, ದುರ್ಗಾಸೂಕ್ತಗಳಿರುವ ಧ್ವನಿಸುರುಳಿಗಳಲ್ಲೂ ಶರ್ಮರು ತಮ್ಮ ಸ್ಪಷ್ಟ ಹಾಗೂ ಸುಶ್ರಾವ್ಯ ಕಂಠಸಿರಿಯನ್ನು ಒದಗಿಸಿರುತ್ತಾರೆ.

ಅಲ್ಲದೆ ಬೆಂಗಳೂರಿನ ಪ್ರತಿಷ್ಠಿತ ಶ್ರೀ ಸೀತಾರಾಮಾಂಜನೇಯ ವೇದಪಾಠಶಾಲೆಯವರು, ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಆದೇಶ ಹಾಗೂ ಸೂಚನೆಯಂತೆ ಕೊಡಲ್ಪಡುವ ಗೌರವ ಸನ್ಮಾನಕ್ಕೆ 2004ರಲ್ಲಿ

ಶ್ರೀಯುತ ಶರ್ಮರು 'ವೇದಭೂಷಣ' ಎಂಬ ಬಿರುದಿನೊಂದಿಗೆ ಭಾಜನಾಗಿರುತ್ತಾರೆ ಹಾಗೂ 2012ರಲ್ಲಿ ಶಿವಮೊಗ್ಗ ನಗರದ ವೈದಿಕ ಪರಿಷತ್ ವತಿಯಿಂದಲೂ ಮತ್ತು ದೆಹಲಿಯ ಭಾರತೀಯ ಜ್ಯೋತಿರ್ವಿಜ್ಞಾನ ಸಂಸ್ಥೆಯಿಂದಲೂ ಹಾಗೂ 2013ರಲ್ಲಿ ರೋಟರಿ ಸಂಸ್ಥೆಯಿಂದಲೂ ಸನ್ಮಾನಕ್ಕೆ ಭಾಜನರಾಗಿರುತ್ತಾರೆ

ಈ ಎಲ್ಲಾ ಸಾಹಸ ಕೆಲಸಗಳಿಗೆ ಪ್ರೇರಕ ಶಕ್ತಿ ಯಾವುದೋ ನಾನರಿಯೇ? ಬಹುಶ: ಈ ಪುಸ್ತಕ ಕಾರ್ಯಗಳಲ್ಲಿ ಕಂಡುಬರುವ ಗುರು ನಿಷ್ಠೆ–ಭಕ್ತಿಗಳೇ ಆಂತರ್ಯದ ಶಕ್ತಿಯಾಗಿರಬೇಕು. ಇವನ್ನೆಲ್ಲಾ ಮಾಡುತ್ತಿರುವುದು ಸಾಹಸೀ, 32ರ ವಯೋಮಾನದ ತರುಣ, ಜಾಣ ವೇ.ಬ್ರ.ಶ್ರೀ. ಎ.ಸಿ. ಶಕ್ತಿಧರ ಶರ್ಮ. ಇವರ ಶ್ರಮಕ್ಕೆ ಬೆಲೆ ಕಟ್ಟಲಾರೆ. ಈ ಕಾರ್ಯಕ್ಕೆ ಶ್ರೀಮಾನ್ ಚಂದ್ರಶೇಖರಶರ್ಮಾರವರು ಅಗ್ರಹಾರ (ಶ್ರೀಯುತ ಶರ್ಮರ ತಂದೆಯವರು), ಶ್ರೀಮಾನ್ ವೇಂಕಟೇಶ ಅವಧಾನಿಗಳು ರಾಮನಾಥಪುರ ಇವರುಗಳ ಸಲಹೆ ಪಡೆದಿದ್ದಾರೆ. ಅಲ್ಲದೇ ಮತ್ತೂರಿನ ತರುಣ ಅಧ್ವರ್ಯು ಶ್ರೀಮಾನ್ ಶಿವಕುಮಾರ ಅವಧಾನಿ, ತರುಣ ವಿದ್ವಾನ್ ಶ್ರೀಮಾನ್ ಕಿರಣ ಅವಧಾನಿ ಇವರುಗಳ ಪ್ರೀತಿ, ವಾತ್ಸಲ್ಯ ಯುಕ್ತ ಅಮೂಲ್ಯ ಮಾರ್ಗದರ್ಶನ ಪಡೆದಿದ್ದಾರೆ.

ಪುರೋಹಿತರ ಅಭಾವದಲ್ಲಿ, ಮಂತ್ರಾಧ್ಯಯನ ಆದವರೆಲ್ಲಾ ಈ ಪುಸ್ತಕಗಳ ಸಹಾಯದಿಂದ, ಒದಗಿಬರುವ ಸಂಸ್ಕಾರ ಮಂಗಳ ಕಾರ್ಯಗಳನ್ನು (ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ) ಎಂಬಂತೆ ಶಾಸ್ತ್ರೀಯ ತಿಳುವಳಿಕೆಯನ್ನು ಪಡೆದು ಯಥಾ ವಿಧಿಯಂತೆ ನಡೆಸಬಹುದಾಗಿದೆ. ಪ್ರತಿಯೊಬ್ಬರ ಮನೆಯಲ್ಲೂ ಈ ಸಂಸ್ಕಾರ ತರಂಗಿಣೀ ಪುಸ್ತಕಗಳಿದ್ದರೆ ಪ್ರತಿ ಮನೆಯಲ್ಲೂ ಒಬ್ಬ ಪುರೋಹಿತರು ಇದ್ದಂತೆ, ಏಕೆಂದರೆ ಕರ್ಮಾಚರಣೆಯ ವಿಚಾರದಲ್ಲಿ, ಪ್ರತಿಯೊಬ್ಬರೂ ಶಾಸ್ತ್ರೀಯ ತಿಳುವಳಿಕೆಯನ್ನು ಹೊಂದುವುದು ಅತ್ಯಂತ ಅವಶ್ಯಕವೂ, ಅಧಿಕಾರಯುತವೂ ಆಗಿದೆ. ಈ ದೃಷ್ಟಿಯಲ್ಲಿ ಈ ಪುಸ್ತಕಗಳು ತ್ರಿಮತಸ್ಥ ಬ್ರಾಹ್ಮಣರಿಗೂ ಅವಶ್ಯ ಸಂಗ್ರಾಹ್ಯವೇ ಆಗಿದೆ.

ಶ್ರೀ ಶಕ್ತಿಧರ ಶರ್ಮರು ಶೃಂಗೇರಿ ಗುರುಪೀಠದಲ್ಲಿ ಇದ್ದುಕೊಂಡು ಅಧ್ಯಯನ ಮಾಡಿದವರು, ಇವರಿಂದ ಇನ್ನೂ ಅನೇಕ ಜನೋಪಕಾರಕ ಪುಸ್ತಕಗಳು ಬರಲೀ ಎಂದು ಆಶೀರ್ವದಿಸುತ್ತೇನೆ.

–ಇತಿ ಶರ್ಮ–

ವೇ॥ ಬ್ರ॥ ಶ್ರೀ ಮಾರ್ಕಂಡೇಯಾವಧಾನಿ, ಮತ್ತೂರು, ಶಿವಮೊಗ್ಗ

ಪ್ರಾಸ್ತಾವಿಕ ನುಡಿ

ಭಾರತೀಯ ಸನಾತನ ವೈದಿಕ ಸಂಸ್ಕೃತಿಯ ಜೀವಾಳವೇ ವೇದಗಳು. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳಲ್ಲಿ ಮೊದಲಿನ ಮೂರು ಸಾಧನಗಳು ಹಾಗೂ ಕೊನೆಯದಾದ ನಿತ್ಯ ನಿರತಿಶಯ ಸುಖ ಸ್ವರೂಪವಾದ ಮೋಕ್ಷವು ಸಾಧಿಸಲ್ಪಡಬೇಕಾದದ್ದು, ಅದನ್ನು ಸಾಧಿಸಿದಾಗಲೇ ಮನುಷ್ಯ ಜೀವನ ಸಾರ್ಥಕವಾಗುವುದು. ಅದಕ್ಕೆ ಧರ್ಮವೇ ಮೂಲ ಎಂಬುದಾಗಿ ಬೋಧಿಸಿ, ಅವುಗಳ ಸ್ವರೂಪ ಹಾಗೂ ಪ್ರಾಪ್ಯುಪಾಯವನ್ನು ತಿಳಿಸಿ ಮನುಷ್ಯನನ್ನು ಅಧ್ಯಾತ್ಮದೆಡೆಗೆ ಒಯ್ಯುವ ಏಕಮಾತ್ರ ಸಾಧನವಾಗಿರುವುದರಿಂದ ವೇದಗಳು ಪರಮ ಪೂಜನೀಯವಾದವುಗಳು.

ವೇದವಿಹಿತವಾದ ಯಾಗಾದಿ ಕರ್ಮಗಳೇ ಧರ್ಮ. ಧರ್ಮವೇ ಶ್ರೇಯಸ್ಸಾಧನ. ವೇದದಲ್ಲಿ ತಿಳಿಸಿದ ಈ ಯಜ್ಞಯಾಗಾದಿಗಳನ್ನು ಅರ್ಥಜ್ಞಾನ ಸಹಿತವಾಗಿ ಶ್ರದ್ಧೆಯಿಂದ ಕ್ರಮವಾಗಿ ಅನುಷ್ಠಾನ ಮಾಡಿದಾಗ ವಿಹಿತವಾದ ಫಲವನ್ನು ದೊರಕಿಸಿಕೊಡುತ್ತದೆ ಎಂಬುದು ಆರ್ಷ ಸಿದ್ಧಾಂತ.

ವೇದದ ತಾತ್ಪರ್ಯಾರ್ಥವನ್ನೇ ನಿರ್ಣಯಿಸಲು ಹೊರಟ ಪೂರ್ವಮೀಮಾಂಸಾಶಾಸ್ತ್ರದಲ್ಲಿ ಸೂತ್ರಕಾರರಾದ ಜೈಮಿನೀ ಮಹರ್ಷಿಗಳೂ ಸಹ 'ಚೋದನಾ ಲಕ್ಷಣೋऽರ್ಥೋ ಧರ್ಮಃ' ಎಂಬುದಾಗಿ ವೇದದಲ್ಲಿ ತಿಳಿಸಿದ ಶ್ರೇಯಸ್ಸಾಧನೀಭೂತವಾದ ಯಾಗಾದಿಗಳೇ ಧರ್ಮವೆಂದು ತಿಳಿಸಿ, ವೇದದ ತಾತ್ಪರ್ಯಾರ್ಥವನ್ನೇ ಬಹು ವಿಸ್ತಾರವಾಗಿ ವಿಮರ್ಶಿಸಿದ್ದಾರೆ. ಮೀಮಾಂಸಾ ಭಾಷ್ಯಕಾರರಾದ ಶಬರ ಸ್ವಾಮಿಗಳೂ ಸಹ 'ಸ ಹಿ ನಿಶ್ರೇಯಸೇನ ಪುರುಷಂ ಸಂಯುನಕ್ತೀತಿ ಪ್ರತಿಜಾನೀಮಹೇ' ಎಂಬುದಾಗಿ ಧರ್ಮವೇ ಐಹಿಕ ಮತ್ತು ಆಮುಷ್ಮಿಕ ಸುಖ ಸಾಧನವೆಂದು ಸ್ಪಷ್ಟಪಡಿಸಿದ್ದಾರೆ.

ವೇದದಲ್ಲಿ ವಿಹಿತವಾದ ಧರ್ಮವೆಂಬುದಾಗಿ ಪ್ರಚುರಪಡಿಸಿದ ಯಾಗಾದಿ ರೂಪವಾದ ಕರ್ಮಗಳನ್ನು ಪ್ರಧಾನವಾಗಿ ನಿತ್ಯ, ನೈಮಿತ್ತಿಕ, ಮತ್ತು ಕಾಮ್ಯವೆಂಬುದಾಗಿ ಮೂರು ವಿಧವಾಗಿ ವಿಭಾಗಿಸಿದ್ದಾರೆ. ರಾಜಾಜ್ಞೆಯಂತೆ ನಿಯಮೇನ ಮಾಡಲೇಬೇಕಾದದ್ದಾಗಿ ವಿಹಿತವಾದ ಕರ್ಮಗಳು – ನಿತ್ಯಕರ್ಮಗಳು. ಉದಾ– ಸಂಧ್ಯಾವಂದನೆ, ಔಪಾಸನೆ, ಅಗ್ನಿಹೋತ್ರಾದಿಗಳು. ಪಾಪಕ್ಷಯವೇ ಈ ಕರ್ಮಗಳ ಫಲ.

ನಿಮಿತ್ತ ಒದಗಿದಾಗ ನಿಯಮೇನ ಮಾಡಲೇಬೇಕಾದ ಕರ್ಮಗಳು – ನೈಮಿತ್ತಿಕ ಕರ್ಮಗಳು. ಉದಾ– ಗ್ರಹಣ ಪ್ರಯುಕ್ತವಾದ ಸ್ನಾನಾದಿಗಳು, ಮಗು ಹುಟ್ಟಿದಾಗ ಮಾಡಬೇಕಾದ ವೈಶ್ವಾನರೇಷ್ಟಿ ಮೊದಲಾದ ಶ್ರೌತಸ್ಮಾರ್ತ ಕರ್ಮಗಳು, ಈ ಕರ್ಮಗಳಿಗೂ ಪಾಪಕ್ಷಯವೇ ಫಲ.

ಪಶುಪುತ್ರಾದಿ ಐಶ್ವರ್ಯ ಕಾಮನೆಯಿಂದ ಅನುಷ್ಠಾನ ಮಾಡುವ ಕರ್ಮಗಳು – ಕಾಮ್ಯಕರ್ಮಗಳು. ಉದಾ– ಸೋಮಯಾಗ, ಕಾರೀರೀಷ್ಟಿ, ಪೌಷ್ಟಿಕಾದಿ ಸ್ಮೃತ್ಯುಕ್ತಕರ್ಮಗಳು, ಇವುಗಳಿಗೆ ಆಯಾವಿಧಿ ವಾಕ್ಯಗಳಲ್ಲಿ ಅಥವಾ ಪ್ರಕರಣಗಳಲ್ಲಿ ತಿಳಿಸಿದ ಸ್ವರ್ಗಾದಿಗಳೇ ಫಲ.

ಈ ಎಲ್ಲವನ್ನೂ ಅರ್ಥಜ್ಞಾನ ಪುರಸ್ಸರ, ವಿಧಿವತ್ತಾಗಿ ಆಚರಿಸಿದಾಗಲೇ ವಿಹಿತವಾದ ಫಲ ದೊರಕುವುದು. ಆಗಲೇ ಅಧ್ಯಯನ ಮಾಡಿದ ವೇದವು ಸಫಲವಾಗುವುದು. ಅಂದರೆ ಮೊದಲು ವೇದಾಧ್ಯಯನ, ನಂತರ ಅಧ್ಯಯನ ಮಾಡಿದ ವೇದದ ಅರ್ಥಜ್ಞಾನ, ಅರ್ಥಜ್ಞಾನ ತಿಳಿದು ಕರ್ಮಾನುಷ್ಠಾನ, ಅದರಿಂದ ಪಾಪಕ್ಷಯ, ಸ್ವರ್ಗಾದಿ ಸಿದ್ಧಿ. ಹಾಗಾಗಿಯೇ ವೇದಗಳ ಅರ್ಥಜ್ಞಾನ, ಉಚ್ಚಾರಣೆ, ವೇದವಿಹಿತ ಕರ್ಮಾನುಷ್ಠಾನದ ಸ್ವರೂಪ ಪರಿಚಯಾದಿಗಳಿಗೆ ಅನಿವಾರ್ಯವಾದ ವೇದದ ಆರು ಅಂಗಗಳನ್ನು ಅಧ್ಯಯನ ಮಾಡಬೇಕೆಂದು, 'ನಿಷ್ಕಾರಣೋ ಷಡಂಗೋ ವೇದೋ ಅಧ್ಯೇಯೋಜ್ಞೇಯಶ್ಚ' ಇತ್ಯಾದಿ ಶ್ರುತಿಗಳು ತಿಳಿಸುತ್ತಿವೆ. ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೌತಿಷ, ಕಲ್ಪ ಇವು ವೇದದ ಆರು ಅಂಗಗಳು.

ಯಜ್ಞಗಳ ಅನುಷ್ಠಾನ ವಿಧಾನವನ್ನು(ಸ್ವರೂಪ) ತಿಳಿಸುವ ಗ್ರಂಥವೇ ಕಲ್ಪ. ಯಾಗಗಳ ಪ್ರಯೋಗ(ಅನುಷ್ಠಾನ)ವನ್ನೇ ತಿಳಿಸುವುದರಿಂದ ಈ ಗ್ರಂಥಗಳಿಗೂ ಪ್ರಯೋಗ ಗ್ರಂಥಗಳು ಎಂದು ಹೆಸರು ಬಂದಿದೆ. ಸಂಜ್ಞಾ, ಪರಿಭಾಷಾದಿಗಳಿಂದ ಅವುಗಳ(ಯಾಗಗಳ) ಲಕ್ಷಣವನ್ನು ತಿಳಿಸುವ ಸೂತ್ರಗಳಿಗೆ ಕಲ್ಪಸೂತ್ರಗಳು ಎಂದು ಹೆಸರು.

ಈ ಕಲ್ಪಗಳು ಬೇರೆ ಬೇರೆ ವೇದ ಶಾಖೆಗಳಲ್ಲಿ ಬೇರೆ ಬೇರೆಯಾಗಿವೆ, ಹಾಗೆಯೇ ಒಂದೇ ಶಾಖೆಯಲ್ಲೂ ಅನೇಕ ಸೂತ್ರಗಳು ಕಾಣಸಿಗುತ್ತವೆ. ಋಕ್ ಶಾಖಾನುಯಾಯಿಗಳಿಗೆ – ಆಶ್ವಲಾಯನ ಕಲ್ಪಸೂತ್ರ, ಸಾಮವೇದಿಗಳಿಗೆ – ದ್ರಾಹ್ಯಾಯಣ ಸೂತ್ರ, ಯಜುರ್ವೇದದಲ್ಲೂ ಶುಕ್ಲ ಯಜುಶ್ಶಾಖೆಯಲ್ಲಿ ಭಿನ್ನ ಸೂತ್ರಗಳು ಹಾಗೂ ತೈತ್ತಿರೀಯ ಯಜುಶ್ಶಾಖೆಯಲ್ಲಿ – ಬೋಧಾಯನೀಯ, ಆಪಸ್ತಂಬೀಯ, ಹಿರಣ್ಯಕೇಶೀಯ ಕಲ್ಪಸೂತ್ರಗಳು ಈಗ ಪ್ರಚಲಿತವಿರುವ ಮುಖ್ಯ ಕಲ್ಪಸೂತ್ರಗಳು. ಈ

ಕಲ್ಪಸೂತ್ರಗಳ ಪರಂಪರೆಯನ್ನೇ ಗೋತ್ರಪ್ರವರವನ್ನು ಉಚ್ಚರಿಸುವಾಗ ಹೇಳುವ ಸೂತ್ರಗಳು ತಿಳಿಸುತ್ತವೆ.

ಶ್ರೌತಸೂತ್ರ, ಗೃಹ್ಯಸೂತ್ರ, ಧರ್ಮಸೂತ್ರ ಮತ್ತು ಯಜುರ್ವೇದ ಕಲ್ಪದಲ್ಲಿ ಶುಲ್ಬಸೂತ್ರ – ಇವುಗಳ ಸಮುದಾಯವನ್ನೇ ಕಲ್ಪಸೂತ್ರ ಎಂದು ಕರೆದಿದ್ದಾರೆ. ಶ್ರೌತಸೂತ್ರಗಳು, ಸಾಕ್ಷಾತ್ ಶ್ರೌತಕರ್ಮಗಳ ಅನುಷ್ಠಾನ ಪ್ರಕಾರವನ್ನು ಮತ್ತು ಸಂಬಂಧಿಸಿದ ಮಂತ್ರವಿನಿಯೋಗಾದಿಗಳನ್ನು ತಿಳಿಸುತ್ತವೆ. ಗೃಹ್ಯಸೂತ್ರಗಳು, ಗೃಹಸ್ಥರು ಅನುಷ್ಠಾನಮಾಡಬೇಕಾದ ಯಾಗಗಳನ್ನು, ಔಪಾಸನಾಗ್ನಿಯಲ್ಲಿ ಮಾಡುವ ಕರ್ಮಗಳನ್ನು, ಮತ್ತು ಉಪನಯನವೇ ಮೊದಲಾದ ಸಂಸ್ಕಾರಗಳ ಅನುಷ್ಠಾನ ಕ್ರಮವನ್ನು ತಿಳಿಸುತ್ತವೆ. ಧರ್ಮಸೂತ್ರಗಳು, ಯಜಮಾನ–ಋತ್ವಿಜರುಗಳಿಗೆ ಸಂಬಂಧಿಸಿದ ನಿಯಮಗಳನ್ನು, ಬ್ರಾಹ್ಮಣ–ಕ್ಷತ್ರಿಯಾದಿ ವರ್ಣಗಳಿಗೆ ಸಂಬಂಧಿಸಿದ ಧರ್ಮಪಾಲನೆಯ ಬಗ್ಗೆ, ಬ್ರಹ್ಮಚರ್ಯಾದಿ ಆಶ್ರಮ ಧರ್ಮಗಳು ಮತ್ತು ಸಮಸ್ತ ಮನುಕುಲಕ್ಕೆ ಸಂಬಂಧಿಸಿದ ಎಲ್ಲಾ ಸಾಮಾನ್ಯಧರ್ಮ ವಿಚಾರಗಳನ್ನೂ ತಿಳಿಸುತ್ತವೆ. ಶುಲ್ಬಸೂತ್ರಗಳು, ಯಜ್ಞಾನುಷ್ಠಾನಕ್ಕೆ ಉಪಯುಕ್ತವಾದ ಯಜ್ಞಶಾಲಾ ನಿರ್ಮಾಣ ಸಂಬಂಧಿ ವಿಚಾರಗಳನ್ನು ತಿಳಿಸುತ್ತವೆ. ಹೀಗೆ ಈ ಎಲ್ಲಾ ವಿಭಾಗಗಳೂ ಸಾಕ್ಷಾತ್ತಾಗಿ, ಅಥವಾ ಪರಂಪರೆಯಿಂದ ಯಜ್ಞಗಳ ಅನುಷ್ಠಾನದ ಸಂಬಂಧವನ್ನು ಹೊಂದಿವೆ, ಹಾಗಾಗಿಯೇ ಇವುಗಳಿಗೆ ಏಕವಾಕ್ಯತೆ ಇದೆ.

ಆಪಸ್ತಂಬ ಕಲ್ಪಸೂತ್ರದಲ್ಲಿ ಹೇಳುವುದಿದ್ದರೆ – ಮೊದಲನೇ ಪ್ರಶ್ನೇ ಸರ್ವಕರ್ಮಸಾಧಾರಣ ಪರಿಭಾಷಾ ಸೂತ್ರಗಳು. ಎರಡರಿಂದ ಇಪ್ಪತ್ತನಾಲ್ಕನೇ ಪ್ರಶ್ನೆಗಳವರೆಗೆ(23 ಪ್ರಶ್ನೆಗಳು) ಶ್ರೌತಸೂತ್ರಗಳು. ಮುಂದಿನ ಮೂರು ಪ್ರಶ್ನೆಗಳು(25,26,27) ಗೃಹ್ಯಸೂತ್ರಗಳು. ಈ ಮೂರರಲ್ಲಿ ಕೊನೆಯದು(27ನೇ ಪ್ರಶ್ನೆ) ಪಿತೃಮೇಧ ಸೂತ್ರಗಳು. 28,29 ನೇ ಪ್ರಶ್ನೆಗಳು ಧರ್ಮಸೂತ್ರಗಳು. 30ನೇ ಪ್ರಶ್ನೆ ಶುಲ್ಬಸೂತ್ರಗಳು. ಹೀಗೆ ಒಟ್ಟಿಗೆ 30 ಪ್ರಶ್ನಾತ್ಮಕವಾದದ್ದು ಆಪಸ್ತಂಬ ಕಲ್ಪಸೂತ್ರ.

ಅವುಗಳಲ್ಲಿ ಸ್ಮಾರ್ತಕರ್ಮಗಳೂ ಮತ್ತು ಏಕಾಗ್ನಿಸಾಧ್ಯವಾದ (ಔಪಾಸನಾಗ್ನಿಯಲ್ಲಿ ನಿರ್ವಹಿಸುವ), ಉಪನಯನಾದಿ ಸಂಸ್ಕಾರಗಳ ಪ್ರಯೋಗವನ್ನು, ಸಂಬಂಧಿಸಿದ ಸೂತ್ರ ಮತ್ತು ಕಪರ್ದಿಕಾರಿಕೆಗಳನ್ನು ಸಂಗ್ರಹಿಸಿ ಕನ್ನಡದಲ್ಲಿ ಭಾವಾನುವಾದವನ್ನು ತಿಳಿಸಿ, ಸಂಸ್ಕಾರ ತರಂಗಿಣೀ ಎಂಬ ಹೆಸರಿನಲ್ಲಿ ಗ್ರಂಥವನ್ನು ಪ್ರಕಟಿಸಿ ಹೊರತರುತ್ತಿದ್ದಾರೆ ನಮ್ಮ ವೇದಬ್ರಹ್ಮ ಶ್ರೀಯುತ ಶಕ್ತಿಧರ ಶರ್ಮರು. ಸ್ಮಾರ್ತಕರ್ಮಗಳಿಗೆಲ್ಲಾ ಮೂಲ ಆಧಾರ ಗೃಹ್ಯಸೂತ್ರಗಳು. ಕಪರ್ದಿಸ್ವಾಮಿಗಳು ಕಾರಿಕಾರೂಪದಲ್ಲಿ ಪ್ರಯೋಗವನ್ನು ತಿಳಿಸಿದ್ದಾರೆ.

ಇವುಗಳ ಆಧಾರದ ಮೇಲೆ ವಿಧಿವತ್ತಾಗಿ ಪ್ರಯೋಗವನ್ನೂ ತಿಳಿಸಿ ಅನುಷ್ಠಾನ ಮಾಡುವ ಕ್ರಮವನ್ನೂ ಈ ಗ್ರಂಥಗಳಲ್ಲಿ ತಿಳಿಸಿಕೊಟ್ಟಿದ್ದಾರೆ.

ಆಪಸ್ತಂಬ ಪ್ರಯೋಗ ಗ್ರಂಥವು ಬೇರೆ ಬೇರೆ ವಿದ್ವಾಂಸರಿಂದ ಅನೇಕ ಪ್ರಕಾಶನಗಳಲ್ಲಿ ಉಪಲಬ್ಧವಿದ್ದರೂ, ಆಯಾ ಪ್ರಕರಣಗಳಿಗೆ ಸಂಬಂಧಿಸಿದ ಕಾರಿಕೆ, ಮೂಲ ಗೃಹ್ಯಸೂತ್ರ ಸಹಿತವಾಗಿ ಪ್ರಕಟಿತವಾದ ಪ್ರಯೋಗಗ್ರಂಥ ಇಲ್ಲವೇಇಲ್ಲ ಎಂಬುವಷ್ಟು ಅತಿವಿರಳ. ಇದೇ ಈ ಗ್ರಂಥಮಾಲಿಕೆಯ ವಿಶೇಷ ಲಕ್ಷಣವಾಗಿದೆ. ಗೃಹ್ಯಸೂತ್ರಗಳ ಅಧ್ಯಯನ ಕ್ರಮವೂ ಈಗ ನಮ್ಮಲ್ಲಿಲ್ಲ, ಹೀಗಿರುವಾಗ ಶ್ರೀಯುತ ಶರ್ಮರು ಈ ವಿಶಿಷ್ಟವಾದ ಪ್ರಕಾಶನಕ್ಕೆ ವಹಿಸಿದ ಶ್ರಮವು ಅತ್ಯಮೂಲ್ಯ.

ಇದು ವೈದಿಕ ಸಮಾಜಕ್ಕೆ ತುಂಬಾ ಉಪಯುಕ್ತವಾದದ್ದು. ವೈದಿಕರಿಗೆ, ಪ್ರಯೋಗದ ಮೂಲಪ್ರಮಾಣವಾದ ಸೂತ್ರ, ಕಾರಿಕೆಗಳನ್ನು ತಿಳಿದುಕೊಳ್ಳಲು ಆಸಕ್ತರಾದ ಜಿಜ್ಞಾಸುಗಳಿಗೆ, ವಿದ್ಯಾರ್ಥಿಗಳಿಗೆ, ಸಮಸ್ತ ಆಸ್ತಿಕ ಬಂಧುಗಳಿಗೆ ಈ ಗ್ರಂಥಗಳು ತುಂಬಾ ಉಪಯುಕ್ತವಾಗಿವೆ. ಕರ್ಮಜ್ಞಾನವನ್ನು ಹೊಂದಿ, ಅನುಷ್ಠಾನವನ್ನು ಮಾಡಿದಾಗ ಮಾತ್ರ ಆ ವೈದಿಕ ಕರ್ಮ ವಿಶೇಷಫಲವನ್ನೇ ಕೊಡುವುದೆಂದು ಶಾಸ್ತ್ರಗಳೇ ತಿಳಿಸುತ್ತಿವೆ.

ಇವರಿಂದ ಇನ್ನೂ ಹೆಚ್ಚಿನ ಸನಾತನ ಪರಂಪರೆಯ ಸೇವೆ ನಡೆಯಲು, ಇವರಿಗೆ ಹಾಗೂ ಈ ವಿಷಯದಲ್ಲಿ ಅಮೂಲ್ಯ ಮಾರ್ಗದರ್ಶನ ನೀಡುತ್ತಿರುವ ಮಹನೀಯರಾದ ವಿದ್ವಾನ್, ಶ್ರೀಮಾನ್ ಶಿವಕುಮಾರ ಅವಧಾನಿಗಳಿಗೂ ಮತ್ತು ವಿದ್ವಾನ್, ಶ್ರೀಮಾನ್ ಕಿರಣ ಅವಧಾನಿಗಳಿಗೂ ಆಯುಷ್ಯ, ಆರೋಗ್ಯ ಮತ್ತು ಭಾಗ್ಯವನ್ನು ಅನುಗ್ರಹಿಸಲೆಂದು ವೇದಮಾತೆಯಾದ ಶಾರದಾಂಬೆ ಮತ್ತು ಜಗದ್ಗುರುಗಳ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತೇನೆ.

ವಿದ್ವಾನ್, ವೇದಬ್ರಹ್ಮಶ್ರೀ, ಡಾ – ಸುಬ್ರಾಯ ವಿ ಭಟ್
ಪ್ರಾಧ್ಯಾಪಕರು, ಮೀಮಾಂಸಾಶಾಸ್ತ್ರ ವಿಭಾಗ,
ರಾಜೀವಗಾಂಧಿ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠಂ, ಶೃಂಗೇರಿ.

ಸಂಪಾದಕರು ಮಾತು...

ಈ ಜಗತ್ತಿನಲ್ಲಿರುವ ಎಲ್ಲ ವಿಚಾರಗಳಿಗೂ ಆಧಾರ – ಕರ್ಮಭಾಗದ ಪಿತೃಗಳಾದ ಋಷಿಗಳೇ ಹೊರತು, ದೇಹಭಾವದ ಅಂದರೆ ಶರೀರವನ್ನು ಕೊಟ್ಟಂತಹ ಪಿತೃಗಳಲ್ಲ. ಏಕೆಂದರೆ ನಮಗಿಂತ ಮೊದಲು ಭೂಮಿಗೆ ಬಂದಿರುತ್ತಾರಾದ್ದರಿಂದ ಹಾಗೂ ನಮ್ಮ ದೇಹವು ಭೂಮಿಗೆ ಬರಲು ಅವಕಾಶ ಮಾಡಿರುತ್ತಾರಾದ್ದರಿಂದ ಅವರು ನಮಗೆ ಹಿರಿಯರು, ಪಿತೃಗಳು, ಆದರಣೀಯರು. ಹಾಗೂ ಈ ಎಲ್ಲಾ ಕೃತಜ್ಞತೆ – ಉನ್ನತಗೌರವ – ಆದರಗಳು ಅವರುಗಳಿಗೆ ಸಿಗಲೇಬೇಕು, ಮತ್ತೂ ಕಿರಿಯರಾದವರು ಕೊಡಲೇಬೇಕು, ಸಂದೇಹವೇ ಇಲ್ಲ!.

ಆದರೆ, ಅವರೆಂದಿಗೂ(ದೇಹಭಾವದ ಪಿತೃಗಳು) ಅತ್ಯಂತ ಸೂಕ್ಷ್ಮವಾದ, ಗೂಢವಾದ, ವಿಸ್ತಾರವಾದ ಜ್ಞಾನದ ರಾಶಿಯ ಕರ್ತೃವಾಗಲೂ, ಆಧಾರವಾಗಲೂ ಸಾಧ್ಯವೇಇಲ್ಲ!!. ಏಕೆಂದರೆ ಅವರುಗಳೂ ಸಹ ಅವರವರ ಜನ್ಮಾಂತರದ ಪಾಪಪುಣ್ಯಗಳ ಫಲಗಳನ್ನು ಅನುಭವಿಸಲು ಬಂದಿರುವವರೇ ಆಗಿರುತ್ತಾರೆ. ಹಾಗಾಗಿಯೇ ನಾವುಗಳು ನಮಸ್ಕಾರ ಮಾಡುವಾಗ ಹೇಳುವ ಪ್ರವರದಲ್ಲಿ, ಜನ್ಮಕ್ಕೆ ಕಾರಣರಾದ ತಂದೆ, ಅಜ್ಜ, ಮುತ್ತಜ್ಜರ ಹೆಸರುಗಳನ್ನು ಹೇಳುವುದಿಲ್ಲ!, ಬದಲಿಗೆ ಕರ್ಮಭಾಗದ ಪಿತೃಗಳಾದ, ನಮ್ಮ ಪರಂಪರೆಯ ಮಹರ್ಷಿಗಳ ಹೆಸರುಗಳನ್ನು(ನಾವು ಅವರ ಪರಂಪರೆಯವರು ಎಂದು) ಹೇಳುವುದು. ಹಾಗಾಗಿ ಇಂದು ನಾವುಗಳು ನೋಡುತ್ತಿರುವ, ಹಾಗೆಯೇ ಕೇಳುತ್ತಿರುವ ಅನೇಕ ರೀತಿಯ ಸಮುದಾಯಗಳ ಭಿನ್ನಭಿನ್ನ ನಡವಳಿಕೆಗಳನ್ನು 'ಇದೇ ನಮ್ಮ ಸಂಪ್ರದಾಯ – ಆಚಾರ' ಎಂಬ ಬ್ರಹ್ಮಾಸ್ತ್ರದಂತಹ ವಾಕ್ಯಗಳಿಂದ ಅವರುಗಳು ಮಾಡಿಕೊಳ್ಳುವ ಯಾವ ಸಮರ್ಥನೆಗೂ ಬೆಲೆಯಿಲ್ಲ.

ಏಕೆಂದರೆ, ಕರ್ಮಭಾಗದ ಪಿತೃಗಳಾದ, ಸಹಸ್ರಸಹಸ್ರ ವರ್ಷಗಳು ಭಗವಂತನನ್ನು ಧ್ಯಾನಿಸಿ, ಮಂತ್ರದ್ರಷ್ಟಾರರಾದ ಋಷಿಪುಂಗವರು ಶಾಸ್ತ್ರ ಗ್ರಂಥಗಳನ್ನು ಭಗವಂತನ ಸೂಚನೆಯಂತೆ ರಚಿಸಿ, ಸಮಸ್ತ ಲೋಕಕ್ಕೆ ಏನನ್ನು ಆದೇಶಿಸಿ ಉಪದೇಶಿಸಿದ್ದಾರೋ ಆ ನಡವಳಿಕೆಗಳನ್ನು, ಆ ನಿಯಮಗಳನ್ನು, ಮನುಷ್ಯರು ತಲತಲಾಂತರ ವರ್ಷಗಳಿಂದ ಅವಿಚ್ಛಿನ್ನವಾಗಿ ಚಾಚೂತಪ್ಪದೆ ಅನುಸರಿಸುವಂತಹ ಪ್ರಕ್ರಿಯೆಗೇ – ಅಂತಹ

ವ್ಯವಸ್ಥಿತವಾದ ನಡವಳಿಕೆಗೇ ಸಂಪ್ರದಾಯ – ಆಚಾರ ಎಂದು ಹೆಸರೇ ಹೊರತು, ನಾವು ನೀವು ಮಾಡುವಂತಹ, ಆಚರಿಸುವಂತಹ, ಶಾಸ್ತ್ರಗಳಲ್ಲಿಲ್ಲದಿರುವ – ಶಾಸ್ತ್ರಗಳಿಗೆ ಪೂರಕವಲ್ಲದ ಹಾಗೂ ಶಾಸ್ತ್ರವಿರೋಧವಾದ ಯಾವ ಕ್ರಿಯೆಗಳಿಗೂ ಸಂಪ್ರದಾಯ ಎಂದು ಹೇಳಲು ಬರುವುದಿಲ್ಲ!!.

ಏಕೆಂದರೆ ಋಷಿಗಳಿಂದ ರಚಿತವಾಗಿರುವ ಸಕಲ ಶಾಸ್ತ್ರಗ್ರಂಥಗಳೂ ಕೂಡ ಕೇವಲ ಆಯಾ ವೇದಗಳು – ಆ ವೇದಗಳ ಶಾಖೆಗಳು – ವೇದದ ಅರ್ಥ ಹಾಗೂ ಅಂಗಗಳನ್ನು ಮಾನದಂಡವಾಗಿ ಇಟ್ಟುಕೊಂಡು, ಅವುಗಳನ್ನು ಅನುಸರಿಸಿ ರಚನೆಯಾಗಿವೆಯೇ ಹೊರತು, ಇಂದಿನ ಸಮಾಜದಲ್ಲಿ ಕಂಡುಬರುವ ಯಾವುದೇ ಮತ, ಸಮುದಾಯ, ಒಳಪಂಗಡಗಳನ್ನು, ಉದಾಹರಣೆಗೆ : ಸಂಕೇತಿಗಳನ್ನು – ಹವ್ಯಕರನ್ನು – ಕಮ್ಮೆಗಳನ್ನು – ಮಾಧ್ವರನ್ನು – ಸ್ಮಾರ್ತರನ್ನು – ಐಯ್ಯಂಗಾರರನ್ನು – ದ್ರಾವಿಡರನ್ನು – ಆಂಧ್ರದವರನ್ನು – ನಮ್ಮೂರಿನ ಪುರೋಹಿತರನ್ನು – ನಿಮ್ಮೂರಿನ ಪುರೋಹಿತರನ್ನು – ಅವರೂರಿನ ಪುರೋಹಿತರನ್ನು – ವೇದಶಾಸ್ತ್ರಗಳ ಬಗ್ಗೆ ಏನೂ ಗೊತ್ತಿಲ್ಲದ, ಆದರೆ ವಯಸ್ಸಿ(ದೇಹದಲ್ಲಿ)ನಲ್ಲಿ ಹಿರಿಯರಾದ ಹೆಂಗಸರು ಅಥವಾ ಗಂಡಸರನ್ನು.....!!!, ಹೀಗೆ ಇಂತಹ ಯಾವ ಮಾನದಂಡಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ಒಂದೇಒಂದು ಶಾಸ್ತ್ರಗ್ರಂಥವೂ ಸಹ ರಚನೆಯಾಗಿಲ್ಲ ಎಂಬುದನ್ನು ನಾವು ಮೊದಲು ಅರಿತುಕೊಳ್ಳಬೇಕು.

ಅಲ್ಲದೇ, ಭಗವಂತನು ತನ್ನ ಮೂಲಕ ರಚಿತವಾಗಿರುವ ಶಾಸ್ತ್ರಗಳನ್ನು ಕೇವಲ ಅನುಸರಿಸಲು ಮಾತ್ರ ಮನುಷ್ಯರಿಗೆ ಅವಕಾಶವನ್ನು ಕೊಟ್ಟಿದ್ದಾನೆಯೇ ಹೊರತು ಅದನ್ನು ಮೀರಲು ಅವಕಾಶ ಕೊಟ್ಟಿಲ್ಲ. ಹಾಗಾಗಿಯೇ ಗೀತೆಯಲ್ಲಿ ಕೃಷ್ಣನು,

ತಸ್ಮಾತ್ ಶಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ ।
ಜ್ಞಾತ್ವಾ ಶಾಸ್ತ್ರ ವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ॥

ಅಂದರೆ, ತಪ್ಪು–ಸರಿ, ನ್ಯಾಯ–ಅನ್ಯಾಯ ಈ ವಿಷಯಗಳಲ್ಲಿ ಶಾಸ್ತ್ರಗಳೇ ಪ್ರಮಾಣವಾಗಿವೆ ಎಂದು ಹೇಳಿರುವುದು. ಹಾಗೆಯೇ,

ವೇದೋಕ್ತ: ಪ್ರಥಮೋ ಧರ್ಮೋ ಧರ್ಮಶಾಸ್ತ್ರೇಷು ಚಾಪರ: ।
ಶಿಷ್ಟಾಚಾರ ಸ್ಮೃತೀಯಸ್ತು ತ್ರಿವಿಧಂ ಧರ್ಮಲಕ್ಷಣಂ ॥

ಮತ್ತೂ

ಶ್ರುತಿಃಸ್ಮೃತಿ ವಿರೋಧೇ ಶ್ರುತಿಃ ಗರೀಯಸಿ ।
ಸ್ಮೃತಿಸ್ಸಂಪ್ರದಾಯ ವಿರೋಧೇ ಸ್ಮೃತಿಃ ಗರೀಯಸಿ ॥

ಅಂದರೆ – ವೇದಗಳಲ್ಲಿ ಹೇಳಿದ ಧರ್ಮವೇ ಮುಖ್ಯ, ಅದಕ್ಕೇ ಮೊದಲ ಪ್ರಾಶಸ್ತ್ಯ । ಧರ್ಮಶಾಸ್ತ್ರಗಳಲ್ಲಿ ಹೇಳಿರುವುದಕ್ಕೆ 2ನೇ ಆದ್ಯತೆ । ಶಿಷ್ಟಾಚಾರಕ್ಕೆ 3ನೇ ಆದ್ಯತೆ, ಅದೂ ಶ್ರುತಿ, ಸ್ಮೃತಿ, ಪುರಾಣಾದಿಶಾಸ್ತ್ರಗಳು ಒಪ್ಪುವಂತಹ (ವಿರೋಧವಲ್ಲದ) ಅಥವಾ ತತ್ಕಾಲದಲ್ಲಿ ಯಾವುದೇ ಶಾಸ್ತ್ರದ(ಋಷಿವಾಕ್ಯ) ಆಧಾರವಾಕ್ಯಗಳು ಸಿಗದಿದ್ದಾಗ ಮಾತ್ರ 3 ನೇ ಆದ್ಯತೆಯಾಗಿ ಶಿಷ್ಟಾಚಾರವನ್ನು ಒಪ್ಪಿಕೊಳ್ಳಬಹುದು ॥ ಮತ್ತೂ ವೇದಕ್ಕೂ ಹಾಗೂ ಧರ್ಮಶಾಸ್ತ್ರಾದಿ ಸ್ಮೃತಿಗಳಿಗೂ ಪರಸ್ಪರವಿರೋಧ ಕಂಡುಬಂದಾಗ, ವೇದಕ್ಕೇ ಆದ್ಯತೆಯೆಂದೂ ಮತ್ತೂ ಸ್ಮೃತಿಗಳಿಗೂ ಹಾಗೂ ಲೋಕದ ನಡವಳಿಕೆಗಳಿಗೂ(ಆಚರಣೆ) ಪರಸ್ಪರವಿರೋಧ ಕಂಡುಬಂದರೆ, ಆಗ ಸ್ಮೃತಿವಾಕ್ಯಗಳಿಗೇ ಆದ್ಯತೆ ಇರಬೇಕು ॥

ವೇದೋನಿತ್ಯಮಧೀಯತಾಂ ತದುದಿತಃ ಕರ್ಮಸ್ವಾನುಷ್ಠೀಯತಾಮ್ ।

ಎಂದು ಶಂಕರಾಚಾರ್ಯರು ಆದೇಶಿಸಿದ್ದಾರೆ. ಇದರ ಅರ್ಥ, ವೇದವನ್ನು ಮೊದಲು ಅಧ್ಯಯನ ಮಾಡಿ ಅರ್ಥಜ್ಞಾನವನ್ನು ತಿಳಿಯಿರಿ ಹಾಗೂ ಅದರಲ್ಲಿ ಹೇಳಿರುವಂತೆಯೇ ಕರ್ಮಗಳನ್ನು (ಕೆಲಸ) ಆಚರಿಸಿರಿ ॥ ಇನ್ನು,

ಯಸ್ಯ ನಾಸ್ತಿ ಸ್ವಯಂ ಪ್ರಜ್ಞಾ ಶಾಸ್ತ್ರಂ ತಸ್ಯ ಕರೋತಿ ಕಿಮ್ ।
ಲೋಚನಾಭ್ಯಾಂ ವಿಹೀನಸ್ಯ ದರ್ಪಣ: ಕಿಂ ಕರಿಷ್ಯತಿ ॥

ಅಂದರೆ, ಯಾವಾತನಿಗೆ ಸ್ವಯಂ ಪ್ರಜ್ಞೆ ಇರುವುದಿಲ್ಲವೋ, ಅವನಿಗೆ ಶಾಸ್ತ್ರವು ಏನನ್ನು ತಾನೇ ಮಾಡುತ್ತದೆ. 2 ಕಣ್ಣುಗಳೂ ಇಲ್ಲದವನಿಗೆ ಕನ್ನಡಿಯು ತಾನೇ ಏನನ್ನು ಮಾಡುತ್ತದೆ. ಮನುಷ್ಯನಿಗೆ ಶಾಸ್ತ್ರಜ್ಞಾನವು ಅತ್ಯವಶ್ಯಕ, ಸ್ವಂತ ಬುದ್ಧಿಯಿಂದ

ಶಾಸ್ತ್ರವನ್ನು ವಿವೇಚಿಸಿ, ಮುಕ್ತವಾಗಿ ಒಪ್ಪಿಕೊಳ್ಳುವಂತಹ ಮನೋಧರ್ಮವನ್ನು ಬೆಳಸಿಕೊಳ್ಳಬೇಕು. ಶಾಸ್ತ್ರಗಳು ಮನುಷ್ಯರಿಗೆ ಒಳಿತನ್ನು ಮಾಡುವುದಕ್ಕಾಗಿಯೇ ಹೊರಟಿವೆ. ಶಾಸ್ತ್ರಗ್ರಂಥಗಳು ಋಷಿಗಳ ತಪಸ್ಸಿನ ಫಲರೂಪಗಳು. ಮುಮುಕ್ಷುಗಳಿಗೆ ಇವು ದಾರಿದೀಪಗಳಾಗಿವೆ. ಮೋಕ್ಷವು ಒಂದೆರಡು ಜನ್ಮಗಳಲ್ಲಿ ಸಿದ್ಧಿಸುವಂತಹದ್ದಲ್ಲ, ಮನುಷ್ಯನು ಅದನ್ನು ಪಡೆಯಲು ಪ್ರತಿಜನ್ಮದಲ್ಲಿಯೂ ಪ್ರಯತ್ನಶೀಲನಾಗಿರಬೇಕು. ಹೀಗೆ ಪ್ರಯತ್ನಶೀಲನಾಗಬೇಕಾದರೆ ಶಾಸ್ತ್ರಗಳು ಅತ್ಯವಶ್ಯಕ. ಅವುಗಳನ್ನು ಧಿಕ್ಕರಿಸಿದರೆ, ಕುರುಡನು ಕನ್ನಡಿಯನ್ನು ತಿರಸ್ಕರಿಸಿದಂತೆ ಆಗುತ್ತದೆ. ಸರ್ವಸ್ಯ ಲೋಚನಂ ಶಾಸ್ತ್ರಂ – ಎನ್ನುವಂತೆ ನಮ್ಮ ಬದುಕಿನ ಸಾರ್ಥಕತೆಗೆ ಶಾಸ್ತ್ರವೆಂಬ ಕಣ್ಣು ಬೇಕು, ಅದಿಲ್ಲದಿದ್ದರೆ ಅವನು ಕುರುಡನೇ ಸರಿ.

ಕೊನೆಯದಾಗಿ –

'ಅವಶ್ಯಂ ಪಿತ್ರಾಚಾರಂ!' ಹೌದು ಕರ್ಮಮಾರ್ಗದ ವಿಷಯದಲ್ಲಿ ಅವಶ್ಯವಾಗಿ ನಮ್ಮ ಪಿತೃಗಳ ಆಚಾರವನ್ನು, ನಡವಳಿಕೆಗಳನ್ನು ಅನುಸರಿಸಬೇಕು, ಅದೇ ಸಂಪ್ರದಾಯ–ಆಚಾರ. ಆದರೆ ಯಾವ ಪಿತೃಗಳ?, ಅಂದರೆ ಕರ್ಮಪಿತೃಗಳಾದ ಋಷಿಗಳ ವಚನಗಳನ್ನು ಮೊದಲು ಅಧ್ಯಯನ ಮಾಡಿ, ಹಾಗೆಯೇ ಅರ್ಥಜ್ಞಾನ ತಿಳಿದು, ನಂತರ ನಿಷ್ಕಾಮವಾಗಿ ಕರ್ಮಾಚರಣೆಯನ್ನು ಮಾಡಿದರೆ, ಅದರಿಂದ ಚಿತ್ತಶುದ್ಧಿ, ತನ್ಮೂಲಕ ಬ್ರಹ್ಮಜ್ಞಾನ(ಸಚ್ಚಿದಾನಂದ ಸ್ವರೂಪ) ಪ್ರಾಪ್ತಿಯಾಗುತ್ತದೆ.

ಪ್ರಸ್ತುತ, ಈ ಗ್ರಂಥವು ಮೊದಲ ಬಾರಿಗೆ ಕನ್ನಡ ಭಾಷೆಯಲ್ಲಿ ಪ್ರಕಟವಾಗುತ್ತಿದ್ದು, ಇಲ್ಲಿಯವರೆಗೆ ಕೇವಲ ಸಂಸ್ಕೃತ, ತೆಲುಗು, ಗ್ರಂಥಾಕ್ಷರಗಳಲ್ಲಿ ಮಾತ್ರವೇ ಮುದ್ರಣವಾಗಿರುತ್ತದೆ. ನೂರು ವರುಷಗಳ ಹಿಂದೆಯೇ ಆ ಮುದ್ರಣ ಕಾರ್ಯವನ್ನು ಮಾಡಿದಂತಹ ಆ ಎಲ್ಲ ಮಹನೀಯರಿಗೂ ನಮಸ್ಕರಿಸಿ ಹಾಗೆಯೇ ಇಂತಹ ಋಷಿಪ್ರಣೀತ ಜ್ಞಾನವನ್ನು ಸಮಸ್ತ ಮನುಷ್ಯರ ಒಳತಿಗಾಗಿ ಕೊಟ್ಟಂತಹ ಶ್ರೀ ವೈದ್ಯನಾಥ ದೀಕ್ಷಿತರಿಗೂ ಹಾಗೂ ಶ್ರೀ ಎಲ್ಲುಭಟ್ಟರಿಗೂ ಮತ್ತು ಮೈಸೂರು ಸಂಸ್ಥಾನದ ಮಹಾಪಂಡಿತರಾಗಿದ್ದ ವೆಂಕಟರಾಮಾವಧಾನಿಗಳಂತಹ ಮಹಾತ್ಮರುಗಳಿಗೂ ಸಾಷ್ಟಾಂಗ ನಮಸ್ಕಾರವನ್ನು ಸಲ್ಲಿಸುತ್ತೇವೆ. ಹಾಗೆಯೇ ಈ ಗ್ರಂಥವು ಈ ರೂಪಕ್ಕೆ ಬರಲು ಕಾರಣೀಭೂತರಾದಂತಹ

ನಮ್ಮ ಎಲ್ಲಾ ಮಾರ್ಗದರ್ಶಕ ವಿದ್ವಾಂಸರುಗಳಿಗೂ ವಿಶೇಷವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಮತ್ತೂ ವಾತ್ಸಲ್ಯದಿಂದ ವಿಶೇಷ ಮಾರ್ಗದರ್ಶನವನ್ನು ನೀಡುತ್ತಿರುವ **ವಿದ್ವಾಂಸರಾದ, ಅಗ್ನಿಹೋತ್ರಿಗಳಾದ ಶ್ರೀಮಾನ್ ಕಿರಣಾವಧಾನಿಗಳಿಗೆ** ಈ ಸಂದರ್ಭದಲ್ಲಿ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸುತ್ತಿದ್ದೇನೆ ಹಾಗೂ ಈ ಗ್ರಂಥವನ್ನು ಹೊರತರಲು ಆರ್ಥಿಕ ಸಹಾಯವನ್ನು ನೀಡಿದಂತಹ ಶ್ರೀಯುತ ಕೃಷ್ಣಮೂರ್ತಿ, ದೇವನಹಳ್ಳಿ ಇವರಿಗೆ ವಿಶೇಷವಾದಂತಹ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮತ್ತು ಈ ಗ್ರಂಥವನ್ನು ತಮ್ಮ ಅಮೃತಹಸ್ತದಿಂದ ಬಿಡುಗಡೆ ಮಾಡಿದ ವೇದ, ವೇದಾಂತ, ಜ್ಯೋತಿಷ್ಯ ಶಾಸ್ತ್ರಗಳ ಮಹಾಪಂಡಿತರಾದ ಪೂಜ್ಯ ಶ್ರೀ ಅದ್ವಯಾನಂದೇಂದ್ರ ಸರಸ್ವತಿ ಸ್ವಾಮಿಗಳಿಗೆ ಸಾಷ್ಟಾಂಗ ನಮಸ್ಕಾರಗಳನ್ನು ಸಮರ್ಪಿಸುತ್ತೇನೆ.

ಇಂತಹ ಅವಕಾಶವನ್ನು ನಮಗೆ ದೊರಕಿಸಿಕೊಟ್ಟಂತಹ **ಪೂಜ್ಯ ಅವಧೂತ ಮಹಾತ್ಮರಾದ ಶ್ರೀ ವೆಂಕಟಾಚಲ ಸದ್ಗುರುಗಳ** ಸಂಕಲ್ಪವೇ ಈ ಎಲ್ಲಾ ಆಗುಹೋಗುಗಳಿಗೂ ಮೂಲ ಕಾರಣವು.

ಮುಂದಿನ ವಿಧಿಗಳಿಂದ ಆರಂಭಿಸಿ ಸಪಿಂಡೀಕರಣ ಕರ್ಮದ ಪರ್ಯಂತವಾದ ವಿಧಿಗಳ ಕ್ರಮವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ಇಂತಹ ಗ್ರಂಥವನ್ನು ಜ್ಞಾನಮಾರ್ಗದ ಜಿಜ್ಞಾಸುಗಳು, ಋಷಿವಾಕ್ಯದಲ್ಲಿ ಗೌರವವನ್ನು ಹೊಂದಿರುವವರು ಹಾಗೂ ಆಸಕ್ತರು ಸಂಗ್ರಹಿಸಿ ತನ್ಮೂಲಕ ಜ್ಞಾನಮಾರ್ಗದ ಈ ಕೆಲಸಕ್ಕೆ ಸಹಕರಿಸಬೇಕಾಗಿ ವಿನಂತಿಸುತ್ತೇವೆ.

ವೇದಬ್ರಹ್ಮ ಶ್ರೀ ಎ.ಸಿ ಶಕ್ತಿಧರ ಶರ್ಮರು

ಸಂಪಾದಕರು ಹಾಗೂ ಪ್ರಕಾಶಕರು

1. ಶ್ರೀಭಾರದ್ವಾಜೀಯ/ಆಪಸ್ತಂಬೀಯ ಯಜುರ್ವೇದ ಪಿತೃಮೇಧ(ಅಪರ)ಸೂತ್ರ ಹಾಗೂ ಗೋಪಾಲಮುನಿಗಳ ಮತ್ತು ಕಪರ್ದಿಸ್ವಾಮಿಗಳ ಭಾಷ್ಯವು.

1. ಭಾರದ್ವಾಜ ಅಪರಸೂತ್ರ – ವಿಮರ್ಶೆ

ಭಾರದ್ವಾಜ ಪೈತೃಮೇಧಿಕ ಸೂತ್ರಂ ನೈತಾವದವಧಿ ಮುದ್ರಿತಮ್ । ಆಪಸ್ತಂಬೀಯಂ ಸತ್ಯಾಷಾಢೀಯಂ ಚೇತಿ ಯತ್ ಪಿತೃಮೇಧಸೂತ್ರದ್ವಯಂ ಉಪಲಭ್ಯತೇ, ತತ್ ಭಾರದ್ವಾಜ ಪೈತೃಮೇಧಿಕ ಸೂತ್ರೇಣ ವಿಪುಲಂ ಸಾಮ್ಯಮಾವಹತಿ । ತ್ರಯಾಣಾಮೇತೇಷಾಂ ವಿಷಯಕ್ರಮೋ೭ಪಿ ಪ್ರಾಯೇಣ ಸಮಾನಃ । ಏಕಮೇವ ಪ್ರಧಾನಂ ವೈಷಮ್ಯಂ ಯತ್ ಸತ್ಯಾಷಾಢೀಯಸೂತ್ರೇ, ಏಕೋನತ್ರಿಂಶತ್ ಪ್ರಶ್ನೇ ಸಪ್ತಮ ಕಂಡಿಕಾಯಾಂ ಪ್ರತಿಪಾದಿತಃ । ಆಪಸ್ತಂಬ ಪಿತೃಮೇಧಸೂತ್ರವಿಷಯೇ ಪ್ರಥಮತ ಇದಮವಧೇಯಂ ಯದಾಪಸ್ತಂಬೇನ ಪಿತೃಮೇಧಸೂತ್ರಂ ವಿರಚಿತಂ ನಾಸೀತ್ । ಚೌಂಡಪಾಚಾರ್ಯೇಣ ಪ್ರಯೋಗ ರತ್ನಮಾಲಾಸಂಜ್ಞಕಾಯಾ ಆಪಸ್ತಂಬ ಶ್ರೌತಸೂತ್ರಟೀಕಾಯಾಃ ಪ್ರಾಸ್ತಾವಿಕೇ ಆಪಸ್ತಂಬ ಶ್ರೌತಸೂತ್ರಸ್ಯ ತ್ರಿಂಶತ್ ಪ್ರಶ್ನಾತ್ಮಕೋ ವಿಷಯಾನುಕ್ರಮಃ ಪ್ರದರ್ಶಿತಃ । ತತ್ರ ಪಿತೃಮೇಧಸೂತ್ರಂ ನೈವ ನಿರ್ದಿಷ್ಟಮ್ । ಆಪಸ್ತಂಬ ಸೂತ್ರಾನುಸಾರಿಭಿಃ ಭಾರದ್ವಾಜ ಪೈತೃಮೇಧಿಕ ಸೂತ್ರಮೇವ ಸ್ವೀಕೃತಮ್ ॥

ಇಲ್ಲಿಯವರೆಗೆ, ಭಾರದ್ವಾಜಪಿತೃಮೇಧಸೂತ್ರವನ್ನು ಮುದ್ರಿಸಿಲ್ಲ । ಆಪಸ್ತಂಬೀಯ ಮತ್ತು ಸತ್ಯಾಷಾಢೀಯ ಪೈತೃಮೇಧಿಕಸೂತ್ರಗಳು ನಮಗೆ ಸಿಕ್ಕಿವೆ । ಅವು ಭಾರದ್ವಾಜ ಪೈತೃಮೇಧಿಕ ಸೂತ್ರದೊಡನೆ ಬಹಳ ಸಾಮ್ಯತೆಯನ್ನು ಹೊಂದಿವೆ । ಈ ಮೂರೂಸೂತ್ರಗಳಲ್ಲಿ ವಿಷಯಾರಂಭವು ಬಹಳಮಟ್ಟಿಗೆ ಸಮಾನವಾಗಿದೆ । ಸತ್ಯಾಷಾಢೀಯಸೂತ್ರದಲ್ಲಿ, 29 ನೇ ಪ್ರಶ್ನೆಯ 7 ನೇ ಕಂಡಿಕೆಯಲ್ಲಿ ಬ್ರಹ್ಮಮೇಧವು ವಿವರಿಸಲ್ಪಟ್ಟಿದೆ । ಇದೊಂದೇ ಪ್ರಧಾನವಾದ ವ್ಯತ್ಯಾಸವು । ಇನ್ನೆರಡು ಸೂತ್ರಗಳಲ್ಲಿ 2 ನೇ ಪ್ರಶ್ನೆಯ 1 ನೇ ಕಂಡಿಕೆಯಲ್ಲಿ ಬ್ರಹ್ಮಮೇಧವು ವಿವರಿಸಲ್ಪಟ್ಟಿದೆ । ಆಪಸ್ತಂಬ ಪಿತೃಮೇಧ ಸೂತ್ರದ ವಿಷಯದಲ್ಲಿ ಮೊದಲು ನಾವು ಇದನ್ನು ಗಮನಿಸಬೇಕು । ಏನೆಂದರೆ, ಆಪಸ್ತಂಬ ಪಿತೃಮೇಧಸೂತ್ರವು ಯಾವಾಗ ಇನ್ನೂ ಮುದ್ರಿಸಲ್ಪಡದೇ ಇತ್ತೋ, ಆಗ ಚೌಂಡಪಾಚಾರ್ಯರು ಪ್ರಯೋಗರತ್ನಮಾಲಾ ಎಂಬ ಹೆಸರಿನ ಆಪಸ್ತಂಬಸೂತ್ರದ ವ್ಯಾಖ್ಯಾನದ ಪ್ರಾಸ್ತಾವಿಕ ನುಡಿಯಲ್ಲಿ ಆಪಸ್ತಂಬ ಶ್ರೌತಸೂತ್ರದ 30 ಪ್ರಶ್ನೆಯ ವಿಷಯಾನುಕ್ರಮವನ್ನು ತೋರಿಸಿದ್ದಾರೆ । ಅಲ್ಲಿ ಪಿತೃಮೇಧಸೂತ್ರವು ನಿರ್ದೇಶಿಸಲ್ಪಟ್ಟಿಲ್ಲ ॥

ಅತ ಉತ್ತರಕಾಲೀನೈಃ ಗಾರ್ಗ್ಯ – ಗೋಪಾಲ ಯಜ್ಞಸದೃಶೈಃ ಟೀಕಾಕಾರೈಃ ತದಾ ಆಪಸ್ತಂಬೀಯ ಪಿತೃಮೇಧ ಸೂತ್ರತ್ವೇನ ಪರಿಗೃಹ್ಯ, ಆಪಸ್ತಂಬ ಶ್ರೌತಸೂತ್ರಸ್ಯ 31–32 ಪ್ರಶ್ನಾವಿತಿ ತತ್ ಪರಿಗಣಿತಮ್ । ಕಪರ್ದಿಸ್ವಾಮಿನಾಂ ಪಿತೃಮೇಧಸೂತ್ರ ಭಾಷ್ಯಂ ಮುದ್ರಿತಮಸ್ತಿ । ತದೇವ ಆಪಸ್ತಂಬೀಯಂ ಇತ್ಯುಚ್ಯತೇ । ಕಿಂ ತು ತತ್ ಸೂತ್ರಸ್ಯ ಪಟಲ ಸಂಜ್ಞಕಾನಾಂ ಪ್ರಕರಣಾನಾಂ ಅಂತೇಷು 'ಭಾರದ್ವಾಜಸೂತ್ರೇ' ಇತ್ಯೇವಂ ನಿರ್ದೇಷೋ ದೃಶ್ಯತೇ । ಕ್ವಚಿತ್ ಆಪಸ್ತಂಬ ಪಿತೃಮೇಧಸೂತ್ರಂ ಭಾರದ್ವಾಜ ಪೈತೃಮೇಧಿಕ ಸೂತ್ರಾತ್ ಭಿನ್ನಮ್ । ಏತಾದೃಶೇಷು ಸ್ಥಲೇಷು ಕಪರ್ದಿಭಾಷ್ಯಂ ಭಾರದ್ವಾಜ ಪೈತೃಮೇಧಿಕ ಸೂತ್ರಪಾಠಮೇವ ಅನುಸರತೀತಿ ಸ್ಪಷ್ಟಮ್ । ಭಾರದ್ವಾಜ, ಆಪಸ್ತಂಬ ಪಿತೃಮೇಧಸೂತ್ರೇ ಪಂಚಸು ಪಟಲೇಷು ವಿಭಿನ್ನೇ । ಕಿಂ ತು ಏತೇಷು ಪಟಲೇಷು ಪ್ರಥಮ ಪ್ರಶ್ನಸ್ಯ ದ್ವಾದಶ ಕಂಡಿಕಾಃ ದ್ವಿತೀಯಪ್ರಶ್ನಸ್ಯ ಚ ಪಂಚಕಂಡಿಕಾಃ ಅಂತರ್ಭವಂತಿ । ದ್ವಿತೀಯ ಪ್ರಶ್ನಸ್ಯ ಅವಶಿಷ್ಟಾಃ ಸಪ್ತಕಂಡಿಕಾ ಬಹಿಷ್ಕೃತಾಃ । ಅತಃ ಮೂಲತೋ ಭರದ್ವಾಜೇನ ವಿರಚಿತಸ್ಯ ಪಿತೃಮೇಧಸೂತ್ರಸ್ಯ

ವ್ಯಾಪ್ತಿಃ ಪ್ರಥಮಃ ಪ್ರಶ್ನಃ ದ್ವಿತೀಯಸ್ಯ ಚ ಪಂಚಕಂಡಿಕಾ ಇತ್ಯೇತಾವತೀ ಆಸೀತ್ । ಕಾಲಾಂತರೇಣ ಸಪ್ತಕಂಡಿಕಾಃ ತತ್ರ ಸಮಾವೇಶಿತಾ ಇತಿ ತರ್ಕಯಿತುಂ ಯುಕ್ತಮ್ ॥

ಹಾಗಾಗಿ, ಅಲ್ಲಿಂದ ಮುಂದಿನ ಕಾಲಘಟ್ಟದಲ್ಲಿ ಗಾರ್ಗ್ಯ – ಗೋಪಾಲರೆಂಬ ಯಜ್ಞಸದೃರಾದ ವ್ಯಾಖ್ಯಾನಕಾರರು ಆಪಸ್ತಂಬ ಪಿತೃಮೇಧಸೂತ್ರದ 31 ಮತ್ತು 32 ನೇ ಪ್ರಶ್ನೆಯನ್ನು ತೆಗೆದುಕೊಂಡು, ಇದು ಆಪಸ್ತಂಬ ಶ್ರೌತಸೂತ್ರದಲ್ಲಿ ಇದೇ ಎಂದು ಒಪ್ಪಿದ್ದಾರೆ । ಕಪರ್ದಿಸ್ವಾಮಿಗಳ ಪಿತೃಮೇಧಸೂತ್ರದ ಭಾಷ್ಯವು ಮುದ್ರಿಸಲ್ಪಟ್ಟಿದೆ । ಅದನ್ನೇ ಆಪಸ್ತಂಬೀಯ ಎಂದೂ ಹೇಳುತ್ತಾರೆ । ಆದರೆ, ಆ ಸೂತ್ರದ ಪಟಲ ಎಂಬ ಹೆಸರಿನ ಪ್ರಕರಣದ ಕೊನೆಯಲ್ಲಿ **'ಭಾರದ್ವಾಜಸೂತ್ರೇ'** ಎಂದು ನಿರ್ದೇಶಿಸಲ್ಪಟ್ಟಿರುವುದು ತೋರುತ್ತದೆ । ಕೆಲವು ಆಪಸ್ತಂಬ ಪಿತೃಮೇಧಸೂತ್ರಗಳು, ಭಾರದ್ವಾಜ ಪಿತೃಮೇಧಸೂತ್ರಗಳಿಗಿಂತ ಭಿನ್ನವಾಗಿವೆ । ಈ ಸ್ಥಳಗಳಲ್ಲಿ ಕಪರ್ದಿಭಾಷ್ಯಕಾರರು ಭಾರದ್ವಾಜ ಪೈತೃಮೇಧಿಕ ಸೂತ್ರಪಾಠವನ್ನೇ ಅನುಸರಿಸಿದ್ದಾರೆ ಎಂದು ಸ್ಪಷ್ಟವಾಗಿ ತೋರುತ್ತದೆ । ಭಾರದ್ವಾಜ ಮತ್ತು ಆಪಸ್ತಂಬ ಪಿತೃಮೇಧಸೂತ್ರಗಳ 5 ಪಟಲಗಳು ಭಿನ್ನವಾಗಿವೆ । ಆದರೆ ಈ ಪಟಲಗಳಲ್ಲಿ ಮೊದಲನೇ ಪ್ರಶ್ನೆಯ 12 ನೇ ಕಂಡಿಕೆಯು ಮತ್ತು ಎರಡನೇ ಪ್ರಶ್ನೆಯ 5 ನೇ ಕಂಡಿಕೆಯು ಅಂತರ್ಭಾವವಾಗಿದೆ । ಎರಡನೇಪ್ರಶ್ನೆಯ ಉಳಿದ 7 ಕಂಡಿಕೆಗಳು ಪರಸ್ಪರ ವ್ಯತ್ಯಾಸದಿಂದ ಕೂಡಿವೆ । ಆದ್ದರಿಂದ ಮೂಲತಃ ಭರದ್ವಾಜರಿಂದ ರಚಿಸಲ್ಪಟ್ಟ ಪಿತೃಮೇಧಸೂತ್ರದ ವ್ಯಾಪ್ತಿಯು ಮೊದಲನೇ ಪ್ರಶ್ನೆಯಿಂದ ಎರಡನೇ ಪ್ರಶ್ನೆಯ 5 ನೇ ಕಂಡಿಕೆಯೆಂದು ತೋರಿಬರುತ್ತದೆ । ಇನ್ನುಳಿದ 2 ನೇ ಪ್ರಶ್ನೆಯ 7 ಕಂಡಿಕೆಗಳು ಅಲ್ಲಿ, ಯಾರಿಂದಲೋ ಸೇರಿಸಲ್ಪಟ್ಟಿದೆ ಎಂದು ಊಹೆಮಾಡಲು ಯೋಗ್ಯವಾಗಿದೆ ॥

ತೈತ್ತಿರೀಯ ಶಾಖಾಭಾಷ್ಯೇ ಸಾಯಣಾಚಾರ್ಯೈಃ ಆಪಸ್ತಂಬ ಶ್ರೌತಸೂತ್ರಾಣಿ ನಿಯತಮುದ್ಧೃತಾನಿ ವರ್ತಂತೇ । ತೈತ್ತಿರೀಯಾರಣ್ಯ– ಕಾಂತರ್ಗತಾನಾಂ ಪಿತೃಮೇಧ ಮಂತ್ರಾಣಾಂ ಭಾಷ್ಯೇ ತು ತೈಃ ಭಾರದ್ವಾಜ ಪೈತೃಮೇಧಿಕ ಸೂತ್ರಾಣ್ಯೇವೋದ್ಧೃತಾನಿ । ತೈತ್ತಿರೀಯಾರಣ್ಯಕಸ್ಯ ಪಷ್ಠ ಪ್ರಪಾಠಕಸ್ಯ ಪ್ರಥಮಾನುವಾಕಸ್ಯ ಭಾಷ್ಯೇ ತೈಃ ಸ್ಪಷ್ಟಮುಕ್ತಂ – 'ತೇಷಾಂ ಚ ಪಿತೃಮೇಧಮಂತ್ರಾಣಾಂ ವಿನಿಯೋಗೋ ಭರದ್ವಾಜ ಕಲ್ಪೇ, ಬೌಧಾಯನ

ಕಲ್ಪೇ ಚಾಭಿಹಿತಃ' । 'ಬ್ರಾಹ್ಮಣ ಏಕಹೋತಾ' ಇತಿ ಮಂತ್ರಸ್ಯ ಭಾಷ್ಯೇ ತೈರುಕ್ತಂ – 'ಅನಂತರ ಭಾವಿನೋsನುವಾಕಸ್ಯ ಚಾತುರ್ಮಾಸ್ಯೇಷು ಕೇಶ ನಿವರ್ತನೇಷು ತದೃತಂ ತತ್ಸತ್ಯಮಿತಿ ಜಪಿತ್ವಾ, ಪಶ್ಚಾಜ್ಜಪಮಾಪಸ್ತಂಬ ಆಹ, ಬ್ರಾಹ್ಮಣ ಏಕಹೋತೇತಿ ಚಾನುವಾಕಮಿತಿ । ತಥಾ ಬ್ರಹ್ಮಮೇಧೇsನುಪ್ರದವತಃ ಅಜಸ್ಯ ಅನುಮಂತ್ರಣೇ ವಿನಿಯೋಗಂ ಭರದ್ವಾಜ ಆಹ, ಬ್ರಾಹ್ಮಣ ಏಕಹೋತೇತಿ ಚೇತಿ' । ಯದಿ ಸಾಯಣಾಚಾರ್ಯಾಣಾಂ ಆಪಸ್ತಂಬ ಪಿತೃಮೇಧಸೂತ್ರಸ್ಯ ಪೃಥಕ್ ಭಾವೋsಭಿಪ್ರೇತೋsಭವಿಷ್ಯತ್ । ತರ್ಹಿ ತೈಃ ಉಭಯತ್ರಾಪಿ ಆಪಸ್ತಂಬೀಯತ್ವೇ ನೈವ ನಿರ್ದೇಶಃ ಕೃತೋsಭವಿಷ್ಯತ್ । ಅಂತ್ಯೇಷ್ಟಿ ಪ್ರಯೋಗೇಷು ಪಿತೃಮೇಧಸೂತ್ರಸ್ಯ ಭರದ್ವಾಜೀಯತ್ವೇನೈವ ನಿರ್ದೇಶಃ ಕೃತೋ ದೃಶ್ಯತೇ ॥

ತೈತ್ತಿರೀಯ ಶಾಖಾಭಾಷ್ಯದಲ್ಲಿ, ಸಾಯಣಾಚಾರ್ಯರು ಆಪಸ್ತಂಬ ಶ್ರೌತಸೂತ್ರಗಳನ್ನು ಕ್ರಮವಾಗಿ ತೆಗೆದುಕೊಂಡಿದ್ದಾರೆ । ತೈತ್ತಿರೀಯ ಆರಣ್ಯಕದಲ್ಲಿ ಅಂತರ್ಗತವಾದ ಪಿತೃಮೇಧ ಮಂತ್ರಗಳ ಭಾಷ್ಯದಲ್ಲಾದರೋ, ಭಾರದ್ವಾಜ ಪೈತೃಮೇಧಿಕ ಸೂತ್ರಗಳನ್ನೇ ತೆಗೆದುಕೊಂಡಿದ್ದಾರೆ । ತೈತ್ತಿರೀಯ ಆರಣ್ಯಕದ 6 ನೇ ಪ್ರಶ್ನೆಯ, 11 ನೇ ಅನುವಾಕದ ಭಾಷ್ಯದಲ್ಲಿ ಸಾಯಣರು ಸ್ಪಷ್ಟವಾಗಿ ಹೇಳಿದ್ದಾರೆ – **'ಏನೆಂದರೆ, ಆ ಪಿತೃಮೇಧ ಮಂತ್ರಗಳ ವಿನಿಯೋಗವು ಭಾರದ್ವಾಜಕಲ್ಪದಲ್ಲಿ ಮತ್ತು ಬೋಧಾಯನಕಲ್ಪದಲ್ಲಿ ಹೇಳಲ್ಪಟ್ಟಿದೆ ಎಂದು'** । **'ಬ್ರಾಹ್ಮಣ ಏಕಹೋತಾ'** ಎಂಬ ಮಂತ್ರದ ಭಾಷ್ಯದಲ್ಲಿ ಅವರು **'ಮುಂದೆ ಇರುವಂತಹ ಅನುವಾಕದಲ್ಲಿ ಚಾತುರ್ಮಾಸ್ಯ ಯಜ್ಞದಲ್ಲಿ ಕೇಶವಪನ ಸಮಯದಲ್ಲಿ, ತದೃತಂ ತತ್ಸತ್ಯಂ ಎಂದು ಜಪಮಾಡಿ, ನಂತರ ಆಪಸ್ತಂಬೀಯರು ಬ್ರಾಹ್ಮಣ ಏಕಹೋತಾ ಎಂಬ ಅನುವಾಕವನ್ನು ಜಪಿಸಬೇಕು ಎಂದು'** ಹೇಳಿದ್ದಾರೆ । ಹಾಗೆಯೇ, ಬ್ರಹ್ಮಮೇಧದಲ್ಲಿ, ವ್ಯಾಧಿಗಳಿಲ್ಲದ ಆಡಿನ(ಮೇಕೆ) ಅನುಮಂತ್ರಣದಲ್ಲಿ ಭರದ್ವಾಜರು ಬ್ರಾಹ್ಮಣ ಏಕಹೋತಾ ಎಂಬ ಮಂತ್ರದ ವಿನಿಯೋಗವನ್ನು ತಿಳಿಸಿದ್ದಾರೆ । ಒಂದುವೇಳೆ, ಸಾಯಣಾಚಾರ್ಯರಿಗೆ, ಆಪಸ್ತಂಬ ಪಿತೃಮೇಧಸೂತ್ರದ ವಿಭಿನ್ನತೆಯು ಒಪ್ಪಿಗೆಯಾಗಿದ್ದರೆ । ಆಗ ಸಾಯಣಾಚಾರ್ಯರು ಎರಡುಕಡೆಗಳಲ್ಲಿಯೂ ಆಪಸ್ತಂಬೀಯಸೂತ್ರದಿಂದಲೇ ನಿರ್ದೇಶನ ಮಾಡುತ್ತಿದ್ದರು । ಅಂತ್ಯೇಷ್ಟಿ ಪ್ರಯೋಗದಲ್ಲಿ ಪಿತೃಮೇಧಸೂತ್ರಗಳಿಗೆ ಸಾಯಣರು ಭಾರದ್ವಾಜಸೂತ್ರದಿಂದಲೇ ನಿರ್ದೇಶ ಮಾಡಲ್ಪಟ್ಟಿರುವುದು ತೋರುತ್ತದೆ ॥

ತಥಾ ಚ ಭಾಸ್ಕರಭಟ್ಟೋಽಂತ್ಯೇಷ್ಟಿ ಪದ್ಧತೇರಾದೌ –

ಭರದ್ವಾಜ ಕೃತಂ ಸೂತ್ರಂ ತದ್ಭಾಷ್ಯಂ ಕಲ್ಪಕಾರಿಕಾಃ ।
ಸುವಿಲೋಕ್ಯಾನಾಹಿತಾಗ್ನೇಃ ಸಮಂತ್ರಂ ಪೈತೃಮೇಧಿಕಂ ।
ಕೃತಿಃ ಸ್ಫುಟತರಾಸೇಯಂ ಜ್ಞೇಯಾ ತದನುಸಾರಿಣೇ ।
ಆಪಸ್ತಂಬೈರಪಿ ಗ್ರಾಹ್ಯಂ ನಾನ್ಯತ್ ಸೂತ್ರಂ ಹಿ ವಿದ್ಯತೇ ॥

ಅಂತೇಽಪಿ – ಇತಿ ಶ್ರೀಮದ್ಭಾರದ್ವಾಜ ಕೃತಂ ಯದೇತತ್ ಕಲ್ಪಾಖ್ಯ ಸೂತ್ರಂ ಜಗತಿ ಪ್ರಸಿದ್ಧಮ್ । ಗ್ರಾಹ್ಯಂ ತದಂತ್ಯೇಷ್ಟಿ ವಿಧೌ ತದಾಪಸ್ತಂಬೈಃ....., ಇತ್ಯಾದಿ ॥

ರುದ್ರದತ್ತೇನ ಆಪಸ್ತಂಬ ಶ್ರೌತಸೂತ್ರ ಟೀಕಾಯಾಂ ವಾರಂವಾರಂ ಭಾರದ್ವಾಜಶ್ರೌತಸೂತ್ರಂ ಉದ್ಧೃತಂ । ತಥಾ ನವಮ ಪ್ರಶ್ನಸ್ಯ ಪ್ರಾಯಶ್ಚಿತ್ತ ವಿಷಯಕಸ್ಯ ಟೀಕಾಯಾಂ ಭಾರದ್ವಾಜ ಪೈತೃಮೇಧಿಕ ಸೂತ್ರಮಪಿ ಉದ್ಧೃತಂ । ಅತಃ ತತ್ಸಮಯೇ ಪಿತೃಮೇಧಸೂತ್ರಂ ಭಾರದ್ವಾಜೀಯಮಿತ್ಯೇವ ಪ್ರತೀತಿರಾಸೀದಿತಿ ಸ್ಪಷ್ಟಮ್ ॥

ಹಾಗೆಯೇ ಭಾಸ್ಕರಭಟ್ಟರ ಅಂತ್ಯೇಷ್ಟಿ ಗ್ರಂಥದ ಆದಿಯಲ್ಲಿಯೂ –

ಭಾರದ್ವಾಜರಿಂದ ಮಾಡಲ್ಪಟ್ಟಂತಹ ಸೂತ್ರಗಳೂ ಮತ್ತು ಭಾಷ್ಯಗಳನ್ನು ಕಲ್ಪ ಮತ್ತು ಕಾರಿಕೆಗಳೆಂದು ಹೇಳುತ್ತಾರೆ । ಅನಾಹಿತಾಗ್ನಿಕನ ಸಮಂತ್ರಕವಾದ ಪೈತೃಮೇಧಿಕವನ್ನು ಚೆನ್ನಾಗಿ ಅವಲೋಕಿಸಿ । ಈ ಕೃತಿಯು ಅದಕ್ಕೆ ಅನುಸಾರವಾಗಿ ಸ್ಪಷ್ಟವಾಗಿ ತಿಳಿಯಲ್ಪಡಬೇಕು । ಆಪಸ್ತಂಬ ಸೂತ್ರಾನುಸಾರಿಗಳಿಗೂ ಕೂಡ ಗ್ರಾಹ್ಯವಾದ ಸೂತ್ರಗಳಿವು, ಏಕೆಂದರೆ, ಬೇರೇ ಸೂತ್ರಗಳಿಲ್ಲದಿರುವುದರಿಂದ । ಕೊನೆಯಲ್ಲಿಯೂ ಕೂಡ, ...**ಹೀಗೆಂದು** ಭಾರದ್ವಾಜರು ಮಾಡಲ್ಪಟ್ಟಂತಹ ಈ ಕಲ್ಪವೆಂಬ ಸೂತ್ರವು ಜಗತ್ತಿನಲ್ಲಿ ಪ್ರಸಿದ್ಧವಾಗಿದೆ। ಇದನ್ನು ಅಂತ್ಯೇಷ್ಟಿ ವಿಧಿಯಲ್ಲಿ ಆಪಸ್ತಂಬಾದಿ ಅನುಸಾರಿಗಳೂ ಅನುಸರಿಸಬೇಕು .....**ಹೀಗೆ** ಹೇಳಲ್ಪಟ್ಟಿದೆ ।

ರುದ್ರದತ್ತನಿಂದ, ಆಪಸ್ತಂಬ ಶ್ರೌತಸೂತ್ರ ವ್ಯಾಖ್ಯಾನದಲ್ಲಿ ಪದೇಪದೇ ಭಾರದ್ವಾಜಶ್ರೌತಸೂತ್ರವು ಉದ್ಧರಿಸಲ್ಪಟ್ಟಿದೆ । ಹಾಗೆಯೇ 9 ನೇ ಪ್ರಶ್ನೆಯ ಪ್ರಾಯಶ್ಚಿತ್ತ ವಿಷಯಕವಾದ ವ್ಯಾಖ್ಯಾನದಲ್ಲಿ ಭಾರದ್ವಾಜ ಪೈತೃಮೇಧಿಕ ಸೂತ್ರವನ್ನೂ ತೆಗೆದುಕೊಂಡಿದ್ದಾರೆ । ಆದ್ದರಿಂದ ಆ ಕಾಲಘಟ್ಟದಲ್ಲಿ, ಭಾರದ್ವಾಜ ಪಿತೃಮೇಧಸೂತ್ರವೇ ಪ್ರಸಿದ್ಧಿಯಾಗಿತ್ತು ಎಂಬುದು ಸ್ಪಷ್ಟವು ।

ಸತ್ಯಾಷಾಢೀಯೈರಪಿ ಭಾರದ್ವಾಜ ಪೈತೃಮೇಧಿಕ ಸೂತ್ರಮೇವ ಸ್ವೀಕೃತಮಿತ್ಯತ್ರ ಇದಂ ಪ್ರಮಾಣಂ । ಸತ್ಯಾಷಾಢಸೂತ್ರಸ್ಯ ವೈಜಯಂತೀ ಟೀಕಾಯಾಂ ಆದೌ ಟೀಕಾಕಾರೇಣ ಮಹಾದೇವೇನೋಕ್ತಂ ಇದಂ ಹಿ ಸಪ್ತವಿಂಶತಿ ಪ್ರಶ್ನಾತ್ಮಕಂ ಸತ್ಯಾಷಾಢ ಹಿರಣ್ಯಕೇಶೀ ಸೂತ್ರಂ । ಅಂತಿಮೌ ದ್ವೌ ಪ್ರಶ್ನೌ ಧರ್ಮಸೂತ್ರಮಿತ್ಯುಕ್ತ್ವಾ, ಪಿತೃಮೇಧಸ್ತು ಭಾರದ್ವಾಜೀಯೋ ಮುನಿನಾ ಪರಿಗೃಹೀತಃ ಇತಿ ಸ್ಪಷ್ಟಮುಕ್ತಂ । ಸತ್ಯಾಷಾಢ ಪಿತೃಮೇಧಸೂತ್ರಸ್ಯ ಟೀಕಾಯಾ ಆದೌ ಟೀಕಾಕಾರೇಣ ದಂಡವತೀ – ಮಹಾದೇವದೀಕ್ಷಿತೇನ ಸೂತ್ರಸ್ಯಾಸ್ಯ ಭಾರದ್ವಾಜೀಯತ್ವಂ ಸ್ಪಷ್ಟಮೇವೋಕ್ತಂ ॥

ಸತ್ಯಾಷಾಢರಿಂದಲೂ ಭಾರದ್ವಾಜರ ಪಿತೃಮೇಧಸೂತ್ರವೇ ಸ್ವೀಕರಿಸಲ್ಪಟ್ಟಿದೆ ಎಂಬುದಕ್ಕೆ ಈ ಮುಂದೆ ಹೇಳುವ ವಾಕ್ಯಗಳೇ ಪ್ರಮಾಣ । ಸತ್ಯಾಷಾಢಸೂತ್ರದ ವೈಜಯಂತೀ ವ್ಯಾಖ್ಯಾನದಲ್ಲಿ ಮೊದಲಿಗೆ, ವ್ಯಾಖ್ಯಾನಕಾರರಾದ ಮಹಾದೇವರಿಂದ ಈ ಮುಂದೆ ಹೇಳಿದಂತೆ ಹೇಳಲ್ಪಟ್ಟಿದೆ – ಈ 27 ಪ್ರಶ್ನರೂಪವಾದದ್ದು ಹಿರಣ್ಯಕೇಶೀ ಸೂತ್ರವು । ಅಂತಿಮ 2 ಪ್ರಶ್ನೆಗಳು ಧರ್ಮಸೂತ್ರಗಳು ಎಂದುಹೇಳಿ, ನಂತರ ಪಿತೃಮೇಧವು ಭಾರದ್ವಾಜಮುನಿಗಳಿಂದ ಹೇಳಲ್ಪಟ್ಟಿದೆ ಎಂದು ಸತ್ಯಾಷಾಢ ಮುನಿಗಳು ಸ್ಪಷ್ಟವಾಗಿ ಹೇಳಿದ್ದಾರೆ । ಸತ್ಯಾಷಾಢಪಿತೃಮೇಧಸೂತ್ರದ ವ್ಯಾಖ್ಯಾನದ ಆದಿಯಲ್ಲಿ ವ್ಯಾಖ್ಯಾನಕಾರರಾದ ದಂಡವತೀ ಮಹಾದೇವದೀಕ್ಷಿತರಿಂದ ಈ ಪಿತೃಮೇಧಸೂತ್ರವು ಭಾರದ್ವಾಜೀಯವಾದದ್ದು ಎಂದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ ॥

ಭಾರದ್ವಾಜ ಸೂತ್ರಂ ತೈತ್ತಿರೀಯ ಶಾಖಾ ಚ –
(ಭಾರದ್ವಾಜಸೂತ್ರ ಮತ್ತು ತೈತ್ತಿರೀಯಶಾಖೆಯ ಸಂಬಂಧ)

ಭಾರದ್ವಾಜ ಶ್ರೌತಸೂತ್ರಂ ಕೃಷ್ಣಯಜುರ್ವೇದ ತೈತ್ತಿರೀಯ ಶಾಖಾಮವಲಂಬತೇ । ಯತಸ್ತಚ್ಛಾಖಾಯಾಃ ಸಂಹಿತಾಯಾಃ ಬ್ರಾಹ್ಮಣಾತ್ ಆರಣ್ಯಕಾಚ್ಚೋದ್ಧೃತ ಬಹವೋ ಮಂತ್ರಾಸ್ತತ್ರ ವಿನಿಯುಕ್ತಾಃ । ಅಸ್ಯಾಃ ಶಾಖಾಯಾ ರಚನಾಕ್ರಮಃ ಸೂತ್ರರಚನಾಕಾಲೇ ಸುದೃಢ ಆಸೀದಿತ್ಯ–ನುಮೀಯತೇ । ಯತಃ ಕೇಷುಚಿತ್ ಸ್ಥಲೇಷು ಶಾಖೀಯಾ ಮಂತ್ರಾ ಅನುವಾಕರೂಪೇಣ ಅನುವಾಕಶೇಷರೂಪೇಣವೋದ್ಧೃತಾ ಉಪಲಭ್ಯಂತೇ । ಕ್ವಚನ '.....ಇತಿ ಪ್ರತಿಪದ್ಯ .....ಇತ್ಯಂತೇನ' ಇತಿ ರೀತ್ಯಾಪಿ ಮಂತ್ರಾ ಉದ್ಧ್ರಿಯಂತೇ । 'ಇತಿ ವಿಜ್ಞಾಯತೇ' ಇತಿ ನಿರ್ದೇಶನ ಬಹುತ್ರ ಬ್ರಾಹ್ಮಣ ವಾಕ್ಯಾನ್ಯುದ್ಧೃತಾನಿ ಭವಂತಿ, ತೇಷು ಕಾನಿಚನ ತೈತ್ತಿರೀಯ ಶಾಖಾಗತಾನಿ ಭವಂತಿ ॥

ಭಾರದ್ವಾಜಸೂತ್ರವು, ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯನ್ನು ಅವಲಂಬಿಸಿದೆ । ಏಕೆಂದರೆ, ಆ ಶಾಖೆಯ ಸಂಹಿತೆ ಮತ್ತು ಬ್ರಾಹ್ಮಣ ಮತ್ತು ಆರಣ್ಯಕದಿಂದ ತೆಗೆದುಕೊಳ್ಳಲ್ಪಟ್ಟಂತಹ ಬಹಳಮಂತ್ರಗಳು ಆ ಭಾರದ್ವಾಜ ಶ್ರೌತಸೂತ್ರದಲ್ಲಿ ವಿನಿಯೋಗಿಸಲ್ಪಟ್ಟಿದೆ। ಈ ಶಾಖೆಯ ರಚನಾಕ್ರಮವು ಭಾರದ್ವಾಜಸೂತ್ರ ರಚನಾಕಾಲದಲ್ಲಿ ಸದೃಢವಾಗಿ ಇತ್ತೆಂದು ಊಹಿಸಲು ಯೋಗ್ಯವಾಗಿದೆ । ಏಕೆಂದರೆ, ಕೆಲವು ಸ್ಥಳಗಳಲ್ಲಿ ತೈತ್ತಿರೀಯ ಶಾಖೆಯ ಮಂತ್ರಗಳೂ ಅನುವಾಕರೂಪದಿಂದ ಅಥವಾ ಅನುವಾಕದ ಶೇಷರೂಪದಿಂದ ಉದ್ಧರಿಸಲ್ಪಟ್ಟಿರುವುದು ಭಾರದ್ವಾಜಸೂತ್ರದಲ್ಲಿ ಕಂಡುಬರುತ್ತದೆ । **'ಕ್ವಚನ.....ಇತಿ ಪ್ರತಿಪದ್ಯ .....ಇತ್ಯಂತೇನ'** ಎಂದು ಹೀಗೆ ಪ್ರತಿಪಾದನೆಮಾಡಿ, ಮಂತ್ರಗಳು ಈ ರೀತಿಯಾಗಿಯೂ ಉದ್ಧರಿಸಲ್ಪಟ್ಟಿವೆ । **'ಇತಿ ವಿಜ್ಞಾಯತೇ'** ಎಂದು ನಿರ್ದೇಶನದಿಂದ ಬಹಳಕಡೆ ಬ್ರಾಹ್ಮಣವಾಕ್ಯಗಳು ಉದ್ಧರಿಸಲ್ಪಟ್ಟಿವೆ, ಅದರಲ್ಲಿ ಕೆಲವು ತೈತ್ತಿರೀಯಶಾಖೆಯದ್ದಾಗಿವೆ ॥

ಭಾರದ್ವಾಜಸೂತ್ರಂ ಆಪಸ್ತಂಬಸೂತ್ರಂ ಚ – (ಭಾರದ್ವಾಜಸೂತ್ರ ಮತ್ತು ಆಪಸ್ತಂಬಸೂತ್ರಗಳ ಸಂಬಂಧ)

ಇತರ ಶ್ರೌತಸೂತ್ರಾಪೇಕ್ಷಯಾ ಭಾರದ್ವಾಜಾಪಸ್ತಂಬ ಶ್ರೌತಸೂತ್ರಯೋಃ ದೃಢತರಂ ಸಾಮ್ಯಂ ವರ್ತತೇ । ನೇದಂ ಸಾಮ್ಯಂ ಕೇವಲಂ ವಿದ್ಧ್ಯುಪದೇಶೇ ಅಪಿ ತು ರಚನಾಯಾಮಪಿ । ಉಭಯೋಃ ಸೂತ್ರಗ್ರಂಥಯೋಃ ಬಹೂನಿ ಸೂತ್ರಾಣಿ ಶಬ್ದಶಃ ಸಮಾನಾನಿ ವರ್ತಂತೇ ಅನ್ಯಾನ್ಯಂಶತಃ ಭಿದ್ಯಂತೇ । ಉಭಯೋಃ ವಿಷಯಾನುಕ್ರಮಕಃ ಪ್ರಾಯಃ ಸಮಾನಃ । ಭರದ್ವಾಜೀಯೇ ಅಗ್ನ್ಯುಪಸ್ಥಾನ ಪೂರ್ವಕಂ ಅಗ್ನಿಹೋತ್ರಂ ಉಪವರ್ಣಿತಂ, ಆಪಸ್ತಂಬೀಯೇತು ಅಗ್ನಿಹೋತ್ರಪೂರ್ವಕಂ ಅಗ್ನ್ಯುಪಸ್ಥಾನಂ ಉಪವರ್ಣಿತಂ । ಭರದ್ವಾಜೀಯೇ ಯತ್ರ ದರ್ಶಪೂರ್ಣಮಾಸಯೋರಗ್ನಿಹೋತ್ರಸ್ಯ ಚ ಪ್ರಾಯಶ್ಚಿತ್ತಾನಿ ಪರಿಗಣಿತಾನಿ । ತತ್ರ ಆಪಸ್ತಂಬೀಯೇ ನಿರೂಢಪಶೋರಪ್ಯುಕ್ತಾನಿ । ಆಪಸ್ತಂಬೀಯೇ ದಶಮಾದಿ ತ್ರಯೋದಶಾಂತೇಷು ಪ್ರಶ್ನೇಷ್ವಗ್ನಿಷ್ಟೋಮ ಉಪವರ್ಣಿತಃ । ಚತುರ್ದಶೇ ಚ ಉಕ್ಥ್ಯ ಷೋಡಶ್ಯತಿರಾತ್ರಾಪ್ತೋರ್ಯಾಮಾಣಂ ವಿಶೇಷಾಃ ಉಕ್ತಾಃ ಭಾದ್ವಾಜೀಯೇತು ದಶಮಾದಿ ಚತುರ್ದಶಾಂತೇಷು ಪ್ರಶ್ನೇಷು ಜ್ಯೋತಿಷ್ಟೋಮಸ್ಯ ವಿಧಿಃ ಪ್ರತಿಪಾದಿತಃ । ಉಕ್ಥ್ಯಾದೀನಾಂ ವಿಶೇಷಾಃ ತತ್ರ ತತ್ರೈವೋಕ್ತಾಃ ।

ಬೇರೇ ಶ್ರೌತಸೂತ್ರಗಳ ಅಪೇಕ್ಷೆಯಿಂದ ಭಾರದ್ವಾಜ, ಆಪಸ್ತಂಬ ಶ್ರೌತಸೂತ್ರಗಳ ಸಾಮ್ಯವು ದೃಢವಾಗಿ ತೋರುತ್ತದೆ । ಈ ಸಾಮ್ಯತೆಯು ಕೇವಲ ವಿಧಿಯನ್ನು ಉಪದೇಶಿಸುವುದರಲ್ಲಿ ಅಲ್ಲದೇ ಮತ್ತೇನೆಂದರೆ, ರಚನೆಯಲ್ಲಿಯೂ ಇದೆ । ಈ 2 ಸೂತ್ರಗ್ರಂಥಗಳ ವಿಷಯಾನುಕ್ರಮವು ಬಹಳಮಟ್ಟಿಗೆ ಸಮನಾಗಿದೆ। ಭಾರದ್ವಾಜಸೂತ್ರದಲ್ಲಿ ಅಗ್ನಿ ಉಪಸ್ಥಾನಪೂರ್ವಕವಾಗಿ ಅಗ್ನಿಹೋತ್ರವು ವಿವರಿಸಲ್ಪಟ್ಟಿದೆ । ಆಪಸ್ತಂಬಸೂತ್ರದಲ್ಲಿ ಅಗ್ನಿಹೋತ್ರಪೂರ್ವಕವಾಗಿ ಅಗ್ನ್ಯುಪಸ್ಥಾನವು ವಿವರಿಸಲ್ಪಟ್ಟಿದೆ । ಭಾರದ್ವಾಜ ಸೂತ್ರದಲ್ಲಿ ಎಲ್ಲಿ ದರ್ಶಪೂರ್ಣಮಾಸೇಷ್ಟಿ ಮತ್ತು ಅಗ್ನಿಹೋತ್ರದ ಪ್ರಾಯಶ್ಚಿತ್ತಗಳು ಹೇಳಲ್ಪಟ್ಟಿವೆಯೋ

ಅಲ್ಲಿಯೇ ಆಪಸ್ತಂಬಸೂತ್ರದಲ್ಲಿ ನಿರೂಢಪಶುಬಂಧದ ಪ್ರಾಯಶ್ಚಿತ್ತವೂ ಹೇಳಲ್ಪಟ್ಟಿದೆ । ಆಪಸ್ತಂಬಸೂತ್ರದಲ್ಲಿ 10 ರಿಂದ 13ನೇ ಪ್ರಶ್ನೆಗಳ ಕೊನೆಯವರೆಗೆ ಅಗ್ನಿಷ್ಟೋಮವು(ಸೋಮಯಾಗ) ವಿವರಿಸಲ್ಪಟ್ಟಿದೆ । 14ನೇ ಪ್ರಶ್ನೆಯಲ್ಲಿ ಉಕ್ಥ್ಯ, ಷೋಡಶೀ, ಅತಿರಾತ್ರ, ಅಪ್ತೋರ್ಯಾಮ ಈ ಯಾಗಗಳ ವಿಶೇಷಗಳು ಹೇಳಲ್ಪಟ್ಟಿವೆ । ಭಾರದ್ವಾಜೀಯ ಸೂತ್ರದಲ್ಲಾದರೋ, 10ನೇ ಪ್ರಶ್ನೆಯಿಂದ 14ನೇ ಪ್ರಶ್ನೆಯ ಕೊನೆಯವರೆಗೆ ಜ್ಯೋತಿಷ್ಟೋಮ(ಸೋಮಯಾಗ)ವು ಹೇಳಲ್ಪಟ್ಟಿದೆ । ಹಾಗೆಯೇ ಅಲ್ಲಲ್ಲಿಯೇ ಉಕ್ಥ್ಯ ಮುಂತಾದವುಗಳ ವಿಶೇಷವು ಹೇಳಲ್ಪಟ್ಟಿವೆ ।

ಪ್ರಾಯಃ ಸರ್ವೇಷು ಆಧ್ವರ್ಯವ ಸೂತ್ರೇಷು ಪ್ರವರ್ಗ್ಯಾನುಷ್ಠಾನಂ ಪೃಥಕ್ ಪ್ರಶ್ನ ಉಪಪಾದಿತಂ ವರ್ತತೇ । ಭಾರದ್ವಾಜಶ್ರೌತ ಸೂತ್ರೇತು ಏಕಾದಶಃ ಪ್ರವರ್ಗ್ಯಪ್ರಶ್ನಃ ಜ್ಯೋತಿಷ್ಟೋಮ ಪ್ರಕರಣಾಂತರ್ಗತೋ ದೃಶ್ಯತೇ । ಪರಂ ಸಪ್ರವರ್ಗ್ಯ ಜ್ಯೋತಿಷ್ಟೋಮ ಪ್ರಯೋಗಸ್ಯ ದಶಮೈಕಾದಶ ಪ್ರಶ್ನಯೋಶ್ಚ ತುಲನಾಯಾಂ ಕೃತಾಯಾಮಿದಂ ಸ್ಪಷ್ಟಂ ಭವತಿ ಯತ್ ಪ್ರವರ್ಗ್ಯಪ್ರಶ್ನ ಇತರಾಧ್ವರ್ಯವ ಸೂತ್ರವತ್ ಭರದ್ವಾಜೀಯೇsಪಿ ಮೂಲತೋ ಜ್ಯೋತಿಷ್ಟೋಮ ಪ್ರಕರಣೋತ್ತರಂ ಪೃಥಕ್ ರೂಪೇಣ ವರ್ತಮಾನ ಆಸೀತ್ । ಯೇನಕೇನಾಪಿ ಪ್ರಯೋಗ ಸೌಕರ್ಯಾರ್ಥಂ ದಶಮ ಪ್ರಶ್ನೋತ್ತರಂ ಸ್ಥಾಪಿತಃ । ಅಗ್ರಿಮೈರ್ಲಿಪಿಕಾರೈಃ ತತ್ರೈವ ನಿವೇಶಿತ ಇತಿ ।

ಪ್ರಾಯಶಃ ಎಲ್ಲಾ ಆಧ್ವರಸೂತ್ರಗಳಲ್ಲಿಯೂ ಪ್ರವರ್ಗ್ಯದ ಅನುಷ್ಠಾನವನ್ನು ಬೇರೇ ಪ್ರಶ್ನೆಯಲ್ಲಿಯೇ ಹೇಳಲ್ಪಟ್ಟಿದೆ । ಭಾರದ್ವಾಜಶ್ರೌತ ಸೂತ್ರದಲ್ಲಿಯಾದರೋ, 11ನೇ ಪ್ರಶ್ನೆಯಲ್ಲಿ ಜ್ಯೋತಿಷ್ಟೋಮದ(ಸೋಮಯಾಗ) ಪ್ರಕರಣದ ಮಧ್ಯದಲ್ಲಿಯೇ ಪ್ರವರ್ಗ್ಯವು ಹೇಳಲ್ಪಟ್ಟಿರುವುದು ಕಂಡುಬರುತ್ತದೆ । ಪ್ರವರ್ಗ್ಯಸಹಿತವಾದ ಜ್ಯೋತಿಷ್ಟೋಮ ಪ್ರಯೋಗವನ್ನು ಮತ್ತು 10, 11ನೇ ಪ್ರಶ್ನೆಯನ್ನು ತುಲನೆಮಾಡಿದಾಗ ಪ್ರವರ್ಗ್ಯಪ್ರಶ್ನವು ಬೇರೆಯವರ ಆಧ್ವರಸೂತ್ರಗಳಂತೆ ಭರದ್ವಾಜೀಯ ಪ್ರವರ್ಗ್ಯಸೂತ್ರವೂ ಕೂಡ ಮೂಲತಃ ಜ್ಯೋತಿಷ್ಟೋಮ ಪ್ರಕರಣದ ನಂತರ ಬೇರೆಯಾಗಿ ಇತ್ತು ಎಂಬುದು ಕಂಡುಬರುತ್ತದೆ । ಇದನ್ನೇ ಮುಂದಿನ ಲಿಪಿಕಾರರು ಅಲ್ಲೇ ಮುದ್ರಿಸಿರುತ್ತಾರೆ ಎಂಬುದು ಸ್ಪಷ್ಟವಾಗಿ ತೋರಿಬರುತ್ತದೆ ।

ಸೂತ್ರರಚನಾಯಾಂ ಯಥಾ ಬೌಧಾಯನ ಭಾರದ್ವಾಜಯೋರ್ಭೇದಃ ತಥಾ ಭಾರದ್ವಾಜ ಆಪಸ್ತಂಬಯೋರಪಿ । ಭಾರದ್ವಾಜಸೂತ್ರೇ ಪ್ರಥಮಂ ವಿಧಾನಂ ತತಶ್ಚ ಮಂತ್ರಃ । ಆಪಸ್ತಂಬೇತು ಪ್ರಥಮಂ ಮಂತ್ರಃ ತತಶ್ಚ ವಿಧಾನಂ । ಉಭಾಭ್ಯಾಮಪಿ ಸೂತ್ರಕಾರಾಭ್ಯಾಂ ಸ್ವಕೀಯಮತೋಪ ಬ್ರಹ್ಮಣಾರ್ಥಂ ವಾ ಮತಾಂತರ ಪ್ರದರ್ಶನಾರ್ಥಂ ವಾ ಸ್ವಶಾಖೀಯಾನಿ ಶಾಖಾಂತರೀಯಾಣಿ ವಾ ವಚನಾನ್ಯುದ್ಧೃತಾನಿ । ತತ್ರ ಆಪಸ್ತಂಬಸೂತ್ರೇ ವಚನೋದ್ಧಾರೋsಧಿಕತರೋ ದೃಶ್ಯತೇ । ಉಭಾಭ್ಯಾಮಪಿ 'ವಿಜ್ಞಾಯತೇ' ಇತಿ ಶಬ್ದಪುರಸ್ಸರಂ ಬ್ರಾಹ್ಮಣವಚನಾನ್ಯುದ್ಧೃತಾನಿ । ತೇಷು ಕಾನಿಚನ ವಚನಾನಿ ಯತ್ರಕುತ್ರಾಪಿ ಬ್ರಾಹ್ಮಣಗ್ರಂಥೇಷು ನೋಪಲಭ್ಯಂತೇ । ವಾಜಸನೇಯಕಮತಂ ಆಪಸ್ತಂಬೀಯೇ ವಾರಂವಾರಂ ಪ್ರದರ್ಶಿತಂ । ಭಾರದ್ವಾಜೇತು ನೈಕವಾರಮಪಿ । ಉಭಯೋಃ ಸೂತ್ರಗ್ರಂಥಯೋಃ ನಿಕಟತಮ ಸಂಬಂಧೇ ಇದಮಪ್ಯೇಕಂ ಪ್ರಮಾಣಂ ಭವಿತಿಮರ್ಹತಿ । ಯದುಭಯೋರಪಿ ಆಶ್ಮರಥ್ಯಾಲೇಖಿನಯೋಃ ಆಚಾರ್ಯಯೋಃ ಮತಾನಿ ತತ್ರತತ್ರ ಪ್ರದರ್ಶಿತಾನಿ । ಉಭಯೋರಪಿ ಕಿಮಪಿ ಸ್ವರೂಪಸಾಮಾನ್ಯಂ ದೃಶ್ಯತೇ । ತಥಾ ಚ 'ತತ್ರೈಷೋsತ್ಯಂತ ಪ್ರದೇಶಃ' ಇತಿ ಪ್ರಕಾರಕಂ ಸಾಧಾರಣ ನಿಯಮ ಪ್ರದರ್ಶನಂ ಉಭಯೋರಪಿ ದೃಶ್ಯತೇ । ಭಾರದ್ವಾಜೇತು ಅಧಿಕತ್ವೇನ । 'ಏತಾವನ್ನಾನಾ' ಇತಿ ಪ್ರಕಾರಕಂ ವಿಶೇಷದ್ಯೋತನಂ ಅಪ್ಯುಭಯೋಃ ಸಮಾನಂ । ಏಕೇಷಾಂ ಮತಮಾಪಸ್ತಂಬಸೂತ್ರೇ ಬಹುವಾರಮುಲ್ಲಿಖಿತಂ । ತತ್ರ ದ್ವಾವಿಂಶತಿ ಸ್ಥಲೇಷು ಏಕೀಯಂ ಮತಂ ಭಾರದ್ವಾಜಮತೇನ ಸಂವದತಿ । ತೇನ ಭಾರದ್ವಾಜಮತಂ ಆಪಸ್ತಂಬಸೂತ್ರೇ ಸಾಕ್ಷಾತ್ ಪರಂಪರಯಾ ವಾ ನಿರ್ದಿಷ್ಟಮಿತಿ ವಕ್ತುಂ ಶಕ್ಯಂ ॥

ಸೂತ್ರರಚನೆಯಲ್ಲಿ ಹೇಗೆ ಬೋಧಾಯನ, ಭಾರದ್ವಾಜರಿಗೆ ವ್ಯತ್ಯಾಸವಿದೆಯೋ, ಹಾಗೆಯೇ ಭಾರದ್ವಾಜ, ಆಪಸ್ತಂಬರಲ್ಲಿಯೂ ಕೂಡ ವ್ಯತ್ಯಾಸವಿದೆ। ಭಾರದ್ವಾಜಸೂತ್ರದಲ್ಲಿ

ಮೊದಲು ವಿಧಾನ(ಸೂತ್ರ), ನಂತರ ಮಂತ್ರ – ಆಪಸ್ತಂಬರಲ್ಲಿಯಾದರೋ, ಮೊದಲು ಮಂತ್ರ, ನಂತರ ವಿಧಾನ । ಇಬ್ಬರು ಸೂತ್ರಕಾರರೂ ಕೂಡ, ತಮ್ಮ ಮತವನ್ನು ದೃಢಪಡಿಸುವುದಕ್ಕಾಗಿಯಾಗಲೀ ಅಥವಾ ಬೇರೇ ಮತವನ್ನು ತೋರಿಸುವುದಕ್ಕಾಗಲೀ ತಮ್ಮ ಶಾಖೆಯ ಮತ್ತು ಶಾಖಾಂತರ ವಚನಗಳನ್ನು ಉದ್ಧರಿಸಿದ್ದಾರೆ । ಅದರಲ್ಲಿ ಆಪಸ್ತಂಬಸೂತ್ರಕಾರರು ಬಹಳ(ಅಧಿಕವಾಗಿ) । ಈ ರೀತಿಯಾದಂತಹ ವಚನಗಳನ್ನು ಉದ್ಧರಿಸಿರುವುದು ಕಂಡುಬರುತ್ತದೆ । ಇಬ್ಬರೂಕೂಡ **'ವಿಜ್ಞಾಯತೇ'** ಎಂಬ ಶಬ್ದವನ್ನು ಮುಂದಿಟ್ಟುಕೊಂಡು ಬ್ರಾಹ್ಮಣ ವಚನಗಳನ್ನು ಉದ್ಧರಿಸಿದ್ದಾರೆ । ಅದರಲ್ಲಿ ಕೆಲವು ವಚನಗಳು ಯಾವೊಂದು ಬ್ರಾಹ್ಮಣ ಗ್ರಂಥಗಳಲ್ಲಿಯೂ ಸಿಗುವುದಿಲ್ಲ । ಆಪಸ್ತಂಬ ಸೂತ್ರದಲ್ಲಿ ಮತ್ತೆಮತ್ತೆ ವಾಜಸನೇಯಕ ಮತವು ತೋರಿಸಲ್ಪಟ್ಟಿದೆ । ಭಾರದ್ವಾಜಸೂತ್ರದಲ್ಲಿ ವಾಜಸನೇಯಕಮತವು ಒಮ್ಮೆಯೂ ಕಂಡುಬರುವುದಿಲ್ಲ । ಆದರೆ ಮುಂದೆ ವಿವರಿಸಲ್ಪಡುವ ವಿಷಯಗಳು ಈ ಎರಡೂ ಸೂತ್ರಗ್ರಂಥಗಳ ನಿಕಟ ಸಾಮ್ಯಕ್ಕೆ ಒಂದು ಪ್ರಮಾಣವಾಗಲು ಅರ್ಹವಾಗಿವೆ । ಇನ್ನು ಆಶ್ಮರಥ್ಯ ಮತ್ತು ಆಲೇಖನ ಆಚಾರ್ಯರ ಮತಗಳು ಅಲ್ಲಲ್ಲಿ ಎರಡೂ ಸೂತ್ರಗ್ರಂಥಗಳಲ್ಲಿ ತೋರಿಸಲ್ಪಟ್ಟಿವೆ । ಎರಡೂ ಸೂತ್ರಗ್ರಂಥಗಳಿಗೂ ಯಾವುದೋಒಂದು ಸ್ವರೂಪಸಾಮ್ಯವು ಕಂಡು ಬರುತ್ತದೆ । ಹಾಗೆಯೇ ಅಲ್ಲದೇ **'ತತ್ರ ಏಷೋಽತ್ಯಂತ ಪ್ರದೇಶಃ'** ಈ ಪ್ರಕಾರಕವಾದ ಸಾಧಾರಣ ನಿಯಮಗಳು ಈ ಎರಡೂ ಸೂತ್ರಗ್ರಂಥಗಳಲ್ಲಿ ಕಂಡುಬರುತ್ತದೆ । ಭಾರದ್ವಾಜಸೂತ್ರದಲ್ಲಿಯಾದರೋ ಅಧಿಕವಾಗಿ ಕಂಡುಬರುತ್ತದೆ । ಹಾಗೆಯೇ **'ಏತಾವನ್ನಾನಾ'** ಈ ಪ್ರಕಾರವಾದ ವಿಶೇಷವನ್ನು ತೋರಿಸುವ ನಿಯಮಗಳು ಈ ಎರಡೂ ಸೂತ್ರಗ್ರಂಥಗಳಲ್ಲಿ ಸಮಾನವಾಗಿ ಕಂಡುಬರುತ್ತವೆ । ಕೆಲವರ ಮತದಲ್ಲಿ ಆಪಸ್ತಂಬ ಸೂತ್ರದಲ್ಲಿ ಬಹಳಸಲ ಭಾರದ್ವಾಜೀಯಮತವು ಉಲ್ಲೇಖಮಾಡಲ್ಪಟ್ಟಿದೆ । ಆ ಆಪಸ್ತಂಬಸೂತ್ರದ 22 ಸ್ಥಳಗಳಲ್ಲಿ ಏಕೀಯರಮತ ಎಂಬ ರೂಪದಿಂದ ಭಾರದ್ವಾಜ ಮತವು ಉಲ್ಲಿಖಿತವಾಗಿದೆ ಎಂದು ತೋರಿಬರುತ್ತದೆ । ಆದ್ದರಿಂದ ಭಾರದ್ವಾಜಮತವು ಆಪಸ್ತಂಬ ಸೂತ್ರದಲ್ಲಿ ಸಾಕ್ಷಾತ್ತಾಗಿ ಅಥವಾ ಪರಂಪರೆಯಿಂದ ನಿರ್ದೇಶಿಸಲ್ಪಟ್ಟಿದೆ ಎಂದು ಹೇಳಲು ಯೋಗ್ಯವಾಗಿದೆ ॥

2. ಆಪಸ್ತಂಬ ಅಪರಸೂತ್ರ – ವಿಮರ್ಶೆ

ವಿಮರ್ಶೆ – 1

ವಿನುಮಃ ಸಾಧುಹಂಸಾನ್ ತಾನ್ ವಿಶದಾನ್ ಗುಣವತ್ ಪ್ರಿಯಾನ್ । ತುಷ್ಯಂತಿ ಯೇ ಸಾಧುಮಾತ್ರಂ ಗೃಹ್ಣತಃ ಸಾಧ್ವ ಸಾಧುನೋಃ । ಆರ್ಯಾಃ ಅಭಿರೂಪ ವರ್ಯಾಃ ಅವಧತ್ತ ಕಿಂಚಿತ್ ಅಧಸೀಯಂ ವಿಜ್ಞಪ್ತಿ ವಚನಂ । ಶ್ರೀಮದ್ಭಿಃ ಬೋಧಾಯನಾದಿಭಿಃ ಮಹರ್ಷಿಭಿಃ ಪ್ರಣೀತಾನಿ ಕಲ್ಪಸೂತ್ರಾಣಿ । ಆಲೋಚ್ಯೈವ (ಅವಲಂಬ್ಯೈವ) ಆಸ್ತಿಕ ವರ್ಯಾಣಾಂ ಅಶೇಷಾಣಾಂ ಕರ್ಮಾಣಿ ಪ್ರತಾಯಂತೇ । ಅಸ್ಮಿನ್ ಭಾರತವರ್ಷೇ ಸಂತಿ ಚ ಬಹವಃ ಸೂತ್ರಕಾರಾಃ । ಸೂತ್ರಾಣಿ ಚ ತೇಷಾಂ ಶ್ರೌತಸ್ಮಾರ್ತ ಕರ್ಮ ವಿಧಾಯೀನಿ ಪ್ರಥಿತಾನ್ಯೇವ । ತೇಷು ಚ ಸೂತ್ರಕಾರೇಷು ಅನ್ಯತಮಃ ಆಪಸ್ತಂಬೋ ಮಹಾಮುನಿಃ ನ ಕಸ್ಯಾಪಿ ಅವದಿತ ಆಸ್ತಿಕಸ್ಯ ॥

ಸಾಧುಗಳಾದ, ಪರಮಹಂಸರಾದ, ಸದ್ಗುಣಗಳ ಮೂರ್ತಿವೆತ್ತರಾದ, ಅತ್ಯಂತ ಪ್ರಿಯರಾದ । ಯಾರು ಸತ್ಪುರುಷರ ಸಹವಾಸವನ್ನೇ ಇಷ್ಟಪಡುತ್ತಾರೋ ಅಂತಹ ಮಹಾಮುನಿಗಳಾದ ಆಪಸ್ತಂಬ ಮುಂತಾದ ಮಹಾಮುನಿಗಳಿಗೆ–ಋಷಿಗಳಿಗೆ ನಮಸ್ಕರಿಸುತ್ತೇವೆ । ಎಲೈ ವೈದಿಕ ಶಿರೋಮಣಿಗಳೇ, ಸನ್ನಡತೆಯುಳ್ಳವರೇ, ಈ ಕೆಳಗಿರುವ ನನ್ನ ವಿಜ್ಞಾಪನೆಯನ್ನು ಗಮನಿಸಿರಿ । ಪೂಜ್ಯರಾದ ಬೋಧಾಯನ ಮುಂತಾದ ಋಷಿಗಳಿಂದ ಕಲ್ಪಸೂತ್ರವು ರಚಿಸಲ್ಪಟ್ಟಿದೆ । ಸಮಸ್ತ ಆಸ್ತಿಕ ಮಹಾಜನರ ವೈದಿಕ

ಕರ್ಮಗಳೂ ಈ ಸೂತ್ರಗಳನ್ನವಲಂಬಿಸಿಯೇ ಅನುಷ್ಠಾನ ಮಾಡಲ್ಪಡುತ್ತವೆ । ಈ ಭಾರತ ಭೂಮಿಯಲ್ಲಿ ಬಹಳ ಜನ ಸೂತ್ರಕಾರರಿದ್ದಾರೆ । ಶ್ರೌತಸ್ಮಾರ್ತ ಕರ್ಮಗಳಿಗೆ ಆಧಾರವಾದ ಅವರುಗಳ ಸೂತ್ರಗಳು ಪ್ರಸಿದ್ಧವಾಗಿಯೇ ಇವೆ । ಅವರಲ್ಲಿ, ಆಪಸ್ತಂಬ ಋಷಿಗಳೂ ಒಬ್ಬರು ಎಂದು ಆಸ್ತಿಕ ಮಹಾಜನರಿಗೆ ಗೊತ್ತಿಲ್ಲದೇ ಇಲ್ಲ ॥

ಯಸ್ಯ ಸೂತ್ರ ರಚನಾ ಪಾಟವಂ ಅನನ್ಯ ಸುಲಭಂ ಅಭಿನಂದಂತಿ ಅಭಿಜ್ಞ ಜನಾಃ । ತೇನ ಪ್ರಣೀತಾನಿ ಶ್ರೌತಸೂತ್ರಾಣಿ, ಧರ್ಮಸೂತ್ರಾಣಿ, ಗೃಹ್ಯಸೂತ್ರಾಣಿ, ಶುಲ್ಬಸೂತ್ರಾಣಿ, ಪಿತೃಮೇಧಸೂತ್ರಾಣಿ ಚ ವಿದಿತಾನ್ಯೇವ ವಿದುಷಾಂ । ಯಥಾನ್ಯೈಃ ಬೋಧಾಯನಾದಿಭಿಃ ಆಪಸ್ತಂಬೇನ ಮುನಿನಾ ಪರಂ ಪಿತೃಮೇಧಸೂತ್ರಾಣಿ ನೋಕ್ತಾನಿ ಚ ಇದಂ ಅತ್ಯಲ್ಪಂ ಅವಿಚಾರಿತಂ ಜಲ್ಪಿತಂ। ಭಾರದ್ವಾಜೀಯಾನಿ ಸೂತ್ರಾಣ್ಯೇವ ಆಪಸ್ತಂಬ ಸೂತ್ರಾನುಯಾಯಿನಾಂ ಅಪಿ ಔರ್ಧ್ವದೇಹಿಕಾಯ ಇತಿ ಚ ಅವಿಮರ್ಶಿ ವಚನೇ ನಿದಾನಂ । ಭಾರದ್ವಾಜೀಯಾನಾಂ ಆಪಸ್ತಂಬೀಯಾನಾಂ ಚ ಸೂತ್ರಾಣಾಂ ಪ್ರಾಯೇಣ ತುಲ್ಯರೂಪತಾ ಏವ । ಉದಾಹೃತಾನಿ ಕಿಲ ಆಪಸ್ತಂಬೀಯಾನಿ ಪಿತೃಮೇಧಸೂತ್ರಾಣಿ ನಿಬಂಧೇಷು ಪ್ರಾಚೀನೈಃ । ತತಃ ಆಪಸ್ತಂಬ ಪಿತೃಮೇಧಸೂತ್ರಾಣಾಂ ಅನನ್ಯದೀಯತ್ವ ಕಲ್ಪನಂ ಅಹೇತುಕಮೇವ ॥

ಯಾವ ಆಪಸ್ತಂಬ ಋಷಿಗಳ ಸೂತ್ರಗಳ ಅತ್ಯಂತ ಸುಲಭ ಮತ್ತು ಸರಳ ರಚನೆಯನ್ನು ಪಂಡಿತ ಸಮೂಹವು ಹೊಗಳುತ್ತದೋ । ಅವರಿಂದ ರಚಿಸಲ್ಪಟ್ಟಂತಹ ಶ್ರೌತ–ಗೃಹ್ಯ–ಧರ್ಮ–ಶುಲ್ಬ ಮತ್ತು ಪಿತೃಮೇಧಸೂತ್ರಗಳು ವಿದ್ವಜ್ಜನರಿಗೆ ಗೊತ್ತೇಇದೆ । ಹೇಗೆ ಬೋಧಾಯನ ಮುಂತಾದ ಋಷಿಗಳ, **"ಆಪಸ್ತಂಬ ಮುನಿಗಳಿಂದ ಪಿತೃಮೇಧ ಸೂತ್ರಗಳು ರಚಿಸಲ್ಪಟ್ಟಿಲ್ಲ"** ಎಂಬ ಮಾತಿದೆಯೋ ಅದು ವಿಚಾರಮಾಡದೇ ಕೇವಲ ಜಲ್ಪಿತವಾದದ್ದಾಗಿದೆಯಷ್ಟೇ । ಭಾರದ್ವಾಜ ಮಹರ್ಷಿಗಳಿಂದ ರಚಿತವಾಗಿರುವ ಪಿತೃಮೇಧ ಸೂತ್ರಗಳನ್ನೇ ಆಪಸ್ತಂಬ ಸೂತ್ರಾನುಯಾಯಿಗಳು ಔರ್ಧ್ವದೇಹಿಕ ಕರ್ಮಕ್ಕೆ ವಿನಿಯೋಗಿಸುತ್ತಾರೆ ಎಂಬ ಕಾಲ್ಪನಿಕ ಊಹೆಯೇ ಈ ವಿಚಾರ ರಹಿತವಾದ ಜಲ್ಪಿತ ವಾದಕ್ಕೆ ಕಾರಣವಾಗಿದೆ । ಆದರೆ ಭಾರದ್ವಾಜ ಸೂತ್ರಗಳಿಗೂ ಆಪಸ್ತಂಬ ಸೂತ್ರಗಳಿಗೂ

ಬಹಳಕಡೆ ಸಾದೃಶ್ಯವು(ಸಮಾನತೆಯು) ಇದೆಯಷ್ಟೆ। ಈ ಸಾಮ್ಯತೆಗೆ ಉದಾಹರಣೆಯಾಗಿ, ಆಪಸ್ತಂಬ ಪಿತೃಮೇಧ ಸೂತ್ರಗಳನ್ನು ಪ್ರಾಚೀನ ಮುನಿಗಳೂ ತಮ್ಮತಮ್ಮ ಗ್ರಂಥಗಳಲ್ಲಿ ಉದಾಹರಣೆಯಾಗಿ ಕೊಟ್ಟಿರುತ್ತಾರೆ । ಆದ್ದರಿಂದ ಆಪಸ್ತಂಬ ಪಿತೃಮೇಧ ಸೂತ್ರಗಳೂ ಭಾರದ್ವಾಜ ಪಿತೃಮೇಧ ಸೂತ್ರಗಳೂ ಸಂಪೂರ್ಣವಾಗಿ ಒಂದೇ ಎಂಬ ಮಾತು ಸರ್ವಥಾ ಸ್ವೀಕಾರಾರ್ಹವಲ್ಲ(ಒಪ್ಪತಕ್ಕದ್ದಲ್ಲ) ॥

ವಿವೃತಿಶ್ಚೇಷಾಂ ಕಪರ್ದಿಸ್ವಾಮಿಭಿಃ ಕೃತೈಕಾ । ಅಪರಾ ಚ ಗೋಪಾಲಮುನಿಭಿಃ ಕಲಿತಾ । ವಿವೃತಿದ್ವಯಂ ಚೈತತ್ ಭಾಷ್ಯಪದೇನ ವ್ಯವಹರಂತಿ ಭಕ್ತ್ಯಾ ವೈದಿಕಾಃ ॥ ಗೋಪಾಲಮುನಿ ಕೃತಂ ಚ ಭಾಷ್ಯಂ ಕತಿಪಯ ಶಿಷ್ಟಾಚಾರ ವಿರುದ್ಧಾರ್ಥ ಪ್ರತಿಪಾದಕತಯಾ, ಅಪ್ರಮಾಣಂ ಮನ್ಯಂತೇ ಕೇಚಿತ್ । ಶ್ರೀಮದ್ಭಿಃ ಸ್ಮೃತಿಮುಕ್ತಾಫಲಕಾರಾದಿಭಿರಪಿ ಪ್ರಾಚೀನೈಶ್ಶಿಷ್ಟವರ್ಯೈಃ ಪ್ರಾಜ್ಞೈಃ ಪ್ರಮಾಣತಯಾ ಪರಿಗೃಹೀತಮಿದಂ ಗೋಪಾಲಭಾಷ್ಯಂ ಆಮೂಲಚೂಡಾಂ ಆಲೋಕಯತಾಂ ಅರಾಗದ್ವೇಷಾಣಾಂ ವಿಜ್ಞಾನಾಂ ಅಪ್ರಾಮಾಣ್ಯ ಶಂಕಾ ಅಸ್ಮಿನ್ನಸ್ಯಾದೇವ। ತೇ ಖಲು ಗೋಪಾಲಮುನಿ ಪ್ರತಿಪಾದಿತಾ ನಾಮಾರ್ಥಾನಾಂ ಸೂತ್ರಾನುಸಾರಿತಾಂ ಪ್ರತಿದೇಶಂ ಶಿಷ್ಟಾನಾಮವಸ್ಥಿತೀಂ, ತೇಷಾಂ ಚ ಲಕ್ಷಣಂ–ತದೀಯಾನಪಿ ಭಿನ್ನಾನಾಚಾರಾನ್, ತೇಷಾಂ ಪರಿಗ್ರಾಹ್ಯತಾಂ ಚ। ಯದಿ ಕ್ವಚಿತ್ ದೇಶವಿಶೇಷ ಸಿದ್ಧಮರ್ಥಂ ಅಸ್ಮದಾಚಾರ ವಿರುದ್ಧಮಿವ ಭಾಸಮಾನಂ ಬೋಧಯತ್ಯನೇನ ಅಪ್ರಾಮಾಣ್ಯಂ ಕಲ್ಪ್ಯೇತ, ತರ್ಹಿ ಸರ್ವೇಷಾಂ ಅಸ್ಯಾಚಾರ ಬೋಧಗ್ರಂಥಾನಾಂ ಸಮಾಪತತ್ಯ ಪ್ರಾಮಾಣ್ಯಂ ಅನಿವಾರ್ಯಂ । ನ ಹಿ ತಾದೃಶೋ ಗ್ರಂಥಸ್ಸಮವಲೋಕ್ಯತೇ । ಯಸ್ಸರ್ವದೇಶೀಯಾ ವಿರುದ್ಧಮಾಚಾರಂ ಬೋಧಯತಿ । ಶಾಸ್ತ್ರವಿರೋಧೇ ಶಿಷ್ಟಾಚಾರಂ ತ್ಯಾಜ್ಯಮೇವಾಮನಂತಿ ನ್ಯಾಯವಿದಃ। ಶ್ರುತಿ ಸ್ಮೃತ್ಯಲಾಭೇ ಹಿ ಶಿಷ್ಟಾಚಾರಃ ಪ್ರಮಾಣಂ। ಅತೋಯದ್ಯತ್ರ ಶಿಷ್ಟಾಚಾರ ಭೇದಃ ಕಶ್ಚಿದವಗಮ್ಯತೇ, ತರ್ಹಿ ತತ್ರ ವಿಕಲ್ಪ ಏವ ಆಶ್ರಯಣೀಯಃ ನಾಪ್ರಾಮಾಣ್ಯಂ ಗ್ರಂಥಸ್ಯ ಕಲ್ಪನೀಯಮ್ ।

ಇದರ ವಿವರಣೆಯನ್ನು ಕಪರ್ದಿಸ್ವಾಮಿಗಳು ಮಾಡಿಯೇ ಇದ್ದಾರೆ । ಇನ್ನೊಂದು ವಿವರಣೆಯನ್ನು ಗೋಪಾಲಮುನಿಗಳು ಮಾಡಿದ್ದಾರೆ । ಈ ಎರಡೂ ವಿವರಣೆಗಳನ್ನು ಗೌರವದಿಂದ ಮತ್ತು ಭಕ್ತಿಯಿಂದ **'ಭಾಷ್ಯ'**ಎಂದು ವೈದಿಕರು ವ್ಯವಹರಿಸುತ್ತಾರೆ । ಗೋಪಾಲಮುನಿಗಳು ಮಾಡಿರುವ ಭಾಷ್ಯವು ಕೆಲವುಕಡೆ ಶಿಷ್ಟಾಚಾರಕ್ಕೆ ವಿರುದ್ಧವಾದುದ್ದನ್ನು ಹೇಳುತ್ತದೆ ಎಂದು, ಕೆಲವರು ಈ ಭಾಷ್ಯಕ್ಕೆ ಪ್ರಮಾಣವನ್ನು ಕೊಟ್ಟಿಲ್ಲ । ಸ್ಮೃತಿಮುಕ್ತಾಫಲವೇ ಮುಂತಾದ ಗ್ರಂಥಕರ್ತೃಗಳಿಗಿಂತಲೂ ಪ್ರಾಚೀನರಾದ, ಶಿಷ್ಟರಾದ, ಪ್ರಾಜ್ಞರಿಂದ ಪ್ರಮಾಣವೆಂದು ಪರಿಗ್ರಹಿಸಿರುವ, ಈ ಗೋಪಾಲಮುನಿಗಳ ಭಾಷ್ಯವು ರಾಗದ್ವೇಷಗಳಿಲ್ಲದೇ ಅವಲೋಕಿಸಲ್ಪಟ್ಟರೆ ಅಪ್ರಾಮಾಣ್ಯದ ಶಂಕೆಯು(ಸಂಶಯವು) ಇರುವುದಿಲ್ಲ!! । ಶಿಷ್ಟರಾದವರು, ಗೋಪಾಲಮುನಿಗಳ ಸೂತ್ರಾರ್ಥವು ಸೂತ್ರಕ್ಕೆ ಅನುಸಾರಿಯಾಗಿಯೂ, ಪ್ರತಿಯೊಂದು ಪ್ರದೇಶದಲ್ಲೂ ಶಿಷ್ಟರ ಗ್ರಹಣಯೋಗ್ಯವಾದ ಅರ್ಥವುಳ್ಳದ್ದೂ ಮತ್ತು ಆ ಶಿಷ್ಟರ ಲಕ್ಷಣವನ್ನು ತಿಳಿಸುವುದೂ, ಅವರ ಭಿನ್ನವಾದಂತಹ ಆಚಾರಗಳನ್ನು ಮತ್ತು ಅದನ್ನು ಪರಿಗ್ರಹಣೆ ಮಾಡಬೇಕೆಂಬುದನ್ನು ತಿಳಿಸುವುದಾಗಿದೆ ಎಂದು ಗ್ರಹಿಸಿರುತ್ತಾರೆ । ಒಂದು ವೇಳೆ, ಕೆಲವು ಜಾಗಗಳಲ್ಲಿ ಮಾಡಿದಂತಹ ಅರ್ಥವು ನಮ್ಮ ಆಚಾರಕ್ಕೆ ವಿರುದ್ಧವೆಂದು ನಮಗೆ ತೋರಿದರೆ, ಆ ಕಾರಣದಿಂದಲೇ ಅಪ್ರಾಮಾಣ್ಯವನ್ನು ಕಲ್ಪಿಸಿದರೆ ಆಗ ಎಲ್ಲಾ ಆಚಾರಬೋಧ ಗ್ರಂಥಗಳಿಗೂ ಅಪ್ರಾಮಾಣ್ಯವು ಅನಿವಾರ್ಯವಾಗಿ ಬಂದಿರುತ್ತದೆ!! । ಆ ರೀತಿಯಾದ ಗ್ರಂಥವಾಗಿ ಗೋಪಾಲಮುನಿಗಳ ಭಾಷ್ಯವು ತೋರಿಬರುತ್ತಿಲ್ಲ । ಈ ಗ್ರಂಥವು ಎಲ್ಲಾ ದೇಶಕಾಲಗಳಲ್ಲಿಯೂ ಅವಿರುದ್ಧವಾದ ಆಚಾರವನ್ನೇ ತಿಳಿಸುತ್ತದೆ । **ಶಾಸ್ತ್ರಕ್ಕೆ ವಿರುದ್ಧವಾದರೆ ಅಂತಹ ಶಿಷ್ಟಾಚಾರವನ್ನು ಬಿಡಬೇಕೆಂದು ಹೇಳುತ್ತಾರೆ । ಯಾವ ವಿಷಯದಲ್ಲಿ ಶ್ರುತಿಸ್ಮೃತಿಗಳು ಸಿಕ್ಕುವುದಿಲ್ಲವೋ ಅಲ್ಲಿ ಮಾತ್ರ ಶಿಷ್ಟಾಚಾರವೇ ಪ್ರಮಾಣವಾಗುತ್ತದೆ । ಆದ್ದರಿಂದ ಈ ಗ್ರಂಥದಲ್ಲಿ ಶಿಷ್ಟಾಚಾರಭೇದವು ಕಂಡುಬಂದರೆ ಅದನ್ನು ವಿಕಲ್ಪವಾಗಿ ಹೇಳಿದೆ ಎಂದು ತಿಳಿಯಬೇಕೇ ಹೊರತು ಗ್ರಂಥವೇ ಪ್ರಮಾಣವಲ್ಲವೆಂದು ಕಲ್ಪನೆ ಮಾಡಬಾರದು ॥**

ನಿಖಿಲ ವಿದ್ವದ್ವರಾಪೇಕ್ಷಿತ ವಿವರಣದ್ವಯ ಯುತಾನಿ ಚೈತಾನಿ ಪಿತೃಮೇಧ ಸೂತ್ರಾಣಿ ಮುದ್ರಾಪ್ಯ ಪ್ರಕಟಯಿತುಂ ಅಸಕೃತ್ ಪ್ರಯತಮಾನೇನಾಪಿ ಅನೇನ ಜನೇನ ನ ಪಾರಿತಮೇತಾವತ ಅನೇಹಸಾ ಯಥಾ ಚಿಂತಿತಂ ಚೇಷ್ಟಿತುಂ ।

ಅದ್ಯೈವಾನುಕೂಲೇನ ವಿಧಿನಾ ಸಂಪಾದ್ಯ ಸಾಧೂನ್ ಕೋಶಾನ್ ಸಂಶೋದ್ಧ್ಯಚ ಯಥಾಮತಿ ನಿವರ್ತ್ಯತ ನಿರಂತರಾಯ ಯಂತ್ರಿತಂ ಮುದ್ರಿತಂ । ಯದ್ಯಪಿ ಪ್ರತಿಕೋಶಂ ದೃಶ್ಯತೇ ಭಿನ್ನರೂಪತಾ ಕೇಷಾಂ ಚಿತ್ ಸೂತ್ರಾಣಾಂ ಭಾಷ್ಯ ವಚಸಾಂ ಚ ತಥಾಪಿ ಕಥಂಚಿತ್ ಸಾಸಮೀಕೃತಾ ಭೂಯೋನುರೋಧೇನ । ಗೋಪಾಲಮುನಿಭಿಃ ಲೋಷ್ಟಚಿತ್ಯಂತಾನ್ನೇವ ಸೂತ್ರಾಣಿ ವಿವೃತಾನಿ । ಏತಾವಂತ್ಯೇವ ಆಪಸ್ತಂಬೀಯಾನೀತಿ ತಸ್ಯ ನಿರ್ಣಯ ಇತ್ಯವಗಮ್ಯತೇ । ಕಪರ್ದಿಸ್ವಾಮಿಭಿಸ್ತೂ ಲೋಷ್ಟಚಿತೇರುಪರಿ ಯಮಯಜ್ಞಂ ಇತ್ಯಾದಾಯ ಸಪ್ತಖಂಡಾ ಅಪಿ ವಿವೃತಾಃ । ತೇಷು ಆದಿಮಂ ಖಂಡದ್ವಯಂ ಯಮಯಜ್ಞಂ ವಿದಧಾತಿ । ಅನ್ಯಚ್ಚ ಖಂಡ ಪಂಚಕಂ ಆಹಿತಾಗ್ನೇಃ ದೇಶಾಂತರ ಮೃತಾದಿ ವಿಷಯೇಷು ಇತಿ ಕರ್ತವ್ಯತಾಮುಪದಿಶತಿ ॥

ಎಲ್ಲ ವಿದ್ವಜ್ಜನರು ಅಪೇಕ್ಷಿಸುವ ಎರಡು ವಿವರಣೆಗಳಿಂದ ಕೂಡಿದ ಈ ಪಿತೃಮೇಧ ಸೂತ್ರಗಳನ್ನು ಮುದ್ರಣಮಾಡಿ, ಪ್ರಕಟಗೊಳಿಸಲು ಬಹಳಬಾರಿ ಪ್ರಯತ್ನಮಾಡಿದರೂ ನಮ್ಮಿಂದ ಹೇಗೆ ಮುದ್ರಣಮಾಡಬೇಕಿತ್ತೋ ಹಾಗೆ ಮುದ್ರಣ ಮಾಡಲು ಅಗಿರಲಿಲ್ಲ(ನಮ್ಮ ನಿರೀಕ್ಷೆಯಂತೆ ಆಗಿರಲಿಲ್ಲ) । ಈಗ ಒಳ್ಳೆಯ ಕೋಶಗಳನ್ನು ಉತ್ತಮ ತಂತ್ರಜ್ಞಾನದಿಂದ ಸಂಶೋಧನೆ ಮಾಡಿ, ನಮ್ಮ ಬುದ್ಧಿಗೆ ತಕ್ಕಂತೆ ಈ ಪಿತೃಮೇಧ ಸೂತ್ರಗಳು ಮಾಡಲ್ಪಟ್ಟಿವೆ ಮತ್ತು ಅವಿಚ್ಛಿನ್ನವಾಗಿರುವುದಕ್ಕೋಸ್ಕರ ಯಂತ್ರದಿಂದ ಮುದ್ರಣ ಮಾಡಲ್ಪಟ್ಟಿದೆ । ಪ್ರತಿ ಕೋಶಗಳಲ್ಲೂ(ಗ್ರಂಥ) ಭಿನ್ನತೆ ತೋರುತ್ತಿದ್ದರೂ ಕೂಡ ಹೇಗೋ ಅದನ್ನು ಸಮೀಕರಣ ಮಾಡಲ್ಪಟ್ಟಿದೆ, ಬಹಳ ಪ್ರಯತ್ನದಿಂದ(ಬಹಳ ಜನರ ಒತ್ತಾಯದ ಮೇಲೆ) । ಗೋಪಾಲಮುನಿಗಳಿಂದ ಲೋಷ್ಟಚಿತ್ಯಂತದವರೆಗಿನ ಸೂತ್ರಗಳಿಗೆ ವಿವರಣೆ ಮಾಡಲ್ಪಟ್ಟಿದೆ । ಇದರಿಂದ, ಅಲ್ಲಿಯವರೆಗೆ ಆಪಸ್ತಂಬಸೂತ್ರಗಳು ಎಂಬುದು ಅವರ ನಿರ್ಣಯವಾಗಿದೆ ಎಂಬುದು ತೋರುತ್ತದೆ । ಕಪರ್ದಿಸ್ವಾಮಿಗಳಾದರೋ ಲೋಷ್ಟಚಿತಿಗಿಂತ ಮುಂದೆಯೂ ಯಮಯಜ್ಞ ಮುಂತಾದ 7 ಖಂಡಗಳನ್ನು ವಿವರಣೆ ಮಾಡಿದ್ದಾರೆ । ಆ 7 ಖಂಡಗಳಲ್ಲಿ ಮೊದಲೆರಡು ಖಂಡಗಳು ಯಮಯಜ್ಞವನ್ನು ತಿಳಿಸುತ್ತವೆ । ಉಳಿದ 5 ಖಂಡಗಳು ಆಹಿತಾಗ್ನಿಯು ದೇಶಾಂತರದಲ್ಲಿ **ಮೃತನಾದಾಗ.....** ಎಂಬೀ ಮೊದಲಾದ ವಿಷಯಗಳಲ್ಲಿ ಕರ್ತವ್ಯತೆಯನ್ನು (ವಿಧಿ) ಉಪದೇಶ ಮಾಡುತ್ತವೆ.

ಏತದ್ಗತಾನಿಚ ಕಾನಿಚಿತ್ಸೂತ್ರಾಣಿ ಭಾರದ್ವಾಜೀಯತಯಾ ಗೋಪಾಲಮುನಿಭಿಃ ಉದಾಹೃತಾನಿ ಪ್ರಸಂಗೇನ ಸ್ವಭಾಷ್ಯೇ । ತಾನ್ಯೇವ ಸ್ಮೃತಿಮುಕ್ತಾಫಲೇ ಶ್ರೀಮದ್ಭಿಃ ವೈದ್ಯನಾಥಮುನಿಭಿಃ ಆಪಸ್ತಂಬೀಯ ತಯಾ ಉದಾಹೃತಾನಿ । ಜ್ಞಾಯತೇ ಚೈತೇನ ತುಲ್ಯರೂಪಾಣಿ ಭಾರದ್ವಾಜೀಯಾನಿ ಆಪಸ್ತಂಬೀಯಾನಿ ಚ ಬಹೂನಿ ಸೂತ್ರಾಣೀತಿ । ಅತ್ರ ಚ ಮದೀಯೇನ ಅನ್ಯದೀಯೇನ ವಾ ಮಾನುಷಶೇಮುಷೀ ಸುಲಭೇನ ಪ್ರಮಾದೇನ ದೃಶ್ಯಮಾನಾನ್ ದೋಷಾನ್ನಿಗೃಹ್ಯ ಗುಣಗಣಮಾತ್ರಾಕಲನೇನ ಸಂತುಷ್ಯಂತು ಸಂತೋಲುಪ್ತ ಕಲ್ಪಸ್ಯಾಸ್ಯ ಗ್ರಂಥಸ್ಯ ಈದೃಶಂ ವಾ ಸಮುದ್ಧರಣಂ ಜಾತಮಿತೀತಿ ಸರ್ವಂ ಶಿವಂ ॥

ಈ 5 ಖಂಡಗಳಲ್ಲಿರುವ ಕೆಲವು ಸೂತ್ರಗಳನ್ನು ಗೋಪಾಲಮುನಿಗಳು ಪ್ರಸಂಗದಿಂದ ತಮ್ಮ ಭಾಷ್ಯದಲ್ಲಿ ಭಾರದ್ವಾಜ ಸೂತ್ರಗಳೆಂದು ಉದಾಹರಿಸಿದ್ದಾರೆ । ಆದರೆ ಇವೇ ಸೂತ್ರಗಳನ್ನು ಸ್ಮೃತಿಮುಕ್ತಾಫಲ ಗ್ರಂಥದಲ್ಲಿ ಪೂಜ್ಯರಾದ ವೈದ್ಯನಾಥ ಮುನಿಗಳು ಆಪಸ್ತಂಬಸೂತ್ರಗಳೆಂದು ಉದಾಹರಿಸಿದ್ದಾರೆ । ಇದರಿಂದ ತಿಳಿದುಬರುತ್ತದೆ, ಭಾರದ್ವಾಜ ಮತ್ತು ಆಪಸ್ತಂಬರ ಬಹಳಷ್ಟು ಸೂತ್ರಗಳು ಸಮಾನವಾಗಿವೆ ಎಂದು । ಇಲ್ಲಿಯಾದರೋ ನನ್ನಂತಹ ಅಥವಾ ಬೇರೇ ಇನ್ನೊಬ್ಬರಿಂದಲೋ ಸಂಸ್ಕೃತಜ್ಞ ಮನುಷ್ಯರಿಗೆ ಸುಲಭವಾಗಿ ತೋರುವ ತಪ್ಪು ದೋಷಗಳನ್ನು ತೊಳೆದುಹಾಕಿ, ಗುಣಮಾತ್ರ ಗ್ರಹಣೆಮಾಡುವುದರಿಂದ ವಿದ್ವಜ್ಜನರು ಸಂತೋಷಪಡಲಿ । ಸಜ್ಜನರಿಗೆ ಮೆಚ್ಚಿಗೆಯಾದ ಈ ಆಪಸ್ತಂಬ ಅಪರಕಲ್ಪ ಎಂಬ ಗ್ರಂಥವು ಈ ರೀತಿಯಾದರೂ ಮತ್ತೆ ಜಗತ್ತಿನಲ್ಲಿ ತಿಳಿದುಬರುವಂತಾದದ್ದು ತುಂಬಾ ಸಂತೋಷವೇ । ಎಲ್ಲವೂ ಮಂಗಳರೂಪವಾದಂತಹ ಶಿವಸ್ವರೂಪವೂ ॥

ವಿಮರ್ಶೆ – 2

ಇದಂ ಕಿಲ ವಿದಿತಮೇವಾತ್ರ ಭವತಾಂ ವೈದಿಕ ಶಿರೋಮಣೀನಾಮ್ । ಯತ್ಪ್ರಾಚೀನೈಃ ಪರಮ ಕಾರುಣಿಕೈಃ ಮುನಿವರ್ಯೈಃ ಮೋಕ್ಷೋಪಾಯಭೂತಾಃ ನಿಷೇಕಾದಿ ಸ್ಮಶಾನಾಂತಾಃ ಚತ್ವಾರಿಂಶತ್ ಸಂಸ್ಕಾರಾಃ ಸಮಗ್ರಾ ಉಕ್ತಾಃ । ಸಂಸಾರಿಣಾಂ ಪುರುಷಾಣಾಮಿತಿ ತತ್ರ ಚ ಭಗವತಾ ಆಪಸ್ತಂಬೇನ 'ಅಥಾತೋ ದರ್ಶಪೂರ್ಣಮಾಸೌ ವ್ಯಾಖ್ಯಾಸ್ಯಾಮಃ' ಇತ್ಯಾರಭ್ಯ ಶ್ರೌತಾನಿ ನಿತ್ಯ ನೈಮಿತ್ತಿಕ ಕಾಮ್ಯಾನಿ ಕರ್ಮಾಣಿ ಸಾಕಲ್ಯೇನ ಉಕ್ತಾನಿ । ತತಃ ಚ 'ಅಥ ಕರ್ಮಾಣ್ಯಾಚಾರಾದ್ಯಾನಿ ಗೃಹ್ಯಂತೇ' ಇತ್ಯಾರಭ್ಯ ಸ್ಮಾರ್ತಾನಿ ವಿವಾಹಾದೀನ್ ಉಕ್ತಾನಿ । ತಾದೃಶಾನಿ ತತಃ ಚ 'ಅಥಾತಃ ಪೈತೃಮೇಧಿಕಂ ದಹನಂ ಪುರುಷಾಹುತಿರ್ಹ್ಯಸ್ಯ ಪ್ರಿಯತಮೇತಿ ವಿಜ್ಞಾಯತೇ' ಇತಿ ಆರಭ್ಯ ಪೈತೃಮೇಧಿಕ ಕರ್ಮಾಣ್ಯುಕ್ತಾನಿ । ಅಸ್ಯ ಚ ಸ್ವರ್ಗನಿವಾಸಿ ಪಿತೃಭಿಃ ಸಹ ಸಂಗಮನ ಫಲಕತ್ವಾತ್ । ಪೈತೃಮೇಧಿಕಃ ಇತ್ಯಾಖ್ಯಾ ಭವತಿ । ಇದಮೇವ ಔರ್ಧ್ವದೇಹಿಕಂ ಕರ್ಮ ಇತ್ಯುಚ್ಯತೇ । ಪೂರ್ವೋಕ್ತಾನಾಂ ಕರ್ಮಣಾಂ ಮಧ್ಯೇ ಇದಂ ಅತ್ಯಾವಶ್ಯಕಂ ಪುರುಷಾಣಾಂ ॥

ಇಲ್ಲಿರುವ ಪೂಜ್ಯರಾದ, ವೈದಿಕ ಶಿರೋಮಣಿಗಳಿಗೆ ಇದು ಗೊತ್ತೇ ಇದೆ । ಏನೆಂದರೆ, ಹಿಂದಿನ ಪರಮಕಾರುಣಿಕರಾದ ಮುನಿವರ್ಯರು ಮೋಕ್ಷೋಪಾಯವಾಗಿ ನಿಷೇಕಾದಿ ಸ್ಮಶಾನಾಂತವಾದ 40(ನಲವತ್ತು) ಸಂಸ್ಕಾರಗಳನ್ನು ಸಮಗ್ರವಾಗಿ ಹೇಳಿದ್ದಾರೆ । ಸಂಸಾರಿಗಳಾದ ಗೃಹಸ್ಥರಿಗೆಲ್ಲಾ ಪೂಜ್ಯರಾದ ಆಪಸ್ತಂಬ ಮಹರ್ಷಿಗಳು **'ಅಥಾತೋ ದರ್ಶಪೂರ್ಣಮಾಸೌ ವ್ಯಾಖ್ಯಾಸ್ಯಾಮಃ'** ಎಂದು ಆರಂಭಿಸಿ, ಶ್ರೌತವಾದ, ನಿತ್ಯ–ನೈಮಿತ್ತಿಕ–ಕಾಮ್ಯಗಳೆಂಬ ಕರ್ಮಗಳನ್ನು ಸಂಪೂರ್ಣವಾಗಿ ಹೇಳಿದ್ದಾರೆ । ಆಮೇಲೆ, **'ಅಥ ಕರ್ಮಾಣ್ಯಾಚಾರಾದ್ಯಾನಿ ಗೃಹ್ಯಂತೇ'** ಎಂದು ಆರಂಭಿಸಿ, ಗೃಹ್ಯಸೂತ್ರಗಳಲ್ಲಿ ಸ್ಮಾರ್ತವಾದ, ಸಂಸ್ಕಾರವಾದ ವಿವಾಹಾದಿಗಳನ್ನು ಹೇಳಿದ್ದಾರೆ । ಆ ರೀತಿಯ ಶುಭ ಸಂಸ್ಕಾರಗಳು ಮುಗಿದಮೇಲೆ **'ಅಥಾತಃ ಪೈತೃಮೇಧಿಕಂ ದಹನಂ.....ವಿಜ್ಞಾಯತೇ'** ಎಂದು ಆರಂಭಿಸಿ, ಶವಸಂಸ್ಕಾರ(ಪಿತೃಮೇಧ / ಪೈತೃಮೇಧಿಕ / ಔರ್ಧ್ವದೇಹಿಕ /

ಅಪರ / ಅಂತ್ಯೇಷ್ಟಿ) ಕರ್ಮಗಳನ್ನು ಹೇಳಿದ್ದಾರೆ । ಈ ಶವಸಂಸ್ಕಾರ ಕರ್ಮಕ್ಕೆ, ಸ್ವರ್ಗವಾಸಿಗಳಾದ ಪಿತೃಗಳೊಡನೆ ಸೇರಿಕೊಳ್ಳುವುದೇ ಫಲವು । ಪೈತೃಮೇಧಿಕ ಎಂಬ ಹೆಸರೂ ಈ ಕರ್ಮಕ್ಕೆ ಇದೆ । ಇದನ್ನೇ ಔರ್ಧ್ವದೇಹಿಕ ಎಂತಲೂ ಕರೆಯುತ್ತಾರೆ । ಹಿಂದೆ ಹೇಳಿದ ಸಂಸ್ಕಾರಕರ್ಮಗಳ ಪೈಕಿ, ಈ ಶವಸಂಸ್ಕಾರ ಕರ್ಮವು ಮನುಷ್ಯರಿಗೆ ಅತ್ಯಾವಶ್ಯಕವಾದುದು ॥

ಯತಃ ಅಕೃತೌರ್ಧ್ವದೇಹಿಕಸ್ಯ ಪುರುಷಸ್ಯ ಜೀವದಶಾಯಾಂ ಉಪಾರ್ಜಿತಾನಿ ಸತ್ಕರ್ಮಾಣಿ ಫಲಾನಿ ದಾತುಂ ನ ಪ್ರಕಲ್ಪಂತೇ । ನನು, 'ಯದುಚೈವಾಸ್ಮಿನ್ ಶವ್ಯಂ ಕುರ್ವಂತಿ ಯದುಚನ ಅರ್ಚಿಷಮೇವಾಭಿ ಸಂಭವಂತಿ' ಯದಿ ಛಂದೋಗಶ್ರುತ್ಯಾ ಔರ್ಧ್ವದೇಹಿಕಸ್ಯ ಕರ್ಮಣಃ ಅನಾವಶ್ಯಕತ್ವಮುಕ್ತಮಿತಿ ಚೇತ್ ನ ತಸ್ಯಾಶ್ರುತೇಃ ಸೂಪಾಸಿತ ಬ್ರಹ್ಮವಿಷಯತ್ವಾತ್ । ನ ಹೀದಾನೀಂ ಸರ್ವೇ ಸೂಪಾಸಿತ ಬ್ರಹ್ಮಾಣಃ । ಕಿಂ ಚ ಕೃತ ಬ್ರಹ್ಮೋಪಾಸಕಸ್ಯ ಶವ್ಯಕರ್ಮಾಕರಣೇ ಪ್ರತ್ಯವಾಯಂ ಸೂಚಯತಿ । ತತ್ರ ಚ ಅಧೀತ ಕೇವಲ ಸೂತ್ರೇಣ ಕರ್ಮಾನುಷ್ಠಾತುಂ ಅಶಕ್ಯಮಿತಿ ಕೃತ್ವಾ, ಪ್ರಾಚೀನೈಃ ಪಂಡಿತವರ್ಯೈಃ ಪ್ರಯೋಗಪ್ರಕಾರಃ ಪ್ರದರ್ಶಿತಃ ॥

ಏಕೆಂದರೆ ಈ ಕರ್ಮವನ್ನು ಮಾಡದ ಮನುಷ್ಯನಿಗೆ, ಅವನು ಜೀವಿಸಿರುವವರೆಗೆ ಮಾಡಲ್ಪಟ್ಟಂತಹ ಸತ್ಕರ್ಮಗಳು ಫಲವನ್ನು ಕೊಡಲು ಸಮರ್ಥವಾಗುವುದಿಲ್ಲ । ಇಲ್ಲೊಂದು ವಾದವೂ ಇದೆ, ಅದೇನೆಂದರೆ – ಛಾಂದೋಗ್ಯ ಶ್ರುತಿಯನ್ನು ಆಶ್ರಯಿಸಿ, **'ಈ ಉಪಾಸಕನಿಗೆ ಅಂತ್ಯೇಷ್ಟಿ ಕರ್ಮವನ್ನು ಮಾಡಿದರೂ ಅಥವಾ ಮಾಡದಿದ್ದರೂ ಅರ್ಚಿರಾದಿ(ಉತ್ತರಾಯಣ ಮಾರ್ಗ) ಮಾರ್ಗದಿಂದ ಅವನು ಉತ್ತಮ ಲೋಕಗಳನ್ನೇ ಪಡೆದುಕೊಳ್ಳುತ್ತಾನೆ' ಎಂಬೀರೀತಿಯಾಗಿ ಶವಸಂಸ್ಕಾರ ಕರ್ಮವು ಅವಶ್ಯಕವೇನಲ್ಲಾ.....,** ಎಂದು ಶ್ರುತಿಯ(ವೇದ) ಬಲದಿಂದ ಮೇಲಿನ ರೀತಿಯಲ್ಲಿ ನಿರ್ಣಯಿಸಲು ಬರುವುದಿಲ್ಲ । ಏಕೆಂದರೆ, ಆ ಛಾಂದೋಗ್ಯ ಉಪನಿಷತ್ತಿನ ವಿಷಯವು ಬ್ರಹ್ಮೋಪಾಸಕನ ವಿಷಯವಾದ್ದರಿಂದ ಹಾಗೂ ಈಗಿನ ಕಾಲದಲ್ಲಿ ಎಲ್ಲರೂ ಬ್ರಹ್ಮೋಪಾಸಕರಾಗಿಯೇ

ಏನಿಲ್ಲ ಮತ್ತೂ ಏನೆಂದರೆ, ಬ್ರಹ್ಮೋಪಾಸಕನಿಗೆ ಈ ಅಂತ್ಯಕರ್ಮವನ್ನು ಮಾಡದಿದ್ದರೆ ಕರ್ತೃವಿಗೆ ದೋಷವನ್ನು ಹೇಳಿಯೇ ಇದೆ । ಹಾಗಾಗಿ ಈ ಕರ್ಮವು ಅವಶ್ಯಕವಲ್ಲ ಎಂಬ ವಾದಕ್ಕೆ ಯಾವುದೇ ಬಲವಿಲ್ಲ । ಆದ್ದರಿಂದ ಕೇವಲ ಸೂತ್ರಗಳ ಅಧ್ಯಯನದಿಂದ ಕರ್ಮಗಳ ಅನುಷ್ಠಾನವನ್ನು ಮಾಡಲು ನಮ್ಮ ಬುದ್ಧಿಗೆ ಸಾಮರ್ಥ್ಯವಿಲ್ಲದ್ದರಿಂದ, ಪ್ರಾಚೀನ ಪಂಡಿತವರ್ಯರು–ಮಹಾತ್ಮರು ಪ್ರಯೋಗ ಕ್ರಮವನ್ನು ವ್ಯವಸ್ಥೆಗೊಳಿಸಿ ತಿಳಿಯಪಡಿಸಿದ್ದಾರೆ ॥

ತಥಾ ಸತ್ಯಪಿ ಇದಾನೀಂ ಪ್ರಯೋಗಜ್ಞಾಃ ತತ್ ಗ್ರಂಥಾಶ್ಚ ಅತೀವ ವಿರಳತಃ ಬಭೂವುಃ । ಅತಸ್ತೇಷಾಂ ಸರ್ವತ್ರ ದೌರ್ಲಭ್ಯಂ ಪ್ರಾಪ್ತ ತಾದೃಶ ದೌರ್ಲಭ್ಯಂ ಪರಿಜಿಹೀರ್ಷಿತು ಕಾಮಾಃ ವಯಂ ತತ್ ಗ್ರಂಥಮುದ್ರಣೇ ಪ್ರವೃತ್ತಾಃ । ನನು ಬಹುಭಿಃ ಮುದ್ರಾಪಯಿತೃಭಿಃ ಮುದ್ರಿತಾ ಏವಾಯಂ ಗ್ರಂಥಯಿತಿ ಭವತಾಂ ಪ್ರಯಾಸಃ ವಿಫಲ ಇತಿ ಚೇತ್ ನ । ತೇಷಾಂ ಸೂತ್ರ ಪ್ರಾಚೀನಕೋಶ ಶಿಷ್ಟಾಚಾರಾಣಾಂ ತತ್ತಾರ್ಥಮಜಾನದ್ಭಿಃ ಮುದ್ರಿತಾನಾಂ ಗ್ರಂಥಾನಾಂ ಅತ ಏವ ಸೂತ್ರಾದಿ ವಿರುದ್ಧಾನಾಂ ಕರ್ಮಾನುಷ್ಠಾನೇ ಉಪಯೋಗಾನರ್ಹತ್ವಾತ್ ಪ್ರಾಚೀನ ಪಂಡಿತವರ್ಯೈಃ ಕಲ್ಪಯ ಗ್ರಂಥಾಸ್ತು ದುರ್ಲಭಾ ಇತ್ಯುಕ್ತಂ । ಅತಃ ಸೂತ್ರ ಪ್ರಾಚೀನಕೋಶ ಶಿಷ್ಟಾಚಾರಾವಿರೋಧೇನ ಮುದ್ರಾಪಯಿತುಂ ಪ್ರವೃತ್ತಾನಾಂ ಅಸ್ಮಾಕಂ ಪ್ರಯಾಸೋ ನ ವಿಫಲೀ ಭವಿತುಮರ್ಹತಿ ॥

ಹೀಗೆ ಸೂತ್ರಾನುಸಾರಿ ಪ್ರಯೋಗ ಕ್ರಮಗಳಿದ್ದರೂ ಸಹ ಅಂತಹ ಪ್ರಯೋಗವನ್ನು ತಿಳಿದವರು ಮತ್ತೂ ಅದಕ್ಕೆ ಸಂಬಂಧಪಟ್ಟ ಗ್ರಂಥಗಳು ಅತೀವ ವಿರಳವಾಗಿಹೋಗಿದೆ । ಹಾಗೂ ಅವುಗಳು ಎಲ್ಲಾ ಕಡೆಗಳಲ್ಲಿಯೂ ದೊರಕುತ್ತಿಲ್ಲವಾದ್ದರಿಂದಲೂ, ಈ ದೌರ್ಲಭ್ಯವನ್ನು ಪರಿಹರಿಸಲು ಇಚ್ಛೈಯುಳ್ಳವರಾದ ನಾವು ಆ ಗ್ರಂಥದ ಮುದ್ರಣದಲ್ಲಿ ಪ್ರವೃತ್ತರಾಗಿದ್ದೇವೆ । ಆದರೆ ಈ ಪ್ರಯತ್ನಕ್ಕೆ ಆಕ್ಷೇಪವೂ ಇದೆ, ಅದೇನೆಂದರೆ– 'ತುಂಬಾ ಮುದ್ರಣ ಮಾಡುವವರಿಂದ ಇಂತಹ ಗ್ರಂಥಗಳು ಮುದ್ರಿಸಲ್ಪಟ್ಟಿವೆಯಾದ್ದರಿಂದ ನಿಮ್ಮ ಈ ಪ್ರಯತ್ನವು ವ್ಯರ್ಥ' ಎಂಬುದೇ ಆ ಆಕ್ಷೇಪ ! । ಆದರೆ ಈ ಆಕ್ಷೇಪವು ಸರಿಯಲ್ಲ,

ಏಕೆಂದರೆ– ಆಪಸ್ತಂಬ ಸೂತ್ರಗಳ, ಪ್ರಾಚೀನವಾದ ಶಿಷ್ಟಾಚಾರಗಳ ಒಳಮರ್ಮ(ನಿಜಾರ್ಥ)ಗಳನ್ನು ತಿಳಿಯದೇ ಇರುವವರಾದ ಮುದ್ರಕರಿಂದ ಮುದ್ರಿಸಲ್ಪಟ್ಟಂತಹ ಪ್ರಯೋಗ ಗ್ರಂಥಗಳು ಸೂತ್ರ ಮುಂತಾದವುಗಳಿಗೆ ವಿರುದ್ಧವಾದದ್ದಾಗಿ, ಕರ್ಮಗಳನ್ನು ಅನುಷ್ಠಾನ ಮಾಡಲು ಇಂತಹ ಗ್ರಂಥಗಳು ಅನರ್ಹವಾದದ್ದಾಗಿ, ಪ್ರಾಚೀನ ಪಂಡಿತವರ್ಯರಿಂದ ರಚಿಸಲ್ಪಟ್ಟ ಗ್ರಂಥಗಳು ದುರ್ಲಭ ಎಂದು ಈ ಹಿಂದೆಯೇ ಹೇಳಿದೆವು, ಆದ್ದರಿಂದ ಸೂತ್ರಕ್ಕೆ ಮತ್ತು ಪ್ರಾಚೀನ ಮಹಾತ್ಮರ ಅಭಿಪ್ರಾಯಗಳಿಗೆ ಅವಿರೋಧವಾಗಿ(ಪೂರಕವಾಗಿ) 'ಈ ಅಂತ್ಯೇಷ್ಟಿ ಸಂಸ್ಕಾರ ಕರ್ಮದ ಗ್ರಂಥವನ್ನು' ಮುದ್ರಣ ಮಾಡಲು ಹೊರಟಂತಹ ನಮ್ಮ ಈ ಪ್ರಯಾಸವು(ಯತ್ನವು) ಎಂದೂ ವಿಫಲವಾಗುವ ಪ್ರಶ್ನೆಯೇ ಇಲ್ಲ !! ॥

ಬೋಧಾಯನ ಆಪಸ್ತಂಬ ಆಶ್ವಲಾಯನ ಸೂತ್ರ ಪ್ರಯೋಗಾಃ ತತ್ತತ್ ಸೂತ್ರಾವಿರೋಧೇನ ಸಂಮುದ್ರ್ಯ, ಪ್ರಕಟೀಕೃತಾ ಇತಿ ಆಬಾಲ ಸ್ಥವಿರಂ ಜ್ಞಾತಮೇವ । ಅಯಂ ತು ಗ್ರಂಥಃ ತತ್ರ ತತ್ರ ಸಪ್ರಮಾಣಂ ಸಮಂತ್ರಕಂ ಸಸ್ವರಂ ಸಕಾರಿಕಾಂ ಚ ಸಮಮುದ್ರಿ । ಅತ್ರ ಚ ಆಪಸ್ತಂಬ ಮಹರ್ಷಿಣಾ ಆಹಿತಾಗ್ನಿ ಅನಾಹಿತಾಗ್ನಿ ಸಾಧಾರಣ್ಯೇನ ಉಕ್ತೇಭ್ಯಃ ಸೂತ್ರೇಭ್ಯಃ ಅನಾಹಿತಾಗ್ನಿ ಅಸಾಧಾರಣಾನಿ ಪೃಥಕ್ ಕೃತ್ಯ, ತತ್ಪಾಠೋಪಿ ಮುದ್ರಿತಃ । ಅನ್ಯಥಾ ಶ್ರೌತ ಅನಭಿಜ್ಞಾನಾಂ ಸೂತ್ರ ದರ್ಶಿಣಾಂ ಸಂಮೋಹೋ ಜಾಯೇತ । ಕೇಚಿತ್ ಚ ಪಿತೃಮೇಧ ಪ್ರಯೋಗಸ್ಯ ಸೂತ್ರಾಣ್ಯೇವ ನ ಸಂತಿ ಇತಿ ಚ ಮನ್ಯಂತೇ । ಸೂತ್ರಕ್ರಮಂ ಅಜಾನಾನೈಃ ಪ್ರಯೋಗಕ್ರಮಃ ಸುತರಾಂ ವ್ಯತ್ಯಸ್ಯ ಕ್ರಿಯಂತೇ । ತಾದೃಶ ವ್ಯತ್ಯಾಸಾಭಾವಾಯಚ ಸೂತ್ರಪಾಠ ಮುದ್ರಣಂ । ತದನುಸಾರಿಣೀ ಕಾರಿಕಾ ಚ ಸಮಗ್ರಾ ಸಂಲ್ಲಿಖ್ಯ ಮುದ್ರಿತಾ ॥

ಪ್ರಾಚೀನ ಪಂಡಿತರಿಂದ ಬೋಧಾಯನ, ಆಪಸ್ತಂಬ, ಆಶ್ವಲಾಯನ ಮಹರ್ಷಿಗಳ ಸೂತ್ರ ಪ್ರಯೋಗಗಳು ಆಯಾಯಾ ಸೂತ್ರಕ್ಕೆ ಅವಿರೋಧವಾಗಿ ಮುದ್ರಣ ಮಾಡಲ್ಪಟ್ಟು ಪ್ರಕಟಮಾಡಲ್ಪಟ್ಟಿವೆ ಎಂಬುದು ಬಾಲಕರಿಂದ ವೃದ್ಧರವರೆಗೆ ಎಲ್ಲರಿಗೂ ತಿಳಿದೇ ಇದೆ । **ನಾವು ರಚಿಸುತ್ತಿರುವ ಈ ಗ್ರಂಥವು ಪ್ರಮಾಣ ಸಹಿತವಾಗಿ – ಮಂತ್ರ ಸಹಿತವಾಗಿ – ಸ್ವರ ಸಹಿತವಾಗಿ – ಕಾರಿಕಾ ಸಹಿತವಾಗಿ ಮುದ್ರಣಗೊಳ್ಳುತ್ತಿದೆ !** । ಇದರಲ್ಲಿ ಆಪಸ್ತಂಬ

ಮಹರ್ಷಿಗಳು ಆಹಿತಾಗ್ನಿ(ಅಗ್ನಿಹೋತ್ರಿಗಳು), ಅನಾಹಿತಾಗ್ನಿ(ಅಗ್ನಿಹೋತ್ರಿಗಳಲ್ಲದವರು), ಇಬ್ಬರಿಗೂ ಸಾಧಾರಣವಾಗಿ ಹೇಳಿದಂತಹ ಸೂತ್ರಗಳಿಂದ ಅನಾಹಿತಾಗ್ನಿಗಳ ಅಸಾಧಾರಣವಾದ ಸೂತ್ರಗಳನ್ನು ಬೇರೆ ಮಾಡಿ ಅದನ್ನೂ ಮುದ್ರಿಸಿದ್ದೇವೆ! । ಹೀಗೆ ಮಾಡದಿದ್ದರೆ, ಶ್ರೌತ ಜ್ಞಾನವಿಲ್ಲದವರಿಗೆ – ಒಟ್ಟಾಗಿರುವ ಸಮಸ್ತ ಸೂತ್ರಗಳನ್ನು ನೋಡಿದ ತಕ್ಷಣ ಗೊಂದಲವು ಉಂಟಾಗುತ್ತದೆ । ಕೆಲವರು ಪಿತೃಮೇಧ ಪ್ರಯೋಗದ ಆಪಸ್ತಂಬ ಸೂತ್ರಗಳೇ ಇಲ್ಲವೆಂದು ತಿಳಿದಿದ್ದಾರೆ, ಆದರೆ ಇದು ಖಂಡಿತಾ ಸರಿಯಲ್ಲ । ಸೂತ್ರಕ್ರಮವನ್ನು ತಿಳಿಯದೇ ಇರುವವರಿಗೆ ಪ್ರಯೋಗ ಕ್ರಮವೂ ಕೂಡ ಖಡಾಖಂಡಿತವಾಗಿ ಗೊಂದಲವಾಗಿ, ವ್ಯತ್ಯಾಸವಾಗಿ ತೋರುತ್ತದೆ । ಹಾಗೆಯೇ ಸೂತ್ರಕ್ರಮವನ್ನು ಸರಿಯಾಗಿ ತಿಳಿಯದೇ ಇರುವವರು ಪ್ರಯೋಗಕ್ರಮವನ್ನು ಸಂಪೂರ್ಣ ವ್ಯತ್ಯಾಸವಾಗಿ ಮಾಡುತ್ತಾರೆ । ಇಂತಹ ವ್ಯತ್ಯಾಸವು ಬರಬಾರದೆಂದು ಸೂತ್ರಪಾಠದ ಮುದ್ರಣವನ್ನು ಮಾಡಿದ್ದೇವೆ। ಹಾಗೆಯೇ ಅದಕ್ಕೆ ಅನುಸಾರವಾಗಿ ಸಮಗ್ರ ಕಾರಿಕೆಯನ್ನೂ ಬರೆದು ಮುದ್ರಿಸಿದ್ದೇವೆ ॥

ಅತ್ರ ಚ ಅನವಧಾನತಯಾ ವಾ ವ್ಯುತ್ಪತ್ತಿ ಮಾಂದ್ಯಾದ್ವಾಜಾತಂ ಸ್ಖಲಿತಂ ದೃಷ್ಟ್ವಾ ಗುಣದೋಷೌ ಬುಧೌ ಗೃಹ್ಣನ್ ಇತಿ ನ್ಯಾಯೇನ ದೋಷಾನ್ ಕಂಠೇ ನಿಯಮ್ಯ ಗುಣಾನ್ ಪ್ರಕಾಶಯೇಯುರಿತಿ ಸಹೃದಯಾನ್ ಅಭ್ಯರ್ಥಯಾಮಹೇ ಇತಿ ಶಿವಮ್ ॥

ಈ ಗ್ರಂಥದಲ್ಲಿ, ಅವಧಾನ(ಏಕಾಗ್ರತೆ) ಇಲ್ಲದೇ ಅಥವಾ ವ್ಯುತ್ಪತ್ತಿಯ ಅಜ್ಞಾನದಿಂದಾಗಲೀ ಉಂಟಾದ ದೋಷಗಳನ್ನು ಕಂಡು 'ಗುಣ ದೋಷಗಳನ್ನು ವಿವೇಕಿಯಾದವನು ತಿಳಿಯುತ್ತಾ.....' ಎಂಬ ನ್ಯಾಯದಂತೆ, ಅಂತಹಾ ದೋಷಗಳನ್ನು ಮನ್ನಿಸಿ, ಗುಣಗಳನ್ನು ಪ್ರಕಾಶಗೊಳಿಸಿರಿ ಎಂದು ಸಹೃದಯರಾದ ನಿಮ್ಮಲ್ಲಿ ಪ್ರಾರ್ಥಿಸುತ್ತೇವೆ ಎಂದು ಮಂಗಳವು ॥

ಗಚ್ಛತ ಸ್ಖಲನಂ ಕ್ವಾಪಿ ಭವತ್ಯೇವ ಪ್ರಮಾದತಃ ।
ಹಸಂತಿ ದುರ್ಜನಾಸ್ತತ್ರ ಸಮಾದಧತಿ ಸಜ್ಜನಾಃ ॥

ನಡೆಯುವವನಿಗೆ ಪ್ರಮಾದವಶಾತ್ ಒಮ್ಮೊಮ್ಮೆ ಬೀಳುವಿಕೆಯು ಉಂಟಾಗುತ್ತದೆ. ಹಾಗೆಯೇ ಗ್ರಂಥ ರಚನೆಯಲ್ಲಿಯೂ ಕೆಲವು ದೋಷಗಳು ಉಂಟಾಗಬಹುದು, ಅದನ್ನು ಕಂಡು ದುಷ್ಟ ಜನರು ನಗುತ್ತಾರೆ, ಸಜ್ಜನರು ಅದನ್ನು ಒಳ್ಳೆಯ ಮನಸ್ಸಿನಿಂದ ಸರಿಪಡಿಸುತ್ತಾರೆ ॥

ಸಹೃದಯ ದಾಸ, ಮಣಕ್ಕಾಲ್ ಮುದ್ದುದೀಕ್ಷಿತಃ

ಭಾರದ್ವಾಜೀಯ/ಆಪಸ್ತಂಬೀಯ ಅಪರಸೂತ್ರಂ

ಅಥ ಪ್ರಥಮಃ ಪ್ರಶ್ನಃ

1 ನೇ ಖಂಡ

(ಸ್ಮಶಾನ ನಿರ್ಮಾಣ – ತ್ರೇಧಾಗ್ನಿಗಳ ವಿಚಾರ – ಕರ್ಣಮಂತ್ರ ಜಪ – ಶವದ ಕೂದಲು ತೆಗೆಯುವಿಕೆ – ಸ್ನಾನ ವಿಚಾರ)

* ಸೂತ್ರಂ – 1

ಅಥಾತಃ ಪೈತೃಮೇಧಿಕಂ ದಹನಂ । ಪುರುಷಾಹುತಿರ್ಹ್ಯಸ್ಯ ಪ್ರಿಯತಮೇತಿ ವಿಜ್ಞಾಯತೇ ॥

ನಂತರ, ಪೈತೃಮೇಧಿಕದಹನವನ್ನು ಹೇಳುತ್ತೇವೆ । ಏಕೆಂದರೆ, ಶ್ರುತಿಯಲ್ಲಿಯೂ ಪುರುಷಾಹುತಿಯೇ ಈ ಅಗ್ನಿಗೆ ಅತ್ಯಂತ ಪ್ರಿಯವಾಗಿ ಇರುವುದು ಎಂದು ತಿಳಿಯಲ್ಪಡುತ್ತದೆ ॥

* ಗೋಪಾಲಭಾಷ್ಯಂ –

ಅಥೇದಾನೀಂ ಪಿತೃಮೇಧಾಖ್ಯಃ ಪುರುಷಸಂಸ್ಕಾರೋ ವ್ಯಾಖ್ಯಾಯತೇ । ತಸ್ಯೋಭಯಂ ಪ್ರಯೋಜನಂ । 'ಪಾರಲೌಕಿಕ ಫಲಾನುಭವ ಯೋಗ್ಯತಾಪತ್ತಿಃ' 'ಕರ್ಮೋಪಯುಕ್ತ ಶರೀರ ಪ್ರತಿಪತ್ತಿಶ್ಚೇತಿ' । ವದಿಷ್ಯತಿ ಚಾಚಾರ್ಯಃ । ಪಠಿತಾನಿ ಸೂತ್ರಕಾರೇಣ (ಆಪಸ್ತಂಬ ಧರ್ಮಸೂತ್ರ – 2ನೇ ಪ್ರಶ್ನ, 23ನೇ ಖಂಡ, 12–13ನೇ ಸೂತ್ರ) । ಯತ್ತು ಸ್ಮಶಾನಮುಚ್ಯತೇ ನಾನಾಕರ್ಮಣಾಮೇಷೋಂತೇ ಪುರುಷ ಸಂಸ್ಕಾರೋ ವಿಧೀಯತೇ । ತತಃ ಪರಮನಂತಂ ಫಲಂ ಸ್ವರ್ಗಶಬ್ದಂ ಶ್ರೂಯತೇ । ಇತಿ ತತ್ರೈವಂ ವಿವೇಕೋದ್ರಷ್ಟವ್ಯಃ । ಖನನಂ ದಹನಂ ತ್ಯಾಗ ಇತಿ ಯಾ ತ್ರಿವಿಧೋಚ್ಯತೇ । ಶರೀರ ಸಂಸ್ಕ್ರಿಯಾಹ್ಯಸ್ಯ ಪರಲೋಕ

ಜಯಾವಹಾ । ವಿಧಿಸ್ಮಶಾನ ಸಂಯುಕ್ತೋ ಯೋನ್ಯಃ ಸಂಚಯನಾದಿಕಃ । ಕರ್ಮೋಪಯುಕ್ತ–ದೇಹಸ್ಯ ಪ್ರತಿಪತ್ಯರ್ಥಂ ಏವ ಸ ಇತಿ । ಯಃ ಅಯಂ ಅವಸ್ಥಾ ವಿಶೇಷ ಸಂಯುಕ್ತೋ ಮರಣಸಮನಂತರಾನುಷ್ಠೇಯಃ ಸಂಸ್ಕಾರೋ ವಿಧೀಯತೇ । ಖನನಂ ದಹನಂ ತ್ಯಾಗ ಇತಿ । ಸ ತಾವನ್ ಮೃತಸ್ಯ ಪರಲೋಕಾರ್ಥ ಇಷ್ಯತೇ । ತೇನ ಹಿ ಪಾರಲೌಕಿಕ ಸುಖಾನುಭವ ಯೋಗ್ಯತಾ ಭವತಿ । ಸ ಏಷ ಯಜ್ಞಾಯುಧೀ ಯಜಮಾನೋಂಜಸಾ ಸ್ವರ್ಗಂ ಲೋಕಮೇತೀತಿ ಶ್ರುತೇಃ । ತತಃ ಪರಮನಂತಂ ಫಲಂ ಸ್ವರ್ಗಂಶಬ್ದಂ ಶ್ರೂಯತ ಇತಿ ಸೂತ್ರಕಾರ ವಚನಾತ್ । ಮೃತ ಸಂಸ್ಕಾರೇಣಾಮುಂ ಲೋಕಮಿತಿ । ಬೋಧಾಯನ ವಚನಾಚ್ಚ । ತತ್ರ ಸಂಸ್ಕಾರ ತಾರತಮ್ಯಾತ್ । ಪಾರಲೌಕಿಕ ಸುಖಾನುಭವತಾರತಮ್ಯಂ ಅನುಸಂಧೇಯಮ್ ।

ಅತ ಏವ ಬ್ರಹ್ಮಮೇಧೇ 'ಕ್ರತೂನಾಮುತ್ತಮ ಕ್ರತುರಿತಿ' ವಕ್ಷ್ಯತಿ । ತತಶ್ಚ ಬ್ರಹ್ಮಮೇಧೇ ಸ್ವನುಷ್ಠಿತೇ । ಕೃತ್ಸ್ನ ಸುಕೃತ ಫಲಾನುಭವ ಯೋಗ್ಯತಾ । ಅನ್ಯತ್ರ ತತ್ತತ್ ಅನುಗುಣೋsನುಷ್ಠಾನಾನಾಂ ಹ್ರಾಸಃ । ನ ಚೈವಂ ಸತೀತರ ಸುಕೃತ ವೈಯರ್ಥ್ಯಂ । ಜನ್ಮಾಂತರೇಷು ತತ್ಫಲಾನುಭವ ಸಂಭವಾತ್ । ನನು ಚ ಮೃತ ಸಂಸ್ಕಾರೇಣಾಮುಂ ಲೋಕಮಿತ್ಯತ್ರ ಮೃತ ಸಂಸ್ಕಾರ ಶಬ್ದಃ ಖನನಾದಿ ರೂಪ ಸಮನಂತರ ಸಂಸ್ಕಾರಮಾತ್ರವಚನಃ । ನ ಪುನಸ್ಸರ್ವ ಪೈತೃಮೇಧಿಕ ಕರ್ಮವಚನ ಇತಿ ಕುತೋsವಸೀಯತೇ ? । ಸಂಚಯನಾದೇಃ ಪೈತೃಮೇಧಿಕಸ್ಯ ಕರ್ಮೋಪಯುಕ್ತಶರೀರ ಪ್ರತಿಪತ್ಯರ್ಥತಾವಗಮಾತ್ । ತಾನಿ ಕರ್ಮಾಣಿ ತತ್ತದ್ಧರ್ಮಾನ್ವಿತಾನ್ಯೇವ ವಿಧೀಯಂತೇ । ನ ಪುನಃ ಶಾಸ್ತ್ರಾಧಿಕಾರ ರಹಿತಾನಾಮಪಿ । ನಾನುಪೇತಾನಾಂ ಕನ್ಯಾನಾಂ ವಾ ಪಿತೃಮೇಧೋ ದಹನ ಕಲ್ಪೇನ ನ ಕಲ್ಪೇರನ್ ಅನುಪೇತಾನ್ ಕನ್ಯಾಶ್ಚೇತಿ । ಶಾಸ್ತ್ರಾಧಿಕಾರ ರಹಿತಾನಾಮಂತೇ ನಿಷೇಧಾತ್ । ಅಥೈಕೇಷಾಂ ಕುಂಭಾಂತಮಿತ್ಯನುಷ್ಠಿತ ಕರ್ಮ ತಾರತಮ್ಯಾನುಸಾರೇಣ ಸಂಚಯನಾದಿ ಸಂಸ್ಕಾರ ತಾರತಮ್ಯ .

ವಿಧಾನಾಚ್ಚ । ತಸ್ಮಾತ್ ಖನನಾದೇಃ ಸಮನಂತರ ಸಂಸ್ಕಾರಸ್ಯ ಪರಲೋಕ ಜಯಾರ್ಥತ್ವಂ ತತಃ ಪರಸ್ಯ ಸಂಚಯನಾದೇಃ ಕರ್ಮೋಪಯುಕ್ತ ಶರೀರ ಪ್ರತಿಪತ್ಯರ್ಥತೇತಿ । ವಿವೇಕ ಉಪಪನ್ನಃ ॥

ಅನಂತರ ಈಗ ಪಿತೃಮೇಧವೆಂಬ ಹೆಸರಿನ ಮನುಷ್ಯ ಸಂಸ್ಕಾರವನ್ನು ಹೇಳುತ್ತೇವೆ । ಅದಕ್ಕೆ ಎರಡು ಪ್ರಯೋಜನ । ಪಾರಲೌಕಿಕ ಫಲವನ್ನು ಅನುಭವಿಸಲು ಯೋಗ್ಯತೆಯನ್ನು ಗಳಿಸುವುದು ಹಾಗೂ ತನ್ನ ಕರ್ಮಕ್ಕೆ ತಕ್ಕದಾದ ಶರೀರವನ್ನು ಪಡೆಯುವುದೇ ಆ ಪ್ರಯೋಜನಗಳು । ಇದನ್ನು ಆಚಾರ್ಯ ಗೋಪಾಲಮುನಿಗಳು ಹೇಳುತ್ತಾರೆ । ಆಪಸ್ತಂಬ ಧರ್ಮಸೂತ್ರಕಾರರೂ ಕೂಡ, ತಮ್ಮ 2 ನೇ ಪ್ರಶ್ನೆಯ 23 ನೇ ಖಂಡದ 12+13 ನೇ ಸೂತ್ರಗಳಲ್ಲಿ ಈ 2 ಪ್ರಯೋಜನಗಳನ್ನು ಹೇಳಿದ್ದಾರೆ । ಇನ್ನೂ **'ಸ್ಮಶಾನ'** ಎಂಬ ಹೆಸರಿನ **'ಇದು'** ವಿಧವಿಧವಾದ ಬೇರೆಬೇರೆ ಕರ್ಮಗಳ ಕೊನೆಯಲ್ಲಿ ಮನುಷ್ಯಸಂಸ್ಕಾರ ರೂಪವಾದ ವಿಧಿಯನ್ನು ಹೇಳುವುದಾಗಿದೆ । ನಂತರ ಉತ್ಕೃಷ್ಟವಾದ, ಅತ್ಯಂತ ಹೆಚ್ಚಿನದಾದ ಸ್ವರ್ಗಫಲವೂ ಕೂಡ ಇಲ್ಲಿ ಹೇಳಲ್ಪಟ್ಟಿದೆ । ಈ ವಿಷಯದಲ್ಲಿ ವಿಭಾಗವನ್ನು ಹೀಗೆ ಮಾಡಿಕೊಳ್ಳಬೇಕು । **ಖನನ – ದಹನ – ತ್ಯಾಗ,** ಎಂಬ 3 ವಿಧಿಗಳು ಹೇಳಲ್ಪಟ್ಟಿವೆಯೋ । ಇದರ ಫಲವು ಶರೀರಸಂಸ್ಕಾರ ಹಾಗೂ ಪರಲೋಕವನ್ನು ಪಡೆಯುವುದಾಗಿದೆ । ಈ ಸ್ಮಶಾನಕರ್ಮ ವಿಧಿಯಲ್ಲಿ ಬರುವ ಬೇರೇ ಸಂಚಯನಾದಿಗಳಿಗೆ । ತನ್ನ ಕರ್ಮಕ್ಕೆ ತಕ್ಕದಾದ ದೇಹವನ್ನು ಪಡೆಯುವುದು ಫಲವಾಗಿರುತ್ತದೆ । ಈ ಮರಣಾನಂತರ ಹೊಂದುವ ವಿಶೇಷ ಅವಸ್ಥೆಯನ್ನು ಕುರಿತು ಮಾಡಬೇಕಾದ ಸಂಸ್ಕಾರವು ಹೇಳಲ್ಪಡುತ್ತದೆ । ಅವು ಯಾವುವೆಂದರೆ, **ಖನನ – ದಹನ – ತ್ಯಾಗ,** ಎಂಬುದು । ಇವು 3 ಮೃತನಾದವನ ಪರಲೋಕ ಪ್ರಾಪ್ತಿಗೆ ಹೇಳಲ್ಪಟ್ಟಂತಹ ವಿಧಿಯು । ಈ 3 ರಿಂದಲೇ ಪರಲೋಕದ ಸುಖಗಳನ್ನು ಅನುಭವಿಸಲು ಯೋಗ್ಯತೆಯು ಬರುತ್ತದೆ । ಈ ಯಜ್ಞವನ್ನು ಆಯುಧ(ಸಾಧನ)ವಾಗಿ ಮಾಡಿಕೊಂಡ ಯಜಮಾನನು, **'ಅಂಗೈಮೇಲಿರುವ ನೆಲ್ಲಿಕಾಯಿಯಂತೆ ಸ್ವರ್ಗಲೋಕವನ್ನು ಪಡೆಯುತ್ತಾನೆ'** ಎಂಬ ಶ್ರುತಿಯಿರುವುದರಿಂದ । ಆ ಶ್ರುತಿಯ ನಂತರ ಬೇರೇ ಸೂತ್ರದಲ್ಲಿ ಅನಂತಫಲವಾದ ಸ್ವರ್ಗಶಬ್ದವು ಹೇಳಲ್ಪಟ್ಟಿದೆ ಎಂಬುದು ಸೂತ್ರಕಾರರ ಮಾತಿನಿಂದ ತಿಳಿದುಬರುತ್ತದೆ । ಮೃತನ ಸಂಸ್ಕಾರದಿಂದ ಸ್ವರ್ಗಲೋಕವನ್ನು ಪಡೆಯುತ್ತಾನೆ ಎಂದು । ಬೋಧಾಯನರ ವಚನದಿಂದಲೂ ಕೂಡ, ಈ ವಿಭಾಗವು ಹೊಂದುತ್ತದೆ । ಈ ವಿಷಯದಲ್ಲಿ ಸಂಸ್ಕಾರ

ತಾರತಮ್ಯತೆಯು ಇರುವುದರಿಂದ । ಪರಲೋಕದ ಸುಖಾನುಭವದ ತಾರತಮ್ಯತೆಯನ್ನು (ವ್ಯತ್ಯಾಸ) ನಾವು ತಿಳಿದುಕೊಳ್ಳಬೇಕು । ಆದ್ದರಿಂದಲೇ ಬ್ರಹ್ಮಮೇಧದಲ್ಲಿ **'ಯಜ್ಞಗಳಲ್ಲಿ ಉತ್ತಮವಾದಂತಹ ಯಜ್ಞ'** ಎಂದು ಹೇಳುತ್ತದೆ । ನಂತರ ಬ್ರಹ್ಮಮೇಧವನ್ನು ಚೆನ್ನಾಗಿ ಮಾಡಿದಮೇಲೆ । ಸಂಪೂರ್ಣ ಪುಣ್ಯಫಲಗಳನ್ನು ಅನುಭವಿಸಲು ಯೋಗ್ಯತೆಯು ಬರುತ್ತದೆ । ಇನ್ನು ಔರ್ಧ್ವದೈಹಿಕ ಕರ್ಮದ ಬೇರೆವಿಧಾನಗಳಲ್ಲಿ, ಆಯಾಯಾ ಕರ್ಮಕ್ಕೆ ಅನುಗುಣವಾಗಿ ಪುಣ್ಯಫಲವು ವ್ಯತ್ಯಾಸದಿಂದ ಕಡಿಮೆ ಎಂದು ತಿಳಿದುಕೊಳ್ಳಬೇಕು । ಈ ರೀತಿಯಾಗಿ ವಿಧಿಸಿರುವುದರಿಂದ, ಬೇರೇ ಪುಣ್ಯಕರ್ಮಗಳಿಗೆ ನಿಷ್ಫಲತೆ ಎಂದು ತಿಳಿಯಬೇಕಿಲ್ಲ । ಜನ್ಮಾಂತರಗಳಲ್ಲಿ, ಆ ಪುಣ್ಯಫಲಗಳನ್ನು ಅನುಭವಿಸುವುದು ಹೊಂದುತ್ತದೆಯಾದ್ದರಿಂದ । **'ಮೃತಸಂಸ್ಕಾರದಿಂದ ಸ್ವರ್ಗಲೋಕವು',** ಎಂಬ ಪ್ರಕರಣದಲ್ಲಿ ಮೃತಸಂಸ್ಕಾರ ಶಬ್ದವು ಖನನಾದಿರೂಪ ಸಂಸ್ಕಾರದ ನಂತರ ಕೇವಲ ಸಂಸ್ಕಾರವೆಂಬ ವಚನವಿರುವುದರಿಂದ ನೀವು ವಿಭಾಗಮಾಡಿದ್ದು ಸರಿಯಾಗಲಿಲ್ಲವಲ್ಲಾ ? । ಮತ್ತೆ ಈ ಸಂಸ್ಕಾರವಚನವು ಸಂಪೂರ್ಣ ಪಿತೃಮೇಧಕರ್ಮ ವಚನವಾಗಿರುವುದಿಲ್ಲ, ಆದ್ದರಿಂದಲೂ ನೀವು ಹೇಳುವುದು ಹೊಂದುವುದಿಲ್ಲವಲ್ಲಾ ?? ಎಂಬುದು ಪೂರ್ವಪಕ್ಷ(ಪ್ರಶ್ನೆ) । ಅದಕ್ಕೆ ಸಿದ್ಧಾಂತ(ಉತ್ತರ) – ನೀವು ಹೇಳುವುದು ಸರಿಯಲ್ಲ । ಸಂಚಯನಾದಿ ಪಿತೃಮೇಧಕರ್ಮದಿಂದ, ತನಗೆ ಅನುರೂಪವಾದ ಶರೀರವನ್ನು ಪಡೆಯುತ್ತಾರೆಂಬುದು ಆ ಕರ್ಮಕ್ಕೆ ವಿನಿಯೋಗಿಸುವ ಮಂತ್ರಗಳ ಅರ್ಥದಿಂದ ತಿಳಿಯುತ್ತಿದೆಯಾದ್ದರಿಂದ । ಆ ಕರ್ಮಗಳು, ಆಯಾಯಾ ಧರ್ಮಗಳಿಂದ ಕೂಡಿಯೇ ವಿಧಿಸಲ್ಪಡುತ್ತವೆ । ಶಾಸ್ತ್ರಾಧಿಕಾರ ರಹಿತವಾದಂತಹ(ಬಿಟ್ಟಂತಹ) ಕರ್ಮಗಳನ್ನು ಅಲ್ಲಿ ವಿಧಿಸುವುದಿಲ್ಲ । ಅನುಪನೀತರಿಗೆ ಅಥವಾ ಕನ್ಯೆಯರಿಗೆ ಪಿತೃಮೇಧವು ದಹನಕಲ್ಪದಿಂದ ವಿಧಿಸಿರುವುದಿಲ್ಲ, ಅದಕ್ಕೆ ವೇದದ(ಶ್ರುತಿ) ಪ್ರಮಾಣವು – **'ಅನುಪೇತಾನ್ ಕನ್ಯಾಶ್ಚ'** ಎಂದು । ಶಾಸ್ತ್ರಾಧಿಕಾರವಿಲ್ಲದವರಿಗೆ, ಮರಣಾನಂತರ ದಹನಕಲ್ಪವನ್ನು ನಿಷೇಧಿಸಿರುವುದರಿಂದ । ಮತ್ತು ಕೆಲವರಿಗೆ ಕುಂಭಾಂತವಾಗಿ ಔರ್ಧ್ವದೈಹಿಕಕರ್ಮವನ್ನು ತಾರತಮ್ಯದಿಂದ ವಿಧಿಸಿದೆ, ಹಾಗೆಯೇ ಸಂಚಯನಾದಿ ಸಂಸ್ಕಾರಗಳೂ ಕೂಡ ತಾರತಮ್ಯದಿಂದ(ವಿಭಾಗದಿಂದ) ವಿಧಿಸಿದೆ । ಆದ್ದರಿಂದ ಖನನಾದಿಗಳ ನಂತರ ವಿಧಿಸಿದ ದಹನ – ತ್ಯಾಗ ಸಂಸ್ಕಾರಗಳಿಗೆ ಫಲವು, ಪರಲೋಕಪ್ರಾಪ್ತಿಯು ಹಾಗೂ ನಂತರ ವಿಧಿಸಿದ ಸಂಚಯನಾದಿ ಸಂಸ್ಕಾರಗಳಿಗೆ, ತನ್ನ ಕರ್ಮಕ್ಕನುಗುಣವಾದಂತಹ ಶರೀರಪ್ರಾಪ್ತಿಯೇ ಫಲವು, ಎಂದು ವಿಭಾಗ ಮಾಡುವುದು ಯುಕ್ತವಾಗಿಯೇ ಇದೆ ॥

*** ಕಪರ್ದಿಭಾಷ್ಯಂ –**

ಪೈತೃಮೇಧಿಕಂ ಕರ್ಮ ವಕ್ಷ್ಯತೇ । ಪೂರ್ವೋಕ್ತಾನಿ ಕರ್ಮಾಣಿ ಜೀವತಾಂ ಪುರುಷಾಣಾಂ ಜಾತಕರ್ಮ ಪ್ರಭೃತೀನಿ ನಿತ್ಯ ನೈಮಿತ್ತಿಕ ಕಾಮ್ಯ ಪ್ರಾಯಶ್ಚಿತ್ತಾದೀನಿ ನಿತ್ಯಕರ್ಮಾಣಿ ಉಪನಯನಾಂತಾನಿ ಉಭಯಂ ಸಾಧಯಂತಿ । ಪುರುಷಸಂಸ್ಕಾರಾಶ್ಚ । ನಿತ್ಯಾನಿ ಬ್ರಹ್ಮಚರ್ಯಾಂತಾನಿ ಚೇತ್ಯನೃಣ ಸಂಸ್ತುತೇಃ । ತಥಾ ಸೋಮಾಂತಾನಿ ಪ್ರಜೋತ್ಪತ್ತಿಶ್ಚ । ಪ್ರಾಯಶ್ಚಿತ್ತಂ ತು ದ್ವಿವಿಧಂ । ಪುರುಷಾಪರಾಧೇ ಕರ್ಮಾಪರಾಧೇ ಚ । ಸರ್ವ ಸ್ಮೃತ್ಯುಕ್ತಾನಿ (ಜೀವತಾಂ) । ಅಥೇದಾನೀಂ ಮೃತಸ್ಯ ಕರ್ಮೋಚ್ಯತೇ । ಪುರುಷಾಹುತಿರ್ಹ್ಯಸ್ಯ ಪ್ರಿಯತಮೇತಿ ವಿಜ್ಞಾಯತೇ । ಪುರುಷಸ್ಯ ದಹನಂ ॥

ಪೈತೃಮೇಧಿಕಕರ್ಮವನ್ನು ಹೇಳುತ್ತೇವೆ । ಹಿಂದೆ ಹೇಳಿದ ಕರ್ಮಗಳು, ಜೀವಿಸಿರುವ ಮನುಷ್ಯರಿಗೆ ಜಾತಕರ್ಮ ಮುಂತಾದ ನಿತ್ಯ – ನೈಮಿತ್ತಿಕ – ಕಾಮ್ಯ – ಪ್ರಾಯಶ್ಚಿತ್ತವೇ ಮೊದಲಾದವುಗಳು ನಿತ್ಯಕರ್ಮಗಳು ಉಪನಯನದವರೆಗೆ ಇವು ಎರಡನ್ನೂ ಸಾಧಿಸುತ್ತವೆ । ಪುರುಷಸಂಸ್ಕಾರಗಳಾದ । ನಿತ್ಯವಾದ ಬ್ರಹ್ಮಚರ್ಯಾಂತವಾದಂತಹ ಕರ್ಮಗಳು, ಋಣವನ್ನು(ದೇವ–ಪಿತೃ–ಮನುಷ್ಯ) ಹೊಂದದ ಕರ್ಮಗಳು । ಹಾಗೂ ಸೋಮಾಂತವಾದಂತಹ ಕರ್ಮಗಳು ಹಾಗೂ ಪ್ರಜೆಗಳ ಉತ್ಪತ್ತಿ(ಇವು ಗೃಹಸ್ಥಕರ್ಮಗಳು), ಹೀಗೆ 2 ರೀತಿಯಾದಂತಹ ಕರ್ಮಗಳನ್ನೂ ಸಾಧಿಸುತ್ತವೆ । ಪ್ರಾಯಶ್ಚಿತ್ತವು 2 ವಿಧ । ಮನುಷ್ಯಾಪರಾಧದ ಪ್ರಾಯಶ್ಚಿತ್ತಗಳು ಮತ್ತು ಕರ್ಮಾಪರಾಧದ ಪ್ರಾಯಶ್ಚಿತ್ತಗಳು । ಸ್ಮೃತ್ಯುಕ್ತವಾದ ಇವೆಲ್ಲವೂ ಜೀವಿಸಿರುವ ಮನುಷ್ಯರಿಗೆ । ಈಗ ಮೃತನಾದವನಿಗೆ ಕರ್ಮವನ್ನು ಹೇಳುತ್ತೇವೆ । ಪುರುಷಾಹುತಿಯು, ಇವನಿಗೆ ಅತ್ಯಂತ ಪ್ರಿಯವು, ಎಂದು ವೇದವು ಹೇಳುತ್ತಿರುವುದರಿಂದ । ಪುರುಷಾಹುತಿಯೆಂದರೆ – ಪುರುಷನ(ಮನುಷ್ಯ) ದಹನವು ॥

*** ಸೂತ್ರಂ – 2 (ಆಹಿತಾಗ್ನಿ(ಅಗ್ನಿಹೋತ್ರಿ) ಮತ್ತು ಅನಾಹಿತಾಗ್ನಿ(ಲೌಕಿಕ)ಗಳಿಬ್ಬರಿಗೂ)**

ಆಹಿತಾಗ್ನೇರ್ಮರಣ ಸಂಶಯೇ ಪ್ರಾಚೀನಾವೀತೀ ದಹನದೇಶಂ ಜೋಪಯತೇ ದಕ್ಷಿಣಾಪ್ರತ್ಯಕ್ಪ್ರವಣಂ ಅನಿರಿಣಮಸುಶಿರಂ ಅನೂಶರಂ ಅಭಂಗುರಂ ಅನುಪಹತಂ ಅವಿಸ್ರಗ್ದಾರ್ಯ ಅನುಪಚ್ಛಿನ್ನ ಪ್ರವಣಮ್ ॥

ಆಹಿತಾಗ್ನಿಯು, ಮರಣವನ್ನು ಹೊಂದಿದಾಗ, ಪ್ರಾಚೀನಾವೀತಿಯಾಗಿ ದಹನಪ್ರದೇಶವನ್ನು ದಕ್ಷಿಣ ಮತ್ತು ಪಶ್ಚಿಮಕ್ಕೆ ತಗ್ಗಿರುವಂತೆ ಹಾಗೂ ಅನಿರಿಣವಾಗಿ(ಮುಳ್ಳು ಕಲ್ಲುಗಳಿಲ್ಲದ ಚೆನ್ನಾಗಿರುವ ಜಾಗ), ಅಸುಶಿರವಾಗಿ(ಪ್ರಾಣಿ–ಕೀಟಗಳಿಂದ ಬಿಲ/ ಗುಂಡಿಗಳು ಆಗದಿರುವ ಜಾಗ), ಅನೂಶರವಾಗಿ(ಬಂಜರುಭೂಮಿಯಲ್ಲದಂತೆ), ಅಭಂಗುರವಾಗಿ(ಉಬ್ಬು, ತಗ್ಗುಗಳಿಲ್ಲದೇ ಸಮತಟ್ಟಾಗಿ ಹಾಗೂ ನದೀಪ್ರವಾಹದಿಂದ ಕೊಚ್ಚಿ ಹೋಗದಿರುವ ಜಾಗ), ಅನುಪಹತವಾಗಿ(ಕೆತ್ತಿಲ್ಲದೇ ಇರುವಂತೆ ಮತ್ತು ಬೇರೇಯವರನ್ನು ದಹಿಸದ ಹಾಗೂ ಚಂಡಾಲಾದಿಗಳ ವಾಸಸ್ಥಾನವಾಗದಿರುವ), ಅವಿಸ್ರಕ್(ಕೆರೆಯ ಅಂಗಳವಾಗದಿರುವ), ಅನುಪಚ್ಛಿನ್ನವಾಗಿರುವಂತೆ(ಛಿದ್ರಛಿದ್ರ ವಾಗದಿರುವ) ಮಾಡಬೇಕು ॥

*** ಗೋಪಾಲಭಾಷ್ಯಂ**

ಆಹಿತಾಗ್ನೇಃ ಯದಾ ರೋಗಾದಿ ಹೇತುಭಿರ್ಮರಣ ಸಂಶಯಃ । ಮರಣಸಂದೇಹೋ ಭವತಿ। ತದಾ ತಸ್ಯ ದಹನದೇಶಂ ದಹನಾರ್ಥಮವಕಾಶಂ ಜೋಷಯತೇ ನಿಷೇವತೇ । ಪರಿಗೃಹ್ಣೀಯಾತ್ । ಕೀದೃಶಂ ದಕ್ಷಿಣಾಪ್ರತ್ಯಕ್ ಪ್ರವಣಂ । ದಕ್ಷಿಣಾಪರಸ್ಯಾಂದಿಶಿ ನಿಮ್ನತಾತಿಶಯಯುಕ್ತಂ । ಅನಿರಿಣ – ಯತ್ರ ತೃಣಾನೀನೋತ್ಪದ್ಯಂತೇ ತತ್ ಇರಿಣಂ । ತತಃ ಅನ್ಯದನಿರಿಣಂ । ಯತ್ರ ಮೂಷಿಕ ಕುಲೀರಾಖು ಕೀಟಾದಿಕೃತಂ ಸುಶಿರಂ ನ ವಿದ್ಯತೇ ತತ್ ಅಸುಶಿರಂ । ಊಷಾನಾಮ ಮೃದ್ವಿಶೇಷಾಃ । ಏತೇ ಯತ್ರ ನ ವಿದ್ಯಂತೇ ತದನೂಶರಂ । ಯತ್ರ ಶೈಥಿಲ್ಯಂ ನ ವಿದ್ಯತೇ ನ ಚ ನದೀಪ್ರವಾಹಾದಿಭಿಃ ಭವಿಷ್ಯತೀತಿ ಸಂಭಾವ್ಯತೇ ತತ್ ಅಭಂಗುರಂ । ಯತ್ಪುರುಷಾಂತರ ದಹನ ಚಂಡಾಲ ನಿವಾಸಾದಿಭಿಃ ಉಪಹತಂ ನ ಭವತಿ ತತ್ ಅನುಪಹತಂ । ಯತ್ರ ವಿವಿಧಂ ದರಣಂ ಪ್ರದರಾದಿಕಂ ವಿದಾರಣಂ ನ ವಿದ್ಯತೇ ತತ್ ಅವಿಸ್ರಗ್ದಾರ್ಯಂ । ಏವಂ ಲಕ್ಷಣಂ ದೇಶಂ ದಹನಾಯ ಪರಿಗೃಹ್ಣೀಯಾತ್ । ಕಃ ಪುನರತ್ರ ಪರಿಗೃಹೀತ । ಯೋ ದಹನಾದಿ ಸಂಸ್ಕಾರಸ್ಯ ಕರ್ತಾ ಸ್ಮರ್ಯತೇ ಸ ಇತ್ಯನುಸಂಧೇಯಮ್ ।

ಆಹಿತಾಗ್ನಿಯು ರೋಗಾದಿ ನಿಮಿತ್ತದಿಂದ ಮರಣಸಂಶಯವನ್ನು ಹೊಂದಿದಾಗ । ಎಂದರೆ ಮರಣಸಂದೇಹವು ಉಂಟಾದಾಗ । ಆಗ ಅವನ ದೇಹವನ್ನು ದಹನಮಾಡಲು, ಆ ದಹನಪ್ರದೇಶವನ್ನು ಯೋಗ್ಯವಾಗಿ ಸಿದ್ಧಮಾಡಿಕೊಳ್ಳಬೇಕು । ಹೇಗೆಂದರೆ – ದಕ್ಷಿಣ ಮತ್ತು ಪಶ್ಚಿಮದ ಕಡೆಗೆ ತಗ್ಗಿರುವಂತೆ ಮಾಡಿಕೊಳ್ಳಬೇಕು । ದಕ್ಷಿಣ – ಪಶ್ಚಿಮಕ್ಕೆ ತಗ್ಗುಳ್ಳಂತಹ ಪ್ರದೇಶವಾಗಿರುವಂತೆ ಮಾಡಬೇಕು । ಯಾವ ಜಾಗದಲ್ಲಿ ಹುಲ್ಲುಗಳು ಬೆಳೆಯುವುದಿಲ್ಲವೋ ಅವು ಇರಿಣ(ಮುಳ್ಳುಕಲ್ಲುಗಳಿಂದ ಕೂಡಿರುವ) ಪ್ರದೇಶ । ಅದಕ್ಕಿಂತ ಬೇರೆಯಾಗಿರುವುದೇ ಅನಿರಿಣವು(ಮುಳ್ಳುಕಲ್ಲುಗಳಿಲ್ಲದಿರುವುದು) । ಯಾವ ಜಾಗದಲ್ಲಿ ಇಲಿ–ಕೀಟಾದಿಗಳ ಬಿಲವು ಇರುವುದಿಲ್ಲವೋ ಅದು ಅಸುಶಿರವು । ಹಾಗೂ ಬಂಜರಭೂಮಿಯಲ್ಲವೋ ಅದು ಅನೂಷರವು । ಯಾವಜಾಗವು ನದೀಪ್ರವಾಹಗಳಿಂದ ಕೊಚ್ಚಿಹೋಗದೇ ಸಮವಾಗಿರುವುದೋ ಅದು ಅಭಂಗುರವು । ಯಾವ ಜಾಗದಲ್ಲಿ ಬೇರೆಯವರ ದಹನವಾಗಿ – ಸಂಚಯನವಾಗಿಲ್ಲವೋ ಹಾಗೂ ಚಂಡಾಲಾದಿಗಳ ವಾಸಸ್ಥಾನವಲ್ಲವೋ ಅದು ಅನುಪಹತವು । ಯಾವುದು ನಾನಾವಿಧವಾದ ಕೆರೆಗಳ ಅಂಗಳವಲ್ಲವೋ ಅದು ಅವಿಸ್ರಗ್ದಾರ್ಯವು । ಇಂತಹ ಜಾಗದಲ್ಲಿ ದಹನಕ್ಕೆ ಸಿದ್ಧತೆ ಮಾಡಬೇಕು(ದಹನ ಮಾಡಬೇಕು) । ಯಾರು ಈ ದಹನದ ಸಿದ್ಧತೆಯನ್ನು ಮಾಡಬೇಕೆಂದರೆ । ಯಾವನು ದಹನಾದಿಗಳಿಗೆ ಕರ್ತೃವೋ ಅವನೇ ಮಾಡಬೇಕೆಂದು ತಿಳಿಯಬೇಕು ॥

*** ತತ್ರಾಹ ಬೋಧಾಯನಃ –**

ತಸ್ಮಾನ್ಮಾತರಂ ಪಿತರಮಾಚಾರ್ಯಂ ಪತ್ನೀಂ ಪುತ್ರಂ ಶಿಷ್ಯಂ ಅಂತೇವಾಸಿನಂ ಪಿತೃವ್ಯಂ ಮಾತುಲಂ ಚ ಸಗೋತ್ರಂ ದಾಯಮುಪಗಚ್ಛಂತೋ ದಹನ ಸಂಸ್ಕಾರೇಣ ಸಂಸ್ಕುರ್ವಂತೀತಿ । ಏತೇನ ಮಾತ್ರಾದೀನಾಂ ಮೃತಾನಾಂ ಪುತ್ರಾದಯಃ ಪ್ರತಿಸಂಬಂಧಿನಃ ಸಂಸ್ಕಾರ ಇತಿ ಸಿದ್ಧಂ ಭವತಿ । ಏತಚ್ಚ ಸ್ಮೃತ್ಯಂತರೋಕ್ತಾನಾಂ ಪೌತ್ರಾದೀನಾಮಪಿ ಪ್ರದರ್ಶನಮ್ ॥

ಈ ವಿಷಯದಲ್ಲಿ ಬೋಧಾಯನರು ಹೀಗೆ ಹೇಳುತ್ತಾರೆ, ತಾಯಿ–ತಂದೆ–ಆಚಾರ್ಯರು–ಪತ್ನೀ–ಪುತ್ರ–ಶಿಷ್ಯ–ಬಳಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಶಿಷ್ಯ–ತಂದೆಯ ಸಹೋದರರು–ಸೋದರಮಾವ–ತನ್ನ ಗೋತ್ರದಲ್ಲಿ ಹುಟ್ಟಿದವರು–ತನ್ನ

ದಾಯಾದಿಗಳು, ಇವರೆಲ್ಲರಿಗೂ ದಹನಸಂಸ್ಕಾರವನ್ನು ಕರ್ತೃವಾಗಿ ಮಾಡಬಹುದು । ಇದರಿಂದ ಮೇಲೆ ಹೇಳಿದ ಮೃತರಾದ ತಾಯಿ ಮುಂತಾದವರಿಗೆ ಹಾಗೂ ಮೇಲೆಹೇಳಿದ ಸಂಬಂಧಿಕರಿಗೆ, ಮಗ ಮುಂತಾದವರು ಸಂಸ್ಕಾರವನ್ನು ಮಾಡಬಹುದೆಂದು ಸಿದ್ಧವಾಗುತ್ತದೆ । ಮತ್ತು ಬೇರೇಸ್ಮೃತಿಗಳಲ್ಲಿ ಹೇಳಿದಂತೆ, ಮಗನಮಗನಿಗೂ(ಪೌತ್ರ) ಅನ್ವಯಿಸುತ್ತದೆ ॥

*** ತತ್ರ ಅಯಂ ಸಂಗ್ರಹಃ –**

ಔರಸಃ ತತ್ಪುತ್ರಪೌತ್ರೌ ಪುತ್ರಿಕಾಪುತ್ರ ಕೃತ್ರಿಮೌ ।
ಅಪವಿದ್ಧಸ್ತಥಾಪತ್ನೀ ದೌಹಿತ್ರೋ ಭ್ರಾತೃ ತತ್ಸುತೌ ।
ಅಸೋದರ್ಯಭ್ರಾತೃತಜ್ಜೌ ಪಿತಾಮಾತಾ ಸಪತ್ನ್ಯತಃ ।
ಸ್ನುಷಾ ಸ್ವಸಾ ಚ ತತ್ಪುತ್ರಸ್ಸೋದರ್ಯಃ ಸ್ವಸೃತತ್ಸುತೌ ।
ಸಪಿಂಡಾಸ್ಸೋದಕಾ ಮಾತುಸ್ಸಪಿಂಡಾಸ್ಸೋದಕಾಸ್ತಥಾ ।
ಶಿಷ್ಯರ್ತ್ವಿಕ್ ಗುರು ಜಾಮಾತೃ ಸಖಿವಿತ್ತಾರ್ಥಿನಃ ಕ್ರಮಾತ್ ॥

ಅತ್ರಾಸಮಾವೃತ್ತಸ್ಯ ಬ್ರಹ್ಮಚಾರಿಣಃ ಶವ ಕರ್ಮಾನ್ವಯಃ ಪ್ರತಿಷಿಧ್ಯತೇ ।
ಅತೋನ್ಯಾನಿ ನಿವರ್ತಂತೇ ಬ್ರಹ್ಮಚಾರಿಣಃ ಕರ್ಮಾಣೀತಿ ॥

ಈ ವಿಷಯದಲ್ಲಿ ಮುಂದೆ ಹೇಳುವಂತೆ ಸಂಗ್ರಹಮಾಡಲಾಗಿದೆ –

ಮೃತನಿಗೆ ಪುತ್ರರು ಮೊದಲ ಕರ್ತೃಗಳು – ಅವನಿಲ್ಲದಿದ್ದರೆ ಮಗನಮಗ – ಅವನಿಲ್ಲದಿದ್ದರೆ ಮೊಮ್ಮಗನ ಮಗ – ಅವನಿಲ್ಲದಿದ್ದರೆ ಪುತ್ರಿಕಾಪುತ್ರ(ಗಂಡುಮಕ್ಕಳಿಲ್ಲದ ವರು, ಮಗಳ ವಿವಾಹದಲ್ಲಿ, ವಿಶೇಷ ಸಂಕಲ್ಪವನ್ನು ಮಾಡಿ, ಅದರಂತೆ ಹುಟ್ಟಿದ ಮಗಳಮಗ) – ಅವನೂ ಇಲ್ಲದಿದ್ದರೆ ಕೃತ್ರಿಮನು(ಮಗನಾಗಿ ಸ್ವೀಕರಿಸಿದ ಅನಾಥ ಬಾಲಕನು) ।

ಅವನೂ ಇಲ್ಲದಿದ್ದರೆ ಅಪವಿದ್ಧನು(ತಂದೆತಾಯಿಯರಿಂದ ಬಿಟ್ಟ ಮಗುವನ್ನು ಮಗನಾಗಿ ಸ್ವೀಕರಿಸಿದರೆ) – ಅವನೂ ಇಲ್ಲದಿದ್ದರೆ ಮೃತನಪತ್ನಿಯು – ಅವಳೂ

ಇಲ್ಲದಿದ್ದರೆ ಮಗಳಮಗನು – ಅವನಿಲ್ಲದಿದ್ದರೆ ಮೃತನ ಸ್ವಂತಅಣ್ಣತಮ್ಮಂದಿರು – ಅವರೂ ಇಲ್ಲದಿದ್ದರೆ ಅವರ ಮಕ್ಕಳು ।

ಅವರೂ ಇಲ್ಲದಿದ್ದರೆ ಮೃತನ ದೊಡ್ಡಪ್ಪಚಿಕ್ಕಪ್ಪರ ಮಕ್ಕಳು – ಅವರೂ ಇಲ್ಲದಿದ್ದರೆ ಅವರ ಮಕ್ಕಳು – ಇವರೂ ಇಲ್ಲದಿದ್ದರೆ ಮೃತನ ತಂದೆ ಅಥವಾ ತಾಯಿ – ಇವರೂ ಇಲ್ಲದಿದ್ದರೆ ಇವನು ಕಾಮ್ಯದಿಂದಾದ ಉಳಿದ ಹೆಂಡತಿಯರು(ಸಾಪತ್ನೀಮಾತೆಯರು) ।

ಇವರೂ ಇಲ್ಲದಿದ್ದರೆ ಸೊಸೆ – ನಂತರ ಅಕ್ಕ ತಂಗಿಯರು – ನಂತರ ಅವರಮಕ್ಕಳು – ತಾಯಿಯ ಅಕ್ಕ ತಂಗಿಯರ ಮಕ್ಕಳು ।

ಇವರೂ ಇಲ್ಲದಿದ್ದರೆ ತ್ರಿಪೌರುಷ ಜ್ಞಾತಿಗಳು – ಇವರೂ ಇಲ್ಲದಿದ್ದರೆ ತಾಯಿಯ ಸಂಬಂಧಿಗಳು ।

ಇವರೂ ಇಲ್ಲದಿದ್ದರೆ ಶಿಷ್ಯ – ಅವರೂ ಇಲ್ಲದಿದ್ದರೆ ಋತ್ವಿಜರು – ಅವರೂ ಇಲ್ಲದಿದ್ದರೆ ಗುರುಗಳು – ಇವರೂ ಇಲ್ಲದಿದ್ದರೆ ಮಗಳಗಂಡ (ಅಳಿಯ) – ಅವನೂ ಇಲ್ಲದಿದ್ದರೆ ಮೃತನಿಂದ ಸಹಾಯಪಡೆದವರು – ಹೀಗೆ ಕ್ರಮವಾಗಿ ಔರ್ಧ್ವದೈಹಿಕ ಕರ್ಮದ ಕರ್ತೃತ್ವವು ಬರುತ್ತದೆ ।

ಇನ್ನು ಸಮಾವರ್ತನೆಯಾಗಿ ಬ್ರಹ್ಮಚರ್ಯದಲ್ಲೇ ಇರುವವನಿಗೆ ಈ ಶವಕರ್ಮದ ಕರ್ತೃತ್ವವು ನಿಷೇಧವು । ಆದ್ದರಿಂದ ಇದಕ್ಕಿಂತ ಬೇರೆಯದಾದ ಕರ್ಮಗಳನ್ನು (ಅಪರಕರ್ಮವನ್ನು ಬಿಟ್ಟು) ಅವನು ಮಾಡಬಹುದಾಗಿದೆ ॥

*** ಆಪಸ್ತಂಬ ಧರ್ಮಸೂತ್ರಂ (ಪ್ರಶ್ನೆ 1, ಖಂಡ 5, ಸೂತ್ರ 10) –**

ಆದಿಷ್ಟೀನೋದಕಂ ಕುರ್ಯಾದಾವ್ರತಸ್ಯ ಸಮಾಪನಾದಿತಿ ಚ ॥

ಆಪಸ್ತಂಬ ಧರ್ಮಸೂತ್ರದಲ್ಲಿ – ವೇದೋಕ್ತವ್ರತವನ್ನು ಆಚರಿಸುತ್ತಿರುವವನು, ಆ ವ್ರತದ ಸಮಾಪ್ತಿಯಾಗುವವರೆಗೆ ಔರ್ಧ್ವದೈಹಿಕಕರ್ಮವನ್ನು ಮಾಡಬಾರದು ಎಂದು ಹೇಳಿದೆ ॥

*** ಮನುಸ್ಮೃತಿಃ (ಅಧ್ಯಾಯ 5, ಶ್ಲೋಕ 88) –**

ತತ್ರಾಯಮಪವಾದಃ –

ಮಾತಾಪಿತ್ರೋಶ್ಚ ತತ್ಪಿತ್ರೋಃ ಗುರೂಪಾಧ್ಯಾಯಯೋರಪಿ ।
ವ್ರತಸ್ಥೋ ಬ್ರಹ್ಮಚಾರೀ ಚ ಕುರ್ಯಾದೇವೌರ್ಧ್ವದೈಹಿಕಮ್ ॥

ಆದರೆ ಈ ವಿಷಯಕ್ಕೆ ಮನುಸ್ಮೃತಿಯಲ್ಲಿ ಅಪವಾದವಾಗಿ ಹೀಗಿದೆ – ತಾಯಿತಂದೆಯರ ಹಾಗೂ ಅವರ ತಾಯಿತಂದೆಯರ ಹಾಗೂ ಗುರುಗಳ, ಉಪಾಧ್ಯಾಯರ ಔರ್ಧ್ವದೈಹಿಕ ಕರ್ಮವನ್ನು ಬ್ರಹ್ಮಚಾರಿಯಾಗಿದ್ದರೂ, ವ್ರತಸ್ಥನಾಗಿದ್ದರೂ ಸಹಾ ಮಾಡಬೇಕು ॥

*** ತದಾಹ ಯಾಜ್ಞವಲ್ಕ್ಯಃ (ಪ್ರ–ಅ–ಶ್ಲೋಕ 15) –**

ಆಚಾರ್ಯ ಪಿತ್ರುಪಾಧ್ಯಾಯಾನ್ ನಿಹೃತ್ಯಾಪಿ ವ್ರತೀವ್ರತೀ ॥

ಯಾಜ್ಞವಲ್ಕ್ಯರು ಹೀಗೆ ಹೇಳುತ್ತಾರೆ – ಆಚಾರ್ಯ–ತಂದೆ–ಉಪಾಧ್ಯಾಯರು, ಇವರ ಔರ್ಧ್ವದೈಹಿಕಕರ್ಮವನ್ನು ವ್ರತವನ್ನು ಮಾಡುತ್ತಿದ್ದರೂ ಅದನ್ನು ನಿಲ್ಲಿಸಿ ಕರ್ಮವನ್ನು ಮಾಡಬೇಕು ॥

*** ವಸಿಷ್ಠಶ್ಚಾಹ –**

ಬ್ರಹ್ಮಚಾರಿಣಃ ಶವಕರ್ಮ ನಿವೃತ್ತಿರನ್ಯತ್ರ ಮಾತಾಪಿತ್ರೋರಿತಿ ॥

ವಸಿಷ್ಠರು ಹೀಗೆ ಹೇಳುತ್ತಾರೆ – ತಂದೆತಾಯಿಯರನ್ನು ಬಿಟ್ಟು, ಬೇರೆಯವರ ಔರ್ಧ್ವದೈಹಿಕ ಕರ್ಮವು ಬ್ರಹ್ಮಚಾರಿಗೆ ಇಲ್ಲಾ ॥

*** ಭವಿಷ್ಯತ್ಪುರಾಣೇಪ್ಯುಕ್ತಂ –**

ಯದಾ ವ್ರತಸ್ಥೋಪಿ ಸುತಃಪಿತುಃ ಕುರ್ಯಾತ್ ಕ್ರಿಯಾನೃಪ । ಮಾತಾಮಹಸ್ಯ ದಾಹಾದ್ಯಾ ದೌಹಿತ್ರೋಪಿ ತಥಾ ವ್ರತೀತಿ । ಔರಸಸ್ತ್ವನುಪೇತೋಪಿ ಮಾತಾಪಿತ್ರೋಸ್ಸಂಸ್ಕರ್ತಾ ಭವತಿ ॥

ಭವಿಷ್ಯತ್ಪುರಾಣದಲ್ಲಿ ಹೀಗೆ ಹೇಳಲಾಗಿದೆ – ಮಗನು ವ್ರತಸ್ಥನಾಗಿದ್ದರೂ ಕೂಡ, ತಂದೆಯ ಔರ್ಧ್ವದೈಹಿಕಕರ್ಮವನ್ನು ಮಾಡಬೇಕು। ತಾಯಿಯತಂದೆಯ(ಮಾತಾಮಹ) ಔರ್ಧ್ವದೈಹಿಕಕರ್ಮವನ್ನು ದೌಹಿತ್ರ(ಮಗಳಮಗ)ನು ವ್ರತದಲ್ಲಿದ್ದರೂ ಮಾಡಬೇಕು । ಮಗನಿಗೆ ಉಪನಯನವಾಗಿಲ್ಲದಿದ್ದರೂ, ತಂದೆ ತಾಯಿಯರ ಈ ಕರ್ಮದಲ್ಲಿ ಅವನೇ ಕರ್ತೃವು ॥

*** ತದಾಹ ಸುಮಂತುಃ –**

ಅನುಪೇತೋಪಿ ಕುರ್ವೀತ ಮಂತ್ರವತ್ಪೈತೃಮೇಧಿಕಂ ।
ಯದ್ಯಸೌಕೃತ ಚೂಡಸ್ಯಾದ್ಯದಿ ವಾ ಸ್ಯಾತ್ ತ್ರಿವತ್ಸರಂ ।
ತತ್ರಾಕೃತ ಚೌಲಸ್ಯ ಸ್ತ್ರಿಯಾಶ್ಚ ಕ್ಷೌರಂ ನ ವಿದ್ಯತೇ ।
ವಪನಂ ನೇಶ್ಯತೇ ಸೂನೋಶ್ಚೌಲಾತ್ ಪ್ರಾಕ್ ಪಿತೃದಾಹಿನಃ ।
ಇತ್ಯಾದಿ ವಚನಾತ್ ।

ಕಿಂ ಚ ಅನುಪೇತಸ್ಯ ಸ್ತ್ರಿಯಾಶ್ಚ ಸಂಸ್ಕರ್ತೃತ್ವೇ ಉಪೋಶನಮುದಕಂ ಪಿಂಡದಾನಂ ಚ ತತ್ ಕರ್ತೃಕಂ ಭವತಿ । ಅನ್ಯತ್ ಸರ್ವಂ ತದನಂತರ ಕರ್ಣ್ಯಾ ನಿಷ್ಠೇನ ಸಮಾವೃತ್ತೇನ ಕಾರ್ಯಮ್ ॥

ಸುಮಂತುವು ಹೀಗೆ ಹೇಳುತ್ತಾರೆ – ಉಪನಯನವಾಗಿಲ್ಲದಿದ್ದರೂ, ಔರ್ಧ್ವದೈಹಿಕಕರ್ಮವನ್ನು ಮಂತ್ರಪೂರ್ವಕವಾಗಿ ಮಾಡಬೇಕು। ಒಂದುವೇಳೆ ಇವನಿಗೆ ಚೌಲವಾಗದಿದ್ದರೆ ಅಥವಾ 3 ವರ್ಷದವನಾಗಿದ್ದರೂ ಮಂತ್ರಸಹಿತವೇ ಈ ಕರ್ಮವನ್ನು ಮಾಡಬೇಕು। ಚೌಲವಾಗದಿರುವ ಕರ್ತೃವಿಗೆ ಹಾಗೂ ಕಾರಣಾಂತರಗಳಿಂದ ಕರ್ತೃವಾದ ಸ್ತ್ರೀಯರಿಗೂ ಕ್ಷೌರಕರ್ಮವು ಇರುವುದಿಲ್ಲ । ಏಕೆಂದರೆ – ಚೂಡಾಕರ್ಮಕ್ಕಿಂತ ಮೊದಲು, ತಂದೆಯ ಔರ್ಧ್ವದೈಹಿಕ ಕರ್ಮವನ್ನು ಮಾಡುವವನಿಗೆ ಕ್ಷೌರವು ಇಲ್ಲ, ಎಂಬ ಶ್ರುತಿಯಿರುವುದರಿಂದ । ಉಪನಯನವಾಗದಿರುವ ಹಾಗೂ ಸ್ತ್ರೀ ಕರ್ತೃವಿಗೆ, ಉಪೋಶನ(ಉಪವಾಸ), ಉದಕದಾನ, ಪಿಂಡದಾನಗಳು ಉಂಟು । ಇನ್ನು, ಬೇರೆ ಎಲ್ಲಾ ವಿಧಿಗಳನ್ನು ಗುರುಕುಲದಿಂದ ಮರಳಿಬಂದಿರುವ, ಸಮಾವರ್ತನೆಯಾದವನೂ ಸಹ ಮಾಡಬೇಕು ॥

*** ತದಾಹ ಕಾತ್ಯಾಯನಃ –**

ಅಸಂಸ್ಕೃತೇನ ಪತ್ನ್ಯಾ ಚ ಹ್ಯಗ್ನಿದಾನಂ ಸಮಂತ್ರಕಂ ।
ಕರ್ತವ್ಯಮಿತರತ್ಸರ್ವಂ ಕಾರಯೇದನ್ಯಮೇವತು ॥

ಕಾತ್ಯಾಯನರು ಹೀಗೆ ಹೇಳುತ್ತಾರೆ – ಸಂಸ್ಕಾರವಾಗದೇ ಇರುವವನು ಹಾಗೂ ಪತ್ನಿಯು ದಹನವನ್ನು ಸಮಂತ್ರಕವಾಗಿ ಮಾಡಬೇಕು । ಇನ್ನು ಉಳಿದ ವಿಧಿಗಳನ್ನು ಬೇರೆಯವರ ಮೂಲಕ ಮಾಡಿಸಬೇಕು ॥

*** ತಥಾ ಪ್ರಾಗುಪನಯನಾದಿತ್ಯಧಿಕೃತ್ಯಾಹ ಗೌತಮಃ –**

ನ ಬ್ರಹ್ಮಾಭಿವ್ಯಾಹಾರಯೇತ್ ಅನ್ಯತ್ರ ಸ್ವಧಾ ನಿನಯನಾದಿತಿ ॥

ಹಾಗೆಯೇ ಉಪನಯನಕ್ಕಿಂತ ಮುಂಚೆ, ಎಂದು ಅನುಪನೀತನ ವಿಷಯವನ್ನು ತೆಗೆದುಕೊಂಡು ಗೌತಮರು, 'ಸ್ವಧಾ ನಿನಯನವನ್ನು(ಪಿತೃಕರ್ಮವನ್ನು) ಬಿಟ್ಟು, ಬೇರೇ ಕರ್ಮಗಳಲ್ಲಿ ಅನುಪನೀತನಾದವನು ವೇದವನ್ನು ಹೇಳಬಾರದು' ಹೇಳಿದ್ದಾರೆ ॥

*** ಸ್ಕಾಂದಪುರಾಣೇಪ್ಯುಕ್ತಂ –**

ಯಜ್ಞೇಷು ಮಂತ್ರವತ್ ಕರ್ಮ ಪತ್ನೀ ಕುರ್ಯಾದ್ಯಥಾವಿಧಿ ।
ತದೌರ್ಧ್ವದೈಹಿಕೇ ಸಾ ಹಿ ಮಂತ್ರಾರ್ಹಾ ಧರ್ಮಸಂಮತೇತಿ ॥

ಸ್ಕಂದಪುರಾಣದಲ್ಲಿ ಹೀಗೆ ಹೇಳಿದೆ – ಯಜ್ಞಗಳಲ್ಲಿ ಯಥಾವಿಧಿಯಂತೆ ಮಂತ್ರ ಪೂರ್ವಕವಾಗಿ ಪತ್ನಿಯು ಆಯಾ ಕರ್ಮಗಳನ್ನು ಮಾಡಬೇಕು । ಔರ್ಧ್ವದೈಹಿಕ ಕರ್ಮ ದಲ್ಲೂ ಅವಳು ಮಂತ್ರಸಹಿತವಾಗಿ ಸಂಸ್ಕಾರವನ್ನು ಮಾಡಲು ಯೋಗ್ಯಳಾಗಿರುತ್ತಾಳೆ ॥

*** ಅತ ಏವ ಹಿ ಸ್ಮರ್ಯತೇ –**

ಅಸಗೋತ್ರಸ್ಸಗೋತ್ರೋ ವಾ ಯದಿ ಸ್ತ್ರೀ ಯದಿ ವಾ ಪುಮಾನ್ ।
ಪ್ರಥಮೇಹನಿ ಯೋ ದದ್ಯಾತ್ ಸ ದಶಾಹಂ ಸಮಾಪಯೇದಿತಿ ॥

ಭವಿಷ್ಯತ್ಪುರಾಣದಲ್ಲಿ ಹೀಗೆ ಹೇಳಲಾಗಿದೆ – ಮಗನು ವ್ರತಸ್ಥನಾಗಿದ್ದರೂ ಕೂಡ, ತಂದೆಯ ಔರ್ಧ್ವದೈಹಿಕಕರ್ಮವನ್ನು ಮಾಡಬೇಕು। ತಾಯಿಯತಂದೆಯ(ಮಾತಾಮಹ) ಔರ್ಧ್ವದೈಹಿಕಕರ್ಮವನ್ನು ದೌಹಿತ್ರ(ಮಗಳಮಗ)ನು ವ್ರತದಲ್ಲಿದ್ದರೂ ಮಾಡಬೇಕು । ಮಗನಿಗೆ ಉಪನಯನವಾಗಿಲ್ಲದಿದ್ದರೂ, ತಂದೆ ತಾಯಿಯರ ಈ ಕರ್ಮದಲ್ಲಿ ಅವನೇ ಕರ್ತೃವು ॥

*** ತದಾಹ ಸುಮಂತುಃ –**

ಅನುಪೇತೋಪಿ ಕುರ್ವೀತ ಮಂತ್ರವತ್ಪ್ರೈತೃಮೇಧಿಕಂ ।
ಯದ್ಯಸೌಕೃತ ಚೂಡಸ್ಯಾದ್ಯದಿ ವಾ ಸ್ಯಾತ್ ತ್ರಿವತ್ಸರಂ ।
ತತ್ರಾಕೃತ ಚೌಲಸ್ಯ ಸ್ತ್ರಿಯಾಶ್ಚ ಕ್ಷೌರಂ ನ ವಿದ್ಯತೇ ।
ವಪನಂ ನೇಶ್ಯತೇ ಸೂನೋಶ್ಚೌಲಾತ್ ಪ್ರಾಕ್ ಪಿತೃದಾಹಿನಃ ।
ಇತ್ಯಾದಿ ವಚನಾತ್ ।

ಕಿಂ ಚ ಅನುಪೇತಸ್ಯ ಸ್ತ್ರಿಯಾಶ್ಚ ಸಂಸ್ಕರ್ತೃತ್ವೇ ಉಪೋಶನಮುದಕಂ ಪಿಂಡದಾನಂ ಚ ತತ್ ಕರ್ತೃಕಂ ಭವತಿ । ಅನ್ಯತ್ ಸರ್ವಂ ತದನಂತರ ಕರ್ಣ್ಯಾ ನಿಷ್ಠೇನ ಸಮಾವೃತ್ತೇನ ಕಾರ್ಯಮ್ ॥

ಸುಮಂತುವು ಹೀಗೆ ಹೇಳುತ್ತಾರೆ – ಉಪನಯನವಾಗಿಲ್ಲದಿದ್ದರೂ, ಔರ್ಧ್ವದೈಹಿಕಕರ್ಮವನ್ನು ಮಂತ್ರಪೂರ್ವಕವಾಗಿ ಮಾಡಬೇಕು । ಒಂದುವೇಳೆ ಇವನಿಗೆ ಚೌಲವಾಗದಿದ್ದರೆ ಅಥವಾ 3 ವರ್ಷದವನಾಗಿದ್ದರೂ ಮಂತ್ರಸಹಿತವೇ ಈ ಕರ್ಮವನ್ನು ಮಾಡಬೇಕು। ಚೌಲವಾಗದಿರುವ ಕರ್ತೃವಿಗೆ ಹಾಗೂ ಕಾರಣಾಂತರಗಳಿಂದ ಕರ್ತೃವಾದ ಸ್ತ್ರೀಯರಿಗೂ ಕ್ಷೌರಕರ್ಮವು ಇರುವುದಿಲ್ಲ । ಏಕೆಂದರೆ – ಚೂಡಾಕರ್ಮಕ್ಕಿಂತ ಮೊದಲು, ತಂದೆಯ ಔರ್ಧ್ವದೈಹಿಕ ಕರ್ಮವನ್ನು ಮಾಡುವವನಿಗೆ ಕ್ಷೌರವು ಇಲ್ಲ, ಎಂಬ ಶ್ರುತಿಯಿರುವುದರಿಂದ । ಉಪನಯನವಾಗದಿರುವ ಹಾಗೂ ಸ್ತ್ರೀ ಕರ್ತೃವಿಗೆ, ಉಪೋಶನ(ಉಪವಾಸ), ಉದಕದಾನ, ಪಿಂಡದಾನಗಳು ಉಂಟು । ಇನ್ನು, ಬೇರೆ ಎಲ್ಲಾ ವಿಧಿಗಳನ್ನು ಗುರುಕುಲದಿಂದ ಮರಳಿಬಂದಿರುವ, ಸಮಾವರ್ತನೆಯಾದವನೂ ಸಹ ಮಾಡಬೇಕು ॥

*** ತದಾಹ ಕಾತ್ಯಾಯನಃ –**

ಅಸಂಸ್ಕೃತೇನ ಪತ್ನ್ಯಾ ಚ ಹ್ಯಗ್ನಿದಾನಂ ಸಮಂತ್ರಕಂ ।
ಕರ್ತವ್ಯಮಿತರತ್ಸರ್ವಂ ಕಾರಯೇದನ್ಯಮೇವತು ॥

ಕಾತ್ಯಾಯನರು ಹೀಗೆ ಹೇಳುತ್ತಾರೆ – ಸಂಸ್ಕಾರವಾಗದೇ ಇರುವವನು ಹಾಗೂ ಪತ್ನಿಯು ದಹನವನ್ನು ಸಮಂತ್ರಕವಾಗಿ ಮಾಡಬೇಕು । ಇನ್ನು ಉಳಿದ ವಿಧಿಗಳನ್ನು ಬೇರೆಯವರ ಮೂಲಕ ಮಾಡಿಸಬೇಕು ॥

*** ತಥಾ ಪ್ರಾಗುಪನಯನಾದಿತ್ಯಧಿಕೃತ್ಯಾಹ ಗೌತಮಃ –**

ನ ಬ್ರಹ್ಮಾಭಿವ್ಯಾಹಾರಯೇತ್ ಅನ್ಯತ್ರ ಸ್ವಧಾ ನಿನಯನಾದಿತಿ ॥

ಹಾಗೆಯೇ ಉಪನಯನಕ್ಕಿಂತ ಮುಂಚೆ, ಎಂದು ಅನುಪನೀತನ ವಿಷಯವನ್ನು ತೆಗೆದುಕೊಂಡು ಗೌತಮರು, 'ಸ್ವಧಾ ನಿನಯನವನ್ನು(ಪಿತೃಕರ್ಮವನ್ನು) ಬಿಟ್ಟು, ಬೇರೇ ಕರ್ಮಗಳಲ್ಲಿ ಅನುಪನೀತನಾದವನು ವೇದವನ್ನು ಹೇಳಬಾರದು' ಹೇಳಿದ್ದಾರೆ ॥

*** ಸ್ಕಾಂದಪುರಾಣೇಪ್ಯುಕ್ತಂ –**

ಯಜ್ಞೇಷು ಮಂತ್ರವತ್ ಕರ್ಮ ಪತ್ನೀ ಕುರ್ಯಾದ್ಯಥಾವಿಧಿ ।
ತದೌರ್ಧ್ವದೈಹಿಕೇ ಸಾ ಹಿ ಮಂತ್ರಾರ್ಹಾ ಧರ್ಮಸಂಮತೇತಿ ॥

ಸ್ಕಂದಪುರಾಣದಲ್ಲಿ ಹೀಗೆ ಹೇಳಿದೆ – ಯಜ್ಞಗಳಲ್ಲಿ ಯಥಾವಿಧಿಯಂತೆ ಮಂತ್ರ ಪೂರ್ವಕವಾಗಿ ಪತ್ನಿಯು ಆಯಾ ಕರ್ಮಗಳನ್ನು ಮಾಡಬೇಕು । ಔರ್ಧ್ವದೈಹಿಕ ಕರ್ಮ ದಲ್ಲೂ ಅವಳು ಮಂತ್ರಸಹಿತವಾಗಿ ಸಂಸ್ಕಾರವನ್ನು ಮಾಡಲು ಯೋಗ್ಯಳಾಗಿರುತ್ತಾಳೆ ॥

*** ಅತ ಏವ ಹಿ ಸ್ಮರ್ಯತೇ –**

ಅಸಗೋತ್ರಸ್ಸಗೋತ್ರೋ ವಾ ಯದಿ ಸ್ತ್ರೀ ಯದಿ ವಾ ಪುಮಾನ್ ।
ಪ್ರಥಮೇಹನಿ ಯೋ ದದ್ಯಾತ್ ಸ ದಶಾಹಂ ಸಮಾಪಯೇದಿತಿ ॥

ಔರಸಾಭಾವೇ ತತ್ಪುತ್ರಃ । ತಸ್ಯಾಪ್ಯಭಾವೇ ಔರಸಸ್ಯ ಪೌತ್ರಃ । ತೇಷಾಮಭಾವೇ ಪುತ್ರಿಕಾಪುತ್ರಃ । ತತ್ರದ್ವೇಧಾವಿಗ್ರಹಃ ಪುತ್ರಿಕಾಯಾಃ ಪುತ್ರಃ ಪುತ್ರಿಕೈವ ಪುತ್ರ ಇತಿ ಚ । ತತ್ರ ಪ್ರಥಮೇ ಕಲ್ಪೇ ದುಹಿತುಃ ಪ್ರದಾನಸಮಯೇ ತಸ್ಯಾಂ ಜನಿಷ್ಯಮಾಣಃ ಸ್ವಸ್ಯ ಪುತ್ರೋ ಭವತ್ವಿತಿ ಸಂಕಲ್ಪಪೂರ್ವಕಂ ದತ್ತಾಯಾಂ ಜಾತಃ ಪುತ್ರಿಕಾ ಪುತ್ರಃ ॥

ಆದ್ದರಿಂದಲೇ ಹೀಗೆ ಶ್ರುತಿ ಇದೆ – ಮೃತನ ಗೋತ್ರದವರಾದ ಅಥವಾ ಬೇರೇಗೋತ್ರದವರಾದ, ಸ್ತ್ರೀ ಅಥವಾ ಪುರುಷ ಕರ್ತೃಗಳು । ಈ ಕರ್ಮದಲ್ಲಿ, ಮೊದಲದಿನ ಯಾರು ತಿಲಪಿಂಡಾದಿಗಳನ್ನು ಕೊಡುತ್ತಾರೋ ಅವರೇ ಅಷ್ಟುದಿನಗಳೂ ಕೂಡ ಕರ್ಮವನ್ನು ಮಾಡಬೇಕು ಎಂದು । ಮಗನಿಲ್ಲದಿದ್ದರೆ, ಅವನಮಗನು ಕರ್ಮವನ್ನು ಮಾಡಬೇಕು । ಅವನೂ ಇಲ್ಲದಿದ್ದರೆ, ಅವನ ಮಗನು । ಇವರು ಯಾರೂ ಇಲ್ಲದಿದ್ದರೆ ಮಗಳಮಗನು । ಇಲ್ಲಿ 2 ರೀತಿಯಾಗಿ ವಿಗ್ರಹವಾಕ್ಯವನ್ನು ಮಾಡುತ್ತಾರೆ, ಮಗಳಮಗನು ಅಥವಾ ಮಗಳೇಮಗನು । ಇದರಲ್ಲಿ ಮೊದಲನೇ ವಿಗ್ರಹವಾಕ್ಯದಂತೆ ಮಾಡಿದರೆ – ಮಗಳನ್ನು ಮದುವೆಮಾಡಿಕೊಡುವ ಸಮಯದಲ್ಲಿ ಅವಳಿಗೆ ಹುಟ್ಟುವ ಮಗನು ನನಗೆ ಮಗನಾಗಲಿ, ಎಂದು ಸಂಕಲ್ಪಮಾಡಿ ಮಗಳನ್ನು ಮದುವೆಮಾಡಿಕೊಟ್ಟು, ಅವಳಲ್ಲಿ ಜನಿಸಿದ ಮಗನು, ಇವನಿಗೆ **'ಪುತ್ರಿಕಾಪುತ್ರ'** ಎಂದು ಹೆಸರು ॥

*** ತತ್ರಾಹ ವಸಿಷ್ಠಃ –**

ಅಭ್ರಾತೃಕಾಂ ಪ್ರದಾಸ್ಯಾಮಿ ತುಭ್ಯಂ ಕನ್ಯಾಮಲಂಕೃತಾಂ ।
ಅಸ್ಯಾಂ ಯೋ ಜಾಯತೇ ಪುತ್ರಃ ಸ ಮೇ ಪುತ್ರೋ ಭವೇದಿತಿ ।
ಸ ಮಾತಾಮಹ ಕುಲೀನ ಏವ ॥

ಈ ವಿಷಯದಲ್ಲಿ ವಸಿಷ್ಠರು ಹೀಗೆ ಹೇಳುತ್ತಾರೆ – ಅಣ್ಣತಮ್ಮಂದಿರಿಲ್ಲದ, ಅಲಂಕೃತವಾದ ಕನ್ಯೆಯನ್ನು ಎಲೈ ವರನೇ ನಿನಗೆ ಮದುವೆಮಾಡಿಕೊಡುತ್ತಿದ್ದೇನೆ । **'ಇವಳಲ್ಲಿ ಹುಟ್ಟಿದ ಮಗನು ನನ್ನ ಮಗನಾಗಬೇಕು'** ಎಂದು ಸಂಕಲ್ಪಿಸಿ । ಮದುವೆ

ಮಾಡಿದ ಇಂತಹ ಮಗಳಲ್ಲಿ ಹುಟ್ಟಿದ ಮಗನು, ತನ್ನ(ಮಗುವಿನ) ಮಾತಾಮಹನ ವಂಶಕ್ಕೆ ಸೇರುತ್ತಾನೆ ॥

*** ಕಾತ್ಯಾಯನಸ್ತ್ವೇನಂ ದ್ವ್ಯಾಮುಷ್ಯಾಯನ ಮಾಹ –**

ಅಪುತ್ರೋಹಂ ಪ್ರದಾಸ್ಯಾಮಿ ತುಭ್ಯಂ ಕನ್ಯಾಂ ಭವಾನಪಿ ।
ಪುತ್ರಾರ್ಥೀಚೇದಿಹೋತ್ಪನ್ನಸ್ತವ ಪುತ್ರೋಭವೇದಿತಿ ॥

ತಸ್ಮಾದಸ್ಮಿನ್ ಪಕ್ಷೇ ದುಹಿತೃ ಪ್ರದಾನ ಸಮಯೇ ತಥೈವ ಸಂಕಲ್ಪಃ । ಯದ್ಯೇವಂ ಪ್ರದತ್ತಾ ದುಹಿತಾ ಪಿತೃಮರಣ ಸಮಯೇ ಅಪುತ್ರಾಸ್ಯಾತ್ ತದಾ ಸಾ ಪುತ್ರಿಕೇತ್ಯುಚ್ಯತೇ ॥

ಕಾತ್ಯಾಯನರು ದ್ವ್ಯಾಮುಷ್ಯಾಯನರಿಗೆ ಹೀಗೆ ಹೇಳುತ್ತಾರೆ – ಮಗನಿಲ್ಲದ ನಾನು, ನಿನಗೆ ಕನ್ಯೆಯನ್ನು ಮದುವೆಮಾಡಿ ಕೊಡುತ್ತಿದ್ದೇನೆ । 'ನೀನು ಮಗನನ್ನು ಪಡೆಯಲು ಇಚ್ಛೆಯುಳ್ಳವನಾಗಿದ್ದರೆ, ಈ ನನ್ನ ಮಗಳಲ್ಲಿ ವರನಾದ ನಿನ್ನಿಂದ ಜನಿಸಿದ ಮಗನು ಇಬ್ಬರಿಗೂ ಮಗನಾಗಬೇಕು' ಎಂದು ಸಂಕಲ್ಪಮಾಡಬೇಕು । ಆದ್ದರಿಂದ ಈ ಪಕ್ಷದಲ್ಲಿ, ಮಗಳನ್ನು ಮದುವೆಮಾಡಿಕೊಡುವ ಸಮಯದಲ್ಲಿ, ಮೇಲೆಹೇಳಿದಂತೆ ಸಂಕಲ್ಪಿಸಬೇಕು । ಹೀಗೆ ಸಂಕಲ್ಪಿಸಿ ಮದುವೆಮಾಡಿಕೊಟ್ಟ ಮಗಳು ತನ್ನ ತಂದೆಯ ಮರಣಸಮಯದಲ್ಲಿ, ತನಗೆ ಮಕ್ಕಳಿಲ್ಲದಿದ್ದರೆ(ಮಗ) ಆಗ ಅವಳೇ **'ಪುತ್ರಿಕಾ'** ಎಂದು ಹೇಳಲ್ಪಡುತ್ತಾಳೆ(ಒಂದುವೇಳೆ ಅವಳಿಗೆ ಮಗನಿದ್ದರೆ, ಆಗ ಅವನೇ **ಪುತ್ರಿಕಾಪುತ್ರ** ಎನಿಸಿಕೊಳ್ಳುತ್ತಾನೆ) ॥

*** ತದಾಹ ವಸಿಷ್ಠಃ –**

ತೃತೀಯಃ ಪುತ್ರಃ ಪುತ್ರಿಕೈವೇತಿ । ಯೇ ತು ಬೀಜಜ ಕ್ಷೇತ್ರಜಾದಯಃ ಪುತ್ರಾಃ ಸ್ಮೃತ್ಯಂತರೇಷೂಚ್ಯಂತೇ । ತೇ ತ್ವಸ್ಮಾಕಂ ನ ಭವಂತಿ । ಪೂರ್ವವತ್ಯಾಂ ಅಸಂಸ್ಕೃತಾಯಾಮಿತಿ ತನ್ನಿಷೇಧಾತ್ । ನ ಚಾನ್ಯ ಬೀಜಜಃ ಕ್ಷೇತ್ರಿಣಃ

ಕ್ಷೇತ್ರಜಾಖ್ಯಃ ಪುತ್ರೋಭವತಿ । ಯದಾ ಯಮಸ್ಯ ಸಾದನೇ ಜನಯಿತುಃ ಪುತ್ರಮಬ್ರುವನ್ನಿತಿ ತನ್ನಿರಾಸಾತ್ । ನ ಚ ಪರ ನಿಯೋಗಾದುತ್ಪನ್ನಸ್ಸಂಭವೀ ॥

ವಸಿಷ್ಠರು ಹೀಗೆ ಹೇಳುತ್ತಾರೆ – 3 ನೆಯ ಪಕ್ಷದಲ್ಲಿ, ಆ ಮಗಳಿಗೆ(ಪುತ್ರಿಕೆಗೆ) ಒಂದುವೇಳೆ ಮಗನು ಹುಟ್ಟದಿದ್ದರೆ, ಆಗ ಅವಳೇ(ಪುತ್ರಿಕೆಯೇ) ಮಗನಂತೆ ಆಗುತ್ತಾಳೆ । ಇನ್ನೂ ಬೇರೆ ಸಂದರ್ಭದಲ್ಲಿ ಅನ್ಯ ಹೆಂಗಸಿಗೆ ಇವನಿಂದ ಹುಟ್ಟಿದ ಮಕ್ಕಳು ಇವನ ಔರ್ಧ್ವದೈಹಿಕ ಕರ್ಮದ ಕರ್ತೃತ್ವಕ್ಕೆ ಅರ್ಹರು । ಆದರೆ ಇದು ನಮ್ಮ ಅಭಿಪ್ರಾಯವಲ್ಲ । ಏಕೆಂದರೆ, ಇಂತಹಾ ಸಂತತಿಗೆ ಇವನಿಂದ ಸಂಸ್ಕಾರವಾಗಿರುವುದಿಲ್ಲವಾದ್ದರಿಂದ । ಮತ್ತೂ ತನಗೆ ಮಕ್ಕಳನ್ನು ಮಾಡುವ ಸಾಮರ್ಥ್ಯವಿಲ್ಲದಾದಾಗ, ತನ್ನ ಗೋತ್ರದ , ತನ್ನ ವಂಶಸ್ಥರಲ್ಲಿ ತನ್ನ ಹೆಂಡತಿಯನ್ನು ಮಕ್ಕಳನ್ನು ಪಡೆಯುವುದಕ್ಕಾಗಿ ನಿಯೋಜಿಸಿದರೆ ಅಥವಾ ಗಂಡನ ಮರಣಾನಂತರ ಮಕ್ಕಳಿಲ್ಲದ ಆ ಮೃತನ ಹೆಂಡತಿಯು ತನ್ನ ಗೋತ್ರದವರ ಜೊತೆ ಅಥವಾ ವಂಶಸ್ಥರ ಜೊತೆ ಮಕ್ಕಳನ್ನು ಪಡೆದುಕೊಂಡರೆ, ಅಂತಹಾ ಮಗುವಿಗೆ **ಕ್ಷೇತ್ರಜಾ** ಎಂದು ಹೆಸರು. **ಹಾಗಾಗಿ ತನ್ನಿಂದ ಧರ್ಮಯುಕ್ತವಾಗಿ ಜನಿಸಿದ ಸಂತತಿಗೆ ಮಾತ್ರ ಈ ಸಂಸ್ಕಾರಕ್ಕೆ ಕರ್ತೃವಾಗಲು ಅರ್ಹತೆಯು ಇದೆ,** ಎಂಬ ಮಾತಿಗೆ ಅನುಗುಣವಾಗಿ ಮೃತನಿಗೆ ಬೇರೆಯವಳಿಂದ ಹುಟ್ಟಿದ ಸಂತತಿಗೆ ಈ ಕರ್ಮದ ಕರ್ತೃತ್ವವನ್ನು ನಿಷೇಧಿಸಲಾಗಿದೆ । ಅಷ್ಟೇಅಲ್ಲದೇ **ನಿಯೋಗ ಕ್ರಮದಿಂದ** ಜನಿಸಿದ ಸಂತತಿಗೂ ಕರ್ತೃತ್ವದ ಅಧಿಕಾರವಿಲ್ಲ ॥

*** ಆಪಸ್ತಂಬ ಧರ್ಮಸೂತ್ರಂ (ಪ್ರಶ್ನೆ 2, ಖಂಡ 27, ಸೂತ್ರ 4–5) –**

ತದಿಂದ್ರಿಯ ದೌರ್ಬಲ್ಯಾದ್ವಿಪ್ರತಿಪನ್ನಂ ಅವಿಶಿಷ್ಟಂ ಹಿ ಪರತ್ವಂ ಪಾಣೇರಿತಿ ತಸ್ಯಾಪಿ ಪ್ರತಿಶೇಧಾತ್ । ನ ಚ ದತ್ತಕಾದಯಃ ಪುತ್ರಾಸ್ಸಂತಿ ॥

ಇಂದ್ರಿಯ ದೌರ್ಬಲ್ಯದಿಂದ ಬೇರೆಯವರಲ್ಲಿ ಹುಟ್ಟಿದ ಮಗನು ಇಲ್ಲಿ ಕರ್ತೃವಾಗುವುದು ನಿಷೇಧವಾಗಿದೆ । ಹಾಗೆಯೇ ಯಾರು ಮೊದಲು ಅಗ್ನಿಸಾಕ್ಷಿಯಾಗಿ ತನ್ನ ಗಂಡನ ಜೊತೆ ಪಾಣಿಗ್ರಹಣವನ್ನು ಮಾಡಿರುತ್ತಾಳೋ, ಅವಳು ತನ್ನ ಗೋತ್ರದವರೇ ಆದರೂ ಇಬ್ಬರ ಕೈಯನ್ನು ಗ್ರಹಣ ಮಾಡುವುದೂ ಅಷ್ಟು ಸಮಂಜಸವಾದುದಲ್ಲವಾದ್ದರಿಂದ ಹಾಗೂ ಬೇರೇ ಗಂಡಸಿನ ಕೈಹಿಡಿಯುವುದು ಎಂಬುದು ಸಮಾನವಾಗಿರುವುದರಿಂದ

ಇಂತಹವರಲ್ಲಿ ಹುಟ್ಟಿದ ಮಕ್ಕಳನ್ನು ಈ ಕರ್ಮದ ಕರ್ತೃತ್ವಕ್ಕೆ ನಿಷೇಧಿಸಲಾಗಿದೆ । ಮತ್ತೂ ದತ್ತು ಪಡೆದ ಮಕ್ಕಳಿಗೂ ಈ ಕರ್ಮದ ಕರ್ತೃತ್ವವು ಇರುವುದಿಲ್ಲ(ಕ್ಷೇತ್ರಜಾ ಮುಂತಾದವರುಗಳನ್ನು ನಿಷೇಧ ಮಾಡಿರುವುದರಿಂದ) ॥

*** ಆಪಸ್ತಂಬ ಧರ್ಮಸೂತ್ರಂ (ಪ್ರಶ್ನೆ 2, ಖಂಡ 13, ಸೂತ್ರ 10) –**

ದಾನಂ ಕ್ರಯ ಧರ್ಮಶ್ಚಾಪತ್ಯಸ್ಯ ನ ವಿದ್ಯತ ಇತಿ । ತನ್ನಿಶೇಧಾತ್ ॥

ದಾನ–ಕ್ರಯ ಇವೆರಡೂ ಮಕ್ಕಳ ವಿಷಯದಲ್ಲಿ ಇರುವುದಿಲ್ಲ । ಹಾಗಾಗಿ ನಿಷೇಧವಿದೆ ॥

*** ತಸ್ಮಾತ್ಸೂತ್ರಕಾರಮತೇ –**

ಪುತ್ರಿಕಾಪುತ್ರಃ ಕೃತ್ರಿಮೋಪವಿದ್ಧಶ್ಚೇತಿ ತ್ರಯ ಏವ ಸಮ್ಮತಾಃ ॥ ಅನಾಥೋ ಬಾಲಕಃ ಪುತ್ರಾರ್ಥಿನಾ ಪರಿಗೃಹೀತಸ್ಸಜಾತೀಯಃ ಕೃತ್ರಿಮಃ ।

ಸದೃಶಂ ತು ಪ್ರಕುರ್ಯಾತಾಂ ಗುಣದೋಷ ವಿವರ್ಜಿತಂ ।
ಪುತ್ರಂ ಪುತ್ರ ಗುಣೈರ್ಯುಕ್ತಸ್ಸವಿಜ್ಞೇಯಸ್ತು ಕೃತ್ರಿಮಃ ॥
ಪಿತ್ರಾದಿಭಿರುತ್ಸೃಷ್ಟಸ್ಸಜಾತೀಯಃ ಪುತ್ರಾರ್ಥಿನಾ ಪರಿಗೃಹೀತೋಪವಿದ್ಧಃ ।
ಮಾತಾಪಿತೃಭ್ಯಾಮುತ್ಸೃಷ್ಟಂ ತಯೋರನ್ಯತರೇಣ ವಾ ।
ಯಂ ಪುತ್ರಂ ಪರಿಗೃಹ್ಣೀಯಾದಪವಿದ್ಧಸ್ಸ ಉಚ್ಯತೇ ॥
ಇತಿ ಸ್ಮೃತೇಃ ॥

ಆದ್ದರಿಂದ ಸೂತ್ರಕಾರರ ಮತದಲ್ಲಿ – **ಪುತ್ರಿಕಾಪುತ್ರ – ಕೃತ್ರಿಮ – ಅಪವಿದ್ಧ,** ಈ 3 ರೀತಿಯ ಮಕ್ಕಳೇ ಕರ್ತೃತ್ವವನ್ನು ಹೊಂದಲು ಯೋಗ್ಯರು । **ಕೃತ್ರಿಮ ಮಗನೆಂದರೆ–** ಅನಾಥನಾದ ಸಜಾತೀಯ ಬಾಲಕನನ್ನು ಮಗನಾಗಿ ಸ್ವೀಕರಿಸುವುದು । ಗುಣದೋಷವಿಲ್ಲದಂತಹ, ತನ್ನ ಕುಲಕ್ಕೆ ಹೊಂದುವ ಮಗುವನ್ನು ಮಗನಾಗಿ ಸ್ವೀಕಾರ ಮಾಡಬೇಕು । ಮಗನಿಗೆ ಸಮನಾದ ಗುಣವನ್ನು ಹೊಂದಿದ ಮಗುವನ್ನು ಮಗನಾಗಿ ಸ್ವೀಕರಿಸುವುದು **'ಕೃತ್ರಿಮ'** ಎಂದು ಶ್ರುತಿಯಲ್ಲಿ ಹೇಳಿದೆ ।

ತಂದೆತಾಯಿಯರಿಂದ ಬಿಡಲ್ಪಟ್ಟಂತಹ, ಸಜಾತೀಯನಾದ ಮಗುವನ್ನು ಮಗನಾಗಿ ಪಡೆದಂತಹ ಮಗುವು **ಅಪವಿದ್ಧವು** । ತಂದೆತಾಯಿಯರಿಂದ ಅಥವಾ ಅವರಿಬ್ಬರಲ್ಲಿ ಒಬ್ಬರಿಂದ ಬಿಡಲ್ಪಟ್ಟಂತಹ । ಮಗುವನ್ನು ಮಗನಾಗಿ ಸ್ವೀಕರಿಸಿದರೆ, ಅವನು **ಅಪವಿದ್ಧ** ಎಂದು ಕರೆಸಿಕೊಳ್ಳುತ್ತಾನೆ, ಎಂದು ಸ್ಮೃತಿಯಲ್ಲಿ ಇರುವುದರಿಂದ ॥

*** ಭ್ರಾತೃವಿಷಯೇ ವಿಶೇಷ ಉಚ್ಯತೇ –**

ಕನೀಯಸಿ ಭ್ರಾತರಿಸತಿ ಜಾಯಾನ್ ನ ಸಂಸ್ಕುರ್ಯಾತ್ । ಭ್ರಾತೃ ತತ್ಸುತಾವಿತಿ ತತ್ಸುತಗ್ರಹಣೇನ ಜ್ಯಾಯಸಃ ಕನೀಯಸೋ ವಾ ಭ್ರಾತೃಸ್ಸಂತಾನೋ ಗೃಹ್ಯತೇ । ನ ಚ ಮಾತಾ ನ ಚ ಪಿತಾ ಕುರ್ಯಾತ್ ಪುತ್ರಸ್ಯ ಪೈತೃಕಂ । ನಾಗ್ರಜಶ್ಚ ತಥಾ ಭ್ರಾತಾ ಭ್ರಾತೄಣಾಂತು ಕನೀಯಸಾಮಿತಿ ನಿಷೇಧಸ್ತು ಪುತ್ರಾದಿ ಮುಖ್ಯಕರ್ತೃ ಸದ್ಭಾವ ವಿಷಯಃ । ತದಭಾವೇ ಅಗ್ರಜಾದಯೋಪಿ ಸಂಸ್ಕರ್ತಾರಸ್ಯುರೇವ ॥

ಭ್ರಾತೃವಿಷಯದಲ್ಲಿ ವಿಶೇಷವು ಹೇಳಲ್ಪಡುತ್ತದೆ । ಮೃತನ ತಮ್ಮನಿರುವಾಗ, ಮೃತನ ಅಣ್ಣನು ಸಂಸ್ಕಾರ ಮಾಡಬಾರದು । ಆದರೆ ಮೃತನ ಅಣ್ಣತಮ್ಮಂದಿರ ಮಕ್ಕಳು ಮೃತನ ಸಂಸ್ಕಾರವನ್ನು ಮಾಡಬಹುದು । ತಾಯಿತಂದೆಯರು ಮಗನ ಔರ್ಧ್ವದೈಹಿಕವನ್ನು ಮಾಡಬಾರದು । ಹಾಗೂ ಅಣ್ಣನಾದವನು, ತಮ್ಮನ ಔರ್ಧ್ವದೈಹಿಕವನ್ನು ಮಾಡಬಾರದು, ಎಂಬ ಮೇಲೆಹೇಳಿದ 2 ವಿಷಯವು ಪುತ್ರಾದಿ ಮುಖ್ಯಕರ್ತೃಗಳು ಇದ್ದಾಗ ಮಾತ್ರ । ಅವರಿಲ್ಲದಿದ್ದಾಗ, ಅಣ್ಣ ಮುಂತಾದವರೂ ಈ ಕರ್ಮವನ್ನು ಮಾಡಬಹುದು ॥

*** ತದುಕ್ತಂ ಸ್ಮೃತಿಸಂಗ್ರಹೇ –**

ಉತ್ಸನ್ನಬಾಂಧವಂ ಪ್ರೇತಂ ಪಿತಾ ಭ್ರಾತಾ ತಥಾಗ್ರಜಃ ।
ಜನನೀ ವಾऽಪಿ ಸಂಸ್ಕುರ್ಯಾನ್ಮಹದೇನೋನ್ಯಥಾ ಭವೇತ್ ॥

ಜನನ್ಯಾಸ್ತ್ವಭಾವೇ ತತ್ಸಪತ್ನೀಂ ತದಭಾವೇ ಸ್ನುಷಾ ಇತ್ಯಾದಿ ಸ್ವಸ್ರೀ(ಸ್ತ್ರೀ) ಯಾಭಾವೇಪಿ ಅವಶಿಷ್ಟಾಸ್ಸ ಪಿಂಡಾಃ । ತತ್ರಾನೇಕ ಸನ್ನಿಪಾತೇ ಪ್ರತ್ಯಾಸನ್ನಃ

ಪರಿಗೃಹ್ಯತೇ । ಏವಂ ಸಮಾನೋದಕೇಷ್ವಪಿ ದ್ರಷ್ಟವ್ಯಂ । ತತೋ ಮಾತುಃ ಸಪಿಂಡಾಮಾತುಲಾದಯಃ । ತದಭಾವೇ ತತ್ಸಮಾನೋದಕಾಃ ದೌಹಿತ್ರಾದಿಷ್ವಪರೋ ವಿಶೇಷ ಉಚ್ಯತೇ । ತತ್ರಾನೇಕ ಸನ್ನಿಪಾತೇ ಯೋ ದಾಯಭಾಕ್ ಸ ಸಂಸ್ಕರ್ತಾಭವತಿ । ಯಶ್ಚಾರ್ಥಹರಃ ಸಪಿಂಡದಾಯೀತಿ ಸ್ಮೃತೇಃ । ಪುತ್ರ ಭ್ರಾತ್ರಾದಯಸ್ತು ವಿತ್ತಹರತ್ವಾಭಾವೇಪಿ ಸಂಸ್ಕುರ್ಯುಃ ॥

ಸ್ಮೃತಿಸಂಗ್ರಹದಲ್ಲಿ ಹೀಗೆ ಹೇಳಿದೆ – ಬಂಧುಗಳನ್ನು ಬಿಟ್ಟುಹೋದ ಮೃತನಿಗೆ, ತಂದೆ ಅಥವಾ ತಮ್ಮಂದಿರು ಅಥವಾ ತಾಯಿ, ಇವರು ಬೇರೇ ಕರ್ತೃಗಳು ಇಲ್ಲದಿದ್ದಾಗ ಈ ಕರ್ಮವನ್ನು ಮಾಡಬೇಕು । ಇಲ್ಲದಿದ್ದರೆ ಬಹಳ ಪಾಪಗಳನ್ನು ಪಡೆಯುತ್ತಾರೆ । ತಾಯಿ ಇಲ್ಲದಿದ್ದರೆ, ಮೃತನ ಕಾಮದಿಂದಾದ ಹೆಂಡತಿಯರು, ಇವರಿಲ್ಲದಿದ್ದರೆ ಸೊಸೆಯು, ಇವಳೂ ಇಲ್ಲದಿದ್ದರೆ ಅಕ್ಕತಂಗಿಯರು, ಇವರೂ ಇಲ್ಲದಿದ್ದರೆ ಅವರ ಮಕ್ಕಳು, ಹೀಗೆ ಸಪಿಂಡರಾದವರ ತನಕ ಕರ್ತೃತ್ವವು ಬರುತ್ತದೆ । ಎಲ್ಲರೂ ಇದ್ದಾಗ ಇದರಲ್ಲಿ ಕ್ರಮವಾಗಿ ಮೊದಲ ಕರ್ತೃತ್ವವು ಯಾರಿಗೆ ಬರುತ್ತದೋ ಅವರನ್ನು ಕರ್ತೃವಾಗಿ ಪರಿಗಣಿಸಬೇಕು । ಹೀಗೆಯೇ ಜ್ಞಾತಿಗಳಲ್ಲಿಯೂ ಕರ್ತೃತ್ವವನ್ನು ಪರಿಗಣಿಸಬೇಕು । ಸಪಿಂಡರಾದ ಹಾಗೂ ಜ್ಞಾತಿಗಳಾದವರೂ ಯಾರೂ ಇಲ್ಲದಿದ್ದಾಗ, ಮೃತನತಾಯಿಯ ಸಪಿಂಡರಾದ ಮೃತನ ಸೋದರಮಾವ ಮುಂತಾದವರನ್ನು ಕ್ರಮವಾಗಿ ಕರ್ತೃತ್ವಕ್ಕೆ ಪರಿಗಣಿಸಬೇಕು । ಅವರೂ ಇಲ್ಲದಿದ್ದಾಗ, ಸೋದರಮಾವನ ಸಪಿಂಡರಾದವರೂ ಮಾಡಬೇಕು । ಮಗಳಮಗ ಮುಂತಾದವರ ವಿಷಯದಲ್ಲಿ ವಿಶೇಷವು ಹೇಳಲ್ಪಡುತ್ತದೆ । ಮಗಳ ಮಕ್ಕಳು ಮತ್ತು ಮೊದಲಾದವರಲ್ಲಿ ಅನೇಕರಿದ್ದರೆ, ಯಾರು ಆಸ್ತಿಯ ಅಧಿಕಾರವನ್ನು ಹೊಂದಿದ್ದಾನೋ ಅವನಿಗೆ ಕರ್ತೃತ್ವವು । ಏಕೆಂದರೆ, ಯಾರು ಮೃತನ ಆಸ್ತಿಯನ್ನು ಪಡೆದಿರುತ್ತಾನೋ ಅವನು ಮೃತನಿಗೆ ಪಿಂಡವನ್ನು ಕೊಡುವವನಾಗಿರುತ್ತಾನೆಂದು ಸ್ಮೃತಿಯಿರುವುದರಿಂದ ॥

*** ತದುಕ್ತಂ ಮಾರ್ಕಂಡೇಯಪುರಾಣೇ –**

ಪುತ್ರೋಭ್ರಾತಾ ಚ ತತ್ಪುತ್ರಃ ಪತ್ನೀ ಮಾತಾ ಪಿತಾ ತಥಾ ।
ವಿತ್ತಾಭಾವೇಪಿ ಶಿಷ್ಯಶ್ಚ ಕುರ್ಯೀರನ್ ಔರ್ಧ್ವದೈಹಿಕಮ್ ।

ತಸ್ಮಾದ್ಯಃ ಕಶ್ಚನಾನ್ಯೋದಾಯಹರಃ ಅನ್ಯಶ್ಚ ಸಂಸ್ಕರ್ತಾ ಸ್ಮರ್ಯತೇ । ತಸ್ಯ ಸಂಸ್ಕರ್ತುರ್ನದಾಯಃ । ನ ಹಿ ಸಂಸ್ಕಾರೋದಾಯಸ್ಯನಿಮಿತ್ತಂ । ಕಿಂ ತು ದಾಯಃ ಕ್ವಚಿತ್ ಸಂಸ್ಕಾರಸ್ಯೇತಿ ॥

ಮಾರ್ಕಂಡೇಯ ಪುರಾಣದಲ್ಲಿ ಹೀಗೆ ಹೇಳಿದೆ – ಮೃತನಮಗ, ಅಣ್ಣತಮ್ಮಂದಿರು ಹಾಗೂ ಅವರಮಕ್ಕಳು ಹಾಗೂ ಮೃತನಪತ್ನಿ ಹಾಗೂ ಮೃತನ ತಂದೆತಾಯಿಯರು । ಹಾಗೂ ಶಿಷ್ಯ, ಇವರುಗಳು ಮೃತನ ಆಸ್ತಿಯನ್ನು ಪಡೆಯದಿದ್ದರೂ ಈ ಕರ್ಮವನ್ನು ಮಾಡಬೇಕು । ಆದ್ದರಿಂದ ಬೇರೆ ಯಾರೋ ಆಸ್ತಿಯ ಅಧಿಕಾರವನ್ನು ಪಡೆದು ಇನ್ನು ಬೇರೆಯಾರೋ ಔರ್ಧ್ವದೈಹಿಕಕರ್ಮಕ್ಕೆ ಕರ್ತೃತ್ವವನ್ನು ಪಡೆಯುತ್ತಾರೆ । ಆದ್ದರಿಂದ ಕರ್ತೃತ್ವವು ಆಸ್ತಿಯ ಅಧಿಕಾರವನ್ನು ಹೊಂದಲು ಕಾರಣವಲ್ಲ । ಆದ್ದರಿಂದ ಕರ್ತೃವು, ಮೃತನ ಆಸ್ತಿಯನ್ನು ಹೊಂದಿರಬೇಕೆನ್ನುವ ನಿಯಮವಿಲ್ಲ । ಆದರೆ ಸಂಸ್ಕಾರದ ಅಧಿಕಾರತ್ವವು ಮೇಲೆಹೇಳಿದ ಕ್ರಮದಲ್ಲಿಯೇ ಬರುತ್ತದೆ । ಸಂಸ್ಕಾರಕ್ಕೆ ಸ್ವಲ್ಪವಾದರೂ ಅಧಿಕಾರವು ಇರಬೇಕು ॥

*** ಅಥ ಸ್ತ್ರೀಸಂಸ್ಕಾರೇ ಕರ್ತಾರಃ –**

ಔರಸೋऽಥ ಸಪತ್ನೀಜಃ ಪುತ್ರಿಕಾ ಪುತ್ರಕೃತ್ರಿಮೌ ।
ಅಪವಿದ್ಧಃ ಪತಿಶ್ಚೈವ ದೌಹಿತ್ರೋಭ್ರಾತೃ ಪೂರ್ವಕಾಃ ॥
ಪತ್ಯುಃಸ್ನುಷಾಂತಾ ಸ್ವಸ್ರೀಯಃ ಸ್ವಸ್ಯಾಃ ಸ್ವಸ್ರೀಯ ಏವ ವಾ ।
ಭ್ರಾತೃ ಪುತ್ರಶ್ಚ ಜಾಮಾತಾ ಸಪಿಂಡಾಸ್ತೋದಕಾಃ ಕ್ರಮಾತ್ ।
ಔರಸಾಭಾವೇ ಸಪತ್ನೀ ಪುತ್ರಸ್ತಂಸ್ಕರ್ತಾ ಭವತಿ ॥

ಸ್ತ್ರೀಯರ ಸಂಸ್ಕಾರದಲ್ಲಿ ಕರ್ತೃತ್ವದ ವಿಷಯವು – ಮೃತಳಮಗ – ಅವನಿಲ್ಲದಿದ್ದರೆ ಸಪತ್ನೀ(ಸವತಿ)ಯರ ಮಕ್ಕಳು – ಅವರಿಲ್ಲದಿದ್ದರೆ ಪುತ್ರಿಕಾಪುತ್ರನು – ಅವನಿಲ್ಲದಿದ್ದರೆ ಕೃತ್ರಿಮನು – ಅವನಿಲ್ಲದಿದ್ದರೆ ಅಪವಿದ್ಧನು – ಅವನೂ ಇಲ್ಲದಿದ್ದರೆ ಪತಿಯು – ಅವನಿಲ್ಲದಿದ್ದರೆ ಮಗಳಮಗನು – ಅವನಿಲ್ಲದಿದ್ದರೆ ಮೃತಳ ಸಹೋದರರು – ಇಲ್ಲಿಂದ ಮುಂದೆ ಸೊಸೆಯವರೆಗೆ ಹಾಗೂ ಪತಿಯ ತಂಗಿಯಮಕ್ಕಳು – ಅವರಿಲ್ಲದಿದ್ದರೆ ತನ್ನ

ತಂಗಿಯಮಕ್ಕಳು – ತನ್ನ ಸೋದರರು – ಅಣ್ಣನ ಮಕ್ಕಳು – ಅಳಿಯ(ಮಗಳಗಂಡ)– ಇವರೂ ಇಲ್ಲದಿದ್ದರೆ ತನ್ನ ಗಂಡನ ಜ್ಞಾತಿಗಳು – ಹೀಗೆ ಕ್ರಮವಾಗಿ ಕರ್ತೃಗಳು ಆಗುತ್ತಾರೆ । ಮೃತಳಿಗೆ ಮಕ್ಕಳಿಲ್ಲದಿದ್ದರೆ ಸವತಿಯ ಮಕ್ಕಳು ಕರ್ತೃಗಳಾಗುತ್ತಾರೆ ॥

*** ತದಾಹ ಮನುಃ –**

ಬಹ್ವೀನಾಮೇಕಪತ್ನೀನಾಮೇಕಾ ಚೇತ್ ಪುತ್ರಿಣೀ ಭವೇತ್ ।
ಸರ್ವಾಸ್ತಾಸ್ತೇನ ಪುತ್ರೇಣಪ್ರಾಹ ಪುತ್ರವತೀರ್ಮನುಃ ॥

ತತಃ ಪುತ್ರಿಕಾ ಪುತ್ರಾದಯೋಪವಿದ್ಧ ಪರ್ಯಂತಾಃ ಪೂರ್ವವತ್ ತದಭಾವೇ ಪತಿಃ ಸಂಸ್ಕರ್ತಾ ॥

ಇದನ್ನೇ ಮನುವು ಹೇಳಿದ್ದಾರೆ – ತುಂಬಾ ಹೆಂಡತಿಯರಲ್ಲಿ ಒಬ್ಬಹೆಂಡತಿಗೆ ಗಂಡುಮಕ್ಕಳಾದರೆ । ಅವಳಮಗನೇ ಬೇರೇ ಹೆಂಡತಿಯರಿಗೆ ಮಕ್ಕಳಿಲ್ಲದಿದ್ದರೂ ಮಗನಂತಾಗುತ್ತಾನೆ (ಅನೇಕ ಹೆಂಡತಿಯರಲ್ಲಿ ಒಬ್ಬಳಲ್ಲಿ ಗಂಡುಮಗುವಾಗಿ ಬೇರೆಯವರಿಗೆ ಮಕ್ಕಳಿಲ್ಲದಿದ್ದರೂ, ಎಲ್ಲರೂ ಮಕ್ಕಳುಳ್ಳವರಾಗುತ್ತಾರೆ) । ನಂತರ ಪುತ್ರಿಕಾಪುತ್ರನಿಂದ ಹಿಡಿದು, ಅಪವಿದ್ಧನವರೆಗೆ ಹಿಂದಿನಂತೇ ಆದ್ಯತೆಯಿಂದ ಕ್ರಮವಾಗಿ ಕರ್ತೃತ್ವವು ಬರುತ್ತದೆ । ಅಪವಿದ್ಧನಿಲ್ಲದಿದ್ದರೆ, ಪತಿಗೆ ಕರ್ತೃತ್ವವು ॥

*** ತದಾಹ ಕಾತ್ಯಾಯನಃ –**

ಅಪುತ್ರಾಯಾಃ ಪತಿರ್ದದ್ಯಾದಿತಿ । ತತೋ ದೌಹಿತ್ರಃ ತದಭಾವೇ ಪತ್ಯುರ್ಭ್ರಾತಾ, ತತ್ಸಂತಾನಶ್ಚ ತದಭಾವೇ ಪತ್ಯುಃ ಪಿತಾಮಾತಾ ಸ್ನುಷೇತಿ ಕ್ರಮಃ । ತದಭಾವೇ ಪತ್ಯುಃ ಸ್ವಸ್ರೀಯಃ । ತದಭಾವೇ ಮೃತಾಯಾಃ ಸ್ವಸ್ರೀಯಃ । ಭ್ರಾತೃಪುತ್ರಃ ಜಾಮಾತಾ ಚ ॥

* ತದುಕ್ತಂ –

ಮಾತೃಶ್ವಸಾ ಮಾತುಲಾನಿ ಪಿತುವ್ಯಸ್ತ್ರೀ ಪಿತೃಷ್ವಸಾ ।
ಶ್ವಶ್ರೂಃ ಪೂರ್ವಜ ಪತ್ನೀ ಚ ಮಾತೃತುಲ್ಯಾಃ ಪ್ರಕೀರ್ತಿತಾಃ ॥

ತತೋ ಭರ್ತುಃ ಸಪಿಂಡಾಸ್ಸಮಾನೋದಕಾಶ್ಚ ಯಥಾರ್ಹ– ಮನುಸಂಧೇಯಾಃ । ಅತ್ರಾಪಿ ದೌಹಿತ್ರಾದಿಷು ಅನೇಕ ಸಮವಾಯೇ ಯೋರ್ಥಹರಃ ಸಪಿಂಡದಾಯೀತಿ ದ್ರಷ್ಟವ್ಯಮ್ ॥

ಗಂಡುಮಕ್ಕಳಿಲ್ಲದವಳಿಗೆ ಪತಿಯೇ ಔರ್ಧ್ವದೈಹಿಕ ಕರ್ಮವನ್ನು ಮಾಡಬೇಕು । ಪತಿಯಿಲ್ಲದಿದ್ದರೆ ಮಗಳಮಗನು – ಅವನಿಲ್ಲದಿದ್ದರೆ ಗಂಡನ ಅಣ್ಣ – ಅವನಿಲ್ಲದಿದ್ದರೆ ಅವನ ಮಕ್ಕಳು – ಇವರೂ ಇಲ್ಲದಿದ್ದರೆ ಗಂಡನ ತಂದೆತಾಯಿಯರು – ಇವರೂ ಇಲ್ಲದಿದ್ದರೆ ಸೊಸೆ । ಇವಳಿಲ್ಲದಿದ್ದರೆ ಗಂಡನ ತಂಗಿಯಮಕ್ಕಳು – ಇವರೂ ಇಲ್ಲದಿದ್ದರೆ ತನ್ನ ತಂಗಿಯಮಕ್ಕಳು – ಇವರೂ ಇಲ್ಲದಿದ್ದರೆ ತನ್ನ ಅಣ್ಣನಮಕ್ಕಳು – ಇವರೂ ಇಲ್ಲದಿದ್ದರೆ ಮಗಳಗಂಡ – ಹೀಗೆ ಕರ್ತೃತ್ವವು ಬರುತ್ತದೆ ॥ ಮತ್ತೂ ಈ ರೀತಿಯಾಗಿ ಹೇಳುತ್ತದೆ – ತಾಯಿಯ ಅಕ್ಕತಂಗಿಯರು, ಸೋದರಮಾವನ ಹೆಂಡತಿ ಹಾಗೂ ಚಿಕ್ಕಪ್ಪದೊಡ್ಡಪ್ಪರ ಹೆಂಡತಿಯರು ಹಾಗೂ ತಂದೆಯ ಅಕ್ಕತಂಗಿಯರು ಹಾಗೂ ಹೆಣ್ಣುಕೊಟ್ಟ ಅತ್ತೆ ಹಾಗೂ ಅಣ್ಣಂದಿರ ಹೆಂಡತಿಯರು – ಇವರೆಲ್ಲರೂ ತಾಯಿಗೆ ಸಮನಾದವರೆಂದು ಹೇಳಲ್ಪಟ್ಟಿದೆ । ಮಗಳಗಂಡನೂ ಇಲ್ಲದಿದ್ದರೆ ಗಂಡನ ತ್ರಿಪೌರುಷೇಯರು ಹಾಗೂ ಜ್ಞಾತಿಗಳು ಎಂದು ಕ್ರಮವಾಗಿ ಕರ್ತೃತ್ವವನ್ನು ಪರಿಗಣಿಸಬೇಕು । ಇಲ್ಲೂ ಕೂಡ ಮಗಳಮಕ್ಕಳು ಮೊದಲಾದವರಲ್ಲಿ ಅನೇಕರು ಜೀವಿಸಿದ್ದರೆ, ಯಾರಿಗೆ ಆಸ್ತಿಭಾಗವು ಇದೆಯೋ, ಅವನೇ ಪಿಂಡವನ್ನು ಕೊಡುವವನಾಗುತ್ತಾನೆ ಎಂದು ಕರ್ತೃತ್ವವನ್ನು ಹೇಳಿದೆ ॥

*** ರಾಜನ್ಯ ವೈಶ್ಯಯೋಃ ವಿಶೇಷಮಾಹ –**

*** ಬೋಧಾಯನಃ –**

ರಾಜನ್ಯಸ್ಯ ಪುರೋಹಿತಸ್ಸಹಸ್ರ ದಕ್ಷಿಣೋ ವಾ । ಬ್ರಾಹ್ಮಣೋ ವೈಶ್ಯಸ್ಯ ಸಪ್ತಗುಣೋವೇತಿ ॥ ಉತ್ಸನ್ನಬಂಧೋಸ್ತು ರಿಕ್ತೇನ ರಾಜಾ ದಾಹಾದಿಕಂ ಕಾರಯೇತ್ ॥

ಕ್ಷತ್ರಿಯ ಹಾಗೂ ವೈಶ್ಯರ ವಿಶೇಷವನ್ನು ಇಲ್ಲಿ ಹೇಳಿದೆ – ಬೋಧಾಯನರು ಹೀಗೆ ಹೇಳುತ್ತಾರೆ – ಕ್ಷತ್ರಿಯರಿಗೆ ಸಂಸ್ಕಾರ ಮಾಡಿಸುವ ಪುರೋಹಿತರಿಗೆ ಅತಿಹೆಚ್ಚು ದಕ್ಷಿಣೆಯನ್ನು ಕೊಡಬೇಕು । ಬ್ರಾಹ್ಮಣನು ವೈಶ್ಯನಿಗಿಂತ 7 ಪಟ್ಟು ಅಧಿಕಗುಣವನ್ನು ಉಳ್ಳವನು ॥ ಬಂಧುಗಳು ಯಾರೂ ಇಲ್ಲದ ಅನಾಥವಾದ ಶವಕ್ಕೆ, ರಾಜನು ದಾಹಾದಿ ಸಂಸ್ಕಾರಗಳನ್ನು ಮಾಡಿಸಬೇಕು ॥

*** ತಥೋಕ್ತಂ ವಿಷ್ಣುಪುರಾಣೇ –**

ಸರ್ವಾಭಾವೇತು ನೃಪತಿಃ ಕಾರಯೇತ್ ತಸ್ಯ ಇಕ್ಷತಃ ।
ತಜ್ಜಾತೀಯೈರ್ನರೈಃ ಸಮ್ಯಕ್ ದಾಹಾದ್ಯಾಃ ಸಕಲಾಃ ಕ್ರಿಯಾಃ ।
ಮುಖ್ಯಾಸನ್ನಿಧಾನೇsಪ್ಯರ್ಥಾದಮುಖ್ಯಃ ಕರ್ತಾ
ಭವತೀತ್ಯನುಸಂಧೇಯಮ್ ॥

ವಿಷ್ಣುಪುರಾಣದಲ್ಲಿ ಈ ರೀತಿ ಹೇಳಿದೆ – ಮೃತನಿಗೆ ಯಾರೂ ಇಲ್ಲದಿದ್ದರೆ, ರಾಜನು ದಾಹಾದಿ ಸಂಸ್ಕಾರವನ್ನು ಮಾಡಿಸಬೇಕು । ಅವನ(ಮೃತನ) ಜಾತಿಗೆ ಸೇರಿದ ಜನರಿಂದ ಈ ಕರ್ಮದ ಎಲ್ಲಾ ವಿಧಿಗಳನ್ನು ಚೆನ್ನಾಗಿ ಮಾಡಿಸಬೇಕು । ಮುಖ್ಯನಾದ ಕರ್ತೃವು ಇಲ್ಲದಿದ್ದಾಗ, ಅಮುಖ್ಯನಾದವನು ಕರ್ತೃವಾಗುತ್ತಾನೆ ಎಂದು ತಿಳಿಯಬೇಕು ॥

*** ಕಪರ್ದಿಭಾಷ್ಯಂ –**

ಆಹಿತಾಗ್ನೇಃ ಮರಣ ಸಂಶಯೇ ದಹನಾರ್ಥಂ ಅವಕಾಶಂ ಜೋಷಯತೇ – ಸೇವತೇ ಅಧ್ವರ್ಯುಃ ಕೀದೃಕ್ ಗುಣ ವಿಶಿಷ್ಟಂ ದಕ್ಷಿಣಾಪ್ರತ್ಯಕ್ ಪ್ರವಣಂ ।

ಅನಿರಿಣಂ – ಯತ್ರ ತೃಣಾನಿ ನ ಸಂತಿ ತತ್ ಅನಿರಿಣಂ । ಅಸುಶಿರಂ – ಅಚ್ಛಿದ್ರಂ । ಅಭಂಗುರಂ – ಅಭಿನ್ನಂ । ಅನುಪಹತಂ – ಅನನ್ಯದಗ್ಧಪೂರ್ವಂ । ದಹನಸ್ಯಾಪಿ ಲೋಪಾತ್ । ಅವಿಸ್ರಗ್ದಾರಿ – ಅವಿದರಣಂ । ಅನುಪಚ್ಛಿನ್ನಪ್ರವಣಂ – ಅನಂತರಿತ ಪ್ರವಾಹಂ ॥

ಆಹಿತಾಗ್ನಿಗೆ ಮರಣದ ಸಂಶಯವು ಬಂದಾಗ, ದಹನಕ್ಕಾಗಿ ಸ್ಮಶಾನವನ್ನು ಸಿದ್ಧಪಡಿಸಿಕೊಳ್ಳಬೇಕು । ಅಧ್ವರ್ಯುವು, ದಕ್ಷಿಣ–ಪಶ್ಚಿಮಕ್ಕೆ ತಗ್ಗಿರುವಂತೆ ಸ್ಮಶಾನದ ಜಾಗವನ್ನು ಸಿದ್ಧಪಡಿಸಬೇಕು । ಎಲ್ಲಿ ಹುಲ್ಲುಗಳು ಇಲ್ಲವೋ ಅದು **ಅನಿರಿಣ** ಪ್ರದೇಶವು । ಛಿದ್ರವಿಲ್ಲದಿರುವ(**ಅಸುಶಿರ**) । ಭಿನ್ನವಾಗದಿರುವ(**ಅಭಂಗುರ**) । ಆ ಸಮಯದಲ್ಲಿ ಬೇರೇ ಶವಗಳನ್ನು ಸುಡದಿರುವ(**ಅನುಪಹತ**) । ಒಂದುವೇಳೆ ಸುಟ್ಟಿದ್ದರೆ ದಹನಕ್ಕೆ ಲೋಪವು ಬರುತ್ತದೆಯಾದ್ದರಿಂದ, ಆ ಸಮಯದಲ್ಲಿ ದಹನವಾಗದಿರುವ ಜಾಗವನ್ನು ಸಿದ್ಧಗೊಳಿಸಬೇಕು । ಕೆರೆ ಮುಂತಾದ ಜಲಾಶಯಗಳ ಅಂಗಳವಲ್ಲದ (**ಅವಿದರಣ**) । ಪ್ರವಾಹದಿಂದ ಕೊಚ್ಚಿಹೋಗದಿರುವ(**ಅನುಪಚ್ಛಿನ್ನ ಪ್ರವಣ**) – ಈ ಲಕ್ಷಣಗಳಿರುವ ಜಾಗವನ್ನು ದಹನಕ್ಕೆ ಸಿದ್ಧಗೊಳಿಸಬೇಕು ॥

*** ಸೂತ್ರಂ – 3 (ಇಬ್ಬರಿಗೂ)**

ಯಸ್ಮಾದ್ದಕ್ಷಿಣಾ ಪ್ರತೀಚ್ಯ ಆಪೋನಿಹಿಸೃತ್ಯೋದೀಚ್ಯ ಏತ್ಯ ಮಹಾನದೀಂ ಅವೇತ್ಯ ಪ್ರಾಚ್ಯಃ ಸಂಪದ್ಯಂತೇ ॥

ಯಾವ ಕಾರಣ, ದಕ್ಷಿಣ ಮತ್ತು ಪಶ್ಚಿಮಕ್ಕೆ ನೀರು ಹರಿದುಹೋಗಿ, ಮತ್ತೆ ಉತ್ತರದಿಕ್ಕಿಗೆ ಹರಿದು, ಮಹಾನದಿಯನ್ನು ಸೇರಿ, ಪೂರ್ವದಿಕ್ಕಿಗೆ ಹರಿದುಹೋಗುತ್ತದೋ, ಅಂತಹಾ ಜಾಗದಲ್ಲಿ ದಹನ ಪ್ರದೇಶವನ್ನು(ಸ್ಮಶಾನ) ಮಾಡಬೇಕು ॥

*** ಗೋಪಾಲಭಾಷ್ಯಂ –**

ಏತಲ್ಲಕ್ಷಣಂ ಪೂರ್ವೋಕ್ತೈಃ ಸಮುಚ್ಚೀಯತೇ । ಯಸ್ಮಾತ್ ದೇಶಾತ್ ಆಪಃ ದಕ್ಷಿಣಾಪ್ರತೀಚ್ಯೋನಿಸ್ಸರಂತಿ । ದಕ್ಷಿಣಾಪ್ರತ್ಯಕ್ ಪ್ರವಣತ್ವಾತ್

ದೇಶಸ್ಯ । ತಾತ್ಸಥಾ ನಿಃಸೃತ್ಯೋದಕ್ ಗತ್ವಾ ಮಹಾನದೀಂ ಅನುಪ್ರವಿಶ್ಯ ತದುದಕೇನ ಸಹಾ ಪ್ರಾಕ್‌ಗಾಮಿನ್ಯೋ ಭವಂತಿ । ತಥಾ ಭೂತಂ ಜೋಷಯತೇ । ಮಹಾನದೀಗ್ರಹಣಂ ಪ್ರಾಚೀನಪ್ರವಾಹಾಂತರ ಪ್ರದರ್ಶನಾರ್ಥಂ ॥

ಈ ಮೇಲೆ ಹೇಳಿದ ಲಕ್ಷಣವನ್ನು, ಹಿಂದೆ ಹೇಳಿದ ಲಕ್ಷಣದ ಜೊತೆ ಸೇರಿಸಬೇಕು । ಯಾವ ದೇಶದಿಂದ(ಜಾಗ) ನೀರು ದಕ್ಷಿಣ–ಪಶ್ಚಿಮಕ್ಕೆ ಹರಿಯುತ್ತದೋ, ಏಕೆಂದರೆ – ಈ ಜಾಗವು ದಕ್ಷಿಣ–ಪಶ್ಚಿಮಕ್ಕೆ ತಗ್ಗಾಗಿರುತ್ತದೆಯಾದ್ದರಿಂದ । ಆ ನೀರು ಅಲ್ಲಿಂದ ಮತ್ತೆ ಉತ್ತರಕ್ಕೆ ಹರಿದು, ಮಹಾನದಿಯನ್ನು ಸೇರಿ ಆ ಮಹಾನದಿಯೊಡನೆ ಪೂರ್ವದಿಕ್ಕಿಗೆ ಹರಿಯುವಂತೆ ಆಗಿರಬೇಕು । ಇಂತಹಾ ಜಾಗದಲ್ಲಿ ದಹನಕ್ಕೆ ಸಿದ್ಧತೆಯನ್ನು ಮಾಡಬೇಕು । ಮಹಾನದಿಯನ್ನು ಇಲ್ಲಿ ಹೇಳಿದ್ದು, ಪೂರ್ವದಿಕ್ಕಿಗೆ ಹರಿಯುವುದರಲ್ಲಿ ವಿಶೇಷತೆಯನ್ನು ಹೇಳುವುದಕ್ಕಾಗಿ ॥

*** ತತ್ರಾಹ ಬೋಧಾಯನಃ (ಬೋ. ಪಿ.ಪ್ರ 11, ಖ 6, ಸೂ 1) –**

ತಾಃ ಪ್ರದಕ್ಷಿಣಮಭಿಪರ್ಯಾವೃತ್ಯ ಮಹಾನದೀಮಭ್ಯವೇತ್ಯ ಪ್ರಾಚ್ಯಸ್ಸಂಪದ್ಯೇರನ್ ॥

ಬೋಧಾಯನರು ಹೀಗೆ ಹೇಳುತ್ತಾರೆ – ಆ ನೀರು ಪ್ರದಕ್ಷಿಣೆಯಾಗಿ ಹರಿದು, ಮಹಾನದಿಯನ್ನು ಸೇರಿ ಪೂರ್ವಕ್ಕೆ ಹರಿದುಹೋಗಬೇಕು; ಎಂದು ॥

*** ಕಪರ್ದಿಭಾಷ್ಯಂ –**

ಯಸ್ಮಾತ್ ದಕ್ಷಿಣಾಪ್ರತೀಚ್ಯ ಇತಿ । ಪೂರ್ವೋಕ್ತೈಃ ಸಮುಚ್ಚಯ ಏವ ॥

ಯಾವ ಕಾರಣದಿಂದ ದಕ್ಷಿಣ–ಪಶ್ಚಿಮಕ್ಕೆ ಹರಿಯುವುದು ಎಂಬುದನ್ನು । ಹಿಂದಿನ ಸ್ಮಶಾನ ಲಕ್ಷಣದಲ್ಲಿ ಸೇರಿಸಿಕೊಳ್ಳಬೇಕು ॥

*** ಸೂತ್ರಂ – 4 (ಇಬ್ಬರಿಗೂ)**

ಸಮಂ ವಾ ಸುಭೂಮಿಂ ಬಹುಲೌಷಧಮ್ ॥

ಅಥವಾ ಸಮ ಹಾಗೂ ಒಳ್ಳೆಯ ಔಷಧಿಗುಣ ಸತ್ವಗಳಿರುವಂತಹ ಜಾಗದಲ್ಲಿಯಾದರೂ, ದಹನಜಾಗವನ್ನು ಮಾಡಬೇಕು ॥

*** ಗೋಪಾಲಭಾಷ್ಯಂ –**

ಸಮಂ ವಾ ದೇಶಂ ಜೋಷಯತ ಇತಿ ದಕ್ಷಿಣಾಪ್ರತ್ಯಕ್ ಪ್ರವಣಮಿತ್ಯನೇನ ವಿಕಲ್ಪ್ಯತೇ । ಶೋಭನಾಭೂಮಿರ್ಯಸ್ಯ ಸ ಸುಭೂಮಿಃ । ಏತೇನ ಪೂರ್ವೋಕ್ತಾನಾಂ ಅನಿರಿಣತ್ವಾದೀನಾಮತ್ರಾಪಿ ಸಮುಚ್ಚಯ ಉಚ್ಯತೇ । ಅತ್ರ ತು ಯಸ್ಮಾತ್ ದಕ್ಷಿಣಾಪ್ರತೀಚ್ಯ ಆಪೂನಿಸ್ಸೃತ್ಯೇತ್ಯಯಮಂಶಃ । ಅಸಂಭವ ವ್ಯುದಸ್ತಃ । ಶೇಷಸ್ತು ಸಂಭವಾತ್ ಸಮುಚ್ಚೇತವ್ಯಃ । ಪ್ರದಕ್ಷಿಣೋದಕಮಿತಿ । ಕಲ್ಪಾಂತರೇ ದರ್ಶನಾತ್ । ಏಕದೇಶ ವಿರೋಧಾಚ್ಚ । ಇತರಸ್ಯಾಪಿ ಸಮುಚ್ಚಯ ಇತ್ಯಪರಂ । ಸಮಂ ವೇತಿ ಪಕ್ಷೇ ಬಹುಲೌಷಧಿಮಿತ್ಯಪರಂ ಲಕ್ಷಣಮಧಿಕಂ । ಬಹುಲಾ ಓಷಧಯೋ ಯಸ್ಮಾತ್ ಸ ಬಹುಲೌಷಧಿಃ ॥

ಸಮವಾದ ಪ್ರದೇಶದಲ್ಲಿ ದಹನಕ್ಕೆ ಸಿದ್ಧತೆ ಮಾಡಿಕೊಳ್ಳಬೇಕೆಂಬುದು, **ದಕ್ಷಿಣ–ಪಶ್ಚಿಮ** ತಗ್ಗಿರಬೇಕೆಂಬುದಕ್ಕೆ ವಿಕಲ್ಪವಾಗಿ ಹೇಳಿದುದಾಗಿದೆ । ಒಳ್ಳೆಯ ಭೂಮಿಯಾಗಿರಬೇಕು ಎಂಬುದನ್ನು, ಹಿಂದೆ ಹೇಳಿದ **'ಅನಿರಿಣ'** ಮುಂತಾದ ಸ್ಮಶಾನಲಕ್ಷಣಕ್ಕೆ ಸೇರಿಸಬೇಕು । ಈ ವಿಷಯದಲ್ಲಿ(ಸಮಭೂಮಿಯಾಗಿರಬೇಕು ಎಂಬ ವಿಷಯದಲ್ಲಿ) ಯಾವಪ್ರದೇಶದಿಂದ ದಕ್ಷಿಣ–ಪಶ್ಚಿಮಕ್ಕೆ ನೀರು ಹರಿಯುತ್ತದೋ, ಎಂಬ ಅಂಶವನ್ನು ಪರಿಗಣಿಸಬೇಕು । ಈ ಸ್ಮಶಾನ ಲಕ್ಷಣಗಳಲ್ಲಿ, ಯಾವಲಕ್ಷಣವು ಅಸಾಧ್ಯವೋ(ಇರುವುದಿಲ್ಲವೋ) ಅದನ್ನು ತಿರಸ್ಕರಿಸಬೇಕು । ಇನ್ನು ಯಾವುದು ಸಾಧ್ಯವೋ ಅದನ್ನು ಸ್ಮಶಾನ ಲಕ್ಷಣದಲ್ಲಿ ನಿಯಮವಾಗಿ ಸೇರಿಸಿಕೊಳ್ಳಬೇಕು(ಈ ಸ್ಮಶಾನಲಕ್ಷಣದಲ್ಲಿ – ದಕ್ಷಿಣ–ಪಶ್ಚಿಮಕ್ಕೆ ಹರಿಯುವುದೆಂಬುದು ಸಾಧ್ಯವಿಲ್ಲ, ಹಾಗಾಗಿ ಇಂತಹಾ ನಿಯಮಗಳನ್ನು ಬಿಡಬಹುದು)। ಪ್ರದಕ್ಷಿಣವಾಗಿ ನೀರು ಹರಿಯುವುದೆಂಬುದು,

ಕೆಲವುಕಡೆ ಸಾಧ್ಯ – ಕೆಲವುಕಡೆಗಳಲ್ಲಿ ಅಸಾಧ್ಯ। ಕಲ್ಪಾಂತರಗಳಲ್ಲಿ ಈ ಸ್ಮಶಾನಲಕ್ಷಣವನ್ನು ಬೇರೆಬೇರೆ ರೀತಿಯಾಗಿ ಸಮುಚ್ಚಯ(ಸೇರಿಸಿ) ಮಾಡಿದ್ದಾರೆ। ಕೆಲವರು ಪ್ರದಕ್ಷಿಣೆಯಾಗಿ ನೀರು ಹರಿಯಬೇಕೆನ್ನುವ ನಿಯಮವನ್ನೂ(ಲಕ್ಷಣ) ಕೈಬಿಡಬೇಕೆಂದು ಹೇಳಿದ್ದಾರೆ। ಏಕೆಂದರೆ, ಒಂದೇ ಪ್ರದೇಶದಲ್ಲಿ ಈ ರೀತಿಯಾಗಿ ಹರಿಯುವುದು ಸಾಧ್ಯವಿಲ್ಲದೆ ಇರುವುದರಿಂದ । ಸಮಪ್ರದೇಶವೆಂಬ ವಿಕಲ್ಪಪಕ್ಷದಲ್ಲಿ, ಬಹಳ ಔಷಧಿಸಸ್ಯಗಳಿಂದ ಕೂಡಿರಬೇಕೆಂಬುದನ್ನು ಸೇರಿಸಿಕೊಳ್ಳಬೇಕು । ಯಾವ ಕಡೆ ತುಂಬಾ ಓಷಧಿಸಸ್ಯಗಳು ಇರುತ್ತವೋ, ಅದು ಬಹಳ ಓಷಧಿಗಳಿರುವ ಜಾಗ ॥

*** ಕಪರ್ದಿಭಾಷ್ಯಂ –**

4+5 ಸಮಂ ವಾ ಸುಭೂಮಿಮಿತಿ । ಪೂರ್ವೋಕ್ತೈಃ ವಿಕಲ್ಪಃ । ಉತ್ತರೇ ಶಾಖಾಂತರಸ್ಥಾ ವಿಧಯಃ ॥

ಸಮಭೂಮಿಯು, ಎಂಬ ಪಕ್ಷದಲ್ಲಿ **'ಒಳ್ಳೆಯ ಸಸ್ಯಗಳಿಂದ ಕೂಡಿದ ಭೂಮಿ'** ಎಂದು ಹಿಂದೆ ಹೇಳಿದ್ದಕ್ಕೆ ವಿಕಲ್ಪವಾಗಿ ಹೇಳಿದೆ । ಮುಂದೆ ಹೇಳಿದಂತಹ ವಿಧಿಗಳು, ಬೇರೇ ಶಾಖೆಗಳಲ್ಲಿರುವ ವಿಧಿಗಳಾಗಿವೆ ॥

*** ಸೂತ್ರಂ – 5 (ಇಬ್ಬರಿಗೂ)**

ವನಸ್ಯಾವನಂ ಕ್ಷೇತ್ರಸ್ಯಾಕ್ಷೇತ್ರಂ ಇರಿಣಸ್ಯಾನಿರಿಣಂ ಇತ್ಯೇಕೇ ॥

ಕಾಡಿನ ಆದರೆ ಕಾಡಲ್ಲದ, ಗದ್ದೆ–ಹೊಲಗಳ ಆದರೆ ಗದ್ದೆ–ಹೊಲಗಳಲ್ಲದ, ಇರಿಣವಲ್ಲದೆ(ಮುಳ್ಳುಕಲ್ಲುಗಳಿಂದ ಕೂಡಿಲ್ಲದ) ಇರುವಂತಹಾ ಜಾಗವನ್ನು ದಹನ ಪ್ರದೇಶವನ್ನಾಗಿ ಮಾಡಬೇಕು ॥

*** ಗೋಪಾಲಭಾಷ್ಯಂ –**

ಏತಲ್ಲಕ್ಷಣಂ ಪೂರ್ವಸ್ಮಿನ್ನಪಿ ಪಕ್ಷೇ ಸಮುಚ್ಚೀಯತೇ ॥

ಈ ಮೇಲೆಹೇಳಿದ ಲಕ್ಷಣವು, ಹಿಂದೆ ಹೇಳಿದ ಪಕ್ಷದಲ್ಲೂ ಸೇರಿಸಿಕೊಳ್ಳಬಹುದು ॥

*** ಸೂತ್ರಂ – 6 (ಇಬ್ಬರಿಗೂ)**

ಯಸ್ಮಾದಾರಾತ್ ಕ್ಷೀರಿಣೋ ವೃಕ್ಷಾಃ ಕಾಂಟಕಿನಶ್ಚ ತಥೌಷಧ್ಯಃ / ತಥೌಷಧಯಃ ಇತಿ ಪಾಠಭೇದಃ ॥

ಏಕೆಂದರೆ, ಯಾವ ಜಾಗದಿಂದ ದೂರದಲ್ಲಿ, ಹಾಲಿರುವಂತಹ ಮರಗಳು ಮತ್ತು ಮುಳ್ಳು ಪೊದೆಗಳು ಹಾಗೂ ನಾನಾವಿಧ ಔಷಧಿಯುಕ್ತ ಮರಗಳು ಇರುತ್ತವೆಯೋ(ಇಲ್ಲಿ, **'ತಥೌಷಧಯಃ'** – ಎಂಬ ಪಾಠಭೇದವಿದೆ) । ಇಂತಹ ಲಕ್ಷಣಗಳಿಂದ ಕೂಡಿದ ಜಾಗದಿಂದ ದೂರದಲ್ಲಿ ಸ್ಮಶಾನವನ್ನು ಮಾಡಬೇಕು ॥

*** ಗೋಪಾಲಭಾಷ್ಯಂ –**

ಆರಾದಿತಿ ದೂರಾರ್ಥಮವ್ಯಯಂ । ಯತೋದೇಶಾತ್ ದೂರೇ ಕ್ಷೀರಿಣೋವಟೋದುಂಬರಾದಯಃ, ಕಂಟಕಿನಃ ಖದಿರಾದಯಃ, ತಥೌಷಧ್ಯಃ ಕ್ಷೀರಿಣ್ಯಃ ಕಂಟಕಿನ್ಯಶ್ಚ ಯಸ್ಮಾದಾರಾತ್, ತಥಾ ಭೂತಂ ದಹನದೇಶಂ ಜೋಷಯತೇ । ಯತ್ರೈವಂ ಭೂತಾ ಓಷಧಿವನಸ್ಪತಯಃ ಸಮೀಪೇ ನ ಸಂತಿ । ತಂ ಪರಿಗೃಹ್ಣೀಯಾದಿತಿ ॥

'ಆರಾತ್', ಎಂಬುದು **'ದೂರ'** ಎಂಬ ಅರ್ಥವಿರುವ ಅವ್ಯಯವು । ಯಾವ ಪ್ರದೇಶದಿಂದ ದೂರದಲ್ಲಿ ಹಾಲುಸುರಿಸುವ ವಟ(ಆಲ), ಔದುಂಬರ(ಅತ್ತಿ) ಮುಂತಾದ ಮರಗಳು ಹಾಗೂ ಮುಳ್ಳಿನ ಮರಗಳಾದ ಖದಿರ(ಕಗ್ಗಲಿ), ಗೊಬ್ಬಳಿ, ಬಿಲ್ವ ಮುಂತಾದ ಮರಗಳು ಹಾಗೂ ಹಾಲು ಮತ್ತು ಮುಳ್ಳನ್ನುಳ್ಳ ಓಷಧಿಸಸ್ಯಗಳು ಯಾವ ಪ್ರದೇಶದಿಂದ ದೂರದಲ್ಲಿವೆಯೋ ಆ ಜಾಗದಲ್ಲಿ ದಹನಪ್ರದೇಶವನ್ನು ಸಿದ್ಧಮಾಡಬೇಕು । ಯಾವ ಜಾಗದ ಹತ್ತಿರದಲ್ಲಿ ಓಷಧಿವನಸ್ಪತಿಗಳು ಇಲ್ಲವೋ ಆ ಜಾಗದಲ್ಲಿ ದಹನಕ್ಕೆ ಸಿದ್ಧತೆ ಮಾಡಬೇಕು ॥

*** ಆಶ್ವಲಾಯನಸ್ತು (ಆ.ಗೃ.ಸೂ. ಅ4. ಸೂ13) –**

ತದ್ರಹಿತ ದೇಶಾಲಾಭೇ ತೇಷಾಂ ಸಮೂಲೋದ್ಧಾರೇಣ ದಹನದೇಶ ಕೃಪ್ತಿಮಾಹ । ಕಂಟಕಿ ಕ್ಷೀರಿಣಸ್ತ್ವಿತಿ ಯಥೋಕ್ತಂ ಪುರಸ್ತಾದಿತಿ ॥

ಆಶ್ವಲಾಯನರು ಹೀಗೆ ಹೇಳುತ್ತಾರೆ – ಮೇಲೆ ಹೇಳಿದಂತಹ ಮರಗಳು ಇಲ್ಲದಿರುವ ಪ್ರದೇಶವು ಒಂದುವೇಳೆ ಸಿಗದಿದ್ದರೆ, ಈ ಮರಗಳನ್ನು ಬುಡಸಹಿತ ಕಿತ್ತು ಆ ಜಾಗದಲ್ಲಿ ದಹನಕ್ಕೆ ಸಿದ್ಧಮಾಡಬೇಕು । **'ಮುಳ್ಳು ಮತ್ತು ಹಾಲುಳ್ಳಂತಹದ್ದು'**, ಹಿಂದೆ ಹೇಳಿದಂತೆಯೇ ಅರ್ಥವು ॥

*** ಕಪರ್ದಿಭಾಷ್ಯಂ –**

ಯಸ್ಮಾತ್ ದಹನದೇಶಾತ್ ಆರಾತ್ ದೂರತಃ ಕ್ಷೀರಿಣೋ ವೃಕ್ಷಾಃ ಕಂಟಕಿನ ಇತ್ಯಾದಯಃ ॥

ಯಾವ ದಹನಪ್ರದೇಶದ ದೂರದಲ್ಲಿ, ಹಾಲುಬರುವಂತಹ ಹಾಗೂ ಮುಳ್ಳಿರುವ ಮರಗಳು ಇವೆಯೋ ಎಂಬ ಮುಂತಾದ ನಿಯಮಗಳು ಮೇಲಿನಂತೆಯೇ ಸಮಾನವಾಗಿವೆ ॥

*** ಸೂತ್ರಂ – 7 (ಆಹಿತಾಗ್ನಿಗಳಿಗೆ ಮಾತ್ರ)**

ತಸ್ಮಿನ್ ತ್ರೇಧೋಲ್ಲಿಖ್ಯ ಉದ್ಧತ್ಯಾವೋಕ್ಷ್ಯ(ತದುದ್ಧತ್ಯಾವೋಕ್ಷ್ಯ) ಗಾರ್ಹಪತ್ಯಂ ಮಥಿತ್ವಾಹವನೀಯಂ ಜ್ವಲಂತಂ ಉದ್ಧರತಿ ॥

ಆ ದಹನಪ್ರದೇಶದಲ್ಲಿ, 3 ರೀತಿಯಾಗಿ ಉಲ್ಲೇಖನಮಾಡಿ, ಅಗೆದು ನೀರು ಚಿಮುಕಿಸಿ, ಗಾರ್ಹಪತ್ಯಾಗ್ನಿಯನ್ನು ಮಂಥನಮಾಡಿ, ಆಹವನೀಯಾಗ್ನಿಯನ್ನು ಜ್ವಲನೆಮಾಡಿ, ಉದ್ಧರಣ(ಎತ್ತುತ್ತಾನೆ) ಮಾಡುತ್ತಾನೆ ॥

*** ಗೋಪಾಲಭಾಷ್ಯಂ –**

ಅತ್ರ ಯಜಮಾನಸ್ಯ ಮರಣ ಸಂಭಾವನಾಯಾಂ ಸತ್ಯಾಂ ಸ್ಮಶಾನೇ ಗ್ರಾಮೇ ವಾ ಸರ್ವಾಗ್ನೀನಾಂ ಅಜಸ್ರಧಾರಣಂ ವಕ್ಷ್ಯತೇ । ತತ್ರ ಯದಿ ಸ್ಮಶಾನೇ

ತತ್‌ಕ್ರಿಯತೇ ತದಾ ತಂ ದಹನದೇಶಂ ಅಗ್ನಿಸ್ಥಾಪನ ಪರ್ಯಾಪ್ತಂ ಉದ್ಧತ್ಯಾವೋಕ್ಷ್ಯ ತತ್ರಾಗ್ನಯಃ ತಾವತ್ ಸ್ಥಾಪನೀಯಾಃ । ತತ್ರ ಗಾರ್ಹಪತ್ಯಂ ಮಥಿತ್ವೇತಿ ಧಾರ್ಯಾಣಾಂ ಶ್ರೌತಾಗ್ನೀನಾಮರಣೆ ಸಮಾರೋಪಣ ಪ್ರದರ್ಶನಂ । ತತ್ರ ಚ ಯಜಮಾನಾತ್ಮ ಸಮಾರೋಪಣ ಕಲ್ಪಾಸಂಭವಾತ್ ವ್ಯವಸ್ಥಿತಮೇವ । ತತ್ರ ಗಾರ್ಹಪತ್ಯಸ್ಯ ತದರಣ್ಯೋಃ ಸಮಾರೋಪಣ ಮುಕ್ತವದ್ವೇದಿತವ್ಯಂ। ತಥಾ ದಕ್ಷಿಣಾಗ್ನೇಃ ಮಥಿತ್ವಾ ಆಹಿತಸ್ಯ। ಆಹಾರ್ಯತ್ವೇತು ಆಹರಣಮೇವ । ಆಹವನೀಯೋಪಿ ಗತಶ್ರಿಯಸ್ಸಮಾರೋಪ್ಯಃ ನೇತರಸ್ಯ । ಸಭ್ಯಾವಾಸಥ್ಯಯೋರಾಹಾರ್ಯತ್ವೇ ಆಹರಣಂ, ಮಥಿತ್ವಾ ಆಹಿತಯೋಸ್ತು ಅರಣಿಮಾತ್ರನಯನಂ, ನ ಸಮಾರೋಪಣಂ, ಅಧಾರ್ಯತ್ವಾತ್ । ಔಪಾಸನಸ್ಯತು ಸಮೋಪ್ಯ ಪ್ರತ್ಯಕ್ಷನಯನಮೇವ । ಔಪಾಸನ ಅನೇಕತ್ವೇ ಸರ್ವೇಷಾಮೌಪಾಸನಾನಾಮೇವಂ ಹರಣಂ । ಯಸ್ಯತ್ವೌಪಾಸನೋ ನ ವಿದ್ಯತೇ, ಸಭ್ಯಾವಸಥ್ಯೌ ವಾ, ತ್ರಯೋಪ್ಯೇತೇ ವಾ, ತಸ್ಯದನುಪಯೋಗಸ್ಯಾರ್ಥ ಸಿದ್ಧತ್ವಾತ್ ತತ್ ಕರ್ಮಾಭಾವೋತ್ರ ದ್ರಷ್ಟವ್ಯಃ ತತೋ ದಹನದೇಶಂ ಗತ್ವಾ ಗಾರ್ಹಪತ್ಯಂ ತಾವತ್ ಉಪಾವರೋಹನಾಂತೇನ ಮಂಥನವಿಧಿನಾ ಮಂಥೇತ್। ಆಹವನೀಯಂ ಜ್ವಲಂತಮುದ್ಧರತೀತಿ ವಚನಂ। ಸಿದ್ಧರೂಪಾನಾಂ ಅಗ್ನೀನಾಮಾಧಾನ ಕ್ರಮೇಣ ಮಂಥನಾತ್ ಉದ್ಧರಣಾದ್ವಾ ಸ್ವರೂಪ ನಿಷ್ಪಾದನ ಪ್ರದರ್ಶನಾರ್ಥಂ । ತತಶ್ಚ ಮಥಿತೇ ಗಾರ್ಹಪತ್ಯೇ ದಕ್ಷಿಣಾಗ್ನಿ ಆಹವನೀಯಯೋಃ ಅಪಿ ಸಮಾರೂಢಯೋಃ ಮಂಥನೋಪಾವಹರಣೇ ಭವತಃ । ಆಹವನೀಯಸ್ಯತೂದ್ಧಾರ್ಯತ್ವೇ ದಕ್ಷಿಣಾಗ್ನಿ ನಿಷ್ಪತ್ಯನಂತರಂ ಗಾರ್ಹಪತ್ಯಾದುದ್ಧರಣಂ । ತತಃ ಸಭ್ಯಾವಸಥ್ಯಯೋಃ ಅರಣಿಮತೋಃ ಮಂಥನಂ ಉದ್ಧಾರ್ಯಯೋಃ ಆಹವನೀಯಾತ್ ಉದ್ಧರಣಮಿತಿ(ಏವಂ ಸರ್ವಾಗ್ನಿಷು ಸಿದ್ಧರೂಪೇಷು ಸತ್ಸು ತತ್ ಸ್ಥಾಪನಾರ್ಥಂ ದೇಶನಿಯಮಂ ಕ್ರಮನಿಯಮಂ ಚಾಹ) ॥

ಇಲ್ಲಿ, ಯಜಮಾನನ ಮರಣಸಂಶಯ ಉಂಟಾದಾಗ, ಸ್ಮಶಾನದಲ್ಲಾಗಲೀ, ಗ್ರಾಮದಲ್ಲಾಗಲೀ(ಆಹಿತಾಗ್ನಿಯ) ಮೂರೂ ಅಗ್ನಿಗಳನ್ನು ಅಜಸ್ರ(ನಿರಂತರ) ಧಾರಣೆಮಾಡಬೇಕು । ಅಲ್ಲಿ ಒಂದುವೇಳೆ ಸ್ಮಶಾನದಲ್ಲಿ ಅಜಸ್ರಧಾರಣೆ ಮಾಡಿದರೆ, ದಹನದ ಜಾಗವನ್ನು ಮೂರೂ ಅಗ್ನಿಗಳನ್ನು ಇಡಲು ಸಾಕಾಗುವಷ್ಟು ಜಾಗವನ್ನು ಅಗೆದು, ನೀರಿನಿಂದ ಪ್ರೋಕ್ಷಿಸಿ, ಅಗ್ನಿಗಳನ್ನು ಇಡಬೇಕು । ಈ ವಿಷಯದಲ್ಲಿ, ಗಾರ್ಹಪತ್ಯಾಗ್ನಿಯ ಮಥನ ಮಾಡುವುದೆಂಬ ವಿಷಯವು ಧರಿಸಿದ ಶ್ರೌತಾಗ್ನಿಗಳನ್ನು ಒಂದುವೇಳೆ ಅರಣಿ ಸಮಾರೋಪಣ ಮಾಡಿದ್ದರೆ ಎಂಬುದನ್ನು ತೋರಿಸುವುದಕ್ಕಾಗಿ । ಇಲ್ಲಿ ಯಜಮಾನನ ಆತ್ಮಸಮಾರೋಪಣೆಯು ಸಾಧ್ಯವಿಲ್ಲವಾದ್ದರಿಂದ ಇದು ವ್ಯವಸ್ಥಿತವಾದ ನಿಯಮವು । ಈ ವಿಷಯದಲ್ಲಿ ಗಾರ್ಹಪತ್ಯದ ಅರಣಿಸಮಾರೋಪವು ಹೇಗೆ ಹೇಳಿದೆಯೋ ಹಾಗೆಯೇ ತಿಳಿದುಕೊಳ್ಳಬೇಕು । ಹಾಗೆಯೇ ದಕ್ಷಿಣಾಗ್ನಿಯ ಮಥನವು, ಆಹಿತಾಗ್ನಿಗೆ ಹೇಳಿದೆ । ಯಾವ ಅಗ್ನಿಯನ್ನು ಬೇರೆಕಡೆಯಿಂದ ತರಬೇಕೋ, ಅದನ್ನು ತರಲೇಬೇಕು । ಶುಶ್ರುವಾನ್(ಷಡಂಗಸಹಿತ ವೇದಾಧ್ಯಯನವನ್ನು ಅರ್ಥಸಹಿತ ಮಾಡಿದವನು) – ಗ್ರಾಮಣೀ(ಗ್ರಾಮದ ಅಧಿಪತಿ) – ರಾಜನ್ಯ(ರಾಜ) ಈ ಮೂವರೂ ಗತಶ್ರಿಗಳು(ಐಶ್ವರ್ಯವಂತರು) । ಇವರ ಆಹವನೀಯಾಗ್ನಿಯನ್ನೂ ಕೂಡ ಅರಣಿಸಮಾರೋಪ ಮಾಡಬೇಕು, ಇನ್ನು ಬೇರೆಯವರ ಆಹವನೀಯಾಗ್ನಿಯ ಅರಣಿಸಮಾರೋಪ ಇಲ್ಲ । ಸಭ್ಯ, ಆವಸಥ್ಯ ಎಂಬ ಎರಡು ಅಗ್ನಿಗಳನ್ನು ಕ್ರಮವಾಗಿ, ಸಭಾಭವನ ಮತ್ತು ಅಡುಗೆಮನೆಯಿಂದ ತರಬೇಕು । ಗಾರ್ಹಪತ್ಯ, ದಕ್ಷಿಣಾಗ್ನಿಗಳನ್ನು ಮಥನಮಾಡಿ, ಅರಣಿಯನ್ನು ಮಾತ್ರ ಕೊಂಡೊಯ್ಯಬೇಕು । ಅರಣಿಸಮಾರೋಪವನ್ನು ಮಾಡಬಾರದು । ಅವನು ಅಗ್ನಿಯನ್ನು ಆ ಸಮಯದಲ್ಲಿ ಇಟ್ಟುಕೊಳ್ಳದೇ ಇರುವುದರಿಂದ । ಔಪಾಸನಾಗ್ನಿಯ ನಯನವು(ಒಯ್ಯುವಿಕೆಯು) ಪ್ರತ್ಯಕ್ಷವಾಗಿಯೇ ಇರುತ್ತದೆ । ಅನೇಕ ಔಪಾಸನಗಳು ಇದ್ದರೆ(ಒಂದುವೇಳೆ, ಅನೇಕಪತ್ನಿಯರಿದ್ದರೆ, ಪ್ರತಿಪತ್ನಿಯರ ಔಪಾಸನವನ್ನೂ ಪ್ರತ್ಯೇಕವಾಗಿ ಇಟ್ಟುಕೊಳ್ಳಬೇಕೆಂಬುದು, ಆಪಸ್ತಂಬರ ಅಭಿಮತವಾಗಿದೆ) ಅವನೇ, ಎಲ್ಲಾ ಔಪಾಸನಗಳನ್ನೂ ಒಟ್ಟುಗೂಡಿಸಿ, ಹರಣಮಾಡಬೇಕು(ಒಯ್ಯಬೇಕು) । ಔಪಾಸನವು ಇಲ್ಲದವನೂ, ಹಾಗೂ ಸಭ್ಯಾಗ್ನಿಯು ಇಲ್ಲದವನೂ ಹಾಗೂ ಆವಸಥ್ಯಾಗ್ನಿಯು ಇಲ್ಲದವನೂ, ಇಂತಹ ಮೂವರಿಗೂ ಈ ಮೂರು ಅಗ್ನಿಗಳ ಕರ್ಮವು ಬರುವುದಿಲ್ಲವಾದ್ದರಿಂದ, ದಹನದೇಶಕ್ಕೆ ಹೋಗಿ, **ಗಾರ್ಹಪತ್ಯವನ್ನು ಉಪಾವರೋಹ.....**, ಎಂಬ ಮಂತ್ರದಿಂದ, ಉಪಾವರೋಹ ಮಾಡುವವರೆಗೆ ಮಂಥನವಿಧಿಯಿಂದ ಮಂಥನವನ್ನು ಮಾಡಬೇಕು । ಜ್ವಾಲೆಯು

ಇರುವಂತಹ ಆಹವನೀಯಾಗ್ನಿಯನ್ನು ಉದ್ಧರಣ ಮಾಡಬೇಕೆಂದು ವಚನವಿರುವುದು (ವಿಧಿಯಿರುವುದು) ಆಧಾನಕ್ರಮದಿಂದ ಸಿದ್ಧರೂಪವಾಗಿರುವ ಅಗ್ನಿಗಳನ್ನು ಮಂಥನ ಮಾಡುವುದರಿಂದ ಅಥವಾ ಉದ್ಧರಣ(ತೆಗೆದುಕೊಂಡು ಹೋಗುವಿಕೆ) ಮಾಡುವುದು, ಆ ಅಗ್ನಿಗಳ ಸ್ವರೂಪ ನಿಷ್ಪತ್ತಿಯ(ಉಂಟಾಗುವಿಕೆ) ಪ್ರದರ್ಶನಕ್ಕಾಗಿ । ಗಾರ್ಹಪತ್ಯವನ್ನು ಮಥನಮಾಡಿದ ನಂತರ ಸಮಾರೋಪ ಮಾಡಿದ ದಕ್ಷಿಣಾಗ್ನಿ ಮತ್ತು ಆಹವನೀಯಗಳನ್ನೂ ಕೂಡ ಮಂಥನ – ಉಪಾವಹರಣಗಳನ್ನು ಮಾಡಬೇಕು । ಆಹವನೀಯವನ್ನು ಉದ್ಧರಣ ಮಾಡಬೇಕಾದರೆ, ದಕ್ಷಿಣಾಗ್ನಿಯನ್ನು ಉತ್ಪತ್ತಿ ಮಾಡಿದಮೇಲೆ ಗಾರ್ಹಪತ್ಯದಿಂದ ತೆಗೆದುಕೊಂಡು ಹೋಗಬೇಕು । ನಂತರ ಸಭ್ಯ–ಆವಸಥ್ಯಗಳನ್ನು ಅರಣಿಮಂಥನ ಮಾಡಿ, ನಿಷ್ಪತ್ತಿ ಮಾಡುವ ಪಕ್ಷದಲ್ಲಿ, ಮಂಥನ ಮಾಡಬೇಕು । ಕೇವಲ ಉದ್ಧರಣ ಮಾಡಬೇಕಾದರೆ, ಆಹವನೀಯದಿಂದ ಉದ್ಧರಣ ಮಾಡಬೇಕು । ಹೀಗೆ ಎಲ್ಲಾ ಅಗ್ನಿಗಳು ಸಿದ್ಧವಾದಮೇಲೆ ಅದನ್ನು ಇಡಲು, ದೇಶನಿಯಮ ಮತ್ತು ಕ್ರಮನಿಯಮಗಳನ್ನು ಹೇಳುತ್ತಾರೆ ॥

*** ಕಪರ್ದಿಭಾಷ್ಯಂ –**

ಅಗ್ನೀನ್ ಸಮಾರೋಪ್ಯ ದಹನದೇಶಂ ಗತ್ವಾ ನಿರ್ಮಥನಾದಿ ಪ್ರತಿಪದ್ಯತೇ ಜ್ವಲಂತಮಿತಿ ವಚನಾತ್ ॥

ಎಲ್ಲಾ ಅಗ್ನಿಗಳನ್ನೂ(ತ್ರೇತಾಗ್ನಿ – ಸಭ್ಯ – ಆವಸಥ್ಯ – ಔಪಾಸನಾಗ್ನಿ) ಸಮಾರೋಪಮಾಡಿ, ದಹನದೇಶಕ್ಕೆ ಹೋಗಿ, ನಿರ್ಮಥನ(ಮಂಥನ ಮಾಡದ,ಸಭ್ಯ–ಆವಸಥ್ಯ–ಔಪಾಸನ) ಮುಂತಾದ ವಿಧಿಗಳನ್ನು ಮಾಡಬೇಕು, 'ಜ್ವಲಂತಂ' ಎಂಬ ವಚನವಿರುವುದರಿಂದ ॥

*** ಸೂತ್ರಂ – 8 (ಆಹಿತಾಗ್ನಿಗಳಿಗೆ ಮಾತ್ರ)**

ಅಂತರಾದಾರುಚಿತೇರವಕಾಶಂ ಶಿಷ್ಟ್ವಾಗ್ನೀನುಪವಪತಿ ಪುರಸ್ತಾದಾಹವನೀಯಂ ಪಶ್ಚಾದ್ಗಾರ್ಹಪತ್ಯಂ ದಕ್ಷಿಣತೋನ್ವಾಹಾರ್ಯಪಚನಂ ಪುರಸ್ತಾತ್ ಸಭ್ಯಾ ಆವಸಥ್ಯಾವೌಪಾಸನಂ ಚ ॥

ಕಟ್ಟಿಗೆಗಳಿಂದ ನಿರ್ಮಿಸಿರುವ ಚಿತೆಯ ಪಕ್ಕದಲ್ಲಿ – ಪೂರ್ವದಿಕ್ಕಿನಲ್ಲಿ ಆಹವನೀಯಾಗ್ನಿಯ ವೇದಿಯನ್ನು, ಪಶ್ಚಿಮದಿಕ್ಕಿನಲ್ಲಿ ಗಾರ್ಹಪತ್ಯಾಗ್ನಿಯ ವೇದಿಯನ್ನು, ದಕ್ಷಿಣದಿಕ್ಕಿನಲ್ಲಿ ದಕ್ಷಿಣಾಗ್ನಿಯ ವೇದಿಯನ್ನು ಮತ್ತೇ ಪೂರ್ವದಿಕ್ಕಿಗೆ ಸಭ್ಯಾ–ಆವಸಥ್ಯ ಮತ್ತು ಔಪಾಸನಾಗ್ನಿಗಳನ್ನೂ ಆಧಾನ(ಇಟ್ಟುಕೊಳ್ಳಬೇಕು) ಮಾಡಬೇಕು ॥

* ಗೋಪಾಲಭಾಷ್ಯಂ –

ಅಂತರಾಮಧ್ಯೇ ? ಕಿಮಪೇಕ್ಷಂ ಮಧ್ಯಂ ? ಅಗ್ನ್ಯಪೇಕ್ಷಮಿತಿಬ್ರೂಮಃ । ಕೇಷಾಂ ಅಗ್ನೀನಾಂ ಮಧ್ಯೇ? ತ್ರೇತಾಗ್ನೀನಾಂ । ಕುತಃ ? ತಥೈವೋತ್ತರತ್ರವಗಮಾತ್ । ದಾರುಚಿತಿಃ ದಹನಾರ್ಥ ಕಾಷ್ಠಸಂಘಾತಃ । ತಸ್ಯಾ ಅವಕಾಶಮವಶಿಷ್ಯ ಅಗ್ನೀನ್ ನಿವಪೇತ್ । ತದ್ಯಥಾ । ದಾರುಚಿತ್ಯವಕಾಶಸ್ಯ ಪುರಸ್ತಾದಾಹವನೀಯಂ ಸ್ಥಾಪಯಿತ್ವಾ ತಸ್ಯ ಪಶ್ಚಾದ್ಗಾರ್ಹಪತ್ಯಂ । ಏವಂ ದಾರುಚಿತ್ಯವಕಾಶಸ್ಯೈವಾಂಜಸಾ ದಕ್ಷಿಣತಃ ಅನ್ವಾಹಾರ್ಯಪಚನಂ ಉಪವಪತಿ । ತಥಾ ಚೈಷಾಂ ತ್ರಯಾಣಾಮಗ್ನೀನಾಂ ಮಧ್ಯತಶ್ಚಿತೇಃ ಅವಕಾಶಶೇಷ್ಯತಯಾಗಮ್ಯತೇ । ಪುರಸ್ತಾತ್ ಸಭ್ಯ ಆವಸಥ್ಯಾವಿತಿ ಪೂರ್ವೋಕ್ತಾನಾಂ ಸರ್ವೇಷಾಂ ಪುರಸ್ತಾದಿತಿ ವೇದಿತವ್ಯಂ । ನ ತು ದಾರುಚಿತ್ಯವಕಾಶಮಾತ್ರಸ್ಯ । ಕುತಃ ? ತೇಷ್ವಜಸ್ರೇಷು ಜುಹ್ವದ್ವಸತೀತ್ಯಸ್ಮಿನ್ನೇವ ವಿಹಾರೇ । ಅಗ್ನಿಹೋತ್ರಾದಿ ಕರ್ಮಾನುಷ್ಠಾನ ವಚನಾತ್ । ತದನುಷ್ಠಾನಸ್ಯಾಗ್ನ್ಯಧೇಯಿಕ ವಿಹಾರಮಾತ್ರ ಗೋಚರತ್ವಾತ್ । ತತ್ರ ಚ ಅಗ್ರೇಣಾಹವನೀಯಂ ತಂ ಪೂರ್ವೇಣೇತಿ ದೇಶನಿಯಮಾತ್ । ಏತೇನ ಗಾರ್ಹಪತ್ಯಾಹವನೀಯಯೋಃ ಗಾರ್ಹಪತ್ಯ ದಕ್ಷಿಣಾಗ್ನ್ಯೋಶ್ಚ ತನ್ನ್ಯಾಯೇನೈವಾಂತರಾಳಕ್ಲ್ಪ್ತಿರಿತಿ ವ್ಯಾಖ್ಯಾತಂ । ತತಶ್ಚಾಹವನೀಯಸ್ಯ ಪುರಸ್ತಾತ್ ಸಭ್ಯಃ । ತತಃ ಪುರಸ್ತಾದಾವಸಥ್ಯ । ತತಃ ಪುರಸ್ತಾತ್ ಔಪಾಸನಸ್ಸಭಾಂಡ ಇತಿ ಸಿದ್ಧಂ ಭವತಿ । ಏತೇಷು ದೇಶೇಷ್ವನೇನೈವೋಪ ದೇಶಕ್ರಮೇಣ ಅಗ್ನೀನಾಂ ಸ್ಥಾಪನಮಿಶ್ಯತೇ । ನ ತು ನಿತ್ಯೇನ ಕ್ರಮೇಣ ।

ತಥಾ ಸತ್ಯೇತತ್ ಕ್ರಮವೈಯರ್ಥ್ಯ ಪ್ರಸಂಗಾತ್ । ಆಹವನೀಯಂ ಜ್ವಲಂತಮುದ್ಧರತೀತ್ಯಸ್ಯಾಪಿ ವೈಯರ್ಥ್ಯ ಪ್ರಸಂಗಾಚ್ಚ ದಾರುಚಿತೇಃ ಅವಕಾಶಂ ಶಿಷ್ಟ್ವೇತ್ಯನೇನ ಮರಣಪಕ್ಷಏವಂ ಸ್ಥಾಪಿತಾ ಏವಾಗ್ನಯೋ ದಹನಾರ್ಥಾಭವಿಶ್ಯಂತೀತಿ ಜ್ಞಾಪ್ಯತೇ । ತತಶ್ಚ ಏತೇಮೃತೇಸ್ಮಿನ್ನಪ್ರತ್ಯಾಹೃತ್ಯ ಪುನಸ್ಸಹ ನೇತವ್ಯಾ ಇತಿ ಸಿದ್ಧಂ ಭವತಿ ॥

ಅಂತರಾ ಎಂದರೆ?, ಮಧ್ಯದಲ್ಲಿ ಎಂದು । ಯಾವುದರ ಮಧ್ಯ ಎಂದರೆ?, ಅಗ್ನಿಯನ್ನು ಅಪೇಕ್ಷಿಸಿ ಎಂದು ಹೇಳುತ್ತೇವೆ । ಕೂದಲುಗಳನ್ನು ಅಗ್ನಿಗಳ ಮಧ್ಯೆ ಎಂದರೆ?, ತ್ರೇತಾಗ್ನಿಗಳ ಮಧ್ಯೆ ಎಂದು । ಯಾವ ಕಾರಣದಿಂದ ಹೀಗೆ ಅರ್ಥಮಾಡಬೇಕು ಎಂದರೆ?, ಮುಂದೆ ಅದೇ ರೀತಿಯಾದ ಅರ್ಥವು ತಿಳಿದುಬರುತ್ತಿದೆಯಾದ್ದರಿಂದ । **ದಾರುಚಿತಿಯೆಂದರೆ,** ಸುಡಲು ಸಿದ್ಧಪಡಿಸಿರುವ ಕಟ್ಟಿಗೆಗಳ ಸಮೂಹ । ಅದರಮಧ್ಯೆ ಸ್ವಲ್ಪಜಾಗವನ್ನು ಬಿಡಿಸಿ ಅಗ್ನಿಗಳನ್ನು ಇಡಬೇಕು । ಹೇಗೆಂದರೆ । ಆ ದಾರುಚಿತಿಯ ಪೂರ್ವದಿಕ್ಕಿನ ಜಾಗದಲ್ಲಿ ಆಹವನೀಯವನ್ನು ಇಟ್ಟು, ದಾರುಚಿತಿಯ ಪಶ್ಚಿಮದ ಜಾಗದಲ್ಲಿ ಗಾರ್ಹಪತ್ಯವನ್ನು, ಹೀಗೆಯೇ ದಾರುಚಿತಿಯ ದಕ್ಷಿಣಜಾಗದಲ್ಲಿ ದಕ್ಷಿಣಾಗ್ನಿ(ಅನ್ವಾಹಾರ್ಯಪಚನ)ಯನ್ನು ಇಡಬೇಕು । ಹಾಗೆಯೇ ಈ ಮೂರೂ ಅಗ್ನಿಗಳ ಮಧ್ಯದಲ್ಲಿ ಅವಕಾಶವುಳಿಸುವಂತೆ ದಾರುಚಿತಿಯ ಪೂರ್ವದಲ್ಲಿ, ಎಂದರೆ ಮೂರೂ ಅಗ್ನಿಗಳ ಪೂರ್ವಭಾಗಕ್ಕೆ ಸಭ್ಯ–ಆವಸಥ್ಯಗಳನ್ನು ಇಡಬೇಕೆಂದು ತಿಳಿಯಬೇಕು । ಕೇವಲ ದಾರುಚಿತಿಯ ಪೂರ್ವಜಾಗದಲ್ಲಿ ಎಂದರ್ಥವಲ್ಲ । ಏಕೆಂದರೆ – ಈ ಅಗ್ನಿಗಳಲ್ಲಿ ಅಜಸ್ರವಾಗಿ ಹೋಮಮಾಡಿ, ಆ ಅಗ್ನಿಗಳ ಸ್ವರೂಪವಾಗಿಯೇ ಈ ವಿಹಾರದಲ್ಲಿ(ವೇದಿ) ಯಜಮಾನನು ವಾಸವಾಗಿರುತ್ತಾನೆ । ಅಗ್ನಿಹೋತ್ರಾದಿ ಕರ್ಮಾನುಷ್ಠಾನವನ್ನು ಮಾಡಬೇಕೆಂದು ವಚನಗಳು ಇರುವುದರಿಂದ । ಆ ಅಗ್ನಿಹೋತ್ರಾನುಷ್ಠಾನದ, ಅಗ್ನ್ಯಾಧೇಯದ ವಿಹಾರಮಾತ್ರದಲ್ಲಿ ಎಂದು ತಿಳಿದುಬರುತ್ತಿರುವುದರಿಂದ । ಅಲ್ಲಿ(ಅಗ್ನ್ಯಾಧಾನದಲ್ಲಿ) ಆಹವನೀಯದ ಮುಂದೆ ಅದನ್ನು ಪೂರ್ವದಿಕ್ಕಿನಲ್ಲಿ ಇಡಬೇಕು ಎಂದು ದೇಶನಿಯಮವನ್ನು ಮಾಡಿರುವುದರಿಂದ । ಇದರಿಂದ ಗಾರ್ಹಪತ್ಯ–ಆಹವನೀಯಗಳಿಗೆ ಹಾಗೂ ಗಾರ್ಹಪತ್ಯ–ದಕ್ಷಿಣಾಗ್ನಿಗಳಿಗೆ ನಿಯಮರೂಪವಾದ ಶಾಸ್ತ್ರವಿಧಿರೂಪವಾದ ಅಂತರವು ಸಿದ್ಧವಾಗುತ್ತದೆ, ಎಂದು ವ್ಯಾಖ್ಯಾನ ಮಾಡಿದಂತಾಗುತ್ತದೆ(ಗಾರ್ಹಪತ್ಯ ಹಾಗೂ ದಕ್ಷಿಣಾಗ್ನಿ–ಆಹವನೀಯಗಳಿಗೆ ಅಂತರವು 'ಇಷ್ಟೇ ಇರಬೇಕೆಂಬ ನಿಯಮವು ಇದೆ') ।

ಆಹವನೀಯದ ಮುಂದೆ ಸಭ್ಯಾಗ್ನಿಯನ್ನು ಇಡಬೇಕು, ಅದರಮುಂದೆ ಆವಸಥ್ಯವು, ಅದರಮುಂದೆ ಭಾಂಡಸಹಿತವಾಗಿ ಔಪಾಸನಾಗ್ನಿಯನ್ನು ಇಡಬೇಕೆಂದು ಸಿದ್ಧವಾಗುತ್ತದೆ । ಈ ಸ್ಥಾನಗಳಲ್ಲಿ ಮೇಲೆಹೇಳಿದ ಕ್ರಮದಿಂದಲೇ ಅಗ್ನಿಗಳನ್ನು ಸ್ಥಾಪನಮಾಡಬೇಕು । ಪ್ರತಿನಿತ್ಯ ಸ್ಥಾಪನ ಮಾಡುವ ಕ್ರಮದಿಂದ ಅಲ್ಲ । ಒಂದುವೇಳೆ ಪ್ರತಿನಿತ್ಯ ಸ್ಥಾಪನ ಮಾಡುವ ಕ್ರಮದಿಂದ ಇಟ್ಟರೆ, ಈ ಮೇಲೆಹೇಳಿದ ಕ್ರಮವು ವ್ಯರ್ಥವಾಗಿ ಹೋಗುತ್ತದೆ । ಹಾಗೂ **ಆಹವನೀಯವನ್ನು ಜ್ವಲನೆಮಾಡಿಕೊಂಡು ತೆಗೆದುಕೊಂಡು ಹೋಗಬೇಕೆನ್ನುವ** ವಾಕ್ಯವು ವ್ಯರ್ಥವಾಗುತ್ತದೆ । ಇಲ್ಲಿ ದಾರುಚಿತಿಯಲ್ಲಿ ಜಾಗಮಾಡಿಕೊಂಡು ಅಗ್ನಿಗಳನ್ನು ಸ್ಥಾಪನೆ ಮಾಡಬೇಕೆಂದು ಹೇಳಿರುವುದರಿಂದ, ಮರಣಪಕ್ಷದಲ್ಲಿ ಇಟ್ಟಂತಹ ಈ ಅಗ್ನಿಗಳು ದಹನಕ್ಕೆ ಯೋಗ್ಯವಾಗುತ್ತವೆ ಎಂದು ಹೇಳಿದಂತೆ ಆಯಿತು । ನಂತರ ಯಜಮಾನನ ಮರಣ ಪ್ರಾಪ್ತವಾಗಲಾಗಿ, ಮತ್ತೆ ಹಿಂದೆಬಂದು ಅಗ್ನಿಗಳನ್ನು ತೆಗೆದುಕೊಂಡು ಹೋಗುವಂತೆ ಆಗಬಾರದು, ಮೃತಯಜಮಾನನ ಜೊತೆಯಲ್ಲಿಯೇ ತೆಗೆದುಕೊಂಡು ಹೋಗಬೇಕೆನ್ನುವುದು ಸಿದ್ಧವಾಗುತ್ತದೆ ॥

* ಕಪರ್ದಿಭಾಷ್ಯಂ –

ತೂಷ್ಣೀಮೇವ ತಥಾ ಸ್ಥಾಪಯಿತ್ವಾಹವನೀಯಂ ಯಥಾಮಧ್ಯೇ ದಾರುಚಿತೇಃ ಸ್ಥಾಪನಂ ಭವತಿ । ಔಪಾಸನಂ ಚ । ನ ಸರ್ವ ಆಹಿತಶ್ಚೇತ್ । ಯದಿ ಪತ್ನೀಪೂರ್ವಂ ಮ್ರಿಯೇತ ತಾಂ ಔಪಾಸನೇನ ದಹೇದಿತಿ ಕೇಚಿತ್ । ತತ್ ಅನುಪಪನ್ನಂ । ನಿರ್ಮಂಥ್ಯೇನ ಪತ್ನೀಮಿತಿ ವಚನಾತ್ ॥

ಆಹವನೀಯವನ್ನು ದಾರುಚಿತಿಯ ಮಧ್ಯದಲ್ಲಿ, ಮೇಲೆ ಹೇಳಿದ ರೀತಿಯಲ್ಲಿ ಅಮಂತ್ರಕವಾಗಿ ಸ್ಥಾಪನೆ ಮಾಡಬೇಕು । ಹಾಗೆಯೇ ಔಪಾಸನಾಗ್ನಿಯನ್ನು । ಸಂಪೂರ್ಣ ಔಪಾಸನಾಗ್ನಿಯನ್ನು ಆಧಾನಮಾಡದೇ ಇದ್ದರೆಮಾತ್ರ । ಒಂದುವೇಳೆ ಪತ್ನಿಯೇ ಯಜಮಾನನಿಗಿಂತ ಮುಂಚೆ ಮರಣಹೊಂದಿದರೆ – ಆಗ ಔಪಾಸನಾಗ್ನಿಯಲ್ಲಿ ಪತ್ನಿಯ ಸಂಸ್ಕಾರವನ್ನು ಮಾಡಬೇಕೆಂದು ಕೆಲವರು ಹೇಳುತ್ತಾರೆ । ಆದರೆ ಅದು ಸರಿಯಲ್ಲ । ನಿರ್ಮಥನಾಗ್ನಿಯಲ್ಲಿ ಪತ್ನಿಯ ಸಂಸ್ಕಾರವನ್ನು ಮಾಡಬೇಕೆಂದು ವಚನವಿರುವುದರಿಂದ ॥

* ಸೂತ್ರಂ – 9 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)

ತೇಷ್ವಜಸ್ರೇಷು ಜುಹ್ವದ್ವಸತಿ ॥

ಅವುಗಳಲ್ಲಿ, ಅಜಸ್ರ(ನಿರಂತರ)ವಾಗಿ ಹೋಮಿಸುತ್ತಾ, ಅಲ್ಲಿಯೇ ವಾಸಮಾಡಬೇಕು ॥

* ಗೋಪಾಲಭಾಷ್ಯಂ –

ಅಜಸ್ರವಚನಂ ಧಾರ್ಯಾಣಾಂ ಅರ್ಥಾಯಾರ್ಥಾಯ ನಿಷ್ಪತ್ತಿ ನಿವೃತ್ಯರ್ಥಂ । ಜುಹ್ವದಿತ್ಯಗ್ನಿಸಾಧ್ಯಾನಾಂ ಸರ್ವೇಷಾಂ ನಿತ್ಯ ನೈಮಿತ್ತಿಕಾನಾಂ ದರ್ವಿಹೋಮೇಷ್ಟಿ ಪಶೂನಾಂ ಪ್ರದರ್ಶನಾರ್ಥಂ ॥

ಅಜಸ್ರ(ನಿರಂತರ) ಧಾರಣೆಯು, ಪ್ರತಿನಿತ್ಯ ಮಥನದಿಂದ ಅಗ್ನಿಯ ಉತ್ಪತ್ತಿಯನ್ನು ಮಾಡಬೇಕೆಂಬ ವಾದವನ್ನು ತಿರಸ್ಕರಿಸಲು ಹಾಗೂ ಚಾತುರ್ಮಾಸ್ಯ ಮುಂತಾದ ಯಾಗಗಳಲ್ಲಿ ಅಗ್ನ್ಯಾಧಾನವನ್ನು ಮಾಡಬೇಕೆಂಬುದನ್ನು ಅಲ್ಲಗಳೆಯಲು । ಅಗ್ನಿಯಿಂದ ಮಾಡಲ್ಪಡುವ ಎಲ್ಲಾ ನಿತ್ಯ, ನೈಮಿತ್ತಿಕ, ಕರ್ಮಗಳು ಹಾಗೂ ದರ್ವಿಹೋಮ, ಇಷ್ಟಿ, ಪಾಶುಕಯಜ್ಞ ಮುಂತಾದವುಗಳಲ್ಲಿ ಅಗ್ನ್ಯಾಧಾನವನ್ನು ನಿವೃತ್ತಿಗೊಳಿಸುವುದಕ್ಕಾಗಿ । **'ಜುಹ್ವತ್'** ಎಂಬುದು, ಈ ಮೇಲೆಹೇಳಿದ ಎಲ್ಲಾ ಕರ್ಮಗಳು ಆಧಾನಮಾಡಿದ ಅಗ್ನಿಯಿಂದ ಮಾಡಲ್ಪಡತಕ್ಕದ್ದು ಎಂಬುದನ್ನು ತೋರಿಸಲು ॥

* ಕಪರ್ದಿಭಾಷ್ಯಂ –

ಪ್ರಕೃತಿವಜ್ಜುಹೋತಿ ಆಮರಣಾತ್ । ತೇಷ್ವಜಸ್ರೇಷು ಜುಹ್ವದಿತಿ ವಚನಾತ್ । ನ ಕೇವಲಮಗ್ನಿಹೋತ್ರಮೇವ । ಅನ್ಯಾನ್ಯಪಿ ಕಾಮ್ಯ ನೈಮಿತ್ತಿಕ ಪ್ರಾಯಶ್ಚಿತ್ತಾನಿ ತೇಷ್ವೇವ । ಅವಿರೋಧಾತ್ । ಯದಿ ದೀರ್ಘಕಾಲಂ ಸಂಶಯಸ್ಯಾತ್ ದರ್ಶಪೂರ್ಣಮಾಸಾವಾಗ್ರಯಣಂ ಪಶುಬಂಧ ಇತಿ । ಯಾವಜ್ಜೀವ ವಚನ ನ್ಯಾಯೇನ ಉಪದೇಶಃ । ಅತಿಪನ್ನಾನಾಂ ಪ್ರಾಯಶ್ಚಿತ್ತಂ ಕುರ್ವಂತೀತಿ ॥

ಪ್ರಕೃತಿಯಂತೆ ಹೋಮಮಾಡುತ್ತಾನೆ, ಮರಣಸಂಭವಿಸುವವರೆಗೆ । ಏಕೆಂದರೆ ಈ ಅಗ್ನಿಗಳಲ್ಲಿ ಅಗ್ನಿಹೋತ್ರಾದಿ ಹೋಮಗಳನ್ನು ಮಾಡುತ್ತಾ ಜೀವಿಸುತ್ತಾನೆ ಎಂಬ ವಚನವಿರುವುದರಿಂದ । ಕೇವಲ ಅಗ್ನಿಹೋತ್ರ ಕರ್ಮವಷ್ಟೇ ಅಲ್ಲ । ಬೇರೇ, ಕಾಮ್ಯ–ನೈಮಿತ್ತಿಕ–ಪ್ರಾಯಶ್ಚಿತ್ತ ಮುಂತಾದವುಗಳನ್ನೂ ಕೂಡ ಆ ಅಗ್ನಿಯಲ್ಲೇ ಮಾಡುತ್ತಾನೆ, ಶಾಸ್ತ್ರವಿರೋಧವಿಲ್ಲದ್ದರಿಂದ । ಒಂದುವೇಳೆ ದೀರ್ಘಕಾಲದವರೆಗೆ ಮರಣಸಂಶಯವು ಇದ್ದರೆ(ಅನಾರೋಗ್ಯದಿಂದ), ಆಗ ದರ್ಶಪೂರ್ಣಮಾಸ ಇಷ್ಟಿ, ಆಗ್ರಯಣಇಷ್ಟಿ, ಪಶುಬಂಧ, ಇವುಗಳನ್ನು ಮಾಡಬೇಕು । ಏಕೆಂದರೆ, ಯಾವಜ್ಜೀವ ಇವುಗಳನ್ನು ಮಾಡಲೇಬೇಕೆಂಬ ವಚನವಿರುವುದರಿಂದ । ಒಂದುವೇಳೆ, ಅನಾರೋಗ್ಯದಿಂದ ಮಾಡದಿದ್ದರೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು ॥

*** ಸೂತ್ರಂ – 10 (ಆಹಿತಾಗ್ನಿಗಳಿಗೆ ಮಾತ್ರ)**

ಪ್ರಾಣಾ ವಾ ಏತತ್ ಆಹಿತಾಗ್ನೇಃ ಯದಗ್ನಯಸ್ತ ಏನಂ ಸುಸಮಿದ್ಧಾಃ ಪಾರಯಂತಿ ಅಗದೋಹೈವ ಭವತೀತಿ ವಿಜ್ಞಾಯತೇ ॥

ಏಕೆಂದರೆ, ಆಹಿತಾಗ್ನಿಗೆ ಈ ಅಗ್ನಿಗಳೇ ಪ್ರಾಣವು, ಅಂತಹ ಈ ಅಗ್ನಿಗಳು ಚೆನ್ನಾಗಿ ಸಮಿಂಧನ(ಉರಿದು)ಗೊಂಡು, ಈ ಯಜಮಾನನಿಗೆ ಪ್ರಾಣಧಾರಣ ಶಕ್ತಿಯನ್ನು ನೀಡುತ್ತವೆ । ಇದರಿಂದ ಯಜಮಾನನು ರೋಗವಿಲ್ಲದವನಾಗಿರುತ್ತಾನೆ ಎಂದು ವೇದವು ಹೇಳುತ್ತಿರುವುದರಿಂದ ॥

*** ಗೋಪಾಲಭಾಷ್ಯಂ –**

ಏತೇ ಪ್ರಾಣಸಂಸ್ತುತಾ ಅಗ್ನಯಃ ಸಮಿದ್ಧಾಃ ಅಜಸ್ರತಯಾ ಧಾರ್ಯಮಾಣಾಃ । ಏನಮಾಹಿತಾಗ್ನಿಂ ರೋಗಾತ್ಪಾರಯಂತಿ ಉತ್ತಾರಯಂತಿ ತತಶ್ಚ ಅಗದಃ ನೀರೋಗೋ ಭವತೀತಿ ಶ್ರೂಯತೇ । ತಸ್ಮಾತ್ ಏತದಾರೋಗ್ಯಾರ್ಥಂ ಕೃತಮಜಸ್ರಧಾರಣಂ ಪ್ರಬಲರೋಗ ಪ್ರತಿಘಾತಾತ್ ಮೃತೇಸ್ಮಿನ್ ಪ್ರಸಂಗಾದ್ದಹನಾರ್ಥಮಪಿ ಭವಿಷ್ಯತೀತ್ಯನುಸಂಧೇಯಂ । ಆಶ್ವಲಾಯನಸ್ತು ಅಗ್ನೀನಾಂ ಗ್ರಾಮಾತ್ ಬಹಿಸ್ಥಾಪನಂ ಆರೋಗ್ಯಾರ್ಥಂ ಇತ್ಯಾಹ –

ಗ್ರಾಮಕಾಮಾ ಅಗ್ನಯ ಇತ್ಯುದಾಹರಂತಿ । ಆಸಂಸಂತಃ ಏನಂ ಗ್ರಾಮಮಾಜಿಗಮಿಶಂತಃ ಅಗದಂ ಕುರ್ಯುರಿತಿ ಇಹ ವಿಜ್ಞಾಯತ ಇತಿ । ತತಶ್ಚ ಏವಂ ದಹನದೇಶೇ ಅಜಸ್ರಧಾರಣಾದ್ಗುಣಾಧಿಕ್ಯಂ ದ್ರಷ್ಟವ್ಯಮ್ ॥

ಈ ಪ್ರಾಣಗಳೆಂದು ಸ್ತುತಿಸಿದ ಅಗ್ನಿಗಳು ಚೆನ್ನಾಗಿ ಸಮಿಂಧನ(ಉರಿಯುವಿಕೆ) ಮಾಡಲ್ಪಟ್ಟು, ಅಜಸ್ರ(ನಿರಂತರ)ವಾಗಿ ಧಾರಣೆ ಮಾಡಲ್ಪಟ್ಟು । **ಈ ಆಹಿತಾಗ್ನಿಯಾದ ಯಜಮಾನನನ್ನು ರೋಗದಿಂದ ಮುಕ್ತಗೊಳಿಸಿ, ಮತ್ತೆ ಯಾವ ರೋಗಗಳೂ ಬರದಂತೆ ನಿರೋಗಿಯಾಗಿ ಮಾಡುತ್ತವೆ ಎಂದು ಶ್ರುತಿಯಲ್ಲಿ ಹೇಳಿದೆ** । ಆದ್ದರಿಂದ ಈ ಅಗ್ನಿಗಳು ಆರೋಗ್ಯಕ್ಕಾಗಿ ಅಜಸ್ರಧಾರಣೆ ಮಾಡಲ್ಪಟ್ಟದ್ದಾಗಿ ಪ್ರಬಲರೋಗದ ಹೊಡೆತಕ್ಕೆ ಸಿಕ್ಕಿ, ಯಜಮಾನನು ಮೃತನಾದರೆ, ಪ್ರಸಂಗವಶದಿಂದ ಈ ಅಗ್ನಿಗಳು ದಹನಕ್ಕೆ ಯೋಗ್ಯವಾಗಿರುತ್ತವೆ ಎಂದು ತಿಳಿಯಬೇಕು । ಆಶ್ವಲಾಯನ ಮುನಿಗಳಾದರೋ, ಅಗ್ನಿಗಳನ್ನು ಗ್ರಾಮದಿಂದ ಹೊರಕ್ಕೆ ಸ್ಥಾಪನೆ ಮಾಡುವುದು ಆರೋಗ್ಯಕ್ಕಾಗಿ ಎಂದು ಹೇಳಿದ್ದಾರೆ । ಗ್ರಾಮಕಾಮನಾದವನು(ಗ್ರಾಮದ ಒಡೆಯನಾಗಲು ಇಚ್ಛಿಸುವವನು) ಈ ರೀತಿಯಾಗಿ ಅಗ್ನಿಗಳನ್ನು ಗ್ರಾಮದಿಂದ ಹೊರಕ್ಕೆ ಇಡಬೇಕೆಂಬ ಶ್ರುತಿಯನ್ನು ಉದಾಹರಣೆಯಾಗಿ ಕೊಟ್ಟಿದ್ದಾರೆ । ಹೀಗೆ ಹೊರಕ್ಕಿಟ್ಟ ಅಗ್ನಿಗಳ ಮಹಿಮೆಯಿಂದ ಗ್ರಾಮಕ್ಕೆ ಬರಲು ಇಚ್ಚಿಸುವವರು, ಮತ್ತು ಗ್ರಾಮದಿಂದ ಕಾರ್ಯನಿಮಿತ್ತ ಹೊರ ಹೋಗುವವರು ನಿರೋಗಿಗಳಾಗುತ್ತಾರೆ(ಈ ಅಗ್ನಿಗಳು ಅವರನ್ನು ರೋಗರಹಿತರನ್ನಾಗಿ ಮಾಡುತ್ತವೆ) ಎಂದು ಶ್ರುತಿಯಿಂದ ತಿಳಿದುಬರುತ್ತವೆ(ಮೃತಯಜಮಾನನ್ನು ಈ ರೀತಿಯಾಗಿ ಇಡಲ್ಪಟ್ಟಂತಹ ಅಗ್ನಿಗಳು ರೋಗರಹಿತವಾಗಿ ಗ್ರಾಮಕ್ಕೆ ಬರುವಂತೆ ಮಾಡುತ್ತವೆ) । ಆದ್ದರಿಂದ ಈ ರೀತಿಯಾಗಿ ದಹನದೇಶದಲ್ಲಿ ಅಜಸ್ರಧಾರಣೆಯನ್ನು ಮಾಡುವುದರಿಂದ ಗುಣಾಧಿಕ್ಯವೇ ಉಂಟಾಗುತ್ತದೆ ಎಂದು ತಿಳಿಯಬೇಕು ॥

*** ಕಪರ್ದಿಭಾಷ್ಯಂ –**

ಪ್ರಾಣಾ ವಾ ಏತ ಆಹಿತಾಗ್ನೇರ್ಯದಗ್ನಯ ಇತಿ । ತ ಏನಂ ಪಾಲಯಂತಿ ನ ಮೃತ್ಯುಂ ನಯಂತಿ । ಅಗದಃ ಅರೋಗಃ । ಭೈಷ್ಯಜ್ಯಮೇವ ತತ್ಕರ್ಮ ॥

ಈ ಆಹಿತಾಗ್ನಿಯ ಅಗ್ನಿಗಳು ಪ್ರಾಣಸ್ವರೂಪರು । ಇವು ಈ ಯಜಮಾನನನ್ನು ಕಾಪಾಡುತ್ತವೆ, ಮೃತ್ಯುವನ್ನು ಹೊಂದಲು ಬಿಡುವುದಿಲ್ಲ । ಇದು ರೋಗರಹಿತಕ್ಕಾಗಿ ಮಾಡುವ ಚಿಕಿತ್ಸಾರೂಪ ಕರ್ಮವೇ ॥

*** ಸೂತ್ರಂ – 11 (ಆಹಿತಾಗ್ನಿಗಳಿಗೆ ಮಾತ್ರ)**

ತಸ್ಯೈತತ್ ಅಗ್ನಿಹೋತ್ರೋಚ್ಛೇಷಣಂ ನಿದಧಾತಿ ॥

ಆ ಯಜಮಾನನಿಗೆ ಅಗ್ನಿಹೋತ್ರದ ಉಚ್ಛೇಷಣವನ್ನು ಇಡುತ್ತಾನೆ ॥

*** ಗೋಪಾಲಭಾಷ್ಯಂ –**

ತಸ್ಯ ಯಜಮಾನಸ್ಯ ಕೃತ ಇತ್ಯರ್ಥಃ । ಏತದಿತಿ ಸನ್ನಿಹಿತ ಸಂಪ್ರತ್ಯಯಾತ್ ಅನಂತರ ಪೂರ್ವಕಾಲಿಕಸ್ಯ ಪರಿಗ್ರಹಃ ತಸ್ಯ ನಿಹಿತಸ್ಯ ಜೀವನಪಕ್ಷೇ ಮರಣಪಕ್ಷೇ ಚ ಉಪಯೋಗೋ ವಕ್ಷ್ಯತೇ । ತತ್ರ ಯದಾ ದ್ವಿತೀಯಂ ಅಗ್ನಿ ಹೋತ್ರೋಚ್ಛೇಷಣಂ ಉತ್ಪದ್ಯತೇ । ತದಾ ಪೂರ್ವಸ್ಯ ತ್ಯಾಗೋರ್ಥಸಿದ್ಧಃ । ಅನಂತರ ಕಾಲಿಕಸ್ಯೈವೋಪ ಯೋಜ್ಯತ್ವಾತ್ ॥

ಆ ಯಜಮಾನನಿಗಾಗಿ ಎಂದರ್ಥ । **'ಏತತ್'** ಎಂಬ ಪದವು, ಅತೀಸಮೀಪದಲ್ಲಿರುವ ವಸ್ತು ಅಥವ ವ್ಯಕ್ತಿಯನ್ನು ಹೇಳುತ್ತದೆಯಾದ್ದರಿಂದ, ಮೃತನ ಮರಣಕ್ಕಿಂತ ಮೊದಲಿನ ಅವಧಿಯನ್ನು ಹೇಳುತ್ತದೆ, ಜೀವನಪಕ್ಷದಲ್ಲಿ ಹಾಗೂ ಮರಣಪಕ್ಷದಲ್ಲಿಯೂ ಈ ಯಜಮಾನನಿಗಾಗಿ ಇಟ್ಟಂತಹ ಉಚ್ಛೇಷಣದ(ಉಳಿದ ಹವಿಸ್ಸು) ಉಪಯೋಗವನ್ನು ಹೇಳುತ್ತದೆ । ಅಲ್ಲಿ ಯಾವಾಗ ಎರಡನೇ ಅಗ್ನಿಹೋತ್ರದ ಉಚ್ಛೇಷಣವು ಸಂಪಾದನೆಯಾಗುತ್ತದೋ । ಆಗ ಹಿಂದಿನ ಅಗ್ನಿಹೋತ್ರದ ಉಚ್ಛೇಷಣವು ಬಿಡತಕ್ಕದ್ದು ಎಂದು ಅರ್ಥಾತ್ ಸಿದ್ಧವಾಗುತ್ತದೆ । ಏಕೆಂದರೆ, ಅನಂತರ ಮಾಡಿದ ಅಗ್ನಿಹೋತ್ರದ ಉಚ್ಛೇಷಣವೇ ಅಲ್ಲಿ ಉಪಯೋಜ್ಯವಾಗಿರುತ್ತದೆ ॥

*** ಸೂತ್ರಂ – 12 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಗ್ರಾಮೇ ವಾಸ್ಯೈತೇನ ಕಲ್ಪೇನ ಜುಹುಯಾತ್ ॥

ಈ ಮೃತ ಯಜಮಾನನಿಗೆ ಈ ರೀತಿಯಾಗಿ ಗ್ರಾಮದಲ್ಲಿಯೂ ಈ ಕಲ್ಪದಿಂದ ಅಗ್ನಿಹೋತ್ರ ಹೋಮವನ್ನು ಮಾಡಬಹುದು ॥

*** ಗೋಪಾಲಭಾಷ್ಯಂ –**

ಗ್ರಾಮಾ ಇತಿ ಪೂರ್ವಸ್ಥಾನಾಭಿಪ್ರಾಯಂ । ಏತೇನ ಕಲ್ಪೇನೇತ್ಯಧಾರ್ಯಾಣಾಂ ಯಥಾಪೂರ್ವಂ ಉತ್ಪತ್ತಿಃ ಅಜಸ್ರಧಾರಣಂ ಔಪಾಸನಸ್ಯಾಪಿ ಅಗ್ನ್ಯಗಾರೇ ಪುರಸ್ತಾನ್ನಿವೇಶಃ । ಅನಂತರ ಕಾಲಿಕಾಗ್ನಿಹೋತ್ರೋಚ್ಛೇಷಣ ನಿಧಾನಂ ಚ ಕಥ್ಯತೇ । ಅತ್ರಾಪಿ ಜುಹುಯಾದಿತಿ ಸರ್ವ ನಿತ್ಯ ನೈಮಿತ್ತಿಕ ಪ್ರದರ್ಶನಂ ಅಸ್ಮಿನ್ ಪಕ್ಷೇ ನೇದಾನೀಂ ದಹನದೇಶಸ್ಯ ಉದ್ಧನನಾದಿ ಕ್ರಿಯತೇ । ಪ್ರಯೋಜನಾಭಾವಾತ್ । ನ ಚ ಮರಣಪಕ್ಷೇ ಮೃತೇನ ಸಹ ಸ್ಮಶಾನ ನೇಷ್ಯಮಾನಾನಾಂ ಅಗ್ನೀನಾಂ ಪ್ರತಿಷ್ಠಾಪನಾರ್ಥಂ ಇದಾನೀಂ ತತ್ಕಾರ್ಯಂ । ಸ್ಮಶಾನ ನಯನೋತ್ತರ ಕಾಲಮೇವ ತದರ್ಥಂ ವಕ್ಷ್ಯಮಾಣತ್ವಾತ್ ।

'ಗ್ರಾಮಾ', ಎಂದರೆ ಬದುಕಿದ್ದಾಗ ಇದ್ದಂತಹ ಸ್ಥಳವನ್ನು ಅಭಿಪ್ರಾಯವನ್ನು ಇಟ್ಟುಕೊಂಡು ಹೇಳಿದೆ । ಈ ವಿಧಿಯಿಂದ ಅಗ್ನಿಹೋತ್ರವನ್ನು ಮರಣಕಾಲದಲ್ಲಿ ಯಾರು ಧರಿಸಿರುವುದಿಲ್ಲವೋ ಅವರಿಗೆ ಹಿಂದೆ ಹೇಳಿದ ಕ್ರಮದಲ್ಲಿ ಅಗ್ನಿಯ ಉತ್ಪತ್ತಿ, ಅಜಸ್ರ ಧಾರಣೆ(ಮೃತಅಗ್ನಿಹೋತ್ರಿಯ ಶರೀರವು ಅಗ್ನಿಗಳ ಬಳಿಗೆ ಬರುವವರೆಗೆ ಅಗ್ನಿಗಳನ್ನು ಕಾಪಾಡುವಿಕೆ), ಔಪಾಸನವನ್ನೂ ಕೂಡ ಯಜ್ಞಶಾಲೆಯಲ್ಲಿ ಪೂರ್ವದಿಕ್ಕಿನಲ್ಲಿ ಇಡುವುದು, ಇವುಗಳನ್ನೆಲ್ಲಾ ಮಾಡುವುದು । ಆಮೇಲೆ ಮಾಡಿದ ಅಗ್ನಿಹೋತ್ರೋಚ್ಛೇಷಣದ ಇಡುವಿಕೆ, ಇದನ್ನೂ ಕೂಡ ಹಿಂದೆ ಹೇಳಿದಂತೆ ಮಾಡಬೇಕು । ಇಲ್ಲೂ ಕೂಡ **'ಜುಹುಯಾತ್'** ಎಂಬ ವಿಧಿಯಿಂದ, ಎಲ್ಲಾ ನಿತ್ಯ–ನೈಮಿತ್ತಿಕ ಕರ್ಮಗಳ(ಮೃತ ಯಜಮಾನನ ಶರೀರವು ಅಗ್ನಿಸಮೀಪ ಬರುವವರೆಗೆ) ಮಾಡುವಿಕೆಯನ್ನು ತೋರಿಸಿದೆ, ಈ ಪಕ್ಷದಲ್ಲಿ ದಹನದೇಶದ ಖನನ ಮುಂತಾದವುಗಳನ್ನು, ಯಜಮಾನನ

ಮರಣಸಂಭವಿಸಿದ ತಕ್ಷಣ ಮಾಡುವುದಿಲ್ಲ(ಮೃತಯಜಮಾನನ ಶರೀರವು ಅಗ್ನಿಸಮೀಪ ಬಂದಮೇಲೆಯೇ ದಹನದೇಶದ ಉದ್ಧರಣ ಇತ್ಯಾದಿಗಳು) । ಏಕೆಂದರೆ ಯಾವುದೇ ಪ್ರಯೋಜನ ಕಂಡುಬರುವುದಿಲ್ಲವಾದ್ದರಿಂದ । ಮರಣಪಕ್ಷದಲ್ಲಿ ಮೃತನಜೊತೆ ಸ್ಮಶಾನಕ್ಕೆ ಒಯ್ಯುವ ಅಗ್ನಿಗಳ ಪ್ರತಿಷ್ಠಾಪನೆಗಾಗಿ, ಮೊದಲೇ ಸ್ಮಶಾನದಲ್ಲಿ ಅದರಸಿದ್ಧತೆಕಾರ್ಯಗಳನ್ನು ಮಾಡುವಹಾಗಿಲ್ಲ । ಏಕೆಂದರೆ, ಸ್ಮಶಾನಕ್ಕೆ ಶರೀರವನ್ನು ಮತ್ತು ಅಗ್ನಿಗಳನ್ನು ಒಯ್ದ ನಂತರವೇ ಆ ಅಗ್ನಿಗಳ ಪ್ರತಿಷ್ಠಾಪನೆಗೆ ಸಿದ್ಧತಾಕಾರ್ಯಗಳನ್ನು ಮಾಡಬೇಕೆಂದು ಮುಂದೆ ಹೇಳುತ್ತದೆಯಾದ್ದರಿಂದ ॥

*** ಅತ್ರ ಭಾರದ್ವಾಜೇನ –**

ದಿವಾನಯನಂ ಪೂರ್ವಪಕ್ಷನಯನಂ ಚೋಕ್ತಂ – ಯದಿ ಪೂರ್ವಪಕ್ಷರಾತ್ರೌ ಮರಣಂ ಸಂಕೇತ ಸಾಯಂ ಆಹುತೀರ್ಹುತ್ವಾ ತದೈವ ಪ್ರಾತರಾಹುತೀರ್ಜುಹುಯಾತ್ । ಯದಿ ಅಪರಪಕ್ಷೇ ಸಾಯಂ ಪ್ರಾತರಾಹುತಿಭಿರೇನಂ ಪೂರ್ವಪಕ್ಷನಯೇದ್ದರ್ಶಂ ಚ ಕುರ್ಯಾದಿತ್ಯುಕ್ತಂ । ತತ್ರಾಪರಪಕ್ಷಶೇಷೇ ಭಾವಿನೀಸ್ಸಾಯಮಾಹುತೀಃ ಪ್ರತಿಸಂಖ್ಯಾಯಾಃ ತಾವತ್ ಕೃತ್ವಃ ಚತುರುನ್ನಯನಮಾವರ್ತಯನ್ ಸಾಯಮಗ್ನಿಹೋತ್ರಕಲ್ಪೇನ ತಾಸ್ಸಾಯಮಾಹುತೀಸ್ತಂತ್ರೇಣ ಜುಹುಯಾತ್ । ಏವಂ ಭಾವಿನೀಃ ಪ್ರಾತರಾಹುತೀಃ । ತತೋ ದರ್ಶೇಷ್ಟಿಂ ಕುರ್ಯಾತ್ । ತತ್ ಅಸಂಭವೇ ತತ್ಪ್ರಧಾನ ದೇವತಾಭ್ಯಃ ಪೂರ್ಣಾಹುತೀರ್ಜುಹುಯಾದಿತಿ ॥

ಈ ವಿಚಾರದಲ್ಲಿ ಭಾರದ್ವಾಜಮುನಿಗಳು, ಹಗಲಿನಲ್ಲಿ ಶರೀರ–ಅಗ್ನಿಗಳನ್ನು ಒಯ್ಯಬೇಕೆಂದು ಹಾಗೂ ಪೂರ್ವಪಕ್ಷದಲ್ಲಿ(ಶುಕ್ಲಪಕ್ಷ) ಒಯ್ಯಬೇಕೆಂದು ಹೇಳಿದ್ದಾರೆ – ಒಂದುವೇಳೆ ಪೂರ್ವಪಕ್ಷರಾತ್ರಿಯಲ್ಲಿ ಮರಣದ ಶಂಕೆಯುಂಟಾದರೆ, ಆಗ ಅದಕ್ಕಿಂತ ಮೊದಲಿನ ಸಂಜೆ ಆಹುತಿಗಳನ್ನು(ಅಗ್ನಿಹೋತ್ರದ) ಕೊಟ್ಟು, ನಂತರ ಬೆಳಗಿನ ಆಹುತಿಗಳನ್ನೂ ಆಗಲೇ ಕೊಡಬೇಕು । ಒಂದುವೇಳೆ ಅಪರಪಕ್ಷ(ಕೃಷ್ಣಪಕ್ಷ)ದ ಕೊನೆಯಲ್ಲಿ ಮರಣಶಂಕೆಯುಂಟಾದರೆ, ಸಾಯಂಕಾಲದ ಮತ್ತು ಬೆಳಗಿನ

ಆಹುತಿಗಳನ್ನು ಮೊದಲೇಕೊಟ್ಟು, ಪೂರ್ವಪಕ್ಷಕ್ಕೆ ಇವನನ್ನು (ಆಹುತಿಗಳಿಂದ) ಕರೆದೊಯ್ದು ಅಲ್ಲಿ ದರ್ಶ(ಅಮಾವಾಸ್ಯೆ)ಇಷ್ಟಿಯನ್ನು ಮಾಡಬೇಕೆಂದು ಹೇಳಿದ್ದಾರೆ । ಒಂದುವೇಳೆ ಅಪರಪಕ್ಷದ ಮಧ್ಯ ಅಥವಾ ಆರಂಭದಲ್ಲಿ ಮರಣಸಂಶಯ ಉಂಟಾದರೆ, ಉಳಿದ ಅಪರಪಕ್ಷದ ದಿನಗಳ ಆಹುತಿಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡು ಅಷ್ಟೂಬಾರಿ ಚತುರುನ್ನಯನವನ್ನು(4ಸಲ ತೆಗೆದುಕೊಳ್ಳುವುದು) ಆವರ್ತನೆಮಾಡಿ, ಸಂಜೆಯ ಅಗ್ನಿಹೋತ್ರದ ಕಲ್ಪದಿಂದ ಉಳಿದ ದಿನಗಳ ಸಂಜೆಯ ಅಗ್ನಿಹೋತ್ರದ ಆಹುತಿಗಳನ್ನು ಹೋಮಿಸಬೇಕು । ನಂತರ ಉಳಿದ ದಿನಗಳ ಬೆಳಗ್ಗಿನ ಅಗ್ನಿಹೋತ್ರದ ಆಹುತಿಗಳನ್ನು ಹೋಮಿಸಬೇಕು । ನಂತರ ಅಮಾವಾಸ್ಯೆಯ ಇಷ್ಟಿಯನ್ನು ಮಾಡಬೇಕು । ಇದು ಅಸಾಧ್ಯವಾದರೆ, ಆಯಾ(ಸಾಯಂಪ್ರಾತಃ ಕಾಲಗಳ ಅಗ್ನಿಹೋತ್ರಗಳ) ಪ್ರಧಾನದೇವತೆಗಳಿಗೆ ಪೂರ್ಣಾಹುತಿಯನ್ನು ಮಾಡಬೇಕು ॥

*** ತಥಾ ಬೋಧಾಯನೇನ –**

ಅಥ ಏತದಗ್ನಿಹೋತ್ರಂ ಸಾಯಮುಪಕ್ರಮಂ ಪ್ರಾತರಪವರ್ಗಂ ಇತಿ ಆಚಾರ್ಯಾಬ್ರುವತೇ । ತತ್ರ ಉದಾಹರಂತಿ – ಸ ಯದಿ ಸಾಯಂ ಹುತೇಗ್ನಿಹೋತ್ರೇ ಪ್ರೇಯಾತ್ ಪ್ರತಿಕೃಶ್ಯ ಪ್ರಾತರಗ್ನಿಹೋತ್ರಂ ಜುಹುಯಾತ್ । ಅಥ ಯದಿ ಪ್ರಾತರಗ್ನಿಹೋತ್ರೇ ಹುತೇ ಕುಶಲಂ । ಅಥೇಮೌ ದರ್ಶಪೂರ್ಣಮಾಸೌ ಪೌರ್ಣಮಾಸ್ಯುಪಕ್ರಮಾವಮಾವಾಸ್ಯ ಸಂಸ್ಥಾವಿತಿ ಆಚಾರ್ಯಾಬ್ರುವತೇ ॥

ಹಾಗೆಯೇ ಬೋಧಾಯನರು – ಅನಂತರ ಈ ಅಗ್ನಿಹೋತ್ರವನ್ನು ಸಂಜೆ ಆರಂಭಿಸಬೇಕು, ಬೆಳಗ್ಗಿನ ಅಗ್ನಿಹೋತ್ರ ಅದರ ಸಮಾಪ್ತಿಯು ಎಂದು ಹೇಳುತ್ತಾರೆ । ಉದಾಹರಣೆಯಾಗಿ, ಒಂದುವೇಳೆ ಸಂಜೆ ಅಗ್ನಿಹೋತ್ರ ಮಾಡಿದಮೇಲೆ, ಯಜಮಾನನು ಮೃತನಾದರೆ ಪ್ರಾತರಗ್ನಿಹೋತ್ರವನ್ನು ಆ ಕಾಲಕ್ಕೇ ಎಳೆದುಕೊಂಡು, ಕರ್ತ್ಯವು ಹೋಮಿಸಬೇಕು । ಒಂದುವೇಳೆ ಪ್ರಾತರಗ್ನಿಹೋತ್ರವಾದಮೇಲೆ ಯಜಮಾನನು ಮೃತನಾದರೆ, ಆಗ ಮೇಲೆಹೇಳಿದಂತೆ ಮಾಡುವ ಅಗತ್ಯವಿಲ್ಲ । ಈ ದರ್ಶಪೂರ್ಣಮಾಸೇಷ್ಟಿಗಳಲ್ಲಿ ಪೌರ್ಣಮಾಸೇಷ್ಟಿಯು ಇಷ್ಟಿಗಳ ಆರಂಭವು, ಅಮಾವಾಸ್ಯೇಷ್ಟಿಯು ಇಷ್ಟಿಗಳ ಸಮಾಪ್ತಿಯು(ಪೂರ್ಣಮಾಸ ಇಷ್ಟಿಯಿಂದ ಇಷ್ಟಿಗಳನ್ನು

ಆರಂಭಿಸಬೇಕು । ಅಮಾವಾಸ್ಯೇಷ್ಟಿಯಿಂದ ಕೊನೆಗೊಳಿಸಬೇಕು ಎಂದು ಆಚಾರ್ಯರು ಹೇಳುತ್ತಾರೆ ॥

* ತತ್ರೋದಾಹರಂತಿ –

ಸ ಯದಿ ಪೌರ್ಣಮಾಸ್ಯಾಂ ವೃತ್ತಾಯಾಂ ಪ್ರೇಯಾತ್ ಪ್ರತಿಕೃಶ್ಯಾಮಾವಾಸ್ಯಾಂ ಯಜೇತ । ಅಥ ಯದ್ಯಮಾವಾಸ್ಯಾಯಾಂ ವೃತ್ತಾಯಾಂ ಕುಶಲಮಿತ್ಯುಕ್ತಂ । (ಬೋಧಾಯನ ಪಿತೃಮೇಧ ಪ್ರಶ್ನ) ತತ್ರ ಪ್ರೇಯಾದಿತಿ ಸಂಭಾವನಾಯಾಂ 'ಲಿಙ' ಪ್ರತ್ಯಯಃ ತೇನ ಮರಣ ಶಂಕಾಸ್ಯಾದಿತ್ಯರ್ಥಃ ಪ್ರತ್ಯೇತವ್ಯಃ । ಕುತ ಏವಮಿತಿ ಚೇತ್ ತೇನೈವ ಸ್ಥಳಾಂತರೇ – ಯಥೋ ಏತದಾಹಿತಾಗ್ನೇರ್ನಿರ್ಮಾರಂ ಗಚ್ಛತಃ ಪ್ರತಿಕೃಶ್ಯ ಪ್ರಾತಃ ಅಗ್ನಿಹೋತ್ರಂ ಜುಹುಯಾತ್ ಪ್ರತಿಕೃಶ್ಯ ಅಮಾವಾಸ್ಯಾಂ ಯಜೇತೇತಿ ತಥೈತೇ ಕರ್ಮಣೇ ಅಭಿಸಂಚರೇದ್ಯಥಾ ಜೀವತಃ ಕೃತೇಸ್ಯಾತಾಂ । (ಬೋ. ಪಿ. ಪ್ರ 2, ಖಂ 2, ಸೂ 1) ಇತಿ ತದರ್ಥಮನುಭಾಷ್ಯ ವ್ಯಾಖ್ಯಾನಾತ್ । ತಥಾಗ್ನಿಹೋತ್ರಸ್ಯ ದರ್ಶಪೂರ್ಣ ಮಾಸಯೋಶ್ಚ ಪ್ರವೃತ್ತಪ್ರಯೋಗ ಸಮಾಪನಂ ಪ್ರಾಕ್ ಮರಣಾತ್ ಕಾರ್ಯಮಿತ್ಯುಕ್ತಂ ಭವತಿ । ಕುಶಲಮಿತಿ ಪ್ರಾತರಗ್ನಿಹೋತ್ರ ಸಮಾಪ್ತ್ಯಾಪ್ರವೃತ್ತ ಪ್ರಯೋಗಸಮಾಪ್ತೇಃ ಪ್ರಯೋಗಾಂತರಸ್ಯ ಚಾಪ್ರವೃತ್ತತ್ವಾತ್ ವೈಕಲ್ಯಾಭಾವ ಉಚ್ಯತೇ । ಏವಂ ದರ್ಶಪೂರ್ಣಮಾಸವಿಷಯೇಪಿ ದರ್ಶಸಮಾಪ್ತ್ಯಾಪ್ರವೃತ್ತ ಪ್ರಯೋಗ ಸಮಾಪ್ತೇಃ ಪ್ರಯೋಗಾಂತರಸ್ಯಚಾ ಪ್ರವೃತ್ತತ್ವಾತ್ ವೈಕಲ್ಯಾಭಾವ ಲಕ್ಷಣಂ ಕುಶಲಮನುಸಂಧೇಯಂ । ನ ಚಾತ್ರ ಪ್ರವೃತ್ತ ಪ್ರಯೋಗ ಸಮಾಪನ ವಾದಾತ್ ಸ್ಥಳಾಂತರೋಕ್ತಸ್ಯ ಪೂರ್ವಪಕ್ಷನಯನಸ್ಯ ವೈಕಲ್ಪಿಕತ್ವಂ ಶಂಕನೀಯಂ । ಅಸ್ಯ ವಿಧೇಃ ಪ್ರವೃತ್ತ ಪ್ರಯೋಗಸಮಾಪನ ವ್ಯಾವೃತ್ತ್ಯರ್ಥತಯಾ ತನ್ನಿವೃತ್ತಿ ಪರತ್ವಾಭಾವೇನ ವಿರೋಧಾಭಾವಾತ್ । ಏವಮೇವ ಚಾತುರ್ಮಾಸ್ಯಾತಿ ಮಧ್ಯೇ ಮರಣಶಂಕಾಯಾಂ ಕರ್ಮಶೇಷಸ್ಯ ತತ್ಪ್ರಧಾನಾಹುತಿ ಮಾತ್ರಸ್ಯ ವಾ ಪ್ರಾಕ್ ಮರಣಾದನುಷ್ಠಾನೇನ ಪ್ರವೃತ್ತಪ್ರಯೋಗ ಸಮಾಪನಂ ವೇದಿತವ್ಯಂ ॥

ಈ ವಿಷಯದಲ್ಲಿ ಉದಾಹರಣೆಯು ಹೀಗಿದೆ – ಒಂದುವೇಳೆ ಪೂರ್ಣಮಾಸ್ಯೇಷ್ಟಿಯನ್ನು ಮಾಡಿದಮೇಲೆ, ಯಜಮಾನನು ಮೃತನಾದರೆ, ಆಗ ಅಮಾವಾಸ್ಯೇಷ್ಟಿಯನ್ನು ಆ ಕಾಲಕ್ಕೆ ಎಳೆದುಕೊಂಡು ಕರ್ತ್ಯವು ಮಾಡಬೇಕು । ಒಂದುವೇಳೆ, ಅಮಾವಾಸ್ಯೇಷ್ಟಿಯನ್ನು ಮಾಡಿದಮೇಲೆ ಯಜಮಾನನು ಮೃತನಾದರೆ ಆಗ ಮೇಲೆಹೇಳಿದ ಕ್ರಮವನ್ನು ಅನುಸರಿಸುವ ಅಗತ್ಯವಿಲ್ಲ । ಇಲ್ಲಿ **'ಪ್ರೇಯಾತ್'** ಎಂಬುದು ಸಂಭಾವನಾರ್ಥದ **'ಲಿಜ'** ಪ್ರತ್ಯಯವು, **ಇದರಿಂದ ಮರಣಶಂಕೆಯು ಬರಬಹುದೆಂದು ಲಕ್ಷಣಗಳು ಕಂಡುಬಂದರೆ,** ಎಂದು ಅರ್ಥವನ್ನು ಮಾಡಬೇಕು । ಏತಕ್ಕಾಗಿ ಹೀಗೆ ಎಂದರೆ – ಬೇರೆ ಜಾಗಗಳಲ್ಲಿ **'ಮರಣಹೊಂದುತ್ತಿರುವ ಈ ಆಹಿತಾಗ್ನಿಯ ಪ್ರಾತರಗ್ನಿಹೋತ್ರವನ್ನು ಆ ಕಾಲಕ್ಕೆ ಎಳೆದುಕೊಂಡು ಮಾಡಬೇಕು, ಹಾಗೆಯೇ ಅಮಾವಾಸ್ಯೇಷ್ಟಿಯನ್ನು ಆ ಕಾಲಕ್ಕೆ ಎಳೆದುಕೊಂಡು ಮಾಡಬೇಕು, ಹೀಗೆ ಈ ಎರಡುಕರ್ಮಗಳನ್ನೂ ಎಳೆದುಕೊಂಡು ಮಾಡಬೇಕು, ಹೇಗೆ ಬದುಕಿದ್ದಾಗಲೇ ಈ ಎರಡೂಕರ್ಮಗಳು ಮಾಡಿದಂತಾಗುತ್ತವೆಯೋ ಹಾಗೆ ಮಾಡಬೇಕು'** ಎಂದು ಇದರ ಅರ್ಥವನ್ನು ಭಾಷ್ಯರೂಪದಿಂದ ವ್ಯಾಖ್ಯಾನ ಮಾಡಿದ್ದರಿಂದ । ಹಾಗೆಯೇ ಅಗ್ನಿಹೋತ್ರದ ಹಾಗೂ ದರ್ಶಪೂರ್ಣಮಾಸ ಇಷ್ಟಿಗಳ ಆರಂಭಿಸಿದ ಪ್ರಯೋಗಗಳನ್ನು ಯಜಮಾನನ ಮರಣಕ್ಕಿಂತ ಮುಂಚೆಯೇ ಮಾಡಿ ಮುಗಿಸಬೇಕು(ಮರಣಸಂಶಯ ಬಂದಾಗ) ಎಂದು ಹೇಳಿದಂತಾಗುತ್ತದೆ । **'ಕುಶಲಂ'**, ಎಂಬ ಮಾತಿನಿಂದ ಪ್ರಾತರಗ್ನಿಹೋತ್ರದ ಸಮಾಪ್ತಿ ಮತ್ತು ಆರಂಭಿಸಿದ ದರ್ಶಪೂರ್ಣಮಾಸ ಇಷ್ಟಿಗಳ ಸಮಾಪ್ತಿ ಮತ್ತು ಬೇರೇ ಪ್ರಯೋಗವಿಧಿಗಳನ್ನು ಆರಂಭಿಸದೇ ಇರುವುದರಿಂದ ವೈಕಲ್ಯ(ಲೋಪದ)ದ ಅಭಾವವಿರುತ್ತದೆ(ಲೋಪವುಂಟಾಗುವುದಿಲ್ಲ) । ಹೀಗೆಯೇ ದರ್ಶಪೂರ್ಣಮಾಸೇಷ್ಟಿಗಳ ವಿಷಯದಲ್ಲಿಯೂ(ಅಮಾವಾಸ್ಯೆ–ಹುಣ್ಣಿಮೆಗಳಲ್ಲಿ ಮಾಡುವ ಇಷ್ಟಿ) ದರ್ಶೇಷ್ಟಿ ಸಮಾಪ್ತಿಗೊಳಿಸಿದ ನಂತರ ಆರಂಭಗೊಳಿಸಿದ ಪ್ರಯೋಗವಿಧಿಯನ್ನು ಸಮಾಪ್ತಿಗೊಳಿಸಿದಂತಾಗಿ, ಬೇರೇ ಪ್ರಯೋಗವನ್ನು ಆರಂಭಿಸದೇ ಇರುವುದರಿಂದ ಲೋಪವಿಲ್ಲದಂತಾಗುವ ಲಕ್ಷಣವನ್ನೇ **'ಕುಶಲ'** ಎಂದು ತಿಳಿಯಬೇಕು । ಆರಂಭಿಸಿದ ಪ್ರಯೋಗದ ಸಮಾಪ್ತಿಯನ್ನು ಇಲ್ಲಿ ಹೇಳಿರುವುದರಿಂದ, ಬೇರೇಕಡೆಯಲ್ಲಿ ಹೇಳಿದ ಪೂರ್ವಪಕ್ಷನಯನದ ವಿಕಲ್ಪವನ್ನು ಶಂಕಿಸಬಾರದು । ಈ ವಿಧಿಗೆ ಆರಂಭಿಸಿದ ಪ್ರಯೋಗವನ್ನು ಸಮಾಪನೆಗೊಳಿಸುವುದನ್ನು ಬಿಟ್ಟು, ಬೇರೆಯದನ್ನು ತಿರಸ್ಕರಿಸುವುದರ ಮೂಲಕ ಅದರ ನಿವೃತ್ತಿಯ ಪರವಾಗಿ ಹೇಳಿಲ್ಲದ್ದಾದ್ದರಿಂದ, ವಿರೋಧವು

ಬರುವುದಿಲ್ಲ। ಈ ರೀತಿಯಾಗಿ, ಚಾತುರ್ಮಾಸ್ಯದ ಇಷ್ಟಿಯ ಮಧ್ಯದಲ್ಲಿ ಮರಣಸಂಶಯ ಉಂಟಾಗಲಾಗಿ, ಆ ಚಾತುರ್ಮಾಸ್ಯೇಷ್ಟಿಯ ಉಳಿದಕರ್ಮಗಳನ್ನು ಅಥವಾ ಅದರ ಪ್ರಧಾನಾಹುತಿಗಳನ್ನು ಮಾತ್ರ ಮರಣಸಂಭವಿಸುವುದಕ್ಕಿಂತ ಮುಂಚೆ ಅನುಷ್ಠಾನ ಮಾಡುವುದರಿಂದ ಚಾತುರ್ಮಾಸ್ಯೇಷ್ಟಿಯನ್ನು ಸಮಾಪ್ತಿಗೊಳಿಸಿದಂತೆ ಆಯಿತೆಂದು ತಿಳಿಯಬೇಕು ॥

*** ಯತ್ತು ಬೋಧಾಯನೇನೋಕ್ತಂ (ಪಿ, ಪ್ರ 2, ಖಂ 1, ಸೂ 2) –**

ಸ ಉಚೇದಹುತೇ ಪ್ರಾತರಗ್ನಿಹೋತ್ರೇ ಅನಿಷ್ಟಾಯಾಮಮಾವಾಸ್ಯಾಯಾಂ ಪ್ರೇಯಾತ್ ತದಾನೀಮೇವಾಸ್ಯ ತೂಷ್ಣೀಂ ಪ್ರಾತರಗ್ನಿಹೋತ್ರಂ ಯಾದೃಕ್ಕೀದೃಕ್ಚ ಹೋತವ್ಯಂ ತದಾನೀಮೇವಾಸ್ಯ ತೂಷ್ಣೀಂ ಅಮಾವಾಸ್ಯಾಂ ಯಾದೃಶೀಂ ಕೀದೃಶೀಂ ಚ ಯಜೇತ। ಇತಿ ಮರಣಾದೂರ್ಧ್ವಮಪಿ ಪ್ರವೃತ್ತಪ್ರಯೋಗಶೇಷ ಭೂತಯೋಃ ಪ್ರಾತರಗ್ನಿಹೋತ್ರಾಮಾವಾಸ್ಯೇಷ್ಟ್ಯೋಃ ಅನುಷ್ಠೇಯತ್ವಂ, ತದಸ್ಮಾಭಿರಗ್ರಾಹ್ಯಂ। ಕುತಃ ಯದಿ ಪೂರ್ವಸ್ಯಾಮಾಹುತ್ಯಾಂ ಹುತಾಯಾಂ ಯಜಮಾನೋಮ್ರಿಯೇತ । ಯದಿ ವಿಸಂಸ್ಥಿತಾಯಾಂ ಇಷ್ಟ್ಯಾಂ ಯಜಮಾನೋಮ್ರಿಯೇತೇತಿ ವಿಪ್ರಕ್ರಾಂತಸ್ಯಾಪಿ ತಂತ್ರಸ್ಯ ಯಥಾ ಕಥಂಚಿತ್ ಸಮಾಪನ ವಚನೇನ ಅಪ್ರಕ್ರಾಂತ ತಂತ್ರಾಂತರಾನುಷ್ಠಾನಸ್ಯ ಕೈಮುತಿಕ ನ್ಯಾಯೇನ ನಿರಸ್ತತ್ವಾತ್, ತಥಾ ಮರಣಾಂತಾ ಯಜ್ಞಾ ಭವಂತೀತಿ ಭಾರದ್ವಾಜೇನ ಸರ್ವಯಜ್ಞಾನಾಂ ಮರಣಾಂತತಾ ವಚನಾಚ್ಚ ತೇನ ವ್ಯವಸ್ಥಿತಮೇತತ್ । ಪ್ರವೃತ್ತಶೇಷಂ ದರ್ಶೇಷ್ಟಿ ಪ್ರಾತರ್ಹೋಮಾದಿಭಾವಿ ಯತ್। ಪೂರ್ವಪಕ್ಷನಯನಶ್ಚ ಏತೇ ಪ್ರಾಗೇವ ಮರಣಾತ್ ಮತಾ ಇತಿ ॥

ಇನ್ನು ಬೋಧಾಯನರು ಹೇಳಿದಂತಹ – ಒಂದುವೇಳೆ ಪ್ರಾತರಗ್ನಿಹೋತ್ರವನ್ನು ಮಾಡುವುದಕ್ಕಿಂತ ಮುಂಚೆ ಹಾಗೂ ಅಮಾವಾಸ್ಯೇಷ್ಟಿಯನ್ನು ಮಾಡುವುದಕ್ಕಿಂತ ಮುಂಚೆ ಮರಣಹೊಂದಿದರೆ, ಆಗ ಅಮಂತ್ರಕವಾಗಿ ಪ್ರಾತರಗ್ನಿಹೋತ್ರವನ್ನು ಲಭ್ಯಸಾಧನ ಮತ್ತು ದ್ರವ್ಯಗಳಿಂದ ಮಾಡಬೇಕು। ಹಾಗೆಯೇ ಆ ಕಾಲದಲ್ಲಿಯೇ ಲಭ್ಯ

ಸಾಧನದ್ರವ್ಯಗಳಿಂದ ಅಮಂತ್ರಕವಾಗಿ ಅಮಾವಾಸ್ಯೇಷ್ಟಿಯನ್ನು ಮಾಡಬೇಕು । ಮರಣಾನಂತರವೂ ಪ್ರಾರಂಭಿಸಿದ ಪ್ರಯೋಗದ ಉಳಿದಂತಹ ಪ್ರಾತರಗ್ನಿಹೋತ್ರ ಹಾಗೂ ಅಮಾವಾಸ್ಯೇಷ್ಟಿಗಳ ತಂತ್ರಗಳನ್ನು ಮಂತ್ರಪೂರ್ವಕವಾಗಿ ಮಾಡುವುದೆಂಬ ವಿಷಯ ನಮಗೆ ಒಪ್ಪಿಗೆಯಿಲ್ಲ । ಏಕೆಂದರೆ, ಒಂದುವೇಳೆ ಅಗ್ನಿಹೋತ್ರದ ಮೊದಲಿನ ಪ್ರಧಾನಾಹುತಿಯನ್ನು ಕೊಟ್ಟು ಎರಡನೇ ಪ್ರಧಾನಾಹುತಿಯನ್ನು ಕೊಡುವುದಕ್ಕಿಂತ ಮುಂಚೆ ಯಜಮಾನನು ಮೃತನಾದರೆ । ಹಾಗೂ ಇಷ್ಟಿಯ ಮಧ್ಯದಲ್ಲಿ ಯಜಮಾನನು ಮೃತನಾದರೆ, ಉಳಿದಂತಹ ತಂತ್ರಗಳನ್ನು ಹೇಗಾದರೂ ಸಮಾಪನಮಾಡಬೇಕೆಂಬ ವಚನದಿಂದ ಪ್ರಾರಂಭಿಸದೇ ಇರುವ ಬೇರೇತಂತ್ರಗಳ ಅನುಷ್ಠಾನದ **'ಕೈಮುತಿಕ ನ್ಯಾಯದಿಂದ'**, ತಿರಸ್ಕಾರ ಮಾಡಿದ್ದರಿಂದ, ಹಾಗೂ 'ಮರಣಾಂತದವರೆಗೆ ಎಲ್ಲಾ ಯಜ್ಞಗಳು' ಎಂಬ ಭಾರದ್ವಾಜರ ವಚನವಿರುವುದರಿಂದ ಈ ಮುಂದಿನ ವ್ಯವಸ್ಥಿತ ನ್ಯಾಯವು ಬಂದೊದಗಿದೆ । ಆರಂಭಿಸಿದ ಪ್ರಯೋಗತಂತ್ರದ ಉಳಿದಭಾಗವಾದ ದರ್ಶೇಷ್ಟಿ ಹಾಗೂ ಪ್ರಾತರಗ್ನಿಹೋತ್ರ ಹಾಗೂ ಪೂರ್ವಪಕ್ಷನಯನ, ಇವೆಲ್ಲವೂ ಯಜಮಾನನ ಮರಣಕ್ಕಿಂತಮುಂಚೆ ಮಾಡಬೇಕೆಂಬುದು ಬೋಧಾಯನರ ಅಭಿಪ್ರಾಯವು ॥

*** ಸೂತ್ರಂ – 13 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಯದಿ ಜೀವೇತ್ ಪಿಬೇತ್ ಏತದಗ್ನಿಹೋತ್ರೋಚ್ಛೇಷಣಮ್ ॥

ಒಂದು ವೇಳೆ, ಜೀವಿಸಿದ್ದಲ್ಲಿ, (ಪ್ರಾಣಹೋಗುವ ಕಡೇ ಕ್ಷಣಗಳಲ್ಲಿ) ಅಗ್ನಿಹೋತ್ರ ಉಚ್ಛೇಷಣವನ್ನು ಕುಡಿಸಬೇಕು ॥

*** ಗೋಪಾಲಭಾಷ್ಯಂ –**

ಯದ್ಯೇವಂ ಕೃತೇ ಯಜಮಾನಸ್ಯ ಜೀವನಂ ಸುನಿಶ್ಚಿತಂ ಸ್ಯಾತ್ ನ ಅಯಮನೇನ ರೋಗೇನ ವರಿಷ್ಯತೀತಿ, ತದಾ ಯಜಮಾನ ಏವ ಏತತ್ ಅನಂತರಪೂರ್ವಕಾಲೀಕಂ ಅಗ್ನಿಹೋತ್ರೋಚ್ಛೇಷಣಂ ಪಿಬೇತ್ । ಅತ್ರ ಪಿಬೇದಿತಿ ಪಯೋಹೋಮಾಭಿಪ್ರಾಯಂ ದ್ರವ್ಯಾಂತರ ಹೋಮೇಪಿ ತತ್ತತ್

ಪ್ರಾಶನ ಪ್ರದರ್ಶನಾರ್ಥಂ । ತಥಾ ಸ್ಮಶಾನ ವಿಹರಣಪಕ್ಷೇ ತತ್ರ ತೇಷ್ವಗ್ನಿಷು ಧಾರ್ಯಾಣಾಂ ಸಮಾರೋಪಣಮಿತ್ಯಾದಿನಾಂ ಪೂರ್ವೋಕ್ತವಿಧಿನಾ ಪ್ರತ್ಯಾನಯನಂ । ಅಜಸ್ರೋತ್ಸರ್ಗಃ, ಪ್ರತಿಕೃಶ್ಯಕೃತಾನಾಂ ಭಾವಿಕರ್ಮಣಾಂ ಸ್ವೇಸ್ವೇ ಕಾಲೇ ಪುನರನುಷ್ಠಾನಮಿತಿ। ಗ್ರಾಹವಿಹರಣಪಕ್ಷೇsಪಿ ಅಜಸ್ರೋತ್ಸರ್ಗಾದಿ ಸಮಾನಂ । ತತ್ರ ಪ್ರತಿಕೃಷ್ಟಾನಾಂ ಪುನರನುಷ್ಠಾನಮಾಹ ಬೋಧಾಯನಃ ॥

ಒಂದುವೇಳೆ ಹೀಗೆ ಮರಣಸಂಶಯವಾದಾಗ, ಮಾಡಿದ ಅಗ್ನಿಹೋತ್ರದ ನಂತರ ಯಜಮಾನನ ಜೀವಿತವು ಮತ್ತೆ ಸುನಿಶ್ಚಿತವಾದರೆ, ಈ ರೋಗದಿಂದ ಯಜಮಾನನು ಮುಕ್ತಿಹೊಂದುತ್ತಾನೆಂದು ನಿಶ್ಚಯವಾದರೆ, ಆಗ ಅನಂತರ ಮಾಡಬೇಕಾದ ಅಗ್ನಿಹೋತ್ರವನ್ನು ಮೊದಲು ಮಾಡಿರುತ್ತಾನಾದ್ದರಿಂದ, ಅದರ ಉಚ್ಛೇಷಣ(ಉಳಿದ ಹವಿಸ್ಸು)ವನ್ನು ಯಜಮಾನನು ಕುಡಿಯಬೇಕು । ಇಲ್ಲಿ, **'ಪಿಬೇತ್'** ಎಂಬುದು ಹಾಲಿನಹೋಮವನ್ನು ಅಭಿಪ್ರಾಯವಾಗಿಟ್ಟುಕೊಂಡು ಹೇಳಿದ ಉಪಲಕ್ಷಣವು, ಇದರಿಂದ ಬೇರೇ ದ್ರವ್ಯಾಂತರಗಳಿಂದ(ಅಕ್ಕಿ ಮುಂತಾದವು) ಹೋಮ ಮಾಡಿದ್ದರೆ ಅದನ್ನು ತಿನ್ನಬೇಕು ಎಂಬುದನ್ನು ತೋರಿಸುವುದಕ್ಕಾಗಿ । ಹಾಗೆಯೇ ಸ್ಮಶಾನವಿಹರಣ(ಒಯ್ಯುವ) ಪಕ್ಷದಲ್ಲಿಯೂ ಆ ಅಜಸ್ರ(ನಿರಂತರ) ಧರಿಸಿದ ಅಗ್ನಿಗಳ ಸಮಾರೋಪಣ ಮುಂತಾದ ಹಿಂದೆ ಹೇಳಿದ ವಿಧಿಗಳಿಂದ ಮತ್ತೆ ಯಜಮಾನನ ಮನೆಗೆ ತರಬೇಕು(ಮರಣಸಂಶಯ ಉಂಟಾದಮೇಲೂ ಮರಣಸಂಶಯವು ಪರಿಹಾರವಾಗಿ, ಯಜಮಾನನು ಜೀವಿಸಿದರೆ) । ಅಜಸ್ರವಾಗಿ ಧರಿಸಿರುವುದನ್ನು ಬಿಡುವುದು ಹಿಂದಕ್ಕೆ ಎಳೆದುಕೊಂಡು ಮಾಡಿದ ಮುಂದಿನ ಕರ್ಮಗಳನ್ನು ಆಯಾಯಾ ಕಾಲಕ್ಕೆ ಮತ್ತೆ ಅನುಷ್ಠಾನ ಮಾಡಬೇಕು, ಮರಣಸಂಶಯ ಉಂಟಾದಮೇಲೂ ಯಜಮಾನನು ಮತ್ತೆ ಜೀವಿಸಿದರೆ । ಗ್ರಾಹವಿಹರಣ(ಮನೆಯಲ್ಲೇ ಅಗ್ನಿಗಳನ್ನು ಬೇರೇಬೇರೇ ಮಾಡುವುದು) ಪಕ್ಷದಲ್ಲಿಯೂ ಕೂಡ, ಮೇಲೆ ಹೇಳಿದ ಅಜಸ್ರಧಾರಣೆಯ ಬಿಡುವಿಕೆ ಮುಂತಾದವುಗಳು ಸಮಾನವು। ಅಲ್ಲಿ ಹಿಂದೆ ಎಳೆದುಕೊಂಡು ಮಾಡಿದಂತಹ ಅಗ್ನಿಹೋತ್ರ ಮುಂತಾದವುಗಳ ಅನುಷ್ಠಾನವನ್ನು ಆ ಕಾಲದಲ್ಲಿ ಮಾಡಬೇಕೆಂದು ಬೋಧಾಯನರು ಹೇಳುತ್ತಾರೆ ॥

ಸ ಉ ಚೇತ್ ಪುನರಾಗತಸ್ಯಾತ್ ಪುನರೇವಾಸ್ಯ ಪ್ರಾತರಗ್ನಿಹೋತ್ರಂ ಕಾಲ್ಯಮವ್ಯಾಪನ್ನಂ ಹೋತವ್ಯಂ ಪುನರೇವ ಅಮಾವಾಸ್ಯಾಂ ಕಾಲ್ಯಾಂ

ಅವ್ಯಾಪನ್ನಾಂ ಯಜೇತೇತಿ । (ಬೋ, ಪಿ, ಪ್ರ2, ಖಂ1, ಸೂ3) ಏತೇನ ಪೂರ್ವಪಕ್ಷನಯನಾಯ ಪ್ರತಿಕೃಷ್ಟಾನಾಂ ಸಾಯಂ ಪ್ರಾತರಾಹುತೀನಾಂ ಚಾತುರ್ಮಾಸ್ಯಾದಿ ಶೇಷಾಣಾಂ ಚ ಸ್ವೇಸ್ವೇ ಕಾಲೇ ಪುನಃ ಕರಣಂ ವ್ಯಾಖ್ಯಾತಂ ॥

ಮರಣಸಂಶಯವನ್ನು ಹೊಂದಿದವನು ಪುನಃ ಜೀವಿಸಿದರೆ, ಆಗ ಮತ್ತೆ ಆ ಕಾಲದ ಪ್ರಾತರಗ್ನಿಹೋತ್ರವನ್ನು ಕಾಲಾತಿಕ್ರಮಣ ಮಾಡದೇ ಮಾಡಬೇಕು ಹಾಗೆಯೇ ಮತ್ತೆ ಅಮಾವಾಸ್ಯೇಷ್ಟಿಯನ್ನು ಆ ಕಾಲಕ್ಕೆ ಲೋಪವಿಲ್ಲದಂತೆ ಮಾಡಬೇಕು ಎಂದು ಬೋಧಾಯನ ಪಿತೃಮೇಧದಲ್ಲಿ ಹೇಳಿರುವುದರಿಂದ । ಇದರಿಂದ ಪೂರ್ವಪಕ್ಷಕ್ಕೆ ಕೊಂಡೊಯ್ಯಲು ಯಜಮಾನನ ಮರಣಸಂಶಯ ಉಂಟಾದಾಗ ಹಿಂದಕ್ಕೆ ಎಳೆದುಕೊಂಡು ಮಾಡಿದ ಎಲ್ಲಾ ದಿನಗಳ ಸಾಯಂಪ್ರಾತ ಅಗ್ನಿಹೋತ್ರಗಳ ಆಹುತಿಗಳನ್ನು ಹಾಗೂ ಚಾತುರ್ಮಾಸ್ಯ ಮುಂತಾದವುಗಳ ಉಳಿದ ಕರ್ಮಗಳನ್ನು ಯಜಮಾನನು ಮತ್ತೆ ಜೀವಿಸಿದರೆ, ಆಯಾಯಾ ಕಾಲದಲ್ಲಿ ಮತ್ತೆ ಮಾಡಬೇಕೆಂಬುದನ್ನು ಹೇಳಿದಂತಾಗುತ್ತದೆ ॥

*** ಭಾರದ್ವಾಜಸ್ತ್ವತ್ರಾಪರಂ ವಿಶೇಷಮಾಹ –**

ಅಸಂಶಯೇ ಅಜಸ್ರೈರ್ವಿರಮ್ಯಾಗ್ನಯ ಆಯುಷ್ಮತೇ ಪುರೋಡಾಶಂ ಅಷ್ಟಾಕಪಾಲಂ ನಿರ್ವಪೇತ್ ಶತಕೃಷ್ಣಲಾಂ ಪಂಚಹವಿಷ್ಕಾಂ ವಾ ಯೋ ಜ್ಯೋಗಾಮಯಾವೀತ್ಯುಕ್ತಂ ಪುರಸ್ತಾದಿತಿ ॥

ಭಾರದ್ವಾಜರು ಇನ್ನೊಂದು ವಿಶೇಷವನ್ನು ಹೇಳುತ್ತಾರೆ – ಒಂದುವೇಳೆ ಯಜಮಾನನ ಮರಣಸಂಶಯವು ಪರಿಹಾರವಾಗಲಾಗಿ, ಅಗ್ನಿಗಳ ಅಜಸ್ರಧಾರಣೆಯನ್ನು ಬಿಟ್ಟು, **'ಅಗ್ನಯೇ ಆಯುಷ್ಮತೇ ಪುರೋಡಾಶಂ ಅಷ್ಟಾಕಪಾಲಂ'** (ಆಯುಷ್ಮಂತನಾದ ಅಗ್ನಿಗೆ, ಅಷ್ಟಾಕಪಾಲದಿಂದ ಸಂಸ್ಕೃತವಾದ ಪುರೋಡಾಶವನ್ನು) ಎಂಬ ಇಷ್ಟಿಯನ್ನು ಮಾಡಬೇಕು, ಶತಕೃಷ್ಣಲೇ (ಅನೇಕ ಕಪ್ಪು ಚುಕ್ಕಿಗಳಿರುವ ಆಡು) ಅಥವಾ ಪಂಚಹವಿಷ್ಕಾಂ (ಐದು ಹವಿಸ್ಸುಗಳಿಂದ ಕೂಡಿದ) ಗಳಿಂದ ಪಶುಬಂಧ ಅಥವಾ ಇಷ್ಟಿಯನ್ನು ತುಂಬಾ ದೀರ್ಘರೋಗದಿಂದ ಬಳಲುತ್ತಿರುವ ಯಜಮಾನನಿಗೆ ಮರಣವಾಗುವುದಕ್ಕಿಂತ ಮುಂಚೆ ಮಾಡಬೇಕು ॥

*** ಕಪರ್ದಿಭಾಷ್ಯಂ –**

ಅಥ ಮರಣಪಕ್ಷೇ ಕರ್ತವ್ಯಮಾಹ ॥

ಈಗ ಮರಣಪಕ್ಷದಲ್ಲಿ(ಸತ್ತಾಗ) ಮಾಡಬೇಕಾದ ಕರ್ತವ್ಯಗಳನ್ನು ಹೇಳುತ್ತಾರೆ ॥

*** ಸೂತ್ರಂ – 14 (ಇಬ್ಬರಿಗೂ)**

ಯದಿ ಮರಣ ಸಂಶಯೇ, ಬ್ರಹ್ಮವಿದಾಪ್ನೋತಿ ಪರಂ । ಭುಗುರ್ವೈ ವಾರುಣಿಃ ಇತ್ಯೇತಾವನುವಾಕೌ ಬ್ರಹ್ಮವಿದೋ ದಕ್ಷಿಣೇಕರ್ಣೇ ಜಪತಿ । ಇತರಸ್ಯ, ಆಯುಷಃಪ್ರಾಣಗ್ಂ ಸಂತನು ಇತಿ ವಾ / ಸಂತನ್ವಿತಿ ಚ ಇತಿ ಪಾಠಭೇದಃ ॥

ಒಂದುವೇಳೆ, ವ್ಯಕ್ತಿಗೆ ಮರಣದ ಸಂಶಯವು ಉಂಟಾದಾಗ, ಆ ವ್ಯಕ್ತಿಯು ಆಹಿತಾಗ್ನಿಯಾಗಿದ್ದರೆ(ಅಗ್ನಿಹೋತ್ರಿಯಾಗಿದ್ದರೆ), **ಬ್ರಹ್ಮವಿದಾಪ್ನೋತಿ ಪರಂ, ಭೃಗುರ್ವೈ ವಾರುಣಿಃ.....,** ಎಂಬ 2 ಅನುವಾಕ ಮಂತ್ರಗಳನ್ನು ವೇದಬಲ್ಲವರು ಮೃತನ ಬಲಕಿವಿಯಲ್ಲಿ ಜಪಿಸಬೇಕು । ಮೃತನು ಅನಾಹಿತಾಗ್ನಿಯಾಗಿದ್ದರೆ(ಅಗ್ನಿಹೋತ್ರವನ್ನು ಇಟ್ಟುಕೊಳ್ಳದವನಾಗಿದ್ದರೆ) ಅವನ ಬಲಕಿವಿಯಲ್ಲಿ **ಆಯುಷಃಪ್ರಾಣಗ್ಂ ಸಂತನು.....,** ಎಂಬ ಮಂತ್ರವನ್ನು ಜಪಿಸಬೇಕು ॥

*** ಗೋಪಾಲಭಾಷ್ಯಂ –**

ಏತತ್ ಸ್ಪಷ್ಟಾರ್ಥಂ ॥

ಸೂತ್ರವೇ ಸ್ಪಷ್ಟಾರ್ಥವನ್ನು ಕೊಡುತ್ತಿದೆ ॥

*** ಸೂತ್ರಂ – 15 (ಇಬ್ಬರಿಗೂ)**

ಯದಿ ಪ್ರೈತಿ ಪ್ರೇತೇsಮಾತ್ಯಾಃ ಪ್ರಾಚೀನಾವೀತಿನಃ ಕೇಶಾನ್ ಪ್ರಕೀರ್ಯ ಪಾಂಸೂನಾವಪಂತೇ ॥

ವ್ಯಕ್ತಿಯು ಸತ್ತಮೇಲೆ, ಮಂತ್ರಿಗಳು–ಸಂಬಂಧಿಗಳು–ಪ್ರಾಚೀನಾವೀತರಾಗಿ ತಲೆಕೂದಲುಗಳನ್ನು ಹರಡಿಕೊಂಡು, ತಲೆಯ ಮೇಲೆ ಧೂಳನ್ನು ಹಾಕಿಕೊಳ್ಳುವುದು ॥

*** ಗೋಪಾಲಭಾಷ್ಯಂ –**

ಪ್ರೇತೇ – ಮೃತೇ ಸತ್ಯಾಹಿತಾಗ್ನೌ ತಸ್ಯ । ಅಮಾತ್ಯಾಃ – ಜ್ಞಾತಯಃ । ಪ್ರಾಚೀನಾವೀತಿನಃ – ಪ್ರಾಚೀನಾವೀತತಯಾ ವಿನ್ಯಸ್ತೋತ್ತರೀಯಾಃ । ಕೇಶಾನ್ ಪ್ರಕೀರ್ಯ ವಿಮುಕ್ತಬಂಧಾನ್ ಕೃತ್ವಾ ಪ್ರಸಾರ್ಯ । ತೇಷು ಪಾಂಸೂನ್ ಆವಪೇರನ್ । ತತ್ರ ಅಗ್ನಿದಸ್ಯ ಅಸಪಿಂಡತ್ವೇಪಿ ಏತತ್ ಕರ್ಮಣಾಂ ಸಮುಚ್ಚಯಃ । ಅಗ್ನಿದ ವ್ಯತಿರಿಕ್ತೇಷುತು ಸಪಿಂಡೇಷು ಅಪ್ರಾಪ್ತಂ ಪ್ರಾಚೀನಾವೀತಂ ವಿಧೀಯತೇ ॥

ಪ್ರೇತ ಎಂದರೆ – ಮರಣ ಹೊಂದಿದವರು । ಅಮಾತ್ಯರು ಎಂದರೆ – ಮೃತನ ಜ್ಞಾತಿಗಳು ಎಂದರ್ಥ । ಪ್ರಾಚೀನಾವೀತಿಯನ್ನು ಮಾಡಿಕೊಂಡು ಎಂದರೆ – ಉಪವೀತವಸ್ತ್ರವನ್ನು ತೆಗೆದು ಎಂದರ್ಥ । ಶಿಖೆಯನ್ನು ಬಿಚ್ಚಿ ಕೂದಲುಗಳನ್ನು ಹರಡಿಕೊಂಡು । ನಂತರ ನೆಲದಧೂಳನ್ನು ತಲೆ ಹಾಗೂ ದೇಹಕ್ಕೆ ಎರಚಿಕೊಳ್ಳಬೇಕು । ತ್ರಿಪೌರುಷದಲ್ಲಿ ಯಾರು ಇಲ್ಲವೋ ಅಂತಹ ಜ್ಞಾತಿಗಳೂ ಸಹಾ ಕರ್ತೃವಿನೊಡನೆ ಈ ಕರ್ಮವನ್ನು ಮಾಡಬೇಕು । ಹಾಗೆಯೇ ತ್ರಿಪೌರುಷದಲ್ಲಿರುವ ಜ್ಞಾತಿಗಳೂ ಕೂಡ ಈ ಕರ್ಮವನ್ನು ಪ್ರಾಚೀನಾವೀತಿಯಿಂದ ಮಾಡಬೇಕು ಎಂದು ಈ ವಿಧಿಯಿಂದ ತಿಳಿದುಬರುತ್ತದೆ ॥

ತಥಾ ಸಾಮಯಾಚಾರಿಕೇಷು ಆತುರವ್ಯಂಜನಾನಿ ಕುರ್ವೀರನ್(ಆ, ಧ, ಪ್ರ 2, ಖಂ 15, ಸೂ 5) ಇತ್ಯಾದಿನಾ ಅನ್ವಹಂ ಸ್ನಾನಾತ್ ಪೂರ್ವಂ ಕೇಶಪ್ರಸಾರಣಾದಿ ವಿಧೀಯತೇ । ಇಹ ತು ಮರಣ ಪ್ರಭೃತಿ ಪ್ರಾಕ್‌ಸ್ನಾನ ಸಮಯಾತ್ । ತದಪ್ರಾಪ್ತಂ ವಿಧೀಯತ ಇತಿ ದ್ರಷ್ಟವ್ಯಂ । ಅತ್ರೇದಂ ಅನುಸಂಧೇಯಂ – ಮೃತೇಗ್ನಿಹೋತ್ರಕಾಲಸ್ಯಾದ್ಯದ್ಯತ್ರೋಪೋಷಣಾತ್ಪರಾ । ತಸ್ಯಾಭಿವಾನ್ಯವತ್ಸಾಯಾ ಇತಿ ಹೋಮವಿಧಿಃ ಸಮಯಿತಿ । ಯದಿ

ಮರಣೋತ್ಪೋಷಣಯೋಃ ಮಧ್ಯೇ ಅಗ್ನಿಹೋತ್ರಕಾಲ ಆಗಚ್ಛೇತ್, ತದಾ ಜನೇಪ್ರಮೀತಸ್ಯೇವ ಗೃಹೇ ಪ್ರಮೀತಸ್ಯಾಪಿ ತಸ್ಯಾಭಿವಾನ್ಯವತ್ ಸಾಯಂ ಪಯಸ ಅಗ್ನಿಹೋತ್ರಮಿತ್ಯಾದಿ ವಿಧಿನಾ ಅಗ್ನಿಹೋತ್ರಹೋಮಃ ಕಾರ್ಯಃ । ತುಲ್ಯನ್ಯಾಯತ್ವಾತ್ । ಯಸ್ಯ ತು ಪ್ರಾಗುತ್ತರಾತ್ ಅಗ್ನಿಹೋತ್ರಕಾಲಾತ್ ಉತ್ಪೋಷಣಂ ಭವತಿ । ನ ತಸ್ಯೇದಾನೀಂ ಅಗ್ನಿಹೋತ್ರಮಸ್ತಿ । ನ ತು ತಸ್ಯಾಪಿ ಸಂಸ್ಥಾಪನಾರ್ಥಂ ಕರ್ತವ್ಯಮೇವೈತತ್ ॥

ಹಾಗೆಯೇ ಹೆಂಡತಿ ಮುಂತಾದವರ ಮರಣ ಸಂಭವಿಸಿದಾಗ, ಮಾಡುವ ಕೂದಲು ಹರಡಿಕೊಳ್ಳುವಿಕೆ, ಧೂಳನ್ನು ಮೈಗೆ ಹಾಕಿಕೊಳ್ಳುವುದು, ಒಂದೇ ಬಟ್ಟೆಯಲ್ಲಿರುವುದು, ದಕ್ಷಿಣಾಭಿಮುಖವಾಗಿ ಕುಳಿತುಕೊಳ್ಳುವುದು, ನೀರಿನಲ್ಲಿ ಮುಳುಗಿ ಸ್ನಾನ ಮಾಡಿ ಹಾಗೆಯೇ ಮೇಲೆ ಬಂದು ದಕ್ಷಿಣಾಭಿಮುಖವಾಗಿ ಕೂರುವುದು, ಮುಂತಾದ ಆತುರ ಕರ್ಮಗಳನ್ನು ಮಾಡಬೇಕು – ಎಂದು ಆಪಸ್ತಂಬ ಧರ್ಮಸೂತ್ರದಲ್ಲಿ ಹೇಳಿರುವಂತೆ, ಪ್ರತಿದಿನ ಸ್ನಾನಕ್ಕಿಂತ ಮೊದಲು ಕೂದಲುಗಳನ್ನು ಬಿಚ್ಚಿಕೊಳ್ಳುವುದು ಮುಂತಾದವುಗಳನ್ನು ವಿಧಿಸಿದೆ । ಇಲ್ಲಿಯಾದರೋ, ಮರಣವಾದ ನಂತರ ಸ್ನಾನಕ್ಕಿಂತ ಮೊದಲು ಆ ಕರ್ಮವು ವಿಧಿಸಿರುವುದರಿಂದ ಮೇಲಿನ ಧರ್ಮಸೂತ್ರದಿಂದ ಪ್ರಾಪ್ತವಾಗದ ವಿಧಿಯನ್ನು ಇಲ್ಲಿ ವಿಧಾನಮಾಡುತ್ತಿದೆಯೆಂದು ತಿಳಿದುಕೊಳ್ಳಬೇಕು ॥

ಈಗ ಮುಂದೆ ಹೇಳುವುದನ್ನು ತಿಳಿದುಕೊಳ್ಳಬೇಕು – ಮರಣ ಮತ್ತು ದಹನಕಾಲದ ಮಧ್ಯೆ ಅಗ್ನಿಹೋತ್ರ ಕಾಲವು ಬಂದರೆ । ಆಗ ಮೃತ ಯಜಮಾನನ ಅಗ್ನಿಹೋತ್ರಕ್ಕೆ, **ಕರುಸತ್ತಿರುವ ಹಸುವಿನ ಹಾಲಿನಿಂದ** ಅಗ್ನಿಹೋತ್ರ ಹೋಮ ಮಾಡಬೇಕು । ದೇಶಾಂತರದಲ್ಲಿ ಸತ್ತಿರುವಂತಹ ಆಹಿತಾಗ್ನಿಯ ಶರೀರವು ಅಗ್ನಿಯ ಸ್ಪರ್ಶವಾಗುವವರೆಗೆ(ಅವನ ತ್ರೇತಾಗ್ನಿಗಳ) ಯಾವ ರೀತಿಯಲ್ಲಿ **ಅಭಿವಾನ್ಯಾದುದ್ಧದಿಂದ** ಸಾಯಂಪ್ರಾತರಗ್ನಿಹೋತ್ರವನ್ನು ಮಾಡಬೇಕೆಂಬ ಸೂತ್ರ ವಿಧಿಯಂತೆ ಈಗಲೂಕೂಡ, ಆಹಿತಾಗ್ನಿಯು ಮನೆಯಲ್ಲೇ ಮೃತನಾದಾಗಲೂ ಕೂಡ ಅವನ ಶರೀರಕ್ಕೆ ತ್ರೇತಾಗ್ನಿಗಳ ಸಂಪರ್ಕವಾಗುವವರೆಗೆ ಮೇಲೆಹೇಳಿದ ರೀತಿಯಲ್ಲೇ ಹೋಮ ಮಾಡಬೇಕು । ಏಕೆಂದರೆ, ನ್ಯಾಯವು ಎರಡಕ್ಕೂ ಸಮಾನವಾಗಿರುತ್ತದೆ । ಯಾವ ಯಜಮಾನನಿಗೆ

ಅಗ್ನಿಹೋತ್ರದ ಕಾಲಕ್ಕಿಂತ ಮೊದಲು ಅಥವಾ ನಂತರ ದಹನಕರ್ಮವು ಮುಗಿದರೆ ಅಥವಾ ಪ್ರಾರಂಭವಾದರೆ । ಆಗ ಅವನ ಅಗ್ನಿಹೋತ್ರವನ್ನು ಮಾಡಬೇಕಾಗಿಲ್ಲ । ಆ ಯಜಮಾನನಿಗೂ ಕೂಡ ಅಗ್ನಿಹೋತ್ರ ಸಂಸ್ಥಾಪನೆ(ಸಮಾಪ್ತಿ)ಗಾಗಿ ಇದನ್ನು ಮಾಡಬೇಕೆಂಬುದೇನಿಲ್ಲ ॥

*** ತಥಾ ಹಿ –**

ಅಗ್ನಿಹೋತ್ರಸ್ಥಾಲ್ಯಾಂ ತೃಣಮಂಕ್ತ್ವಾ ಅನುಪ್ರಹರತಿ । ಸಾಹ್ಯಗ್ನಿಹೋತ್ರಸ್ಯ ಸಂಸ್ಥಿತಿರಿತ್ಯುಕ್ತಂ । ನ ಚೈತತ್ ತೃಣಾನುಪ್ರಹರಣಂ ಪ್ರತಿಪ್ರಯೋಗಂ ಕಾರ್ಯಂ । 'ನ ಬರ್ಹಿರನುಪ್ರಹರೇತ್ । ಅಸಗ್ಂಸ್ಥಿತೋ ವಾ ಏಷ ಯಜ್ಞಃ' ಇತ್ಯುಕ್ತತ್ವಾತ್ । ತಸ್ಮಾತ್ ತಸ್ಯಾಹಿತಾಗ್ನೇಃ ಯಚ್ಚರಮಂ ಅಗ್ನಿಹೋತ್ರಂ ತತ್ರೈವೇದಂ ತೃಣಪ್ರಹರಣೇನ ಸಂಸ್ಥಾಪನಂ ಯುಜ್ಯತೇ ಕರ್ತುಂ । ತತೋ ಮರಣಾತ್ಪೂರ್ವಸ್ಯ ಅಗ್ನಿಹೋತ್ರಪ್ರಯೋಗಸ್ಯ ಚರಮತ್ವಾನಿಶ್ಚಯಾತ್ ಮರಣೋತ್ತರ ಕಾಲಂ ಚ ಜನೇ ಪ್ರಮೀತಸ್ಯಾಗ್ನಿಹೋತ್ರಾನುಜ್ಞಾನಾತ್ ಗೃಹೇ ಪ್ರಮೀತಸ್ಯಾಕಾಲೇಪ್ಯನೇನೈವ ವಿಧಿನಾ ತೃಣಾನುಪ್ರಹರಣ ಸಂಯುಕ್ತಂ ಅಗ್ನಿಹೋತ್ರಂ ಅನುಷ್ಠೇಯಮೇವೇತಿ ಕೇಚಿತ್ । ತದೇತತ್ ಆಕಾಶಲತಾಪ್ರತಾನತುಲ್ಯಂ । ತೃಣಾನುಪ್ರಹರಣಸ್ಯ ವಿಹಿತಪ್ರತಿಷಿದ್ಧತಯಾ ಷೋಡಷಿಗ್ರಹಾಣಾತ್ ಗ್ರಹಣ ನ್ಯಾಯೇನ ಪ್ರತಿಪ್ರಯೋಗಂ ವಿಕಲ್ಪಾವಗಮಾತ್ ಚರಮಪ್ರಯೋಗಮಾತ್ರವಿಷಯತ್ವೇ ಪ್ರಮಾಣಾಭಾವಾಚ್ಚ । ನ ಸಂಸ್ಥಿತಿವಚನಮೇವ ತತ್ರ ಪ್ರಮಾಣಂ । ಪ್ರತಿಪ್ರಯೋಗಂ ಸಂಸ್ಥಾಸದ್ಭಾವೇನ ಅನ್ಯಥೋಪಪತ್ತೇಃ ವಿಪರ್ಯಯೇ ದರ್ಶಪೂರ್ಣಮಾಸಿಕಸ್ಯಾಪಿ ಕಪಾಲೋದ್ವಾಸನಸ್ಯ ತಥಾ ತ್ವಪ್ರಸಂಗಾದಿತಿ ॥

ಹಾಗೆಯೇ –

ಅಗ್ನಿಹೋತ್ರಸ್ಥಾಲಿಯಲ್ಲಿ ತೃಣವನ್ನು ಅದ್ದಿ ಅನುಪ್ರಹರಣವನ್ನು ಮಾಡಬೇಕು । ಇದೇ ಅಗ್ನಿಹೋತ್ರದ ಸಮಾಪ್ತಿಯು ಎಂದು ಹೇಳಿದೆ । ಈ ತೃಣ ಅನುಪ್ರಹರಣವನ್ನು

ಪ್ರತಿಪ್ರಯೋಗದಲ್ಲೂ (ನಿತ್ಯ ಅಗ್ನಿಹೋತ್ರದಲ್ಲಿ) ಮಾಡಬಾರದು । ಹಾಗೆಯೇ ಬರ್ಹಿಯ ಪ್ರಹರಣವೂ ನಿತ್ಯಾಗ್ನಿಹೋತ್ರದಲ್ಲಿ ಇಲ್ಲ । ಈ ಅಗ್ನಿಹೋತ್ರವೆಂಬ ಯಜ್ಞವು, ಯಜಮಾನನು ಜೀವಿಸಿರುವವರೆಗೆ ನಿರಂತರವಾಗಿ ನಡೆಯತಕ್ಕದ್ದೆಂದು ಹೇಳಿರುವುದರಿಂದ। ಆದ್ದರಿಂದ ಆ ಮೃತ ಆಹಿತಾಗ್ನಿಯ ಕೊನೆಯ ಅಗ್ನಿಹೋತ್ರದಲ್ಲಿಯೇ ಈ ತೃಣಪ್ರಹರಣ ಹಾಗೂ ಬರ್ಹಿಪ್ರಹರಣಗಳಿಂದ ಅಗ್ನಿಹೋತ್ರವನ್ನು ಸಮಾಪ್ತಿಗೊಳಿಸುವುದು ಹೊಂದುತ್ತದೆ । ಇನ್ನು ಮರಣಪೂರ್ವದ ಅಗ್ನಿಹೋತ್ರಪ್ರಯೋಗವು, ಮರಣವು ಅನಿಶ್ಚಿತವಾಗಿರುವುದರಿಂದ ಕೊನೆಯ ಅಗ್ನಿಹೋತ್ರ ಯಾವುದೆಂಬುದು ನಿಶ್ಚಿತವಾಗಿರುವುದಿಲ್ಲ, ಮರಣವಾದ ನಂತರ ಮೃತನ ಅಗ್ನಿಹೋತ್ರವನ್ನು ಮಾಡಲು, ಕರ್ತೃವಿಗೆ ಒಪ್ಪಿಗೆಯು ಇರುವುದರಿಂದ ಹಾಗೂ ಅದೇ ಕೊನೆಯ ಅಗ್ನಿಹೋತ್ರವಾಗಿರುವುದರಿಂದ ಮನೆಯಲ್ಲಿ ಮರಣಹೊಂದಿದ ಯಜಮಾನನ ಅಗ್ನಿಹೋತ್ರವನ್ನು ಅಕಾಲದಲ್ಲಿಯೂ ಕೂಡ(ಅಗ್ನಿಹೋತ್ರಕಾಲವಲ್ಲದಿದ್ದರೂ ಕೂಡ) ಈ ಮೇಲೆಹೇಳಿದ ವಿಧಿಯಂತೆ ತೃಣ ಅನುಪ್ರಹರಣ ಮತ್ತು ಬರ್ಹಿಪ್ರಹರಣ ಇವುಗಳ ಮೂಲಕ ಅಗ್ನಿಹೋತ್ರವನ್ನು ಮಾಡಬೇಕೆಂದು ಕೆಲವರು ಹೇಳುತ್ತಾರೆ । ಅವರ ಈ ವಾದವು ಆಕಾಶವೆಂಬ ಬಳ್ಳಿಯನ್ನು ವಿಸ್ತರಿಸುವುದಕ್ಕೆ ಸಮನಾಗಿದೆಯಾದ್ದರಿಂದ ಅಷ್ಟು ಯುಕ್ತವಲ್ಲ । ತೃಣ ಅನುಪ್ರಹರಣವು ವಿಹಿತಕ್ಕೆ ಪ್ರತಿಷಿದ್ಧ(ನಿಷೇಧ)ವಾಗಿರುವುದರಿಂದ ಷೋಡಷಿಗ್ರಹಣದಿಂದ ಗ್ರಹಣವನ್ನು ವಿಕಲ್ಪವಾಗಿ ಗ್ರಹಣನ್ಯಾಯವನ್ನು ಹೇಳಿರುವಂತೆ(ಸೋಮ ಮುಂತಾದ ಯಜ್ಞಗಳ ವಿಚಾರ), ಪ್ರತಿನಿತ್ಯದ ಪ್ರಯೋಗದಲ್ಲಿ ವಿಕಲ್ಪವು ತಿಳಿದುಬರುತ್ತಿರುವುದಾದ್ದರಿಂದ ಅಂತಿಮ ಅಗ್ನಿಹೋತ್ರದಲ್ಲಿ ಮಾತ್ರ ಈ ಮೇಲೆಹೇಳಿದ ವಿಷಯವನ್ನು ತೆಗೆದುಕೊಳ್ಳಬೇಕೆಂಬುದಕ್ಕೆ ಯಾವ ಪ್ರಮಾಣವೂ ಇರುವುದಿಲ್ಲ । ಸಮಾಪನ ವಚನವು ಅಲ್ಲಿ ಪ್ರಮಾಣವಾಗುವುದಿಲ್ಲ । ಪ್ರತಿನಿತ್ಯದ ಪ್ರಯೋಗದಲ್ಲಿ ಸಮಾಪ್ತಿಯು ಕಂಡುಬರುತ್ತಿರುವುದಾದ್ದರಿಂದ ಮತ್ತು ಬೇರೇರೀತಿಯಿಂದ ಈ ಮೇಲಿನ ವಿಷಯವು ಹೊಂದುತ್ತದೆಯಾದ್ದರಿಂದ ಹಾಗೂ ಮೇಲೆಹೇಳಿದ ವಿಷಯವನ್ನು ಪ್ರಮಾಣವಾಗಿ ಸ್ವೀಕರಿಸಿದರೆ, ದರ್ಶಪೂರ್ಣಮಾಸೇಷ್ಟಿಗಳಲ್ಲೂ ಕಪಾಲೋದ್ವಾಸನೆಯನ್ನು ಮೇಲೆಹೇಳಿದಂತೆ ಮಾಡುವ ಪ್ರಸಂಗವು ಬಂದೊದಗುವುದರಿಂದ ವಿರುದ್ಧವಾಗುತ್ತದೆ ॥

*** ಕಪರ್ದಿಭಾಷ್ಯಂ –**

ಏವಂ ಹುತೇಽಪಿ ಮೃತೇ ಅಮಾತ್ಯಾಃ ಬಾಂಧವಾಃ ಪ್ರಾಚೀನಾವೀತಿನಃ । ಇತಃ ಪ್ರಭೃತಿ ಪ್ರಥಮಂ ಕುರ್ವಂತಿ । ಕೇಶಾನ್ ಪ್ರಕೀರ್ಯ ಪಾಂಸೂನಾವಪಂತೇ ಸ್ವೇಷು ಶಿರಸ್ಸು ॥

ಹೀಗೆ ಅಗ್ನಿಹೋತ್ರದ ಪ್ರಧಾನ ಹೋಮವನ್ನು ಮಾಡಿದ ನಂತರ ಯಜಮಾನನು ಮೃತನಾದರೆ, ಆಗ ಅವನ ಮಕ್ಕಳು, ಬಂಧುಗಳು ಹಾಗೂ ಇಷ್ಟವರ್ಗದವರು ಪ್ರಾಚೀನಾವೀತಿಯಾಗಿ । ಮೊದಲು ಇದನ್ನು ಮಾಡುತ್ತಾರೆ । ಏನೆಂದರೆ, ಕೂದಲುಗಳನ್ನು ಹರಡಿಕೊಂಡು, ತಲೆಯಮೇಲೆ ಧೂಳನ್ನು ಹಾಕಿಕೊಳ್ಳುತ್ತಾರೆ ॥

*** ಸೂತ್ರಂ – 16 (ಆಹಿತಾಗ್ನಿಗಳಿಗೆ ಮಾತ್ರ)**

ತಂ ಜಘನೇನ ಗಾರ್ಹಪತ್ಯಂ ದಕ್ಷಿಣಾಶಿರಸಂ ದರ್ಭೇಷು ಸಂವೇಶಯಂತಿ ಸರ್ವಸ್ಯ ಪ್ರತಿಶೀವರೀ ಇತಿ ॥

ನಂತರ ಆ ಮೃತನನ್ನು ಗಾರ್ಹಪತ್ಯಾಗ್ನಿಯ ಬಳಿಯಲ್ಲಿ ದಕ್ಷಿಣಕ್ಕೆ ತಲೆಯಿರುವಂತೆ ದರ್ಭೆಗಳಮೇಲೆ **ಸರ್ವಸ್ಯ ಪ್ರತಿಶೀವರೀ.....**, ಎಂಬ ಮಂತ್ರದಿಂದ ಮಲಗಿಸಬೇಕು ॥

*** ಗೋಪಾಲಭಾಷ್ಯಂ –**

ತಂ – ಪ್ರೇತಮಾಹಿತಾಗ್ನಿಂ ಗಾರ್ಹಪತ್ಯಸ್ಯ ಪಶ್ಚಾದ್ದರ್ಭೇಷು ಸರ್ವಸ್ಯ ಪ್ರತಿಶೀವರೀತ್ಯೇತಯರ್ಚಾ ದಕ್ಷಿಣಾಶಿರಸಂ ಸಾಯಯಂತಿ । ದರ್ಭಾಶ್ಚ ದಕ್ಷಿಣಾಗ್ರಾಸ್ತೀರ್ಯಂತೇ ॥

ಮೃತನಾದ ಅಗ್ನಿಹೋತ್ರಿಯನ್ನು, ಗಾರ್ಹಪತ್ಯದ ಹಿಂದೆ ದರ್ಭೆಗಳಮೇಲೆ ಈ ಮೇಲೆ ಹೇಳಿದ ಮಂತ್ರದಿಂದ ದಕ್ಷಿಣಕ್ಕೆ ತಲೆಯಾಗಿ ಮಲಗಿಸುತ್ತಾರೆ । ದರ್ಭೆಗಳನ್ನು ದಕ್ಷಿಣಾಗ್ರವಾಗಿ ಹರಡಿ ಮಲಗಿಸುತ್ತಾರೆ ॥

*** ಅತ್ರೇದಮನುಸಂಧೇಯಂ –**

ಪುರುಷಾಹುತಿರ್ಹ್ಯಸ್ಯ ಪ್ರಿಯತಮೇತಿ । ಶ್ರವಣಾತ್ ಪ್ರೇತಸ್ಯದಹನಂ ಹೋಮಸಂಸ್ತುತಂ। ತತೋ ಹವಿರಾತ್ಮಕಸ್ಯ ಪುರುಷ್ಯ ಅಪರೇಣ ಗಾರ್ಹಪತ್ಯಂ ಸಂವೇಶನಂ ನಿರ್ವಾಪನಸ್ಥಾನೀಯಂ । ಅಂತರಾಗ್ನೀ ನಿಪಾತನಂ ಚ ಹವಿರಾಸಾದನ ಸ್ಥಾನೀಯಮಿತಿ ॥

ಇಲ್ಲಿ ಹೀಗೆ ತಿಳಿಯಬೇಕು –

ಹವಿರ್ರೂಪದಿಂದ ಪುರುಷನ ಆಹುತಿಯು ಈ ಅಗ್ನಿಗೆ ಅತ್ಯಂತ ಪ್ರಿಯವು । ಈ ರೀತಿಯಾಗಿ ಶ್ರುತಿಯಿರುವುದರಿಂದ ಮೃತನ ದಹನವು ಹೋಮರೂಪವಾದದ್ದು ಎಂದು ಹೇಳಿದೆ । ಈ ಹವಿರ್ರೂಪವಾದ ಮೃತಯಜಮಾನನ್ನು ಗಾರ್ಹಪತ್ಯದ ಅಪರ(ಹಿಂದೆ)ಭಾಗದಲ್ಲಿ ಮಲಗಿಸುವುದು ಹವಿಸ್ಸನ್ನು ನಿರ್ವಪನ(ಹೋಮಕ್ಕೆ ತೆಗೆದುಕೊಂಡಂತೆ) ಮಾಡಿದಂತೆ । ತ್ರೇತಾಗ್ನಿಯ ಅಂತರ್ವೇದಿಯಲ್ಲಿ ಈ ಮೃತಯಜಮಾನನನ್ನು ಹಾಕುವುದು, ಹವಿಸ್ಸನ್ನು ಆಸಾದನೆ(ಸಂಸ್ಕರಿಸಲು ಇಟ್ಟಂತೆ) ಮಾಡಿದಂತೆ ॥

*** ತಥಾಹ ಬೋಧಾಯನಃ (ಬೋ, ಪಿ, ಪ್ರ 1, ಖಂ 1, ಸೂ 14+15) –**

ಜಘನೇನ ಗಾರ್ಹಪತ್ಯಂ ಉಪಸಾದಯಂತ್ಯತ್ರ ಹವಿರ್ನಿರುಪ್ಯತ ಇತಿ । ಅಥೈನಂ ಆದಾಯಾಂತರ್ವೇದಿ ಪ್ರಾಕ್ಕಿರಸಂ ಆಸಾದಯಂತ್ಯತ್ರ ಹವಿರಾಸಾದ್ಯತ ಇತೀತಿ ॥

ಬೋಧಾಯನರು ಹೀಗೆ ಹೇಳಿದ್ದಾರೆ –

ಗಾರ್ಹಪತ್ಯದ ಹಿಂದೆ, ದಕ್ಷಿಣಕ್ಕೆ ತಲೆಯಾಗಿ ಮೃತಯಜಮಾನನನ್ನು ಇಡುತ್ತಾರೆ, ಇದು ಹವಿರ್ನಿರ್ವಪನವು । ನಂತರ ಈ ಮೃತಯಜಮಾನನನ್ನು ತೆಗೆದುಕೊಂಡು, ಅಂತರ್ವೇದಿಯ ಒಳಗೆ ಪೂರ್ವದಿಕ್ಕಿಗೆ ತಲೆಮಾಡಿ ಇಡುತ್ತಾರೆ(ಮಲಗಿಸುತ್ತಾರೆ), ಇದು ಹವಿಸ್ಸಿನ ಆಸಾದನವು ॥

*** ಕಪರ್ದಿಭಾಷ್ಯಂ –**

ತಂ ಮೃತಂ ಪಶ್ಚಾತ್ ಗಾರ್ಹಪತ್ಯಸ್ಯ ಸಂವೇಶಯಂತಿ ಸರ್ವಸ್ಯ ಪ್ರತಿಶೀವರಿ ಇತಿ । ಸಕೃದೇವ ಮಂತ್ರಃ । ಕೇಚಿತ್ ಸರ್ವೇಷು ಸಂವೇಶನೇಷು ಅಪೀತಿ ॥

ಈ ಮೃತಯಜಮಾನನನ್ನು ಗಾರ್ಹಪತ್ಯದ ಹಿಂದೆ ಮೇಲೆ ಹೇಳಿದ ಮಂತ್ರದಿಂದ ಮಲಗಿಸುತ್ತಾರೆ । ಈ ಸಂದರ್ಭದಲ್ಲಿ ಮಾತ್ರ ಈ ಮಂತ್ರವನ್ನು ಒಮ್ಮೆ ಹೇಳಬೇಕು । ಆದರೆ ಕೆಲವರು ಯಾವಯಾವ ಸಂದರ್ಭಗಳಲ್ಲಿಯೇ ಆದರೂ ಮೃತಯಜಮಾನನನ್ನು ಮಲಗಿಸುತ್ತಾರೋ ಆ ಎಲ್ಲಾ ಸಂದರ್ಭಗಳಲ್ಲೂ ಈ ಮಂತ್ರವನ್ನು ಹೇಳಬೇಕೆಂದು ಅಭಿಪ್ರಾಯಪಡುತ್ತಾರೆ ॥

*** ಸೂತ್ರಂ – 17 (ಇಬ್ಬರಿಗೂ)**

ಸರ್ವೇಷು ಸಂವೇಶನೇಷು ದಕ್ಷಿಣಾಶಿರಾಃ ॥

ದಕ್ಷಿಣಕ್ಕೆ ತಲೆಯಿರುವಂತೆ ಮಲಗಿಸುವುದು, ಮೃತರಾದ ಎಲ್ಲರಿಗೂ ಸಮಾನವೇ ॥

*** ಗೋಪಾಲಭಾಷ್ಯಂ –**

ಯತ್ರಯತ್ರ ಮೃತಸ್ಯ ಸಂವೇಶನಂ ವಕ್ಷ್ಯತೇ, ತತ್ರ ತತ್ರಾಯಂ ದಕ್ಷಿಣಾಶಿರಾಶ್ಶಾಯಯಿತವ್ಯಃ । ನಾನ್ಯಥಾ । ತತಶ್ಚ ದಕ್ಷಿಣಾಶಿರಸ್ತ್ವಮಾತ್ರಾತಿ ದೇಶಾತ್ ತೇಷ್ವಯಂ ಮಂತ್ರೋನುಭವತಿ ॥

ಎಲ್ಲಿಎಲ್ಲಿ ಮೃತನ ಮಲಗಿಸುವಿಕೆಯನ್ನು ಹೇಳುತ್ತಾರೋ, ಅಲ್ಲೆಲ್ಲಾ ದಕ್ಷಿಣಕ್ಕೇ ತಲೆಯಾಗಿ ಮಲಗಿಸಬೇಕು । ಬೇರೆ ದಿಕ್ಕಿಗೆ ತಲೆಬರಬಾರದು । ಆದ್ದರಿಂದ ದಕ್ಷಿಣಕ್ಕೆ ತಲೆಯಾಗಿ ಮಲಗಿಸುವುದನ್ನು ಹೇಳಿರುವುದರಿಂದ, ಆಯಾಯಾ ಮಲಗಿಸುವಿಕೆಯಲ್ಲಿ ಈ ಮಂತ್ರವು ಹೇಳಬೇಕೆಂದು ಸಿದ್ಧವಾಗುತ್ತದೆ ॥

* ಸೂತ್ರಂ – 18 (ಇಬ್ಬರಿಗೂ)

ಪೂರ್ವಯಾ ದ್ವಾರೋಪ ನಿರ್ಹ್ಯತ್ಯಾಂತರಾಗ್ನೀ ನಿಪಾತ್ಯಾನ್ವಾರಬ್ಧೇ ಮೃತ ಆಹವನೀಯೇ ಸ್ರುವಾಹುತಿಂ ಜುಹೋತಿ ಪರೇಯುವಾಂಸಂ ಇತಿ ॥

ನಂತರ ಪೂರ್ವದಿಕ್ಕಿನ ದ್ವಾರದಿಂದ ಯಜ್ಞಶಾಲೆಯನ್ನು ಪ್ರವೇಶಿಸಿ, ಅಂದರೆ ಆ ಮೃತನನ್ನು ಯಜ್ಞಶಾಲೆಯ ಪೂರ್ವದಿಕ್ಕಿನ ದ್ವಾರದಿಂದ ಒಳಕ್ಕೆತಂದು, ಅಗ್ನಿಗಳ ನಡುವೆ ಮಲಗಿಸಿ, ಆ ಮೃತನನ್ನು ಕರ್ತೃವು ಅನ್ವಾರಂಭ(ದರ್ಭೆಗಳಿಂದ ಮುಟ್ಟಿಕೊಂಡು) ಮಾಡಿಕೊಂಡು ಆಹವನೀಯಾಗ್ನಿಯಲ್ಲಿ, **ಪರೇಯುವಾಗ್ಂಸಂ.....,** ಎಂಬ ಮಂತ್ರದಿಂದ ಸ್ರುವಾಹುತಿಯನ್ನು ಕೊಡಬೇಕು ॥

* ಕಪರ್ದಿಭಾಷ್ಯಂ –

ಗಾರ್ಹಪತ್ಯಾಗಾರಸ್ಯ ಪೂರ್ವಯಾದ್ವಾರಾ ನಿರ್ಹೃತ್ಯ ಅಂತರಾಗ್ನೀ ನಿಪಾತ್ಯ ಶಾಯಯಿತ್ವಾ। ದಕ್ಷಿಣಾಶಿರಸಂ ಅಧ್ವರ್ಯುರನ್ವಾರಬ್ಧೇ ಮೃತೇ ಆಹವನೀಯೇ ಸ್ರುವಾಹುತಿಂ ಜುಹೋತಿ ಪರೇಯುವಾಂಸಮಿತಿ । ಅವಿಕಾರೇಣ ಪತ್ನ್ಯಾಮಪಿ । ಶವಪರತ್ವಾನ್ಮಂತ್ರಸ್ಯ । ಶಬ್ದಾಂತರಂ ಅಪಿ ನಾಮಧೇಯೇ ಯಮೌತ್ಪತ್ತಿಕತ್ವಾತ್ ॥

ಗಾರ್ಹಪತ್ಯದ ಸ್ಥಾನದಿಂದ ಪೂರ್ವದಿಕ್ಕಿಗಿರುವ ಬಾಗಿಲಿನಿಂದ ಮೃತನನ್ನು ಒಯ್ದು, ಅಂತರ್ವೇದಿಯಲ್ಲಿ(ಮೂರು ಅಗ್ನಿಗಳ ನಡುವೆ) ಮಲಗಿಸಿ(ದೇಹವನ್ನು ಇಟ್ಟು) । ದಕ್ಷಿಣಕ್ಕೆ ತಲೆಯಾಗಿ ಇರುವಂತೆ ಮಲಗಿಸಿ, ಅಧ್ವರ್ಯುವು ಮೃತನನ್ನು ದರ್ಭೆಯಿಂದ ಮುಟ್ಟಿಕೊಂಡು ಆಹವನೀಯದಲ್ಲಿ ಈ ಮೇಲೆಹೇಳಿರುವ ಮಂತ್ರದಿಂದ ಸ್ರುವಾಹುತಿಯನ್ನು ಹೋಮಿಸಿ । ಮಂತ್ರದಲ್ಲಿ ವಿಕಾರ(ವ್ಯತ್ಯಾಸ)ವನ್ನು ಮಾಡದೇ, ಮೃತಪತ್ನಿಗೂ ಇದೇ ಮಂತ್ರವನ್ನು ಹೇಳಬೇಕು । ಏಕೆಂದರೆ, ಈ ಮಂತ್ರವು ಶವವನ್ನು ಇಟ್ಟುಕೊಂಡು ಹೇಳಿರುವುದಾಗಿದೆ । ಹೆಸರಿನಿಂದ ಬೇರೆಬೇರೆ ಶಬ್ದಗಳಾದರೂ, ಈ ಮಂತ್ರವು ಯಮನನ್ನು ಉತ್ಪತ್ತಿ ಮಾಡುವ ಸಾಮರ್ಥ್ಯವನ್ನು ಹೊಂದಿದೆಯಾದ್ದರಿಂದ ಮಂತ್ರವನ್ನು ವ್ಯತ್ಯಾಸಮಾಡದೇ ಹೇಳಬೇಕು ॥

*** ಸೂತ್ರಂ – 19 (ಇಬ್ಬರಿಗೂ)**

ಏವಂ ಗಾರ್ಹಪತ್ಯೇ ತೂಷ್ಣೀಂ ಅನ್ವಾಹಾರ್ಯಪಚನೇ ಸಭ್ಯ ಆವಸಥ್ಯಯೋಃ ಔಪಾಸನೇ ಚ ॥

ಹೀಗೆಯೇ, ಗಾರ್ಹಪತ್ಯಾಗ್ನಿಯಲ್ಲಿಯೂ ಸ್ರುವಾಹುತಿಯನ್ನು ಕೊಡಬೇಕು । ನಂತರ ಆತನನ್ನು ದರ್ಭೆಗಳಿಂದ ಮುಟ್ಟಿಕೊಂಡೇ, ಸುಮ್ಮನೆ(ಅಮಂತ್ರಕವಾಗಿ) ದಕ್ಷಿಣಾಗ್ನಿಯಲ್ಲಿ, ಸಭ್ಯ, ಆವಸಥ್ಯ ಹಾಗೂ ಔಪಾಸನಾಗ್ನಿಗಳಲ್ಲಿ ಸ್ರುವಾಹುತಿಯನ್ನು ಕೊಡಬೇಕು ॥

*** ಕಪರ್ದಿಭಾಷ್ಯಂ –**

ಏವಂ ಗಾರ್ಹಪತ್ಯೇ ಸಂವೇಶನಾದಿ ಹೋಮಾತಂ ತೂಷ್ಣೀಂ ಇತರೇಷ್ವಿತ್ಯ ವಚನಾತ್ । ನ ಸಭ್ಯಾವಸಥ್ಯಯೋಃ ಕೇಚಿತ್ ಕುರ್ವಂತಿ । ಅನ್ವಾಹಾರ್ಯಪಚನ ಗ್ರಹಣಂ ಪ್ರದರ್ಶನಾರ್ಥಮಿತಿ ॥

ಈ ರೀತಿಯಾಗಿ, ಸಂವೇಶನ(ಮಲಗಿಸುವುದು)ದಿಂದ ಹಿಡಿದು ಹೋಮಾಂತದವರೆಗೆ ಅಮಂತ್ರಕವಾಗಿ ಬೇರೆ ಅಗ್ನಿಗಳಲ್ಲೂ(ದಕ್ಷಿಣಾಗ್ನಿ–ಆಹವನೀಯ–ಸಭ್ಯ–ಆವಸಥ್ಯ–ಔಪಾಸನ) ಮಾಡಬೇಕು ಎಂಬ ವಚನವಿರುವುದರಿಂದ । ಆದರೆ ಸಭ್ಯ–ಆವಸಥ್ಯಾಗ್ನಿಗಳಲ್ಲಿ ಕೆಲವರು ಮಾಡುವುದಿಲ್ಲ । ದಕ್ಷಿಣಾಗ್ನಿಯನ್ನು ತೆಗೆದುಕೊಂಡಿರುವುದು, ಬೇರೇ ಅಗ್ನಿಗಳಿಗೂ ಉಂಟು ಎಂದು ತೋರಿಸುವುದಕ್ಕಾಗಿ ॥

*** ಸೂತ್ರಂ – 20 (ಇಬ್ಬರಿಗೂ)**

ಅಥಾಸ್ಯ ದಕ್ಷಿಣೇನ ವಿಹಾರಂ ಪರಿಶ್ರಿತೇ(ಪ್ರೇತಸ್ಯ) ಕೇಶ, ಶ್ಮಶ್ರು, ಲೋಮ, ನಖಾನಿ, ವಾಪಯಿತ್ವಾ, ಸ್ನಾಪಯಿತ್ವಾ, ಆಚ್ಛಾದ್ಯ, ಗ್ರಾಮ್ಯೇಣ ಅಲಂಕಾರೇಣ ಅಲಂಕೃತ್ಯ, ಶುಕ್ಲಸೂತ್ರೇಣ ಅಂಗುಷ್ಠೌ ಬದ್ಧ್ವಾ, ನಲದಮಾಲಾಂ ಆಬಧ್ಯ ॥

ನಂತರ ವಿಹಾರದ ದಕ್ಷಿಣಕ್ಕೆ ಮೃತನನ್ನು ತಂದು, ಅವನ ಕೇಶ(ತಲೆಕೂದಲು), ಶ್ಮಶ್ರು(ಮುಖದಕೂದಲು), ಲೋಮ(ದೇಹದಕೂದಲು), ನಖ(ಉಗುರು) ಇವೆಲ್ಲವನ್ನೂ ತೆಗೆಸಬೇಕು । ನಂತರ ಅವನಿಗೆ ಸ್ನಾನಮಾಡಿಸಿ, ವಸ್ತ್ರದಿಂದ ಹೊದಿಸಿ, ಗ್ರಾಮ್ಯವಾದ ಅಲಂಕರಣಗಳಿಂದ ಅಲಂಕರಿಸಿ, ಬಿಳಿಯ ಸೂತ್ರಗಳಿಂದ ಕಾಲುಗಳ 2 ಹೆಬ್ಬೆರಳುಗಳನ್ನು ಕಟ್ಟಿ, ನಲದಮಾಲೆ(ಪುಂಸೆ ಮರದ ಹೂವು)ಯನ್ನು ಅವನ ಕೊರಳಿಗೆ ಹಾಕಬೇಕು ॥

*** ಗೋಪಾಲಭಾಷ್ಯಂ –**

ಅಸ್ಯ ಮೃತಸ್ಯ ಪರಿಶ್ರಿತೇ – ಕಟಾದಿಭಿಃ ಪರಿವೃತೇ ಶುಚೌದೇಶೇ ದೈವೇನ ಮಾನುಷೇಣ ವಾ । ವಪನ ಕಲ್ಪೇನ ಕೇಶಾದಿ ವಾಪಯಿತ್ವಾ । ಸ್ನಾಪನಾದಿ ಕಾರ್ಯಂ। ಕೇಚಿತ್ ಆಚ್ಛಾದ್ಯ ಇತಿ ನ ಪಠಂತಿ। ತತ್ರಾಪ್ಯಾಚ್ಛಾದನಮರ್ಥಸಿದ್ಧಂ ಭವತ್ಯೇವ । ನಲದೋನಾಮ ತೃಣ ವಿಶೇಷಃ । ನರಾಂದ್ಯತೀತಿ ವ್ಯುತ್ಪತ್ತಿಃ । ರಲಯೋರವಿಶೇಷಃ । ತಥಾ ಶಿರಸ್ತೋ ನರದಮಾಲಾಂ ಪ್ರತಿಮುಚ್ಯೇತಿ ಬೋಧಾಯನಃ (ಬೋ, ಪಿ, ಪ್ರ 1, ಖಂ 2, ಸೂ 8) ॥

ಈ ಮೃತನಾದ ಯಜಮಾನನನ್ನು ಚಾಪೆ ಮುಂತಾದವುಗಳಿಂದ ಮರೆಮಾಡಿದ, ಶುದ್ಧವಾದ ಜಾಗದಲ್ಲಿ ಸ್ವಭಾವವಾಗಿಯೇ ಶುದ್ಧವಾದ ಮರೆಯಿರುವ ಜಾಗವಾದರೂ ಸರಿ ಅಥವಾ ಮನುಷ್ಯರಿಂದ ಕೃತಕವಾಗಿ ಶುದ್ಧಗೊಳಿಸಿದ ಮರೆಮಾಡಿದ ಜಾಗವಾದರೂ ಸರಿ । ವಪನವಿಧಿಯಿಂದ ಕೇಶಾದಿಗಳನ್ನು ಮೃತನಿಗೆ ಮಾಡಿಸಬೇಕು । ಹಾಗೂ ಸ್ನಾನಾದಿಗಳನ್ನೂ ಮಾಡಿಸಬೇಕು । ಕೆಲವರು ಮರೆಮಾಡುವ ಅವಶ್ಯಕತೆ ಇಲ್ಲವೆಂದು ಅಭಿಪ್ರಾಯಪಡುತ್ತಾರೆ । ಅಲ್ಲಿಯೂ ಕೂಡ ಆಚ್ಛಾದನೆಯು ವಿಕಲ್ಪದಿಂದ ಮಾಡಬಹುದೆಂದು ಸಿದ್ಧವಾಗುತ್ತದೆ । ನಲದವೆಂಬುದು, ಒಂದು ಜಾತಿಯ ವಿಶೇಷ ಹುಲ್ಲು । 'ನರಾನ್ ದ್ಯತಿ', ಎಂಬ ನಿರ್ವಚನದಿಂದ 'ನಲದ' ಎಂಬ ಹೆಸರು ಬಂದಿದೆ । ಇಲ್ಲಿ, 'ರ, ಲ' ಗಳಿಗೆ ವ್ಯತ್ಯಾಸವಿಲ್ಲ, ಆದ್ದರಿಂದ **'ರ'ಕಾರಕ್ಕೆ 'ಲ' ಕಾರವು** ಬಂದಿದೆ । ತಲೆಗೆ ಪೇಟವನ್ನು ಸುತ್ತಿ ಅಥವಾ ತಲೆಯಮೇಲಿಂದ **ನಲದ(ಹುಲ್ಲಿನ) ಮಾಲೆಯನ್ನು** ಹಾಕಿಕೊಂಡು ಎಂದು ಬೋಧಾಯನರು ಹೇಳಿದ್ದಾರಲ್ಲವೇ ॥

*** ಕಪರ್ದಿಭಾಷ್ಯಂ –**

ಅಥ ಅಸ್ಯ ಮೃತಸ್ಯ ಕೇಶಶ್ಮಶ್ರುನಖ ಲೋಮಾನಿ ವಾಪಯಿತ್ವಾ ಸ್ನಾಪಯಿತ್ವಾ । ನಲದಮಾಲಾಂ ಆಬಧ್ಯ(ವಂಜುಲ ಪುಷ್ಪ ಕೃತಾಂ ವಾ) ॥

ಮೃತನಾದ ಈ ಯಜಮಾನನ, ಕೂದಲು(ತಲೆಯ) – ಶ್ಮಶ್ರು(ಮುಖದ ಕೂದಲು) – ಉಗುರು – ಲೋಮ(ಶರೀರದ ಕೂದಲು)ಗಳನ್ನು ಸಂಪೂರ್ಣವಾಗಿ ವಪನಮಾಡಿ ಸ್ನಾನ ಮಾಡಿಸಿ । **ನಲದಮಾಲೆ ಅಥವಾ ವಂಜುಲವೆಂಬ** ಹೂವಿನ ಹಾರವನ್ನು ಮೃತನ ಕೊರಳಿಗೆ ಹಾಕಬೇಕು ॥

2 ನೇ ಖಂಡ

(ಶವವನ್ನು ತೆಗೆದುಕೊಂಡು ಹೋಗುವ ವಾಹನ – ಚೆಟ್ಟದ ಲಕ್ಷಣ – ದಾರಿಮಧ್ಯದಲ್ಲಿ ಮಾಡುವ ವಿಧಿಗಳು)

* ಸೂತ್ರಂ – 1=21 (ಇಬ್ಬರಿಗೂ)

ಔದುಂಬರ್ಯಾಂ ಆಸಂದ್ಯಾಂ ಕೃಷ್ಣಾಜಿನಂ ದಕ್ಷಿಣಾಗ್ರೀವಂ ಅಧರಲೋಮಾಸ್ತೀರ್ಯ ತಸ್ಮಿನ್ನೇನಮುತ್ತಾನಂ ನಿಪಾತ್ಯ ಪತ್ತೋದಶೇನ ಅಹತೇನ ವಾಸಸಾ ಪ್ರೋಣೋರ್ತಿ ಇದಂ ತ್ವಾ ವಸ್ತ್ರಂ ಇತಿ ॥

ಔದುಂಬರಮರದ ಆಸನದಲ್ಲಿ, ಕೃಷ್ಣಾಜಿನವನ್ನು ದಕ್ಷಿಣಾಗ್ರವಾಗಿ ಅದರ ಲೋಮಗಳು(ಕೂದಲು) ಕೆಳಬರುವಂತೆ ಹಾಕಿ, ಅದರ ಮೇಲೆ ಮೇಲ್ಮುಖವಾಗಿ ಮೃತನನ್ನು ಮಲಗಿಸಿ, ಅಂಚಿಲ್ಲದ ಹೊಸಬಟ್ಟೆಯನ್ನು ಇದಂ ತ್ವಾ ವಸ್ತ್ರಂ....., ಎಂಬ ಮಂತ್ರದಿಂದ ಮೃತನಿಗೆ ಹೊದಿಸಬೇಕು ॥

* ಗೋಪಾಲಭಾಷ್ಯಂ –

ಔದುಂಬರೀ – ಉದುಂಬರ ದಾರುಮಯೀ । ಆಸಂದೀ – ಆಸಾದನಾರ್ಥಾ ಖಟ್ವಾ । ತಸ್ಯಾಶೀರ್ಷಣ್ಯಾನೂಚ್ಯಾನಿ ಫಲಕಾನಿ ಪಾದಾಶ್ಚೌದುಂಬರಾ ಇತ್ಯರ್ಥಃ । ಸಾ ತು ರಜ್ಜುಭಿರ್ವ್ಯೂತಾಭವತಿ, ನ ಫಲಕ ಆಸ್ತೀರ್ಣಾ । ರಜ್ಜೂರವಕೃತ್ಯೇತ್ಯುತ್ತರತ್ರಾನುವಾದಾತ್ । ಮೌಂಜೀಭಿರೇವ ರಜ್ಜುಭಿರಿತ್ಯನ್ಯೇ । ಅನ್ಯತ್ರ ಸಾಹಚರ್ಯ ದರ್ಶನಾತ್ । ಸಾ ತು ಅನಸಾವಹನಪಕ್ಷೇಪಿ ಭವತ್ಯೇವ ।

ಅನಸ್ಯಾಧಾಯ ನೇಯತ್ವಾತ್ । ಕೃಷ್ಣಾಜಿನಮತ್ರ ಅನೇಷ್ಟಿಕಮಭಿಪ್ರೇತಂ, ಐಷ್ಟಿಕಸ್ಯ ಅವಘಾತಾತ್ ಆವುಪಯೋಜ್ಯತ್ವಾತ್ । ತಸ್ಮಿನ್ ಏನಂ ಪ್ರೇತಂ ದಕ್ಷಿಣಾಶಿರಸಂ ಉತ್ತಾನಂ ಸಾಯಯೇತ್ । ಪತ್ತಃ – ಪಾದಪ್ರದೇಶೇ ದಶಾ – ವಸನಸಮಾಪ್ತಿದೇಶೋ ಯಸ್ಯ ವಾಸಸಃ ತತ್ ಪತ್ತೋದಶಂ । ಅಹತಂ – ಅಪೀಡಿತಂ, ಪೀಡಾತು ನಿವಸನೇನ ಕಾರುಕರ್ಮಣಾ ವಾ ಭವತಿ । ತದುಭಯಂ ಯಸ್ಯ ನಾಸ್ತಿ ತದಹತಂ । ಇದಂ ತ್ವಾ ವಸ್ತ್ರಂ ಪ್ರಥಮನ್ವಾಗನ್ । ಇತ್ಯೇತಾವಾನಿಹ ಪ್ರೋರ್ಣವನ ಮಂತ್ರಃ । ಉತ್ತರಸ್ಯಾದಿನೇತಿ(ಉತ್ತರಸ್ಯ ಆದಿನಾ /ಪೂರ್ವಸ್ಯ ಅಂತಂ ವಿದ್ಯಾತ್) ನ್ಯಾಯಾತ್ ॥

ಔದುಂಬರ(ಅತ್ತಿ)ಮರದಿಂದ ಆಸಂದಿ(ಚೆಟ್ಟ)ಯನ್ನು ಮಾಡಬೇಕು । ಅದರ ತಲೆಯಭಾಗದಲ್ಲಿ ಹಲಗೆಗಳನ್ನು ಇಡಬೇಕು, ಪಾದಭಾಗದಲ್ಲಿ ಔದುಂಬರದ ದಂಡಗಳನ್ನಿಡಬೇಕು । ಆ ದಂಡಗಳು ಹಗ್ಗದಿಂದ ಕಟ್ಟಲ್ಪಟ್ಟಿರಬೇಕು, ಹಲಗೆಗಳು ಹಗ್ಗದಿಂದ ಕಟ್ಟಲ್ಪಟ್ಟಿರುವುದಿಲ್ಲ । ಏಕೆಂದರೆ 'ಹಗ್ಗದಿಂದ ತೆಗೆದು', ಎಂದು ಮುಂದೆ ವಿಧಿಯನ್ನು ಹೇಳಿರುವುದರಿಂದ । ಕೆಲವರು **ಮೌಂಜೀಹುಲ್ಲಿನ ಹಗ್ಗವನ್ನೇ** ಕಟ್ಟಬೇಕೆಂದು ಹೇಳುತ್ತಾರೆ । ಏಕೆಂದರೆ, ಬೇರೆಕಡೆಯಲ್ಲಿಯೂ ಇದರ ಹಗ್ಗವನ್ನೇ ಹೇಳಿರುವುದು ಕಂಡುಬಂದಿರುವುದರಿಂದ । ಈ ಹಗ್ಗಕಟ್ಟುವಿಕೆಯು, ಗಾಡಿಯಲ್ಲಿ(ವಾಹನ) ತೆಗೆದುಕೊಂಡು ಹೋಗುವ ಪಕ್ಷದಲ್ಲೂ ಉಂಟು । ವಾಹನದಲ್ಲಿಟ್ಟು ತೆಗೆದುಕೊಂಡು ಹೋಗಬೇಕೆಂದು ಹೇಳಿರುವುದರಿಂದ । ಇಲ್ಲಿ, ಕೃಷ್ಣಾಜಿನವು ಇಷ್ಟಿಕರ್ಮದಲ್ಲಿ ಉಪಯೋಗಿಸಿದ್ದಾಗಿರಬಾರದು, ಏಕೆಂದರೆ ಇಷ್ಟಿಯಲ್ಲಿ **ಹವಿಸ್ಸನ್ನು ಕುಟ್ಟುವುದು...,** ಮುಂತಾದ ವಿಧಿಗಳಿಗೆ ಅದನ್ನು ಉಪಯೋಗಿಸಿರುತ್ತಾರಾದ್ದರಿಂದ । ಹಾಗಾಗಿ ಬೇರೆಯ ಕೃಷ್ಣಾಜಿನವನ್ನು ಚೆಟ್ಟದ ಮೇಲೆ ಹರಡಿ, ಅದರಮೇಲೆ ಮೃತಯಜಮಾನನನ್ನು ದಕ್ಷಿಣಕ್ಕೆ ತಲೆಮಾಡಿ ಮೇಲ್ಮುಖವಾಗಿ ಮಲಗಿಸಬೇಕು । ವಸ್ತ್ರದ ಕೊನೆಯ ಭಾಗದಿಂದ ಮೃತನ ಕಾಲುಗಳ ಭಾಗವನ್ನು ಮುಚ್ಚಬೇಕು । ಯಾವ ವಸ್ತ್ರದ ಕೊನೆಯಭಾಗವು ಮೃತನ ಕಾಲುಗಳ ಭಾಗವನ್ನು ಮುಚ್ಚುತ್ತದೋ ಅದು ಪತ್ತೋದಶ ವಸ್ತ್ರವು । ಹರಿಯದ, ಉಪಯೋಗಿಸದ, ಹೊಸದಾಗಿ ತಂದಂತಹ, ವಸ್ತ್ರವನ್ನು ಈ ಮೇಲೆಹೇಳಿದ ಮಂತ್ರದಿಂದ ಹೊದಿಸಬೇಕು । ಈ ಮೇಲೆಹೇಳಿದ ಮಂತ್ರವೇ ಮೃತನಿಗೆ ವಸ್ತ್ರವನ್ನು ಹೊದಿಸುವ

ಮಂತ್ರವು । **'ಉತ್ತರಸ್ಯಾದಿನಾ.....'**, ಎಂಬ ನ್ಯಾಯದಂತೆ ಈ ಒಂದುಮಂತ್ರ ಮಾತ್ರ ಮೃತನಿಗೆ ಹೊದಿಸುವ ಮಂತ್ರವಾಗಿದೆ ॥

*** ಅತ್ರಾಹ ಬೋಧಾಯನಃ (ಬೋ, ಪಿ, ಪ್ರ 2, ಖ 2, ಸೂ 2) –**

ಔದುಂಬರಂ ತಲ್ಪಂ ಸಮಾರೋಪ್ಯ ಅಂಗುಷ್ಮಬಂಧನಂ ಕರೋತೀತಿ ॥

ಇಲ್ಲಿ ಬೋಧಾಯನರು ಹೀಗೆ ಹೇಳುತ್ತಾರೆ – **ಅತ್ತಿಮರದಿಂದ** ಮಾಡಿದ ಚೆಟ್ಟದ ಮೇಲೆ ಮೃತನನ್ನು ಮಲಗಿಸಿ, ಕಾಲಿನ ಹೆಬ್ಬೆರಳನ್ನು ಕಟ್ಟಬೇಕು ॥

*** ಕಪರ್ದಿಭಾಷ್ಯಂ –**

ಉದುಂಬರ ಕೃತಾಯಾಂ ಆಸಂದ್ಯಾಂ । ಮೌಂಜವಿವಾನಾಯಮಿತಿ ಕೇಚಿತ್ । ಮೌಂಜ್ಯಾರಜ್ವೇತ್ಯುತ್ತರತ್ರ ವಚನಾತ್ । ಪತ್ತಃ ಪಾದತಃ ದಶಾಯಸ್ಯ ವಸ್ತ್ರಸ್ಯ ತದಿದಂ ಪತ್ತೋದಶಂ । ಅಹತಂ ಅನಿವಸಿತಂ । ಇದಂ ತ್ವಾ ವಸ್ತ್ರಂ....., ಇತ್ಯೇತಾವಾನೇವ ಮಂತ್ರಃ ॥

ಅತ್ತಿಮರದಿಂದ ಮಾಡಿದ ಚೆಟ್ಟದಲ್ಲಿ । ಮೌಂಜೀಹುಲ್ಲಿನಿಂದ ಆ ಚೆಟ್ಟವನ್ನು ಸಿದ್ಧಪಡಿಸಬೇಕೆಂದು ಕೆಲವರು ಹೇಳುತ್ತಾರೆ । ಏಕೆಂದರೆ – **'ಮೌಂಜೀಹಗ್ಗದಿಂದ'** ಎಂದು ಮುಂದೆ ಹೇಳಿರುವುದರಿಂದ । ಕಾಲಿನ ತುದಿಯ ಭಾಗವನ್ನು ಮುಚ್ಚುವ, ಬಟ್ಟೆಯ ಅಂಚಿನಭಾಗಕ್ಕೆ **'ಪತ್ತೋದಶ ವಸ್ತ್ರ'** ಎನ್ನುತ್ತಾರೆ । ಹಾಗೂ **ಹರಿಯದ** – **ಉಪಯೋಗಿಸದ** ವಸ್ತ್ರವನ್ನು **ಇದಂ ತ್ವಾ.....**, ಮಂತ್ರದಿಂದ ಮಾತ್ರ ಮೃತನಿಗೆ ಹೊದಿಸಬೇಕು ॥

*** ಸೂತ್ರಂ – 2 (ಇಬ್ಬರಿಗೂ)**

ಅಥಾಸ್ಯೇತರದಪಾದತ್ತೇ ಅಪೈತದೂಹ ಇತಿ ॥

ನಂತರ ಮೃತನದೇಹದಲ್ಲಿ ಧರಿಸಲ್ಪಟ್ಟಿರುವ ಎಲ್ಲಾ ಬಟ್ಟೆಗಳನ್ನೂ **ಅಪೈತದೂಹ.....,** ಎಂಬ ಮಂತ್ರದಿಂದ ಸಂಪೂರ್ಣವಾಗಿ ತೆಗೆಯಬೇಕು ॥

* ಗೋಪಾಲಭಾಷ್ಯಂ –

ಅಸ್ಯ, ಮೃತಸ್ಯ । ಇತರತ್, ಪೂರ್ವಾಚ್ಛಾದಿತಂ ವಾಸಃ ಅಧ್ವರ್ಯುಃ । ಅಪೈತದೂಹ ಯದಿಹಾ ಇತ್ಯಾದಿನಾ ಋಕ್ಷೇಷೇಣ ಅಪಾದದೀತ ॥

ಈ ಮೃತನದೇಹದ ಮೇಲಿರುವ ಈ ಮೊದಲಿನವಸ್ತ್ರಗಳನ್ನು **ಅಪೈತದೂಹ.....,** ಮಂತ್ರದಿಂದ, ಮಂತ್ರವು ಮುಗಿಯುವುದಕ್ಕೆ ಮೊದಲೇ ಸಂಪೂರ್ಣವಾಗಿ ತೆಗೆಯ ಬೇಕು ॥

* ಸೂತ್ರಂ – 3 (ಇಬ್ಬರಿಗೂ)

ತತ್ಪುತ್ರೋ ಭ್ರಾತಾ ವಾನ್ಯೋ ವಾ ಪ್ರತ್ಯಾಸನ್ನ ಬಂಧುಃ ಪ್ರತೀತಃ ಪರಿಧಾಯ ಆಜರಸೋವಸೀತ ॥

ಮೃತನ ಮಗನೋ, ಅಣ್ಣ ತಮ್ಮಂದಿರೋ, ಹತ್ತಿರದ ಬಂಧುವಾಗಿ ಗುರುತಿಸಿಕೊಂಡವರೋ ಅಥವಾ ಬೇರೆಯವರೋ ಮೃತನ ದೇಹದಿಂದ ತೆಗೆದ ಆ ಬಟ್ಟೆಯನ್ನು ಅದು ಹರಿಯುವವರೆಗೂ ಬಳಸಬೇಕು ॥

* ಗೋಪಾಲಭಾಷ್ಯಂ –

ತತ್ – ಅಪಾತ್ತಂ ವಾಸಃ ಪ್ರೇತಸ್ಯ ಪುತ್ರೋಭ್ರಾತಾ ವಾ ಅನ್ಯೋ ವಾ ಬ್ರಾಹ್ಮಣ ಇತಿ। ಪೂರ್ವಾಭಾವೇಪರಃ ಪ್ರತ್ಯೇತವ್ಯಃ। ಸ ತು ಪ್ರತೀತಸ್ಸನ್ ಆದರೇಣಾಭಿಗಮ್ಯ ಪರಿದಧೀತ । ತಚ್ಚ ಯದಾಜೀರ್ಣಂ ಸತ್ ನ ಪರಿಧಾನಯೋಗ್ಯಂ ಸ್ಯಾತ್, ಆತಸ್ಮಾತ್ ಕಾಲಾತ್ ವಸೀತೈವ । ನ ತತಃ ಪುರಾನಿರಸ್ಯೇತ್ । ನ ಚಾನ್ಯಸ್ಮೈ ದದ್ಯಾದಿತ್ಯರ್ಥಃ ॥

ಆ ತೆಗೆದ ವಸ್ತ್ರವನ್ನು, ಕ್ರಮವಾಗಿ ಮೃತನ ಮಕ್ಕಳು ಅಥವಾ ಅಣ್ಣ ಅಥವಾ ತಮ್ಮ ಅಥವಾ ಬೇರೇ ಬ್ರಾಹ್ಮಣರು, ಮೃತನ ನೆನಪಿಗಾಗಿ **ಆದರದಿಂದ** ಉಪಯೋಗಿಸಬಹುದು । ಅದು ಎಲ್ಲಿಯವರೆಗೆ ಜೀರ್ಣವಾಗಿ(ಹರಿದು), ಉಡಲುಯೋಗ್ಯವಾಗುವುದಿಲ್ಲವೋ ಅಲ್ಲಿಯವರೆಗೆ ಮೃತನ ನೆನಪಿಗಾಗಿ ಉಪಯೋಗಿಸಬೇಕು । ಹರಿಯುವುದಕ್ಕಿಂತ(ಉಡಲು ಅಯೋಗ್ಯವಾಗುವ ಮೊದಲು) ಮುಂಚೆ ಎಸೆಯಲೂ ಅಥವಾ ಬೇರೆಯವರಿಗೆ ಕೊಡಲೂಬಾರದು ॥

* ಕಪರ್ದಿಭಾಷ್ಯಂ –

ತದ್ವಾಸಃ ಪುರಾಣಂ । ಪುತ್ರಾಭಾವೇ ಭ್ರಾತಾ । ಪ್ರತೀತಃ ತುಷ್ಟಸ್ಸನ್ । ಅಥವಾ ಅಧ್ವರ್ಯುನಾ ಪ್ರತೀತಃ ॥

ಮೃತನ ಹಳೆಯ ವಸ್ತ್ರವನ್ನು । ಕ್ರಮವಾಗಿ ಅವನ ಮಕ್ಕಳು ಅಥವಾ ಸೋದರರು ಅಥವಾ ಅವನಿಂದ ಅತೀವ ಸಂತೋಷವನ್ನು ಪಡೆದವರು ಅಥವಾ ಅಧ್ವರ್ಯುವು(ಋತ್ವಿಜರು) ಮೃತನ ನೆನಪಿಗಾಗಿ ಉಪಯೋಗಿಸಬೇಕು ॥

* ಸೂತ್ರಂ – 4 (ಇಬ್ಬರಿಗೂ)

ಅಪರೇಣಾಹವನೀಯಂ ಪ್ರತೀಚೀಸ್ತಿಸ್ರ ಉಲಪರಾಜೀ ಸ್ತೀರ್ತ್ವಾಪರಾಪಾವಂ ಅವಹತಾನಾಂ ವ್ರೀಹೀಣಾಂ ಅನ್ವಾಹಾರ್ಯಪಚನೇ ತೂಷ್ಣೀಂ ಉಪಚರಿತಂ ಚರುಂ ಶ್ರಪಯತಿ ॥

ನಂತರ ಆ ಆಹವನೀಯಾಗ್ನಿಯ ಮುಂದೆ, ಪೂರ್ವದಿಂದ ಪಶ್ಚಿಮಕ್ಕೆ 3 ಉಲಪರಾಜಿ(ದರ್ಭೆಯಸಾಲು) ಗಳನ್ನು ಅಮಂತ್ರಕವಾಗಿ ಹಾಕಿ, ಹೊಟ್ಟು ತೆಗೆದು ಕುಟ್ಟಿದ ವ್ರೀಹಿ(ಅಕ್ಕಿ)ಗೆ ಸುಮ್ಮನೆ ನೀರುಹಾಕಿ(ತೊಳೆಯಬಾರದು), ಅಮಂತ್ರಕವಾಗಿ ದಕ್ಷಿಣಾಗ್ನಿಯಲ್ಲಿ ಬೇಯಿಸಿ, ಚರುವನ್ನು ಮಾಡಬೇಕು ॥ (ಇಲ್ಲಿ, ಅಗ್ನಿಹೋತ್ರಿಗಳಲ್ಲದವರಿಗೆ ಔಪಾಸನಾಗ್ನಿಯಲ್ಲಿ ಚರುವನ್ನು ಬೇಯಿಸುತ್ತಾರೆ) ॥

* ಗೋಪಾಲಭಾಷ್ಯಂ –

ಆಹವನೀಯಾತ್ ಪ್ರಕ್ರಮ್ಯ ಸಂತತಾಃ ತಿಸ್ರ ಉಲಪರಾಜೀಃ ಆಗಾರ್ಹಪತ್ಯಾತ್ ಸ್ತೃಣೀಯಾತ್ । ಉಲಪಶಬ್ದೇನ ಪರಣತ ಶುಷ್ಕಾದರ್ಭಾ ಉಚ್ಯಂತೇ । ತತ್ರ ದರ್ಶಪೂರ್ಣಮಾಸವತ್ ಮಧ್ಯಮಾಗ್ರೇಸ್ತೀರ್ಯತೇ । ತತ ಉತ್ತರಾ ತತೋ ದಕ್ಷಿಣೇತಿ ತು ವಿಶೇಷಃ ದಕ್ಷಿಣಾಪವರ್ಗ ವಚನಾತ್ । ಪರಾಪಾವಂ – ಪರಾಪೂಯ ಪರಾಪೂಯ । ಪರಾಪಾವನ ವಚನಂ ವಿವೇಚನ ನಿವೃತ್ಯರ್ಥಂ । ತಸ್ಮಾತ್ ಅವಘಾತ ಸೌಕರ್ಯಾರ್ಥಂ ತುಷಾಪನಯನಮೇವ ಮುಹುಃ ಕ್ರಿಯತೇ । ನ ತು ಸತುಶ ವಿತುಶ ವಿವೇಕಃ । ಏವಮವಘಾತಃ ತಾವತ್ ಐಷ್ಟಿಕೈಃ ಕೃಷ್ಣಾಜಿನ ಉಲೂಖಲಾದಿಭಿಃ ಕ್ರಿಯತೇ ತೂಷ್ಣೀಂ ದರ್ಶಪೂರ್ಣಮಾಸವದಿತ್ಯ ವಚನಾತ್ । ತಥಾ ತೂಷ್ಣೀಂ ಉಪಚರಿತಂ ಚರುಂ ಶ್ರಪಯತೀತಿ । ಚರುಸ್ಥಾಲ್ಯುಪಧಾನಾದಯಃ ಶ್ರಪಣಧರ್ಮಾ ಏವ ತೂಷ್ಣೀಕಾ ವಿಧೀಯಂತೇ । ಅತೋ ನಾತ್ರ ಪಾತ್ರ ಸಂಸಾದನಾದಿ ಕ್ರಿಯತೇ ॥

ಆಹವನೀಯದಿಂದ ಆರಂಭಿಸಿ, ದರ್ಭೆಗಳನ್ನು ನಿರಂತರವಾಗಿ ಗಾರ್ಹಪತ್ಯದ ವರೆಗೆ(ಪಶ್ಚಿಮದಿಂದ ಪೂರ್ವಕ್ಕೆ), ಅಂತರ್ವೇದಿಯಲ್ಲಿ 3 ಸಾಲುಗಳಾಗುವಂತೆ ಹರಡಬೇಕು । **ಉಲಪಶಬ್ದದಿಂದ**, ಒಣಗಿ, ಮುಂದಕ್ಕೆ ಬಗ್ಗಿರುವ ದರ್ಭೆಗಳು ಎಂದು ಹೇಳಲ್ಪಡುತ್ತವೆ । ಅಲ್ಲಿ ದರ್ಶಪೂರ್ಣಮಾಸೇಷ್ಟಿಯಂತೆ, ಅಂತರ್ವೇದಿಯ ಮಧ್ಯದಲ್ಲಿ ಮೊದಲಿನ ದರ್ಭೆಯಸಾಲುಗಳನ್ನು ಹರಡಬೇಕು । ನಂತರ ಅದರ ಉತ್ತರದ ಕಡೆಗೆ, ಎರಡನೆಸಾಲನ್ನು ದರ್ಭೆಯಿಂದ ಹರಡಬೇಕು । ನಂತರ ಮಧ್ಯದಸಾಲಿನ ದಕ್ಷಿಣಕ್ಕೆ ಮೂರನೆಯ ಸಾಲನ್ನು ದರ್ಭೆಗಳಿಂದ ಹರಡಬೇಕು, ಹೀಗೆ ದಕ್ಷಿಣಕ್ಕೆ ಮುಗಿಯುವಂತೆ ದರ್ಭೆಗಳ ಮೂರು ಸಾಲುಗಳನ್ನು ಸಿದ್ಧಪಡಿಸಬೇಕು । ಪಿತೃಕಾರ್ಯವನ್ನು ದಕ್ಷಿಣಕ್ಕೆ ಸಮಾಪ್ತಿಗೊಳಿಸಬೇಕೆನ್ನುವ ನಿಯಮದಿಂದ । ನಂತರ ದಕ್ಷಿಣಾಗ್ನಿಯಲ್ಲಿ ಬೇಯಿಸಬೇಕಾದ ಚರುವಿಗಾಗಿ ತೆಗೆದುಕೊಂಡ ಭತ್ತದ ಹೊಟ್ಟನ್ನು ಎರಡು ಮೂರು ಬಾರಿ ತೆಗೆಯ ಬೇಕು । ಆದ್ದರಿಂದ ಕುಟ್ಟುವುದಕ್ಕೆ ಸಹಾಯವಾಗಲೆಂದು ಭತ್ತದಹೊಟ್ಟನ್ನು ಜರಡಿಯನ್ನು ಮಾಡಿ, ಟೊಳ್ಳುಭತ್ತಗಳನ್ನು ಬೇರ್ಪಡಿಸಬೇಕು । **ಅಕ್ಕಿ ಮತ್ತು ಹೊಟ್ಟನ್ನು ಬೇರೇಮಾಡಲು**

ಹೇಳುತ್ತಿಲ್ಲ ಎಂಬುದು ಗಮನಿಸಬೇಕಾದ ವಿಷಯ । ಹೀಗೆ ಪ್ರತಿ ಇಷ್ಟಿಯಂತೆ ಕೃಷ್ಣಾಜಿನದ ಮೇಲೆ **ಉಲೂಖಲ(ರುಬ್ಬುವ ಒರಳಕಲ್ಲು)**ವನ್ನು ಇಟ್ಟುಕೊಂಡು, ಅಮಂತ್ರಕವಾಗಿ ಕುಟ್ಟುವುದು ಮುಂತಾದವುಗಳನ್ನು ಮಾಡಬೇಕು । ದರ್ಶಪೂರ್ಣಮಾಸದಂತೆ, ಆದರೆ ಇಲ್ಲಿ ಅಮಂತ್ರಕವಾಗಿ ಮಾಡಬೇಕೆಂದು ವಿಧಿಯಿರುವುದರಿಂದ । ಹಾಗೆಯೇ ಅಮಂತ್ರಕವಾಗಿ ಚರುವನ್ನು ಸಂಸ್ಕರಿಸಿ, ಬೇಯಿಸಬೇಕು । ಇಲ್ಲಿ ಚರುಪಾತ್ರೆ ಮುಂತಾದವುಗಳನ್ನು ಬೇಯಿಸುವುದಕ್ಕಾಗಿ ಮಾಡಬೇಕಾದ ಇನ್ನಿತರ ಕರ್ಮಗಳನ್ನು ಅಮಂತ್ರಕವಾಗಿಯೇ ಮಾಡಬೇಕೆಂದು ಹೇಳಿದೆ । ಆದ್ದರಿಂದ ಪಾತ್ರಸಂಸಾದನ ಮುಂತಾದವುಗಳನ್ನು ಇಲ್ಲಿ ಮಾಡುವುದಿಲ್ಲ ॥

* ಕಪರ್ದಿಭಾಷ್ಯಂ –

ಪ್ರತೀಚೀಃ ಪ್ರತ್ಯಗಪವರ್ಗಾಃ । ಪರಾಪಾವಮವಹತಾಃ । ಪರಾಪೂಯ ಪರಾಪೂಯ ಅವಹತಾಃ ನ ವಿವಿಚ್ಯ । ವ್ರೀಹಿ ಗ್ರಹಣಂ ಪ್ರದರ್ಶನಾರ್ಥಂ । ತೂಷ್ಣೀಂ ಉಪಚರಿತಮಿತಿ ವಚನಾತ್ ನಿರ್ವಪನಾದಿ ಸರ್ವಂ ತೂಷ್ಣೀಂ ಕ್ರಿಯತ ಇತಿ ಅಲಂಕರಣಾರ್ಥಂ । ಉಪದೇಶಸ್ತು ಹೋಮಾಭಾವಾದ್ಯಾವತ್ ಉಕ್ತಂ ಏವೇತಿ । ಕೇಚಿತ್ ನಿರ್ವಪನಾದಿ ಶ್ರಪಣಾಂತಮೇವೇತಿ ॥

ಪಶ್ಚಿಮಕ್ಕೆ ಆ ಹೊಟ್ಟಿನ ಬೇರೆ ಮಾಡುವ ಕೆಲಸವನ್ನು ಮುಗಿಸಬೇಕು । ಪಶ್ಚಿಮಕ್ಕೆ ಮುಖಮಾಡಿ ಆ ಕರ್ಮವನ್ನು ಮಾಡಬೇಕು । ಭತ್ತವನ್ನು ಕುಟ್ಟಿದಮೇಲೆ, ಅಕ್ಕಿಯನ್ನೂ ಹೊಟ್ಟನ್ನೂ ಬೇರೆ ಮಾಡಬಾರದು । ಈ ಕ್ರಿಯೆಯನ್ನು ವ್ರೀಹಿ ಎಂಬ ಪದವನ್ನು ತೆಗೆದುಕೊಳ್ಳುವುದರ ಮೂಲಕ ತೋರಿಸಿದ್ದಾರೆ । ಅಮಂತ್ರಕವಾಗಿ ಚರುವಿನ ಸಂಸ್ಕಾರ ಮಾಡಬೇಕೆಂದು ವಿಧಿಯಿರುವುದರಿಂದ ಹವಿಸ್ಸಿನ ನಿರ್ವಾಪ(ಹಾಕಿಕೊಳ್ಳುವಿಕೆ) ಮುಂತಾದವುಗಳನ್ನು ಅಮಂತ್ರಕವಾಗಿ ಮಾಡಬೇಕು ಎಂಬುದು ಕೇವಲ ಅಲಂಕಾರಕ್ಕಾಗಿ ಮಾತ್ರ । ಇಲ್ಲಿ ಹೋಮವಿಲ್ಲದಿರುವುದರಿಂದ, ಎಷ್ಟನ್ನು ವಿಧಿಯು ಉಪದೇಶಿಸಿದೆಯೋ ಅಷ್ಟೇ ಮಾಡಬೇಕೆಂದು ಕೆಲವರ ಮತವು । ಮಿಕ್ಕವರು ನಿರ್ವಪನ ದಿಂದ ಶ್ರಪಣದ ಕೊನೆಯವರೆಗೆ ಎಂದು ಹೇಳುತ್ತಾರೆ ॥

* ಸೂತ್ರಂ – 5 (ಆಹಿತಾಗ್ನಿಗಳಿಗೆ (ಸೋಮಯಾಜಿ) ಮಾತ್ರ)

ಗಾರ್ಹಪತ್ಯೇ ಚ ಮೈತ್ರಾವರುಣೇಂ ಆಮಿಕ್ಷಾಂ ಯದಿ ಸೋಮಯಾಜೀ ಭವತಿ ॥

ನಂತರ, ಮೃತನು ಸೋಮಯಾಜಿಯಾಗಿದ್ದರೆ ಮಾತ್ರ, ಗಾರ್ಹಪತ್ಯಾಗ್ನಿಯಲ್ಲಿ ಮೈತ್ರಾವರುಣೀ ದೇವತೆಗೆ ಆಮಿಕ್ಷೆಯನ್ನು(ಹವಿಸ್ಸಿನ ಹೆಸರು) ಮಾಡಬೇಕು ॥

* ಗೋಪಾಲಭಾಷ್ಯಂ –

ಆಮಿಕ್ಷಾಯಾಶ್ಚ ತೂಷ್ಣೀಮೇವ ಶ್ರಪಣಂ । ನ ಚ ಶಾಖಾಹರಣಾದಿ । ತತ್ರ ತೂಷ್ಣೀಂ ಶಾಖೋಪವೇಶಾದಿ ಕೃತ್ವಾ ತೂಷ್ಣೀಂ ನಿಷ್ಟಪನಾದಿ ವಿಧಿನಾ ಪಯಃ ಶ್ರಪಯಿತ್ವಾ । ಲೌಕಿಕದಧ್ನಾ ಆಮಿಕ್ಷಾಕರ್ಮಸ್ಯಾತ್ । ತಸ್ಯಾಮಿತ್ರಾವರುಣ–ದೈವತ್ಯಂ ತು ಸಂಕಲ್ಪಮಾತ್ರಾದ್ವೇದಿತವ್ಯಂ । ಅತ್ರಾಪ್ಯಾಮಿಕ್ಷಾತ್ರೋಪವೇಶಃ । ಚರುಶ್ರಪಣೇಪಿ ಉಪಯುಜ್ಯತೇ । ಅಸನ್ನಯತಾಂತು ಆಮಿಕ್ಷಾ ನಿವೃತ್ತಿಃ ವಕ್ಷ್ಯತೇ । ತತ್ರ ಚರ್ವರ್ಥಮುಪವೇಶ ಉತ್ಪಾದ್ಯಃ ॥

ಸೋಮಯಾಗವನ್ನು ಮಾಡಿದ ವ್ಯಕ್ತಿಯ ಮರಣದಲ್ಲಿ, **ಆಮಿಕ್ಷೆ(ಒಡೆದಿರುವ ಮೊಸರಿನ ಮೇಲಿನ ಕೆನೆ)** ಎಂಬ ಹವಿಸ್ಸಿಗೆ ಅಮಂತ್ರಕವಾಗಿ ಶ್ರಪಣವು(ಕಾಯಿಸುವಿಕೆ) । ಶಾಖಾಹರಣಾದಿಗಳು ಇಲ್ಲ । ಇಲ್ಲಿ ಅಮಂತ್ರಕವಾಗಿ ಶಾಖಾ, ಉಪವೇಶ...., ಮುಂತಾದವುಗಳನ್ನು ಮಾಡಿ, ನಂತರ ಅಮಂತ್ರಕವಾಗಿ **ನಿಷ್ಟಪನ(ಚೆನ್ನಾಗಿ ಕಾಯಿಸುವಿಕೆ)** ಮುಂತಾದ ವಿಧಿಗಳಿಂದ ಹಾಲನ್ನು ಕುದಿಸಿ । ಲೌಕಿಕವಾದ ಮೊಸರಿನಿಂದ ಆಮಿಕ್ಷೆಯನ್ನು ಮಾಡಬೇಕು । ಆ ಆಮಿಕ್ಷಾ ಹವಿಸ್ಸಿಗೆ ಮಿತ್ರಾವರುಣ ದೇವತೆಯೆಂಬುದನ್ನು ಸಂಕಲ್ಪಮಾತ್ರದಿಂದ ತಿಳಿಯಬೇಕು । ಇಲ್ಲಿಯೂ ಕೂಡ, ಆಮಿಕ್ಷೆಯ **ಉಪವೇಶವು(ಒಂದು ವಿಧಿ)** । ಚರುವನ್ನು ಬೇಯಿಸುವ ಕರ್ಮದಲ್ಲೂ ಇದನ್ನು ಉಪಯೋಗಿಸುತ್ತಾರೆ । ಯಾರು **ಸಾನ್ನಾಯ(ಒಂದು ವಿಧಿ)**ವನ್ನು ಮಾಡುವುದಿಲ್ಲವೋ, ಅವರಿಗೆ ಈ **ಆಮಿಕ್ಷಾ** ಹವಿಸ್ಸು ಇಲ್ಲ । ಅವರಿಗೆ ಚರುವನ್ನು ಆಮಿಕ್ಷಾಸ್ಥಾನದಲ್ಲಿ ಮಾಡಬೇಕು, ಅದಕ್ಕಾಗಿ ಉಪವೇಶವನ್ನು(ಒಂದುವಿಧಿ) ಮಾಡಬೇಕು ॥

* ಕಪರ್ದಿಭಾಷ್ಯಂ –

ಚ ಶಬ್ದಾಂ ತೂಷ್ಣೀಂ ಪ್ರಾತರ್ದೋಹವತ್ ಪಯ ಉತ್ಪಾದ್ಯ । ಲೌಕಿಕೇನ ದಧ್ನಾ ಸಿಂಚತಿ । ಮಿತ್ರಾವರುಣಾಭ್ಯಾಂ ತ್ವೇತ್ಯುಪದೇಶಃ । ಸಂಕಲ್ಪಮಾತ್ರಮಿತಿ ಕೇಚಿತ್ ॥

ಅಮಂತ್ರಕವಾಗಿ, ಬೆಳಗಿನ **ದೋಹನದಂತೆ** ಹಾಲನ್ನು ಕರೆಯಬೇಕು । ನಂತರ ಲೌಕಿಕವಾದ ಮೊಸರನ್ನು ಅದಕ್ಕೆ ಹಾಕಬೇಕು । ಈ ಆಮಿಕ್ಷಾಹವಿಸ್ಸಿಗೆ ಮಿತ್ರಾವರುಣರು ದೇವತೆಗಳು । ಆದ್ದರಿಂದ ಮಿತ್ರಾವರುಣಾಭ್ಯಾಂ ತ್ವಾ ಎಂದು ಹೇಳಿಕೊಳ್ಳಬೇಕೆಂದು ಕೆಲವರ ಅಭಿಪ್ರಾಯ । ಇನ್ನು ಕೆಲವರು ಕೇವಲ ಸಂಕಲ್ಪಮಾತ್ರವು, ಹೇಳಿಕೊಳ್ಳುವ ಅಗತ್ಯವಿಲ್ಲವೆಂದು ಅಭಿಪ್ರಾಯ ಪಡುತ್ತಾರೆ ॥

* ಸೂತ್ರಂ – 6 (ಆಹಿತಾಗ್ನಿಗಳಿಗೆ ಮಾತ್ರ)

ಪಾಲಾಶಂ ಕಾಷ್ಠಂ ಅಗ್ನ್ಯಂಗಾರೇ ತೃಣೈರ್ಗಾರ್ಹಪತ್ಯ ಆದೀಪ್ಯ ತೇನೋಲ್ಮುಕ ಪ್ರಥಮಾ ಗಚ್ಛಂತಿ ॥

ಯಜ್ಞಶಾಲೆಯಲ್ಲಿ ಹುಲ್ಲುಕಡ್ಡಿಗಳಿಂದ ಗಾರ್ಹಪತ್ಯಾಗ್ನಿಯನ್ನು(ಲೌಕಿಕರು ಲೌಕಿಕಾಗ್ನಿಯನ್ನು) ಉರಿಸಿ, ಆ ಅಗ್ನಿಯಲ್ಲಿ **ಪಾಲಾಶ ಕಟ್ಟಿಗೆಯನ್ನು ಉರಿಸಿಕೊಂಡು (ಕೊಳ್ಳಿಯಂತೆ)**, ಅದನ್ನು ಮುಂದೆ ಹಿಡಿದುಕೊಂಡು, ಮೃತನನ್ನು **ಆಸಂದಿ(ಚಿಟ್ಟ)ಯ** ಸಮೇತವಾಗಿ ಸುತ್ತಿಕೊಂಡು, ಅವನ ಸಂಬಂಧಿಗಳೆಲ್ಲರೂ ಸೇರಿ ತೆಗೆದುಕೊಂಡು ಹೋಗಬೇಕು ॥

* ಗೋಪಾಲಭಾಷ್ಯಂ –

ಗಚ್ಛಂತೀತಿ ಬಹುವಚನಾತ್ ಅಮಾತ್ಯಕೃತ್ಯಂ ಏತದ್ವೇದಿತವ್ಯಂ । ಉಲ್ಮುಕಮೇತತ್ ಅನುಸ್ತರಣೇಮಾಂಸ ಶ್ರಪಣಾರ್ಥಮೇವ । ಅತಸ್ತದುತ್ಸರ್ಗಪಕ್ಷೇ ಉಲ್ಮುಕ ನಿವೃತ್ತಿರ್ದ್ರಷ್ಟವ್ಯಾ । ನ ಚ ಸ್ಮಶಾನವಿಹರಣ

ಪಕ್ಷೇ ಅಗ್ನಿನಯನಾಭಾವಾತ್ ಉಲ್ಮುಕಾಪೇಕ್ಷಾ, ತತ್ರ ಗಾರ್ಹಪತ್ಯಾಭಾವೇನ ಉಲ್ಮುಕ ನಿಷ್ಪತ್ತ್ಯನುಪಪತ್ತೇಃ । ಸ್ಮಶಾನ ವಿಹೃತೈರೇವಾಗ್ನಿಭಿಃ ರಕ್ಷೋಹನನ ಸಿದ್ಧೇಶ್ಚ ॥

ಗಚ್ಛಂತಿ ಎಂದು ಬಹುವಚನವಿರುವುದರಿಂದ, ಇದು ಅಮಾತ್ಯನು(ಮಂತ್ರಿ ಅಥವ ಸೇವಕರು ಅಥವ ಜ್ಞಾತಿಗಳು) ಮಾಡುವ ಕರ್ಮವು ಎಂದು ತಿಳಿಯಬೇಕು । ಈ **ಉಲ್ಮುಕವು(ಕೊಳ್ಳಿ), ಅನುಸ್ತರಣೇ ಮಾಂಸ ಶ್ರಪಣಕ್ಕಾಗಿ(ಮೃತನನ್ನು ಅನುಸರಿಸಿ ಬಲಿಕೊಡುವ ಪ್ರಾಣಿಯ ಮಾಂಸವನ್ನು ಬೇಯಿಸುವುದಕ್ಕಾಗಿ ಮಾತ್ರ)** । ಆದ್ದರಿಂದ ಅದನ್ನು ಬಿಡುವ(ಅನುಸ್ತರಣಿಯನ್ನು) ಪಕ್ಷದಲ್ಲಿ, **ಉಲ್ಮುಕವು** ಇಲ್ಲ । ಸ್ಮಶಾನದಲ್ಲೇ 3 ಅಗ್ನಿಗಳನ್ನೂ ಬೇರೆಬೇರೆ ಮಾಡುವ ಪಕ್ಷದಲ್ಲಿ, ಅಗ್ನಿಯನ್ನು ಕೊಂಡೊಯ್ಯುವುದು ಇಲ್ಲದಿರುವುದರಿಂದ, ಅಲ್ಲಿ ಉಲ್ಮುಕದ ಅಪೇಕ್ಷೆ ಇಲ್ಲ । ಏಕೆಂದರೆ, ಗಾರ್ಹಪತ್ಯಾಗ್ನಿಯು ಇಲ್ಲದಿರುವುದರಿಂದ ಉಲ್ಮುಕದ ಉತ್ಪತ್ತಿಯು ಹೊಂದುವುದಿಲ್ಲ । ಏಕೆಂದರೆ, ಸ್ಮಶಾನದಲ್ಲಿ ವಿಹರಣ(ಬೇರೆಬೇರೆ) ಮಾಡಿದ 3 ಅಗ್ನಿಗಳಿಂದಲೇ ರಕ್ಷೋಬಾಧೆಯ ನಿವೃತ್ತಿಯಾಗುವುದೆಂದು ಸಿದ್ಧವಾಗುವುದರಿಂದ ॥

*** ಕಪರ್ದಿಭಾಷ್ಯಂ –**

ಗೋರುತ್ಸರ್ಗಪಕ್ಷೇ ಉಲ್ಮುಕನಯನಂ ನೇಚ್ಛಂತಿ । ನ್ಯಾಯಸ್ತ್ವದೃಷ್ಟಾರ್ಥತ್ವಾತ್ ಕಾರ್ಯಮಿತಿ । ಕೇಚಿತ್ ರಕ್ಷೋಹನನಾರ್ಥಂ ಚೇತಿ ॥

ಗೋವನ್ನು **ಉತ್ಸರ್ಜನ(ಬಿಡುವ)** ಮಾಡುವ ಪಕ್ಷದಲ್ಲಿ, **ಉಲ್ಮುಕವನ್ನು** ತೆಗೆದುಕೊಂಡು ಹೋಗುವ ಅಗತ್ಯವಿಲ್ಲ । ಏಕೆಂದರೆ, ನ್ಯಾಯವು ಅದೃಷ್ಟಾರ್ಥಕ್ಕಾಗಿ ಮಾಡಬೇಕು ಎಂಬ ನಿಯಮವಿರುವುದರಿಂದ । ಆದರೆ ಕೆಲವರು **ರಾಕ್ಷಸರ, ವಿಷಜಂತುಗಳ, ದುಷ್ಟಶಕ್ತಿಗಳ ನಾಶಕ್ಕೆ ಕೊಳ್ಳಿಯನ್ನು** ತೆಗೆದುಕೊಂಡು ಹೋಗಬೇಕೆಂದು ಹೇಳುತ್ತಾರೆ ॥

* ಸೂತ್ರಂ – 7 (ಆಹಿತಾಗ್ನಿಗಳಿಗೆ ಮಾತ್ರ)

ಅಜಮನುನಯಂತಿ ರಾಜಗವೀಂ ಸವ್ಯೇಪದಿಬದ್ಧಾಂ ಅಗ್ನೀನಗ್ನಿಭಾಂಡಂ ಅಗ್ನಿಹೋತ್ರೋಚ್ಛೇಷಣಂ ಇತಿ ॥

ಆಡನ್ನು(ಮೇಕೆ) ಇದರ ಜೊತೆ ಕೊಂಡೊಯ್ಯುತ್ತಾರೆ, ಹಾಗೂ ಎಡಕಾಲನ್ನು ಕಟ್ಟಿರುವ ರಾಜಗವಿ(ಉತ್ತಮತಳಿಯ ಹಸು)ಯನ್ನು, ಅಗ್ನಿಗಳನ್ನು(ತ್ರೇತಾಗ್ನಿ), ಅಗ್ನಿಭಾಂಡವನ್ನು(ಔಪಾಸನಾಗ್ನಿ), ಅಗ್ನಿಹೋತ್ರೋಚ್ಛೇಷಣ(ಅಗ್ನಿಹೋತ್ರದ ಉಳಿದ ಹವಿಸ್ಸು)ವನ್ನು ಕೊಂಡೊಯ್ಯುತ್ತಾರೆ ॥

* ಗೋಪಾಲಭಾಷ್ಯಂ –

ರಾಜಗವೀ ಗೋಶ್ರೇಷ್ಠಾ । ಮಾಂಸಲತ್ವಾದಿ ಗುಣಯುಕ್ತಾ ಗೌರಿತ್ಯರ್ಥಃ । ತಸ್ಯಾಜರತ್ವಾದಿ ಲಕ್ಷಣಾಂತರಂ ಚ ವಕ್ಷ್ಯತೇ । ಸವ್ಯೇಪದೀತಿ ಪೂರ್ವಪಾದಯೋಃ ಸವ್ಯೋಭಿಪ್ರೇತಃ । ಅಗ್ನೀನಿತಿ ವೈತಾನಿಕಾಸ್ತ್ರಯಃ ಪಂಚ ವಾ । ಅಗ್ನಿಭಾಂಡಮಿತ್ಯೌಪಾಸನ ಭಾಂಡಂ । ಅನುನಯಂತೀತ್ಯತ್ರಾಪಿ ಬಹುವಚನಾತ್ ಸಪಿಂಡಾದಿ ಕೃತ್ಯಮೇತತ್ ॥

ರಾಜಗವಿಯೆಂದರೆ – ಉತ್ತಮತಳಿಯ(ದಷ್ಟಪುಷ್ಟ) ಹಸು । ಎಂದರೆ, ಎತ್ತರವಾದ ಭುಜ ಮುಂತಾದ ಲಕ್ಷಣಗಳಿಂದ ಕೂಡಿದ ಹಸು ಎಂದರ್ಥ । ಹಾಗೂ ಅದು ಮುದಿಯಾಗಿರಬಾರದು, ಎಂಬ ಮುಂತಾದ ಬೇರೆಲಕ್ಷಣಗಳನ್ನೂ ಹೇಳುತ್ತಾರೆ । ಅದರ ಮುಂದಿನ ಎರಡುಕಾಲುಗಳಲ್ಲಿ, **ಎಡಕಾಲಿಗೆ** ಹಗ್ಗವನ್ನು ಕಟ್ಟಬೇಕೆಂದರ್ಥ । ಅಗ್ನಿಗಳನ್ನು ಎಂಬುದರಿಂದ – 3 ಅಥವ 5 ಅಗ್ನಿಗಳೆಂದು ಅರ್ಥ । **ಅಗ್ನಿಭಾಂಡವೆಂದರೆ** – ಔಪಾಸನಾಗ್ನಿಯಿರುವ ಪಾತ್ರೆ ಎಂದರ್ಥ । **ಅನುನಯಂತಿ** ಎಂದು ಬಹುವಚನವಿರುವುದರಿಂದ – ಸಪಿಂಡರು(ತ್ರಿಪೌರುಷದಲ್ಲಿರುವವರು) ಹಾಗೂ ದಶರಾತ್ರಿಜ್ಞಾತಿಗಳು ಮೃತನನ್ನು ಅನುಸರಿಸಿ, ಇವುಗಳನ್ನು ತೆಗೆದುಕೊಂಡು ಹೋಗಬೇಕು ॥

* ಕಪರ್ದಿಭಾಷ್ಯಂ –

ರಾಜಗವೀ ಸವ್ಯೇಪದಿಬದ್ಧಾ ಭವತಿ । ತಾಮಗ್ನೀನಗ್ನಿಹೋತ್ರೋಚ್ಚೇಷಣಂ ಅಗ್ನಿಭಾಂಡಂ ಇತ್ಯೇತಾನ್ಯಪ್ಯನುಹರಂತಿ । ಇತಿ ಕರಣಾದನ್ಯಾನ್ಯಮಪಿ ದಧಿ ಚರ್ವಾಜ್ಯಾದೀನಿ ಅನುಹರಂತಿ ॥

ಉತ್ತಮವಾದ ತಳಿಯ ಹಸುವಿನ ಮುಂದಿನ **ಎಡಕಾಲನ್ನು** ಹಗ್ಗದಿಂದ ಕಟ್ಟಬೇಕು । ಆ ಉತ್ತಮತಳಿಯ ಹಸುವನ್ನು ಅನುಸರಿಸಿ, 3 ಅಥವ 5 ಅಗ್ನಿಗಳನ್ನು, ಅಗ್ನಿಹೋತ್ರದ ಹವಿಸ್ಸಿನ ಶೇಷವನ್ನೂ, ಹಾಗೂ ಔಪಾಸನಾಗ್ನಿಯನ್ನೂ ಮೃತನನ್ನು ಅನುಸರಿಸಿ ಒಯ್ಯಬೇಕು । **ಇತಿ,** ಎಂದು ವಾಕ್ಯದ ಕೊನೆಯಲ್ಲಿ ಹೇಳಿರುವುದರಿಂದ ಬೇರೆ ಮೊಸರು, ಚರು, ಆಜ್ಯ, ಮುಂತಾದ ಅಂತ್ಯಸಂಸ್ಕಾರಕ್ಕೆ ಬೇಕಾದ ಬೇರೇ ಪದಾರ್ಥಗಳನ್ನೂ ಸಹಾ ಒಯ್ಯಬೇಕೆಂದು ಅರ್ಥ ॥

* ಸೂತ್ರಂ – 8 (ಇಬ್ಬರಿಗೂ)

ಯೇನ ಚಾನ್ಯೇನಾರ್ಥೀ ಭವತಿ ॥

ಇನ್ನೇನು ಸಾಮಗ್ರಿಗಳು ಬೇಕೋ, ಅವನ್ನೂ ಜೊತೆಯಲ್ಲಿ ಕೊಂಡೊಯ್ಯುತ್ತಾರೆ ॥

* ಗೋಪಾಲಭಾಷ್ಯಂ –

ಅರ್ಥೀ – ಉಪಯೋಗವಾನ್ಭವತಿ ಅಗ್ನಿದಃ ತದಪಿ ಸರ್ವಮನುನಯಂತಿ । ತಚ್ಚ ಚರುರಾಮಿಕ್ಷಾ ಪಾತ್ರಾಣೀತಿ ಏವಮಾದ್ಯುಪಯೋಗಿದ್ರವ್ಯಜಾತಂ ॥

ಚಿತೆಗೆ ಅಗ್ನಿಯನ್ನು ಕೊಡುವ ಕರ್ತೃವು, ಇನ್ನು ಬೇರೇ ಯಾವ ಪದಾರ್ಥಗಳು ಮೃತನ ಸಂಸ್ಕಾರಕ್ಕೆ ಸ್ಮಶಾನದಲ್ಲಿ ಬೇಕೋ ಅವನ್ನು ಮೃತನಜೊತೆ ಕೊಂಡೊಯ್ಯ ಬೇಕು । ಆ ಉಪಯೋಗಿಸುವ ಪದಾರ್ಥಗಳೆಂದರೆ, **ಚರು – ಆಮಿಕ್ಷೆ – ಪಾತ್ರೆಗಳು,** ಮುಂತಾದ ಉಪಯೋಗಿಸುವ ಪದಾರ್ಥಗಳನ್ನು ಕೊಂಡೊಯ್ಯಬೇಕು ॥

* ಸೂತ್ರಂ – 9 (ಇಬ್ಬರಿಗೂ)

ನ ಹೀನಂ ಅನ್ವಾಹರೇಯುಃ ॥

ಹೀನರಾದವರನ್ನು ಸ್ಮಶಾನಕ್ಕೆ ಕರೆದುಕೊಂಡು ಹೋಗಬಾರದು ಹಾಗೂ ವಸ್ತುಗಳನ್ನು ಮೃತನಜೊತೆ ಕೊಂಡೊಯ್ಯಲು ಮರೆತರೆ, ಆಮೇಲೆ ಆ ವಸ್ತುಗಳನ್ನು ಸ್ಮಶಾನಕ್ಕೆ ಕೊಂಡೊಯ್ಯಬಾರದು ॥

* ಗೋಪಾಲಭಾಷ್ಯಂ –

ಯದಿ ವಿಸ್ಮರಣಾದಿವಶಾತ್ ಶವನಿರ್ಹರಣಾತ್ಪೂರ್ವಂ ಅನಾತ್ತಂ ದ್ರವ್ಯಂ । ತದಿಹ ಹೀನಮುಚ್ಯತೇ । ತತ್ತು ಶವ ನಿರ್ಹರಣಾತ್ಪರಂ ನಾಹರೇಯುಃ । ಸ್ಮಶಾನಂ ನ ಪ್ರಾಪಯೇಯುಃ । ಪ್ರತಿಪಾದ್ಯಪಾತ್ರಾದಿ ವಿಷಯಮೇತದಿಚ್ಛಂತಿ । ಇತರೇಷಾಂ ಚರ್ವಾದೀನಾಂ ಅನ್ವಾಹರಣಮೇವ ಕಾರ್ಯಂ । ಅನ್ಯಥಾ ತದರ್ಥಲೋಪ ಪ್ರಸಂಗತ್ವಾತ್ ॥

ಒಂದುವೇಳೆ, ಶವವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗುವಾಗ ಅದರಜೊತೆ ಕೊಂಡೊಯ್ಯಬೇಕಾದ ವಸ್ತುಗಳನ್ನು ಮರೆತರೆ, ಶವವನ್ನು ಕೊಂಡೊಯ್ದಮೇಲೆ ಆ ವಸ್ತುಗಳನ್ನು ತೆಗೆದುಕೊಂಡು ಹೋಗಬಾರದು । ಏಕೆಂದರೆ ಅದು ಹೀನವಸ್ತುಗಳೆಂದು ಎನಿಸಿಕೊಳ್ಳುತ್ತದೆ । ಇಲ್ಲಿ ವಿಧಿಸಿದ ಪಾತ್ರೆ ಮುಂತಾದವುಗಳ ವಿಷಯದಲ್ಲಿ ಮರೆಯುವಿಕೆಯಾದರೆ, ಮರೆತಂತಹ ವಸ್ತುಗಳನ್ನು ಆಮೇಲೆ ತೆಗೆದುಕೊಂಡು ಹೋಗಬಾರದೆಂದು ತಿಳಿಯಬೇಕು । ಇವುಗಳನ್ನು ಬಿಟ್ಟು, ಬೇರೇ ಚರು ಮುಂತಾದವುಗಳನ್ನು ಮರೆತರೂ ಸಹ ಆಮೇಲೆ ಕೊಂಡೊಯ್ಯಬಹುದು । ಏಕೆಂದರೆ, ಆ ಕರ್ಮದ ಲೋಪವು ಉಂಟಾಗುತ್ತದೆಯಾದ್ದರಿಂದ ॥

* ಕಪರ್ದಿಭಾಷ್ಯಂ –

ನ ಹೀನಮನ್ವಾಹರೇಯುಃ । ಅರ್ಥತೋ ಲೋಪೇಪಿ ಅನ್ವಾಹರಂತಿ ಪ್ರಧಾನಾಸಿದ್ಧೇರಿತಿ ॥

ಒಂದುವೇಳೆ ಮೃತನಜೊತೆ ಶ್ಮಶಾನಕ್ಕೆ ವಸ್ತುಗಳನ್ನು ಕೊಂಡೊಯ್ಯಲು ಮರೆತರೆ, ನಂತರ ಕೊಂಡೊಯ್ಯಬಾರದು । ಇದರಿಂದ ಯಾವುದನ್ನು ಮರೆತರೆ ಪ್ರಧಾನಕರ್ಮಕ್ಕೆ ಲೋಪವು ಬರುತ್ತದೋ ಅಂತಹ ಪದಾರ್ಥಗಳನ್ನು ಆಮೇಲೂ ಕೊಂಡೊಯ್ಯಬಹುದು, ಆದರೆ ಮೃತನ ಜೊತೆಯಲ್ಲೇ ಎಲ್ಲಾ ವಸ್ತುಗಳನ್ನೂ ಕೊಂಡೊಯ್ಯಬೇಕು ಎನ್ನುವುದೇ ಪ್ರಧಾನ ನಿಯಮವು ॥

* ಸೂತ್ರಂ – 10 (ಇಬ್ಬರಿಗೂ)

ಅಥ ತಂ ಆದದತೇ ॥

ಹೀಗೆ ಆ ಮೃತನನ್ನು ತೆಗೆದುಕೊಂಡು ಹೋಗುತ್ತಾರೆ ॥

* ಗೋಪಾಲಭಾಷ್ಯಂ –

ತಂ ಪ್ರೇತಂ ಆಸಂದೀಸ್ಥಂ ಜ್ಞಾತಯ ಆದದೀರನ್ ।

ಚೆಟ್ಟದ ಮೇಲಿರುವ ಆ ಮೃತನನ್ನು ಜ್ಞಾತಿಗಳು ಶ್ಮಶಾನಕ್ಕೆ ತೆಗೆದುಕೊಂಡು ಹೋಗುತ್ತಾರೆ ॥

* ಅತ್ರಾಹ ಬೋಧಾಯನಃ –

ನಿವೀತಿನಸ್ತ್ವೇವ ವಹೇಯುರಿತಿ ॥

ಇಲ್ಲಿ ಬೋಧಾಯನರು, ತೆಗೆದುಕೊಂಡು ಹೋಗುವವರು ನಿವೀತಿಯಲ್ಲಿ ತೆಗೆದುಕೊಂಡು ಹೋಗಬೇಕೆಂದಿದ್ದಾರೆ ॥

* ಸೂತ್ರಂ – 11 (ಇಬ್ಬರಿಗೂ)

ಅನಸಾವಹಂತೀತ್ಯೇಕೇ ॥

ವಾಹನಗಳಿಂದಲೂ ಕರೆದೊಯ್ಯಬಹುದೆಂದು ಕೆಲವರು ಹೇಳುತ್ತಾರೆ ॥

* ಗೋಪಾಲಭಾಷ್ಯಂ –

ಅನಃ – ಶಕಟಂ । ತೇನ ವಹಂತಿ ವಾಹಪ್ರೇರಣಾದಿ ಕುರ್ವಂತಿ । ತತ್ರಾಯಂ ಸಹಾಸಂದ್ಯಾ ಶಕಟಮಾರೋಪ್ಯಃ । ತತ್ರ ಶಾಖಾಂತರೀಯಂ ವಿಶೇಷಮಾಹ ॥

ಕೆಲವರು ವಾಹನದಲ್ಲಿ ಶವವನ್ನು ತೆಗೆದುಕೊಂಡು ಹೋಗಬಹುದು ಎನ್ನುತ್ತಾರೆ । ವಾಹನದಲ್ಲಿ ತೆಗೆದುಕೊಂಡು ಹೋಗಬೇಕಾದರೂ ಚೆಟ್ಟದ ಸಹಿತ ವಾಹನದಲ್ಲಿಟ್ಟು ಒಯ್ಯಬೇಕು । ಈ ವಾಹನಕ್ಕೆ ಬೇರೇಶಾಖೆಯಲ್ಲಿ(ಋಷಿಗಳು) ವಿಶೇಷ ಲಕ್ಷಣವನ್ನು ಹೇಳಿದ್ದಾರೆ ॥

* ಸೂತ್ರಂ – 12 (ಇಬ್ಬರಿಗೂ)

ಕೃಷ್ಣಗವಂ ಸ್ಯಾದಿತಿ ಶಾಟ್ಯಾಯನಕಮ್ ॥

ಆ ಗಾಡಿಗೆ, ಕಪ್ಪು ಎತ್ತು ಇರಬೇಕೆಂದು ಶಾಟ್ಯಾಯನರು ಹೇಳುತ್ತಾರೆ(ಆಧುನಿಕ ವಾಹನಗಳಾದರೆ, ಕಪ್ಪುಬಟ್ಟೆಯನ್ನು ಕಟ್ಟಬೇಕು) ॥

* ಗೋಪಾಲಭಾಷ್ಯಂ –

ತದನಃ ಕೃಷ್ಣಗವಂ ಕೃಷ್ಣಾಭ್ಯಾಮನಡುದ್ಭ್ಯಾಂ ವಾಹ್ಯಂ ಇತಿ ಶಾಟ್ಯಾಯನಿ ಬ್ರಾಹ್ಮಣಂ ಭವತಿ । ಅತೋ ವಿಕಲ್ಪೋ ವರ್ಣನೀಯ ಇತಿ ಪೂರ್ವಃ ಕಲ್ಪಃ ॥ ಪುನರಪಿ ಅನಸಾವಹನಪಕ್ಷೇ ವಿಶೇಷಮಾಹ ॥

ಆ ವಾಹನಕ್ಕೆ ಕಪ್ಪುಬಣ್ಣದ ಎತ್ತುಗಳನ್ನು ಕಟ್ಟಿ ಒಯ್ಯಬೇಕೆಂದು, ಶಾಟ್ಯಾಯನಬ್ರಾಹ್ಮಣದಲ್ಲಿ ಹೇಳಿದೆ । ಆದ್ದರಿಂದ ಎತ್ತುಗಳ ಬಣ್ಣದ ವಿಷಯದಲ್ಲಿ ವಿಕಲ್ಪವು(ಎರಡು ರೀತಿಗಳು) ಇದೆ । ಇನ್ನೂ ಬೇರೇ ವಿಶೇಷಲಕ್ಷಣಗಳನ್ನು ವಾಹನದಲ್ಲಿ ಒಯ್ಯುವ ಪಕ್ಷದಲ್ಲಿ ಹೇಳಿದ್ದಾರೆ ॥

* ಸೂತ್ರಂ – 13 (ಇಬ್ಬರಿಗೂ)

ಇಮೌ ಯುನಜ್ಮಿ ಇತ್ಯೇಷ ಯೋಜನ ಆಮ್ನಾತಃ ॥

ಇಮೌ ಯುನಜ್ಮಿ ತೇ....., ಮಂತ್ರವು ಶವವನ್ನು ವಾಹನದಲ್ಲಿ ಇಡುವಾಗ ಹೇಳುವ ಮಂತ್ರ ॥

* ಗೋಪಾಲಭಾಷ್ಯಂ –

ಇಮೌ ಯುನಜ್ಮೀತ್ಯನುಷ್ಟುಬಾತ್ಮಕ ಏಷ ಮಂತ್ರೋವಾಹಯೋಃ ಯೋಜನೇ ಕರಣತಯಾ ಆಮ್ನಾತಃ । ತೇನ ಸಕೃದುಕ್ತೇನ ಯುಗಪದುಭೌ ವಾಹೌ ಉಪಶ್ಲೇಷ್ಯ ಯಥಾ ಯೋಗಂ ಯುಂಜಾದಿತ್ಯರ್ಥಃ ॥

ಈ ಮೇಲೆ ಹೇಳಿದ ಅನುಷ್ಟುಪ್ ಛಂದಸ್ಸಿನ ಮಂತ್ರವನ್ನು ಎರಡೂ ಎತ್ತುಗಳನ್ನು ಕಟ್ಟಬೇಕಾದರೆ, ಒಂದುಸಲ ಹೇಳಬೇಕು । ಹೇಗೆಂದರೆ – ಎರಡೂ ಎತ್ತುಗಳ ಮೇಲೆ ಈ ಒಂದು ಮಂತ್ರದಿಂದ ಗಾಡಿಯನ್ನು ಹೊರೆಸಿ, ನಂತರ ಒಂದೊಂದಾಗಿ ಕಟ್ಟ ಬೇಕು ॥

* ಅತ್ರಾಹ ಬೋಧಾಯನಃ (ಬೋ, ಪಿ, ಪ್ರ1, ಖ04, ಸೂ7) –

ಅನಶ್ಚೇದ್ಯುಂಜಾದಿಮೌ ಯುನಜ್ಮಿತೇ ವಹ್ನೀ ಇತಿ । ಅತಃ ಪುರುಷವಾಹ್ಯತ್ವೇ ಅಸ್ಯಾನುಪಯೋಗಃ ॥

ಇಲ್ಲಿ ಬೋಧಾಯನರು – ಗಾಡಿಯಲ್ಲಿ ಒಯ್ಯಬೇಕಾದರೆ, ಈ ಮೇಲಿನ ಒಂದು ಮಂತ್ರದಿಂದ ಎತ್ತುಗಳನ್ನು ಗಾಡಿಗೆ ಕಟ್ಟಬೇಕು । ಮನುಷ್ಯರು ಶವವನ್ನು ಒಯ್ದರೆ, ಈ ಮಂತ್ರವನ್ನು ಹೇಳಬೇಕಾಗಿಲ್ಲ ಎನ್ನುತ್ತಾರೆ ॥

* ಕಪರ್ದಿಭಾಷ್ಯಂ –

ಇಮೌ ಯುನಜ್ಮೀತಿ ಸಕೃದೇವ ಮಂತ್ರಃ । ದ್ವಿವಚನಾಂತತ್ವಾತ್ ಮಂತ್ರಸ್ಯ ॥

ಇಮೌ ಯುನಜ್ಮಿ....., ಎಂದು ಮಂತ್ರದಲ್ಲಿ ದ್ವಿವಚನ ಇರುವುದರಿಂದ, ಎರಡು ಎತ್ತುಗಳನ್ನು ಒಂದೇಸಲ ಮಂತ್ರಹೇಳಿ ಕಟ್ಟಬೇಕು ॥

* ಸೂತ್ರಂ – 14 (ಇಬ್ಬರಿಗೂ)

ಆದೀಯಮಾನಂ ಅನುಮಂತ್ರಯತೇ ಪೂಷಾ ತ್ವೇತಶ್ಚ್ಯಾವಯತು ಇತಿ ॥

ಶವವನ್ನು ಎತ್ತಿಕೊಂಡಾಗ **ಪೂಷಾ ತ್ವೇತಶ್ಚ್ಯಾವಯತು.....,** ಮಂತ್ರವನ್ನು ಹೇಳಬೇಕು ॥

* ಗೋಪಾಲಭಾಷ್ಯಂ –

ಆದೀಯಮಾನಮಿತಿ ವಚನಂ ಅನಸಾವಹನಸ್ಯಾಪಿ ಪ್ರದರ್ಶನಂ । ತತಶ್ಚ ಪುರುಷೈಃ ಆದೀಯಮಾನಂ ಅನಸಾ ವಾ ಪ್ರೋಹ್ಯಮಾನಂ ಪೂಷಾ ತ್ವೇತಶ್ಚ್ಯಾವಯತು ಇತಿ ಏತಯಾ ಋಚಾ ಅಗ್ನಿದೋನುಮಂತ್ರಯತೇ । ತತ್ರ ಅಗ್ನಿದಸ್ಯ ಸಪಿಂಡತ್ವೇಪಿ ಆನುಮಂತ್ರಯಿತೃತ್ವಮೇವ । ನ ತು ವೋಢೃತ್ವಮಪೀತಿ ದ್ರಷ್ಟವ್ಯಂ ॥

ಶವವನ್ನು ಶ್ಮಶಾನಕ್ಕೆ ಒಯ್ಯಲು ಚೆಟ್ಟದಸಹಿತ ಎತ್ತುವಾಗ, ಎಂದು ಹೇಳಿರುವುದು ಗಾಡಿಯಲ್ಲಿ ಒಯ್ಯುವ ಪಕ್ಷದಲ್ಲೂ ಈ ಮಂತ್ರವನ್ನು ಹೇಳಬೇಕೆಂದು ತೋರಿಸಲು । ಆದ್ದರಿಂದ ಮನುಷ್ಯರು ಶವವನ್ನು ಎತ್ತುವಾಗಲೂ ಅಥವಾ ವಾಹನದಲ್ಲಿ ಕೊಂಡೊಯ್ಯಲು ಹೊರಟಾಗಲೂ ಈ ಮೇಲಿನ ಮಂತ್ರವನ್ನು ಕರ್ತೃವು ಹೇಳಬೇಕು । ಇಲ್ಲಿ ಕರ್ತೃವು ಸಪಿಂಡನಾಗಿದ್ದರೂ ಅವನಿಗೆ ಅನುಮಂತ್ರಣವುಂಟು । ಆದರೆ ಶವದ ಹೊರುವಿಕೆಯು ಇಲ್ಲ ॥

* ಕಪರ್ದಿಭಾಷ್ಯಂ –

ಆದೀಯಮಾನಂ ಗೃಹ್ಯಮಾನಂ ಅನುಮಂತ್ರಯತೇsಧ್ವರ್ಯುಃ ಪೂಷಾತ್ವೇತಶ್ಚ್ಯಾವಯತು ಪ್ರವಿದ್ವಾನಿತಿ ॥

ಶವವನ್ನು ಮೇಲೆತ್ತಿಕೊಳ್ಳುವಾಗ ಕರ್ತೃವು ಈ ಮೇಲಿನ ಮಂತ್ರದಿಂದ ಮೃತನನ್ನು ಕುರಿತು ಹೇಳಬೇಕು ॥

* ಸೂತ್ರಂ – 15 (ಇಬ್ಬರಿಗೂ)

ತುರೀಯಮಧ್ವನೋ ಗತ್ವಾ ನಿಧಾಯ ದಕ್ಷಿಣತೋ ಲೋಷ್ಟಾನವರುಜ್ಯ ತೇಷು ಚರುಂ ಪ್ರತಿಷ್ಠಾಪ್ಯೈಕ ವಾಸಸೋ ದಕ್ಷಿಣಾನ್ ಕೇಶಪಕ್ಷಾನುದ್ಗ್ರಥ್ಯ ಸವ್ಯಾನ್ ಪ್ರಸ್ರಸ್ಯ ದಕ್ಷಿಣಾನೂರೂನಾಘ್ನಾನಾಃ ಸಿಗ್ಭಿರಭಿಧೂನ್ವಂತಃ ತ್ರಿಃ ಪ್ರಸವ್ಯಂ ಪರಿಯಂತಿ ಅಪನಃ ಶೋಶುಚದಘಂ ಇತಿ ॥

ದಾರಿಯ ನಾಲ್ಕನೇಒಂದು ಭಾಗ ಕ್ರಮಿಸಿ(ಹೋಗಿ), ಅಲ್ಲಿ ಶವವನ್ನು ಇಟ್ಟು, ದಕ್ಷಿಣದಲ್ಲಿ ಮಣ್ಣಿನ ಹೆಂಟೆಗಳನ್ನು ಇಟ್ಟು, ಅದರಮೇಲೆ ಚರುವನ್ನಿಟ್ಟು, ಕರ್ತೃವು ಒಂದೇ ಬಟ್ಟೆಯುಳ್ಳವನಾಗಿ, ಶಿಖೆಯ ದಕ್ಷಿಣ(ಬಲ)ಭಾಗದ ಕೂದಲುಗಳನ್ನು ಮಾತ್ರ ಗಂಟು ಕಟ್ಟಿಕೊಂಡು, ದಕ್ಷಿಣ(ಬಲ) ತೊಡೆಯನ್ನು ತಟ್ಟಿಕೊಂಡು, ತಾನು ಉಟ್ಟಿರುವ ಬಟ್ಟೆಯನ್ನು ಕೊಡವಿಕೊಂಡು, **ಅಪನಶ್ಶೋಶುಚದಘಂ.....,** ಮಂತ್ರವನ್ನು ಹೇಳುತ್ತಾ, ಅಪ್ರದಕ್ಷಿಣೆಯಾಗಿ, 3 ಬಾರಿ ಶವವನ್ನು ಸುತ್ತಬೇಕು ॥

* ಗೋಪಾಲಭಾಷ್ಯಂ –

ಸ ಕುಲ್ಯಾನಾಂ ಕೃತ್ಯಮೇತತ್ । ತುರೀಯಮಧ್ವನ ಇತಿ ಗೃಹಾದಿ ಸ್ಮಶಾನಪರ್ಯಂತಸ್ಯಾಧ್ವನಃ ಚತುರ್ಥಾಂಶ ಉಚ್ಯತೇ । ಶಕಟಪಕ್ಷೇತಸ್ಯ ವಾಹಸ್ಯಾವಸ್ಥಾಪನಂ ದ್ರಷ್ಟವ್ಯಂ । ಲೋಷ್ಟಾನ್ – ಮೃತ್ಖಂಡಾನ್ । ಅವರುಜ್ಯ, ಉತ್ಥಾಯ । ಏಕವಾಸಸ ಇತಿ ಅಪವೇಷ್ಟತಾಖ್ಯಸ್ಯ ಕಟಿಧಾರ್ಯಸ್ಯ ದ್ವಿತೀಯ ವಾಸಸಃ ಪ್ರಹಾಣಮುಚ್ಯತೇ । ನೋತ್ತರೀಯಸ್ಯಾಪಿ, ತಸ್ಯ ನಿತ್ಯಧಾರ್ಯತ್ವ ನಿಯಮಾತ್ । ಸವ್ಯಾನ್ ಪ್ರಸ್ರಸ್ಯೇತಿ ಸಿದ್ಧಾನುಭಾಷಣಂ ಗ್ರಥನ ನಿವೃತ್ತಿ ಪ್ರಾಕಟ್ಯಾರ್ಥಂ । ಆಘ್ನಾನಾಃ – ದಕ್ಷಿಣೈಃ ಪಾಣಿಭಿಃ ತಾಡಯಮಾನಾಃ । ಸಿಗ್ಭಿಃ ಪರಿಧಾನೀಯ ಪ್ರಾಂತೈಃ, ಪ್ರೇತಮಭಿಧೂನ್ವಂತಃ ತ್ರಿಃ ಪ್ರಸವ್ಯಂ ಪ್ರೇತಂ

ಪರಿಯಂತಿ ಸಪಿಂಡಾಃ । ಅಪನಶ್ಶೋಶುಚದಘಮಿತಿ ಅನುವಾಕಾದಿ ಭೂತಾಯಾಃ ಗ್ರಹಣಂ, ಅಹೋಮಾರ್ಥತ್ವಾತ್ । ಅತ್ರ ಅತ್ಯಂತ ಪ್ರದೇಶತಯಾ ವಕ್ಷ್ಯಮಾಣಃ । ಕನಿಷ್ಠಪ್ರಥಮಾ ಅನುಪೂರ್ವಾ ಇತರೇ ಸ್ತ್ರಿಯೋಗ್ರ ಇತಿ ನಿಯಮಃ ಪ್ರತಿಸಂಧಾತವ್ಯಃ ॥

ಮೃತನ ಕುಲದಲ್ಲಿ ಹುಟ್ಟಿದವರ ಕರ್ಮವು ಇದು । ಏನೆಂದರೆ – ಮನೆಯಿಂದ ಶ್ಮಶಾನದವರೆಗೆ ಇರುವ ದಾರಿಯನ್ನು 4 ಭಾಗಗಳಾಗಿ ವಿಂಗಡಿಸಿ, ಅದರ ಮೊದಲಭಾಗದ ಕೊನೆಯಲ್ಲಿ । ಗಾಡಿಯಲ್ಲಿ ಒಯ್ಯುವ ಪಕ್ಷದಲ್ಲಿ ಆ ಮೊದಲಭಾಗದ ಕೊನೆಯಲ್ಲಿ ಗಾಡಿಯನ್ನು ನಿಲ್ಲಿಸಿಕೊಳ್ಳಬೇಕೆಂದು ಅರ್ಥ ಮಾಡಬೇಕು । ಮಣ್ಣಿನ ಚೂರುಗಳನ್ನು ಅಗೆದು ತೆಗೆದು, ಒಂದೇಬಟ್ಟೆಯನ್ನು ಉಟ್ಟವನಾಗಿ, ಎಂಬುದರಿಂದ ದೇಹದ ಮೇಲಿಂದ ಸೊಂಟದವರೆಗೆ ಧರಿಸುವ ಬಟ್ಟೆಯನ್ನು ಬಿಡಬೇಕು ಎಂದರ್ಥ । ಏಕೆಂದರೆ – ಉಪವೀತವನ್ನು ನಿತ್ಯವಾಗಿ ಧರಿಸಬೇಕೆಂದು ವಿಧಿಯಿರುವುದರಿಂದ । ತಲೆಯ ಎಡಭಾಗದ ಕೂದಲುಗಳನ್ನು ಹರಡಿಕೊಂಡು ಎಂದು ಹೇಳಿರುವುದು, ಪ್ರತಿನಿತ್ಯ ಸಂಪೂರ್ಣಕೂದಲುಗಳನ್ನು ಶಿಖೆಯಾಗಿ ಬಂಧಿಸಿಕೊಳ್ಳಬೇಕೆಂಬ ನಿಯಮದಿಂದ ನಿವೃತ್ತಿಯನ್ನು ಇಲ್ಲಿ ತೋರಿಸುವುದಕ್ಕಾಗಿ । ಬಲಕೈಯಿಂದ, ಬಲತೊಡೆಯನ್ನು ಹೊಡೆದುಕೊಳ್ಳುತ್ತಾ । ತಾನುಟ್ಟ ಬಟ್ಟೆಯನ್ನು ಅದರ ತುದಿಯನ್ನು ಹಿಡಿದು ಕೊಡಗುತ್ತಾ(ಬೀಸುತ್ತಾ) ಮೃತನನ್ನು ಅಪ್ರದಕ್ಷಿಣೆಯಾಗಿ ಸುತ್ತಬೇಕು, ಕರ್ತೃವಿನ ಜೊತೆಯಲ್ಲಿ ಸಪಿಂಡರೂ ಸಹ । **ಅಪನಶ್ಶೋಶುಚದಘಂ.....**, ಎಂಬ 11 ಅನುವಾಕದ ಮೊದಲಮಂತ್ರವನ್ನು ಗ್ರಹಣೆ ಮಾಡಿರುವುದರಿಂದ, ಇಲ್ಲಿ ಹೋಮಕ್ಕಾಗಿ ವಿಧಿಯಲ್ಲ, ಕೇವಲ ಸುತ್ತುವುದಕ್ಕಾಗಿ ಎಂದು ಅರ್ಥವು । ಇಲ್ಲಿ ಅತ್ಯಂತ ಸಾಮೀಪ್ಯದಿಂದ ಪ್ರಕರಣಕ್ಕೆ ಅನುಗುಣವಾಗಿ ಹೇಳುತ್ತಿರುವುದರಿಂದ ಸಣ್ಣವಯಸ್ಸಿನವರಿಂದ ಕ್ರಮವಾಗಿ ಈ ವಿಧಿಯನ್ನು ಮಾಡಬೇಕು । ಹಾಗೂ ಸ್ತ್ರೀಯರು ಮೊದಲು ಮಾಡಬೇಕು, ನಂತರ ಸಣ್ಣವಯಸ್ಸಿನವರಿಂದ ಎಂದು ತಿಳಿಯಬೇಕು ॥

* ಕಪರ್ದಿಭಾಷ್ಯಂ –

ತುರೀಯಂ ಚತುರ್ಥಮಧ್ವನೋ ಗತ್ವಾ । ನಿಧಾಯ, ಸ್ಥಾಪಯಿತ್ವಾ । ಶವಸ್ಯ ದಕ್ಷಿಣತೋ ಲೋಷ್ಟಾನವರುಜ್ಯ । ಖಾತ್ವಾ ತೇಷು ಚರುಂ ಸ್ಥಾಪಯಿತ್ವಾ ।

ಏಕವಾಸಸಃ ಸಾಂತರ್ವಾಸಸಃ ಅಮಾತ್ಯಾಸ್ಸಹಾಧ್ವರ್ಯುಣಾ ಮೃತಂ ಪರಿಯಂತಿ ॥

ದಾರಿಯ ನಾಲ್ಕನೇಒಂದು ಭಾಗಕ್ಕೆ ಹೋಗಿ । ಅಲ್ಲಿ ಶವವನ್ನಿಟ್ಟು । ಶವದ ದಕ್ಷಿಣಕ್ಕೆ ಮಣ್ಣಿನ ಹೆಂಟೆಗಳನ್ನು ಅಗೆದು ತೆಗೆದು । ಅದರಮೇಲೆ ಚರುವನ್ನು ಇಟ್ಟು । ಕರ್ತೃವು ಕೆಳಬಟ್ಟೆಯನ್ನು ಮಾತ್ರ ಸುತ್ತಿಕೊಂಡವನಾಗಿ ಮೃತನ ದಾಯಾದಿಗಳೊಂದಿಗೆ ಹಾಗೂ ಅಧ್ವರ್ಯುವಿನೊಂದಿಗೆ ಮೃತನನ್ನು ಅಪ್ರದಕ್ಷಿಣೆಯಾಗಿ ಸುತ್ತಬೇಕು ॥

* ಸೂತ್ರಂ – 16 (ಇಬ್ಬರಿಗೂ)

ಸವ್ಯಾನುದ್ಗೃಹ್ಯ ದಕ್ಷಿಣಾನ್ ಪ್ರಸ್ರಸ್ಯ ಸವ್ಯಾನೂರೂನಾಘ್ನಾನಾಂ ಅನಭಿಧೂನ್ವಂತಃ ತ್ರಿಃ ಪ್ರತಿಪರಿಯಂತಿ ಅಪನಶ್ಯೋಶಚದಘಂ ಇತಿ ॥

ನಂತರ ಶಿಖೆಯ ಉತ್ತರ(ಎಡ)ಭಾಗದ ಕೂದಲುಗಳನ್ನು ಕಟ್ಟಿಕೊಂಡು, ಉತ್ತರದ(ಎಡ) ತೊಡೆಯನ್ನು ತಟ್ಟಿಕೊಂಡು, ಬಟ್ಟೆಯನ್ನು ಕೊಡವದೇ, **ಅಪನಶ್ಯೋಶುಚದಘಂ.....**, ಮಂತ್ರವನ್ನು ಹೇಳುತ್ತಾ, ಪ್ರದಕ್ಷಿಣೆಯಾಗಿ 3 ಬಾರಿ ಶವವನ್ನು ಸುತ್ತಬೇಕು ॥

* ಗೋಪಾಲಭಾಷ್ಯಂ –

ಸವ್ಯಾನ್ ದಕ್ಷಿಣಾನಿತಿ ಪೂರ್ವವತ್ ಕೇಶಪಕ್ಷ ವಿಶೇಷಣಂ । ಸವ್ಯೈಃ ಪಾಣಿಭಿಃ ಆಹನನಂ । ಧೂನ್ವನಾಭಾವಾತ್ತು ನಾತ್ರ ಕನಿಷ್ಠಪ್ರಥಮತ್ವಾದಿ ನಿಯಮಃ । ಪ್ರತಿಪರಿಯಂತಿ ಪ್ರದಕ್ಷಿಣಂ ಪರಿಯಂತೀತ್ಯರ್ಥಃ ॥

ಶಿಖೆಯ ಉತ್ತರಭಾಗದ ಕೂದಲುಗಳನ್ನು ಈ ಹಿಂದಿನಂತೆ । ಬಿಚ್ಚಿಕೊಂಡು, ಎಡಕೈಯಿಂದ ಎಡತೊಡೆಯನ್ನು ತಟ್ಟಿಕೊಳ್ಳಬೇಕು । ಇಲ್ಲಿ, ಕೆಳವಸ್ತ್ರದ ಕೊಡಗುವಿಕೆಯು ಇಲ್ಲದಿರುವುದರಿಂದ ಚಿಕ್ಕವರಿಂದ ಕ್ರಮವಾಗಿ ಮೊದಲು ಎಂಬ ಮುಂತಾದ ನಿಯಮಗಳಿರುವುದಿಲ್ಲ । ಇಲ್ಲಿ ಪ್ರದಕ್ಷಿಣೆಯಾಗಿ ಶವವನ್ನು ಸುತ್ತುತ್ತಾರೆ ॥

* ಸೂತ್ರಂ – 17=37 (ಇಬ್ಬರಿಗೂ)

ಮೇಕ್ಷಣೇನ ಲೋಷ್ಟೇಷು ಚರೋಸ್ತ್ರಿಃ ಪ್ರಯೌತಿ ॥

ಮೇಕ್ಷಣ(ಮರದ ಸೌಟು/ಒಂದುರೀತಿಯ ಯಜ್ಞಸಾಧನ) ದಿಂದ ಆ ಮಣ್ಣಿನಹೆಂಟೆಗಳ ಮೇಲೆ ಚರುವನ್ನು 3 ಸಲ ಕೂಡಿಸಿ, ಕೆಳಗೆ ಹಾಕುತ್ತಾನೆ ॥

* ಗೋಪಾಲಭಾಷ್ಯಂ –

ಲೋಷ್ಟಾಃ ಪೂರ್ವಾವರುಗ್ಣಾ ಅನೂದ್ಯಂತೇ । ಚರೋರಿತಿ ಪಂಚಮೀಷಷ್ಠೀ ವಾ । ತತ್ರಾಪಿ ಪುರೋಡಾಶಸ್ಯಾವದ್ಯತೀತಿವತ್ ಏಕದೇಶೋಪಕರ್ಷಃ ಪ್ರತ್ಯೇತವ್ಯಃ । ಪ್ರಯೌತಿ ಪ್ರಯುತ್ಯಪಾತಯತೀತ್ಯರ್ಥಃ । ಲೋಷ್ಟೇಷ್ವಿತಿ ವಚನಸಾಮರ್ಥ್ಯಾತ್ । ಅಗ್ನಿದಕೃತ್ಯಮೇತತ್ । ಏಕವಚನಾತ್ ॥

ಹಿಂದಿನಂತೆ ಮಣ್ಣಿನ ಹೆಂಟೆಗಳ ಮೇಲೆ ಚರುವನ್ನು ಹಾಕಬೇಕು । ಇಲ್ಲಿ **ಚರೋಃ** ಎಂಬುದು ಪಂಚಮೀ ಅಥವಾ ಷಷ್ಠೀ ವಿಭಕ್ತಿಯು । ಆಹಿತಾಗ್ನಿಯ ಸಂಸ್ಕಾರದಲ್ಲಿಯೂ ಕೂಡ ಪುರೋಡಾಶಸ್ಯ ಅವದ್ಯತಿ ಎಂಬಂತೆ, **ಒಂದುಭಾಗವನ್ನು ತೆಗೆದುಕೊಳ್ಳುವುದು** ಎಂದು ತಿಳಿಯಬೇಕು । ಪ್ರಯೌತಿ ಎಂದರೆ, ಅನ್ನವನ್ನು ಕೂಡಿಸಿ–ಹಾಕುತ್ತಾನೆ ಎಂದರ್ಥ । ಇಲ್ಲಿ ಹೆಂಟೆಗಳ ಮೇಲೆ ಎಂದು ಅರ್ಥ ಮಾಡಬೇಕು । ಏಕವಚನದಿಂದ ಹೇಳಿರುವುದರಿಂದ, ಯಾವನು ಅಗ್ನಿಯನ್ನು ಶವಕ್ಕೆ ಸ್ಪರ್ಶಿಸುತ್ತಾನೋ ಅವನೇ ಮಾಡಬೇಕು ॥

* ಕಪರ್ದಿಭಾಷ್ಯಂ –

ಅಧ್ವರ್ಯ್ವುಶ್ಚರುಂ ಪ್ರಯೌತಿ ಘಟ್ಟಯತಿ ॥

ಅಧ್ವರ್ಯ್ವುವು ಚರುವನ್ನು ಕೂಡಿಸಿ, ಕೆಳಗೆ ಹಾಕುತ್ತಾನೆ ॥

.....

.....

3 ನೇ ಖಂಡ

(ಸ್ಮಶಾನ ಪ್ರವೇಶ ವಿಚಾರ – ತೇಧಾಗ್ನಿಗಳನ್ನು ಸ್ಮಶಾನದಲ್ಲಿ ಇಡುವರೀತಿ – ವೇದಿಕಗಳ ರಚನೆ)

*** ಸೂತ್ರಂ – 1 (ಇಬ್ಬರಿಗೂ)**

ಪರೀತ್ಯ ಪರೀತ್ಯ ಪ್ರಯೌತೀತ್ಯೇಕೇ ॥

ಶವವನ್ನು ಪ್ರತಿಬಾರಿ ಸುತ್ತಿದಾಗಲೂ, ಒಂದೊಂದುಸಲ ಚರುವನ್ನು ಕೂಡಿಸಬೇಕು ಎಂದು ಕೆಲವರು ಹೇಳುತ್ತಾರೆ ॥

*** ಗೋಪಾಲಭಾಷ್ಯಂ –**

ಏಕೈಕಸ್ಮಿನ್ ಪರಿಗಮನೇ ಅಮಾತ್ಯೈಃ ಕೃತೇ ಅಗ್ನಿದಃ ಏವಂ ಸಕೃತ್ ಸಕೃತ್ ಪ್ರಯೌತಿ । ತತ್ರ ಪ್ರಸವ್ಯ ಪರಿಗಮನಸ್ಯೈವ ಅಯಂವಾದಃ । ಪ್ರತಿಪರೀತ್ಯೇತ್ಯ ವಚನಾತ್ । ಪರೀತ್ಯೇತಿ ಸಮಾನಕರ್ತೃಕತ್ವಮಪಿ ವಿವಕ್ಷಿತಂ । ಪೂರ್ವಕಲ್ಪೇ ಭಿನ್ನಕರ್ತೃಕತ್ವಸ್ಯ ಸ್ಪಷ್ಟತ್ವಾತ್ । ತಸ್ಮಿನ್ನಂಶೇ ವೈಯರ್ಥ್ಯಾಭಾವಾಚ್ಚ । ಅಥವಾ ಸಪಿಂಡಭೂತ ಪರತಯಾ ಸಮಾನಕರ್ತೃಕತ್ವ ಉಪಪತ್ತಿರ್ದ್ರಷ್ಟವ್ಯಾ ॥

ಪರಿವಾರದವರು ಒಂದೊಂದು ಸಲ ಸುತ್ತಿದಾಗಲೂ, ಅಗ್ನಿಯನ್ನು ಕೊಡುವವನು ಒಂದೊಂದು ಸಲ ಅನ್ನವನ್ನು ಕೂಡಿಸಿ, ಕೆಳಗೆ ಹಾಕಬೇಕು । ಈ ಕರ್ಮವು, ಅಪ್ರದಕ್ಷಿಣೆಯಾಗಿ ಸುತ್ತುವಾಗ ಎಂಬುದು ಎಲ್ಲರ ಅಭಿಪ್ರಾಯ । ಮತ್ತೆ ಪ್ರದಕ್ಷಿಣೆಯಾಗಿ ಬಂದು ಎಂದು ವಚನವಿರುವುದರಿಂದ । ಪರೀತ್ಯ ಎಂಬುದರಲ್ಲಿ ಸಮಾನ ಕರ್ತೃತ್ವವನ್ನು ಹೇಳಲು ಇಚ್ಛಿಸಿದೆ । ಹಿಂದಿನ ವಿಧಿಯಲ್ಲಿ ಭಿನ್ನಕರ್ತೃತ್ವವನ್ನು ಸ್ಪಷ್ಟವಾಗಿ

ಹೇಳಿರುವುದರಿಂದ । ಇಲ್ಲದಿದ್ದರೆ, ಕೇವಲ ಭಿನ್ನಕರ್ತೃತ್ವವನ್ನು ಹೇಳುವುದರಿಂದ ಈ ವಿಧಿಯು ವ್ಯರ್ಥವಾಗಿ ಹೋಗುತ್ತಿತ್ತು ಹಾಗೂ ಭಿನ್ನಕರ್ತೃತ್ವವನ್ನು ಹೇಳಿರುವುದರಿಂದ ಅದರ ಅಂಶದಿಂದ ಆ ಭಿನ್ನಕರ್ತೃತ್ವ ವಿಧಿಗೆ ವ್ಯರ್ಥವಾಗುವಿಕೆಯು ಬರುವುದಿಲ್ಲ । ಅಥವಾ ಸಪಿಂಡರನ್ನು ಕುರಿತು ಸಮಾನಕರ್ತೃತ್ವವನ್ನು ಹೇಳಿದೆ ಎಂದು ಸಮಾನಕರ್ತೃತ್ವವನ್ನು ಹೊಂದಿಸಬೇಕು ॥

*** ಕಪರ್ದಿಭಾಷ್ಯಂ –**

ಪುನಃ ಪುನಃ ಪರ್ಯಾವರ್ತತೇ । ಮಂತ್ರಾವೃತ್ತಿಃ ವ್ಯತಿಷಂಗಾದನಂತರಾತ್ । ಕೇಚಿತ್ ಪೂರ್ವೇನಾನುಶಂಗೋ ಮುಖ್ಯತ್ವಾತ್ ॥

ಮತ್ತೆಮತ್ತೆ ಪ್ರದಕ್ಷಿಣೆಯಾಗಿ ಸುತ್ತುತ್ತಾನೆ । ಮಂತ್ರದ ಆವೃತ್ತಿಯು ಅಪ್ರದಕ್ಷಿಣೆಯ ಸುತ್ತುವಿಕೆಯಾದನಂತರ । ಕೆಲವರು ಹಿಂದಿನದರಿಂದ ಅನುಷಂಗವನ್ನು ಹೇಳುತ್ತಾರೆ ಅದು ಪ್ರಧಾನವಾಗಿರುವುದರಿಂದ ॥

*** ಸೂತ್ರಂ – 2 (ಇಬ್ಬರಿಗೂ)**

ಆದೀಯಮಾನಂ ಅನುಮಂತ್ರಯತೇ ಪೂಷೇಮಾ ಆಶಾಃ ಇತಿ ॥

ಪುನಃ ಆ ವಾಹನವನ್ನು ಮುಂದಕ್ಕೆ ಹೋಗಿಸಲು(ಎತ್ತಲು) ಪ್ರಾರಂಭಿಸುವಾಗ, ಕರ್ತೃವು ಶವವನ್ನು ಅನುಮಂತ್ರಣೆ ಮಾಡಿಕೊಂಡು(ಮುಟ್ಟಿಕೊಂಡು), **ಪೂಷೇ ಮಾ ಆಶಾಃ.....**, ಮಂತ್ರವನ್ನು ಹೇಳಬೇಕು ॥

*** ಗೋಪಾಲಭಾಷ್ಯಂ –**

ಸ್ಪಷ್ಟಮೇತತ್ ॥

ಇದರ ಸೂತ್ರದಲ್ಲಿಯೇ ಸ್ಪಷ್ಟವಾಗಿ ಅರ್ಥವಿದೆ ॥

*** ಸೂತ್ರಂ – 3 (ಇಬ್ಬರಿಗೂ)**

ತುರೀಯಮಧ್ವನೋಗತ್ವಾ ನಿಧಾಯ ಪೂರ್ವವತ್ ಕೃತ್ವಾದೀಯಮಾನಂ ಅನುಮಂತ್ರಯತೇ ಆಯುರ್ವಿಶ್ವಾಯುಃ ಇತಿ ॥

ಮತ್ತೆ, ನಾಲ್ಕನೇ ಎರಡುಭಾಗದ ದಾರಿಯನ್ನು ಕ್ರಮಿಸಿ, ಪುನಃ ವಾಹನವನ್ನು ಅಥವಾ ಶವವನ್ನು ನೆಲದಲ್ಲಿ ಇಟ್ಟು(ನಿಲ್ಲಿಸಿ), ಈ ಹಿಂದಿನಂತೆಯೇ ಎಲ್ಲಾ ಕ್ರಿಯೆಗಳನ್ನೂ ಮಾಡಿ, ಮತ್ತೆ ವಾಹನವನ್ನು ಎತ್ತಿಕೊಳ್ಳುವಾಗ(ಚಲಿಸುವಾಗ), ಕರ್ತೃವು **ಆಯುರ್ವಿಶ್ವಾಯುಃ.....**, ಮಂತ್ರದಿಂದ ಶವವನ್ನು ಅನುಮಂತ್ರಣೆ ಮಾಡಬೇಕು ॥

*** ಗೋಪಾಲಭಾಷ್ಯಂ –**

ಪೂರ್ವವದಿತಿ ದಕ್ಷಿಣತೋ ಲೋಷ್ಟಾನಿತ್ಯಾದ್ಯಮಾತ್ಯಕೃತ್ಯಂ । ಪ್ರಯವನಾತ್ಮಕಮಗ್ನಿದ ಕೃತ್ಯಂ ಚ । ಯಥಾಪೂರ್ವಂ ಕೃತ್ವಾ ತತಃ ಅಗ್ನಿದ ಆದೀಯಮಾನಂ ಏತಯರ್ಚಾ ಅನುಮಂತ್ರಯತ ಇತ್ಯರ್ಥಃ ॥

ಹಿಂದಿನಂತೆ ಶವದ ದಕ್ಷಿಣಕ್ಕೆ ಮಣ್ಣಿನ ಹೆಂಟೆಗಳನ್ನು ತೆಗೆದು, ಮುಂತಾದ ಕೆಲಸಗಳು ಕರ್ತೃವಿನ ಪರಿವಾರದ ಕೆಲಸವು । ಚರುವನ್ನು ಕೂಡಿಸಿ, ಕೆಳಕ್ಕೆ ಹಾಕುವುದು ಅಗ್ನಿಸ್ಪರ್ಶ ಮಾಡುವವನ ಕೆಲಸ । ಹಿಂದಿನಂತೆಯೇ ಈ ವಿಧಿಗಳನ್ನು ಮಾಡಿ, ಶವವನ್ನು ಎತ್ತಿ ಮುಂದಕ್ಕೆ ಹೋಗುವಾಗ, ಅಗ್ನಿಯನ್ನು ಕೊಡುವವನು **ಆಯುರ್ವಿಶ್ವಾಯುಃ.....**, ಎಂಬ ಮಂತ್ರವನ್ನು ಹೇಳುತ್ತಾನೆ ॥

*** ಸೂತ್ರಂ – 4 (ಇಬ್ಬರಿಗೂ)**

ತುರೀಯಮಧ್ವನೋಗತ್ವಾ ನಿಧಾಯ ಪೂರ್ವವತ್ ಕೃತ್ವಾ ತೃತೀಯೇನ ಸಹ ಚರುಂ ಪ್ರಕ್ಷಿಣುಯಾತ್ ॥

ಮತ್ತೇ ನಾಲ್ಕನೇ ಮೂರನೇಭಾಗ ದಾರಿಯನ್ನು ಕ್ರಮಿಸಿ, ಹಿಂದಿನಂತೆಯೇ ಎಲ್ಲವನ್ನೂ ಮಾಡಿ, ನಂತರ ಉಳಿದ ಚರುವನ್ನು ಅಲ್ಲಿಯೇ ಪೂರ್ಣವಾಗಿ ಮುಗಿಸಬೇಕು ॥

*** ಗೋಪಾಲಭಾಷ್ಯಂ –**

ತೃತೀಯೇನ ಪ್ರಯವನೇನ ಸಹ ತೃತೀಯೇ ಪ್ರಯವನೇ ಕ್ರಿಯಮಾಣೇ ಚರುಸ್ಥಾಲೀಂ ಅವಾಚೀನಬಿಲಾಂ ಪ್ರಾಸ್ಯ ನಿರ್ಭಿಂದ್ಯಾತ್ । ಚರುಸ್ಥಾಲೀ ಪ್ರಾಸನೇನೈವ ತೃತೀಯಂ ಚರುಪ್ರಯವನಂ ಕುರ್ಯಾದಿತ್ಯರ್ಥಃ ॥

ಮೂರನೇಸಲ ಚರುವನ್ನು ಕೂಡಿಸಿ, ಮೂರನೇ ಕೂಡಿಸಿದ ನಂತರ ಚರುಪಾತ್ರೆಯನ್ನು ಕೆಳಮುಖವಾಗಿ ಇಟ್ಟು ಒಡೆಯಬೇಕು । ಚರುಸ್ಥಾಲಿಯನ್ನು ಕೆಳಮುಖಮಾಡಿ ಒಡೆಯುವುದರಿಂದಲೇ ಚರುವಿನ ಹಾಕುವಿಕೆಯೂ ಆಯಿತು ಎಂದು ತಿಳಿಯಬೇಕು ॥

*** ಕಪರ್ದಿಭಾಷ್ಯಂ –**

ಖನನಾದಿ ಪೂರ್ವವತ್ ಕ್ರಿಯತೇ ಘಟ್ಟನಾಂತಂ । ತೃತೀಯೇನ ಘಟ್ಟನೇನ ಚರುಂ ಭಿಂದ್ಯಾತ್ ॥

ಮಣ್ಣಿನಹೆಂಟೆಗಳನ್ನು ಸಂಗ್ರಹಿಸುವುದೇ ಮೊದಲಾಗಿ, ಎರಡನೇಸಲ ಚರುವನ್ನು ಹಾಕಿ, ಪ್ರದಕ್ಷಿಣಾದಿಗಳನ್ನು ಈ ಹಿಂದಿನಂತೆಯೇ ಮಾಡಬೇಕು । ಆದರೆ ಮೂರನೇಸಲ ಚರುವನ್ನು ಹಾಕುವಾಗ ಪಾತ್ರೆಯ ಸಹಿತ ಕೆಳಮುಖವಾಗಿ ಇಟ್ಟು ಚರುಪಾತ್ರೆಯನ್ನು ಒಡೆಯಬೇಕು ॥

*** ಸೂತ್ರಂ – 5 (ಇಬ್ಬರಿಗೂ)**

ಅಥಾಸ್ಯ ಕಪಾಲಾನಿ ಸುಸಂಭಿನ್ನಾನಿ ಸಂಭಿನತ್ತಿ ಯಥೈಷೂದಕಂ ನ ತಿಷ್ಠೇತ್ ॥

ನಂತರ ಅಲ್ಲಿದ್ದ ಗಡಿಗೆಯ ಕಪಾಲಗಳನ್ನು ಪೂರ್ಣವಾಗಿ ಚೂರುಚೂರು ಮಾಡಿ, ನೀರು ನಿಲ್ಲದಂತೆ ಒಡೆಯಬೇಕು ॥

*** ಗೋಪಾಲಭಾಷ್ಯಂ –**

ಅಸ್ಯ ಚರೋಃ ಚರುಸ್ಥಾಲ್ಯಾ ಇತ್ಯರ್ಥಃ। ಯಥೈವಂ ಸ್ಯಾತ್ ತಥಾ ಸುನಿರ್ಭಿನ್ನಾನಿ ಕುರ್ಯಾದಿತ್ಯರ್ಥಃ । ತತೋಽಪ ಉಪಸ್ಪರ್ಶನಂ ॥

ಚರೋಃ ಎಂದರೆ – **ಚರುಸ್ಥಾಲಿ** ಎಂದರ್ಥ । ಸ್ವಲ್ಪವೂ ನೀರಿಲ್ಲದಂತೆ ಚರುಪಾತ್ರೆಯನ್ನು ಚೂರುಚೂರಾಗಿ ಒಡೆಯಬೇಕು । ನಂತರ ಕೈ ತೊಳೆಯಬೇಕು ॥

*** ಸೂತ್ರಂ – 6 (ಇಬ್ಬರಿಗೂ)**

ತೂಷ್ಣೀಂ ಚತುರ್ಥಮಾದಾಯ ಗತ್ವಾ ಜಘನೇನ ದಹನದೇಶಂ ನಿಧಾಯೋದಂಚಃ ಸಮುತ್ಕ್ರಮಂತಿ । ಏಷಾ ವೈ ದೇವಮನುಷ್ಯಾಣಾಂ ಶಾಂತಾದಿಕ್ ತಾಮೇವೈನಾಂ ಅನೂತ್ಕ್ರಮಂತೀತಿ ವಿಜ್ಞಾಯತೇ ॥

ಮೌನವಾಗಿ ನಾಲ್ಕನೇಸಲ ಎತ್ತಿಕೊಂಡು, ಸುಡುವ ಪ್ರದೇಶದ ಹಿಂಭಾಗಕ್ಕೆ ಹೋಗಿ, ಅಲ್ಲಿ ಶವವನ್ನಿಟ್ಟು, ಉತ್ತರಕ್ಕೆ ಎಲ್ಲರೂ ಬರಬೇಕು । **ಏಷಾ ವೈ ದೇವ ಮನುಷ್ಯಾಣಾಗ್ಂ .....,** ಮಂತ್ರವಿರುವುದರಿಂದ ॥

*** ಗೋಪಾಲಭಾಷ್ಯಂ –**

ತೂಷ್ಣೀಂ ಚತುರ್ಥಮಾದಾಯೇತ್ಯನು ಮಂತ್ರಣಾಭಾವ ಪ್ರಾಕಟ್ಯಾರ್ಥಂ । ಅಗ್ನಿದ ಸಹಿತಾಸ್ಸರ್ವೇ ಅಮಾತ್ಯಾಸ್ಸಮುತ್ಕ್ರಮಂತಿ ಯುಗಪದುತ್ತರತೋ ಗಚ್ಛಂತಿ । ಏಷಾ ವಾ ಇತ್ಯರ್ಥವಾದಃ ಪ್ರಶಂಸಾರ್ಥಃ ॥

ಅಮಂತ್ರಕವಾಗಿ, ನಾಲ್ಕನೇಸಲ ಶವವನ್ನು ಎತ್ತಿಕೊಂಡು, ಎಂದು ಅನುಮಂತ್ರಣವು ಇಲ್ಲವೆಂಬುದನ್ನೂ ಈ ಮೂಲಕ ತಿಳಿಸುತ್ತಿದೆ । ನಂತರ ಶವವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ, ದಹನದೇಶದ ಹಿಂಭಾಗದಲ್ಲಿ ಇಟ್ಟು, ಅಗ್ನಿಯನ್ನು ಕೊಡುವವನ ಸಹಿತ ಪರಿವಾರದ ಎಲ್ಲರೂ ಒಟ್ಟಿಗೆ ಶವವನ್ನು ದಾಟಿ ಉತ್ತರಕ್ಕೆ ಹೋಗಬೇಕು । **ಏಷಾ ವಾ.....,** ಎಂಬ ಅರ್ಥವಾದವು ಹೊಗಳಿಕೆಗಾಗಿ ಇರುವುದು ॥

*** ಕಪರ್ದಿಭಾಷ್ಯಂ –**

ತೂಷ್ಣೀಮಿತಿ ಗಮನಸ್ಯ ವಿದ್ಯಮಾನತ್ವಾತ್ ಅನುಕ್ತೇಪಿ ಅನ್ಯತರಸ್ಯವಿಧೇಃ ಪ್ರಾಪ್ತಿನ್ಯಾಯೇತ್ಯುಪದೇಶಃ। ಲೌಕಿಕ್ಯಾವಾಚಃ ಪ್ರತಿಶೇಧ ಇತಿ। ಅನೂತ್ಕ್ರಮಂತಿ ತಾನ್ ದಿಶಮನುಗಚ್ಛಂತೀತಿ ಶ್ರುತಿಃ ॥

ತೂಷ್ಣೀಂ(ಅಮಂತ್ರಕ), ಎಂಬುದು ಹೋಗುವಿಕೆಗೆ ಇರುವುದರಿಂದ, ಇಲ್ಲಿ ಶಾಸ್ತ್ರದಲ್ಲಿ ವಿಧಿಸದೇ ಇರುವ ಬೇರೇವಿಧಿಗಳು ಇಲ್ಲಿಗೆ ಅನ್ವಯಿಸುತ್ತದೆಂಬ ನ್ಯಾಯವು ಇಲ್ಲಿ ಹೇಳಲ್ಪಟ್ಟಿದೆ । ಇದರಿಂದ, ದಾರಿಯಲ್ಲಿ ಕೊನೆಯಬಾರಿ ಎತ್ತುವಾಗ ಮಂತ್ರವಿಲ್ಲ ಎಂಬುದರ ಜೊತೆಗೇ ಬೇರೇ ಯಾವ ಮಾತುಗಳನ್ನೂ ಆಡಬಾರದು ಎಂಬುದು ಸಿದ್ಧವಾಗುತ್ತದೆ। **ಅನೂತ್ಕ್ರಮಂತಿ** ಎಂದರೆ, ಉತ್ತರದಿಕ್ಕಿಗೆ ಶವವನ್ನು ದಾಟಿ ಹೋಗತ್ತಾರೆ ಎಂದರ್ಥ ॥

*** ಸೂತ್ರಂ – 7 (ಇಬ್ಬರಿಗೂ)**

ಪ್ರತ್ಯೇತ್ಯ ಹರಿಣ್ಯಾ ಪಲಾಶಶಾಖಯಾ ಶಮೀಶಾಖಯಾ ವಾ ಸ್ಮಶಾನಾಯತನಂ ಸಂಮಾರ್ಷ್ಟಿ ಅಪೇತವೀತ ಇತಿ ॥

ಪುನಃ ದಹನದ ದೇಶಕ್ಕೆ ಬಂದು, ಹಸಿರಾದ(ಹಸಿಯಾದ), ಪಲಾಶದ(ಮುತ್ತುಗ) ಕೋಲು ಅಥವಾ ಶಮೀ(ಬನ್ನಿ) ಮರದ ಕೋಲಿನಿಂದಾಗಲೀ, ದಹನದ ಜಾಗವನ್ನು **ಅಪೇತವೀತ.....**, ಮಂತ್ರದಿಂದ ಗುಡಿಸಿ, ಸ್ವಚ್ಛಗೊಳಿಸಬೇಕು ॥

*** ಗೋಪಾಲಭಾಷ್ಯಂ –**

ಪ್ರತ್ಯೇತ್ಯ ಪುನರೇತ್ಯ ಅಗ್ನಿದಸ್ಸಂಮಾರ್ಷ್ಟಿ। ಹರಿಣೇ ಅಶುಷ್ಕಾ। ಅಪೇತವೀತೇತಿ ಪೈತೃಮೇಧಪಾಠಃ। ನಾಗ್ನಿಕಾಂಡ(4ನೇ ಕಾಂಡ) ಪಾಠಃ। ಬೋಧಯನೀಯೇ ಪಿತೃಮೇಧಪಠಿತಾಯಾಃ ಕೃತ್ಸ್ನ ಪಾಠಾತ್ । ಸ್ಮಶಾನಾಯತನಂ – ಅಗ್ನಿದಾರುಚಿತಿ ಪರ್ಯಾಪ್ತೋ ದಹನದೇಶಃ । ತತ್ರ ಸ್ಮಶಾನವಿಹರಣಪಕ್ಷೇ

ದಾರುಚಿತ್ಯವಕಾಶಸ್ಯೈವಾಯಂ ಸಂಮಾರ್ಗ ಇತಿ ದ್ರಷ್ಟವ್ಯಂ। ಯಥಾನುಕ್ರಾಂತಸ್ತು ಪ್ರಯೋಗ ಇಹ ಗೃಹ ವಿಹರಣ ಪಕ್ಷಾನ್ವಯೀ। ಅತಃ ಪಕ್ಷಾಂತರೇ ವಿಶೇಷಾನ್ ಬ್ರೂಮಃ। ತತ್ರ ನಿರ್ವಾಪನ ದೇಶೇ ಆಸಾದನ ದೇಶೇ ಚ ಪ್ರೇತ ಸಂವೇಶನಂ ಸ್ರುವಾಹುತಿಷು ತದನ್ವಾರಂಭಃ ಚಾಸಂಭವಾತ್ ನಿವರ್ತಂತೇ। ಉಲಪರಾಜಿ ಕಾಲೇ ಅಧ್ವರ್ಯುಃ ಸ್ಮಶಾನಾಯತನಂ ಗತ್ವಾ ಉಲಪರಾಜ್ಯಾದ್ಯಾಮಿಕ್ಷಾಂತಂ ಕೃತ್ವಾ, ಚರುಂ ಪ್ರತ್ಯಾಹರೇತ್ । ತತೋऽಗ್ನಿ ಉಲ್ಮುಕವರ್ಜಿತಂ ಸರ್ವಂ ಪೂರ್ವವತ್ ॥

ಮತ್ತೆ ಬಂದು, ಅಗ್ನಿಸ್ಪರ್ಶವನ್ನು ಮಾಡುವ ಕರ್ತೃವು ದಹನದ ಜಾಗವನ್ನು (ಸ್ವಚ್ಛ)ಸಂಮಾರ್ಜನ ಮಾಡಬೇಕು । ಹರಿಣೀ ಎಂದರೆ ಹಸಿಯಾದದ್ದು ಎಂದರ್ಥ । **ಅಪೇತವೀತ..., ಎಂಬ ಪಿತೃಮೇಧಪ್ರಶ್ನದ ಮಂತ್ರವನ್ನೇ ಹೇಳಬೇಕು । 4 ನೇ ಕಾಂಡದಲ್ಲಿ ಬರುವ ಮಂತ್ರವನ್ನಲ್ಲ ।** ಬೋಧಾಯನೀಯ ಪಿತೃಮೇಧ ಸೂತ್ರದಲ್ಲಿ(ಪ್ರಯೋಗ) ಸಂಪೂರ್ಣ ಮಂತ್ರವನ್ನು ಹೇಳಿರುವುದರಿಂದ ಪಿತೃಮೇಧಪ್ರಶ್ನೆಯ ಮಂತ್ರವನ್ನೇ ಹೇಳಬೇಕು । ಸ್ಮಶಾನದ ಜಾಗವು ಅಗ್ನಿಯನ್ನು ಶವಕ್ಕೆ ಸ್ಪರ್ಶಿಸಲು ರಚಿಸುವ ಚಿತೆಗೆ ಬೇಕಾಗುವಷ್ಟು ದಹನದೇಶವನ್ನು ಹೊಂದಿರಬೇಕು । ಇಲ್ಲಿ, ಶ್ಮಶಾನದಲ್ಲಿಯೇ ವಿಹರಣಪಕ್ಷವನ್ನು ಮಾಡುವಾಗ(ಮೂರು ಅಗ್ನಿಗಳನ್ನು ಸ್ಮಶಾನದಲ್ಲಿಯೇ ಆಧಾನ ಮಾಡುವ(ಬೇರೇಬೇರೆಯಾಗಿ ಇಡುವ) ಪಕ್ಷದಲ್ಲಿ, ಚಿತೆಗೆ ಬೇಕಾಗುವಷ್ಟು ಜಾಗವನ್ನು ಸ್ವಚ್ಛಮಾಡಬೇಕೆಂದು ತಿಳಿಯಬೇಕು । ಇಲ್ಲಿ ಮನೆಯಿಂದಲೇ ಮೂರು ಅಗ್ನಿಗಳನ್ನು ಬೇರೆಯಾಗಿ ಇಟ್ಟುಕೊಳ್ಳುವ ಪಕ್ಷವನ್ನನುಸರಿಸಿ ಪ್ರಯೋಗವನ್ನು ಅನುಕ್ರಮವಾಗಿ ಹೇಳುತ್ತಿದೆ, ಆದ್ದರಿಂದ ಇಲ್ಲಿ ವಿಹರಣಪಕ್ಷದ ವಿಶೇಷವನ್ನು ಹೇಳುತ್ತಿದ್ದೇವೆ । ಸ್ಮಶಾನವಿಹರಣ ಪಕ್ಷದಲ್ಲಿ, ನಿರ್ವಾಪನೆ ಮಾಡುವ ಸ್ಥಾನದಲ್ಲಿ – ಆಸಾದನೆ ಮಾಡುವ ಸ್ಥಾನದಲ್ಲಿ – ಮೃತನ ಮಲಗಿಸುವಿಕೆ, ಅವನನ್ನು ದರ್ಭೆಯಿಂದ ಮುಟ್ಟಿಕೊಂಡು ಸ್ರುವಾಹುತಿಯನ್ನು ಕೊಡುವುದು ಸಾಧ್ಯವಿಲ್ಲದಿರುವುದರಿಂದ, ಆ ಕರ್ಮಗಳು ಇಲ್ಲ । **ಅಧ್ವರ್ಯುವು ಸ್ಮಶಾನದೇಶಕ್ಕೆ ಹೋಗಿ ಉಲಪರಾಜಿ (ದರ್ಭೆಯ ಕಟ್ಟು)ಯನ್ನು ಹಾಕುವುದು...,** ಮುಂತಾದ ಆಮಿಕ್ಷಾಂತದವರೆಗಿನ ಕರ್ಮವನ್ನು ಮಾಡಿ, ಚರುವನ್ನು ತೆಗೆದುಕೊಂಡು ಬರಬೇಕು। ಇಲ್ಲಿಂದ ಮುಂದಕ್ಕೆ ಕೊಳ್ಳಿಯಲ್ಲಿ ಅಗ್ನಿಯನ್ನು ತರುವುದನ್ನು ಬಿಟ್ಟು, ಉಳಿದ ಎಲ್ಲಾ ವಿಧಿಗಳನ್ನೂ ಹಿಂದಿನಂತೆಯೇ ಮಾಡಬೇಕು ॥

*** ಕಪರ್ದಿಭಾಷ್ಯಂ –**

ಪ್ರತ್ಯೇತ್ಯ ಅಧ್ವರ್ಯುಃ ಸಂಮಾರ್ಷ್ಟಿ । ಅಪೇತವೀತೇತಿ ಸಂಹಿತಾಪಾಠಃ । ಅದೃಷ್ಟಾರ್ಥತ್ವಾದಿಹಾಪಿ ನ ದೋಷಃ । ಏತದಂತಂ ಗ್ರಾಮೇ ವಾಸ್ಯೈತೇನ ಕಲ್ಪೇನೇತ್ಯಸ್ಮಿನ್ ಪಕ್ಷೇ ಇತರಸ್ಮಿನ್ ಪಕ್ಷೇ ಉಲ್ಮುಕದೀಪನಾದೇರ್ಲೋಪಃ । ಅರ್ಥಾಭಾವಾತ್ ಚರುಶ್ರಪಣಂ ಚ ಲುಪ್ಯತೇ । ಅನ್ಯೇಚಾರ್ಥ ಲುಪ್ತಾಃ । ಉಲ್ಮುಕ ಏವ ಪಾಕೋಸ್ಮಿನ್ನಪಿಪಕ್ಷೇ ಅವದಾನ ಧರ್ಮೇಣ ಪೂರ್ವಸ್ಮಿನ್ ಆಹವನೀಯಾತ್ ಉಲ್ಮುಕಮಾದಾಯ ಚರುಶ್ರಪಣಂ । ಅಪಿವೇತ್ಯಸ್ಮಿನ್ನಪಿ ಪಕ್ಷೇ ಕೇಚಿನ್ನೇಚ್ಛಂತಿ ॥

ಪುನಃ ಬಂದು, ಸ್ಮಶಾನದೇಶವನ್ನು ಸ್ವಚ್ಛಗೊಳಿಸುತ್ತಾನೆ । **ಅಪೇತವೀತ...,** ಎಂಬ **ಸಂಹಿತೆಯ ಮಂತ್ರವನ್ನು ಜಪಿಸಬೇಕು । ಅದೃಷ್ಟಾರ್ಥಕ್ಕಾಗಿ ಈ ಮಂತ್ರವನ್ನು ಪಠಿಸುವುದರಿಂದ ಯಾವ ದೋಷವೂ** ಇಲ್ಲ । ಇಲ್ಲಿಯವರೆಗೆ ಗ್ರಾಮದಲ್ಲಿ ಅಥವಾ ಸ್ಮಶಾನದಲ್ಲಿ ಈ ಕಲ್ಪವನ್ನು ಅನುಸರಿಸಿ, ಈ ವಿಧಾನದಲ್ಲಿ ಮಾಡಬೇಕು ಎಂಬ ಪಕ್ಷದಲ್ಲಿ ಹಾಗೂ । ಸ್ಮಶಾನವಿಹರಣ ಪಕ್ಷವಾದ ಇನ್ನೊಂದು ವಿಧಾನದಲ್ಲಿ – ಕೊಳ್ಳಿಯನ್ನು ತೆಗೆದುಕೊಂಡು ಹೋಗುವುದು ಇಲ್ಲ । ಏಕೆಂದರೆ, ಪ್ರಯೋಜನವಿಲ್ಲದ್ದರಿಂದ ಹಾಗೂ ಚರುವನ್ನು ಬೇಯಿಸುವುದೂ ಇಲ್ಲದ್ದರಿಂದ । ಇನ್ನು ಮನೆಯಲ್ಲಿ ಮಾಡುವ ಬೇರೆ ವಿಧಿಗಳು ಲೋಪವಾಗುತ್ತವೆ । ಉಲ್ಮುಕದಲ್ಲೇ(ಕೊಳ್ಳಿ) ಚರುವನ್ನು ಮಾಡುವ ಈ ವಿಧಾನದಲ್ಲಿ ಅವದಾನ ಧರ್ಮದಿಂದ ಆಹವನೀಯದಿಂದ ಮೊದಲು ಕೊಳ್ಳಿಯನ್ನು ತೆಗೆದುಕೊಂಡು ಚರುವನ್ನು ಬೇಯಿಸಬೇಕು । **ಅಥವಾ.....** ಎಂಬ ಇನ್ನೊಂದು ವಿಧಾನದಲ್ಲೂ ಕೆಲವರು ಈ ಬೇಯಿಸುವಿಕೆಯನ್ನು ಇಷ್ಟಪಡುವುದಿಲ್ಲ ॥

*** ಸೂತ್ರಂ – 8 (ಇಬ್ಬರಿಗೂ)**

ದಕ್ಷಿಣತಃ ಶಾಖಾಮುದಸಿತ್ವ ಅಪಉಪಸ್ಪೃಶ್ಯ ಉದ್ಧತ್ಯ ಅವೋಕ್ಷ್ಯ ಹಿರಣ್ಯಶಕಲಂ ಅವದಾಯ ತಸ್ಮಿನ್ ದಕ್ಷಿಣಾಗ್ರಾನ್ ದರ್ಭಾನ್ ಸಂಸ್ತೀರ್ಯ ತೇಷು ದಕ್ಷಿಣಾಗ್ರೈಃ ಯಾಜ್ಞಿಕೈಃ ಕಾಷ್ಠೈಃ ದಾರುಚಿತಿಂ ಚಿತ್ವಾಗ್ನೀನುಪವಪತಿ ಪುರಸ್ತಾದಾಹವನೀಯಂ ಪಶ್ಚಾತ್ ಗಾರ್ಹಪತ್ಯಂ ದಕ್ಷಿಣತಃ ಅನ್ವಾಹಾರ್ಯಪಚನಂ ಪುರಸ್ತಾತ್ ಸಭ್ಯಾವಸಥ್ಯಾವೌಪಾಸನಂ ಚ ॥

ದಕ್ಷಿಣಕ್ಕೆ ಆ ಕೋಲನ್ನು ಎಸೆದು, ಕೈ ತೊಳೆದುಕೊಂಡು, ಗುಡಿಸಿದ ಜಾಗವನ್ನು ಅಗೆದು, (ದಹನದ ವೇದಿಕೆಗೆ ಅನುಕೂಲವಾಗುವಂತೆ), ನೀರನ್ನು ಚಿಮುಕಿಸಿ, ಚಿನ್ನದಚೂರುಗಳನ್ನು ಚೆಲ್ಲಿ(ಹಾಕಿ), ಅದರಮೇಲೆ ದಕ್ಷಿಣಾಗ್ರವಾಗಿ ದರ್ಭೆಗಳನ್ನು ಹರಡಿ, ಆ ದರ್ಭೆಗಳಮೇಲೆ ಯಾಜ್ಞಿಕ(ಯಜ್ಞಕ್ಕೆ ಬಳಸುವಂತಹ) ಸೌದೆಗಳಿಂದ ದಕ್ಷಿಣಾಗ್ರವಾಗಿ ದಾರುಚಿತಿಯನ್ನು (ವೇದಿಕೆ) ರಚನೆಮಾಡಿ, ಆ ವೇದಿಕೆಯಿಂದ ಪೂರ್ವಭಾಗದಲ್ಲಿ ಆಹವನೀಯಾಗ್ನಿಯನ್ನು, ಪಶ್ಚಿಮಕ್ಕೆ ಗಾರ್ಹಪತ್ಯಾಗ್ನಿಯನ್ನೂ, ದಕ್ಷಿಣಕ್ಕೆ ಅನ್ವಾಹಾರ್ಯ ಪಚನಾಗ್ನಿಯನ್ನೂ(ದಕ್ಷಿಣಾಗ್ನಿ), ಪೂರ್ವದಲ್ಲೇ ಸಭ್ಯ–ಆವಸಥ್ಯ–ಔಪಾಸನಾಗ್ನಿಗಳನ್ನೂ ಇಡಬೇಕು ॥

*** ಗೋಪಾಲಭಾಷ್ಯಂ –**

ಶಾಖಾಮುದಸ್ಯ ಅಪ ಉಪಸ್ಪೃಶೇತ್ । ಉದ್ಧತ್ಯಾವೋಕ್ಷೇತಿ ಗೃಹ ವಿಹರಣ ಪಕ್ಷಾರ್ಥಂ ವಚನಂ । ಇತರತ್ರ ಪ್ರಾಗೇವ ಕೃತತ್ವಾತ್ । ಮಧ್ಯೇ ಇತಿ ದಕ್ಷಿಣಾಗ್ನಿಸ್ಥಾನಸ್ಯ ಉತ್ತರತ ಇತ್ಯಭಿಪ್ರಾಯಃ । ಯಾಜ್ಞಿಯಾನಿ – ಯಜ್ಞವೃಕ್ಷಾವಯವ ಭೂತಾನಿ । ಕಾಷ್ಠಾನಿ – ಶುಷ್ಕದಾರೂಣಿ । ತೈರ್ದಹನ ಪರ್ಯಾಪ್ತಾಂ ಚಿತಾಂ ಚಿತ್ವಾ ಪೂರ್ವವದಗ್ನೀನ್ ಸ್ಥಾಪಯತಿ ॥

ಗುಡಿಸಿದ ಆ ಕೋಲನ್ನು ಎಸೆದು ಕೈತೊಳೆಯಬೇಕು । ಸ್ವಚ್ಛಗೊಳಿಸಿದ ಜಾಗವನ್ನು ಅಗೆಯುವುದೆಂಬುದು, ಗೃಹವಿಹರಣ ಪಕ್ಷದಲ್ಲಿ । ಇನ್ನು ಬೇರೇ ಪಕ್ಷದಲ್ಲಿ, ಮೊದಲೇ ಈ ಕರ್ಮವು ಆಗಿರುತ್ತದೆಯಾದ್ದರಿಂದ । ಮಧ್ಯೇ ಎಂಬ ಪದಕ್ಕೆ – ದಕ್ಷಿಣಾಗ್ನಿಯನ್ನು ಇಡುವಸ್ಥಾನದ ಉತ್ತರಕ್ಕೆ ಎಂದು ಅಭಿಪ್ರಾಯವು । ಯಜ್ಞೀಯವೃಕ್ಷದ ತುಂಡುಗಳಾದ, ಒಣಗಿದ ಕಟ್ಟಿಗೆಗಳಿಂದ ದಹನಕ್ಕೆ ಸಾಕಾಗುವ ಚಿತೆಯನ್ನು ಮಾಡಿ, ಹಿಂದಿನಂತೆಯೇ ಅಗ್ನಿಗಳನ್ನು ಇಡಬೇಕು ॥

*** ಕಪರ್ದಿಭಾಷ್ಯಂ –**

ಅಸಂಸ್ಕೃತತ್ವಾದ್ದೇಶಸ್ಯ ಹಿರಣ್ಯಶಕಲ ನಿಧಾನಂ ಚೇತಿ ಸಾಮಾನ್ಯಾತ್ । ಯಥಾ ಶವಂ ದಹತಿ ತಥಾ ಕಾಷ್ಠೈಃ ಸಂಚಿನೋತಿ । ದಾರುಚಿತೇಃ

ಪುರಸ್ತಾದಾಹವನೀಯಮಿತ್ಯಾದಿ । ಇತರಸ್ಮಿನ್ ಪಕ್ಷೇಗ್ನೀನಾಂ ಮಧ್ಯೇ ಹಿರಣ್ಯಶಕಲ ನಿಧಾನಾದಿ ಕ್ರಿಯತೇ ನ್ಯುಪ್ತತ್ವಾದಗ್ನೀನಾಮ್ ॥

ಸ್ಮಶಾನದೇಶವು ಅಸಂಸ್ಕೃತದೇಶವಾಗಿರುವುದರಿಂದ, ಚಿನ್ನದ ಕಡ್ಡಿಯನ್ನು ಇಡುವುದು ಸಾಮಾನ್ಯವಿಷಯವು । ಹೇಗೆ ಶವವು ಸಂಪೂರ್ಣವಾಗಿ ಸುಡುವುದೋ ಹಾಗೆ ಕಾಷ್ಠಗಳಿಂದ ಚಿತೆಯನ್ನು ರಚಿಸಬೇಕು । ಚಿತೆಯ ಪೂರ್ವದಿಕ್ಕಿಗೆ ಆಹವನೀಯ ಮುಂತಾದ ಅಗ್ನಿಗಳನ್ನು ಯಥಾವಿಧಿಯಾಗಿ ಇಡಬೇಕು । ಗೃಹವಿಹರಣ ಪಕ್ಷದಲ್ಲಿ ಅಗ್ನಿಗಳ ಮಧ್ಯೆ ಚಿನ್ನದಕಡ್ಡಿಗಳನ್ನು ಇಡುವುದೇ ಮುಂತಾದ ವಿಧಿಗಳನ್ನು ಮಾಡಬೇಕು । ಏಕೆಂದರೆ ಮೊದಲೇ ಅಗ್ನಿಯನ್ನು ವಿಹರಣ ಮಾಡಿ ಇಡಲ್ಪಟ್ಟಿದೆಯಾದ್ದರಿಂದ ॥

*** ಸೂತ್ರಂ – 9 (ಇಬ್ಬರಿಗೂ)**

ದಕ್ಷಿಣಾ ಪ್ರಾಗಗ್ರೈಃ ದರ್ಭೈಃ ಅಗ್ನೀನ್ ದಾರುಚಿತಿಂ ಚ ಪರಿಸ್ತೀರ್ಯ ದಕ್ಷಿಣತಃ ಪಶ್ಚಾದ್ವಾ ದರ್ಭಾನ್ ಸಂಸ್ತೀರ್ಯ ದಕ್ಷಿಣಾಪ್ರಾಂಚಿ ಏಕೈಕಶಃ ಪಾತ್ರಾಣಿ ಪ್ರಯುನಕ್ತಿ ॥

ದಕ್ಷಿಣಾಗ್ರವಾಗಿಯೂ, ಪೂರ್ವಾಗ್ರವಾಗಿಯೂ ದರ್ಭೆಗಳಿಂದ ಅಗ್ನಿಗಳನ್ನು ಮತ್ತೂ ವೇದಿಕೆಯನ್ನೂ ಪರಿಸ್ತರಣಮಾಡಿ, ಅದರ ದಕ್ಷಿಣಭಾಗದಲ್ಲೋ, ಪಶ್ಚಿಮಭಾಗದಲ್ಲೋ ದರ್ಭೆಗಳನ್ನು ಹರಡಿ, ದಕ್ಷಿಣಕ್ಕೆ ಮುಗಿಯುವಂತೆ ಒಂದೊಂದಾಗಿ ಪಾತ್ರೆಗಳನ್ನು ಆಸಾದನ (ಇಡಬೇಕು) ಮಾಡಬೇಕು ॥

*** ಗೋಪಾಲಭಾಷ್ಯಂ –**

ದಕ್ಷಿಣಾಗ್ರೈಃ ಪ್ರಾಗಗ್ರೈಶ್ಚ ಪ್ರಸವ್ಯಂ ಪರಿಸ್ತೃಣೀಯಾತ್ । ಸರ್ವಾನಗ್ನೀನ್ ಪರಿಸ್ತೀರ್ಯ ದಾರುಚಿತಿಂ ಪರಿಸ್ತೃಣಾತಿ । ದಕ್ಷಿಣತೋ ವಿಹಾರಸ್ಯ ಪಶ್ಚಾದ್ವಾ ದರ್ಭೇಷು ಪಾತ್ರಾಣಿ ಏಕೈಕಶೋನ್ಯಂಚಿ ಪ್ರಯುಂಜ್ಯಾತ್ । ವಿಧಿ ನಿರ್ದಿಷ್ಟಾನಾಂ ಏವ ಪಾತ್ರಾಣಾಂ ಪ್ರಯೋಗ ಇತಿ ದ್ರಷ್ಟವ್ಯಂ ॥

ದಕ್ಷಿಣಾಗ್ರ ಹಾಗೂ ಪೂರ್ವಾಗ್ರಗಳಿಂದ ದರ್ಭೆಗಳನ್ನು ಅಪ್ರದಕ್ಷಿಣೆಯಾಗಿ ಪರಿಸ್ತರಣವನ್ನು ಹಾಕಬೇಕು । ಎಲ್ಲಾ ಅಗ್ನಿಗಳಿಗೂ ಪರಿಸ್ತರಣವನ್ನು ಹಾಕಿ, ನಂತರ ಚಿತೆಗೆ ಪರಿಸ್ತರಣವನ್ನು ಹಾಕಬೇಕು । ವಿಹಾರದ ದಕ್ಷಿಣಕ್ಕೋ ಅಥವಾ ಪಶ್ಚಿಮಕ್ಕೋ ದರ್ಭೆಗಳಮೇಲೆ ಪಾತ್ರೆಗಳನ್ನು ಒಂದೊಂದಾಗಿ ಕೆಳಮುಖವಾಗಿ ಇಡಬೇಕು । ಇಲ್ಲಿ ವಿಧಿಯು ಹೇಳಿದಂತಹ ಪಾತ್ರೆಗಳ ಪ್ರಯೋಗವನ್ನೇ ಮಾಡಬೇಕೆಂದು ತಿಳಿಯಬೇಕು ॥

*** ಕಪರ್ದಿಭಾಷ್ಯಂ –**

ದಾರುಚಿತೇಃ ದಕ್ಷಿಣತಃ ಪಶ್ಚಾದ್ವಾ ದರ್ಭಾನ್ ಸಂಸ್ತೀರ್ಯ । ಪಿಂಡಪಿತೃಯಜ್ಞವತ್ ಪಾತ್ರಾಣಿ ಪ್ರಯುಜ್ಯಂತೇ ॥

ಚಿತೆಯ ದಕ್ಷಿಣಕ್ಕೋ ಅಥವಾ ಪಶ್ಚಿಮಕ್ಕೋ ದರ್ಭೆಗಳನ್ನು ಹರಡಿ । ಪಿಂಡಪಿತೃ ಯಜ್ಞದ ವಿಧಾನದಂತೆ ಪಾತ್ರೆಗಳನ್ನು ಕರ್ಮದಲ್ಲಿ ಉಪಯೋಗಿಸಬೇಕು(ಇಡಬೇಕು) ॥

*** ಸೂತ್ರಂ – 10 (ಇಬ್ಬರಿಗೂ)**

ರಜ್ಜೂರವಕೃತ್ಯಾಸಂದೀಂ ಅಪವಿಧ್ಯಂತಿ ॥

ಹಗ್ಗಗಳನ್ನು ಬಿಚ್ಚಿ, ಚೆಟ್ಟವನ್ನು ನಾಶಗೊಳಿಸಬೇಕು ॥

*** ಗೋಪಾಲಭಾಷ್ಯಂ –**

ರಜ್ಜೂರಿತ್ಯಾಸಂದೀ ವಿವಾನಾರ್ಥಾ ರಜ್ಜವ ಉಚ್ಯಂತೇ । ತಾ ಅವಕೃತ್ಯ ಫಲಕ ಸಮೀಪೇ ವ್ಯವಚ್ಛಿದ್ಯ ಆಸಂದ್ಯಾದಾರೂಢೇ ಪರಾಸ್ಯತಿ । ಇಹ ರಜ್ಜೂನಾಂ ಭೂತಲ ಸಂಯೋಗ ಏವ ವಿಶೇಷ ಇತ್ಯರ್ಥಃ । ನ ತ್ವತ್ರ ಪ್ರೇತಸ್ಯ ವಿಚಾಲನಮಿತ್ಯಾಹ ॥

ರಜ್ಜು ಎಂದರೆ – ಚೆಟ್ಟವು ಗಟ್ಟಿಯಾಗಿರುವಂತೆ ಹಾಗೂ ಶವವನ್ನು ಒಯ್ಯಲು ಯೋಗ್ಯವಾಗಿರುವಂತೆ ಮಾಡುವ ಹಗ್ಗವು । ಆ ಹಗ್ಗಗಳನ್ನು ಬಿಚ್ಚಿ, ಚೆಟ್ಟದ ಹತ್ತಿರವೇ

ತುಂಡರಿಸಿ, ಚೆಟ್ಟವನ್ನು ನಾಶಗೊಳಿಸಿ, ಎಸೆಯುತ್ತಾರೆ । ಇಲ್ಲಿ ಹಗ್ಗಗಳು ಭೂಮಿಯನ್ನು ಸ್ಪರ್ಶಿಸಿರುತ್ತದೆ ಎಂಬುದು ವಿಶೇಷ (ಹಗ್ಗಗಳನ್ನು ಭೂಮಿಯಲ್ಲಿ ಸೇರಿಸಬೇಕು, ಆದರೆ ಮೃತದೇಹವನ್ನು ಅಳ್ಳಾಡಿಸಬಾರದು) ॥

*** ಕಪರ್ದಿಭಾಷ್ಯಂ –**

ರಜ್ಜೂರವಕೃತ್ಯ ಛಿತ್ವಾ ಆಸಂದೀಮಪವಿಧ್ಯಂತಿ ನಾಶಯಂತಿ ॥

ಹಗ್ಗವನ್ನು ಬಿಚ್ಚಿ, ತುಂಡರಿಸಿ, ಚೆಟ್ಟವನ್ನು ನಾಶಗೊಳಿಸಿ, ಎಸೆಯುತ್ತಾರೆ ॥

*** ಸೂತ್ರಂ – 11 (ಇಬ್ಬರಿಗೂ)**

ರಜ್ಜುಷು ಚೈವ ಕೃಷ್ಣಾಜಿನೇ ಚೋತ್ತಾನಃ ಶೇತೇ ॥

ಹಗ್ಗದ ಮೇಲೂ, ಕೃಷ್ಣಾಜಿನದ ಮೇಲೂ, ಮೇಲ್ಮುಖವಾಗಿ ಶವವನ್ನು ಮಲಗಿಸಬೇಕು ॥

*** ಸೂತ್ರಂ – 12 (ಇಬ್ಬರಿಗೂ)**

ಏಕಪವಿತ್ರೇಣ ಪ್ರೋಕ್ಷಣೀಸ್ಸಂಸ್ಕೃತ್ಯ । ಮೃತಂ ಪಾತ್ರಾಣಿ ದಾರುಚಿತಿಂ ಚ ಪ್ರೋಕ್ಷ್ಯಾಜ್ಯಂ ನಿರೂಪ್ಯಾಥಾಜ್ಯಾನಿ ಗೃಹ್ಣಾತಿ ದರ್ಶಪೂರ್ಣಮಾಸವತ್ ತೂಷ್ಣೀಮ್ ॥

1 ದರ್ಭೆಯ ಪವಿತ್ರದಿಂದ ಪ್ರೋಕ್ಷಣೀ ಪಾತ್ರೆಯ ಸಂಸ್ಕಾರಮಾಡಿ, ಆ ಜಲದಿಂದ ಶವವನ್ನು – ಪಾತ್ರೆಗಳನ್ನು – ದಾರುಚಿತೆಯನ್ನು ಪ್ರೋಕ್ಷಿಸಿ, ತುಪ್ಪವನ್ನು ದರ್ಶಪೂರ್ಣಮಾಸದಂತೆ ಕ್ರಮವಾಗಿ, ಆದರೆ ಇಲ್ಲಿ ಅಮಂತ್ರಕವಾಗಿ ತುಪ್ಪವನ್ನು ಗ್ರಹಣಮಾಡಬೇಕು ॥

*** ಗೋಪಾಲಭಾಷ್ಯಂ –**

ಏಕಪವಿತ್ರಂ ಪುರಸ್ತಾತ್ಕೃತಂ । ತದಭಾವೇತು ಇದಾನೀಂ ಕ್ರಿಯತೇ । ಪಾತ್ರಾಣಿ ಪರ್ಯಾವರ್ತ್ಯ ಸಕೃತ್ ಸಕೃತ್ ಪ್ರೋಕ್ಷಣಂ ಮೃತಾದಿ ತ್ರಯಸ್ಯ । ಆಜ್ಯಸ್ಯಚಾತ್ರ

ನಿರ್ವಾಪನಾದ್ಯಪಿ ತೂಷ್ಣೀಂ ಕ್ರಿಯತೇ । ಇಹ ನ ಕಾಮ್ಯ ಗ್ರಹಣಂ ಪಶುಕಾಮಸ್ಯೇತ್ಯುಕ್ತಂ । ಕಿಂ ತು ತತಃ ಪೂರ್ವೋತ್ತರಯೋರ್ನಿತ್ಯಯೋಃ ಏವಾನ್ಯತರಃ ಕಲ್ಪಃ । ನ ತು ತಯೋಃ ಚತುರವತ್ತಿ ಪಂಚಾವತ್ತಿಷು ವ್ಯವಸ್ಥೇತಿ ಪ್ರಕೃತಾವೇವ ದರ್ಶಿತಂ ॥

ಮೊದಲು ಮಾಡಿದ 1 ದರ್ಭೆಯ ಪವಿತ್ರವನ್ನು ಇಟ್ಟುಕೊಳ್ಳಬೇಕು । ಇಲ್ಲದಿದ್ದರೆ ಈಗ ಮಾಡಿಕೊಳ್ಳಬೇಕು । ಪಾತ್ರೆಗಳನ್ನು ಮತ್ತೆ ಮೇಲ್ಮುಖಮಾಡಿ, ಪ್ರತಿಯೊಂದು ಪಾತ್ರೆಗೂ ಒಮ್ಮೆಮಾತ್ರ ಪ್ರೋಕ್ಷಿಸಬೇಕು, ಮೊದಲು ಮೃತನನ್ನು ಆಮೇಲೆ ದರ್ವಿ, ಆಜ್ಯಗಳನ್ನು ಪ್ರೋಕ್ಷಿಸಿದ ನಂತರ । ಆಜ್ಯ ಸಂಸ್ಕಾರವನ್ನು ಅಮಂತ್ರಕವಾಗಿ ಮಾಡ ಬೇಕು । ಇಲ್ಲಿ **ಪಶುಕಾಮಸ್ಯ...,** ಎಂದು ಹೇಳಿದ ಕಾಮ್ಯಗ್ರಹಣವಿಲ್ಲ । ಆದರೆ ಅದಕ್ಕಿಂತ ಮೊದಲು ಮತ್ತು ಆಮೇಲೆ ಹೇಳಿದ ನಿತ್ಯಕರ್ಮಗಳಿಗೆ ಈ ಪಶುಕಾಮ ಕಲ್ಪವು । ಇಲ್ಲಿ ಚತುರವತ್ತಿ ಮತ್ತು ಪಂಚಾವತ್ತಿಗಳಿಗೆ ಹೇಳಿದ ವ್ಯವಸ್ಥಾವಿಧಿಯು ಇಲ್ಲಾ ಎಂಬುದನ್ನು ಮೊದಲೇ ನಾವು ತೋರಿಸಿದ್ದೇವೆ ॥

*** ಕಪರ್ದಿಭಾಷ್ಯಂ –**

ಏಕಪವಿತ್ರೇಣ ಪ್ರೋಕ್ಷಣೇ ಸಂಸ್ಕಾರಃ । ತೂಷ್ಣೀಂ ಸರ್ವಂ ದರ್ಶಪೂರ್ಣಮಾಸವತ್ । ವಾಕ್ಯಾಂತೇ ದರ್ಶಪೂರ್ಣಮಾಸವದಿತಿ ವಚನಾತ್ । ಪಾತ್ರಾಣಿ ಪರ್ಯಾವೃತ್ಯ ಮೃತಾದೀಂಸ್ತ್ರಿಃ ಪ್ರೋಕ್ಷತಿ । ಉಪದೇಶಸ್ಸಕೃದಿತಿ । ತ್ರಿರಿತ್ಯವಚನಾತ್ । ಅಥಾಜ್ಯಾನಿ ಗೃಹ್ಣಾತಿ । ಸರ್ಪಿರ್ಧಾನಸ್ಯ ಬಿಲಮಪಾವೃತ್ಯೇತ್ಯಾದಿ ಉತ್ಪವನಾಂತಂ ದರ್ಶವತ್ಕೃತ್ವಾ ಆಜ್ಯಾನಿ ಗೃಹ್ಣಾತಿ । ದರ್ಶಪೂರ್ಣಮಾಸವತ್ ತೂಷ್ಣೀಂ । ನ ಕಾಮ್ಯಗ್ರಹಣಂ । ಚತುರ್ಗೃಹೀತಾನಿ ಏವ ॥

ಒಂದೇ ಪವಿತ್ರದಿಂದ ಪ್ರೋಕ್ಷಣೇ ಸಂಸ್ಕಾರವು । ಅಮಂತ್ರಕವಾಗಿ ಎಲ್ಲವನ್ನು ದರ್ಶಪೂರ್ಣಮಾಸದ ವಿಧಿಯಂತೆ ಮಾಡಬೇಕು । ಏಕೆಂದರೆ, **ದರ್ಶಪೂರ್ಣಮಾಸದಂತೆ** ಎಂಬ ವಚನವು ವಾಕ್ಯದ ಕೊನೆಯಲ್ಲಿರುವುದರಿಂದ । ಪಾತ್ರೆಗಳನ್ನೆಲ್ಲಾ ಮೇಲ್ಮುಖ

ಮಾಡಿ, ಮೃತನನ್ನು ಮೊದಲುಗೊಂಡು 3 ಸಲ ಪ್ರೋಕ್ಷಣೆಯು । ಮಂತ್ರವನ್ನು ಒಮ್ಮೆ ಮಾತ್ರ ಹೇಳಬೇಕು । 3 ಸಲ ಮಂತ್ರವನ್ನು ಹೇಳಬೇಕೆಂದು ವಚನ (ವಿಧಿ) ವಿಲ್ಲದಿರುವು ದರಿಂದ । ತುಪ್ಪವನ್ನು ತೆಗೆದುಕೊಳ್ಳುತ್ತಾನೆ । ಸರ್ಪಿರ್ಧಾನಕ್ಕೆ(ಆಜ್ಯಪಾತ್ರೆಗೆ) ಮುಚ್ಚಿದ ತಟ್ಟೆಯನ್ನು ತೆಗೆದು....., ಮುಂತಾದ ಉತ್ತವನಾಂತದ ವರೆಗೆ ದರ್ಶದಂತೆ ಮಾಡಿ, ನಂತರ ಆಜ್ಯವನ್ನು ತೆಗೆದುಕೊಳ್ಳುತ್ತಾನೆ । ಎಲ್ಲಾ ಕ್ರಮಗಳು ದರ್ಶಪೂರ್ಣಮಾಸದಂತೆಯೇ ಆದರೆ ಇಲ್ಲಿ ಅಮಂತ್ರಕವಾಗಿ । ಕಾಮ್ಯಗ್ರಹಣೆಯು ಇಲ್ಲ । ಎಲ್ಲವೂ ಚತುರ್ಗೃಹೀತ ವಾಗಿಯೇ ॥

*** ಸೂತ್ರಂ – 13=50 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಅಗ್ನಿಹೋತ್ರೋಚ್ಛೇಷಣಂ ಅನ್ಯೇನ ದರ್ವ್ಯಾ ಸಂಸೃಜ್ಯ ಪಾತ್ರಾಣಿ ಪೂರಯತಿ ಯಾನ್ಯಾಸೇಚನವಂತಿ । ಅಭ್ಯುಕ್ಷತೀತರಾಣಿ ಅರಿಕ್ತತಯಾ ಇತಿ ವಿಜ್ಞಾಯತೇ ॥

ಅಗ್ನಿಹೋತ್ರದ ಉಳಿದ ಶೇಷವನ್ನು ಬೇರೊಂದು ಮೊಸರಿನಲ್ಲಿ ಸೇರಿಸಿ, ಯಾವಪಾತ್ರೆಗಳಲ್ಲಿ ಬಿಲಗಳಿವೆಯೋ(ಮೂತಿ) ಆ ಪಾತ್ರೆಗಳನ್ನು ತುಂಬಿಸಬೇಕು । ಉಳಿದ ಪಾತ್ರೆಗಳನ್ನು ಇವುಗಳಿಂದ ಪ್ರೋಕ್ಷಿಸಿ, ಅದನ್ನೇ ಖಾಲಿ ಇಲ್ಲವೆಂಬಂತೆ ತಿಳಿಯಬೇಕು ॥

*** ಗೋಪಾಲಭಾಷ್ಯಂ –**

ಅಗ್ನಿಹೋತ್ರೋಚ್ಛೇಷಣಂ ನಿಹಿತಂ ಪಾತ್ರಪೂರಣಾಭ್ಯುಕ್ಷಣ ಪರ್ಯಾಪ್ತೇನ ದರ್ವ್ಯಾ ಸಂಸೃಜ್ಯ ತೇನ ಆಸೇಚನವಂತಿ – ಬಿಲವಂತಿ ಪಾತ್ರಾಣಿ ಪೂರಯತಿ । ಅಥ ಇತರಾಣಿ ಬಿಲರಹಿತಾನಿ ತು ಅಭ್ಯುಕ್ಷತಿ ತದುಭಯಂ ಅರಿಕ್ತತಾರ್ಥಮಿತ್ಯರ್ಥವಾದಃ । ಅತ ಏವ ಲಿಂಗಾತ್ತಿಸ್ರ್ಯಾಣಾಂ ಸ್ರುಚಾಂ ನ ದರ್ವ್ಯಾ ಪೂರಣಮಿಶ್ಯತೇ । ಆಜ್ಯವತ್ವೇನ ರಿಕ್ತತ್ವಾಭಾವಾತ್ । ಉಚ್ಛೇಷಣ ಅಭಾವೇತು ಕೇವಲ ದರ್ವ್ಯಾ ಪೂರಣಾಭ್ಯುಕ್ಷಣೇ ಕಾರ್ಯೇ । ಯಥಾ ಅವದಾನ ನಾಶೇ ಕೇವಲೇನಾಜ್ಯೇನ ಅಕ್ಷ್ಣಾಂಜನಂ ಕ್ರಿಯತೇ ॥

ಇಟ್ಟಂತಹ ಅಗ್ನಿಹೋತ್ರದ ಉಳಿದ ಶೇಷವನ್ನು ಪಾತ್ರೆಗೆ ತುಂಬಿಸಿ(ಎಲ್ಲ ಪಾತ್ರೆಗೂ) ಪ್ರೋಕ್ಷಣೆ ಮಾಡುವುದಕ್ಕೆ ಸಾಕಾಗುವಂತೆ ಮೊಸರಿನೊಡನೆ ಬೆರೆಸಿ, ಅದರಿಂದ ಬಿಲವುಳ್ಳ ಹಾಗೂ ಆಸೇಚನ ಮಾಡುವ ಯಜ್ಞಪಾತ್ರೆಗಳಿಗೆ ತುಂಬಿಸಬೇಕು । ಇನ್ನುಳಿದ ಬಿಲವಿಲ್ಲದ ಪಾತ್ರೆಗಳಿಗೆ ಕೇವಲ ಪ್ರೋಕ್ಷಣೆ ಮಾಡಬೇಕು । ಈ ಎರಡು ರೀತಿಯ ಪಾತ್ರೆಗಳಿಗೂ ಪೂರಣ–ಪ್ರೋಕ್ಷಣೆ ಮಾಡುವುದು, ಯಾವ ಪಾತ್ರೆಯೂ ಪೂರಣ–ಪ್ರೋಕ್ಷಣೆಯಿಂದ ಹೊರತಾಗದೇ ಇರಲಿ, ಎಂದು ಅರ್ಥವಾದವನ್ನು ಹೇಳಿದೆ । ಆದ್ದರಿಂದ ಈ ಲಿಂಗ(ಸೂಚನೆ)ವನ್ನು ಅನುಸರಿಸಿ, ಮೂರು ಸ್ರುಕ್‌ಗಳಿಗೂ(ಜುಹೂ–ಉಪಭೃತ್–ಧ್ರುವಾ) ಮೊಸರಿನಿಂದ ಪೂರಣೆ(ತುಂಬಿಸುವುದು) ಮಾಡುವುದು ಇಲ್ಲ । ಏಕೆಂದರೆ – ಆ ಮೂರೂ ಸ್ರುಕ್ಕುಗಳೂ ಆಜ್ಯದಿಂದಲೇ ಪೂರ್ಣವಾಗಿರುವುದರಿಂದ ರಿಕ್ತತೆಯು(ಖಾಲಿ) ಇಲ್ಲ । ಉಚ್ಛೇಷಣ(ಅಗ್ನಿಹೋತ್ರದ ಉಳಿದ ಹವಿಸ್ಸು)ವು ಇಲ್ಲದಿದ್ದರೆ, ಕೇವಲ ಪೂರಣ, ಅಭ್ಯುಕ್ಷಣಗಳನ್ನು ಮಾಡಬೇಕು । ಹೇಗೆ ಅವದಾನದ(ಹೋಮಕ್ಕಾಗಿ ತೆಗೆದುಕೊಂಡ) ಹವಿಸ್ಸು ನಾಶವಾದರೆ ಕೇವಲ ಆಜ್ಯದಿಂದ **ಅಕ್ಷದ ಅಂಜನವನ್ನು**(ಕಣ್ಣಿಗೆ ತುಪ್ಪವನ್ನು ತಿಕ್ಕಿಕೊಳ್ಳುವಿಕೆ) ಮಾಡಬೇಕೋ ಹಾಗೆಯೇ ಇಲ್ಲೂ ಸಹಾ ಅಗ್ನಿಹೋತ್ರದ ಶೇಷವು ಇಲ್ಲದಿದ್ದರೆ ಕೇವಲ ಮೊಸರಿನಿಂದ ಪೂರಣ–ಪ್ರೋಕ್ಷಣಗಳನ್ನು ಮಾಡಬೇಕು ॥

*** ಕಪರ್ದಿಭಾಷ್ಯಂ –**

ಅಗ್ನಿಹೋತ್ರೋಚ್ಛೇಷಣ ಸಂಸೃಷ್ಟೇನ ದಧ್ನಾ ಪಾತ್ರಾಣಿ ಪೂರಯತಿ ಬಿಲವಂತಿ । ಇತರಾಣಿ ಅಬಿಲವಂತಿ ಅಭ್ಯುಕ್ಷತಿ ॥

ಅಗ್ನಿಹೋತ್ರದ ಉಳಿದ ಹವಿಸ್ಸನ್ನು ಬೆರೆಸಿದ ಮೊಸರನ್ನು ಬಿಲವುಳ್ಳ ಪಾತ್ರೆಗಳಿಗೆ ತುಂಬಬೇಕು । ಇನ್ನು ಬೇರೇ ಬಿಲವಿಲ್ಲದ ಪಾತ್ರೆಗಳಿಗೆ ಕೇವಲ ಪ್ರೋಕ್ಷಣೆ ಮಾಡ ಬೇಕು ॥

4ನೇ ಖಂಡ

(ಹಸುವಿನ ಅವಶ್ಯಕತೆಯ ವಿಚಾರ – ಮಹಿಳೆಯ ಭಾಗವಹಿಸುವಿಕೆಯ ವಿಚಾರ)

*** ಸೂತ್ರಂ – 1 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಅಥೈನಮುದರೇ ವಿದಾರ್ಯ ನಿರಾಂತ್ರಂ ನಿಷ್ಪುರೀಷಂ ಕೃತ್ವಾವಟೇ ಪುರೀಷಮವದಾಯ ಪ್ರಕ್ಷಾಳ್ಯ ಪ್ರತ್ಯವಧಾಯ ಸರ್ಪಿಷಾ ಪೂರಯತೀತಿ ಶಾಟ್ಯಾಯನಕಮ್ ॥

ಆಮೇಲೆ ಈ ದೇಹವನ್ನು ಸೀಳಿ, ಕರುಳನ್ನು ತೆಗೆದು, ಮಲವನ್ನು ತೆಗೆದು, ಗುಂಡಿಮಾಡಿ ಅಲ್ಲಿ ಮಲವನ್ನು ಹಾಕಿ, ಕೈತೊಳೆದು, ಕರುಳನ್ನು ತೊಳೆದು ಯಥಾಸ್ಥಾನದಲ್ಲಿ ಕರುಳನ್ನು ಇಟ್ಟು, ಅದರಲ್ಲಿ ತುಪ್ಪವನ್ನು ತುಂಬಬೇಕು ಎಂದು ಶಾಟ್ಯಾಯನ ಬ್ರಾಹ್ಮಣದಲ್ಲಿ ಹೇಳಿದೆ ॥

*** ಗೋಪಾಲಭಾಷ್ಯಂ –**

ಯೇನಂ ಪ್ರೇತಂ ಉದರೇ ವಿದಾರ್ಯ, ವಿಪಾಟ್ಯ, ತಸ್ಯ ಆಂತ್ರಾಣಿ ಪುರೀಷಂ ಚ ನಿಗೃಹ್ಯ, ಪುರೀಷಮವಟೇ ನಿಧಾಯ । ತತಃ ಆಂತ್ರಾಣಿ, ಪ್ರಕ್ಷಾಳ್ಯ, ಪುನರುದರೇ ಅವಧಾಯ । ಸರ್ಪಿಷಾ ಆಂತ್ರಾಣ್ಯಭಿಪೂರ್ಯ । ಪುನಸ್ಸೀವ್ಯೇತ್ ।

ಈ ಮೃತನ ಹೊಟ್ಟೆಯನ್ನು ಸೀಳಿ, ಸಂಪೂರ್ಣವಾಗಿ ಅಗಲಮಾಡಿ, ಹೊಟ್ಟೆಯಲ್ಲಿರುವ ಗುದ ಮತ್ತು ಮಲವನ್ನು ತೆಗೆದು, ಮಲವನ್ನು ಮರದಕೆಳಗೆ ಹುದುಗಿಸಿ । ನಂತರ ಗುದವನ್ನು ತೊಳೆದು, ಮತ್ತೆ ಅದರ ಜಾಗದಲ್ಲಿ ಇಟ್ಟು । ತುಪ್ಪದಿಂದ ಆ ಗುದದ್ವಾರವನ್ನು ತುಂಬಿಸಿ । ಮತ್ತೆ ಹೊಲಿಯಬೇಕು ॥

*** ತಥಾಹ ಬೋಧಾಯನಃ (ಪಿ–ಪ್ರ1, ಖಂ2, ಸೂ6) –**

ನಿಷ್ಪುರೀಷಂ ಕೃತ್ವಾ ಅದ್ಭಿಃ ಪ್ರಕ್ಷಾಳ್ಯ, ಸರ್ಪಿಷಾಂತ್ರಾಣೆ ಪೂರಯಿತ್ವಾ ದರ್ಭೈಃ ಸಂಸೀವ್ಯತೀತಿ ॥

ಬೋಧಾಯನರು ಈ ವಿಷಯವನ್ನು ಮೃತನ ಮಲವು ಇಲ್ಲದಂತೆ ಮಾಡಿ ನೀರಿನಿಂದ ತೊಳೆದು, ತುಪ್ಪದಿಂದ ಆ ಗುದದ್ವಾರವನ್ನು ತುಂಬಿಸಿ, ದರ್ಭೆಯಿಂದ ಹೊಟ್ಟೆಯನ್ನು ಹೊಲೆಯಬೇಕು ಎಂದು ಹೇಳಿದ್ದಾರೆ ॥

*** ಕಪರ್ದಿಭಾಷ್ಯಂ –**

ಮೃತಸ್ಯ ಉದರಂ ಛಿತ್ವಾ, ಆಂತ್ರಾಣ್ಯುತ್ಛಿದ್ಯ, ಮೂತ್ರಪುರೀಷೇ ಅಪನೀಯ, ಅವಟೇ ನಿಕ್ಷಿಪ್ಯ । ತಾನಿ ಆಂತ್ರಾಣಿ ಪ್ರಕ್ಷಾಳ್ಯ, ಪುನಃ ಕ್ಷಿಪ್ತ್ವಾ । ಸರ್ಪಿಷಾ ಪೂರಯಿತ್ವಾ, ಪುನಸ್ಸೀವ್ಯತಿ ॥

ಮೃತನ ಹೊಟ್ಟೆಯನ್ನು ಸೀಳಿ, ಗುದಭಾಗವನ್ನು ಕಿತ್ತುತೆಗೆದು, ಮಲಮೂತ್ರಗಳನ್ನೆಲ್ಲಾ ತೆಗೆದು, ಮರದಬುಡದಲ್ಲಿ ಹೂತು । ಆ ಗುದದ್ವಾರವನ್ನು ತೊಳೆದು, ಮತ್ತೆ ಅದರ ಜಾಗದಲ್ಲಿ ಅದನ್ನು ಇಟ್ಟು । ತುಪ್ಪದಿಂದ ತುಂಬಿಸಿ ಮತ್ತೆ ಹೊಲಿಯಬೇಕು ॥

*** ಸೂತ್ರಂ – 2 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಅಪಿ ವಾ ನ ನಿಷ್ಪುರೀಷಂ ಕುರ್ಯಾತ್ । ಯದಿ ಕುರ್ಯಾತ್ ಪ್ರಜಾಹಾಸ್ಯ ಕ್ಷ್ವೇಧುಕಾ ಭವಂತೀತಿ ವಿಜ್ಞಾಯತೇ ॥

ಅಥವಾ ಮಲಾದಿಗಳನ್ನು ತೆಗೆಯಬಾರದು । ಒಂದುವೇಳೆ ಹಾಗೆಮಾಡಿದರೆ, ಇವನ ಸಂತತಿಯಲ್ಲೇ ಎಲ್ಲರೂ ಹಸಿವಿನಿಂದ ನರಳುತ್ತಾರೆ ಎಂದು ಇನ್ನೊಂದು ಕಡೆ ತಿಳಿದುಬರುತ್ತದೆ ॥

*** ಗೋಪಾಲಭಾಷ್ಯಂ –**

ಶಾಟ್ಯಾಯನೋಕ್ತ ಪ್ರಕಾರೇಣ ನೈಷ್ಪುರೀಶ್ಯೇ ಕೃತೇ ತಸ್ಯ ಪ್ರಜಾಕ್ಷ್ವೀಧುಕಾ ಕ್ಷುತ್ ಪೀಡಾಗ್ರಸ್ತ ಅನ್ನರಹಿತಾಸ್ಯಾದಿತಿ ನಿಂದಾರ್ಥವಾದ ಸಹಿತಸ್ತತ್ ಪ್ರತಿಷೇಧಃ ಶಾಖಾಂತರೇ ಶ್ರಯತೇ । ತಸ್ಮಾದ್ವಿದಾರಣಾದಿ ನ ಕರ್ತವ್ಯಂ । ತಥಾ ಚ ವಿಹಿತ ಪ್ರತಿಷಿದ್ಧತ್ವಾತ್ ವಿಕಲ್ಪಃ ॥

ಶಾಟ್ಯಾಯನ ಋಷಿಗಳು ಹೇಳಿದ ಪ್ರಕಾರ ಮಲಮೂತ್ರಗಳಿಲ್ಲದಂತೆ ಮಾಡಿದರೆ, ಮೃತನ ಸಂತತಿಯು ಹಸಿವಿನಿಂದ ಪೀಡೆಗೊಳಗಾಗಿ, ಅನ್ನವಿಲ್ಲದವರಾಗುತ್ತಾರೆ, ಎಂದು ನಿಂದಾರೂಪವಾದ ಅರ್ಥವಾದದಿಂದ ಮಲಮೂತ್ರವನ್ನು ತೆಗೆಯುವುದನ್ನು ಶಾಖಾಂತರದಲ್ಲಿ ನಿಷೇಧ ಮಾಡಿದೆ । ಆದ್ದರಿಂದ ಮೃತನ ಉದರವನ್ನು ಸೀಳುವುದು ಮುಂತಾದ ವಿಧಿಗಳನ್ನು ಮಾಡಬಾರದು । ಹೀಗೆ ಹೇಳಿದ್ದರಿಂದ ಒಂದುಕಡೆ ವಿಧಾನಮಾಡಿ, ಇನ್ನೊಂದುಕಡೆ ನಿಷೇಧ ಮಾಡಿರುವುದರಿಂದ ಇದನ್ನು ವಿಕಲ್ಪವಾಗಿ ಹೇಳಿದಂತಾಯಿತು ॥

*** ಕಪರ್ದಿಭಾಷ್ಯಂ –**

ಆಂತ್ರಾಣಾಮುತ್ಖೇದನಂ ಯದಿಕ್ರಿಯತೇ ಅಸ್ಯ ಮೃತಸ್ಯ ಪ್ರಜಾಃ ಕ್ಷುಧಾರ್ತಾ ಭವಂತೀತಿ ಶ್ರುತಿಃ । ಅತಃ ಅತ್ರ ವಿಕಲ್ಪಃ । ವಿಹಿತ ಪ್ರತಿಷಿದ್ಧತ್ವಾತ್॥

ಇವನ ಗುದದ್ವಾರವನ್ನು ಒಂದುವೇಳೆ ಕಿತ್ತು ತೆಗೆದರೆ, ಈ ಮೃತನ ಸಂತತಿಯವರು ಹಸಿವಿನಿಂದ ಬಳಲುತ್ತಾರೆಂದು ಶ್ರುತಿಯಿದೆ । ಆದ್ದರಿಂದ ಇಲ್ಲಿ ಈ ವಿಧಿಯುವಿಕಲ್ಪವು । ಏಕೆಂದರೆ ಒಂದುಕಡೆ ವಿಧಾನಮಾಡಿ ಇನ್ನೊಂದುಕಡೆ ನಿಷೇಧ ಮಾಡಿದ್ದರಿಂದ ॥

*** ಸೂತ್ರಂ – 3 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಅತ್ರ ರಾಜಗವೀಂ ಉಪಾಕರೋತಿ ಭುವನಸ್ಯಪತೇ ಇತಿ ಜರತೀಂ ಮೂರ್ಖಾಂ ತಜ್ಜಘನ್ಯಾಂ ಕೃಷ್ಣಾಂ ಕೃಷ್ಣಾಕ್ಷೀಂ ಕೃಷ್ಣವಾಲಾಂ ಕೃಷ್ಣಖುರಾಮ್ ॥

ಇಲ್ಲಿ, ರಾಜಗವಿಯನ್ನು(ಹಸು) ದರ್ಭೆಗಳಿಂದ ತಗುಲಿಸಿಕೊಂಡು(ಉಪಾಕರಣ), ಮೃತನ ಜೊತೆಯಲ್ಲಿ ಹೋಮಮಾಡಲು ಮೀಸಲಿಡುತ್ತಾನೆ, ಭುವನಸ್ಯಪತೇ..... ಎಂಬ ಮಂತ್ರದಿಂದ । ಆ ಹಸು, ವೃದ್ಧೆಯಾಗಿ – ತಂಟೆಕೋರಳಾಗಿ – ಅವಳ ತಾಯಿಗೆ ಕೊನೆಯ ಮಗುವಾಗಿ – ಕಪ್ಪಾಗಿ – ಕಪ್ಪುಕಣ್ಣಾಗಿ – ಕಪ್ಪುಬಾಲ – ಕಪ್ಪುಗೊರಸುಗಳಿಂದ ಕೂಡಿದವಳಾಗಿರಬೇಕು ॥

*** ಗೋಪಾಲಭಾಷ್ಯಂ –**

ಭುವನಸ್ಯಪತ ಇದಗ್ಂ ಹವಿಃ ಇತ್ಯೇತಾವಾನ್ ಮಂತ್ರಃ । ಅಗ್ನಯೇ ರಯಿಮತ ಇತ್ಯಸ್ಯ ಉತ್ತರತ್ರ ಉಪಯೋಗಾತ್ । ಜರತೀಂ – ಜೀರ್ಣಾಂ, ಮೂರ್ಖಾಂ – ದುಶ್ಶೀಲಾಂ, ತಜ್ಜಘನ್ಯಾಂ – ತಾದೃಶ್ಯಾಂ ಗವಿಜಾತಾಂ । ಜರತ್ಯಾಂ ಮೂರ್ಖಾಯಾಂ ಜಾತಾಮಿತಿ ಯಾವತ್ । ಕೃಷ್ಣಾಮಿತಿ ಸಿದ್ಧೇ, ಕೃಷ್ಣಾಕ್ಷೀಮಿತ್ಯಾದಿ ವಚನಂ । ಅಕ್ಷಿವಾಲಖುರೇಷು ವರ್ಣಾಂತರಯೋಗ ನಿವೃತ್ಯರ್ಥಂ । ತತಶ್ಚ ಪ್ರದೇಶಾಂತರೇ ವರ್ಣಾಂತರ ಅನುಶಂಗೋ ನ ದೋಷಾಯೇತಿ ಸಿದ್ಧಂ ಭವತಿ ॥

ಭವನಸ್ಯಪತ ಇದಂ ಹವಿಃ..... ಎಂಬಿಷ್ಟೇ ಮಂತ್ರವು । ಏಕೆಂದರೆ ಅಗ್ನಯೇ ರಯಿಮತೇ ಎಂಬ ಮಂತ್ರವನ್ನು ಮುಂದೆ ಪ್ರಯೋಗದಲ್ಲಿ ಹೇಳಿರುವುದರಿಂದ । ಜರತೀ ಎಂದರೆ ಸಂಪೂರ್ಣ ಮುದಿಯಾದ(ವಯಸ್ಸಾದ) – ಮೂರ್ಖಾ ಎಂದರೆ ದುಶ್ಶೀಲಳಾದ – ತಜ್ಜಘನ್ಯಾಂ ಎಂದರೆ ಇಂತಹಾ ಹಸುವಿನಿಂದ ಹುಟ್ಟಿದಂತಹದ್ದು । ಒಟ್ಟು ವಯಸ್ಸಾದ, ಕೆಟ್ಟನಡವಳಿಕೆಗಳಿರುವ(ಒರಟಾದ) ಹಸುವಿನಿಂದ ಹುಟ್ಟಿದ್ದು ಎಂದರ್ಥ । ಕೃಷ್ಣಾಂ ಎಂಬುದರಿಂದಲೇ ಕಪ್ಪಬಣ್ಣದ್ದು ಎಂದು ಸಿದ್ಧವಾಗಿದ್ದರೂ ಕೃಷ್ಣಾಕ್ಷೀ ಎಂದು ಮತ್ತೆ ಹೇಳಿರುವುದು । ಕಣ್ಣು, ಬಾಲ, ಮತ್ತು ಗೊರಸುಗಳಲ್ಲಿ ಕಪ್ಪುಬಣ್ಣ ಬಿಟ್ಟು ಬೇರೇ ಬಣ್ಣ ಇರಬಾರದೆಂದು ಅಲ್ಲಗಳೆಯಲು ಹೇಳಿದುದಾಗಿದೆ । ಇದರಿಂದ ಬೇರೆ ಭಾಗಗಳಲ್ಲಿ ಬೇರೇ ಬಣ್ಣಗಳ ಮಿಶ್ರಣವಿದ್ದರೂ ಅದು ದೋಷವುಳ್ಳದ್ದು ಆಗುವುದಿಲ್ಲವೆಂದು ಸಿದ್ಧವಾಗುತ್ತದೆ ॥

*** ಕಪರ್ದಿಭಾಷ್ಯಂ –**

ಅತ್ರ ರಾಜಗವೀಂ ಉಪಾಕರೋತಿ । ಭುವನಸ್ಯಪತ ಇತ್ಯರ್ಧರ್ಚೇನ । ಜರತೀಂ ವೃದ್ಧಾಂ ತಜ್ಜಘನ್ಯಾಂ ನ ಪುನಃ ಪ್ರಜಾಯಮಾನಾಂ ಏವಂ ಗುಣಯುಕ್ತಾಂ ಗಾಂ ॥

ಇಲ್ಲಿ, ರಾಜಗವಿಯನ್ನು ಉಪಾಕರಣ(ಹಸುವನ್ನು ಹವಿಸ್ಸಾಗಿ ಮಾಡುವಿಕೆ)ವನ್ನು ಮಾಡುತ್ತಾನೆ । ಭುವನಸ್ಯಪತ....., ಎಂಬ ಅರ್ಧಋಕ್ಕಿನಿಂದ । ವಯಸ್ಸಾದ, ಒರಟಾದ ಹಸುವಿನಿಂದ ಹುಟ್ಟಿದುದು, ಎಂದರ್ಥವೇ ಹೊರತು, ಈ ರಾಜಗವಿಯು(ಹಸು) ಆ ಲಕ್ಷಣಗಳನ್ನು ಹೊಂದಿರಬೇಕೆಂದು ಅರ್ಥವಲ್ಲ ॥

*** ಸೂತ್ರಂ – 4 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಅಪಿ ವಾಕ್ಷಿ ವಾಲ ಖುರಮೇವ ಕೃಷ್ಣಂ ಸ್ಯಾತ್ ॥

ಅಥವಾ, ಕಣ್ಣು, ಬಾಲ, ಗೊರಸುಗಳು, ಮಾತ್ರ ಕಪ್ಪಗಿದ್ದರೂ ಸಾಕು ॥

*** ಗೋಪಾಲಭಾಷ್ಯಂ –**

ಅಕ್ಷಿಣೀವಾಲಾಃ ಖುರಾಶ್ಚ ಅಕ್ಷಿವಾಲಖುರಂ । ದ್ವಂದ್ವಶ್ಚ ಪ್ರಾಣಿತೂರ್ಯಸೇನಾಂಗಾನಾಂ । (ಪಾಣಿನಿಸೂತ್ರ ಅ2, ಪಾ 4, ಸೂ 2) ಇತ್ಯೇಕವದ್ಭಾವಃ । ತದೇವಕೃಷ್ಣಸ್ಯಾತ್ ಇತ್ಯನೇನ ಕೃಷ್ಣಾಮಿತ್ಯಸ್ಯ ವ್ಯಪೋಹಃ । ಜರತೀತ್ವಾದಿಕಂ ತು ಸಮಾನಂ ॥

ಇಲ್ಲಿ, ಮೇಲೆ ಹೇಳಿದಂತೆ ಪಾಣಿನೀಯ ಸೂತ್ರದಿಂದ ಏಕವದ್ಭಾವವಾಗಿದೆ(ದ್ವಂದ್ವ ಸಮಾಸದಲ್ಲಿ ಪ್ರಾಣ್ಯಂಗವಾಚಕ ಪದಗಳು ಹಾಗೂ ವಾದ್ಯಂಗ ವಾಚಕ ಪದಗಳು ಹಾಗೂ ಸೇನಾಂಗ ವಾಚಕ ಪದಗಳು ಪರಸ್ಪರ ಒಟ್ಟುಗೂಡಿ ಒಂದೇ ಅರ್ಥವನ್ನು ಕೊಡುವ ಅರ್ಥವಾಗುತ್ತದೆ) । ಇವುಗಳೇ ಕಪ್ಪಾಗಿರಬೇಕೆಂದು ಹೇಳಿದ್ದರಿಂದ ಸಂಪೂರ್ಣ

ಕಪ್ಪುಬಣ್ಣದ ರಾಜಗವಿಯನ್ನು(ಹಸು) ಅಲ್ಲಗಳೆದಿದೆ । ಇನ್ನು ವಯಸ್ಸಾದ, ಒರಟುಸ್ವಭಾವದ ಹಸುವಿಗೆ ಹುಟ್ಟಿದ್ದು ಎಂಬುದು ಸಮಾನವು ॥

*** ಸೂತ್ರಂ – 5 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ತಾಂ ಜ್ಞಾತಯೋऽನ್ವಾರಭಂತೇ ॥

ಆ ಹಸುವನ್ನು ಜ್ಞಾತಿಗಳು ಜೊತೆಯಲ್ಲಿ ಮುಟ್ಟಿಕೊಳ್ಳುತ್ತಾರೆ ॥

*** ಗೋಪಾಲಭಾಷ್ಯಂ –**

ಜ್ಞಾತಯಃ ಸಕುಲ್ಯಾಃ ತಾಂ ಅಗ್ನಿದೇನ ಉಪಾಕೃತಾಂ ಅನ್ವಾರಭಂತೇ ॥ (ಅಥಾಸ್ಮಿನ್ ಅನ್ವಾರಂಭಣೇ ನಿಯಮವಿಶೇಷಂ ವದನ್ ಅನ್ಯತ್ರಾಪಿ ತಸ್ಯಾನುವೃತ್ತಿಮಾಹ –) ॥

ಜ್ಞಾತಿಗಳು ಮತ್ತು ಅವನ ಕುಲದವರು ಹಾಗೂ ಮೃತನಿಗೆ ಅಗ್ನಿಯನ್ನು ಕೊಡುವ ಕರ್ತೃವು ಉಪಾಕರಣ ಮಾಡಿದ ಆ ರಾಜಗವಿಯನ್ನು ಅನುಸರಿಸಿ(ಹಿಂಬಾಲಿಸಿ) ಹೋಗುತ್ತಾರೆ । (ಇಲ್ಲಿ ಈ ರಾಜಗವಿಯ ಅನುಸರಣೆಯ ನಿಯಮ ವಿಶೇಷವನ್ನು ಹೇಳುತ್ತಾ, ಬೇರೇ ಕಡೆಯಲ್ಲಿಯೂ ಇದರ ಅನುವೃತ್ತಿಯನ್ನು(ಈ ನಿಯಮವನ್ನೇ ಅನುಸರಿಸಲು) ಹೇಳಿದ್ದಾರೆ ॥

*** ಸೂತ್ರಂ – 6 (ಆಹಿತಾಗ್ನಿ+ಅನಾಹಿತಾಗ್ನಿಗಳಿಬ್ಬರಿಗೂ)**

ಅಥಾತ್ಯಂತ ಪ್ರದೇಶಃ । ಧೂನ್ವನೇऽನ್ವಾರಂಭಣೇ ಸಂಗಾಹನೇ ಸಂಸರ್ಪಣ ಉದಕೋಪಸ್ಪರ್ಶನ ಆರೋಹಣ ಇತಿ ಸರ್ವತ್ರ ಕನಿಷ್ಠಪ್ರಥಮಾ ಅನುಪೂರ್ವಾ ಇತರೇ ಸ್ತ್ರಿಯೋऽಗ್ರೇ ॥

ಅತ್ಯಂತಪ್ರದೇಶ ಎಂದರೆ, ಸಾರ್ವತ್ರಿಕವಾದ ವಿಧಿಯು ಎಂದರ್ಥ । ಇಲ್ಲಿ, ಕೊಡಗುವಾಗಲೂ – ಮುಟ್ಟಿಕೊಳ್ಳುವಾಗಲೂ – ಮುಳುಗುವಾಗಲೂ –

ಸರಿದಾಡುವಾಗಲೂ – ನೀರಿನಬಳಿ ಹೋಗುವಾಗಲೂ – ಹತ್ತುವಾಗಲೂ, ಈ ಎಲ್ಲಾ ಸಂದರ್ಭಗಳಲ್ಲೂ ಕರ್ತೃಗಳಲ್ಲಿ ಚಿಕ್ಕವನೇ(ವಯಸ್ಸಿನಲ್ಲಿ) ಮುಂದೆಯಿರಬೇಕು, ಅನುಪೂರ್ವವಾಗಿ(ಕ್ರಮವಾಗಿ) ಇತರರು ಇರಬೇಕು, ಸ್ತ್ರೀಯರಿದ್ದರೆ ಅವರು ಎಲ್ಲರಿಗಿಂತ ಮುಂದೆ ಇರಬೇಕು ॥

*** ಗೋಪಾಲಭಾಷ್ಯಂ –**

ಅತ್ಯಂತೋ ಯಃ ಪ್ರದೇಶೋವಿಧಿಃ ಅತ್ಯಂತ ಪ್ರದೇಶಃ ನ ಸನ್ನಿಹಿತಮಾತ್ರ ವಿಷಯಃ । ಅನಂತರೋಕ್ತೇ ವಿಷಯೇ ಅನ್ಯತ್ರಾಪಿ ಭವತೀತ್ಯರ್ಥಃ । ಅನ್ವಾರಂಭಣ ವಿಷಯೇತು ಅನಂತರಸ್ಯ ವಿಧಿರ್ವಾ ಭವತಿ ಪ್ರತಿಷೇಧೋವೇತಿ ನ್ಯಾಯಃ ಪ್ರವರ್ತತೇ । ಧೂನ್ವನಂ – ಸಿಗ್ಭಿರಭಿಧೂನ್ವನಂ । ಅನ್ವಾರಂಭಣಂ – ರಾಜಗವ್ಯಾಃ ನಾನಡುಹಃ । ಸಂಗಾಹನಂ – ಕರ್ಷೂನಾಂ । ಸಂಸರ್ಪಣಂ – ಶಾಖಾದ್ವಯ ಮಧ್ಯೇನ । ಉದಕೋಪಸ್ಪರ್ಶನಂ – ಧಾತಾಪುನಾತ್ವಿತಿ ವಕ್ಷ್ಯಮಾಣಂ । ಆರೋಹಣಂ – ಆನಡುಹೇ । ಏತೇಷು ಷಟ್ಸು ಕರ್ಮಸು ಕನಿಷ್ಠಪ್ರಥಮಾಸ್ಯುಃ । ಕನಿಷ್ಠಃ ಸರ್ವೇಭ್ಯಃ ಅವರವಯಾಃ । ಸಪ್ರಥಮಃ ಏಷಾಂತೇ ತಥೋಕ್ತಾಃ । ಇತರೇ ತಸ್ಮಾದನ್ಯೇ ಸಕುಲ್ಯಾಃ ಅನುಪೂರ್ವಾಃ ತದಾನುಪೂರ್ವ್ಯವಂತಃ ಸ್ಯುಃ । ಪ್ರಥಮಾಪೇಕ್ಷಾಯಾ ವೃದ್ಧವೃದ್ಧತರ ವೃದ್ಧತಮಾನುಪೂರ್ವ್ಯೇಣಸ್ಯುಃ ಇತ್ಯರ್ಥಃ । ತಥಾ ಸಂಗಾಹನಂ ಅಧಿಕೃತ್ಯ, ವ್ಯಕ್ತೋಕ್ತಮೇತತ್ ॥

ಆಮೇಲೆ ಎಲ್ಲಕಡೆಗಳಲ್ಲೂ ಅನ್ವಯಿಸುವ ವಿಧಿಗಳಿಗೆ ಅತ್ಯಂತಪ್ರದೇಶ ವಿಧಿಯು ಎನ್ನುತ್ತಾರೆ – ಇದು ಅತ್ಯಂತ ಪ್ರದೇಶವಿಧಿಯು ಅಂದರೆ ಕೇವಲ ಅತೀಸಮೀಪ ಮಾತ್ರದ ವಿಷಯವಲ್ಲ । ಮುಂದೆ ಹೇಳುವ ವಿಷಯಗಳಲ್ಲಿಯೂ ಬೇರೇ ಕಡೆಯಲ್ಲಿ ಅನುವೃತ್ತವಾಗುತ್ತದೆ(ಅಲ್ಲಿ ಹೇಳಿದ ನಿಯಮವೇ ಅನ್ವಯವಾಗುತ್ತದೆ) ಎಂದರ್ಥ । ರಾಜಗವಿಯ ಅನ್ವಾರಂಭಣ ವಿಷಯದಲ್ಲಿ, ನಂತರ ಬ್ಹಂದ ವಿಧಿಯು ಅಥವಾ ನಿಷೇಧವೋ ಎಂಬ ನ್ಯಾಯವು ಬಂದೊದಗುತ್ತದೆ । ಧೂನ್ವನಾ ಎಂದರೆ – ಬಟ್ಟೆಯನ್ನು

ಕೊಡಗುವುದು । ಅನ್ವಾರಂಭಣ ಎಂದರೆ – ರಾಜಗವಿಯನ್ನು(ಹಸು) ಹಿಂಬಾಲಿಸುವುದೇ ಹೊರತು ಎತ್ತನ್ನು ಅಲ್ಲ । ಸಂಗಾಹನ ಎಂದರೆ – (ಗುಂಡಿ)ಕರ್ಷುವಿನಲ್ಲಿ ಮಾಡುವ ಸ್ನಾನ । ಸಂಸರ್ಪಣ ಎಂದರೆ – ಎರಡು ಶಾಖೆಗಳ ನಡುವೆ ನುಸುಳಿ ಹೋಗುವಿಕೆ । ಉದಕೋಪಸ್ಪರ್ಶನವೆಂದರೆ – ಧಾತಾಪುನಾತು....., ಎಂಬುದಾಗಿ ಮುಂದೆ ಹೇಳುವ ವಿಧಿ । ಆರೋಹಣ ಎಂದರೆ – ಎತ್ತಿನ ಗಾಡಿಯನ್ನು ಹತ್ತಿ ಹೋಗುವುದು । ಈ 6 ಕರ್ಮಗಳಲ್ಲಿ ಸಣ್ಣವರಿಂದ ಮೊದಲುಗೊಂಡು ಎಲ್ಲಾ ಜ್ಞಾತಿಗಳು ಮತ್ತು ಕುಲದವರು ಮಾಡಬೇಕು । ಕನಿಷ್ಠ ಎಂದರೆ – ಎಲ್ಲರಿಗಿಂತ ಚಿಕ್ಕವಯಸ್ಸಿನವನು ಎಂದರ್ಥ । ಅವನೇ ಮೊದಲಿಗನು ಈ ಎಲ್ಲರಿಗೂ । ಆದ್ದರಿಂದ ಅವನೇ ಮೊದಲುಗೊಂಡು ಮುಂತಾದವರು ಎಂದರ್ಥ । ಬೇರೇ ಎಂದರೆ ಅವನಿಗಿಂತ ಬೇರೆಯವರಾದ ಮೃತನ ಕುಲದಲ್ಲಿ ಹುಟ್ಟಿದವರು(ತ್ರಿಪೌರುಷದಲ್ಲಿರುವವರು) ಈ ಮೃತನ ಆನುಪೂರ್ವ್ಯದಲ್ಲಿ(ನಂತರ ಅನುಕ್ರಮವಾಗಿ) ಹುಟ್ಟಿದವರಾಗಿರುತ್ತಾರೆ । ಇಲ್ಲಿ ಪ್ರಥಮಾ ಅಪೇಕ್ಷೆಯು – ವೃದ್ಧ, ವೃದ್ಧತರ, ವೃದ್ಧತಮ, ಹೀಗೆ ಅನುಕ್ರಮವಾಗಿ ವಿಧಿಸಲ್ಪಟ್ಟಿರುತ್ತದೆ । ಹೀಗೆ ಸಂಗಾಹನ ಮುಂತಾದವುಗಳನ್ನೂ ಹೇಳಿದಂತಾಗುತ್ತದೆಂದು ತಿಳಿಯಬೇಕು ॥

*** ಬೋಧಾಯನೇನ (ಪ್ರ1, ಖಂ11, ಸೂ14) –**

ಯವೀಯಾನ್ ಯವೀಯಾನ್ ಪೂರ್ವಸ್ಸಂಗಾಹತ ಇತಿ । ಸ್ತ್ರಿಯೋಗ್ರ ಇತಿ ಮೃತಸ್ಯ ಸಕುಲ್ಯಾನಾಂ ಚ ಭಾರ್ಯಾ ಗೃಹ್ಯಂತೇ । ತಾಸಾಮಪಿ ಯಥೋಕ್ತಂ ಕನಿಷ್ಠಪ್ರಥಮಂ ವೇದಿತವ್ಯಂ । ಅಥಾಸ್ಯ ಭಾರ್ಯಾಃ ಕನಿಷ್ಠಪ್ರಥಮಾ ಇತಿ ॥

ಬೋಧಾಯನರು, ಸಣ್ಣಸಣ್ಣ ವಯಸ್ಸಿನವರು ಕ್ರಮವಾಗಿ ಮೊದಲು ಸಂಗಾಹನ(ಕರ್ಷುವಿನಲ್ಲಿ ಮುಳುಗುಸ್ನಾನ) ಮಾಡುತ್ತಾರೆಂದು ಹೇಳಿದ್ದಾರೆ । ಸ್ತ್ರೀಯರು ಮೊದಲು ಮಾಡಬೇಕು, ಅದರಲ್ಲೂ ಮೃತನ ಕುಲದವರಲ್ಲಿ ಹೆಂಡತಿ ಮಕ್ಕಳು ಮೊದಲು ಮಾಡಬೇಕು । ಇವರಲ್ಲೂ ಯಾರು ಸಣ್ಣವಯಸ್ಸಿನವರೋ ಅವರು ಮೊದಲು ಮಾಡಬೇಕೆಂದು ಅರ್ಥ । ಮೃತನಿಗೆ ಬಹಳ ಹೆಂಡತಿಯರಿದ್ದರೆ, ಆಗ ಸಣ್ಣವಯಸ್ಸಿನ ಹೆಂಡತಿಯು ಮೊದಲು ಮಾಡಿ ನಂತರ ಉಳಿದವರು ಮಾಡಬೇಕು ॥

*** ಕಪರ್ದಿಭಾಷ್ಯಂ –**

ಅತ್ಯಂತ ಪ್ರದೇಶಃ ಸಾರ್ವತ್ರಿಕೋ ವಿಧಿಃ । ಧೂನ್ವನಂ ಸಿಗ್ಭಿಃ । ಸಂಗಾಹನಾದ್ಯುತ್ತರತ್ರ ವಕ್ಷ್ಯತೇ । ತೇಷು ಸರ್ವೇಷು ಕನಿಷ್ಠಪ್ರಥಮಾ ಭವಂತಿ ಅನುಪೂರ್ವಾ ಇತರೇ ಯಥಾವೃದ್ಧಂ ॥

ಅತ್ಯಂತ ಪ್ರದೇಶವೆಂದರೆ, ಸಾರ್ವತ್ರಿಕವಾದ ವಿಧಿಯು ಎಂದರ್ಥ । ಧೂನ್ವನವು ಬಟ್ಟೆಯಿಂದ । ಸಂಗಾಹನವು ಮುಂದೆ ಹೇಳಲ್ಪಡುತ್ತದೆ । ಈ ಎಲ್ಲ ವಿಧಿಗಳಲ್ಲೂ ಕನಿಷ್ಠಪ್ರಥಮರಾಗಿ ವಿಧಿಗಳನ್ನು ಆಚರಿಸಬೇಕು, ಇನ್ನು ಬೇರೆಯವರು ಕಡಿಮೆವಯಸ್ಸನ್ನು ಅನುಸರಿಸಿ ಕ್ರಮವಾಗಿ ಅತ್ಯಂತ ದೊಡ್ಡವರ ತನಕ ಮಾಡಬೇಕು ॥

*** ಸೂತ್ರಂ – 7 (ಇಬ್ಬರಿಗೂ)**

ತಾಂ ಘ್ನಂತ್ಯುತ್ಸೃಜಂತಿ ವಾ ॥

ಆ ರಾಜಗವಿಯನ್ನು ಸಂಜ್ಞಪನ(ಪ್ರಾಣ ತೆಗೆಯುವಿಕೆ) ಮಾಡುವುದು ಅಥವಾ ಉತ್ಸರ್ಜನ(ಬಿಡುವಿಕೆ) ಮಾಡುವ ಎರಡೂ ಪಕ್ಷಗಳೂ ಇವೆ ॥

*** ಗೋಪಾಲಭಾಷ್ಯಂ –**

ತಾಂ ರಾಜಗವೀಂ ಸಂಜ್ಞಪಯಂತಿ ಸಕುಲ್ಯಾಃ । ಉತ್ಸೃಜಂತಿ ವಾ । ಅಯಂ ವಿಕಲ್ಪಃ ಪಶುಬಂಧಯಾಜಿ ವಿಷಯಃ । ಅನ್ಯತ್ರ ಉತ್ಸರ್ಗ ನಿಯಮಸ್ಯ ವಕ್ಷ್ಯಮಾಣತ್ವಾತ್ । ತತ್ರ ಉತ್ಸರ್ಗೇ ಕರ್ತವ್ಯೇ ನಿಯಮವಿಶೇಷಮಾಹ ॥

ಅವನ ಕುಲದವರು ಆ ರಾಜಗವಿಯನ್ನು ಸಂಜ್ಞಪನ ಮಾಡುತ್ತಾರೆ । ಅಥವಾ ಅದನ್ನು ಬಿಡುತ್ತಾರೆ । ಈ ವಿಕಲ್ಪವು ಪಶುಬಂಧಯಾಗವನ್ನು ಮಾಡಿದವರ ವಿಷಯವು । ಇನ್ನು ಬೇರೆಯವರಿಗೆ (ಅನಾಹಿತಾಗ್ನಿಗಳಿಗೆ ಹಾಗೂ ಆಹಿತಾಗ್ನಿಗಳಾದ

ಚಾತುರ್ಮಾಸ್ಯದವರೆಗೆ ಕರ್ಮವನ್ನು ಮಾಡಿದವರಿಗೆ(ಪಶುವನ್ನು ಮಾಡದವರಿಗೆ)) ಉತ್ಸರ್ಗ ನಿಯಮವನ್ನು ಹೇಳುತ್ತಾರಾದ್ದರಿಂದ । ಉತ್ಸರ್ಗಪಕ್ಷದಲ್ಲಿ ವಿಶೇಷ ನಿಯಮವನ್ನು ಹೇಳಿದ್ದಾರೆ ॥

*** ಕಪರ್ದಿಭಾಷ್ಯಂ –**

ರಾಜಗವೀಂ ಘ್ನಂತಿ ಉತ್ಸೃಜಂತಿ ವಾ। ಉತ್ತರತ್ರ ಸಂಪ್ರೇಷ್ಯತೀತಿ ಏಕವಚನಾತ್ ಪರಿಣಯನಾದಿ ಉತ್ಸರ್ಜನಾಂತಂ ಸರ್ವೇಕುರ್ಯುಃ। ಕೇಚಿತ್ ಬಹುವಚನಂ ಪ್ರಜಾರ್ಥಂ ಅಧ್ವರ್ಯುಃ ಏಕಏವೇತಿ ॥

ಈ ರಾಜಗವಿ (ಹಸು)ಯನ್ನು ಸಂಜ್ಞಪನ(ಬಲಿ) ಮಾಡುತ್ತಾರೆ ಅಥವಾ ಬಿಡುತ್ತಾರೆ । ಮುಂದೆ ಸಂಪ್ರೇಶ್ಯತಿ ಎಂಬ ವಚನವಿರುವುದರಿಂದ ಪರಿಣಯನದಿಂದ ಉತ್ಸರ್ಜನಾಂತದವರೆಗೆ ಎಲ್ಲರೂ ಮಾಡಬೇಕು । ಆದರೆ ಕೆಲವರು ಬಹುವಚನದಿಂದ ಹೇಳಿರುವುದು ಎಂಬುದರ ಅರ್ಥವೇನೆಂದರೆ, ಮೃತನ ಕುಲದವರೂ ಮತ್ತು ಜ್ಞಾತಿಗಳೂ ಮತ್ತು ಸಪಿಂಡರನ್ನು ಅಪೇಕ್ಷಿಸಿಕೊಂಡು ಹೇಳಿದ್ದು, ಅಧ್ವರ್ಯು(ಕರ್ತೃ) ಒಬ್ಬನೇ ಇಲ್ಲಿ ಸಂಜ್ಞಪನವನ್ನು ಅಥವಾ ಉತ್ಸರ್ಜನವನ್ನು ಮಾಡುತ್ತಾನೆ ಎಂದು ಅಭಿಪ್ರಾಯ ಪಡುತ್ತಾರೆ ॥

*** ಸೂತ್ರಂ – 8=58 (ಇಬ್ಬರಿಗೂ)**

ಯದ್ಯುತ್ಸೃಜಂತಿ ಅಪಶ್ಯಾಮ ಯುವತಿಮಾಚರಂತೀಮ್ ಇತ್ಯೇತಾಭಿಃ ತಿಸೃಭಿಃ ತ್ರಿಃ ಪ್ರಸವ್ಯಂ ರಾಜಗವೀಂ ಅಗ್ನೀನ್ ದಾರುಚಿತಿಂ ಚ ಪರಿಣೇಯ ಯೇ ಜೀವಾ ಇತ್ಯಭಿಮಂತ್ರ್ಯ ಮಾತಾ ರುದ್ರಾಣಾಂ ಇತಿ ದ್ವಾಭ್ಯಾಮುತ್ಸೃಜಂತಿ ॥

ಉತ್ಸರ್ಜನ(ಬಿಡುವ) ಮಾಡುವ ಪಕ್ಷದಲ್ಲಿ, ಅಪಶ್ಯಾಮ ಯುವತಿಂ....., ಎಂಬ 3 ಮಂತ್ರಗಳಿಂದ 3 ಸಲ ಅಪ್ರದಕ್ಷಿಣೆಯಾಗಿ ರಾಜಗವಿಯ ಮತ್ತು ಅಗ್ನಿಗಳ ಹಾಗೂ ದಾರುಚಿತಿಯ ಸುತ್ತಾ, ಕರ್ತೃವು ಸುತ್ತಿ, ಯೇ ಜೀವಾ....., ಮಂತ್ರದಿಂದ ಅಭಿಮಂತ್ರಣಮಾಡಿ(ಮುಟ್ಟಿ), ಮಾತಾರುದ್ರಾಣಾಂ....., ಎಂಬ 2 ಮಂತ್ರಗಳಿಂದ ಬಿಟ್ಟೋಡಿಸಬೇಕು ॥

*** ಗೋಪಾಲಭಾಷ್ಯಂ –**

ಅಮಾತ್ಯಾ ಇತಿ ಶೇಷಃ । ದಾರುಚಿತಿಂ ಚೇತಿ ವಿಸ್ಪಷ್ಟಾರ್ಥಂ । ಪ್ರಮಾದ ಪಠಿತಂ ವಾ ॥

ಮೃತನ ಅಮಾತ್ಯರು(ಕುಲದವರು, ಜ್ಞಾತಿಗಳು) ಇದನ್ನು ಮಾಡುತ್ತಾರೆ । ದಾರುಚಿತಿಂ ಚ....., ಎಂದು ಹೇಳಿರುವುದು ಸ್ಪಷ್ಟಾರ್ಥತೆಗೋಸ್ಕರವಾಗಿ ಅಥವಾ ಪ್ರಮಾದದಿಂದ ಹೇಳಲ್ಪಟ್ಟಿದ್ದಾಗಿದೆ ॥ (ರಾಜಗವಿಯೊಂದನ್ನೇ ಅಪ್ರದಕ್ಷಿಣೆಯಾಗಿ ಸುತ್ತಬೇಕೆಂದು ಕೆಲವರು ಹೇಳಿದರೆ, ಇನ್ನು ಕೆಲವರು ದಾರುಚಿತಿಯ ಸಹಿತವಾಗಿ ರಾಜಗವಿಯನ್ನು ಅಪ್ರದಕ್ಷಿಣೆಯಾಗಿ ಸುತ್ತಬೇಕೆನ್ನುತ್ತಾರೆ) ॥

*** ಅತ್ರಾಹ ಬೋಧಾಯನಃ (ಪ್ರ1, ಖಂ 10, ಸೂ3) –**

ಉತ್ತರತಃ ಪ್ರತಿಷ್ಠಮಾನಾನಾಂ ಅನುಮಂತ್ರಯತೇ ಯೇ ಜೀವಾ ಯೇ ಚ ಮೃತಾ ಇತಿ। ಮಾತಾರುದ್ರಾಣಾಂ ಇತ್ಯೃಚಾ ಉತ್ತರೇಣ ಓಮುತ್ಸೃಜತೇತ್ಯಂತೇನ ಯಜುಷಾಚೇತಿ ದ್ವಾಭ್ಯಾಂ ಮಂತ್ರಾಭ್ಯಾಂ ಉತ್ಸೃಜೇಯುಃ ॥

ಈ ವಿಷಯದಲ್ಲಿ ಬೋಧಾಯನರು, ದಾರುಚಿತಿಯ ಉತ್ತರದಲ್ಲಿ ಕಟ್ಟಿಹಾಕಿದ ರಾಜಗವಿಯನ್ನು ಯೇ ಜೀವಾ....., ಎಂಬ ಮಂತ್ರದಿಂದ ಅನುಮಂತ್ರಣ ಮಾಡುತ್ತಾನೆ । ನಂತರ ಮಾತಾರುದ್ರಾಣಾಂ....., ಎಂಬುದರಿಂದ ಓಮುತ್ಸೃಜತ, ಎಂಬವರೆಗಿನ 1 ಋಕ್ ಹಾಗೂ 2 ಯಜುರ್ಮಂತ್ರಗಳಿಂದ ರಾಜಗವಿಯನ್ನು ಬಿಡುತ್ತಾರೆ, ಎಂದು ಅಭಿಪ್ರಾಯಪಡುತ್ತಾರೆ ॥

.....

.....

5ನೇ ಖಂಡ

(ಹಸುವನ್ನು ಯಜ್ಞಾರ್ಥವಾಗಿ ಬಳಸುವ ವಿಚಾರ – ಮೃತನ ಪತ್ನಿಯು ಚಿತೆಯಮೇಲೆ ಶವದ ಜೊತೆ ಮಲಗುವ ವಿಚಾರ – ದಹನಕ್ಕೆ ಸಂಬಂಧಿಸಿದ ವಿಧಿಗಳ ವಿಚಾರ)

*** ಸೂತ್ರಂ – 1 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಯದಿಘ್ನಂತಿ ತತಃ ಸಂಪ್ರೇಶ್ಯತಿ ಅಪಿಧಾಯ ಮುಖಂ ದಕ್ಷಿಣಾಪದೀಂ ಪ್ರತ್ಯಕ್ ಶಿರಸೀಂ ಘ್ನತ ಇತಿ ॥

ಕೊಲ್ಲುವ(ಸಂಜ್ಞ್ಯಾಪನ), ಮಾಡುವ ಪಕ್ಷದಲ್ಲಿ, ಒಂದು ಸಂಪ್ರೇಷಣೆ(ಆಜ್ಞೆ) ಕೊಡಬೇಕು, 'ಅಪಿಧಾಯ ಮುಖಂ ದಕ್ಷಿಣಾಪರೀಂ ಪ್ರತ್ಯಕ್ಷಿರಸೀಂ ಘ್ನತ' ಅಂದರೆ, ಆ ಹಸುವಿನ ಮುಖವನ್ನು ಮುಚ್ಚಿ, ದಕ್ಷಿಣಕ್ಕೆ ಅದರ ಪಾದಗಳನ್ನು ಮಾಡಿ, ಪಶ್ಚಿಮಕ್ಕೆ ತಲೆ ಮಾಡಿ ಕೊಲ್ಲಬೇಕು ಎಂದು ॥

*** ಗೋಪಾಲಭಾಷ್ಯಂ –**

ಸಂಜ್ಞಪನಪಕ್ಷೇ ಅಗ್ನಿದ ಏವಂ ಅಮಾತ್ಯಾನ್ ಸಂಪ್ರೇಶ್ಯತಿ । ತೇ ಚ ತಥಾ ಕುರ್ಯುಃ । ತತ್ರ ಪ್ರತ್ಯಕ್ ಶಿರಸೀಮಿತಿ ಛಾಂದಸ ಈಕಾರಃ । ತಾಂ ಅನ್ಯತ್ರೈವ ಶಸ್ತ್ರಾತ್ ಘ್ನಂತೀತಿ ಬೋಧಾಯನಃ(ಪ್ರ1, ಖಂ 7, ಸೂ3) ॥

ರಾಜಗವಿಯನ್ನು ಸಂಜ್ಞಪನ ಮಾಡುವ ಪಕ್ಷದಲ್ಲಿ, ಮೃತನಿಗೆ ಅಗ್ನಿಯನ್ನು ಕೊಡುವ ಕರ್ತೃವೇ ತನ್ನ ಜ್ಞಾತಿಗಳಿಗೆ(ಅಮಾತ್ಯರಿಗೆ) ಸಂಪ್ರೇಶ(ಆಜ್ಞೆ)ವನ್ನು ಕೊಡಬೇಕು ।

ಅವರು ಅವನು ಪ್ರೈಷ(ಹೇಳಿದಂತೆ)ಕೊಟ್ಟಂತೆ ಮಾಡಬೇಕು । ಇಲ್ಲಿ ಪ್ರತ್ಯಕ್ ಶಿರಸೀಂ...., ಎಂಬುದರಲ್ಲಿ ಸ ಕಾರದ ಮುಂದೆ ಇರುವ ಈ ಕಾರವು ವೇದದಲ್ಲಿ ಹೇಳಿರುವ(ವ್ಯಾಕರಣದಲ್ಲಿ ಹೇಳದಿರುವ) ಈ ಕಾರವಾಗಿದೆ । ಬೋಧಾಯನರು ಶಸ್ತ್ರವಿಲ್ಲದೇ ಉಸಿರನ್ನು ನಿಲ್ಲಿಸಿ ಆ ರಾಜಗವಿಯನ್ನು ಸಂಜ್ಞಪನ ಮಾಡಬೇಕೆಂದು ಹೇಳುತ್ತಾರೆ ॥

*** ಕಪರ್ದಿಭಾಷ್ಯಂ –**

ಸಂಪ್ರೇಶ್ಯತಿ ಅಧ್ವರ್ಯುಃ ಅಮಾತ್ಯಾನನ್ಯಾನ್ವಾ । ಅಪಿಧಾಯ – ಪ್ರಚ್ಛಾದ್ಯ ಮುಖಂ ದಕ್ಷಿಣಾಪದೀಂ ದಕ್ಷಿಣಪಾದಾಂ ಪ್ರತ್ಯಕ್ಷಿರಸೀಂ ಘ್ನತಮಾರಯತ । ಯಥಾ ನ ಶಬ್ದಂ ಕರೋತಿ ತಥೇತಿ ॥

ಅಧ್ವರ್ಯುವು(ಕರ್ತೃವು) ಅಮಾತ್ಯರಿಗೆ(ಜ್ಞಾತಿಗಳಿಗೆ) ಅಥವಾ ಮೃತನ ಬೇರೇ ಸಂಬಂಧಿಕರಿಗೆ ಈ ಮುಂದೆ ಹೇಳಿದಂತೆ ಪ್ರೈಷವನ್ನು ಕೊಡಬೇಕು । "ಆ ರಾಜಗವಿಯ ಮುಖವನ್ನು ಸಂಪೂರ್ಣವಾಗಿ ಉಸಿರಾಡದಂತೆ ಮುಚ್ಚಿ, ದಕ್ಷಿಣಕ್ಕೆ ಕಾಲಿರುವಂತೆ, ಪಶ್ಚಿಮಕ್ಕೆ ತಲೆಬರುವಂತೆ ಮಲಗಿಸಿ । ಅದು ಶಬ್ದ ಮಾಡದಂತೆ ಸಂಜ್ಞಪನ(ಸಾಯಿಸಿರಿ) ಮಾಡಿರಿ", ಹೀಗೆ ಪ್ರೈಷ(ಆಜ್ಞೆ)ವನ್ನು ಕೊಡಬೇಕು ॥

*** ಸೂತ್ರಂ – 2 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ನಿಹನ್ಯಮಾನಾಯಾಂ ಸೌಯಾನಿ ಜಾನೂನ್ಯನು ನಿಷ್ಕ್ರಂತಃ ಪಾಂಸೂನವಮೃಜಂತೇ ಪುರುಷಸ್ಯ ಸಯಾವರಿ ಇತಿ ॥

ಸಂಜ್ಞಪನ(ಕೊಲ್ಲುವ)ದ ಸಮಯದಲ್ಲಿ, ಕರ್ತೃವು ಹಾಗೂ ಜ್ಞಾತಿಗಳು ತನ್ನ ಎಡತೊಡೆಗಳನ್ನು ಭೂಮಿಗೆ ಹೊಡೆಯುತ್ತಾ, ಆ ತೊಡೆಗೆ ಅಂಟಿದ ಧೂಳುಗಳನ್ನು ತಿಕ್ಕಿಕೊಳ್ಳಬೇಕು, ಪುರುಷಸ್ಯ ಸಯಾವರಿವಿತೇ....., ಮಂತ್ರದಿಂದ ॥

*** ಗೋಪಾಲಭಾಷ್ಯಂ –**

ತಸ್ಯಾಂ ಸಂಜ್ಞಪ್ಯಮಾನಾಯಾಂ ಅಮಾತ್ಯಾಃ ಸ್ವಕೀಯಾನಿ ಸವ್ಯಾನಿ ಜಾನೂನಿ ಭೂಮ್ಯಾಮನು ನಿಷ್ಕ್ರಂತಃ – ಸಂಘಟ್ಟಯಂತಃ, ತಲ್ಲಗ್ನಾನ್

ಪಾಂಸೂನ್, ಪುರುಷಸ್ಯ ಸಯಾವರೀತಿ ಪೂರ್ವಯರ್ಚಾ ಪಾಣಿಭಿಃ ಅಪಧ್ವಂಸಯೇರನ್ ಇತ್ಯರ್ಥಃ ॥

ಆ ರಾಜಗವಿಯನ್ನು ಸಂಜ್ಞಪನ ಮಾಡುತ್ತಿರಲಾಗಿ, ಮೃತನ ಜ್ಞಾತಿಗಳು, ಕುಲದವರು ತಮ್ಮ ಎಡ ತೊಡೆಯನ್ನು ಭೂಮಿಗೆ ಹೊಡೆಯುತ್ತಾ, ಆ ತೊಡೆಗೆ ಅಂಟಿದ ಧೂಳನ್ನು ಪುರುಷಸ್ಯ ಸಯಾ....., ಎಂಬ ಮಂತ್ರದಿಂದ ಕೊಡಗಿಕೊಳ್ಳಬೇಕು ಎಂದರ್ಥ ॥

*** ಕಪರ್ದಿಭಾಷ್ಯಂ –**

ನಿಹನ್ಯಮಾನಾಯಾಂ ಸವ್ಯಾನಿ ಜಾನೂನಿ ಮನುಷ್ಯಾಣಾಂ ಮಧ್ಯಾನಿ ಜಾನೂನಿ ಅನುನಿಘ್ನಂತಃ ಪಾಂಸೂನವಮೃಜಂತೇ । ಸ್ವೇಭ್ಯೋ ಜಾನುಭ್ಯೋ ಲಗ್ನಾನ್ । ಅಪೇದಘಾನಿ ಮೃಜ್ಮಹ ಇತಿ ಲಿಂಗಾತ್ । ತೂಷ್ಣೀಂ ಪೀಡನಮಿತಿ ಕೇಚಿತ್ । ಪುರುಷಸ್ಯ ಸಯಾವರೀತಿ ಪಶ್ವಭಿಧಾನಾತ್ ಪಶೌ ಲಗ್ನಾನಿತಿ ಕೇಚಿತ್ ॥

ರಾಜಗವಿಯನ್ನು ಸಂಜ್ಞಪನ ಮಾಡುತ್ತಿರಲಾಗಿ, ಮೃತನ ಜ್ಞಾತಿಗಳು ಮತ್ತು ಕುಲದವರು ತಮ್ಮ ಎಡತೊಡೆಯನ್ನು ಭೂಮಿಗೆ ಹೊಡೆದುಕೊಳ್ಳುತ್ತಾ, ತೊಡೆಗೆ ಅಂಟಿದ ಧೂಳನ್ನು ಕೊಡಗಿಕೊಳ್ಳಬೇಕು । ಅಪೇದಘಾನಿ....., ಮಂತ್ರ ಲಿಂಗವಿರುವುದರಿಂದ, ಅಮಂತ್ರಕವಾಗಿ ತೊಡೆಯನ್ನು ಹೊಡೆದುಕೊಳ್ಳಬೇಕೆಂದು ಕೆಲವರು ಹೇಳುತ್ತಾರೆ । ಇನ್ನು ಕೆಲವರು ಪುರುಷಸ್ಯ ಸಯಾ....., ಎಂಬ ಮಂತ್ರದಲ್ಲಿ ಪಶು ಶಬ್ದವನ್ನು ಹೇಳಿರುವುದರಿಂದ ಆ ರಾಜಗವಿಗೆ ಅಂಟಿದ ಧೂಳನ್ನು ತೆಗೆಯಬೇಕೆಂದು ಹೇಳುತ್ತಾರೆ ॥

*** ಸೂತ್ರಂ – 3 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಅಥಾಹ ವಿಸ್ರಂಸಯತ ಇತಿ ॥

ಆಮೇಲೆ ಹೇಳಬೇಕು, ವಿಸ್ರಂಸಯತ(ಪ್ರಾಣವನ್ನು ಹೋಗಿಸಿರಿ) ಎಂದು ॥

*** ಗೋಪಾಲಭಾಷ್ಯಂ –**

ಅಥ ಅಗ್ನಿದ ಆಹ ವಿಸ್ರಂಸಯತ ಇತಿ ಅಮಾತ್ಯಾನ್ ಸಂಪ್ರೇಶ್ಯತಿ । ವಿಸ್ರಂಸನಮಿಹ ಪ್ರಾಣವಿಶ್ಲೇಷೋಭಿ ಪ್ರೇತಃ । ತದನುಮಂತ್ರಣ ಮಂತ್ರೇ ವಿತೇಪ್ರಾಣಮಸಿಸ್ರಸಂ..... ಇತಿ ಮಂತ್ರಲಿಂಗಾತ್ ॥

ನಂತರ ಅಗ್ನಿಯನ್ನು ಕೊಡುವ ಕರ್ತೃವು, ಮೃತನ ಜ್ಞಾತಿಗಳಿಗೆ ಅಥವಾ ಸಂಬಂಧಿಕರಿಗೆ 'ವಿಸ್ರಂಸಯತ' ಎಂದು ಪ್ರೈಷವನ್ನು ಕೊಡಬೇಕು । ವಿಸ್ರಂಸನವೆಂದರೆ ಇಲ್ಲಿ ಪ್ರಾಣವನ್ನು ಹೋಗಿಸುವಿಕೆ ಎಂದರ್ಥ । ಏಕೆಂದರೆ – ಅದರ ಅನುಮಂತ್ರಣ ಮಂತ್ರದಲ್ಲಿ 'ವಿತೇ ಪ್ರಾಣಮಸಿಸ್ರಸಮ್', ಎಂಬ ಮಂತ್ರಲಿಂಗವಿರುವುದರಿಂದ ॥

*** ಕಪರ್ದಿಭಾಷ್ಯಂ –**

ಅಧ್ವರ್ಯುಃ ವಿಸ್ರಂಸಯತೇತಿ ಸಂಪ್ರೇಶ್ಯತಿ ॥

ಅಧ್ವರ್ಯುವು(ಕರ್ತೃವು) ವಿಸ್ರಂಸಯತ (ಪ್ರಾಣವನ್ನು ಹೋಗಿಸಿರಿ) ಎಂದು ಪ್ರೈಷವನ್ನು(ಆಜ್ಞೆ) ಕೊಡಬೇಕು ॥

*** ಸೂತ್ರಂ – 4 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ವಿಸ್ರಂಸ್ಯಮಾನಾಂ ಅನುಮಂತ್ರಯತೇ ಪುರುಷಸ್ಯ ಸಯಾವರಿವಿತೇ ಪ್ರಾಣಮಸಿ ಸ್ರಸಮ್ ಇತಿ ॥

ವಿಸ್ರಂಸನೆ(ಪ್ರಾಣಹೋಗಿಸುವಾಗ)ಮಾಡುವಾಗ, ಪುರುಷಸ್ಯ.....ಸ್ರಸಂ, ಎಂಬ ಮಂತ್ರವನ್ನು ಜಪಿಸಬೇಕು ॥

*** ಗೋಪಾಲಭಾಷ್ಯಂ –**

ವಿಸ್ರಂಸ್ಯಮಾಣಾಂ – ಪ್ರಾಣೈಃ ವಿಯೋಜ್ಯಮಾನಾಂ ಇತ್ಯರ್ಥಃ । ಅತ್ರ ವಿತೇಪ್ರಾಣಮಿತಿ..... ಪಾದಸ್ಯ ಪಾಠಃ ವಿಸ್ಪಷ್ಟಾರ್ಥಃ । ಪ್ರಾಮಾದಿಕೋ ವಾ । ಅತ್ರ ಏಕಯೈವರ್ಚಾ ಅನುಮಂತ್ರಣಂ, ದ್ವಾಭ್ಯಾಮಿತ್ಯವಚನಾತ್,

ಬೋಧಾಯನೀಯೇ ತಥಾ ದರ್ಶನಾಚ್ಚ । ದ್ವಾಭ್ಯಾಂ ಋಗ್ಭ್ಯಂ ಇತ್ಯಪರಂ, ಉತ್ತರಸ್ಯಾದಿನೇತಿ ನ್ಯಾಯಾತ್, ತಲ್ಲಿಂಗತ್ವಾಚ್ಚ ಉಭಯೋಃ । ಬೋಧಾಯನೀಯೇ ಪ್ರಕಾರಾಂತರೇಣ ಮೈವಮಿತ್ಯಸ್ಯಾಶ್ಚ ಅತ್ರೋಪಯೋಗಾತ್ ॥

'ಪ್ರಾಣದಿಂದ ಬೇರ್ಪಡಿಸುವಾಗ' ಎಂದು ವಿಸ್ರಂಸನ ಶಬ್ದಕ್ಕೆ ಅರ್ಥವು । ಇಲ್ಲಿ **'ವಿತೇ ಪ್ರಾಣಂ'** ಎಂದು ಒಂದುಪಾದದ ಪಾಠವು ಸ್ಪಷ್ಟಾರ್ಥತೆಗೋಸ್ಕರ । ಅಥವ ಪ್ರಮಾದದಿಂದ(ತಪ್ಪಾಗಿ) ಹೇಳಿದುದಾಗಿದೆ । ಏಕೆಂದರೆ ಇಲ್ಲಿ ಒಂದೇ ಋಕ್ಕಿನಿಂದ ಅನುಮಂತ್ರಣವು, ಎರಡು ಋಕ್ಕಿನಿಂದ ಇಲ್ಲವೆಂದು ಬೋಧಾಯನರು ತೋರಿಸಿರುವು ದರಿಂದ । ಇನ್ನು ಕೆಲವರು ಎರಡು ಋಕ್ಕಿನಿಂದ ಎಂದು ಹೇಳುತ್ತಾರೆ **'ಉತ್ತರಸ್ಯ ಆದಿನಾ = ಮುಂದಿನ ಆದಿಯಿಂದ'** ಎಂಬ ನ್ಯಾಯದಿಂದ ಹಾಗೂ ಎರಡು ಮಂತ್ರಗಳಲ್ಲೂ ಆ ಲಿಂಗವು ಕಾಣುತ್ತಿರುವುದರಿಂದ । ಬೋಧಾಯನ ಸೂತ್ರದಲ್ಲಿ ಬೇರೇ ಪ್ರಕಾರದಿಂದ **'ಮೈವಂ'** ಎಂಬ ಮಂತ್ರವನ್ನು ಇಲ್ಲಿ ವಿಧಾನ ಮಾಡಿರುವುದರಿಂದ ॥

*** ಕಪರ್ದಿಭಾಷ್ಯಂ –**

ಅಧ್ವರ್ಯುಃ ವಿಸ್ರಂಸ್ಯಮಾಣಾಂ ಅನುಮಂತ್ರಯತೇ । ಮೃತೇ ಪಶೌ । ಪ್ರಾಣಮಸಿಸ್ರಸಂ ಇತಿ ಲಿಂಗಾತ್ । ಮಾರ್ಯಮಾಣಾಯಾಂ ಇತ್ಯುಪದೇಶಃ ॥

ಕರ್ತೃವು, ಪ್ರಾಣವನ್ನು ಹೋಗಿಸುತ್ತಿರುವ ಆ ರಾಜಗವಿಯನ್ನು ಮೇಲಿನ ಮಂತ್ರದಿಂದ ಅನುಮಂತ್ರಣ ಮಾಡಬೇಕು । ಅಥವಾ ರಾಜಗವಿಯು ಸತ್ತಮೇಲೆ **'ಪ್ರಾಣಮಸಿ ಸ್ರಸಂ'** ಎಂಬ ಲಿಂಗವಿರುವುದರಿಂದ ಅನುಮಂತ್ರಣ ಮಾಡಬೇಕು । ಇಲ್ಲಿ ಸಾಯಿಸುತ್ತಿರುವಾಗ ಅನುಮಂತ್ರಣ ಮಾಡಬೇಕೆಂದು ವಿಧಿಸುತ್ತಿದೆ ॥

*** ಸೂತ್ರಂ – 5 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ತತಃ ಸಂಪ್ರೇಷ್ಯತಿ ಅಂಗಾದಂಗಾದನಸ್ಥಿಕಾನಿ ಪಿಶಿತಾನ್ಯುತ್ಖಿದ್ಯ ಅಪ್ರಕ್ವಾಥಯಂತಃ ಅಪ್ರಚ್ಯಾವಯಂತ ಉಲ್ಮುಕೈಃ ಶ್ರಪಯತಾತ್ ಪ್ರಜ್ಞಾತಂ ಹೃದಯಂ ನಿಧತ್ತಾತ್

ಪ್ರಜ್ಞಾತೌ ವೃಕ್ಕೌ ಪ್ರಜ್ಞಾತಂ ಮೇದಃ ಪ್ರಜ್ಞಾತಾಂ ವಪಾಂ ಪ್ರಜ್ಞಾತಂ ಸಪಾದವಾಲ ಶೀರ್ಷ ಚರ್ಮ ಇತಿ ॥

ಆಮೇಲೆ ಸಂಪ್ರೇಷಣೆ(ಆಜ್ಞೆ) ಕೊಡಬೇಕು, ಹೇಗೆಂದರೆ – ಅವಯವಗಳಿಂದ ಮೂಳೆಗಳನ್ನು ಬಿಟ್ಟು, ಮಾಂಸಗಳನ್ನು ಕಿತ್ತು ಹೊರಕ್ಕೆತೆಗೆದು, ಬೇಯಿಸುವ ಪಾತ್ರೆಯನ್ನು ಮುಚ್ಚದೇ, ಅಲುಗಾಡಿಸದೇ, ಕೆಳಕ್ಕೆ ಬೀಳಿಸದೇ, ಕೊಳ್ಳಿಗಳಿಂದ ಬೇಯಿಸಿರಿ । ಹೃದಯವನ್ನು, 2 ವೃಕ್ಕಗಳ(ಅವಯವ) ಮೇದಸ್ಸನ್ನು, ವಪೆಯನ್ನು, ಪಾದ, ಬಾಲ, ತಲೆ, ಚರ್ಮಗಳನ್ನೂ ನೆನಪಿರುವಂತೆ ಒಂದುಕಡೆ ಇಟ್ಟುಕೊಳ್ಳಿ(ಇದು, ಪಶುವಿನ ದೇಹದ ಅಂಗಗಳ ಅವದಾನ) ॥

*** ಗೋಪಾಲಭಾಷ್ಯಂ –**

ಅಮಾತ್ಯಾನ್ ಸಂಪ್ರೇಶ್ಯತಿ ಏವಂ ವಿಸಸನಾರ್ಥಂ । ತತ್ರ ಪಾದಪುಚ್ಛ ಶಿರೋವ್ಯತಿರಿಕ್ತಾನಿ ಸರ್ವಾಣ್ಯಂಗಾನಿ ಉದ್ಧಿಯಂತೇ ಪಾದಾದೀನಾಂ ಚರ್ಮಾನುಶಂಗ ನಿಯಮಾತ್ । ಉದ್ಧಾರ್ಯೇಷುಚಾಂಗೇಷು ಅಸ್ಥಿವಿನಾ ಮಾಂಸಾಂಶ ಉತ್ಪಿದ್ಯ ಶ್ರಪಯಿತವ್ಯಃ । ಅಸ್ಥ್ಯಂಶಸ್ತ್ಯಾಜ್ಯಃ । ಹೃದಯಾದೀನಿ ಪಂಚಪ್ರಜ್ಞಾತಾನಿ ಶ್ರಪ್ಯಂತೇ । ನ ತು ಇತರಮಾಂಸಾನಿ । ವಪಾದೀನಿ ಪ್ರಜ್ಞಾತಾನಿಸ್ಯುಃ । ಚರ್ಮಣಸ್ತು ನ ಶ್ರಪಣಂ । ತತ್ಸಂಯೋಗಾತ್ ಪಾದಾದೀನಾಮಪಿ ನ ಶ್ರಪಣಂ । ತತ್ರ ವಪಾಹೃದಯಯೋಃ ಪಶುಬಂಧವತ್ ಶ್ರಪಣಮಿತಿ ಕೇಚಿತ್ । ಅಪ್ರಕ್ವಾಥಯಂತ ಇತಿ ಕುಂಭ್ಯಾ ಅಪಿಧಾನ ಪ್ರತಿಶೇಧಃ । ಅಪ್ರಚ್ಯಾವಯಂತ ಇತಿ ಪಂಕ್ತಿ ಸಾಮ್ಯಾರ್ಥ ವಿಚಾಲನ ಪ್ರತಿಶೇಧಃ ॥

ಈ ರೀತಿಯಾಗಿ ಸಾಯಿಸುವುದಕ್ಕೆ ಕರ್ತೃವು, ಮೃತನ ಜ್ಞಾತಿಗಳು ಅಥವಾ ಸಂಬಂಧಿಕರಿಗೆ ಆಜ್ಞೆಯನ್ನು ಕೊಡುತ್ತಾನೆ । ಸತ್ತ ನಂತರ ರಾಜಗವಿಯ ಕಾಲುಗಳು, ಬಾಲ, ತಲೆ, ಇವುಗಳನ್ನು ಬಿಟ್ಟು ಉಳಿದ ಅಂಗಗಳನ್ನು ತೆಗೆಯಬೇಕು, ಕಾಲು ಮುಂತಾದವುಗಳಿಗೆ ಚರ್ಮವು ಮಿಶ್ರವಾಗಿರುತ್ತದೆ ಎಂಬ ಕಾರಣಕ್ಕಾಗಿ ಅವುಗಳನ್ನು

ಬಿಟ್ಟು ಎಂದು ಹೇಳಿದ್ದು । ಹೊರತೆಗೆದಂತಹ ಉಳಿದ ಅಂಗಗಳಲ್ಲಿ ಅಸ್ಥಿಯನ್ನು (ಮೂಳೆ) ಬಿಟ್ಟು ಮಾಂಸವನ್ನು ತೆಗೆದು ಬೇಯಿಸಬೇಕು । ಮೂಳೆಯ ಅಂಶವನ್ನು ಬಿಡಬೇಕೆಂದು ಅರ್ಥ । ಹೃದಯ, ಬೀಜ, ಮೇದಸ್ಸು, ವಪೆ, ಕಾಲು–ಬಾಲ ಹಾಗೂ ತಲೆ ಇವುಗಳ ಚರ್ಮ, ಈ 5 ಅಂಗಗಳನ್ನು ಸರಿಯಾಗಿ ಗೊತ್ತುಪಡಿಸಿಕೊಂಡು ಬೇಯಿಸಬೇಕು । ಇನ್ನು ಬೇರೆಯ ಅಂಗಗಳ ಮಾಂಸಗಳನ್ನು ಗುರುತಿಸಿಯೇ ಬೇಯಿಸಬೇಕೆಂದಿಲ್ಲ । ವಪೆ ಮುಂತಾದವುಗಳನ್ನು ಪೃಥಕ್ಕಾಗಿ (ಒಂದೊಂದಾಗಿ) ಬೇಯಿಸಬೇಕು, ಹಾಗೂ ಗೊತ್ತಾಗುವಂತೆ ಇಡಬೇಕು । ಚರ್ಮವನ್ನು ಬೇಯಿಸ ಬಾರದು । ಆ ಚರ್ಮದಿಂದ ಬೆರಕೆಯಾದ ಕಾಲು ಮುಂತಾದವುಗಳನ್ನು ಬೇಯಿಸ ಬಾರದು । ಇಲ್ಲಿ ವಪೆ ಮತ್ತು ಹೃದಯವನ್ನು ಪಶುಬಂಧದಲ್ಲಿ ಬೇಯಿಸುವ ಕ್ರಮದಲ್ಲಿ ಬೇಯಿಸಬೇಕೆಂದು ಕೆಲವರು ಹೇಳುತ್ತಾರೆ । ಬೇಯಿಸುವ ಪಾತ್ರೆಯನ್ನು ಮುಚ್ಚದೇ ಬೇಯಿಸಬೇಕು । ಹಾಗೂ ಅದನ್ನು ಅಲುಗಾಡಿಸದೇ, ಬೀಳಿಸದೇ ಬೇಯಿಸಬೇಕು ॥

*** ಕಪರ್ದಿಭಾಷ್ಯಂ –**

ತತಃ ಸಂಪ್ರೇಶ್ಯತ್ಯಧ್ವರ್ಯುಃ ಅಂಗಾದಂಗಾದಿತಿ । ಸರ್ವೇಭ್ಯೋಂಗೇಭ್ಯಃ ಅನಸ್ಥಿಕಾನಿ ಅಸ್ಥಿವರ್ಜಿತಾನಿ ಪಿಶಿತಾನಿ ಮಾಂಸಾನಿ ಉತ್ಖಿದ್ಯ ಉದ್ಗೃಹ್ಯ ಅಶೇಷಾಣಿ ಅಸ್ಥೀನಿ ಆಂತ್ರಾಣ್ಯೇವಾಪನೀಯಂತೇ । ಅಪ್ರಕ್ವಾಥಯಂತಃ ಅನತಿದಹಂತಃ । ಅಪ್ರಚ್ಯಾವಯಂತಃ ಅಸ್ಕಂದಯಂತಃ ಉಲ್ಮುಕೈಃ ಪಚತಮಾಂಸಂ । ಸಹಪಾದೈಃ ಸಹವಾಲೇನ ಸಹಶೀರ್ಷ್ಣಾ ಸಹಚರ್ಮಣೇತಿ ಸಂಪ್ರೈಷಾರ್ಥಃ ॥

ನಂತರ ಕರ್ತೃವು, ಅಂಗಾದಂಗಾತ್....., ಎಂಬ ಮಂತ್ರದಿಂದ ಪ್ರೈಷ(ಆಜ್ಞೆ)ವನ್ನು ಕೊಡಬೇಕು । ಎಲ್ಲ ಅಂಗಗಳಿಂದಲೂ ಅಸ್ಥಿಯನ್ನು(ಮೂಳೆ)ಬಿಟ್ಟು, ಆ ಅಂಗಗಳ ಮಾಂಸವನ್ನು ಹೊರತೆಗೆದು, ಸಂಪೂರ್ಣ ಮೂಳೆಗಳನ್ನು ಹೊರಕ್ಕೆ ಎಸೆಯಬೇಕು । ಸೀದು ಹೋಗದಂತೆ ಹಾಗೂ ಬೇಯಿಸುವ ಪಾತ್ರೆಯನ್ನು ಮುಚ್ಚದೇ ಬೇಯಿಸಬೇಕು । ಬೇಯಿಸುವ ಪಾತ್ರೆಯನ್ನು ಬೀಳಿಸದೇ, ಅಲುಗಾಡಿಸದೇ, ಸೌದೆಯಿಂದ ಮಾಂಸವನ್ನು ಬೇಯಿಸಿರಿ । ಕಾಲಿನೊಡನೆ ಹಾಗೂ ಬಾಲದೊಡನೆ ಹಾಗೂ ತಲೆ ಸಹಿತ ಹಾಗೂ ಚರ್ಮಸಹಿತವಾಗಿ ಬೇಯಿಸಿರಿ, ಎಂದು ಆಜ್ಞೆಯನ್ನು ಮಾಡಬೇಕು ಎಂದರ್ಥವು ॥

* ಸೂತ್ರಂ – 6 (ಇಬ್ಬರಿಗೂ)

ಅತ್ರ ಪತ್ನೀಂ ಉಪನಿಪಾತಯತಿ ಇಯಂ ನಾರೀ ಇತಿ ॥

ಇಲ್ಲಿ, ಪತ್ನಿಯು ತನ್ನ ಪತಿಯ ಶವದಪಕ್ಕ ಮಲಗುತ್ತಾಳೆ, ಇಯಂನಾರೀ..... ಮಂತ್ರದಿಂದ ॥

* ಗೋಪಾಲಭಾಷ್ಯಂ –

ಏತಸ್ಮಿನ್ ಕಾಲೇ ಅಗ್ನಿದಃ ಇಯಂ ನಾರೀ ಪತಿಲೋಕಂ ಇತ್ಯೃಚಾ ಮೃತಸ್ಯಪತ್ನೀಂ ತತ್ ಸಮೀಪೇ ಶಾಯಯೇತ್ । ತತ್ರ ತಸ್ಯೈಪ್ರಜಾಮಿತಿ ಜನ್ಮಾಂತರೇ ಪ್ರಜಾ ಸಂಪತ್ಯಾಶಾಸನಂ। ಅತೋ ನಾಸ್ಮಿನ್ ಜನ್ಮನಿ ಅಪ್ಯತ್ರಾಯಾ ದೇವರಾದಿಭಿಃ ಪುತ್ರೋತ್ಪಾದನಾರ್ಥತ್ವ ಕಲ್ಪನಾವಕಾಶಃ । ನ ಚ ಜರತ್ಯಾ ಉಪನಿಪಾತನ ನಿವೃತ್ತಿಃ। ನ ಚಾಯಂ ಪೂರ್ವಸಿದ್ಧ ಪ್ರಜಾಯೈವಾದಃ। ಅತಃ ಅಪುತ್ರಾಯಾಮಪಿ ಭವತ್ಯೇವ । ಪತ್ನ್ಯಭಾವೇತು ಉಪಸಂವೇಶನಾದಿ ಸಾಹಸ್ರವರದಾನಾಂತಂ ನಿವರ್ತತೇ ॥

ಈ ಸಮಯದಲ್ಲಿ ಕರ್ತೃವು, ಇಯಂ ನಾರೀ....., ಎಂಬ ಋಕ್ಕಿನಿಂದ ಮೃತನ ಪತ್ನಿಯನ್ನು ಮೃತನ ಬಳಿ ಮಲಗಿಸಬೇಕು । ಅಲ್ಲಿ ತಸ್ಯೈ ಪ್ರಜಾಂ....., ಎಂದು ಜನ್ಮಾಂತರದಲ್ಲಿ ಪ್ರಜೆಗಳ ಪಡೆಯುವಿಕೆಯನ್ನು ಬಯಸಬೇಕು । ಆದ್ದರಿಂದ ಈ ಜನ್ಮದಲ್ಲೂ ಮೃತನ ಹೆಂಡತಿಯು ತನ್ನ ಮೈದುನರಿಂದ(ಗಂಡನ ಸೋದರರಿಂದ) ಮಕ್ಕಳನ್ನು ಪಡೆದುಕೊಳ್ಳಲು ಅವಕಾಶವಿದೆ । ಕೇವಲ ವಯಸ್ಸಿನ ಕಾರಣದಿಂದ ಮೃತನಬಳಿಗೆ ಮಲಗಿಸುವಿಕೆ ಎನ್ನುವುದು ಅಲ್ಲ । ಇದು ಮೊದಲೇ ಸಿದ್ಧವಾದ ಪ್ರಜೆಗಳಿಗಾಗಿ ಎಂಬ ವಾದ ಸರಿಯಲ್ಲ । ಆದ್ದರಿಂದ ಮಕ್ಕಳಿಲ್ಲದಿದ್ದರೂ ಈ ಕರ್ಮವು ಇದೆ । ಮೃತನಿಗೆ ಪತ್ನಿ ಇಲ್ಲದಿದ್ದರೆ "ಉಪಸಂವೇಶನದಿಂದ(ಮೃತನ ಬಳಿ ಮಲಗಿಸುವಿಕೆ) ಹಿಡಿದು, ಸಹಸ್ರ ವರದಾನಾಂತದವರೆಗಿನ ಕರ್ಮವು ಇಲ್ಲ" ॥

*** ಕಪರ್ದಿಭಾಷ್ಯಂ –**

ಅತ್ರ ಪತ್ನೀಮುಪನಿಪಾತಯತಿ ಶಾಯಯತ್ಯಧ್ವರ್ಯುಃ ಇಯಂನಾರೀತಿ ॥

ಇಲ್ಲಿ ಅಧ್ವರ್ಯುವು ಇಯಂ ನಾರೀ....., ಎಂಬ ಮಂತ್ರದಿಂದ ಪತ್ನಿಯನ್ನು ಮೃತನ ಪಕ್ಕ ಮಲಗಿಸುತ್ತಾರೆ ॥

*** ಸೂತ್ರಂ – 7 (ಇಬ್ಬರಿಗೂ)**

ತಾಂ ಪತಿತ್ಥ ಏಕಧನೇನೋತ್ಥಾಪಯತ್ಯನ್ಯೋ ವಾ ಬಾಹ್ಮಣಃ ಉದೀರ್ಷ್ವನಾರಿ ಇತಿ ॥

ನಂತರ ಅವಳನ್ನು ಪತಿಯ ಅಣ್ಣತಮ್ಮಂದಿರು ಅವರಿಲ್ಲದಿದ್ದರೆ ಬೇರೆಯವರು, ಏಕಧನಪಾತ್ರೆಯಿಂದ ಎಬ್ಬಿಸುತ್ತಾರೆ ಅಥವಾ ಬೇರೊಬ್ಬ ಬ್ರಾಹ್ಮಣನಾದರೂ ಎಬ್ಬಿಸಬಹುದು, ಉದೀರ್ಷ್ವನಾರಿ.....ಮಂತ್ರದಿಂದ ॥

*** ಗೋಪಾಲಭಾಷ್ಯಂ –**

ತಾಂ ಉಪಸಂಶ್ಲಿಷ್ಟಾಂ ಪತ್ನೀಂ ಪತೀತ್ಥಃ ಪತಿಸ್ಸಹವಾಸೀ ಸದ್ಯಾತ್ರಾದಿಃ ಏಕಧನೇನ ಹೇತುನಾ ಏಕಧನಂ ಗೃಹೀತ್ವಾ ಉದೀರ್ಷ್ವನಾರೀತ್ಯೃಚಾ ಉತ್ಥಾಪಯೇತ್ । ಪತಿಹಿತ ಇತಿ ಬೋಧಾಯನಃ । ತದಲಾಭೇ ಅನ್ಯೋ ವಾ ಬ್ರಾಹ್ಮಣ ಏತೇನ ಕಲ್ಪೇನೋತ್ಥಾಪಯೇತ್ ॥

ಮೃತ ಪತಿಯ ಜೊತೆ ಮಲಗಿರುವ ಆ ಪತ್ನಿಯನ್ನು, ಗಂಡನ ಸಹವಾಸಿಗಳಾದ ಅಣ್ಣತಮ್ಮಂದಿರು ಏಕಧನಪಾತ್ರೆಯನ್ನು(ಯಜ್ಞಕ್ಕೆ ಬಳಸುವ ಮಣ್ಣಿನ ಪಾತ್ರೆ) ಹಿಡಿದುಕೊಂಡು, ಉದೀರ್ಷ್ವನಾರೀ....., ಎಂಬ ಮಂತ್ರದಿಂದ ಏಳಿಸಬೇಕು । ಇಲ್ಲಿ ಪತಿಯ ಹಿತವನ್ನು ಬಯಸುವವರು ಎಂದು ಬೋಧಾಯನರು ಹೇಳುತ್ತಾರೆ । ಅವರಿಲ್ಲದಿದ್ದರೆ ಬೇರೇ ಬ್ರಾಹ್ಮಣರು ಈ ವಿಧಾನದಿಂದಲೇ ಏಳಿಸಬೇಕು ॥

* ಕಪರ್ದಿಭಾಷ್ಯಂ –

ಮೃತೇನ ಸಹ ಶಾಯಯಿತ್ವಾ ತಾಂ ಉತ್ಥಾಪಯತಿ ಪತೀತ್ಥಃ ಬ್ರಾಹ್ಮಣಬ್ರುವಃ । ಮೃತಸ್ಯ ಭ್ರಾತೇತಿ ಕೇಚಿತ್ । ಅಪುತ್ರೋ ಮೃತಶ್ಚೇತ್ ಪತೀತ್ಥಃ ಭರ್ತೃತ್ವಮಿಚ್ಛನ್ ತಾಂ ಉತ್ಥಾಪಯತಿ ತ್ವಯ್ಯಹಂ ಪುತ್ರಮುತ್ಪಾದಯಿಶ್ಯ ಇತಿ । ಉತ್ತಿಷ್ಠತಿ । ತಸ್ಯೈ ಪ್ರಜಾಂ ದ್ರವಿಣಂ ಚೇಹಧೇಹಿ ಇತಿ ಮಂತ್ರಲಿಂಗಾತ್ । ಯದ್ಯೇವಂ ನಾಚರಿಷ್ಯತಿ ಏಷ ಮಂತ್ರೋವಿಲಿಂಗಸ್ಯಾತ್ । ಅಪುತ್ರಸ್ಯ ಮೃತಸ್ಯ ಧರ್ಮಶಾಸ್ತ್ರೇ ಪುತ್ರೋತ್ಪಾದನಂ ಶ್ರೂಯತೇ । ದ್ವಾದಶವಿಧಂ ಪುತ್ರತ್ವಂ । ತದಯುಕ್ತಂ । ಮಂತ್ರೇಣ ಪುತ್ರೋತ್ಪಾದನಂ ವಿದ್ಯಮಾನಸ್ಯೈವ ಆಪಸ್ತಂಬಮತ್ಯಾ । ಅನ್ಯೇನ ಪುತ್ರೋತ್ಪಾದನಂ ನೇಷ್ಟಂ । ಜನಯಿತುಃ ಪುತ್ರೋಭವತೀತಿ ವಚನಾತ್ । ಪ್ರೇತಪತ್ನ್ಯಾಸ್ತು ಅನನ್ಯಶ್ರುತೇಃ, ಯಾವಜ್ಜೀವಂ ಪ್ರೇತಪತ್ನೀತಿ ಇತರಸ್ಯಾಂ ತು ವಿಕಲ್ಪಃ । ಉಪದೇಶಸ್ತು ಅನ್ಯಸ್ತ್ರೀಷು ಪುತ್ರೋತ್ಪಾದನಂ ನೇಷ್ಟಂ । ಧರ್ಮಶಾಸ್ತ್ರೇಷು ಪುತ್ರೋತ್ಪಾದನಂ ಪುತ್ರಪ್ರಶಂಸಾರ್ಥಮಿತಿ । ಅನ್ಯೋ ವಾ ಬ್ರಾಹ್ಮಣ ಉತ್ಥಾಪಯತೀತಿ ಕೇಚಿತ್ ವಿನಿವೇಶಂ ಕುರ್ವಂತಿ । ಉತ್ಥಾಪಯತಿ ಕಾಮೇನ ಪತೀತ್ಥಃ ಇತರಥಾನ್ಯ ಇತಿ ॥

ಮೃತ ಪತಿಯ ಜೊತೆ ಪತ್ನಿಯನ್ನು ಮಲಗಿಸಿ, ಮತ್ತೆ ಏಳಿಸುತ್ತಾನೆ ಪ್ರಾಕೃತ(ಸಾಮಾನ್ಯ) (ಅನುಷ್ಠಾನರಹಿತ) ಬ್ರಾಹ್ಮಣನು । ಆದರೆ ಕೆಲವರು ಈ ಕೆಲಸವನ್ನು ಮೃತನ ಅಣ್ಣತಮ್ಮಂದಿರು ಮಾಡಬೇಕೆಂದು ಹೇಳುತ್ತಾರೆ । ಮಕ್ಕಳಿಲ್ಲದಿದ್ದರೆ ಮೃತಪತಿಯ ಸೋದರರು **"ನಿನಗೆ ಗಂಡನಾಗಲು ಇಚ್ಛಿಸಿ, ನಿನ್ನನ್ನು ಏಳಿಸುತ್ತಿದ್ದೇನೆ, ನಿನ್ನಲ್ಲಿ ಮಕ್ಕಳನ್ನು ಪಡೆಯುತ್ತೇನೆ"**, ಎಂದು ಹೇಳಿ ಅವಳನ್ನು ಏಳಿಸಬೇಕು । ಏಕೆಂದರೆ ತಸ್ಯೈ ಪ್ರಜಾಂ ದ್ರವಿಣಂ ಚೇಹಧೇಹಿ....., ಎಂಬ ಮಂತ್ರಲಿಂಗವಿರುವುದರಿಂದ । ಹೀಗೆ ಮಾಡದಿದ್ದರೆ ಆ ಮಂತ್ರವು ಲಿಂಗರಹಿತವಾಗಿ ಹೋಗುತ್ತದೆ । ಮಕ್ಕಳಿಲ್ಲದ ಮೃತನಿಗೆ ಧರ್ಮಶಾಸ್ತ್ರದಲ್ಲಿ ಈ ರೀತಿಯಾಗಿ ಪುತ್ರೋತ್ಪತ್ತಿಯನ್ನು ಹೇಳಿದೆ । ಹಾಗೆಯೇ 12 ವಿಧಗಳಲ್ಲಿ ಮಗನಾಗುವಿಕೆಯನ್ನು ಹೇಳಿದೆ । ಆದರೆ ಈ ಮೇಲೆ ಹೇಳಿದ ಅಭಿಪ್ರಾಯವು ಸರಿಯಲ್ಲ

ಎಂದು ಆಪಸ್ತಂಬರು ಹೇಳುತ್ತಾರೆ । ಏಕೆಂದರೆ ಆಪಸ್ತಂಬ ಮುನಿಗಳು, ಬದುಕಿರುವ ಗಂಡನಿಗೆ ಪತ್ನಿಯಿಂದ ಮಂತ್ರಪೂರ್ವಕವಾಗಿ ಪುತ್ರೋತ್ಪಾದನೆಯನ್ನು ವಿಧಿಸಿದ್ದಾರಾದ್ದರಿಂದ । ಬೇರೆಯವರಿಂದ ಮಕ್ಕಳನ್ನು ಪಡೆಯುವುದು ಆಪಸ್ತಂಬರ ಅಭಿಪ್ರಾಯದಲ್ಲಿ ಸರಿಯಾದುದಲ್ಲ । ಏಕೆಂದರೆ ಮಂತ್ರಪೂರ್ವಕವಾಗಿ ಪತಿಯು ಪತ್ನಿಯಲ್ಲಿ ಸೇರಿ ಪಡೆಯುವ ಮಗುವೇ ಮಗನಾಗುತ್ತಾನೆ ಎಂಬ ಶ್ರುತಿಯಿರುವು ದರಿಂದ । ಮೃತನ ಪತ್ನಿಗಾದರೋ ಯಾವ ಶ್ರುತಿಯೂ ಇಲ್ಲದಿರುವುದರಿಂದ ಜೀವನ ಪೂರ್ತಿ ಅವಳು ಮೃತನಪತ್ನಿಯಾಗಿಯೇ ಇರುತ್ತಾಳೆ । ಇನ್ನು ಪತಿಯು ಬದುಕಿರುವ ಪತ್ನಿಯರಲ್ಲಿ ವಿಕಲ್ಪವಾಗಿ ಹೇಳಿರುವುದರಿಂದ । ಅನ್ಯಸ್ತ್ರೀಯರಲ್ಲಿ ಮಕ್ಕಳನ್ನು ಪಡೆಯುವುದು ಶಾಸ್ತ್ರಸಮ್ಮತವಲ್ಲ ಎಂದು ಉಪದೇಶವಿರುವುದರಿಂದ । ಇನ್ನು ಧರ್ಮಶಾಸ್ತ್ರಗಳಲ್ಲಿ ಮೃತಪತ್ನಿಯಲ್ಲಿ ಮಕ್ಕಳನ್ನು ಪಡೆಯುವುದು ಎಂದು ಹೇಳಿರುವುದು, ಪುತ್ರಪ್ರಶಂಸೆಗಾಗಿ ಮಾತ್ರವೇ ಹೊರತು ಆ ಕರ್ಮವನ್ನು ಮಾಡುವುದಕ್ಕಾಗಿ ಅಲ್ಲ । ಬೇರೆ ಬ್ರಾಹ್ಮಣರು ಅವಳನ್ನು ಏಳಿಸುತ್ತಾರೆ ಎಂದು ಕೆಲವರು ಹೇಳುತ್ತಾರೆ । ಕಾಮದಿಂದ ಮೃತಪತಿಯ ಸೋದರರು ಏಳಿಸುತ್ತಾರೆ, ಬೇರೆಯವರು ಮಾತ್ರ ಕಾಮದಿಂದ ಅಲ್ಲ ॥

*** ಸೂತ್ರಂ – 8 (ಇಬ್ಬರಿಗೂ)**

ಅತ್ರ ಪತ್ನೀ ಸಾಹಸ್ರಂ ವರಂ ದದಾತಿ ॥

ಆಗ ಅವಳು(ಪತ್ನೀ) ಸಾವಿರರೂಪಾಯಿಗಳನ್ನು ಅವರಿಗೆ ಕೊಡುತ್ತಾಳೆ ॥

*** ಗೋಪಾಲಭಾಷ್ಯಂ –**

ಅತ್ರ ಉತ್ಥಾಪನಾನಂತರಂ ಸಹಸ್ರಮೂಲ್ಯಂ ವರಂ ದದಾತಿ ಯಸ್ಮಾ ಇಚ್ಛತಿ । ಸಾಹಸ್ರಾಶಕ್ತೌ ಶಕ್ತಿಪರಿಮಾಣಂ ವರಂ ದದ್ಯಾತ್ । ನ ತು ತಲ್ಲೋಪಃ । ಅಧ್ವರ್ಯವೇ ದದ್ಯಾತ್ ಇತಿ ಅನ್ಯೇ । ಪತ್ನ್ಯನೇಕತ್ವೇತು ಸರ್ವಾಸಾಮುಪ ನಿಪಾತನಾದಿ ಕ್ರಮೇಣ ಕ್ರಿಯತೇ ॥

ಮೃತನ ಪತ್ನಿಯನ್ನು ಏಳಿಸಿದ ನಂತರ ಅವಳು ಯಾರಿಗೆ ದಕ್ಷಿಣೆಯನ್ನು ಕೊಡಲು ಇಚ್ಛಿಸುತ್ತಾಳೋ ಅವರಿಗೆ ಸಹಸ್ರದಕ್ಷಿಣೆಯನ್ನು ಕೊಡಬೇಕು । ಅಷ್ಟನ್ನು

ಕೊಡಲು ಸಾಮರ್ಥ್ಯವಿಲ್ಲದಿದ್ದರೆ ಎಷ್ಟು ಸಾಧ್ಯವೋ ಅಷ್ಟನ್ನೇ ಕೊಡಬೇಕು । ಆದರೆ ಕೊಡದೇ ಇರಬಾರದು । ಆದರೆ ಕೆಲವರು ಈ ದಕ್ಷಿಣೆಯನ್ನು ಅಧ್ವರ್ಯುವಿಗೆ ಕೊಡಬೇಕು ಎಂದು ಹೇಳುತ್ತಾರೆ । ಮೃತನಿಗೆ ಅನೇಕ ಪತ್ನಿಯರು ಇದ್ದರೆ, ಕ್ರಮವಾಗಿ ಎಲ್ಲರನ್ನೂ ಮೃತನ ಪಕ್ಕದಲ್ಲಿ ಮಲಗಿಸಿ ಏಳಿಸಬೇಕು ॥

*** ಕಪರ್ದಿಭಾಷ್ಯಂ –**

ಅತ್ರ ಪತ್ನೀ ಸಾಹಸ್ರಂ ವರಂ ದದಾತಿ । ಸಹಸ್ರಮೂಲ್ಯಂ ಅಧ್ವರ್ಯವೇ ದದಾತಿ । ನೋತ್ಥಾಪನ ಕರ್ತೃಭ್ಯಃ ಅತ್ರೇತಿ ವಚನಾತ್ ॥

ನಂತರ ಪತ್ನಿಯು ಸಾವಿರ ದಕ್ಷಿಣೆಯನ್ನು ಕೊಡಬೇಕು । ಅಧ್ವರ್ಯುವಿಗೇ ಕೊಡ ಬೇಕು । ಮೇಲೇಳಿಸಿದವನಿಗೆ ಕೊಡಬಾರದು, **"ಅತ್ರ"** ಎಂಬ ಮಾತಿರುವುದರಿಂದ ॥

*** ಸೂತ್ರಂ – 9 (ಇಬ್ಬರಿಗೂ)**

ಹಸ್ತೌ ಸಂಮಾರ್ಷ್ಟಿ ॥

ಕರ್ತೃವು, ಶವದ ಎರಡು ಕೈಗಳನ್ನು ಸವರುತ್ತಾರೆ ॥

*** ಗೋಪಾಲಭಾಷ್ಯಂ –**

ಪ್ರೇತಸ್ಯಪಾಣೀರಧ್ವರ್ಯುಃ ಸಂಮೃಜ್ಯಾತ್ । ಏತದೇವ ಪ್ರತಿವರ್ಣಂ ವಿಶಿಷಂನ್ನಾಹ ॥

ಮೃತ ಕೈಗಳನ್ನು ಕರ್ತೃವು ಸವರಬೇಕು । ಈ ಕರ್ಮದಲ್ಲಿ ಪ್ರತಿವರ್ಣಕ್ಕೂ ಬೇರೆಬೇರೆಯಾಗಿ ಹೇಳಿದೆ ॥

*** ಸೂತ್ರಂ – 10 (ಇಬ್ಬರಿಗೂ)**

ಸುವರ್ಣೇನ ಬ್ರಾಹ್ಮಣಸ್ಯ ಸುವರ್ಣಗ್ಂ ಹಸ್ತಾತ್ ಇತಿ ॥

ಚಿನ್ನದ ನಾಣ್ಯದಿಂದ ಬ್ರಾಹ್ಮಣನ ಕೈ ಸವರುತ್ತಾರೆ, ಸುವರ್ಣಂಹಸ್ತಾ..... ಮಂತ್ರದಿಂದ ॥

*** ಗೋಪಾಲಭಾಷ್ಯಂ –**

ಸಕೃದೇವ ಮಂತ್ರಃ । ಅತ್ರೈವತ್ವಮಿತಿ । ಮೃತಾಭಿಧಾನಾತ್ । ಹಸ್ತಾತ್ ಇತ್ಯೇಕವಚನಂ ತು ಜಾತ್ಯಾಖ್ಯಾಪರಂ ॥

ಮಂತ್ರವನ್ನು ಒಂದೇಸಲ ಹೇಳಬೇಕು । ಏಕೆಂದರೆ, **'ಅತ್ರೈವತ್ವಂ'** ಎಂಬ ಮಂತ್ರಪದದಿಂದ ಮೃತನನ್ನು ಹೆಸರಿಸುತ್ತಿರುವುದರಾದ್ದರಿಂದ । **'ಹಸ್ತಾತ್'** ಎಂದು ಏಕವಚನವು ಜಾತಿಯನ್ನು ಹೇಳುತ್ತಿರುವುದರಿಂದ ॥

*** ಕಪರ್ದಿಭಾಷ್ಯಂ –**

ಸುವರ್ಣಂ ಹಸ್ತಾತ್ ಇತಿ ಸುವರ್ಣೇನ ಹಸ್ತೌ ಸಂಮಾಷ್ಟ್ಯರ್ದ್ಧಯ್ಯುಃ । ಸಕೃದೇವ ಮಂತ್ರಃ ಮೃತಾಭಿಧಾನಾತ್ ॥

ಸುವರ್ಣಂ ಹಸ್ತಾತ್....., ಎಂಬ ಮಂತ್ರದಿಂದ ಮೃತಬ್ರಾಹ್ಮಣನ ಕೈಯನ್ನು ಚಿನ್ನದಿಂದ ಕರ್ತೃವು ಸವರಬೇಕು । ಒಂದೇ ಸಲ ಮಂತ್ರವನ್ನು ಹೇಳಬೇಕು, ಏಕೆಂದರೆ ಮೃತನನ್ನು ಉದ್ದೇಶಿಸಿ ಹೇಳುತ್ತಿರುವುದರಿಂದ ॥

*** ಸೂತ್ರಂ – 11 (ಕ್ಷತ್ರಿಯರಿಗೆ)**

ಧನುಷಾ ರಾಜನ್ಯಸ್ಯ ಧನುರ್ಹಸ್ತಾತ್ ಇತಿ ॥

ಧನುಸ್ಸಿನಿಂದ (ಬಿಲ್ಲು) ಕ್ಷತ್ರಿಯನ ಕೈ ಸವರುತ್ತಾರೆ, ಧನುರ್ಹಸ್ತಾ....ಮಂತ್ರದಿಂದ ॥

*** ಗೋಪಾಲಭಾಷ್ಯಂ –**

ಸ್ಪಷ್ಟಮೇತತ್ ॥

ಇದಕ್ಕೆ ಸೂತ್ರದಲ್ಲಿಯೇ ಸ್ಪಷ್ಟಾರ್ಥವಿದೆ ॥

*** ಕಪರ್ದಿಭಾಷ್ಯಂ –**

ರಾಜನ್ಯೋ ಮೃತಶ್ಚೇತ್ ಧನುರ್ಹಸ್ತಾದಿತಿ ಮಂತ್ರಃ । ಧನುಷಾ ॥

ಕ್ಷತ್ರಿಯನು ಮೃತನಾದರೆ ಧನುಸ್ಸಿನಿಂದ ಧನುರ್ ಹಸ್ತಾತ್....., ಎಂಬ ಮಂತ್ರದಿಂದ ಮೃತಕ್ಷತ್ರಿಯನ ಕೈಯನ್ನು ಸವರಬೇಕು ॥

*** ಸೂತ್ರಂ – 12 (ವೈಶ್ಯರಿಗೆ)**

ಮಣಿನಾ ವೈಶ್ಯಸ್ಯ ಮಣಿಗ್ಂ ಹಸ್ತಾತ್ ಇತಿ ॥

ಮಣಿಯಿಂದ ವೈಶ್ಯನ ಕೈ ಸವರುತ್ತಾರೆ ಮಣಿಗ್ಂ ಹಸ್ತಾ.....ಮಂತ್ರದಿಂದ ॥

*** ಗೋಪಾಲಭಾಷ್ಯಂ –**

ಮೌಕ್ತಿಕಾದಿ ಸಸುಷಿರಂ ಸೂಕ್ಷ್ಮಂ ಭೂಷಣಂ ಮಣಿರಿತ್ಯುಚ್ಯತೇ ॥

ಸೂಕ್ಷ್ಮವಾದ ರಂಧ್ರವಿರುವ ಮೌಕ್ತಿಕಾದಿ ಮಣಿಗಳಿಂದ, ಅಂದರೆ ಅಲಂಕಾರಕ್ಕೆ ಬಳಸುವ ಮಣಿಗಳು ಎಂದರ್ಥ । ಇವುಗಳಿಂದ ಮೃತವೈಶ್ಯನ ಕೈಗಳನ್ನು ಸವರಬೇಕು ॥

*** ಕಪರ್ದಿಭಾಷ್ಯಂ –**

ಏವಂ ವೈಶ್ಯಸ್ಯ ಮಣಿಂ ಹಸ್ತಾತ್ ಇತಿ । ಮಣಿನಾ ॥

ಮೃತವೈಶ್ಯನ ಕೈಯನ್ನು ಮಣಿಯಿಂದ, ಮಣಿಗ್ಂ....., ಎಂಬ ಮಂತ್ರದಿಂದ ಸವರಬೇಕು ॥

*** ಸೂತ್ರಂ – 13 (ಇಬ್ಬರಿಗೂ)**

ಅಥೈನಂ ಚಿತಾವುಪರ್ಯದ್ಧ್ಯಹತಿ ॥

ಈಗ ಶವವನ್ನು, ಚಿತೆಯಮೇಲೆ ಇಡುತ್ತಾರೆ ॥

*** ಗೋಪಾಲಭಾಷ್ಯಂ –**

ಏನಂ ಮೃತಂ ಅಮಾತ್ಯಾಃ ದಾರುಚಿತೌ ರಜ್ವಾದಿಸಹಿತಂ ಅಧಿನಿದಧ್ಯುಃ ॥

ಈ ಮೃತನನ್ನು ಜ್ಞಾತಿಗಳು ಚಿತೆಯಮೇಲೆ ದರ್ಭೆಯಹಗ್ಗ ಮುಂತಾದವುಗಳ ಸಹಿತವಾಗಿ ಇಡಬೇಕು ॥

*** ತತ್ರಾಹ ಬೋಧಾಯನಃ –**

"ನಿವೀತಿನಸ್ತ್ವೇವ ವಹೇಯುಃ ಚಿತಾಯಾಂ ಚಾದಧ್ಯುರಿತಿ" ॥ ಅತ್ರಾಪಿ ದಕ್ಷಿಣಾಶಿರಸ್ತ್ವಂ ಪ್ರತ್ಯೇತವ್ಯಂ ॥

ಇಲ್ಲಿ ಬೋಧಾಯನರು, ಎಲ್ಲಾ ಜ್ಞಾತಿಗಳು ನಿವೀತಿಗಳಾಗಿ ಮೃತನನ್ನು ಒಯ್ಯಬೇಕು ಹಾಗೂ ನಿವೀತಿಗಳಾಗಿ ಚಿತೆಯಮೇಲೆ ಇಡಬೇಕು । ಚಿತೆಯಮೇಲೆ ಇಡುವಾಗಲೂ ಸಹ ದಕ್ಷಿಣಕ್ಕೆ ತಲೆಯಾಗಿ ಮಲಗಿಸಬೇಕು, ಎಂದು ಹೇಳಿದ್ದಾರೆ ॥

*** ಕಪರ್ದಿಭಾಷ್ಯಂ –**

ಅಥೈನಂ ಚಿತಾವದ್ಧ್ಯಾಹತಿ ದಕ್ಷಿಣಾಶಿರಸಂ ಸಂವೇಶಯತಿ ॥

ನಂತರ ಈ ಮೃತನನ್ನು ದಕ್ಷಿಣಕ್ಕೆ ತಲೆ ಬರುವಂತೆ ಚಿತೆಯಮೇಲೆ ಮಲಗಿಸಬೇಕು ॥

*** ಸೂತ್ರಂ – 14 (ಇಬ್ಬರಿಗೂ)**

ಅತ್ರ ವಾ ಪತ್ನ್ಯಾಃ ಸಂವೇಶನಾದಿ ಕ್ರಿಯತೇ ॥

ಈ ಸಂದರ್ಭದಲ್ಲಿ ಬೇಕಾದರೂ ಪತ್ನಿಯು ತನ್ನ ಪತಿಯ ಶವದ ಜೊತೆ, ಇಯಂ ನಾರೀ.....ಮಂತ್ರದಿಂದ ಮಲಗಬಹುದು ಹಾಗೂ ಉದೀರ್ಷ್ವನಾರೀ..... ಮಂತ್ರದಿಂದ ಪತಿಯಕಡೆಯವರು ಅಥವಾ ಬ್ರಾಹ್ಮಣರು ಇವಳನ್ನು ಏಳಿಸಬೇಕು ॥

*** ಗೋಪಾಲಭಾಷ್ಯಂ –**

ಅತ್ರ ಅಸ್ಮಿನ್ ಕಾಲೇ ವಾ ವರದಾನಾಂತಂ ಕ್ರಿಯತೇ । ತಥಾ ಸತಿ ಸಂಪ್ರೈಷಾನಂತರಂ ಹಸ್ತಸಂಮಾರ್ಜನಾದಿ ಕ್ರಿಯತೇ ॥

ಈ ಸಮಯದಲ್ಲಿ ಪತ್ನಿಸಂವೇಶನದಿಂದ(ಮಲಗಿಸುವಿಕೆ) ವರದಾನಾಂತದವರೆಗೆ ಮಾಡಬೇಕು ಎಂದು ವಿಕಲ್ಪವಾಗಿ ಹೇಳಿದೆ । ಈ ಸಮಯದಲ್ಲಿ ಮಾಡುವುದಾದರೆ, ಸಂಪ್ರೈಷಾನಂತರ(ಅಂಗಾದಂಗಾತ್.....) ಮೃತನ ಕೈಸವರುವಿಕೆಗಳನ್ನು ಮಾಡಬೇಕು ॥

*** ಕಪರ್ದಿಭಾಷ್ಯಂ –**

ಅತ್ರ ವಾ ಪತ್ನ್ಯಾಸ್ಸಂವೇಶನಾದಿ ಕ್ರಿಯತೇ । ಅಂಗಾದಂಗಾದಿತಿ ಪ್ರೈಷಮುಕ್ತ್ವಾ ಆರೋಪ್ಯ ಚಿತಿಂ ಸಂವೇಶನಾದಿ ಹಸ್ತಸಂಮಾರ್ಜನಾಂತಂ ಕೇಚಿತ್ ॥

ಅಥವಾ ಈ ಸಮಯದಲ್ಲಿ ಪತ್ನಿಯ ಸಂವೇಶನಾದಿ ವರದಾನಾಂತದವರೆಗೆ ಮಾಡಬಹುದು । ಅಂಗಾದಂಗಾತ್....., ಎಂಬ ಮುಂತಾಗಿ ಪ್ರೈಷವನ್ನು ಹೇಳಿ ಮೃತನನ್ನು ಚಿತೆಗೆ ಏರಿಸಿ, ಮಲಗಿಸುವಿಕೆಯಿಂದ ಕೈಸವರುವಿಕೆಯವರೆಗೆ ಮಾಡಬೇಕೆಂದು ಕೆಲವರು ಹೇಳುತ್ತಾರೆ ॥

*** ಸೂತ್ರಂ – 15 (ಇಬ್ಬರಿಗೂ)**

ಅಥಾಸ್ಯ ಪ್ರಾಣಾಯತನೇಷು ಹಿರಣ್ಯಶಲ್ಕಾನ್ ಪ್ರತ್ಯಸ್ಯತ್ಯಾಜ್ಯ ಬಿಂದೂನ್ ವಾ ॥

ನಂತರ ಶವದ ಇಂದ್ರಿಯಗಳ ಜಾಗದಲ್ಲಿ ಚಿನ್ನದಚೂರುಗಳನ್ನು ಹಾಕಬೇಕು । ಅಥವಾ ಆಜ್ಯಬಿಂದುಗಳನ್ನಾದರೂ ಹಾಕಬೇಕು ॥

*** ಗೋಪಾಲಭಾಷ್ಯಂ –**

ಅತ್ರಾಪಿ ಪುರುಷಶೀರ್ಷವತ್ ಶೀರ್ಷಣ್ಯೇಷ್ವೇವ ಅಯಂ ವಿಧಿಃ । ಶಲ್ಕಾಃ ಶಕಲಾಃ । ತದಲಾಭೇ ಆಜ್ಯಬಿಂದೂನ್ ವಾ ಅವನಯೇತ್ । ಅತ್ರಾಪಿ ತದ್ವದೇವ ಆಸ್ಯೇ ಅಕ್ಷಿ ಕಟಯೋಃ ಕರ್ಣಯೋಃ ನಾಸಿಕಯೋರಿತಿ ಸಪ್ತ ಹಿರಣ್ಯಶಕಲಾಃ ಪ್ರಕ್ಷೇಪ್ತವ್ಯಾಃ ॥

ಮಹಾಗ್ನಿಚಯನದಲ್ಲಿ ಪುರುಷನ ತಲೆಗೆ ಯಾವರೀತಿಯಾದಂತಹ ಉಪಧಾನವನ್ನು(ಇಡುವುದು) ಹೇಳಿದೆಯೋ ಹಾಗೆ ಇಲ್ಲೂಕೂಡ ಮೃತ ಯಜಮಾನನ ತಲೆಯ ಮೇಲೆ ಮುಂದೆ ಹೇಳುವ ವಿಧಿಯನ್ನು ಮಾಡಬೇಕು । **ಶಲ್ಕಾ** ಎಂದರೆ ಚಿನ್ನದಕಡ್ಡಿ ಎಂದರ್ಥ । ಅದಿಲ್ಲದಿದ್ದರೆ ತುಪ್ಪದ ಹನಿಗಳನ್ನಾದರೋ ಮೃತಯಜಮಾನನ ತಲೆಯಮೇಲೆ ಮುಂದೆ ಹೇಳುವ ಕ್ರಮದಲ್ಲಿ ಹಾಕಬೇಕು । ಇಲ್ಲೂಕೂಡ ಮಹಾಗ್ನಿಚಯನದ ವಿಧಿಯಂತೆ ಬಾಯಿ, 2 ಕಣ್ಣುಗಳು, 2 ಕಿವಿ, ಮೂಗಿನ 2 ಹೊಳ್ಳೆಗಳು, ಇವುಗಳ ನೇಲೆ ಚಿನ್ನವನ್ನು ಅಥವಾ ತುಪ್ಪವನ್ನು ಹಾಕಬೇಕು ॥

*** ಕಪರ್ದಿಭಾಷ್ಯಂ –**

ನವ ವೈ ಪುರುಷೇ ಪ್ರಾಣಾಃ ಇತಿ ನವಸು ಪ್ರಾಣಾಯತನೇಷು ಹಿರಣ್ಯಶಕಲಾನ್ ಕ್ಷಿಪತಿ । ಅಥವಾ ಸಪ್ತ ವೈ ಶೀರ್ಷಣ್ಯಾಃ ಪ್ರಾಣಾಃ ಇತಿ ಸಪ್ತಸು ಪ್ರಾಣಾಯತನೇಷು ಸಪ್ತಹಿರಣ್ಯಶಕಲಾನ್ ಪ್ರತ್ಯಸ್ಯತಿ । ಮಹಾಗ್ನೌ ಪುರುಷಶಿರಸಿ ಯಥಾ । ಪ್ರಥಮಂ ಆಸ್ಯೇ ತತೋ ದಕ್ಷಿಣೇಕ್ಷ್ಣಿ । ತತಸ್ಸವ್ಯೇ । ತತೋ ದಕ್ಷಿಣೇ ಕರ್ಣರಂಧ್ರೇ । ತತಸ್ಸವ್ಯೇ । ತತೋ ದಕ್ಷಿಣಸ್ಯಾಂ ನಾಸಿಕಾಯಾಂ ತತೋನ್ಯಸ್ಯಾಂ । ಇತಿ ಹಿರಣ್ಯಶಕಲ ನಿಧಾನಕ್ರಮಃ ಅತ್ರ ದ್ರಷ್ಟವ್ಯಃ ॥

ಪುರುಷನಿಗೆ 9 ಪ್ರಾಣಗಳು ಎಂಬ ಶ್ರುತಿಯಿರುವುದರಿಂದ, ಮೃತನ 9 ಪ್ರಾಣಗಳಿಗೆ ಆಶ್ರಯವಿರುವ ಅಂಗಗಳಲ್ಲಿ ಚಿನ್ನವನ್ನು ಹಾಕಬೇಕು । ಅಥವಾ ತಲೆಯಲ್ಲಿರುವ ಮೃತನ 7 ಪ್ರಾಣಾಯತನಗಳಿಗೆ 7 ಚಿನ್ನವನ್ನು ಹಾಕಬೇಕು । ಮಹಾಗ್ನಿಚಯನದಲ್ಲಿ ಯಾವರೀತಿಯಾಗಿ ಚಿನ್ನವನ್ನು ಹಾಕುತ್ತಾರೋ ಹಾಗೆಯೇ ಹಾಕಬೇಕು । ಹೇಗೆಂದರೆ – ಮೊದಲು ಬಾಯಿಗೆ, ನಂತರ ಬಲಕಣ್ಣಿಗೆ, ನಂತರ ಎಡಕಣ್ಣಿಗೆ, ನಂತರ ಬಲಕಿವಿಗೆ, ನಂತರ ಎಡಕಿವಿಗೆ, ನಂತರ ಬಲಮೂಗಿನ ಹೊಳ್ಳೆಗೆ, ನಂತರ ಎಡಮೂಗಿನ ಹೊಳ್ಳೆಗೆ, ಹೀಗೆ ಚಿನ್ನದ ಕಡ್ಡಿಯನ್ನು ಹಾಕುವ ಕ್ರಮ ಎಂದು ತಿಳಿಯಬೇಕು ॥

*** ಸೂತ್ರಂ – 16 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಪಾತ್ರಾಣಿ ಚಿನೋತಿ ॥

ಈಗ ಯಜ್ಞಪಾತ್ರೆಗಳನ್ನು ಚಯನ(ಜೊತೆ) ಮಾಡಬೇಕು ॥

*** ಗೋಪಾಲಭಾಷ್ಯಂ –**

ಪಾತ್ರಾಣಿ ಹವಿರ್ಯಜ್ಞೇಷೂಪಯುಕ್ತಾನಿ ಸ್ಫ್ಯ ಕಪಾಲಾದೀನಿ ಯಜಮಾನಸ್ಯೋಪರಿ ಚಿನುಯಾತ್ । ತೇಷಾಂ ಪ್ರತಿಪಾದ್ಯತ್ವಾತ್ । ಅತೋ ನಾತ್ರ ನಷ್ಟದುಷ್ಟಾದೇರುತ್ಪಾದನಂ ಇಷ್ಯತೇ ॥

ಮೃತ ಆಹಿತಾಗ್ನಿಯ ಯಜ್ಞಪಾತ್ರೆಗಳನ್ನು ಎಂದರೆ, ಹವಿರ್ಯಜ್ಞದಲ್ಲಿ(ದರ್ಶಪೂರ್ಣಮಾಸೇಷ್ಟಿ) ಉಪಯೋಗಿಸಿದ ಸ್ಫ್ಯ, ಕಪಾಲಗಳು, ಮುಂತಾದವುಗಳನ್ನು ಯಜಮಾನನ ಮೇಲೆ ಇಡಬೇಕು । ಅವುಗಳನ್ನು ಇಡಬೇಕೆಂದು ವಿಧಿಸಿರುವುದರಿಂದ ಇಡಬೇಕು । ಆದ್ದರಿಂದ ನಾಶವಾದ ಅಥವಾ ಹಾಳಾದ ಪಾತ್ರೆಗಳನ್ನು ಮತ್ತೆ ಹೊಸದಾಗಿ ತಯಾರಿಸಿ ಇಡುವ ಕ್ರಮವಿಲ್ಲ ॥

*** ಕಪರ್ದಿಭಾಷ್ಯಂ –**

ಮೃತಸ್ಯ ಉಪರಿಷ್ಟಾತ್ ಪಾತ್ರಾಣಿ ಚಿನೋತಿ ॥

ಮೃತ ಅಗ್ನಿಹೋತ್ರಿಯ ಮೇಲೆ ಹವಿರ್ಯಜ್ಞಪಾತ್ರೆಗಳನ್ನು ಇಡಬೇಕು ॥

*** ಸೂತ್ರಂ – 17 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಸರ್ವಾಣ್ಯನುಲೋಮಾನಿ ಧ್ರುವಾ ವರ್ಜಮ್ ॥

ಧ್ರುವಾಪಾತ್ರೆಯನ್ನು ಬಿಟ್ಟು, ಇನ್ನೆಲ್ಲಾ ಪಾತ್ರೆಗಳನ್ನು ಯಜ್ಞದಲ್ಲಿಡುವಂತೆ, ಅನುಲೋಮವಾಗಿಯೇ(ಒಂದೊಂದಂತೆ) ಇಡಬೇಕು ॥

*** ಗೋಪಾಲಭಾಷ್ಯಂ –**

ಧ್ರುವಾವ್ಯತಿರಿಕ್ತಾನಿ ಸರ್ವಾಣಿ ಪಾತ್ರಾಣಿ ಅನುಲೋಮಾನಿ ಉದಗಗ್ರಾಣಿ ಚಿನುಯಾತ್ । ಧ್ರುವಾಂ ತು ದಕ್ಷಿಣಾಗ್ರಾಮಿತ್ಯರ್ಥಃ । ಏತಚ್ಚ ಮೂಲಾಗ್ರವಿಭಾಗರಹಿತೇಷು ಅಸಂಭವಾನ್ನಪ್ರವರ್ತತೇ ॥

ಧ್ರುವಾ ಪಾತ್ರೆಯನ್ನು ಬಿಟ್ಟು ಬೇರೆ ಎಲ್ಲಾ ಪಾತ್ರೆಗಳನ್ನು ಅನುಲೋಮವಾಗಿ ಉತ್ತರಾಗ್ರವಾಗಿ ಇಡಬೇಕು । ಧ್ರುವಾ ಪಾತ್ರೆಯನ್ನಾದರೋ ದಕ್ಷಿಣಾಗ್ರವಾಗಿ ಇಡಬೇಕು । ಯಾವ ಪಾತ್ರೆಗಳಿಗೆ ಮೂಲ–ಅಗ್ರ ಎಂಬ ವಿಭಾಗವು ಇರುವುದಿಲ್ಲವೋ ಅವುಗಳಿಗೆ ಈ ನಿಯಮವು ಇರುವುದಿಲ್ಲ, ವಿಧಿಸಿದ ಜಾಗದಲ್ಲಿ ಇಡಬೇಕಷ್ಟೆ ॥

*** ಕಪರ್ದಿಭಾಷ್ಯಂ –**

ಸರ್ವಾಣ್ಯನುಲೋಮಾನಿ ಧ್ರುವಾಂ ವರ್ಜಯಿತ್ವಾ ಸಾದಕ್ಷಿಣಾಗ್ರೈವ ॥

ಎಲ್ಲಾ ಪಾತ್ರೆಗಳನ್ನೂ ಅನುಲೋಮವಾಗಿ ಇಡಬೇಕು । ಧ್ರುವಾ ಪಾತ್ರೆಯನ್ನಾದರೋ ದಕ್ಷಿಣಾಗ್ರವಾಗಿಯೇ ಇಡಬೇಕು ॥

*** ಸೂತ್ರಂ – 18 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ತಸ್ಯ ದಕ್ಷಿಣೇಹಸ್ತೇ ಸ್ಫ್ಯಂ ಜುಹೂಂ ಚ ನಿದಧಾತಿ ॥

ಶವದ ಬಲಕೈಯಲ್ಲಿ ಸ್ಫ್ಯ(ಕತ್ತಿಯಂತೆ ಇರುವ ಮರದ ಆಯುಧ) ಮತ್ತು ಜುಹೂ(ಸ್ರುಕ್)ಗಳನ್ನು ಇಡಬೇಕು ॥

*** ಗೋಪಾಲಭಾಷ್ಯಂ –**

ಜುಹೂ ಸಮಾಖ್ಯಾನಾತ್ ವಸಾಹೋಮ ಹವನ್ಯಪಿ ಅತ್ರೈವ ನಿಧೇಯಾ ॥

ಜುಹೂ ಎಂದು ಹೇಳಿರುವುದರಿಂದ ವಸಾಹೋಮವನ್ನು ಮಾಡುವ ಪಾತ್ರೆಯನ್ನು ಮತ್ತು ಸ್ಫ್ಯವನ್ನು ಈ ಜುಹೂಪಾತ್ರೆಯ ಜೊತೆಯಲ್ಲಿಯೇ ಇಡಬೇಕು, ಮೃತನ ಬಲಕೈಯಲ್ಲಿ ॥

*** ಸೂತ್ರಂ – 19 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಸವ್ಯಂ ಉಪಭೃತಮ್ ॥

ಶವದ ಎಡಕೈಯಲ್ಲಿ ಉಪಭೃತ್ ಪಾತ್ರೆಯನ್ನು ಇಡಬೇಕು ॥

*** ಗೋಪಾಲಭಾಷ್ಯಂ –**

ಸವ್ಯಹಸ್ತೇ ಉಪಭೃತಂ ನಿದಧಾತಿ । ಪೃಷದಾಜ್ಯಧಾನ್ಯಪಿ ಅತ್ರೈವ ನಿಧೇಯಾ ಉಪಭೃತ್ವಾತ್ ॥

ಮೃತನ ಎಡಕೈಯಲ್ಲಿ ಉಪಭೃತ್ ಪಾತ್ರೆಯನ್ನು ಇಡಬೇಕು । ಇದರಜೊತೆ ಪೃಷದಾಜ್ಯಧಾನಿಯನ್ನೂ ಇಡಬೇಕು, ಏಕೆಂದರೆ ಇದಕ್ಕೂ ಉಪಭೃತ್ ಪಾತ್ರೆಯ ಸಾದೃಶ್ಯವಿರುವುದರಿಂದ ॥

*** ಸೂತ್ರಂ – 20=78 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಉರಸಿ ಧ್ರುವಾಮರಣೀಂ ಚ ॥

ಶವದ ಎದೆಯಮೇಲೆ ಧ್ರುವಾಪಾತ್ರೆಯನ್ನು ಮತ್ತು ಅರಣಿಯನ್ನು ಇಡಬೇಕು ॥

*** ಗೋಪಾಲಭಾಷ್ಯಂ –**

ತತ್ರ ಅರಣ್ಯೋರುದಗಗ್ರತ್ವಂ ಧ್ರುವಾಯಾಃ ದಕ್ಷಿಣಾಗ್ರತ್ವಂ ಚ ವೇದಿತವ್ಯಮ್ ॥

ಮೃತನ ಎದೆಯಮೇಲೆ ಅರಣಿಗಳನ್ನು ಉತ್ತರಾಗ್ರವಾಗಿ ಇಡಬೇಕು ಹಾಗೆಯೇ ಅದರ ಜೊತೆ ಧ್ರುವಾ ಪಾತ್ರೆಯನ್ನೂ ದಕ್ಷಿಣಾಗ್ರವಾಗಿ ಇಡಬೇಕು ಎಂದು ತಿಳಿಯಬೇಕು ॥

.....

.....

6ನೇ ಖಂಡ

(ಶವದ ಅಂಗಗಳ ಮೇಲೆ ವಸ್ತುಗಳನ್ನು ಇಡುವ ವಿಚಾರ – ವಪೆಯ ವಿಚಾರ)

*** ಸೂತ್ರಂ – 1 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಮುಖೇsಗ್ನಿಹೋತ್ರಹವಣೀಮ್ ॥

ಮುಖದಮೇಲೆ ಅಗ್ನಿಹೋತ್ರಹವಣಿ(ಹೋಮಮಾಡುವ ಹಾಲಿನಪಾತ್ರೆ) ಯನ್ನು ಇಡಬೇಕು ॥

*** ಗೋಪಾಲಭಾಷ್ಯಂ –**

ತತ್ರ ಪುನರ್ದಹನಂ ಕರಿಷ್ಯನ್ ತದರ್ಥಾನಿ ಅಗ್ನಿಹೋತ್ರಹವಣ್ಯಾದೀನಿ ನ ಚಿನುಯಾದಿತಿ ವಕ್ಷ್ಯತಿ । ಮುಖಮಾಸ್ಯಂ । ತತ್ರಬಿಲಸಂಯೋಗ ಮಾತ್ರಾತ್ ತದಾಧಾರತಾ ದ್ರಷ್ಟವ್ಯಾ । ಏವಮುತ್ತರತ್ರಾಪಿ ನಾಸಿಕಾದೌ ದ್ರಷ್ಟವ್ಯಮ್ ॥

ಮೃತನ ಪುನರ್ದಹನದ ವಿಧಿಯಲ್ಲಿ ಅಗ್ನಿಹೋತ್ರಹವಣೀ ಮುಂತಾದ ಪಾತ್ರೆಗಳನ್ನು ಇಡಬಾರದೆಂದು ಗೋಪಾಲಮುನಿಗಳು ಹೇಳುತ್ತಾರೆ । ಬಾಯಿಯಲ್ಲಿ – ಇಲ್ಲಿ ಮುಖದ ಬಿಲವು ಎಲ್ಲಿ ಸೇರಿದೆಯೋ ಅದಕ್ಕೆ ಆಧಾರವಾಗಿರುವುದು ಆಸ್ಯ ಅಥವ ಮುಖ ಎಂದು ತಿಳಿಯಬೇಕು । ಹೀಗೆಯೇ ಮುಂದಿನ ಮೂಗು ಮುಂತಾದ ಅಂಗಗಳಲ್ಲಿಯೂ ತಿಳಿಯಬೇಕು ॥

*** ಸೂತ್ರಂ – 2 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ನಾಸಿಕಯೋಃ ಸ್ರುವೌ ॥

ಮೂಗಿನ 2 ಹೊಳ್ಳೆಗಳಿಗೂ 2 ಸ್ರುವಗಳನ್ನು ಇಡಬೇಕು ॥

*** ಗೋಪಾಲಭಾಷ್ಯಂ –**

ಸ್ರುವೌ ಇಷ್ಟಿಕಾಗ್ನಿಹೋತ್ರಿಕೌ । ತತ್ರ ಯದಿ ಪತ್ನೀಸಂಯಾಜಾರ್ಥಂ ಅನ್ಯಾವಪಿ ಸ್ರುವೌ ಕೃಪ್ತೌ ಭವತಃ । ತದಾ ತಯೋರಪಿ ಅತ್ರೈವ ನಿಧಾನಮ್ ॥

ಇಷ್ಟಿ ಮತ್ತು ಅಗ್ನಿಹೋತ್ರದ ಸ್ರುವಗಳು । ಒಂದುವೇಳೆ ಪತ್ನೀಸಂಯಾಜೆಗಾಗಿ ಬೇರೆ 2 ಸ್ರುವಗಳನ್ನು ಉಪಯೋಗಿಸಿದ್ದರೆ, ಆಗ ಅವೆರಡನ್ನೂ ಕೂಡ ಮೂಗಿನ ಮೇಲೆ ಇಷ್ಟಿ ಹಾಗೂ ಅಗ್ನಿಹೋತ್ರಸ್ರುವಗಳ ಜೊತೆ ಇಡಬೇಕು ॥

*** ಸೂತ್ರಂ – 3 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಅಕ್ಷ್ಯೋಃ ಹಿರಣ್ಯಶಕಲಾವಾಜ್ಯ ಸ್ರುವೌ ವಾ ॥

2 ಕಣ್ಣುಗಳಲ್ಲಿ ಚಿನ್ನದಚೂರುಗಳನ್ನು ಅಥವ ಆಜ್ಯಯುಕ್ತವಾದ ಸ್ರುವಗಳನ್ನು ಇಡಬೇಕು ॥

*** ಗೋಪಾಲಭಾಷ್ಯಂ –**

ಅಕ್ಷ್ಯೋಃ ಅಕ್ಷ್ಣೋಃ । ಆಜ್ಯಸ್ರುವೌ ಆಜ್ಯಬಿಂದೂ ವಾ ॥

ಕಣ್ಣುಗಳ ಮೇಲೆ ಆಜ್ಯ ಮತ್ತು ಸ್ರುವಗಳನ್ನು । ಅಥವಾ ತುಪ್ಪದ ಹನಿಗಳನ್ನು ಹಾಕಬೇಕು(ಇಡಬೇಕು) ॥

*** ಸೂತ್ರಂ – 4 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಕರ್ಣಯೋಃ ಪ್ರಾಶಿತ್ರಹರಣೇ ಭಿತ್ವಾ ವೈಕಮ್ ॥

ಕಿವಿಗಳಲ್ಲಿ ಪ್ರಾಶಿತ್ರಹರಣ ಪಾತ್ರೆಗಳನ್ನು ಇಡಬೇಕು, ಒಂದನ್ನೇ ಎರಡು ತುಂಡುಮಾಡಿ ॥

*** ಗೋಪಾಲಭಾಷ್ಯಂ –**

ಪ್ರಾಶಿತ್ರಹರಣಸ್ಯೈಕತ್ವಾತ್ ಭಿತ್ವಾ ನಿಧಾನಮುಚ್ಯತೇ । ಬೋಧಾಯ ನೀಯೇ ಅಪಿ ಏವಮೇವ ಪಾಠಃ । ತಸ್ಮಾತ್ ಪ್ರಾಶಿತ್ರಹರಣೇ ಇತಿ ದ್ವಿವಚನ ಪಾಠೋವಪಾಠಃ ॥

ಪ್ರಾಶಿತ್ರಹರಣ ಪಾತ್ರೆಯು ಒಂದೇ ಇರುವುದರಿಂದ ಅದನ್ನೇ ಎರಡುಭಾಗ ಮಾಡಿ, ಎರಡು ಕಿವಿಗಳ ಮೇಲೆ ಇಡಬೇಕೆಂದು ಹೇಳಿದೆ । ಬೋಧಾಯನ ಸೂತ್ರದಲ್ಲಿಯೂ ಹೀಗೆಯೇ ಹೇಳಿದೆ । ಆದ್ದರಿಂದ **ಪ್ರಾಶಿತ್ರಹರಣೇ ಎಂಬ ದ್ವಿ ವಚನವು ಪ್ರಾಮಾದಿಕ(ತಪ್ಪು) ಪಾಠವು ॥**

*** ಕಪರ್ದಿಭಾಷ್ಯಂ –**

ಕರ್ಣಯೋಃ ಪ್ರಾಶಿತ್ರಹರಣೇ ಇತಿ। ಏತದರ್ಥಂ ನ ದ್ವಿತೀಯಮುತ್ಪಾದಯಿತವ್ಯಂ । ಕಾಠಕಾಗ್ನಿಚಿತಾಂತು ದ್ವೇ ಪ್ರಾಶಿತ್ರಹರಣೇ । ಪ್ರಕೃತೌ ಬೋಧಾಯನಸ್ಯ ಚ ಏಕಾಹೇ ಏಕಸ್ಯದ್ವೇ ಸಂಸ್ಥಾಂತರೇ । ಅಸ್ಮಾಕಂ ತು ಸರ್ವತೋಮುಖೇ ಪಾತ್ರಭೇದಃ ಚಾತುರ್ಮಾಸ್ಯಾದಿಷು ಚ ॥

2 ಕಿವಿಗಳಲ್ಲಿ ಪ್ರಾಶಿತ್ರಹರಣವನ್ನು 2 ಭಾಗಮಾಡಿ ಇಡಬೇಕು । ಇದಕ್ಕಾಗಿ ಇನ್ನೊಂದು ಹೊಸಪ್ರಾಶಿತ್ರಹರಣ ಪಾತ್ರೆಯನ್ನು ಸಿದ್ಧ ಮಾಡಬಾರದು । ಆದರೆ ಕಾಠಕ ಅಗ್ನಿಚಿತರಿಗೆ 2 ಪ್ರಾಶಿತ್ರಹರಣವನ್ನೇ ಇಷ್ಟಿಯಲ್ಲಿ ವಿಧಿಸಿದ್ದಾರೆ । ಪ್ರಕೃತವಾಗಿ ಬೋಧಾಯನ ಸೂತ್ರದಲ್ಲಿ ಏಕಾಹ ಸೋಮಯಾಗದಲ್ಲಿ ಒಂದರ ಎರಡು ಸಂಸ್ಥಾಂತರವಿದೆ। ಅಲ್ಲಿ ಎರಡು ಪ್ರಾಶಿತ್ರಪಾತ್ರೆಗಳು ಉಂಟು। ಆದರೆ ನಮ್ಮ ಸೂತ್ರಕಾರರ ಮತದಲ್ಲಾದರೋ, ಸರ್ವತೋಮುಖ ಯಜ್ಞದಲ್ಲಿ ಪ್ರಾಶಿತ್ರಪಾತ್ರಭೇದವಿದೆ ಹಾಗೆಯೇ ಚಾತುರ್ಮಾಸ್ಯಾದಿಗಳಲ್ಲೂ ಸಹ ॥

*** ಸೂತ್ರಂ – 5 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಹನ್ವೋಃ ಉಲೂಖಲಮುಸಲೇ ॥

ಎರಡು ಗಲ್ಲಗಳ(ಕೆನ್ನೆ) ಪಕ್ಕದಲ್ಲಿ ಉಲೂಖಲ(ಒರಳುಕಲ್ಲು) ಹಾಗೂ ಮುಸಲ(ಒನಕೆ)ಗಳನ್ನು ಇಡಬೇಕು ॥

*** ಗೋಪಾಲಭಾಷ್ಯಂ –**

ಹನು ಆಸ್ಯೋಪಾಚಿತದೇಶೌ । ತಯೋರ್ದಕ್ಷಿಣಸ್ಯಾಮುಲೂಖಲಂ ನಿದಧಾತಿ । ಸವ್ಯಾಯಾಂ ಮುಸಲಂ । ತದನೇಕತ್ವೇಪ್ಯತ್ರೈವ ನಿಧಾನಮ್ ॥

ಗಲ್ಲ ಮತ್ತು ಬಾಯಿಯ ಮಧ್ಯದ ಎರಡು ಭಾಗಗಳಲ್ಲಿ, ದಕ್ಷಿಣಕ್ಕೆ(ಬಲ) ಉಲೂಖಲ ಪಾತ್ರೆಯನ್ನಿಡಬೇಕು । ಎಡಕ್ಕೆ ಮುಸಲವನ್ನಿಡಬೇಕು । ಅನೇಕ ಮುಸಲಗಳಿದ್ದರೂ ಈ ಜಾಗದಲ್ಲೇ ಇಡಬೇಕು ॥

*** ಕಪರ್ದಿಭಾಷ್ಯಂ –**

ಹನ್ವೋಃ ಓಷ್ಠಮೂಲಯೋಃ ॥

ಬಾಯಿಯ ಎರಡು ಮೂಲಭಾಗಗಳಲ್ಲಿ ಎಂದರ್ಥ ॥

*** ಸೂತ್ರಂ – 6 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ದತ್ಸು ಗ್ರಾವ್ಣೋ ಯದಿ ಗ್ರಾವಾಣೋ ಭವಂತಿ ॥

ಹಲ್ಲುಗಳಲ್ಲಿ ಸೋಮವನ್ನು ಜಜ್ಜುವ ಕಲ್ಲುಗಳನ್ನು ಇಡಬೇಕು, ಅವು ಇದ್ದರೆ ॥

*** ಗೋಪಾಲಭಾಷ್ಯಂ –**

ಅಗ್ನಿಷ್ಟೋಮ ಸೋಮಾಭಿಷವಾರ್ಥತಯಾ ಕೃಪ್ತಾನ್ ನಿದಧಾತಿ । ತದಭಾವೇ ನ ಗ್ರಾವಚಯನಂ ಉಪಯುಕ್ತ ಸಂಸ್ಕಾರತ್ವಾತ್ ॥

ಸೋಮಯಾಗದಲ್ಲಿ ಸೋಮರಸವನ್ನು ತೆಗೆಯಲು ಕುಟ್ಟುವುದಕ್ಕಾಗಿ ಅನೇಕ ಕಲ್ಲುಗಳನ್ನು ಬಳಸುತ್ತಾರಾದ್ದರಿಂದ ಅವುಗಳನ್ನು ಮೃತನ ಹಲ್ಲುಗಳ ಮೇಲೆ ಇಡಬೇಕು । ಅನೇಕ ಕಲ್ಲುಗಳಿಲ್ಲದಿದ್ದರೆ ಒಂದೇ ಕಲ್ಲನ್ನು ಹಲ್ಲಿನ ಮೇಲೆ ಇಡಬೇಕು, ಆ ಕಲ್ಲುಗಳಿಲ್ಲದಿದ್ದರೆ

ಗ್ರಾವಚಯನವು ಇರುವುದಿಲ್ಲ, ಒಂದುವೇಳೆ ಕಲ್ಲಗಳನ್ನು ಸೋಮಯಾಗದಲ್ಲಿ ಉಪಯೋಗಿಸಿ ಬಿಡಲ್ಪಟ್ಟಿದ್ದರೆ ಆಗ ಹಲ್ಲಿನ ಮೇಲೆ ಕಲ್ಲುನ್ನು ಇಡುವ ವಿಧಿಯು ಇರುವುದಿಲ್ಲ ॥

*** ಕಪರ್ದಿಭಾಷ್ಯಂ –**

ದತ್ಸು ದಂತೇಷು ಗ್ರಾವಾಣಃ ॥

ಮೃತನ ಹಲ್ಲುಗಳ ಮೇಲೆ ಸೋಮವನ್ನು ಕುಟ್ಟುವ ಕಲ್ಲುಗಳನ್ನು ಇಡಬೇಕು ॥

*** ಸೂತ್ರಂ – 7 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಶಿರಸಿ ಕಪಾಲಾನಿ ॥

ತಲೆಯಮೇಲೆ, ಕಪಾಲಗಳನ್ನು ಇಡಬೇಕು ॥

*** ಗೋಪಾಲಭಾಷ್ಯಂ –**

ವ್ಯಕ್ತಮೇತತ್ ॥

ಇಲ್ಲಿ ಮೃತನ ತಲೆಯ ಮೇಲೆ ಕಪಾಲಗಳನ್ನು ಇಡಬೇಕೆಂಬುದು ಸ್ಪಷ್ಟವಾಗಿದೆ ॥

*** ಸೂತ್ರಂ – 8 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಲಲಾಟ ಏಕಕಪಾಲಮ್ ॥

ಹಣೆಯಮೇಲೆ ಏಕಕಪಾಲವನ್ನು ಇಡಬೇಕು ॥

*** ಗೋಪಾಲಭಾಷ್ಯಂ –**

ಏಕಂ ತತ್ ಕಪಾಲಂ ಚ ಏಕಕಪಾಲಂ । ಯತ್ ಏಕಮೇವಾಗ್ರಯಣಾದೌ ಪುರೋಡಾಶಾಧಿ ಶ್ರಯನಾರ್ಥಂ ಉಪಹಿತಮಭೂತ್ ತನ್ನಿದಧಾತೀತಿ ಭಾವಃ ॥

ಯಾವ ಒಂದೇ ಕಪಾಲವನ್ನು ಆಗ್ರಯಣ ಮುಂತಾದ ಇಷ್ಟಿಗಳಲ್ಲಿ ಪುರೋಡಾಶವನ್ನು ಇಡಲು ಉಪಯೋಗಿಸಿರುತ್ತಾರೋ, ಅದು ಏಕಕಪಾಲವು । ಅದನ್ನು ಮೃತನ ಹಣೆಯ ಮೇಲೆ ಇಡಬೇಕೆಂದರ್ಥ ॥

*** ಸೂತ್ರಂ – 9 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಉದರೇ ಪಿಷ್ಟಸಂಯಮನೀಂ ಪಾತ್ರೀಂ ॥

ಹೊಟ್ಟೆಯ ಮೇಲೆ, ಹಿಟ್ಟು ಹುರಿಯುವ ಮತ್ತು ಬೆರೆಸುವ ಪಾತ್ರೆಗಳನ್ನು ಇಡಬೇಕು ॥

*** ಗೋಪಾಲಭಾಷ್ಯಂ –**

ಉದರೇ ನಾಭೇರೂರ್ಧ್ವದೇಶೇ ನಿದಧ್ಯಾತ್ ॥

ಹೊಕ್ಕಳಿನ ಮೇಲ್ಭಾಗದ ಹೊಟ್ಟೆಯ ಮೇಲೆ ಪಿಷ್ಟಸಂಯಮನೀ ಪಾತ್ರೆಯನ್ನು ಇಡಬೇಕು ॥

*** ಕಪರ್ದಿಭಾಷ್ಯಂ –**

ಉದರೇ ಪಿಷ್ಟಸಂಯಮನೀಂ ಪಾತ್ರೀಂ ಇತಿ । ಪ್ರಕೃತಾವಪಿ ಪಾತ್ರೀದ್ವಯಂ ದರ್ಶಯತಿ । ಅಥವಾ ನಾನಾಬೀಜಪಕ್ಷೇ ॥

ಹೊಕ್ಕಳಿನ ಮೆಲ್ಭಾಗದ ಹೊಟ್ಟೆಯ ಮೇಲೆ ಪಿಷ್ಟಸಂಯಮನೀ ಪಾತ್ರೆಯನ್ನು ಇಡಬೇಕೆಂದರ್ಥ । ಪ್ರಕೃತೇಷ್ಟಿಯಲ್ಲಿಯೂ 2 ಪಾತ್ರೆಗಳನ್ನು ಹೇಳಿದೆ । ಅಥವಾ ಬೇರೆಬೇರೆ ಧಾನ್ಯಗಳ ಹವಿಸ್ಸಿಗೆ 2 ಪಾತ್ರೆಗಳು ಎಂದರ್ಥ ॥

*** ಸೂತ್ರಂ – 10 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ನಾಭ್ಯಾಂ ಆಜ್ಯಸ್ಥಾಲೀಮ್ ॥

ಹೊಕ್ಕಳಿನಮೇಲೆ, ತುಪ್ಪದಪಾತ್ರೆಯನ್ನು ಇಡಬೇಕು ॥

*** ಗೋಪಾಲಭಾಷ್ಯಂ –**

ವ್ಯಕ್ತಮೇತತ್ ॥

ನಾಭಿಯಲ್ಲಿ ಆಜ್ಯಸ್ಥಾಲಿಯನ್ನು ಇಡಬೇಕು ॥

*** ಸೂತ್ರಂ – 11 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಪಾರ್ಶ್ವಯೋಃ ಶೂರ್ಪೇ ಛಿತ್ವಾ ವೈಕಮ್ ॥

ಮೊರವನ್ನು(ಶೂರ್ಪ) ಎರಡಾಗಿ ಸೀಳಿ, ಹೊಕ್ಕಳಿನ ಎರಡುಪಕ್ಕಗಳಲ್ಲಿ ಒಂದೊಂದನ್ನು ಇಡಬೇಕು ॥

*** ಗೋಪಾಲಭಾಷ್ಯಂ –**

ಶೂರ್ಪೇ ಇತಿ ದ್ವಿವಚನಾತ್ ಪ್ರಾಕೃತಂ ಕರಂಭಪಾತ್ರಾರ್ಥಂ ಚ ಗೃಹ್ಯತೇ । ಅನಿಷ್ಟವರುಣ ಪ್ರಘಾಸಸ್ಯತು ಪ್ರಾಕೃತಂ ಛಿತ್ವಾ ಪಾರ್ಶ್ವಯೋಃ ನಿಧೇಯಮ್ ॥

ಶೂರ್ಪೇ ಎಂದು ದ್ವಿವಚನವಿರುವುದರಿಂದ, ಪ್ರಕೃತವಾದ ಕರಂಭಪಾತ್ರೆಯನ್ನು ಇಲ್ಲಿ ಹೇಳಿದೆ ಎಂದು ತಿಳಿದುಕೊಳ್ಳಬೇಕು । ಇಷ್ಟವರುಣ ಪ್ರಘಾಸವಲ್ಲದ ಕರ್ಮಕ್ಕೆ ಪ್ರಕೃತವಾದ ಒಂದೇ ಶೂರ್ಪವನ್ನು ಸೀಳಿ, ಮೃತನ ಎರಡೂ ಪಕ್ಕೆಗಳಲ್ಲಿ(ಹೊಕ್ಕಳಿನ ಪಕ್ಕ) ಇಡಬೇಕು ॥

*** ಕಪರ್ದಿಭಾಷ್ಯಂ –**

ಪಾರ್ಶ್ವಯೋಃ ಶೂರ್ಪೇ ಆಗ್ರಯಣಾದಿಷು ದ್ವಿತೀಯಸ್ಯ ವಿದ್ಯಮಾನತ್ವಾತ್ । ವೈಮೃಧೇ ಶೂರ್ಪದ್ವಯಂ (ಪಾತ್ರೀದ್ವಯಂ) ಚ ತಥಾಗ್ರಯಣೇ ॥

ಎರಡು ಪಕ್ಕೆಗಳಲ್ಲಿ, 2 ಶೂರ್ಪ(ಮೊರ)ಗಳನ್ನು ಇಡಬೇಕು, ಏಕೆಂದರೆ ಆಗ್ರಯಣಾದಿ ಇಷ್ಟಿಗಳಲ್ಲಿ ಎರಡನೆಯ ಶೂರ್ಪವನ್ನು (ಮೊರ) ವಿಧಾನ ಮಾಡಿದೆಯಾದ್ದರಿಂದ । ವೈಮೃಧ ಇಷ್ಟಿಯಲ್ಲಿಯೂ 2 ಶೂರ್ಪ ಹಾಗೂ 2 ಪಾತ್ರೆಗಳನ್ನು ವಿಧಿಸಿದೆ ಹಾಗೆಯೇ ಆಗ್ರಯಣದಲ್ಲೂ ವಿಧಿಸಿದೆ ॥

*** ಸೂತ್ರಂ – 12 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ವಂಕ್ಷ್ಣಯೋಃ ಸಾನ್ನಾಯ್ಯ ಕುಂಭ್ಯೌ ಯದಿ ಸಂನ್ನಯತಿ ॥

ತೊಡೆಯ ಎರಡುಕಡೆಯ ಮೂಲಭಾಗ(ಸೊಂಟದ ಮೇಲೆ)ದಲ್ಲಿ ಹಾಲು, ಮೊಸರು ಮತ್ತು ಹೋಮಮಾಡುವ 2 ಕುಡಿಕೆಗಳನ್ನು ಇಡಬೇಕು, ಸೋಮಯಾಗಮಾಡಿದ ವ್ಯಕ್ತಿಯಾಗಿದ್ದರೆ ॥

*** ಗೋಪಾಲಭಾಷ್ಯಂ –**

ವಂಕ್ಷ್ಣೌ ಊರುಮೂಲ ಪ್ರತ್ಯಾಸನ್ನೌ ಕಟಿಪ್ರದೇಶೌ ॥

ತೊಡೆಯ ಎರಡು ಕಡೆಯ ಬುಡಭಾಗವಾದ ಸೊಂಟವನ್ನು ವಂಕ್ಷ್ಣ ಎಂದು ಹೇಳುತ್ತಾರೆ ॥

*** ಸೂತ್ರಂ – 13 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಅಂಡಯೋಃ ದೃಷದುಪಲೇ ॥

ಅಂಡಗಳ(ಬೀಜ) ಮೇಲೆ ಸಣ್ಣ ಮತ್ತು ದೊಡ್ಡಕಲ್ಲುಗಳನ್ನು ಇಡಬೇಕು ॥

*** ಗೋಪಾಲಭಾಷ್ಯಂ –**

ಅಂಡೇ ಮುಷ್ಕೌ ॥

ಮೃತನ ಎರಡು ಬೀಜಗಳು(ವೃಷಣ) ॥

*** ಸೂತ್ರಂ – 14 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಶಿಶ್ನೇ ವೃಷಾರವಂ ಶಮ್ಯಾಂ ಚ ॥

ಶಿಶ್ನದಮೇಲೆ ವೃಷಾರವಕಲ್ಲನ್ನು(ಕುಟ್ಟಲು ಕೆಳಗೆ ಇಟ್ಟುಕೊಳ್ಳುವ ಕಲ್ಲು ಅಥವಾ ಕುಟ್ಟುವ ಕಲ್ಲು) ಮತ್ತು ಶಮ್ಯೆಯನ್ನು ಇಡಬೇಕು ॥

*** ಗೋಪಾಲಭಾಷ್ಯಂ –**

ಅಶ್ಮಾ ಸಮಾಹನನಾರ್ಥಃ । ದೃಷಾರವಮಿತಿ ಪಾಠೇಪಿ ಅಯಮೇವಾರ್ಥಃ ಉಚ್ಚೈರ್ಧ್ವನಿ ಹೇತುತ್ವಾತ್ । ಯಸ್ಯತು ಶಮ್ಯಯೈವ ಸಮಾಹನನಂ ಕೃತಂ ತಸ್ಯ ಶಮ್ಯೈವಾತ್ರ ಸ್ಥಾಪ್ಯಾ ॥

ಅಶ್ಮಾ ಎಂದರೆ ಕುಟ್ಟಲು ಕೆಳಗೆ ಇಟ್ಟುಕೊಳ್ಳುವ ಕಲ್ಲು ಅಥವಾ ಕುಟ್ಟುವಕಲ್ಲು । ಅದನ್ನೇ ದೃಷಾರವ ಅಥವಾ ವೃಷಾರವ ಎಂದು ಪಾಠಾಂತರದಲ್ಲಿ ಹೇಳಿದೆ, ಏಕೆಂದರೆ ಜೋರಾಗಿ ಧ್ವನಿಯುಂಟಾಗಲು ಕಾರಣವಾಗಿರುವುದರಿಂದ । ಶಮ್ಯಾ ದಂಡದಿಂದಲೇ ಎಲ್ಲಿ ಕುಟ್ಟುತ್ತಾರೋ ಆಗ ಶಮ್ಯಾದಂಡವನ್ನೇ ಮೃತನ ಶಿಶ್ನದ ಮೇಲೆ ಇಡಬೇಕು, ಇಲ್ಲದಿದ್ದರೆ ಅಶ್ಮ (ಕಲ್ಲು) ವನ್ನು ಇಡಬೇಕು ॥

*** ಸೂತ್ರಂ – 15 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಪ್ರತಿಷ್ಠಯೋಃ ಅಗ್ನಿಹೋತ್ರಸ್ಥಾಲೀಂ ಅನ್ವಾಹಾರ್ಯಸ್ಥಾಲೀಂ ಚ ॥

ಕಾಲಿನ ಎರಡುಕಡೆಗಳಲ್ಲಿ, ಅಗ್ನಿಹೋತ್ರಸ್ಥಾಲಿಯನ್ನು ಮತ್ತು ಅನ್ವಾಹಾರ್ಯಸ್ಥಾಲಿಯನ್ನು ಇಡಬೇಕು ॥

*** ಗೋಪಾಲಭಾಷ್ಯಂ –**

ಪ್ರತಿಷ್ಠೇ ಪಾದತಲೇ । ತತ್ರ ದಕ್ಷಿಣಸ್ಮಿನ್ ಅಗ್ನಿಹೋತ್ರಸ್ಥಾಲೀಂ ಉತ್ತರಸ್ಮಿನ್ ಅನ್ವಾಹಾರ್ಯಸ್ಥಾಲೀಂ ॥

ಪಾದದಲ್ಲಿ, ಬಲಕಾಲಿನ ಪಾದದಮೇಲೆ ಅಗ್ನಿಹೋತ್ರಸ್ಥಾಲೀ ಪಾತ್ರೆಯನ್ನು ಮತ್ತು ಎಡಕಾಲಿನ ಪಾದದಮೇಲೆ ಅನ್ವಾಹಾರ್ಯಸ್ಥಾಲೀ ಪಾತ್ರೆಯನ್ನು ಇಡಬೇಕು ॥

*** ಕಪರ್ದಿಭಾಷ್ಯಂ –**

ಪ್ರತಿಷ್ಠಯೋಃ ಪಾದಾಂತಯೋಃ । ಅಗ್ನಿಹೋತ್ರಸ್ಥಾಲೀಂ ದಕ್ಷಿಣಸ್ಯಾಂ ಉತ್ತರಸ್ಯಾಂ ಅನ್ವಾಹಾರ್ಯಸ್ಥಾಲೀಮ್ ॥

2 ಪಾದಗಳ ಮೇಲೆ – ಬಲಪಾದದ ಮೇಲೆ ಅಗ್ನಿಹೋತ್ರಸ್ಥಾಲಿಯನ್ನೂ ಮತ್ತು ಎಡಪಾದದ ಮೇಲೆ ಅನ್ವಾಹಾರ್ಯಸ್ಥಾಲಿಯನ್ನು ಇಡಬೇಕು ॥

*** ಸೂತ್ರಂ – 16 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಪತ್ತ ಉಪಾವಹರಣೀಯಂ ಕೂರ್ಚಮ್ ॥

ಕಾಲಿನ ಅಡಿಯಲ್ಲಿ ಉಪಾವಹರಣಿಯ ಕೂರ್ಚವನ್ನು ಇಡಬೇಕು ॥

*** ಗೋಪಾಲಭಾಷ್ಯಂ –**

ಉಪಾವಹರಣೀಯಂ ಹ್ರಿಯಮಾಣಸ್ಯ ಅಗ್ನಿಹೋತ್ರಸ್ಯ ಉಪಯಮನಂ ಅರ್ಥಮ್ ॥

ಉಪಾವಹರಣಿಯ ಕೂರ್ಚವನ್ನು, ಎಂದರೆ ತೆಗೆದುಕೊಂಡು ಹೋಗುತ್ತಿರುವ ಅಗ್ನಿಹೋತ್ರದ ಉಪಯಮನಕ್ಕಾಗಿ ಇಡುವ ಕೂರ್ಚ ಎಂದರ್ಥ । ಅದನ್ನು ಮೃತನ ಕಾಲಿನ ಅಡಿಭಾಗದಲ್ಲಿ ಇಡಬೇಕು ॥

*** ಕಪರ್ದಿಭಾಷ್ಯಂ –**

ಪತ್ತಃ ಪಾದತಃ । ಉನ್ನೀಯಾಗ್ನಿಹೋತ್ರಂ 'ಗಾರ್ಹಪತ್ಯಸ್ಯ ಸಮಯಾರ್ಚಿರ್ಹರತೀತಿ' ಹರಣಕಾಲೇ ಯದಧಸ್ತಾದ್ಧಾರ್ಯತೇ ತದುಪಾವಹರಣೀಯಂ ಕೂರ್ಚಂ । ಅನೇನೈವ ವಚನೇನ ಅಗ್ನಿಹೋತ್ರೇ ಕೂರ್ಚದ್ವಯಂ ನಿಯತಂ । ವಾಜಸನೇಯಿನಾಂತು ಅಗ್ನಿಹೋತ್ರೇ ಆಮ್ನಾತಮ್ ॥

ಪತ್ತಃ, ಎಂದರೆ ಪಾದದ ಅಡಿಭಾಗ । ಯಾವ ಕೂರ್ಚವನ್ನು ಅಗ್ನಿಹೋತ್ರ ಹವಿಸ್ಸನ್ನು ಉನ್ನಯನ ಮಾಡಿ, **'ಗಾರ್ಹಪತ್ಯಸ್ಯ ಸಮಯಾರ್ಚಿರ್ಹರತೀತಿ'** ಎಂಬ ಪ್ರಯೋಗದಂತೆ ಪ್ರಧಾನಹೋಮಕ್ಕೆ ಒಯ್ಯುವ ಕಾಲದಲ್ಲಿ ಅಗ್ನಿಹೋತ್ರಹವಣಿಯ ಕೆಳಗೆ ಧಾರಣೆ ಮಾಡಿರುತ್ತಾನೋ ಅದೇ ಉಪಾವಹರಣೀಯ ಕೂರ್ಚ । ಈ ಒಂದು ಶ್ರುತಿಯಿರುವುದರಿಂದ ಅಗ್ನಿಹೋತ್ರದಲ್ಲಿ 2 ಕೂರ್ಚಗಳಿವೆ ಎಂದು ಸಿದ್ಧವಾಗುತ್ತದೆ । ವಾಜಸನೇಯಿಗಳಿಗಾದರೋ, ಅಗ್ನಿಹೋತ್ರದಲ್ಲಿಯೇ ಹೇಳಿದೆ ॥

*** ಸೂತ್ರಂ – 17 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ವೇದಂ ಶಿಖಾಯಾಮ್ ॥

ವೇದವನ್ನು(ದರ್ಭೆಗಳನ್ನು ಗಂಟುಹಾಕಿ ಮಾಡಿರುವ ಗುಡಿಸುವ ಒಂದು ಸಾಧನ) ಶಿಖೆಯ ಭಾಗದಲ್ಲಿ ಇಡಬೇಕು ॥

*** ಗೋಪಾಲಭಾಷ್ಯಂ –**

ಸ್ಪಷ್ಟೋರ್ಥಃ ॥

ವೇದವನ್ನು(ದರ್ಭೆಯ ಹಿಡಿ) ಮೃತನ ಶಿಖೆಯಮೇಲೆ ಇಡಬೇಕು ॥

*** ಸೂತ್ರಂ – 18 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಶಿರಸ್ತ ಉಪಸಾದನೀಯಂ ಇಡಾಪಾತ್ರಂ ಚ ॥

ತಲೆಯ ಅಡಿಯಲ್ಲಿ ಉಪಸಾದನೀಯ ಕೂರ್ಚ ಮತ್ತು ಇಡಾಪಾತ್ರೆಯನ್ನು ಇಡಬೇಕು ॥

*** ಗೋಪಾಲಭಾಷ್ಯಂ –**

ಕೂರ್ಚಂ ನಿದಧಾತೀತಿ ಶೇಷಃ । ಯತ್ರ ಅಗ್ನಿಹೋತ್ರಸ್ಯ ಉಪಸಾದನಮುಕ್ತಂ ಅಪರೇಣಾಹವನೀಯಂ ದರ್ಭೇಷು ಸಾದಯತೀತಿ ಸಗೃಹ್ಯತೇ । ಶಿರಸಿ ನಿದಧಾತೀತ್ಯನ್ವಯಃ ॥

ಉಪಸಾದನೀಯ ಕೂರ್ಚವನ್ನು ಇಡುತ್ತಾನೆ ಎಂದರ್ಥ । ಯಾವ ಕೂರ್ಚದಮೇಲೆ ಅಗ್ನಿಹೋತ್ರದ ಹವಿಸ್ಸನ್ನು ಪ್ರಧಾನಹೋಮಕ್ಕೆ ಮೊದಲು ಇಡುತ್ತಾನೋ ಅದು ಉಪಸಾದನೀಯ ಕೂರ್ಚವು, ಅದು ಆಹವನೀಯದ ಬಳಿಯಲ್ಲಿ ಇರುತ್ತದೆ, ಅದರಮೇಲೆ ಇಡುತ್ತಾನೆ ಎಂದರ್ಥ । ಮೃತನ ತಲೆಯಮೇಲೆ ಉಪಸಾದನೀಯ ಕೂರ್ಚವನ್ನೂ ಇಡಾಪಾತ್ರೆಯನ್ನೂ ಇಡಬೇಕೆಂದು ಅರ್ಥ ಮಾಡಬೇಕು ॥

*** ಕಪರ್ದಿಭಾಷ್ಯಂ –**

ಉಪಸಾದನೀಯಂ – ಅಪರೇಣಾಹವನೀಯಂ ದರ್ಭೇಷು ಸಾದಯತೀತಿ ತದುಪಸಾದನೀಯಂ ಕೂರ್ಚಂ ಶಿರಸಿ ॥

ಆಹವನೀಯದ ಬಳಿಯಲ್ಲಿ ದರ್ಭೆಗಳಿಂದ ಮಾಡಲ್ಪಟ್ಟ ಕೂರ್ಚವು ಉಪಸಾದನೀಯ ಕೂರ್ಚವು । ಅದರಮೇಲೆ ಅಗ್ನಿಹೋತ್ರದ ಹವಿಸ್ಸನ್ನು ಇಡುತ್ತಾನೆ । ಆ ಉಪಸಾದನೀಯ ಕೂರ್ಚವನ್ನು ಮೃತನ ತಲೆಯ ಮೆಲೆ ಇಡಬೇಕು ॥

*** ಸೂತ್ರಂ – 19 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಇಮಮಗ್ನೇ ಚಮಸಂ ಇತಿ ಮಧ್ಯೇ ಚಮಸಮ್ ॥

ಇಮಮಗ್ನೇ.....ಮಂತ್ರದಿಂದ, ಮಧ್ಯಭಾಗದಲ್ಲಿ ಚಮಸವನ್ನು ಇಡಬೇಕು ॥

*** ಗೋಪಾಲಭಾಷ್ಯಂ –**

ಚಮಸೋತ್ರ ಪ್ರಣೇತಾಪ್ರಣಯನಃ । ತಂ ಶಿರಸೋ ಮಧ್ಯೇ ಏತಯರ್ಚಾ ನಿದಧ್ಯಾತ್ । ಶಿರಸ್ತಪ್ರಣೇತಾಪ್ರಣಯನಂ ಚಮಸಂ ನಿದಧ್ಯಾತ್ ಇಮಮಗ್ನೇ ಚಮಸಮಿತ್ಯೇವ ಬೋಧಾಯನಃ । ಕಂಸಾದಿಭಿಃ ಪ್ರಣಯನೇಷ್ಯತ್ಯೈವ ನಿಧಾನಂ । ತತ್ ಸ್ಥಾನಾಪನ್ನತ್ವಾತ್ । ಮಂತ್ರಸ್ತು ನಿವರ್ತತೇ ಚಮಸ ಲಿಂಗತ್ವಾತ್ ॥

ಇಲ್ಲಿ ಚಮಸವೆಂದರೆ ಪ್ರಣೀತಾ ಪ್ರಣಯನ ಪಾತ್ರೆಯನ್ನು ಚಮಸವೆನ್ನುತ್ತಾರೆ । ಅದನ್ನು ಮೃತನ ತಲೆಯ ಮಧ್ಯಭಾಗದಲ್ಲಿ ಮೇಲೆ ಹೇಳಿದ ಇಮಮಗ್ನೇ....., ಎಂಬ ಋಕ್ಕಿನಿಂದ ಇಡಬೇಕು । ತಲೆಯ ಮಧ್ಯಭಾಗದಲ್ಲಿ ಪ್ರಣೀತಾ ಪ್ರಣಯನ ಚಮಸ(ಪಾತ್ರೆ)ವನ್ನು ಇದೇ ಮಂತ್ರದಿಂದ ಇಡಬೇಕೆಂದು ಬೋಧಾಯನರು ಹೇಳುತ್ತಾರೆ । ಕಂಸ(ಲೋಟ) ಮುಂತಾದವುಗಳಿಂದ ಪ್ರಣಯನವನ್ನು ಮಾಡಿದ್ದರೆ, ಅದನ್ನೂ ಮೃತನ ತಲೆಯ ಮಧ್ಯದಲ್ಲಿ ಇಡಬೇಕು । ಏಕೆಂದರೆ ಅವುಗಳಿಗೆ ಅದೇ ಸ್ಥಾನವನ್ನು ವಿಧಿಸಿದೆಯಾದ್ದರಿಂದ । ಆದರೆ ಅವುಗಳಿಗೆ ಮಂತ್ರವಿಲ್ಲ । ಏಕೆಂದರೆ **ಚಮಸಾ** ಎಂಬ ಲಿಂಗವನ್ನು ಮಂತ್ರದಲ್ಲಿ ತೋರಿಸಿರುವುದರಿಂದ ಪ್ರಣೀತಾ ಪ್ರಣಯನ ಚಮಸಕ್ಕೇ ಮಂತ್ರವು ॥

*** ಕಪರ್ದಿಭಾಷ್ಯಂ –**

ಇಮಮಗ್ನ ಇತಿ ದೀಕ್ಷಿತಸ್ಯ ವ್ರತ ಭೋಜನಾರ್ಥ ಚಮಸಸ್ಯ ನಿಧಾನಂ । ಯದಿ ಸೋಮೇನೇಷ್ಟವಾನ್ । ಉಪದೇಶಸ್ತು ಚಮಸಮದ್ಭಿಃ ಪ್ರಕ್ಷಾಳಯತೀತಿ ವಚನಾತ್ ಪ್ರಣೀತಾ ಪ್ರಣಯನಸ್ಯೇತಿ ॥

ಇಮಮಗ್ನ....., ಎಂಬ ಮಂತ್ರದಿಂದ ದೀಕ್ಷಿತನ(ಸೋಮಯಾಗವನ್ನು ಮಾಡಿದವನ) ವ್ರತಕ್ಕೆ ಅಂದರೆ ಭೋಜನಕ್ಕೆ ಚಮಸಪಾತ್ರೆಯನ್ನು ಇಡುತ್ತಾರೆ, ಸೋಮಯಾಗವನ್ನು ಮಾಡಿದ್ದರೆ । ಇಲ್ಲಿ **ಚಮಸಂ ಅದ್ಭಿಃ ಪ್ರಕ್ಷಾಳಯತಿ** ಎಂಬ ವಚನವಿರುವುದರಿಂದ ಪ್ರಣೀತಾಪ್ರಣಯನವನ್ನೇ ಇಲ್ಲಿ **ಚಮಸಾ** ಎಂಬ ಪದದಿಂದ ಹೇಳುತ್ತಿದ್ದಾರೆ ॥

*** ಸೂತ್ರಂ – 20 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಅವಶಿಷ್ಟಾನಿ ಅಂತರಾಸಕ್ಥಿನೀ ॥

ಉಳಿದ ಪಾತ್ರೆಗಳನ್ನು 2 ತೊಡೆಗಳ ಮಧ್ಯದಲ್ಲಿಡಬೇಕು ॥

*** ಗೋಪಾಲಭಾಷ್ಯಂ –**

ಅವಶಿಷ್ಟಾನಿ ಪಾತ್ರಾಣಿ ಸಕ್ಥ್ಯೋರ್ಮಧ್ಯೇ ನಿದಧ್ಯಾತ್ । ತತ್ರ ಮಂತ್ರಾಭಾವಾತ್ ಯುಗಪನ್ನಿಧಾನಮ್ ॥

ಉಳಿದ ಪಾತ್ರೆಗಳನ್ನು ಮೃತನ ಎರಡು ತೊಡೆಗಳ ನಡುವೆ ಇಡಬೇಕು । ಇವುಗಳಿಗೆ ಮಂತ್ರವಿಲ್ಲದ್ದರಿಂದ ಒಟ್ಟಿಗೆ ಇವುಗಳನ್ನು ಇಡಬೇಕು ॥

*** ಕಪರ್ದಿಭಾಷ್ಯಂ –**

ಅವಶಿಷ್ಟಾನಿ ಸಕೃಂತರೇಣ । ಅಗ್ನಿಹೋತ್ರಸ್ಥಾಲ್ಯಾಂ ತೃಣಮಕ್ತ್ವಾನುಪ್ರಹರತಿ । ಇಹ ಅಗ್ನಿಹೋತ್ರಸ್ಯ ಸಂಸ್ಥಿತತ್ವಾತ್ । ಕೇಚಿತ್ ತತ್ರೈವ ತೃಣಮಕ್ತ್ವಾ ಅನುಪ್ರಹರತಿ ತೃಣಮಿತಿ(ಏಕ)ವಚನಾತ್ ॥

ಉಳಿದ ಪಾತ್ರೆಗಳನ್ನು ಎರಡು ತೊಡೆಗಳ ಮಧ್ಯೆ ಇಡಬೇಕು । ಅಗ್ನಿಹೋತ್ರ ಸ್ಥಾಲಿಯಲ್ಲಿ ದರ್ಭೆಯ ತುಂಡನ್ನು ಅದ್ದಿ ಅಗ್ನಿಯಲ್ಲಿ ಅನುಪ್ರಹರಣವನ್ನು (ಹಾಕುವಿಕೆ) ಮಾಡಬೇಕು । ಏಕೆಂದರೆ ಇಲ್ಲಿ ಅಗ್ನಿಹೋತ್ರವು ಸಮಾಪ್ತಿಯಾಗುತ್ತದೆಯಾದ್ದರಿಂದ । ಕೆಲವರು ಅಲ್ಲಿಯೇ ದರ್ಭೆಯ ತುಂಡನ್ನು ಅದ್ದಿ, ಅನುಪ್ರಹರಣ ಮಾಡುತ್ತಾರೆ । ಏಕೆಂದರೆ ತೃಣಂ ಎಂದು ಏಕವಚನವಿರುವುದರಿಂದ ॥

*** ಸೂತ್ರಂ – 21 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಸ ಏಷ ಯಜ್ಞಾಯುಧೀ ಯಜಮಾನೋऽಂಜಸಾ ಸ್ವರ್ಗಂ ಲೋಕಮೇತೀತಿ ವಿಜ್ಞಾಯತೇ ॥

ಈ ರೀತಿ ಮಾಡಿದಾಗ ಈ ಯಜ್ಞಾಯುಧಿಯಾದ(ಯಜ್ಞಪಾತ್ರೆಗಳ ಚಯನ=ಮೃತನ ಶರೀರದಮೇಲೆ ಪಾತ್ರೆಗಳ ಇಡುವಿಕೆಯನ್ನು ಬಲ್ಲವನು) ಯಜಮಾನನು ಖಂಡಿತವಾಗಿಯೂ ಸ್ವರ್ಗವನ್ನೇ ಸೇರುತ್ತಾನೆ ॥

*** ಗೋಪಾಲಭಾಷ್ಯಂ –**

ಯಜ್ಞಾಯುಧಾನಿ ಯಜ್ಞಪಾತ್ರಾಣಿ ತದ್ವಾನ್ । ಏವಂಚಿತ ಯಜ್ಞಪಾತ್ರಃ । ಅಂಜಸಾ ಋಜುನಾಪಥಾ । ಸೇಯಂ ಪಾತ್ರಚಯನ ಪ್ರಶಂಸಾ ತದಾದರಾರ್ಥಾ । ನ ತು ಫಲೋಪಬಂಧಃ । ತತಶ್ಚ ಆಹರಣಕಾಲೇ ನ ವಿಸ್ಮರ್ತವ್ಯಾನೀತಿ ಭಾವಃ ॥

ಯಜ್ಞಪಾತ್ರೆಗಳನ್ನು ಬಲ್ಲವನು ಯಜ್ಞಾಯುಧನು । ಮೇಲೆ ಹೇಳಿದಂತೆ ಯಜ್ಞಪಾತ್ರೆಗಳನ್ನು ಮೃತನ ಶರೀರದ ಮೇಲೆ ಇಡುವುದರಿಂದ(ಚಯನ), ಮೃತನು ಯಜ್ಞಪಾತ್ರಚಿತನಾಗುತ್ತಾನೆ । ಅಂಜಸಾ ಎಂದರೆ, ನೇರವಾಗಿ – ಸ್ಪಷ್ಟವಾಗಿ – ನಿಸ್ಸಂಶಯವಾಗಿ, ಎಂದರ್ಥ । ಈ ಪಾತ್ರಚಯನವನ್ನು ಹೊಗಳಿರುವುದು, ಆದರಾರ್ಥಕ್ಕಾಗಿ, ಇಲ್ಲಿ ಫಲವನ್ನು ಕೊಡುವುದಕ್ಕೆ ಯಾವ ಅಡೆತಡೆಗಳೂ ಬರುವುದಿಲ್ಲ । ಹೀಗೆ ಪಾತ್ರಚಯನವನ್ನು ಮೃತನ ಮೇಲೆ ಮಾಡುವುದರಿಂದ ನಿಸ್ಸಂಶಯವಾಗಿ ಫಲಕ್ಕೆ ಅಡೆತಡೆ ಇಲ್ಲದೇ ಸ್ವರ್ಗಲೋಕವನ್ನು ಪಡೆದೇ ಪಡೆಯುತ್ತಾನೆ । ಆದ್ದರಿಂದ ಯಜ್ಞಪಾತ್ರೆಗಳನ್ನು ಮೃತನ ಶರೀರದ ಮೇಲೆ ಇಡುವಾಗ ಮರೆಯದೇ ಸಂಪೂರ್ಣ ಯಜ್ಞಪಾತ್ರೆಗಳನ್ನು ತಂದು, ಮೃತನ ಶರೀರದ ಮೇಲೆ ಇಡಬೇಕೆಂದು ಅರ್ಥ ॥

*** ಕಪರ್ದಿಭಾಷ್ಯಂ –**

ಸ ಏಷ ಯಜ್ಞಾಯುಧೀ ಯಜಮಾನ ಇತಿ ಪ್ರದರ್ಶನಾರ್ಥಂ ಅನಾಹಿತಾಗ್ನೇಃ ಅಪಿ । ಸ ಏವಂವಿಧೇ ಕೃತೇ ಅಂಜಸಾ ಋಜುನಾಪಥಾ ಕ್ಷೇಮಂ ಗಚ್ಛತೀತಿ ಶ್ರುತಿಃ । ಉಪದೇಶಸ್ತು ಅಂಜಸಾವ್ಯಕ್ತೇನ ಸ್ವರ್ಗಂ ಗಚ್ಛತೀತಿ ॥

'ಈ ಯಜ್ಞಪಾತ್ರೆಗಳನ್ನು ಬಲ್ಲವನಾದ ಯಜಮಾನನು' ಎಂದು ಹೇಳಿರುವುದು ಅನಾಹಿತಾಗ್ನಿಗೂ(ಅಂದರೆ, ಸಂಪೂರ್ಣ ಶ್ರೌತಜ್ಞಾನವನ್ನು ಪಡೆದವನಾದ ಆದರೆ ಆಹಿತಾಗ್ನಿಯಲ್ಲದ) ಕೂಡ ಎಂದು ತೋರಿಸಲು । ಹೀಗೆ ಮೇಲೆ ಹೇಳಿದ ರೀತಿಯಲ್ಲಿ ಯಜ್ಞಪಾತ್ರೆಗಳನ್ನು ಇಟ್ಟು ಔರ್ಧ್ವದೈಹಿಕ ಕರ್ಮವನ್ನು ಮಾಡಿದರೆ ನಿಸ್ಸಂಶಯವಾಗಿ ಸ್ವರ್ಗದ ದಾರಿಯನ್ನು ನೇರವಾಗಿ ಹೊಂದಿ ಆ ಲೋಕಕ್ಕೇ ಹೋಗುತ್ತಾನೆಂದು ಶ್ರುತಿಯು । ಇಲ್ಲಿ **ಅಂಜಸಾ** ಎಂದು ಉಪದೇಶ ಮಾಡಿರುವುದು ನಿಸ್ಸಂಶಯವಾಗಿ ಸ್ವರ್ಗಕ್ಕೆ ಹೋಗುತ್ತಾನೆ ಎಂದು ತಿಳಿಸಲು ॥

*** ಸೂತ್ರಂ – 22 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಉಲ್ಮುಕೇ ವಿಯೂಷ್ಯಾಣ್ಯವದಾನಾನಿ ಶ್ರಪಯಿತ್ವಾ ಹೃದಯೇsಸ್ಯ ಹೃದಯಂ ನಿದಧಾತಿ ॥

ಕೊಳ್ಳಿಯಲ್ಲಿ ಯೂಷ(ಪಶುವಿನ ರಸ)ವು ಸಂಪೂರ್ಣವಾಗಿ ಬತ್ತಿಹೋಗುವಂತೆ ಮಾಡಿ, ಪಶುವಿನ(ರಾಜಗವಿ=ಹಸು) ಉಳಿದ ಅಂಗಗಳನ್ನು ಬೇಯಿಸಿ, ಹೃದಯವನ್ನು ಶವದ ಹೃದಯದಮೇಲೆ ಇಡಬೇಕು ॥

*** ಗೋಪಾಲಭಾಷ್ಯಂ –**

ಉಕ್ತಂ ಮಾಂಸಾನಾಂ ಉಲ್ಮುಕೇಶ್ರಪಣಂ। ತಸ್ಯೇದಾನೀಂ ವಿಶೇಷಜ್ಞಾಪನಾರ್ಥಃ ಅಯಂ ವಾದಃ। ಯೂಃ ಪಶುರಸಃ। ತದ್ರಹಿತಾನಿ ವಿಯೂಷ್ಕಾನಿ। ಅವದಾನಾನಿ ಉದ್ಧೃತ ಮಾಂಸಾನಿ । ಅವದಾನಗ್ರಹಣಂ ಪಾದಾದಿ ಸಹಿತಸ್ಯ ಚರ್ಮಣಃ ಶ್ರಪಣ ನಿವೃತ್ಯರ್ಥಂ। ವಿಯೂಷ್ಕಶ್ರಪಣಂ। ಪಶುರಸ ಶೋಷಣಾಂತಮುಚ್ಯತೇ । ಹೃದಯ ಇತಿ ಪ್ರೇತಸ್ಯ ಹೃದಯದೇಶ ಉಚ್ಯತೇ ॥

ರಾಜಗವಿಯ(ಹಸುವಿನ) ಮಾಂಸವನ್ನು ಉಲ್ಮುಕ(ಕೊಳ್ಳಿ)ದಲ್ಲಿ ಬೇಯಿಸುವುದನ್ನು ಹೇಳಿದೆ । ಈಗ ಅದರ ವಿಶೇಷತೆಯನ್ನು ಸವಿವರವಾಗಿ ತಿಳಿಸಲು ಈ ಮುಂದೆ ಉಪದೇಶಿಸಿದೆ । **ಯೂ** ಎಂದರೆ **ಪಶುವಿನ ರಸವು** । ಅದಲ್ಲದಿರುವುದೇ **ವಿಯೂಷ್ಕವು** । ಅವದಾನವೆಂದರೆ, ಹವಿಸ್ಸಿಗಾಗಿ ತೆಗೆದುಕೊಂಡ ಮಾಂಸಗಳು । ಇಲ್ಲಿ ಅವದಾನ ಎಂದು ಹೇಳಿರುವುದು ಚರ್ಮಸಹಿತವಾದ ಪಾದಾದಿಗಳ ಬೇಯಿಸುವಿಕೆಯನ್ನು ಅಲ್ಲಗಳೆಯಲು । ವಿಯೂಷ್ಕಶ್ರಪಣ ಎಂದರೆ, ಪಶುವಿನ ರಸವು ಬತ್ತಿಹೋಗುವ ತನಕ ಬೇಯಿಸುವುದು ಎಂದು ಅರ್ಥವನ್ನು ಹೇಳಿದ್ದಾರೆ । ಹೃದಯೇ ಎಂದರೆ, ಮೃತನ ಹೃದಯದೇಶವನ್ನು ವಿಧಿಸುತ್ತಿದೆ(ಪಶುವಿನ ಹೃದಯವನ್ನು ಮೃತನ ಹೃದಯದ ಮೇಲೆ ಇಡುವುದು) ಎಂದರ್ಥ ॥

*** ಕಪರ್ದಿಭಾಷ್ಯಂ –**

ಉಲ್ಮುಕೇ ವಿಯೂಷ್ಕಾನಿ ವಿರಸಾನಿ ಯೂಷವರ್ಜಿತಾನಿ ಅವದಾನಾನಿ ಪಕ್ವಾನಿ ಅತಿದಗ್ಧಾನಿ ಕೃತ್ವಾ । ಅನತಿದಗ್ಧಾನೀತಿ ಕೇಚಿತ್ । ವಿಯೂಷ್ಕಾನಿ ಈಷತ್ ಪುಷ್ಕಾನಿ। ಮೃತಸ್ಯಹೃದಯೇ ಹೃದಯಂ ನಿದಧಾತಿ ॥

ಕೊಳ್ಳಿಯಲ್ಲಿ ರಸವು ಸಂಪೂರ್ಣವಾಗಿ ಬತ್ತಿ ಹೋಗುವಂತೆ ಮಾಂಸ ಹವಿಸ್ಸನ್ನು ಅತಿಯಾಗಿ ಬೇಯಿಸಬೇಕು । ಕೆಲವರು ಅತಿಯಾಗಿ ಬೇಯಿಸದೇ ಸಾಮಾನ್ಯವಾಗಿ ಬೇಯಿಸಬೇಕೆನ್ನುತ್ತಾರೆ । ವಿಯೂಷ್ಕಾನಿ ಎಂದರೆ, ಸ್ವಲ್ಪಒಣಗಿದ ಎಂದರ್ಥ । ಮೃತನ ಹೃದಯದ ಮೇಲೆ ರಾಜಗವಿಯ ಹೃದಯಭಾಗವನ್ನು ಹವಿಸ್ಸಾಗಿ ಇಡಬೇಕು ॥

*** ಸೂತ್ರಂ – 23 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ದಕ್ಷಿಣೇಹಸ್ತೇ ದಕ್ಷಿಣಂ ವೃಕ್ಯಂ ಸವ್ಯೇ ಸವ್ಯಂ ಶ್ಯಾಮಶಬಲಾಭ್ಯಾಂ ತ್ವಾ ಇತಿ ॥

ಶವದ ಬಲಕೈಯಲ್ಲಿ ಪಶುವಿನ ಬಲವೃಕ್ಯವನ್ನು, ಎಡಕೈಯಲ್ಲಿ ಎಡವೃಕ್ಯವನ್ನು ಶ್ಯಾಮಶಬಲಾಭ್ಯಾಂ.....ಮಂತ್ರದಿಂದ ಇಡಬೇಕು ॥

*** ಗೋಪಾಲಭಾಷ್ಯಂ –**

ನಿದಧಾತೀನ್ಯನ್ವಯಃ । ತತ್ರ ಸಕೃದುಕ್ತೇನ ಮಂತ್ರೇಣ ಉಭೌ ವೃಕ್ಯೌ ಹಸ್ತಾಭ್ಯಾಂ ಯುಗಪನ್ನಿದಧಾತಿ ಪ್ರೇತಾಭಿಧಾನಾತ್ । ವೃಕ್ಯಾಭಿಧಾನಾತ್ ಆವೃತ್ತಿರಿತಿ ಅಪರಮ್ ॥

ಮೇಲೆ ಸೂತ್ರದಲ್ಲಿ ಹೇಳಿದ ಹವಿಸ್ಸನ್ನು ಮೃತನ ಮೇಲೆ ಹೇಳಿದ ಸ್ಥಾನದಲ್ಲಿ ಇಡಬೇಕೆಂದು ಅರ್ಥ । ಇಲ್ಲಿ, ಒಂದೇಸಲ ಮಂತ್ರವನ್ನು ಉಚ್ಚರಿಸಿ ಎರಡು ವೃಕ್ಯಗಳನ್ನು ಮೃತನ ಎರಡೂ ಕೈಗಳಲ್ಲಿ ಒಟ್ಟಿಗೆ ಇಡಬೇಕು । ಏಕೆಂದರೆ ಮೃತನನ್ನು ಇಲ್ಲಿ (ವಿಧಾನ) ಹೆಸರಿಸುತ್ತಿರುವುದರಿಂದ । ಕೆಲವರು ವೃಕ್ಯವನ್ನು(ವೃಷಣ) ವಿಧಾನ ಮಾಡುತ್ತಿರುವುದರಿಂದ ಮಂತ್ರದ ಆವೃತ್ತಿಯು ಇದೆ ಎಂದು ಹೇಳುತ್ತಾರೆ ॥

*** ಕಪರ್ದಿಭಾಷ್ಯಂ –**

ಶ್ಯಾಮಶಬಲಾಭ್ಯಾಂ ತ್ವೇತಿ ಉಭಯೋಃ ಹಸ್ತಯೋಃ । ಪಶೋರ್ಹಸ್ತೌ । ಸಕೃದೇವ ಮಂತ್ರಃ । ಅತ್ರ ಮೃತಾಭಿಧಾನಾತ್ ॥

ಶ್ಯಾಮ ಶಬಲಾಭ್ಯಾಂ ತ್ವಾ....., ಎಂಬ ಮಂತ್ರದಿಂದ ಮೃತನ ಎರಡೂ ಕೈಗಳ ಮೇಲೆ ಪಶುವಿನ ವೃಕ್ಯವನ್ನು (ವೃಷಣ) ಮೃತನ ಹಸ್ತಗಳಲ್ಲಿ ಇಡಬೇಕು । ಒಂದೇಸಲ ಮಂತ್ರದ ಉಚ್ಚಾರಣೆ । ಏಕೆಂದರೆ ಮೃತನನ್ನು ಹೆಸರಿಸುತ್ತಿರುವುದರಿಂದ ॥

*** ಸೂತ್ರಂ – 24 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಹಸ್ತಯೋರೇವ ಮೈತ್ರಾವರುಣೇಂ ಆಮಿಕ್ಷಾಂ ಮಿತ್ರಾವರುಣಾಭ್ಯಾಂ ತ್ವಾ ಇತಿ ॥

ಎರಡು ಕೈಗಳಲ್ಲಿ ಮೈತ್ರಾವರುಣೀ ಆಮಿಕ್ಷೆಯನ್ನು ಮಿತ್ರಾವರುಣಾಭ್ಯಾಂ ತ್ವಾ.....ಮಂತ್ರದಿಂದ ಇಡಬೇಕು ॥

*** ಗೋಪಾಲಭಾಷ್ಯಂ –**

ಅತ್ರಾಪಿ ಶವಾಭಿಧಾನಾತ್ ಪೂರ್ವವತ್ ಕ್ಲೃಪ್ತಿಃ, ಆವೃತ್ತಿರ್ವಾ ಆಮಿಕ್ಷಾಭಿಧಾನಾತ್ ॥

ಇಲ್ಲಿಯೂ ಕೂಡ ಮೃತನನ್ನು ಹೆಸರಿಸುತ್ತಿರುವುದರಿಂದ ಹಿಂದಿನಂತೆ ಒಂದೇಸಲ ಮಂತ್ರದ ಉಚ್ಚಾರಣೆಯು । ಅಥವಾ ಆಮಿಕ್ಷೆಯನ್ನು ಹೇಳಿತ್ತಿರುವುದರಿಂದ ಮಂತ್ರವನ್ನು ಆವೃತ್ತಿ ಮಾಡಬಹುದು ॥

*** ಕಪರ್ದಿಭಾಷ್ಯಂ –**

ತಥಾ ಆಮಿಕ್ಷಾಂ ಚ ಮಿತ್ರಾವರುಣಾಭ್ಯಾಂ ತ್ವೇತಿ ॥

ಹಾಗೆಯೇ ಆಮಿಕ್ಷೆಯನ್ನು(ಒಡೆದಿರುವ ಹಾಲಿನ ಮೇಲಿನ ಕೆನೆ) ಮಿತ್ರಾವರುಣಾಭ್ಯಾಂ ತ್ವಾ....., ಎಂಬ ಮಂತ್ರದಿಂದ ಮೃತನ ಎರಡು ಕೈಗಳ ಮೇಲೆ ಇಡಬೇಕೆಂದು ಅರ್ಥ ॥

*** ಸೂತ್ರಂ – 25=103 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ವಪಯಾಸ್ಯ ಮುಖಂ ಪ್ರೋಣೋರ್ಯತಿ ಮೇದಸಾಶಿರಃ ಸಂಪ್ರೋರ್ಣುಷ್ವ ಮೇದಸಾ ಪೀವಸಾ ಚ ಇತಿ ॥

ಪಶುವಿನ ವಪೆ(ಪಶುವಿನ ಪಕ್ಕೆಯಲ್ಲಿರುವ ಬಿಳಿಹಾಳೆಯಂತಿರುವ ತೆಳುವಾದ ಅಂಗ)ಯಿಂದ ಶವದ ಮುಖವನ್ನು ಹೊದಿಸಬೇಕು, ಮೇದಸಾ ಶಿರಃ ಸಂಪ್ರೋರ್ಣುಷ್ವ.....ಮಂತ್ರದಿಂದ ॥

*** ಗೋಪಾಲಭಾಷ್ಯಂ –**

ವ್ಯಕ್ತಂ । ಪ್ರೋಣೋರ್ಯತೀತಿ ಶೇಷಃ । ಮಂತ್ರಸ್ತ್ವೇತಾವಾನೇವ ಭವತಿ, ಲಿಂಗಾತ್ ॥

ಈ ಸೂತ್ರದ ಅರ್ಥವು ಸ್ಪಷ್ಟವಾಗಿದೆ । ಹೊದಿಸುತ್ತಾನೆ ಎಂದರ್ಥ । ಮಂತ್ರವಾದರೋ ಇಷ್ಟೇ, ಏಕೆಂದರೆ ಮಂತ್ರಲಿಂಗವು ಇಷ್ಟೇ ಆಗಿರುವುದರಿಂದ ॥

*** ಕಪರ್ದಿಭಾಷ್ಯಂ –**

ಮೇದಸಾಶಿರಃ ಸಂಪ್ರೋರ್ಣುಷ್ವ ಇತಿ ಶಿರಃ ಪ್ರಚ್ಛಾದಯತಿ ॥

ಮೇದಸಾಶಿರಃ ಸಂಪ್ರೋರ್ಣುಷ್ವ....., ಎಂಬ ಮಂತ್ರದಿಂದ ತಲೆಯನ್ನು ಮುಚ್ಚಬೇಕು ॥

7ನೇ ಖಂಡ

(ಶವಕ್ಕೆ ಅಗ್ನಿಸ್ಪರ್ಶನ ವಿಚಾರ – ಹೊಗೆಯ ಲಕ್ಷಣ ವಿಚಾರ)

*** ಸೂತ್ರಂ – 1 (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)**

ಅಥೈನಂ ಸಪಾದವಾಲಶೀರ್ಷ ಚರ್ಮಣೋತ್ತರ ಲೋಮ್ನಾ ಪ್ರೋಣೋರ್ತಿ ಅಗ್ನೇರ್ವರ್ಮ ಇತಿ ॥

ಆಮೇಲೆ, ಈ ದೇಹವನ್ನು ಪಶುವಿನ ಪಾದ, ಬಾಲ, ತಲೆ, ಹಸುವಿನ ಚರ್ಮದ ಕೂದಲು ಮೇಲ್ಮುಖವಾಗಿರುವಂತೆ ಚರ್ಮವನ್ನು ಮೃತನಿಗೆ ಮುಚ್ಚಬೇಕು, ಅಗ್ನೇರ್ವರ್ಮ ಪರಿ....., ಎಂಬ ಮಂತ್ರದಿಂದ ॥

*** ಗೋಪಾಲಭಾಷ್ಯಂ –**

ಅಗ್ನೇರ್ವರ್ಮೇತಿ ಕೃತ್ಸ್ನಯಾ ಋಚಾ ಪ್ರೋಣೋರ್ತಿ । ತಥಾ ಬೋಧಾಯನೀಯೇ ಪಾಠಾತ್ । ತತ್ರ ಶಿರಸಾ ಶಿರಸ್ಸಂಪ್ರೋರ್ಣನಂ । ಪೂರ್ವಪಾದಾಭ್ಯಾಂ ಅಂಸಯೋಃ, ಅಪರಪಾದಾಭ್ಯಾಂ ಪಾದಯೋಃ, ಇತಿ ದ್ರಷ್ಟವ್ಯಮ್ ॥

ಅಗ್ನೇರ್ವರ್ಮ....., ಎಂಬ ಸಂಪೂರ್ಣ ಮಂತ್ರದಿಂದ ಮೃತನನ್ನು ಮುಚ್ಚುತ್ತಾನೆ । ಹೀಗೆ ಬೋಧಾಯನಸೂತ್ರದಲ್ಲಿ ಹೇಳಿರುವುದರಿಂದ । ಪಶುವಿನ ತಲೆಯಿಂದ ಮೃತನ ತಲೆಯನ್ನು ಮುಚ್ಚಬೇಕು । ಪಶುವಿನ ಮುಂದಿನ 2 ಕಾಲುಗಳಿಂದ ಮೃತನ 2 ಭುಜಗಳನ್ನು ಮುಚ್ಚಬೇಕು, ಹಿಂದಿನ ಕಾಲುಗಳಿಂದ ಮೃತನ 2 ಕಾಲುಗಳನ್ನು ಮುಚ್ಚಬೇಕೆಂದು ತಿಳಿಯಬೇಕು ॥

* ಕಪರ್ದಿಭಾಷ್ಯಂ –

ಅಥೈನಂ ಸಪಾದವಾಲಶೀರ್ಷ್ಣ ಚರ್ಮಣಾ ಉತ್ತರಲೋಮ್ನಾ ಪ್ರೋಣ್ಣೋತಿ ಅಗ್ನೇರ್ವರ್ಮೇತ್ಯನಯಾ । ಯಥಾಲಿಂಗಮಂಗಾನಿ ಸನ್ನಿದಧಾತಿ ಯಥಾಶಿರಸಿಶಿರಃ । ಏವಮಿತರಾಣಿ ॥

ನಂತರ ಮೃತನನ್ನು ಪಶುವಿನ ಕಾಲು, ಬಾಲ, ತಲೆಯ ಚರ್ಮಗಳಿಂದ ಅವುಗಳ ಕೂದಲು ಮೇಲೆ ಬರುವಂತೆ ಅಗ್ನೇರ್ವರ್ಮ....., ಎಂಬ ಮಂತ್ರದಿಂದ ಮುಚ್ಚ ಬೇಕು । ಯಥಾಲಿಂಗವಾಗಿ ಮೃತನ ತಲೆಯ ಮೇಲೆ ಪಶುವಿನ ತಲೆ....., ಈ ಕ್ರಮದಲ್ಲಿ ಪಶುವಿನ ಅಂಗಗಳನ್ನು ಇಟ್ಟು ಮುಚ್ಚಬೇಕು । ಹೀಗೆಯೇ ಕ್ರಮವಾಗಿ ಇಟ್ಟು ಮುಚ್ಚ ಬೇಕು ॥

* ಸೂತ್ರಂ – 2 (ಇಬ್ಬರಿಗೂ)

ಅಥೈನ ಉಪೋಷತಿ ಮೈನಮಗ್ನೇ ವಿದಹಃ ಇತಿ ಪುರಸ್ತಾತ್ ಆಹವನೀಯೇನ ಶೃತಂ ಯದಾ ಇತಿ ಪಶ್ಚಾದ್ಗಾರ್ಹಪತ್ಯೇನ ತೂಷ್ಣೀಂ ದಕ್ಷಿಣತಃ ಅನ್ವಾಹಾರ್ಯಪಚನೇನ ಪುರಸ್ತಾತ್ ಸಭ್ಯಾವಸಥ್ಯಾಭ್ಯಾಂ ಔಪಾಸನೇನ ಚ ॥

ಆಮೇಲೆ, ಈ ದೇಹವನ್ನು ಸುಡುವುದಕ್ಕೆ ಅಗ್ನಿಯನ್ನು ಹತ್ತಿಸಬೇಕು, ಹೇಗೆಂದರೆ – ಮೈನಮಗ್ನೇ.....ಮಂತ್ರದಿಂದ, ಪೂರ್ವದಿಕ್ಕಿನಿಂದ – ಆಹವನೀಯದಿಂದಲೂ, ಶೃತಂಯದಾ.....ಮಂತ್ರದಿಂದ, ಪಶ್ಚಿಮದಿಂದ – ಗಾರ್ಹಪತ್ಯದಿಂದಲೂ, ಅಮಂತ್ರಕವಾಗಿ ದಕ್ಷಿಣದಿಂದ – ದಕ್ಷಿಣಾಗ್ನಿಯಿಂದಲೂ, ಮತ್ತೆ ಪೂರ್ವದಿಂದ ಸಭ್ಯ – ಆವಸಥ್ಯ – ಔಪಾಸನಾಗ್ನಿಗಳಿಂದಲೂ ಜ್ವಲಿಸಬೇಕು ॥

* ಗೋಪಾಲಭಾಷ್ಯಂ –

ಉಪೋಷಣಂ ದಹನಂ । ದಾರುಚಿತೇರೇವಾತ್ರ ಸಾಕ್ಷಾತ್ ಅಗ್ನಿಸಂಯೋಗ ಕಾರ್ಯಃ । ಉಪೋಷತೀತಿ ಶೇಷಃ । ಪೂರ್ವವತ್ ಶೇಷಃ । ಯತ್ರಾಹವನೀಯಃ ಪ್ರಕ್ಷಿಪ್ತಃ ತತೋ ದಕ್ಷಿಣತಃ ಕ್ರಮೇಣೈಷಾಂ ಪ್ರಕ್ಷೇಪಃ ॥

ಉಪೋಷಣವೆಂದರೆ ದಹನವು । ಇಲ್ಲಿ ಚಿತೆಗೇ ಅಗ್ನಿಸ್ಪರ್ಶವನ್ನು ಸಾಕ್ಷಾತ್ತಾಗಿ ಮಾಡಬೇಕು । ನಂತರ ದಹನ ಮಾಡಬೇಕೆಂದು ಅರ್ಥ । ಹಿಂದಿನಂತೆ ಸ್ಪಷ್ಟಾರ್ಥ ವಾಗಿದೆ । ಎಲ್ಲಿ ಆಹವನೀಯವು ಇಡಲ್ಪಟ್ಟಿದೆಯೋ ಅದರ ದಕ್ಷಿಣಕ್ಕೆ ಕ್ರಮವಾಗಿ ಉಳಿದ ಅಗ್ನಿಗಳನ್ನು ಚಿತೆಯ ಮೇಲೆ ಇಡಬೇಕು (ಹಾಕಬೇಕು) ॥

*** ಕಪರ್ದಿಭಾಷ್ಯಂ –**

ಅಥೈನಮುಪೋಷತಿ ದಹತಿ । ಚಿತೇಃ ಪುರಸ್ತಾತ್ ಆಹವನೀಯೇನ ಮೈನಮಗ್ನ ಇತಿ । ತಥಾ ಪಶ್ಚಾತ್ ಗಾರ್ಹಪತ್ಯೇನ ಶೃತಂ ಯದೇತಿ । ತೂಷ್ಣೀಂ ದಕ್ಷಿಣತಃ ಅನ್ವಾಹಾರ್ಯಪಚನೇನ । ತೂಷ್ಣೀಂ ಅನೂಚ್ಯಮಾನೇ ಅನಂತರ– ವಿಧಿಃ ಪ್ರಾಪ್ನೋತಿ । ತಸ್ಮಾತ್ ಸಭ್ಯಾವಸಥ್ಯೌಪಾಸನೈಃ ತೂಷ್ಣೀಂ ಏವ ॥

ನಂತರ ಈ ಮೃತನನ್ನು ದಹನ ಮಾಡಬೇಕು । ಚಿತೆಯ ಪೂರ್ವದಿಂದ(ಮುಂದೆ), ಮೈನಮಗ್ನೇ....., ಎಂಬ ಮಂತ್ರದಿಂದ ಆಹವನೀಯಾಗ್ನಿಯಿಂದ ದಹನ ಮಾಡ ಬೇಕು । ಹಾಗೆಯೇ ಪಶ್ಚಿಮದಿಂದ(ಹಿಂದೆ) ಗಾರ್ಹಪತ್ಯಾಗ್ನಿಯಿಂದ, ಶೃತಂ ಯದಾ....., ಎಂಬ ಮಂತ್ರದಿಂದ ದಹನ ಮಾಡಬೇಕು । ಅಮಂತ್ರಕವಾಗಿ, ದಕ್ಷಿಣದ ಕಡೆಯಿಂದ, ದಕ್ಷಿಣಾಗ್ನಿಯಿಂದ ದಹಿಸಬೇಕು । ಮುಂದಿನ ಅಗ್ನಿಗಳಿಗೆ ತೂಷ್ಣೀಂ ಎಂದು ಹೇಳದಿದ್ದರೂ ತೂಷ್ಣೀಂ ಎಂಬುದು ಅನ್ವಯವಾಗುತ್ತದೆ । ಏಕೆಂದರೆ **ತೂಷ್ಣೀಂ** ವಿಧಿಯು ಅವುಗಳಿಗೆ ಅತೀವ ಸಮೀಪದಲ್ಲಿರುವುದರಿಂದ । ಆದ್ದರಿಂದ ಸಭ್ಯಾ, ಆವಸಥ್ಯಾ, ಔಪಾಸನಾಗ್ನಿಯಿಂದ, ಚಿತೆಯ ಪೂರ್ವದಿಂದ(ಮುಂದೆ), ಅಮಂತ್ರಕವಾಗಿ ದಹನ ಮಾಡಬೇಕು ॥

*** ಸೂತ್ರಂ – 3 (ಇಬ್ಬರಿಗೂ)**

ಅಥೈನಂ ಉಪತಿಷ್ಠತೇ ಸೂರ್ಯಂ ತೇ ಚಕ್ಷುಃ ಇತಿ ॥

ಆಮೇಲೆ, ಆ ದೇಹಹತ್ತಿದ ಅಗ್ನಿಯನ್ನು ಉಪಸ್ಥಾನ ಮಾಡಬೇಕು, ಸೂರ್ಯಂ ತೇ ಚಕ್ಷುಃ....., ಎಂಬ ಮಂತ್ರದಿಂದ ॥

*** ಗೋಪಾಲಭಾಷ್ಯಂ –**

ಕ್ರಮಪ್ರಾಪ್ತಾಯಾ ಏವ ಋಚೋಗ್ರಹಣಮ್ ॥

ಕ್ರಮಪ್ರಾಪ್ತವಾದ ಮುಂದಿನ ಋಕ್ಕನ್ನೇ(ಸೂರ್ಯಂ ತೇ....,) ಮೃತನ ಉಪಸ್ಥಾನಕ್ಕೆ ತೆಗೆದುಕೊಳ್ಳಬೇಕು ॥

*** ಕಪರ್ದಿಭಾಷ್ಯಂ –**

ಅಥೈನಂ ಉಪತಿಷ್ಠತೇ ಸೂರ್ಯಂತೇ ಚಕ್ಷುರಿತಿ । ಮಂತ್ರಲಿಂಗಾತ್ ಪ್ರೇತಮ್ ॥

ನಂತರ ಈ ಮೃತನನ್ನು ಸೂರ್ಯಂ ತೇ ಚಕ್ಷುಃ....., ಎಂಬ ಮಂತ್ರದಿಂದ ಉಪಸ್ಥಾನ ಮಾಡುತ್ತಾನೆ । ಮಂತ್ರದ ಗುರುತಿರುವುದರಿಂದ ಮೃತನನ್ನು ಕುರಿತ ಉಪಸ್ಥಾನವೇ ॥

*** ಸೂತ್ರಂ – 4 (ಇಬ್ಬರಿಗೂ)**

ವಿಜ್ಞಾನಮುಪೈತಿ । ಯದ್ಯೂರ್ಧ್ವೋ ಧೂಮ ಉದಿಯಾತ್ ದ್ಯುಲೋಕೋ ಭವತಿ ಇತಿ ವಿಜ್ಞಾಯತೇ । ಯದಿ ಅಂತರಿಕ್ಷಂ ಅಂತರಿಕ್ಷಲೋಕಃ । ಯದಿ ಪೃಥಿವೀಂ ಪೃಥಿವೀಲೋಕಃ ॥

ಆಗ ಕರ್ತೃವು ಆ ಚಿತೆಯಿಂದ ಬರುತ್ತಿರುವ ಹೊಗೆಯ ಪರೀಕ್ಷೆಯನ್ನು ಮಾಡಬೇಕು । ಒಂದುವೇಳೆ ಹೊಗೆಯು ಮೇಲ್ಮುಖವಾಗಿ ಹೊರಟರೆ, ಆ ವ್ಯಕ್ತಿಯು ದ್ಯುಲೋಕ(ದಕ್ಷಿಣಾಯನ ಮಾರ್ಗದಿಂದ ಸಿಗುವ ಸ್ವರ್ಗ)ಕ್ಕೆ ಸೇರುತ್ತಾನೆಂದೂ । ಹೊಗೆಯು ಆಕಾಶದಲ್ಲಿ ಹರಡಿದರೆ, ಅಂತರಿಕ್ಷಲೋಕವನ್ನು ಸೇರುತ್ತಾನೆಂದೂ । ಅಥವಾ ಭೂಮಿಯ ಮೇಲೆ ಹೊಗೆಯು ಹರಡಿದರೆ, ಭೂಲೋಕವನ್ನು ಸೇರುತ್ತಾನೆಂದು ತಿಳಿಯಬೇಕು ॥

*** ಗೋಪಾಲಭಾಷ್ಯಂ –**

ವಿಜ್ಞಾನಂ ಪರೀಕ್ಷಾ । ತದುಪೈತಿ ಅನುತಿಷ್ಠೇತ್ । ಧೂಮಗತಿವಶಾತ್ । ತತ್ರ ಯದಿ ಅಂತರಿಕ್ಷಮಿತಿ ತಿರ್ಯಕ್ ಗತಿಃ ಧೂಮಸ್ಯೋಚ್ಯತೇ ॥

ಆಗ ಕರ್ತೃವು ಆ ಚಿತೆಯ ಹೊಗೆಯ ಪರೀಕ್ಷೆಯನ್ನು ಮಾಡಬೇಕು । ಏಕೆಂದರೆ, ಹೊಗೆಯ ಹೋಗುವಿಕೆಯನ್ನು ಅನುಸರಿಸಿ ಮೃತನು ಆಯಾಯಾ ಲೋಕಗಳನ್ನು ಅನುಸರಿಸುತ್ತಾನಾದ್ದರಿಂದ । ಆಗ ಆಲ್ಲಿ ಒಂದುವೇಳೆ ಹೊಗೆಯು ಅಂತರಿಕ್ಷಕ್ಕೆ, ಅಂದರೆ ಅಡ್ಡಡ್ಡವಾಗಿ ಹೋದರೆ ಎಂದರ್ಥ ॥

*** ಕಪರ್ದಿಭಾಷ್ಯಂ –**

ವಿಜ್ಞಾನಮುಪೈತೀತ್ಯೇತತ್ ದರ್ಶಯತಿ । ಯದಿ ಊರ್ಧ್ವಮುದೇತಿ ಉತ್ತಿಷ್ಠತಿ ದ್ಯುಲೋಕೋ ಭವತಿ । ದ್ಯುಲೋಕಃ ದ್ಯುಸ್ಥಾನಃ । ದೇವತಾಭಿಃ ಸಂಗಚ್ಛತೇ । ಏವಮಂತರಿಕ್ಷೇ ಪೃಥಿವ್ಯಾಂ ದೇವತಾಭಿಶ್ಚ ॥

ಆ ಹೊಗೆಯ ಗತಿಯನ್ನು ಗಮನಿಸಬೇಕೆಂದು ಕಪರ್ದಿಮುನಿಗಳು ಹೇಳುತ್ತಾರೆ । ಒಂದುವೇಳೆ ಹೊಗೆಯು ನೇರವಾಗಿ ಮೇಲಕ್ಕೆ ಹೋದರೆ, ಮೃತನು ದ್ಯುಲೋಕವನ್ನು ಪಡೆಯುತ್ತಾನೆ । ದ್ಯುಲೋಕವೆಂದರೆ ದೇವತೆಗಳಿರುವ ಸ್ಥಾನ । ದೇವತೆಗಳ ಜೊತೆ ಸೇರುತ್ತಾನೆ ಎಂದರ್ಥ । ಹೀಗೆಯೇ ಅಂತರಿಕ್ಷ ಮತ್ತು ಪೃಥಿವೀ ದೇವತೆಗಳ ಜೊತೆ ಕ್ರಮವಾಗಿ ಲಕ್ಷಣಗಳಿಗನುಗುಣವಾಗಿ ಸೇರುತ್ತಾನೆಂದು ಅರ್ಥ ಮಾಡಬೇಕು ॥

*** ಸೂತ್ರಂ – 5 (ಆಹಿತಾಗ್ನಿಗಳಿಗೆ ಮಾತ್ರ)**

ಜಘನೇನ ಚಿತಿಂ ಅಜಮಬಲೇನ ಶುಲ್ಬೇನ ಸಂಬಧ್ನಾತಿ ॥

ಉರಿಯುತ್ತಿರುವ ಶವದ ಚಿತೆಯ ಪಶ್ಚಿಮದಲ್ಲಿ(ಹಿಂದೆ) ದುರ್ಬಲವಾದ ಹಗ್ಗದಿಂದ ಆಡನ್ನು ಕಟ್ಟಬೇಕು ॥

*** ಗೋಪಾಲಭಾಷ್ಯಂ –**

ಯತ್ ಕರ್ಷಣಮಾತ್ರಾಚ್ಛಿದ್ಯತೇ ತದಿಹ ಅಬಲಂ । ಶುಲ್ಬಂ ಏಕಸರಾರಜ್ಜುಃ ॥

ಯಾವುದು ಎಳೆಯುವುದರಿಂದಲೇ ತುಂಡಾಗುತ್ತದೋ, ಅದು ದುರ್ಬಲ ವಾದದ್ದು । ಅಂತಹ ದುರ್ಬಲ ಹಗ್ಗದಿಂದ ಆಡನ್ನು ಕಟ್ಟಬೇಕೆಂದು ಅರ್ಥ ॥

*** ಕಪರ್ದಿಭಾಷ್ಯಂ –**

ಜಘನೇನ ಚಿತಿಂ ತಸ್ಯಾ ಏವ ಚಿತೇಃ ಕಾಷ್ಠೇ ಅಜಮಬಲಯಾ ರಜ್ಜ್ವಾ ಬಧ್ನಾತಿ ತೂಷ್ಣೀಮ್ ॥

ಚಿತೆಯ ಹಿಂದೆ(ಪಶ್ಚಿಮ) ಆ ಚಿತೆಯಲ್ಲಿರುವ ಒಂದು ಕಟ್ಟಿಗೆಗೆ ಆಡನ್ನು ದುರ್ಬಲವಾದ ಹಗ್ಗದಿಂದ ಅಮಂತ್ರಕವಾಗಿ ಕಟ್ಟಬೇಕು ॥

*** ಸೂತ್ರಂ – 6 (ಆಹಿತಾಗ್ನಿಗಳಿಗೆ ಮಾತ್ರ)**

ಅಜೋಭಾಗಃ ಇತ್ಯುದ್ರವಂತಂ ಅನುಮಂತ್ರಯತೇ ॥

ಅಜೋಭಾಗಃ....., ಎಂಬ ಮಂತ್ರದಿಂದ ಆ ಹಗ್ಗವನ್ನು ತುಂಡರಿಸಿ ಓಡುತ್ತಿರುವ ಆಡನ್ನು ಅನುಮಂತ್ರಣ ಮಾಡಬೇಕು ॥

*** ಗೋಪಾಲಭಾಷ್ಯಂ –**

ಉದ್ರವಂತಂ ದಾಹ ಭಯಾತ್ ಶುಲ್ಬಂ ವಿಚ್ಛಿದ್ಯ ಪಲಾಯಮಾನಮಜಂ । ಅಜೋಭಾಗ ಇತ್ಯನುವಾಕಶೇಷೇಣ ಅನುಮಂತ್ರಯತೇ । ದ್ವಾಭ್ಯಾಮಿತ್ಯೇವ ಕೇಚಿತ್ ಪಠಂತಿ ॥

ತಾನೂ ಸುಡುವ ಭಯದಿಂದ ಹಗ್ಗವನ್ನು ತುಂಡರಿಸಿಕೊಂಡು ಓಡುತ್ತಿರುವ ಆಡನ್ನು । ಅಜೋಭಾಗ....., ಎಂಬ ಅನುವಾಕ ಶೇಷದಿಂದ ಕರ್ತೃವು ಅನುಮಂತ್ರಣ ಮಾಡಬೇಕು । ಕೆಲವರು ಮೇಲೆ ಹೇಳಿದ 2 ಮಂತ್ರಗಳಿಂದ ಮಾತ್ರ ಅನುಮಂತ್ರಣ ಮಾಡಬೇಕೆಂದು ಹೇಳುತ್ತಾರೆ ॥

*** ಕಪರ್ದಿಭಾಷ್ಯಂ –**

ಪಲಾಯಮಾನಂ ಅಜೋಭಾಗ ಇತ್ಯನುಮಂತ್ರಯತೇ । ಅಜಂ ಚ ದರ್ಶಯತಿ ॥

ಓಡುತ್ತಿರುವ ಆಡನ್ನು ಅಜೋಭಾಗ....., ಎಂಬ ಮಂತ್ರದಿಂದ ಅನುಮಂತ್ರಣ ಮಾಡಬೇಕು । ಎಂದರೆ, ಆಡನ್ನು ನೋಡುತ್ತಾ ಮಂತ್ರವನ್ನು ಹೇಳಬೇಕು ॥

*** ಸೂತ್ರಂ – 7 (ಆಹಿತಾಗ್ನಿಗಳಿಗೆ ಮಾತ್ರ)**

ಅತ್ರೈತದ್ಧವಿಃ ಇಡಾಸೂನುನಾ ಪಾತ್ರ್ಯಾ ಚಮಸೇನ ವಾ ಜುಹೋತಿ 'ಅಗ್ನಯೇ ರಯಿಮತೇ ಸ್ವಾಹಾ' ಇತಿ ॥

ಆಮೇಲೆ ಇಡಾಪಾತ್ರೆಯ ಬುಡದಿಂದ ಅಥವಾ ಪಾತ್ರೆಯಿಂದ ಅಥವಾ ಚಮಸದಿಂದಾಗಲೀ 'ಅಗ್ನಯೇ ರಯಿಮತೇ ಸ್ವಾಹಾ' ಎಂದು ಶವಾಗ್ನಿಗೆ ಹೋಮಿಸಬೇಕು ॥

*** ಗೋಪಾಲಭಾಷ್ಯಂ –**

ಅತ್ರ ಶವಾಗ್ನೌ ಏತದ್ಧವಿಃ ರಾಜಗವ್ಯಾ ಅವಶಿಷ್ಟಂ ಮಾಂಸಜಾತಂ ಇಡಾಸೂನುನಾ ಪಾತ್ರ್ಯಾ ಚಮಸೇನ ವಾ ಸಕೃದೇವ ಅನೇನ ಮಂತ್ರೇಣ ಜುಹುಯಾತ್ । ಚಮಸೋತ್ರ ಏತದರ್ಥ ಉತ್ಪಾದ್ಯ ಇತಿ ಭಾವಃ ॥

ಈ ಶವಾಗ್ನಿಯಲ್ಲಿ ಈ ರಾಜಗವಿಯ ಉಳಿದ ಮಾಂಸರೂಪದ ಹವಿಸ್ಸನ್ನು ಇಡಾಪಾತ್ರೆಯಿಂದಲೋ ಅಥವಾ 'ಪಾತ್ರಿ'ಯಿಂದಲೋ ಅಥವಾ ಚಮಸದಿಂದಲೋ ಒಂದೇಸಲ ಈ ಮೇಲಿನ ಮಂತ್ರದಿಂದ ಹೋಮಿಸಬೇಕು । ಇಲ್ಲಿ ಈ ಹವಿಸ್ಸನ್ನು ಹೋಮಿಸಲು ಚಮಸಪಾತ್ರೆಯನ್ನು ಮಾಡಿಕೊಳ್ಳಬೇಕೆಂದು ಅರ್ಥವು ॥

*** ಕಪರ್ದಿಭಾಷ್ಯಂ –**

ಇಡಾಸೂನುರಿಡಾಪಾತ್ರೀ ಸಾದಿತೈವ । ಕೇಚಿನ್ನಸಾದಯಂತಿ ಪೂರ್ವಂ । ಅಥವಾ ಪೂರ್ವವತ್ ಪಾತ್ರೀದ್ವಯಂ ಚ ದರ್ಶಯತಿ । ಪೂರ್ವಂ ಸಾದಿತಾ

ಪಿಷ್ಟಸಂಯಮನೀ । ಇಹೇತರಾ । ತಯಾ ಚಮಸೇನ ವಾ । ಇಹ ಚಮಸಂ ಪ್ರಣೇತಾ ಪ್ರಣಯನಂ ದಾರುಮಯಂ ಚೇತ್ । ಇತರಥಾ ಅನ್ಯೇನ ದಾರುಮಯೇನ ಜುಹೋತಿ । 'ನ ಹಿ ಮೃಣ್ಮಯಮಾಹುತಿಂ ಆನಶ ಇತಿ' ಪ್ರತಿಶೇಧಾದಿತ್ಯುಪದೇಶಃ ॥

ಇಡಾಸೂನುರೆಂದರೆ, ಮೃತನ ಮೇಲಿಟ್ಟಿರುವ ಇಡಾಪಾತ್ರೆಯು । ಕೆಲವರು ಈ ಹೋಮಕ್ಕಾಗಿ ಇಡಾಪಾತ್ರೆಯನ್ನು ಮೃತನ ಮೇಲೆ ಮೊದಲೇ (ಪಾತ್ರೆಗಳ ಆಸಾದನೆಯ ಕಾಲದಲ್ಲಿ) ಇಡುವುದಿಲ್ಲ । ಅಥವಾ ಹಿಂದಿನಂತೆ ಸೂತ್ರಕಾರರು 2 ಪಾತ್ರೆಗಳನ್ನೇ ತೋರಿಸುತ್ತಿದ್ದಾರೆ ಎಂದು ಅರ್ಥ ಮಾಡಬೇಕು । ಏಕೆಂದರೆ ಹಿಂದೆ ಮೃತನ ಮೇಲೆ ಇಟ್ಟಿರುವುದು ಪಿಷ್ಟಸಂಯಮನೀ ಪಾತ್ರೆಯು । ಇಲ್ಲಿ ಹೋಮಿಸುವುದು ಬೇರೆ ಪಾತ್ರೆಯಿಂದ । ಅಥವಾ ಚಮಸದಿಂದ ಹೋಮಿಸಬೇಕು । ಇಲ್ಲಿ ಮರದ ಚಮಸವೆಂದರೆ, ಪ್ರಣೇತಾ ಪ್ರಣಯನ ಪಾತ್ರೆಯು । ಅಥವಾ ಮರದ ಬೇರೆ ಪಾತ್ರೆಯಿಂದ ಹೋಮಿಸ ಬೇಕು । ಏಕೆಂದರೆ, **'ನ ಹಿ ಮೃಣ್ಮಯಂ.....,'** ಎಂಬ ಮಂತ್ರದಿಂದ ಮೃಣ್ಮಯಪಾತ್ರೆಯಿಂದ ಹೋಮಿಸುವುದು ನಿಷೇಧಿಸಲ್ಪಟ್ಟಿರುವುದರಿಂದ ॥

*** ಸೂತ್ರಂ – 8 (ಇಬ್ಬರಿಗೂ)**

ನವ ಚ ಸ್ರುವಾಹುತೀಃ ಯ ಏತಸ್ಯ ಪಥೋ ಗೋಪ್ತಾರಃ ಇತಿ ॥

9 ಸ್ರುವಾಹುತಿಗಳನ್ನು ಯ ಏತಸ್ಯ....., ಎಂಬ ಅನುವಾಕದ ಕ್ರಮದಂತೆ ಅದೇ ಅಗ್ನಿಯಲ್ಲಿ ಆಜ್ಯಹೋಮ ಮಾಡಬೇಕು ॥

*** ಗೋಪಾಲಭಾಷ್ಯಂ –**

ಸ್ರುವಶ್ಚಾನ್ಯ ಉತ್ಪಾದ್ಯಃ । ಪರ್ಣಮಯ ಇತಿ ಬೋಧಾಯನಃ । ತೇನ ಸ್ವಾಹಾಂತೈಃ ಯಜುರ್ಭಿರ್ಜುಹುಯಾತ್ ॥

ಇಲ್ಲಿ ಸ್ರುವದಿಂದ ಹೋಮಿಸಲು ಬೇರೆ ಸ್ರುವವನ್ನು ಬಳಸಬೇಕು(ಏಕೆಂದರೆ ಮೊದಲಿದ್ದ ಸ್ರುವವು ಮೃತನ ದೇಹದ ಮೇಲಿರುತ್ತದೆಯಾದ್ದರಿಂದ) । ಮುತ್ತುಗದ ಮರದಿಂದ ಸ್ರುವವನ್ನು ಮಾಡಬೇಕೆಂದು ಬೋಧಾಯನರು ಹೇಳಿದ್ದಾರೆ । ಆ ಸ್ರುವದಿಂದ ಸ್ವಾಹಾಂತ ಯಜುರ್ಮಂತ್ರಗಳಿಂದ ಹೋಮಿಸಬೇಕು ॥

* ಕಪರ್ದಿಭಾಷ್ಯಂ –

ನವಸ್ರುವಾಹುತೀಃ ಪ್ರಾಕೃತೇನೈವ ಸ್ರುವೇಣ । ಪ್ರತಿಮಂತ್ರಂ ಸ್ವಾಹಾಕಾರೇಣ ಏವ ॥

ಲೌಕಿಕ ಸ್ರುವದಿಂದ 9 ಆಹುತಿಗಳನ್ನು ಶವಾಗ್ನಿಯಲ್ಲಿ ಕೊಡಬೇಕು । ಪ್ರತಿಮಂತ್ರಾಹುತಿಯನ್ನು ಸ್ವಾಹಾಕಾರವಾಗಿ ಕೊಡಬೇಕು ॥

* ಸೂತ್ರಂ – 9 (ಇಬ್ಬರಿಗೂ)

ಅತ್ರೋಭಯಂ ಪ್ರಹರತಿ ಯೇನ ಜುಹೋತಿ ॥

ಆಮೇಲೆ ಮಾಂಸವನ್ನು ಹೋಮಿಸಿದ ಚಮಸಪಾತ್ರೆಯನ್ನೂ, ಸ್ರುವವನ್ನೂ ಶವಾಗ್ನಿಗೆ ಹಾಕಬೇಕು ॥

* ಗೋಪಾಲಭಾಷ್ಯಂ –

ಯೇನ ಹೋಮಃ ಕೃತಃ ಚಮಸೇನ ಸ್ರುವೇಣ ಚೇತಿ ತದುಭಯಮತ್ರಾಗ್ನೌ ಪ್ರಹರೇತ್ ॥

ಯಾವುದರಿಂದ ಹೋಮವನ್ನು ಮಾಡುತ್ತಾನೋ ಆ ಚಮಸಪಾತ್ರೆಯನ್ನು ಮತ್ತು ಸ್ರುವವನ್ನೂ ಚಿತಾಗ್ನಿಗೆ ಹಾಕಬೇಕು ॥

* ಕಪರ್ದಿಭಾಷ್ಯಂ –

ಅತ್ರೋಭಯಂ ಪ್ರಹರತಿ । ಯತ್ರ ಉಭಯಂ ಸಾದಿತಂ ತತ್ರ ನ ಪುನಸ್ಸಾದಯತೀತ್ಯರ್ಥಃ । ಕೇಚಿತ್ ಅತ್ರೈವಕಾಲೇ ಪ್ರಹರತಿ ನ ಪೂರ್ವಸ್ಮಿನ್ ಇತಿ । ಯೇನ ಯೇನ ಹವಿರಾಜ್ಯಂ ಚ ಹುತಂ ತದುಭಯಂ ಚಮಸಂ ಸ್ರುವಂ ಚ ॥

ಇಲ್ಲಿ ಆ ಚಮಸ ಮತ್ತು ಸ್ರುವಗಳನ್ನು ಅಗ್ನಿಯಲ್ಲಿ ಹಾಕಬೇಕು । ಯಾವ ಸಮಯದಲ್ಲಿ ಈ 2 ನ್ನು ಶವದಮೇಲೆ ಮೊದಲೇ ಆಸಾದನೆ ಮಾಡಿದ್ದರೆ ಅಥವಾ ಆಸಾದನೆ ಮಾಡಿದನ್ನು ಈ ಕಾಲದಲ್ಲಿ ಪುನಃ ತೆಗೆದುಕೊಂಡು ಅದರಿಂದಲೇ ಹೋಮ ಮಾಡಿದ್ದರೆ, ಆಗ ಅದನ್ನು ಪುನಃ ವಿಧಿಯಂತೆ ಆಸಾದನೆಯನ್ನು ಮಾಡದೇ ಕೇವಲ ಆ ಅಗ್ನಿಯಲ್ಲಿ ಹಾಕಬೇಕು । ಕೆಲವರು ಆಸಾದನೆಯ ಕಾಲದಲ್ಲಿ ಇವೆರಡನ್ನು ಆಸಾದನೆ ಮಾಡದೇ ಉಳಿಸಿಕೊಂಡು, ಈಗ ಅದರಿಂದ ಹೋಮಿಸಿ ಅಗ್ನಿಗೆ ಹಾಕಬೇಕೆಂದು ಹೇಳುತ್ತಾರೆ । ಯಾವುದರಿಂದ ಹವಿಸ್ಸನ್ನು ಮತ್ತು ಆಜ್ಯವನ್ನೂ ಹೋಮಿಸುತ್ತಾರೋ ಅದು ಕ್ರಮವಾಗಿ ಚಮಸ ಮತ್ತು ಸ್ರುವ ಎಂದು ಎನಿಸಿಕೊಳ್ಳುತ್ತದೆ ॥

*** ಸೂತ್ರಂ – 10 (ಇಬ್ಬರಿಗೂ)**

ಅಪರೇಣಾಗ್ನಿಂ ಪ್ರಾಙ್ಮುಖ ಉಪವಿಶ್ಯಾಥೈನಂ ಯಾಮ್ಯೇನ ಸೂಕ್ತೇನ ನವರ್ಚೇನ ಪರಾಚಾನುಶಂಸತಿ ಪ್ರಕೇತುನಾ ಇತಿ ॥

ಶವಾಗ್ನಿಯ ಪಶ್ಚಿಮದಲ್ಲಿ ಪೂರ್ವಾಭಿಮುಖವಾಗಿ ಕುಳಿತು, ಯಾಮ್ಯಸೂಕ್ತಗಳಿಂದ, 9 ಮಂತ್ರಗಳಿಂದ ಆವೃತಿಮಾಡದೇ, ಅನುಶಂಸನವಾಗಿ(ಹೇಳುತ್ತಾ) ಮಾಡಬೇಕು, ಪ್ರಕೇತುನಾ....., ಎಂಬ 9 ಮಂತ್ರಗಳ ಅನುವಾಕದಿಂದ ॥

*** ಗೋಪಾಲಭಾಷ್ಯಂ –**

ಪರಾಚೇತಿ ವಚನಾತ್ ಪ್ರಥಮೋತ್ತಮಯೋಃ ನಾಭ್ಯಾಸಃ । ಅನುಶಂಸನ ವಚನಾತ್ ಅರ್ಧರ್ಚಸಂಧಾನಂ ಏಕಶ್ರುತ್ಯಮಿತ್ಯಾದಿ ಧರ್ಮಸಿದ್ಧಿಃ ॥

'ಪರಾಚಾ', ಎಂಬ ಸೂತ್ರವಚನವಿರುವುದರಿಂದ ಮೊದಲನೇ ಮತ್ತು ಕೊನೆಯ ಮಂತ್ರಗಳ ಆವೃತ್ತಿಯು ಇಲ್ಲ । **'ಅನುಶಂಸನ'** ಎಂಬ ಮಾತಿರುವುದರಿಂದ ಪ್ರತಿಮಂತ್ರದ ಅರ್ಧಋಕ್ಕಿಗೆ ನಿಲ್ಲಿಸಿಕೊಂಡು, ಪ್ರತಿಋಕ್ಕಿನ ಕೊನೆಯಲ್ಲಿ ಓಂಕಾರವನ್ನು ಸೇರಿಸಿಕೊಂಡು, ಏಕಶ್ರುತಿಯಲ್ಲಿ ಹೇಳಬೇಕೆಂಬುದು ಸಿದ್ಧವಾಗುತ್ತದೆ ॥

*** ಕಪರ್ದಿಭಾಷ್ಯಂ –**

ಜಘನೇನ ದಹನದೇಶಂ ಪ್ರಾಙ್ಮುಖ ಉಪವಿಶ್ಯ ಏನಂ ದಹ್ಯಮಾನಂ ಯಾಮ್ಯೇನ ಯಮದೈವತ್ಯೇನ । ಯಮದೈವತ್ಯಮಿತಿ ಜ್ಞಾಪನಾರ್ಥಂ । ಪರಾಚಾನುಶಂಸತಿ । ನಾಭ್ಯಾಸೇನ । ಸಾಮಿಧೇನೀವತ್ ಸರ್ವಸೂಕ್ತೇಷ್ವಿತಿ ಪ್ರಾಪ್ತಸ್ಯ ಪ್ರತಿಶೇಧಃ । ಸಂತತಮೇವ ಪ್ರಣವೇನ । ಅರ್ಧರ್ಚೇ ಅರ್ಧರ್ಚೇವಸಾಯ । ಕೇಚಿತ್ ಇಹಾನುಪದಿಷ್ಟಸ್ಯವಿಧೇಃ ಅನ್ಯತ್ರ ವಿದ್ಯಮಾನಸ್ಯ ಉಪಸಂಗ್ರಹೋನ್ಯಾಯ್ಯ ಇತಿ ತೂಷ್ಣೀಂ ನಿರಸನೋಪವೇಶನೇ ಕರ್ತವ್ಯೇ ಅವಿರುದ್ಧೇ ಚೇತಿ ॥

ದಹನದೇಶದ ಹಿಂದೆ(ಪಶ್ಚಿಮ), ಪೂರ್ವಾಭಿಮುಖವಾಗಿ ಕುಳಿತುಕೊಂಡು, ಈ ದಹನವಾಗುತ್ತಿರುವ ಮೃತನನ್ನು ಕುರಿತು, ಯಮದೇವತೆಗೆ ಸಂಬಂಧಿಸಿದ ಋಕ್‌ಗಳಿಂದ(ಈ ಮಂತ್ರಗಳಿಗೆ ಯಮನು ದೇವತೆ ಎಂಬುದನ್ನು ಸೂತ್ರವು ತೋರಿಸುತ್ತಿದೆ) । ಆವೃತ್ತಿಯಿಲ್ಲದೇ ಎಡಕಾಲನ್ನು ಬಲತೊಡೆಯ ಮೇಲೆ ಇಟ್ಟುಕೊಂಡು ಏಕಶ್ರುತಿಯಲ್ಲಿ ಹೇಳಬೇಕು । ಇಲ್ಲಿ ಆವೃತ್ತಿಯಿಲ್ಲ, ಎಂಬುದರಿಂದ ಎಲ್ಲ ಸೂಕ್ತಗಳನ್ನೂ ಸಾಮಿಧೇನಿಯಂತೆ ಹೇಳಬೇಕೆಂಬ ಸಾಮಾನ್ಯ ನಿಯಮವನ್ನು ಪ್ರತಿಶೇಧ(ನಿಷೇಧ) ಮಾಡುತ್ತಿದೆ । ಈ ಋಕ್ ಗಳನ್ನು ಸಂತತವಾಗಿ, ಪ್ರಣವಪೂರ್ವಕವಾಗಿ ಹೇಳಬೇಕು । ಹಾಗೂ ಅರ್ಧಋಕ್ಕಿಗೆ ನಿಲ್ಲಿಸಿ, ನಿಲ್ಲಿಸಿ ಹೇಳಬೇಕು । ಕೆಲವರು ಇಲ್ಲಿ ಉಪದೇಶ ಮಾಡದೇ ಇರುವಂತಹ ವಿಧಿಗಳನ್ನು ಬೇರೇ ಕಡೆಗಳಲ್ಲಿ ಇರುವಂತಹ, ಇದಕ್ಕೆ ಸಮನಾದ ವಿಧಿಯನ್ನು ಇಲ್ಲಿಗೆ ತಂದು ಸೇರಿಸಿಕೊಳ್ಳಬೇಕೆಂಬ ನ್ಯಾಯದಂತೆ, ಅಮಂತ್ರಕವಾಗಿ ನಿರಸನ ಮತ್ತು ಉಪವೇಶನಗಳನ್ನು ಅವಿರುದ್ಧವಾಗಿರುವುದರಿಂದ ಮಾಡಬೇಕು । ಹಾಗೂ ಈ ವಿಧಿಗೆ ವಿರೋಧವಲ್ಲದ, ಇಲ್ಲಿ ಉಪದೇಶ ಮಾಡದ, ಬೇರೇಕಡೆಯಲ್ಲಿ ಉಪದೇಶಿಸಿದ ವಿಧಿಗಳನ್ನು ಇಲ್ಲಿ ಸೇರಿಸಿಕೊಳ್ಳಬೇಕೆಂದು ಹೇಳುತ್ತಾರೆ ॥

*** ಸೂತ್ರಂ – 11=114 (ಇಬ್ಬರಿಗೂ)**

ಜಘನೇನ ದಹನದೇಶಂ ಉದೀಚೀಸ್ತಿಸ್ರಃ ಕರ್ಷೂಃ ಖಾತ್ವಾಶ್ಮಭಿಃ ಸಿಕತಾಭಿಶ್ಚೋಪ ಪ್ರಕೀರ್ಯ ಅಯುಗ್ಭಿರುದಕುಂಭೈಃ ಅಪಃಪರಿಪ್ಲಾವ್ಯ ತಾಸು ಜ್ಞಾತಯಃ ಸಂಗಾಹಂತೇ ಅಶ್ಮನ್ವತೀ ರೇವತೀಃ ಇತಿ ॥

ದಹನದೇಶದ ಪಶ್ಚಿಮಭಾಗದ ನೆಲದಮೇಲೆ, ಉತ್ತರಕ್ಕೆ ಅಗಲವಾಗಿರುವಂತೆ 3 ಉದ್ದ ಹಾಗೂ ಅಗಲವಾದ ಗುಂಡಿಗಳನ್ನು (ಕರ್ಷೂ) ಅಗೆದು, ಅದರಲ್ಲಿ ಕಲ್ಲು–ಮರಳುಗಳನ್ನು ಹಾಕಿ, ಬೆಸಸಂಖ್ಯೆಯ ನೀರಿನ ಬಿಂದಿಗೆಗಳಿಂದ ಬೆಸಸಂಖ್ಯೆಯಷ್ಟು ನೀರನ್ನು ತುಂಬಿಸಿ, ಅವುಗಳಲ್ಲಿ ಜ್ಞಾತಿಗಳು ಸ್ನಾನಮಾಡಬೇಕು, ಅಶ್ಮನ್ವತೀರೇವತೀ....., ಎಂಬ ಮಂತ್ರಗಳಿಂದ ॥

*** ಗೋಪಾಲಭಾಷ್ಯಂ –**

ಉದೀಚೀಃ ಉದಗಾಯತಾಃ । ಕರ್ಷೂಶಬ್ದೋ ದೀರ್ಘಿಕಾ ವಾಚೀ । ತಾಸಾಂ ಪೂರ್ವಾ ಅಗ್ರೇಖನ್ಯತೇ, ತತೋ ಮಧ್ಯಮಾ, ತತಃ ಪಶ್ಚಿಮೇತಿ ಕ್ರಮಃ । ಸರ್ವಾಸ್ತಾಃ ದಕ್ಷಿಣಾಪವರ್ಗಾಃ ಖನ್ಯಂತೇ ಪಿತ್ರ್ಯತ್ವಾತ್ । ದಕ್ಷಿಣಾಪ್ರಾಚೀರಿತ್ಯೇವ ಬೋಧಾಯನಃ । ಪರಿಪ್ಲಾವನಂ ಉದಕನಿನಯನೇನ ಸೋದಕೀಕರಣಂ । ತಾಸು ಜ್ಞಾತಯಃ ಕನಿಷ್ಠಪ್ರಥಮಾ ಇತ್ಯಾದಿ ನಿಯಮೇನ ಅಶ್ಮನ್ವತೀ ರೇವತೀರಿತ್ಯನಯಾ ಋಚಾ ಪ್ರತ್ಯಂಚಸ್ಸಂಗಾಹೇರನ್ ॥

ಉದೀಚೀ ಎಂದರೆ, ಉತ್ತರಕ್ಕೆ ಅಗಲವಾದ ಎಂದರ್ಥ । ಇಲ್ಲಿ ಕರ್ಷೂ ಶಬ್ದವು ಗುಂಡಿಯ ಉದ್ದ–ಅಗಲಗಳನ್ನು ಹೇಳುತ್ತದೆ । ಚಿತೆಯ ಪಶ್ಚಿಮದಲ್ಲಿ(ಹಿಂದೆ) ಪೂರ್ವಭಾಗಕ್ಕೆ ಮೊದಲ ಗುಂಡಿಯನ್ನು ಅಗೆಯಬೇಕು । ನಂತರ ಮಧ್ಯದಗುಂಡಿಯನ್ನು ನಂತರ ಪಶ್ಚಿಮಭಾಗದ ಗುಂಡಿಯನ್ನು ಅಗೆಯಬೇಕು । ಈ ಎಲ್ಲಾ ಗುಂಡಿಗಳನ್ನು ದಕ್ಷಿಣಕ್ಕೆ ಮುಗಿಯುವಂತೆ ಅಗೆಯಬೇಕು । ಏಕೆಂದರೆ ಇದು ಪಿತೃಕಾರ್ಯ ವಾಗಿರುವುದರಿಂದ । ಬೋಧಾಯನರೂ ಕೂಡ ದಕ್ಷಿಣಾಪ್ರಾಚಿಯಾಗಿಯೇ ಅಗೆಯಬೇಕೆಂದು ಹೇಳಿದ್ದಾರೆ । ಪರಿಪ್ಲಾವನ ಎಂದರೆ, ಆ ಗುಂಡಿಗಳಿಗೆ ನೀರನ್ನು ಹಾಕಿ, ಗುಂಡಿಗಳಲ್ಲಿ ನೀರಿರುವಂತೆ ಮಾಡುವುದು । ಆ ಗುಂಡಿಗಳಲ್ಲಿ ಸಣ್ಣವಯಸ್ಸಿನವ ರಿಂದ ಕ್ರಮವಾಗಿ ಜ್ಞಾತಿಗಳು ಅಶ್ಮನ್ವತೀ ರೇವತೀ....., ಎಂಬ ಮಂತ್ರದಿಂದ, ಪಶ್ಚಿಮಕ್ಕೆ ಕೊನೆಯಾಗುವಂತೆ, ಪಶ್ಚಿಮಾಭಿಮುಖವಾಗಿ 3 ಮುಳುಗುಸ್ನಾನ ಮಾಡಬೇಕು । ಕೊನೆಯಲ್ಲಿ ಕರ್ತೃಗಳು ಮುಳುಗುಸ್ನಾನ ಮಾಡಬೇಕು ॥

* ಕಪರ್ದಿಭಾಷ್ಯಂ –

ಜಘನೇನ ದಹನದೇಶಂ ಉದೀಚೀಃ ಉದಗಾಯತಾಃ ಕರ್ಷೂಃ ದೀರ್ಘಾವಟಾನ್ ಖಾತ್ವಾ ಅಶ್ಮಭಿಃ ಪಾಷಾಣೈಃ ಸಿಕತಾಭಿಶ್ಚ ಉಪಪ್ರಕೀರ್ಯ ಅಯುಗ್ಭಿಃ ಉದಕುಂಭೈಃ ತ್ರಿಭಿಃ ಪಂಚಭಿಃ ವಾ ಇತ್ಯಾದಿಭಿಃ ಅಪಃ ಪರಿಪ್ಲಾವ್ಯ ಕ್ಷಿಪ್ತ್ವಾ ತಾಸು ಜ್ಞಾತಯಃ ಸಂಗಾಹಂತೇ ಪ್ರವಿಶಂತಿ ಅಶ್ಮನ್ವತೀರೇವತೀರಿತಿ ॥

ದಹನದೇಶದ ಹಿಂದೆ(ಪಶ್ಚಿಮ) ಉತ್ತರಕ್ಕೆ ಅಗಲವಾಗುವಂತೆ ಉದ್ದವಾದ ಗುಂಡಿಗಳನ್ನು ತೆಗೆದು, ಸಣ್ಣ–ದೊಡ್ಡ ಕಲ್ಲುಗಳಿಂದ ಮತ್ತು ಮರಳಿನಿಂದ ಆ ಗುಂಡಿಗಳನ್ನು ಅರ್ಧಕ್ಕಿಂತ ಸ್ವಲ್ಪ ಹೆಚ್ಚು ತುಂಬಿಸಿ, ಬೆಸಸಂಖ್ಯೆಯ ಬಿಂದಿಗೆಗಳಿಂದ, ಅಂದರೆ 3–5–7, ಈ ಸಂಖ್ಯೆಗಳಲ್ಲಿ ಬಿಂದಿಗೆಗಳಿಂದ ಗುಂಡಿಗಳಿಗೆ ನೀರನ್ನು ತುಂಬಿಸಿ, ಜ್ಞಾತಿಗಳು ಅಶ್ಮನ್ವತೀ ರೇವತೀ....., ಎಂಬ ಮಂತ್ರದಿಂದ, ಮುಳುಗುಸ್ನಾನವನ್ನು ಮಾಡಬೇಕು ॥

8ನೇ ಖಂಡ

(ಬಂಧುಗಳ ನಡವಳಿಕೆಯ ವಿಚಾರ – ಕರ್ತೃವಿನ ದಿಕ್ಪಾನಿಯಮ ವಿಚಾರ)

*** ಸೂತ್ರಂ – 1 (ಇಬ್ಬರಿಗೂ)**

ಜಘನೇನ ಕರ್ಷೂಃ ಪಲಾಶಶಾಖೇ ಶಮೀಶಾಖೇ ವಾ ನಿಘ್ನಂತಿ ॥

ಕರ್ಷೂಗಳ(ಗುಂಡಿ) ಹಿಂದೆ, ಪಲಾಶ(ಮುತ್ತುಗ)ದ ಕೋಲು ಅಥವಾ ಶಮೀ(ಬನ್ನಿ) ಮರದ 2 ಕೋಲುಗಳನ್ನು ಗೂಟವಾಗಿ ನೆಲದಲ್ಲಿ ನೆಡಬೆಕು ॥

*** ಗೋಪಾಲಭಾಷ್ಯಂ –**

ದಕ್ಷಿಣೋತ್ತರೇ ಸ್ಥಾಪಯಂತಿ ತೋರಣವತ್ । ತಯೋರುತ್ತರಾ ಪ್ರಥಮಂ ಸ್ಥಾಪ್ಯತೇ ॥

ಆ 3 ಗುಂಡಿಗಳ ಹಿಂದೆ, ದಕ್ಷಿಣ ಮತ್ತು ಉತ್ತರ ದಿಕ್ಕಿಗೆ ಮುತ್ತುಗದ ಅಥವಾ ಬನ್ನಿಮರದ ಕೋಲುಗಳನ್ನು ನೆಡಬೇಕು । ಅವುಗಳಲ್ಲಿ ಮೊದಲು ಉತ್ತರದ್ದನ್ನು ನೆಡಬೇಕು ॥

*** ಕಪರ್ದಿಭಾಷ್ಯಂ –**

ಜಘನೇನ ಕರ್ಷೂಃ ಪಶ್ಚಾತ್ ಪಲಾಶಶಾಖೇ ಶಮೀಶಾಖೇ ವಾ ನಿಘ್ನಂತಿ ॥

ಆ 3 ಗುಂಡಿಗಳ ಹಿಂದೆ ಮುತ್ತುಗ ಅಥವ ಬನ್ನಿ ಮರದ ಕೋಲುಗಳನ್ನು ನೆಡಬೇಕು ॥

*** ಸೂತ್ರಂ – 2 (ಇಬ್ಬರಿಗೂ)**

ಅಥೈನೇ ದರ್ಭಮಯೇನ ಶುಲ್ಬೇನ ಸಂಬಧ್ಯ ತೇ ಅಂತರೇಣ ಪ್ರಸರ್ಪಂತಿ ಯದ್ವೈದೇವಸ್ಯ ಸವಿತುಃ ಪವಿತ್ರಂ ಇತಿ ॥

ದರ್ಭೆಗಳಿಂದ ಹಗ್ಗವನ್ನು ಮಾಡಿಕೊಂಡು, ಆ ಎರಡೂ ಗೂಟಗಳಿಗೆ ಕಟ್ಟಿ, ಅವುಗಳ ನಡುವೆ ಸರಿದು(ದಾಟಿ/ನುಸುಳಿ), ಹೊರಬರಬೇಕು ಎಲ್ಲರೂ, ಯದ್ವೈದೇವಸ್ಯಸವಿತುಃ....., ಎಂಬ ಮಂತ್ರವನ್ನು ಹೇಳುತ್ತಾ ॥

*** ಗೋಪಾಲಭಾಷ್ಯಂ –**

ಅತ್ರಾಪಿ ಕನಿಷ್ಠಪ್ರಥಮಾ ಇತ್ಯಾದಿ ನಿಯಮಃ ಪ್ರತ್ಯೇತವ್ಯಃ ॥

ಇಲ್ಲೂಕೂಡ ಸಣ್ಣವಯಸ್ಸಿನವರಿಂದ ಆರಂಭಿಸುವುದು ನಿಯಮ ಎಂದು ತಿಳಿಯಬೇಕು ॥

*** ಕಪರ್ದಿಭಾಷ್ಯಂ –**

(ಖಾತ್ವಾ) ದರ್ಭಮಯೇನ ಶುಲ್ಬೇನ ತಯೋರಗ್ರೇಬದ್ಧ್ವಾ ತೋರಣವತ್ ಕೃತ್ವಾ ತೇ ಅಂತರೇಣ ಪ್ರಸರ್ಪಂತಿ ತಯೋರ್ಮಧ್ಯೇ ಗಚ್ಛಂತಿ ಯದ್ವೈ ದೇವಸ್ಯ ಸವಿತುರಿತಿ ॥

ಆ 2 ಕೋಲುಗಳ ಮೇಲು ತುದಿಯನ್ನು ದರ್ಭೆಯ ಹಗ್ಗದಿಂದ ತೋರಣದಂತೆ ಕಟ್ಟಿ, ಆ ತೋರಣದ ಒಳಗೆ ಯದ್ವೈ ದೇವಸ್ಯ....., ಎಂಬ ಮಂತ್ರದಿಂದ ಎಲ್ಲರೂ ನುಸುಳಿ ಹೋಗಬೇಕು ॥

*** ಸೂತ್ರಂ – 3 (ಇಬ್ಬರಿಗೂ)**

ಜಘನ್ಯಃ ಶಾಖೇ ವ್ಯುದಸ್ಯತಿ ಯಾ ರಾಷ್ಟ್ರತ್ವನ್ನಾತ್ ಇತಿ ॥

ಕಡೆಯ ವ್ಯಕ್ತಿಯು(ಪ್ರಧಾನಕರ್ತೃ) ನುಸುಳುವಾಗ ಆ 2 ಗೂಟಗಳನ್ನೂ ಕಿತ್ತು ಬಿಸಾಕಬೇಕು, ಯಾ ರಾಷ್ಟ್ರಾತ್....., ಎಂಬ ಮಂತ್ರವನ್ನು ಹೇಳುತ್ತಾ ॥

*** ಗೋಪಾಲಭಾಷ್ಯಂ –**

ಜಘನ್ಯಃ ಸರ್ವಪಶ್ಚಾತ್ ಗಂತಾ ವೃದ್ಧತಮಃ ಅನಯಾ ಋಚಾ ಶಾಖೇ ಉತ್ಪಿದ್ಯಾಪಾಸ್ಯತಿ ॥

ನಂತರ ಎಲ್ಲರಿಗಿಂತ ಕೊನೆಯದಾಗಿ ನುಸುಳಿ ಹೋಗುವ ಎಲ್ಲರಿಗಿಂತ ದೊಡ್ಡವನಾದವನು(ಕರ್ತೃ), ಸೂತ್ರದಲ್ಲಿ ಹೇಳಿದ ಯಾ ರಾಷ್ಟ್ರಾತ್....., ಎಂಬ ಮಂತ್ರದಿಂದ 2 ಕೋಲುಗಳನ್ನೂ ಕಿತ್ತು, ಎಸೆಯಬೇಕು ॥

*** ಕಪರ್ದಿಭಾಷ್ಯಂ –**

ಜಘನ್ಯಃ ಪಶ್ಚಾತ್ತನಃ ಸರ್ವೇಷಾಮಧ್ವರ್ಯುಃ ಶಾಖೇ ವ್ಯುದಸ್ಯತಿ ಉತ್ಪಿದ್ಯ ವಿಕ್ಷಿಪತಿ ಯಾ ರಾಷ್ಟ್ರಾತ್ ಇತಿ ॥

ನಂತರ ಕೊನೆಯದಾಗಿ ನುಸುಳಿಹೋಗುವವನು ಕರ್ತೃವಾಗಿರುತ್ತಾನಾದ್ದರಿಂದ ಅಥವಾ ಅಧ್ವರ್ಯುವಾಗಿರುತ್ತಾನಾದ್ದರಿಂದ, ಮೇಲೆ ಹೇಳಿದ ಯಾ ರಾಷ್ಟ್ರಾತ್....., ಎಂಬ ಮಂತ್ರದಿಂದ 2 ಕೋಲುಗಳನ್ನೂ ಕಿತ್ತು, ಎಸೆಯಬೇಕು ॥

*** ಸೂತ್ರಂ – 4 (ಇಬ್ಬರಿಗೂ)**

ಉದ್ವಯಂ ತಮಸಸ್ಪರಿ ಇತ್ಯಾದಿತ್ಯಮುಪಸ್ಥಾಯ ಅನವೇಕ್ಷಮಾಣಾ ಅಪೋऽವಗಾಹಂತೇ ಧಾತಾಪುನಾತು ಸವಿತಾಪುನಾತು ಇತಿ ॥

ನುಸುಳಿಕೊಂಡು ಹೊರಬಂದವರು, ಉದ್ವಯಂತಮಸಸ್ಪರಿ....., ಎಂಬ ಮಂತ್ರದಿಂದ ಸೂರ್ಯನ ಉಪಸ್ಥಾನ ಮಾಡಿ ಪರಸ್ಪರ ನೋಡದೇ ಮತ್ತೆ ನೀರಿನಲ್ಲಿ ಅವಗಾಹನ(ಮುಳುಗು) ಸ್ನಾನವನ್ನು ಧಾತಾಪುನಾತು ಸವಿತಾಪುನಾತು....., ಎಂಬ ಮಂತ್ರದಿಂದ ಮಾಡಬೇಕು ॥

*** ಗೋಪಾಲಭಾಷ್ಯಂ –**

ಆದಿತ್ಯೋಪಸ್ಥಾನಾದಿ ಸರ್ವೇಕುರ್ವಂತಿ । ನ ಕೇವಲಂ ಜಘನ್ಯಃ । ಅನವೇಕ್ಷಮಾಣಾ ಪೃಷ್ಠತಃ ಅನಿರೀಕ್ಷಮಾಣಾಃ । ಅಪೋವಗಾಹಂತ ಇತಿ ಸ ಶಿರೋವಮಜ್ಜನಾತ್ಮಕಂ ಸ್ನಾನಮುಚ್ಯತೇ । ನ ಜಲಪ್ರವೇಶಮಾತ್ರಂ । ಸಮಾನಮಾಸ್ನಾನಾತ್ ಇತ್ಯುತ್ತರತ್ರಾನುವಾದಾತ್ । ಧಾತಾಪುನಾತು ಸವಿತಾಪುನಾತು ಇತ್ಯನುವಾಕಶೇಷಃ ॥

ಸೂರ್ಯನ ಉಪಸ್ಥಾನವನ್ನು ಅಲ್ಲಿ ಸೇರಿರುವ ಎಲ್ಲರೂ ಮಾಡಬೇಕು । ಕೇವಲ ಜ್ಞಾತಿಗಳಲ್ಲ । ಈ ಉಪಸ್ಥಾನವನ್ನು, ಚಿತೆಯನ್ನು ನೋಡದೇ ಮಾಡಬೇಕು । ಹಾಗೆಯೇ ಚಿತೆಯನ್ನು ನೋಡದೆಯೇ ನದಿಯಲ್ಲಿ ಸ್ನಾನವನ್ನೂ ಮಾಡಬೇಕು । ಇಲ್ಲಿ ಸ್ನಾನವೆಂದರೆ, ಮುಳುಗುಸ್ನಾನವೇ । ಕೇವಲ ಜಲಪ್ರವೇಶವಲ್ಲ । ಏಕೆಂದರೆ, **ಸಮಾನಮಾಸ್ನಾನಾತ್** ಎಂದು ಅನುವಾದ ಮಾಡಿರುವುದರಿಂದ । ಧಾತಾ ಪುನಾತು....., ಎಂಬ ಅನುವಾಕದ ಕೊನೆಯ ಮಂತ್ರದಿಂದ ಸ್ನಾನ ಮಾಡಬೇಕು ॥

*** ಕಪರ್ದಿಭಾಷ್ಯಂ –**

ಆದಿತ್ಯೋಪಸ್ಥಾನ ಪ್ರಭೃತಿ ಸರ್ವೇಕುರ್ಯುಃ । ದಹನದೇಶಂ ಅನವೇಕ್ಷಮಾಣಾ ಅಪೋವಗಾಹಂತೇ ಪ್ರವಿಶಂತಿ ಸ್ನಾನಾರ್ಥಂ ಧಾತಪುನಾತು ಸವಿತಾಪುನಾತು ಇತಿ ॥

ಸೂರ್ಯನ ಉಪಸ್ಥಾನದವರೆಗಿನ ಸಾಮಾನ್ಯ ವಿಧಿಗಳನ್ನು ಎಲ್ಲರೂ ಮಾಡ ಬೇಕು । ದಹನದೇಶವನ್ನು ನೋಡದೇ ನೀರಿನಲ್ಲಿ ಮುಳುಗುಸ್ನಾನ ಮಾಡಬೇಕು । ಸ್ನಾನ ಮಾಡುವಾಗ ಹೇಳುವ ಮಂತ್ರವು ಧಾತಾ ಪುನಾತು....., ಎಂಬುದು ॥

*** ಸೂತ್ರಂ – 5 (ಇಬ್ಬರಿಗೂ)**

ಕೇಶಾನ್ವಕೀರ್ಯ ಪಾಂಸೂನೋಪ್ಯೈಕ ವಾಸಸೋ ದಕ್ಷಿಣಾಮುಖಾಃ ಸಕೃದುಪಮಜ್ಯ ಉತ್ತೀರ್ಯೋಪವಿಶಂತಿ ॥

ಕೂದಲುಗಳನ್ನು ಬಿಚ್ಚಿಕೊಂಡು, ಧೂಳನ್ನು ದೇಹಕ್ಕೆ ತಿಕ್ಕಿಕೊಂಡು, ದೇಹದಲ್ಲಿ ಒಂದುಬಟ್ಟೆಯನ್ನು ಮಾತ್ರ ಧರಿಸಿಕೊಂಡು, ದಕ್ಷಿಣಾಭಿಮುಖವಾಗಿ ಒಂದುಸಲ ನೀರಿನಲ್ಲಿ ಮುಳುಗುಹಾಕಿ, ನಂತರ ಮೇಲಕ್ಕೆಬಂದು, ಪಕ್ಕಪಕ್ಕ ಕುಳಿತುಕೊಳ್ಳಬೇಕು ॥

*** ಕಪರ್ದಿಭಾಷ್ಯಂ –**

ಏತದಾದಿ ನವಾಪಿ ಸೂತ್ರಾಣಿ ಪ್ರಾಚೀನೇಷು ಕೇಷುಚಿತ್ ಕೋಶೇಷು ನೋಪಲಭ್ಯಂತೇ । ಕಪರ್ದಿಭಾಷ್ಯಾನುರೋಧೇನ ಏತೇಷಾಮತ್ರ ನಿವೇಷೋಯುಕ್ತ ಏವ ॥

ಕೇಶಾನ್ಪ್ರಕೀರ್ಯ ಪಾಂಸೂನೋಪ್ಯ ಏಕವಾಸಸಃ ದಕ್ಷಿಣಾಮುಖಾಃ ಸಕೃದುಪಮಜ್ಜ್ಯ ಉತ್ತೀರ್ಯ ಉಪವಿಶಂತಿ । ಏತಾನಿ ಕರ್ಮಾಣಿ ದಕ್ಷಿಣಾಮುಖಾ ಏವ । ಉಪ್ತಕೇಶಾಃ ಸಕೃದುಪಮಜ್ಜ್ಯ । ಉತ್ತೀರ್ಯ ನಿಷ್ಕ್ರಮ್ಯೋಪವಿಶಂತಿ ॥

ಇಲ್ಲಿಂದ ಮುಂದಿನ 9 ಸೂತ್ರಗಳು, ಕೆಲವು ಪ್ರಾಚೀನಗ್ರಂಥಗಳಲ್ಲಿ ಲಭ್ಯವಿಲ್ಲ । ಕಪರ್ದಿಭಾಷ್ಯದ ಅನುಸಾರವಾಗಿ ಇಲ್ಲಿ ಇವುಗಳನ್ನು ಸೇರಿಸಿರುವುದು ಸರಿಯಾಗಿಯೇ ಇದೆ ॥

ಕೂದಲುಗಳನ್ನು ಬಿಚ್ಚಿಕೊಂಡು, ಮಾಡಿಕೊಂಡು, ಧೂಳನ್ನು ದೇಹಕ್ಕೆ ತಿಕ್ಕಿಕೊಂಡು, ಒಂದೇಬಟ್ಟೆಯನ್ನುಟ್ಟು, ದಕ್ಷಿಣಾಭಿಮುಖರಾಗಿ । ಕುಳಿತು, ಒಮ್ಮೆ ಮುಳುಗುಸ್ನಾನ ಮಾಡಿ, ಮತ್ತೆ ಮೇಲಕ್ಕೆದ್ದು, ಕುಳಿತುಕೊಳ್ಳುತ್ತಾರೆ, ಈ ಮೇಲೆ ಹೇಳಿದ ಎಲ್ಲ ವಿಧಿಗಳನ್ನೂ ದಕ್ಷಿಣಾಭಿಮುಖವಾಗಿಯೇ ಮಾಡಬೇಕು । ನಂತರ ಕೂದಲುಗಳನ್ನು ತೆಗೆಯಿಸಿಕೊಂಡು, ಒಮ್ಮೆ ನೀರಲ್ಲಿ ಮುಳುಗಿ, ಮೇಲಕ್ಕೆದ್ದು ಬಂದು ಕುಳಿತು ಕೊಳ್ಳುತ್ತಾರೆ ॥

*** ಸೂತ್ರಂ – 6 (ಇಬ್ಬರಿಗೂ)**

ಏವಂ ತ್ರಿಃ ॥

ಹೀಗೆ 3 ಸಲ ಸ್ನಾನವನ್ನು ಮಾಡಬೇಕು ॥

*** ಕಪರ್ದಿಭಾಷ್ಯಂ –**

ಏವಂ ತ್ರಿರಿತಿ ಕೇಶಾನ್ ಪ್ರಕೀರ್ಯೇತ್ಯಾದಿ ಉಪವೇಶನಾಂತಂ । ಕೇಚಿತ್ ಏವಂ ತ್ರಿಃ ಇತಿ ಸಮಂತ್ರಕಮಿತಿ ॥

ಈ ರೀತಿಯಾಗಿ, ಕೇಶವಪನದಿಂದ ಕುಳಿತುಕೊಳ್ಳುವವರೆಗೆ, 3 ಸಲ ಮಾಡ ಬೇಕು । ಕೆಲವರು ಸಮಂತ್ರಕವಾಗಿಯೇ 3 ಸಲ ಮಾಡಬೇಕೆಂದು ಹೇಳುತ್ತಾರೆ ॥

*** ಸೂತ್ರಂ – 7 (ಇಬ್ಬರಿಗೂ)**

ತತ್ಪ್ರತ್ಯಯಂ ಉದಕಂ ಉತ್ಸಿಚ್ಯ ಅಪ್ರತೀಕ್ಷಾ ಗ್ರಾಮಮೇತ್ಯ ಯತ್ ಸ್ತ್ರಿಯಃ ಆಹುಃ ತತ್ ಕುರ್ವಂತಿ ॥ ಏವಂ ಅಹರಹರಂಜಲಿನಾ ಏಕೋತ್ತರವೃದ್ಧಿಃ ಏಕಾದಶಾಹಾತ್ ॥

ಆ ಮೃತನ(ಪ್ರೇತನ), ಹೆಸರನ್ನು ಮತ್ತು ಗೋತ್ರವನ್ನು ಹೇಳುತ್ತಾ, ಒಂದುಸಲ ನೀರಿನಿಂದ ತರ್ಪಣಕೊಟ್ಟು । ಆ ದಹನಸ್ಥಳದ ದಿಕ್ಕನ್ನು ನೋಡದೇ, ಊರಿಗೆಬಂದು, ಜ್ಞಾನಯುಕ್ತ, ತಜ್ಞ ಕುಲವೃದ್ಧ ಸ್ತ್ರೀಯರು ಮುಂದಿನ ವಿಚಾರಗಳಲ್ಲಿ ಏನುಹೇಳುತ್ತಾರೋ ಅದನ್ನು ಮಾಡಬೇಕು । ಹೀಗೆ ಪ್ರತಿದಿನವೂ ಏಕೋತ್ತರವೃದ್ಧಿ(1ನೇದಿನ–1ಸಲ, 2ನೇದಿನ–2ಸಲ,.....ಹೀಗೆ) ಕ್ರಮದಲ್ಲಿ 11 ದಿನಗಳ ಪರ್ಯಂತವಾಗಿ । ಬೊಗಸೆಯಿಂದ 3 ಸಲ ನೀರಿನಿಂದ ತರ್ಪಣವನ್ನು ಕೊಡಬೇಕು ॥

*** ಕಪರ್ದಿಭಾಷ್ಯಂ –**

ತತ್ಪ್ರತ್ಯಯಂ ತಸ್ಯಪ್ರತ್ಯಯೇನ । ಇಹ ಛಾಂದಸೋ ವಿಭಕ್ತಿ ವಿಪರಿಣಾಮೋ ದೃಶ್ಯತೇ । ದ್ವಿತೀಯಾ ತೃತೀಯಾರ್ಥೇ । ತತ್ ಪ್ರತ್ಯಯೇನೇತಿ ವ್ಯಾಖ್ಯಾನ ಪಾಠಃ । ನಾಮಗೋತ್ರಯೋಃ ಗ್ರಹಣಂ । ಯಥಾ, ವಿಷ್ಣುಶರ್ಮಣೇ ಕಾಶ್ಯಪ ಗೋತ್ರಾಯ ಉದಕಂ ದದಾಮೀತಿ । ಸ್ನಾನಾಂತೇ ಸಕೃದೇವ ನಾಮಗ್ರಹಣಂ ತ್ರಿಃ ನಿನಯನಂ । ನಾಮಗ್ರಹಣಂ ಚ ತ್ರಿಃ ಇತ್ಯುಪದೇಶಃ । ಅಪ್ರತೀಕ್ಷಾ ಶವದಹನದೇಶಂ ಸೋದಕವಾಸಸಃ ಗ್ರಾಮಂ ಗಚ್ಛಂತಿ । ಯತ್ ಕರ್ಮಸ್ತ್ರಿಯಃ

ಉಚ್ಚರಂತಿ ಇದಂ ಕರ್ತವ್ಯಮಿತಿ । ಯಥಾ ಗೃಹಪ್ರದೇಶೇ ಗೋಮಯೋದಕ ಸೇಚನಂ, ಘೃತಪ್ರಾಶನಂ, ಅಗ್ನಿಸ್ಪರ್ಶನಂ, ಮೃತಪ್ರದೇಶಸ್ಯ ಗೋಮಯ ಲೇಪನಂ, ಗವಾಂಚೋಪರಿವಾಸನಂ, ಅನ್ಯಾನಿ ಚೈವಂ ವಿಧಾನಿ । ಕೇಚಿತ್ ಸ್ತ್ರೀಗ್ರಹಣಂ ಪ್ರದರ್ಶನಾರ್ಥಂ ಸ್ಮೃತ್ಯಂತರೋಕ್ತಾನಿ ಕರ್ತವ್ಯಾನೀತಿ । ಅಹರಹಃ ಉದಕಾಂಜಲಿ ಪ್ರದಾನಂ ಏಕೈಕಸ್ಮಿನ್ ದಿವಸೇ ಬ್ರಾಹ್ಮಣ ಭೋಜನಂ ಇತಿ ॥

ಅವನ ಹೆಸರನ್ನು ಮತ್ತು ಗೋತ್ರವನ್ನು ಹೇಳುತ್ತಾ, ಇಲ್ಲಿ ವಿಭಕ್ತಿಯ ವ್ಯತ್ಯಾಸವು ಛಾಂದಸವಾಗಿ ತೋರುತ್ತದೆ । ಇಲ್ಲಿ ದ್ವಿತೀಯಾ ವಿಭಕ್ತಿಯು ತೃತೀಯಾ ವಿಭಕ್ತಿಯ ಅರ್ಥದಲ್ಲಿ ಬಂದಿದೆ । **ತತ್ಪ್ರತ್ಯಯೇನ** ಎಂಬುದು ವ್ಯಾಖ್ಯಾನ ಪಾಠವು । ಹೆಸರು ಮತ್ತು ಗೋತ್ರಗಳನ್ನು ಹೇಳಬೇಕೆಂದು ಅರ್ಥ । ಹೇಗೆಂದರೆ – **ವಿಷ್ಣುಶರ್ಮಣೇ ಕಾಶ್ಯಪ ಗೋತ್ರಾಯ ಉದಕಂ ದದಾಮಿ,** ಎಂದು । ಸ್ನಾನದ ಕೊನೆಯಲ್ಲಿ ಒಂದುಸಲ ಹೆಸರು–ಗೋತ್ರವನ್ನು ಹೇಳಿ, 3 ಸಲ ನೀರನ್ನು ಬಿಡಬೇಕು । ಕೆಲವರು 3 ಸಲವೂ ಹೆಸರು–ಗೋತ್ರವನ್ನು ಹೇಳಬೇಕೆನ್ನುತ್ತಾರೆ । ದಹನದೇಶವನ್ನು ನೋಡದೇ, ಒದ್ದೇಬಟ್ಟೆಯಲ್ಲಿ ಮತ್ತೆ ಗ್ರಾಮಕ್ಕೆ ಎಲ್ಲರೂ ಬರಬೇಕು । ಗ್ರಾಮದಲ್ಲಿರುವ ತಿಳಿದಿರುವ ವೃದ್ಧಸ್ತ್ರೀಯರು ಯಾವ ಕರ್ತವ್ಯವನ್ನು ಹೇಳುತ್ತಾರೋ ಅದನ್ನು ಮಾಡಬೇಕು । ಉದಾಹರಣೆಗೆ, ಮನೆಯ ಸ್ಥಳದಲ್ಲಿ ಸಗಣಿನೀರನ್ನು ಹಾಕುವುದು ಹಾಗೂ ತಾನು ತುಪ್ಪವನ್ನು ಕುಡಿಯುವುದು ಹಾಗೂ ಅಗ್ನಿಯಲ್ಲಿ ಕಾಯಿಸಿಕೊಳ್ಳುವುದು ಹಾಗೂ ಸತ್ತ ಜಾಗವನ್ನು ಸಗಣಿಯಿಂದ ಬಳಿಯುವುದು ಹಾಗೂ ಹಸುವಿಗೆ ಬಟ್ಟೆಯನ್ನು ಹೊದಿಸಿ, ಆಹಾರವನ್ನು ಕೊಡುವುದು, ಇನ್ನೂ ಮುಂತಾದ ಬೇರೆ ವಿಧವಾದ ಕರ್ತವ್ಯಗಳನ್ನು ಮಾಡಬೇಕು । ಕೆಲವರು ಸ್ತ್ರೀ ಶಬ್ದವನ್ನು ಹೇಳಿರುವುದು, ಸ್ಮೃತ್ಯಂತರದಲ್ಲಿ ಹೇಳಿದ ಕರ್ತವ್ಯಗಳನ್ನೂ ಕೂಡ ಮಾಡಬೇಕೆಂದು ತೋರಿಸುವುದಕ್ಕಾಗಿ ಮಾತ್ರವೇ ಎಂದು ಅಭಿಪ್ರಾಯ ಪಡುತ್ತಾರೆ । ಪ್ರತಿದಿನ ನೀರಿನ ತರ್ಪಣವನ್ನು ಏಕೋತ್ತರವೃದ್ಧಿಯ ಕ್ರಮದಿಂದ 11 ದಿನಗಳವರೆಗೆ ಕೊಡಬೇಕು ॥

*** ಸೂತ್ರಂ – 8 (ಇಬ್ಬರಿಗೂ)**

ಅನಶನಾನಧ್ಯಯನ ಅಧಃಶಯ್ಯಾ ಉದಕೋಪಸ್ಪರ್ಶನಾನಿ ಆಕಾಲಮ್ ॥

ಊಟ ಮಾಡದಿರುವದು(ರಾತ್ರಿ), ಅನಧ್ಯಯನ(ಅಧ್ಯಯನ ಮಾಡದಿರುವಿಕೆ), ನೇರವಾಗಿ ನೆಲದಲ್ಲಿ (ಆಸನರಹಿತವಾಗಿ) ಮಲಗುವುದು, ಮುಳುಗುಸ್ನಾನ ಮಾಡುವುದು – ಇವುಗಳನ್ನು ಯಥಾಕಾಲದವರೆಗೆ ಮಾಡುವುದು ॥

*** ಕಪರ್ದಿಭಾಷ್ಯಂ –**

ಅನಶನಾದೀನಿ ಆಕಾಲಂ ಅಪರಸ್ಮಿನ್ ಅಹನಿ ಆಮರಣಕಾಲಮ್ ॥

ಉಪವಾಸ ಮುಂತಾದವುಗಳನ್ನು ವ್ಯಕ್ತಿಯು ಸತ್ತ ಸಮಯದಿಂದ ಮರುದಿನದ ಆ ಸತ್ತ ಸಮಯದವರೆಗೆ(24 ಗಂಟೆ) ಮಾಡಬೇಕು ॥

*** ಸೂತ್ರಂ – 9 (ಇಬ್ಬರಿಗೂ)**

ಅನೂಚಾನೇಷು ದ್ವ್ಯಹಂ ತ್ರ್ಯಹಂ ಷಡಹಂ ದ್ವಾದಶಾಹಂ ವಾ ॥

ಮೃತರು ಅನೂಚಾನರಾದವರಾಗಿದ್ದರೆ(ಶ್ರೋತ್ರಿಯರಾಗಿದ್ದರೆ), ಮೇಲಿನ ಸೂತ್ರದಲ್ಲಿ ತಿಳಿಸಿರುವ ನಿಯಮಗಳನ್ನು 2 ದಿನ ಅಥವಾ 3 ದಿನ ಅಥವಾ 6 ದಿನ ಅಥವಾ 12 ದಿನಗಳವರೆಗೂ ಮಾಡಬೇಕು ॥

*** ಕಪರ್ದಿಭಾಷ್ಯಂ –**

ಅನೂಚಾನೇಷ್ವಮಾತ್ಯೇಷು ಆಸಪ್ತಮಾತ್ ಪುರುಷಾತ್ ದ್ವ್ಯಹ ಪ್ರಭೃತಿ ॥

ಶ್ರೋತ್ರಿಯರು, ಮಂತ್ರಿಗಳು, ಹಿರಿಯರು, ಪೂಜ್ಯರು ಮೃತರಾದರೆ, 2 ನೇ ದಿನ ದಿಂದ ಹಿಡಿದು 12 ದಿನಗಳವರೆಗೆ ಮೇಲೆತಿಳಿಸಿದ ನಿಯಮಗಳನ್ನು ಮಾಡಬೇಕು ॥

*** ಸೂತ್ರಂ – 10 (ಇಬ್ಬರಿಗೂ)**

ಗುರುಷ್ವನಶನವರ್ಜಂ ಸಂವತ್ಸರಮ್ ॥

ಗುರುಸ್ಥಾನದಲ್ಲಿರುವವರು ಮೃತರಾದರೆ, ಊಟ ಮಾಡದಿರುವ ನಿಯಮವನ್ನು ಬಿಟ್ಟು, ಇನ್ನುಳಿದಿರುವ ನಿಯಮಗಳನ್ನು ಸಂವತ್ಸರ(1 ವರ್ಷ) ಕಾಲ ಮಾಡಬೇಕು ॥

* ಕಪರ್ದಿಭಾಷ್ಯಂ –

ಗುರುಷು ಸಂವತ್ಸರಂ ॥

ಗುರುಗಳು ಮೃತರಾದರೆ, ಉಪವಾಸ ಒಂದನ್ನು ಬಿಟ್ಟು, ಉಳಿದ ನಿಯಮಗಳನ್ನು ಒಂದು ವರ್ಷಗಳು ಮಾಡಬೇಕು ॥

* ಸೂತ್ರಂ – 11 (ಇಬ್ಬರಿಗೂ)

ಮಾತರಿ ಪಿತರ್ಯಾಚಾರ್ಯ ಇತ್ಯೇಕೇ ಶಾಖಿನಃ ಪಠಂತಿ ಅನಶನವರ್ಜಂ ॥

ತಾಯಿ, ತಂದೆಗಳ ವಿಷಯದಲ್ಲೂ ಆಚಾರ್ಯರ ವಿಷಯದಲ್ಲೂ ಕೂಡ ಒಂದು ವರ್ಷಗಳ ಕಾಲ ಈ ನಿಯಮಗಳನ್ನು ಆಚರಿಸಬೇಕೆಂದು ಕೆಲವರು ಹೇಳುತ್ತಾರೆ ॥

* ಕಪರ್ದಿಭಾಷ್ಯಂ –

ಮಾತರಿ ಪಿತರ್ಯಾಚಾರ್ಯ ಇತ್ಯೇಕೇ ಶಾಖಿನಃ ಪಠಂತಿ ಅನಶನವರ್ಜಂ । ಏತೇಷು ದ್ವಾದಶಾಹಂ ಅಧಶ್ಶಯ್ಯೇತಿ ಧರ್ಮಶಾಸ್ತ್ರೇಷು ಕಿಮರ್ಥಮುಚ್ಯತೇ । ದಶಾಹೇತ್ವತೀತೇ ಶ್ರುತಸ್ಯ ತ್ರ್ಯಹಂ ಷಡಹಂ ವಾ ಯಾವತ್ ಸಂವತ್ಸರಂ । ಸಂವತ್ಸರೇತ್ವತೀತೇ ದ್ವ್ಯಹಮೇವೇತ್ಯೇವಂ ಅರ್ಥಮ್ ॥

ತಾಯಿ, ತಂದೆ, ಆಚಾರ್ಯರಿಗೂ ಸಹಾ ಗುರುಗಳ ವಿಷಯದಲ್ಲಿ ಹೇಳಿರುವ ನಿಯಮಗಳೇ ಅನ್ವಯಿಸುತ್ತವೆ ಎಂದು, ಶಾಖಾಂತರದಲ್ಲಿ ಹೇಳುತ್ತಾರೆ । ಈ ನಿಯಮಗಳಲ್ಲಿ 12 ದಿನಗಳು ಕೇವಲ ನೆಲದ ಮೇಲೆ ಮಲಗುವಿಕೆಯನ್ನು ಧರ್ಮಶಾಸ್ತ್ರದಲ್ಲಿ ಏಕೆ ಹೇಳಿದ್ದಾರೆಂದರೆ – 10 ದಿನಗಳು ಕಳೆಯಲಾಗಿ, ಮುಂದೆ 3 ಅಥವಾ 6 ಎಂದು 1 ವರ್ಷದವರೆಗೆ ನಿಯಮವನ್ನು ಹೇಳಿದ್ದಾರೆ । 1 ವರ್ಷ ಕಳೆದ ನಂತರ 2 ದಿವಸ ಮಾತ್ರ ನೆಲದಲ್ಲಿ ಮಲಗುವಿಕೆಯು ಎಂದು ತೋರಿಸುವುದಕ್ಕಾಗಿ ಹೇಳಿದ್ದಾರೆ ॥

*** ಸೂತ್ರಂ – 12=127 (ಇಬ್ಬರಿಗೂ)**

ಅನಶನ ಅನಧ್ಯಯನ ವರ್ಜಂ ಯಾವಜ್ಜೀವಂ ಪ್ರೇತ ಪತ್ನ್ಯುದಕೋಪಸ್ಪರ್ಶನಂ ಏಕಭುಕ್ತಂ ಅಧಶ್ಶಯ್ಯಾ ಬ್ರಹ್ಮಚರ್ಯಂ ಕ್ಷಾರ ಲವಣ ಮಧು ಮಾಂಸ ವರ್ಜಂ ಚ ॥

ಸತ್ತವನ, ಹೆಂಡತಿ ಮಾತ್ರ, ಊಟ ಮಾಡದಿರುವ ಮತ್ತು ಅನಧ್ಯಯನ ನಿಯಮಗಳನ್ನು ಹೊರತುಪಡಿಸಿ, ಮುಳುಗುಸ್ನಾನ – 1 ಹೊತ್ತು ಊಟ – ನೆಲದಲ್ಲಿ ಮಲಗುವಿಕೆ – ಬ್ರಹ್ಮಚರ್ಯ – ಉಪ್ಪು – ಹುಳಿ – ಖಾರ – ಜೇನುತುಪ್ಪ – ಮಾಂಸ, ಇವುಗಳ ವರ್ಜನೆ(ಬಿಡುವಿಕೆ) ಈ ನಿಯಮಗಳನ್ನು ಜೀವಿಸಿರುವವರೆಗೂ ಪಾಲಿಸ ಬೇಕು ॥

*** ಕಪರ್ದಿಭಾಷ್ಯಂ –**

ಯಾವಜ್ಜೀವಂ ಪ್ರೇತಪತ್ನ್ಯಾ ಇತಿ ಅನ್ಯಕರ್ಮ ಪ್ರತಿಶೇಧಾರ್ಥಂ ತದ್ಧಿತೇನ ಚ ವರ್ತತೇ ॥

ಮೃತನ ಪತ್ನಿಯು ಅವಳು ಜೀವಿಸಿರುವವರೆಗೆ ಈ ನಿಯಮಗಳನ್ನು ಮಾಡಬೇಕೆಂದು ಹೇಳಿರುವುದು, ಅವಳಿಗೆ ಬೇರೇ ಕರ್ಮಗಳನ್ನು ನಿಷೇಧಗೊಳಿಸಲು, ಏಕೆಂದರೆ ಇದು ಅವಳ ಹಿತಕ್ಕಾಗಿಯೇ ಹೇಳಿದುದಾಗಿದೆ ॥

ಶ್ರೀಃ

2. ಯಜುರ್ವೇದ ಆಪಸ್ತಂಬೀಯ/ಕಪರ್ದೀಯ ಪೈತೃಮೇಧಿಕ(ಅಪರ) ಕಾರಿಕಾ

1. ಸಾಯುವ ಕಡೇ ದಿನಗಳು ಅಥವ ಕಡೇ ಕ್ಷಣಗಳಲ್ಲಿ, ಪಾಪಗಳ ನಾಶಕ್ಕಾಗಿ, ಮಾಡಬೇಕಾದ ಪ್ರಾಯಶ್ಚಿತ್ತಗಳ(ಕೃಚ್ಛ್ರ) ವಿಚಾರ

ಯಜ್ಞೇಶ್ವರಂ ವಿಘ್ನವಿನಾಯಕಂ ಚ ವಾಗೀಶ್ವರಂ ಸೂತ್ರ ಕೃತಂ ಚ ನತ್ವಾ ।
ನಾಹಿತಾಗ್ನೇಃ ಪಿತೃಮೇಧಕರ್ಮ ವಿಚಾರ್ಯ ಕಲ್ಪಾನಖಿಲಾನ್ ಪ್ರವಕ್ಷ್ಯೇ ॥ 1 ॥

ಯಜ್ಞೇಶ್ವರನನ್ನೂ, ವಿನಾಯಕನನ್ನೂ, ಬ್ರಹ್ಮನನ್ನೂ ಮತ್ತೂ ಈ ಸೂತ್ರವನ್ನು ರಚಿಸಿದ ಆಪಸ್ತಂಬ ಮುನಿಗಳನ್ನೂ ಸ್ಮರಿಸಿ–ನಮಿಸಿ । ಆಹಿತಾಗ್ನಿ(ಅಗ್ನಿಹೋತ್ರಿ)ಗಳಲ್ಲದವರ ಪಿತೃಮೇಧಕರ್ಮಗಳನ್ನು ವಿಚಾರಿಸಿ ಎಲ್ಲಾ ಪ್ರಯೋಗವನ್ನೂ ಹೇಳುತ್ತೇನೆ ॥

ಪಿತ್ರೋಃ ಮುಮೂರ್ಷುಸಮಯೇ ಶುದ್ಧಿಪುಣ್ಯಾಹವಾಚನಮ್ ।
ವಾಚಯಿತ್ವಾ ತು ತೀರ್ಥೇನ ಪ್ರೋಕ್ಷ್ಯ ಪ್ರಾಶನಮಾಚರೇತ್ ॥ 2 ॥

ವ್ಯಕ್ತಿಗೆ ಮರಣದ ಕೊನೇ ಕ್ಷಣಗಳು ಬಂದಾಗ, ಪುಣ್ಯಾಹವನ್ನು ಮಾಡಿ । ಆ ತೀರ್ಥವನ್ನು ಆ ಮರಣದ ವ್ಯಕ್ತಿಗೆ ಪ್ರೋಕ್ಷಿಸಿ, ಕುಡಿಸಬೇಕು ॥

ದಕ್ಷಿಣಾಶಿರಸಂ ತಂ ತು ಶಾಯಯಿತ್ವಾ ತತಃ ಪರಮ್ ।
ಪ್ರಾಜಾಪತ್ಯಾದಿ ಕೃಚ್ಛ್ರಾಣಿ ಯಥಾಸಂಭವಮಾಚರೇತ್ ॥ 3 ॥

ದಕ್ಷಿಣದಿಕ್ಕಿಗೆ ತಲೆಯನ್ನು ಮಾಡಿ ಮಲಗಿಸಿ । ಆಮೇಲೆ ಪ್ರಾಜಾಪತ್ಯಾದಿ ಕೃಚ್ಛ್ರಗಳನ್ನು ಯಥಾಶಕ್ತಿಯಾಗಿ ಮಾಡಬೇಕು ॥

ಸರ್ವ ಜನ್ಮಾರ್ಜಿತಾನೀಹ ಭ್ರೂಣಹತ್ಯಾದಿಕಾನ್ಯಪಿ ।
ಸರ್ವ ಪಾಪಾನಿ ನಶ್ಯಂತಿ ಕೃಚ್ಛ್ರೈರ್ದ್ವಾದಶ ವಾರ್ಷಿಕೈಃ ॥ 4 ॥

ಪೂರ್ವಜನ್ಮಗಳಲ್ಲೂ ಮತ್ತು ಈ ಜನ್ಮದಲ್ಲೂ ಮಾಡಿದ ಬ್ರಹ್ಮಹತ್ಯಾದಿ ಸಕಲಪಾಪಗಳೂ 12 ವರ್ಷಗಳ ಕಾಲ ಆಚರಿಸುವ ಕೃಚ್ಛ್ರಗಳಿಂದ ನಾಶವಾಗುತ್ತವೆ ॥

ಜನ್ಮ ಪ್ರಭೃತಿ ಯತ್ಕಿಂಚಿತ್ ಪಾತಕಂಚೋಪಪಾತಕಮ್ ।
ಅರ್ವಾಕ್ ತು ಭ್ರೂಣಹತ್ಯಾಯಾಷ್ಷಡಬ್ದಾನ್ ನಶ್ಯತಿ ಧ್ರುವಮ್ ॥ 5 ॥

ಹುಟ್ಟಿದಾರಭ್ಯ ಯಾವಯಾವ ಮಹಾಪಾತಕ ಉಪಪಾತಕಗಳು ಬ್ರಹ್ಮಹತ್ಯೆಗಿಂತ ಕಡಿಮೆ ಹಂತದ್ದೋ ಅವೆಲ್ಲವೂ ಷಡಬ್ದ(6 ವರ್ಷಗಳ) ಕೃಚ್ಛ್ರಗಳಿಂದ ಖಂಡಿತ ನಾಶವಾಗುತ್ತವೆ ॥

ಕೃಚ್ಛ್ರಾದಿಕರಣಾಶಕ್ತೌ ಪ್ರತ್ಯಾಮ್ನಾಯಾನ್ ಸಮಾಚರೇತ್ ।
ಕೃಚ್ಛ್ರಪ್ರತಿನಿಧಿಂ ಕುರ್ಯಾತ್ ಗೋಭಿರೇವ ಸವತ್ಸಕೈಃ ॥ 6 ॥

ಕೃಚ್ಛ್ರಾದಿಗಳನ್ನು ಮಾಡಲು ಅಶಕ್ತನಾದರೆ, ಅದಕ್ಕೆ ಬದಲಾಗಿ ಹೇಳಿದ ಕೃಚ್ಛ್ರಪ್ರತಿನಿಧಿಯನ್ನು ಕರುಸಹಿತಹಸುಗಳಿಂದ ಪ್ರತ್ಯಾಮ್ನಾಯವಾಗಿ ಮಾಡಬೇಕು ॥

ಗವಾಂ ಅಭಾವೇ ನಿಷ್ಕಾದಿ ದಾತವ್ಯಂ ದಕ್ಷಿಣಾದಿಕಮ್ ।
ಕೃಚ್ಛ್ರೋಽಯುತಂ ತು ಗಾಯತ್ರ್ಯಾ ಉಪವಾಸಸ್ತಥೈವ ಚ ॥ 7 ॥

ಹಸುಗಳೇ ಇಲ್ಲದಿದ್ದರೆ, ಸುವರ್ಣಾದಿ ದಾನಗಳನ್ನು ಮಾಡಬೇಕು । ಮತ್ತೂ 10ಸಾವಿರ ಗಾಯತ್ರೀಜಪವೂ ಮತ್ತು ಉಪವಾಸವೂ 1 ಪ್ರಾಜಾಪತ್ಯಕೃಚ್ಛ್ರಕ್ಕೆ ಸಮ ॥

ಸಮುದ್ರಗಾ ನದೀಸ್ನಾನಂ ಸಮಮೇತತ್ ಚತುಷ್ಟಯಮ್ ।
ಕೃಚ್ಛ್ರಾಣ್ಯೇವಂ ಚರಿತ್ವಾಥ ದಶದಾನಾದಿಕಂ ಚರೇತ್ ॥ 8 ॥

ಸಮುದ್ರವನ್ನು ಸೇರುವ ಸ್ಥಳದಲ್ಲಿ ನದಿಯಲ್ಲಿ ಮುಳುಗುಸ್ನಾನವೂ ಮತ್ತು ಈ ಹಿಂದೆಹೇಳಿದ ಮೂರು ವಿಧಾನಗಳೂ ಸೇರಿ, ಈ ನಾಲ್ಕೂ ವಿಧಾನಗಳು ಕೃಚ್ಛ್ರಕ್ಕೆ ಸಮ । ಇದನ್ನು ಮಾಡಿ ನಂತರ ದಶದಾನಾದಿಗಳನ್ನು ಮಾಡಬೇಕು ॥

2. ದಾನಗಳ ವಿಚಾರ

ಗೋ ಭೂ ತಿಲ ಹಿರಣ್ಯಾಜ್ಯ ವಾಸೋ ಧಾನ್ಯ ಗುಡಾನಿ ಚ ।
ರೌಪ್ಯಂ ಲವಣಮಿತ್ಯಾಹುಃ ದಶದಾನಾನಿ ಪಂಡಿತಾಃ ॥ 9 ॥

ದಶದಾನಗಳೆಂದರೆ, ಗೋದಾನ – ಭೂ – ಎಳ್ಳು – ಚಿನ್ನ – ತುಪ್ಪ – ಬಟ್ಟೆ– ಧಾನ್ಯ – ಬೆಲ್ಲ । ಬೆಳ್ಳಿ – ಉಪ್ಪು ಈ 10 ಸೇರಿವೆ ಎಂದು ಪಂಡಿತರು ಹೇಳುತ್ತಾರೆ ॥

ಸಾಲಗ್ರಾಮಶಿಲಾಚಕ್ರಂ ಶಿವಲಿಂಗಂ ತಥೈವ ಚ ।
ಹಿರಣ್ಯಂ ಭೂಮಿ ದಾನಂ ಚ ತಿಲಾನ್ ಶಕ್ತ್ಯಾ ಪ್ರದಾಪಯೇತ್ ॥ 10 ॥

ಸಾಲಿಗ್ರಾಮಶಿಲೆ, ಶಿವಲಿಂಗ । ಮತ್ತು ಚಿನ್ನ, ಭೂಮಿ, ಎಳ್ಳು ಇವುಗಳನ್ನು ಯಥಾಶಕ್ತಿಯಾಗಿ ದಾನಕೊಡಬೇಕು ॥

3. ಉತ್ಕ್ರಾಂತಿ ಗೋದಾನ ಮತ್ತು ಕರ್ಣಮಂತ್ರ ಜಪ ವಿಚಾರ

ಉತ್ಕ್ರಾಂತಿಸಂಜ್ಞಿಕಾಂ ಗಾಂ ಚ ದತ್ವಾ ವೇದವಿದೇ ತತಃ ।
ಪುತ್ರಾದಿರ್ದಕ್ಷಿಣೇ ಕರ್ಣೇ ಜಪೇನ್ಮರಣ ಸಂಶಯೇ ॥ 11 ॥

ಉತ್ಕ್ರಾಂತಿಗೋದಾನವನ್ನು ವೇದಜ್ಞನಾದ ಬ್ರಾಹ್ಮಣನಿಗೆ ದಾನಮಾಡಿ । ಮಕ್ಕಳಾದವರು ಮರಣಕ್ಕೆ ಸಿದ್ಧವಾಗಿರುವ ವ್ಯಕ್ತಿಯ ಬಲಕಿವಿಯಲ್ಲಿ ಈ ಮುಂದಿನ ಮಂತ್ರಗಳನ್ನು ಜಪಿಸಬೇಕು ॥

ಬ್ರಹ್ಮವಿತ್ ಭೃಗುರಿತ್ಯೇತಾವಾಯುಷಃ ಪ್ರಾಣಮಿತ್ಯಪಿ ।
ಬ್ರಹ್ಮಜ್ಞಸ್ಯಾನುವಾಕಾನ್ ತ್ರೀನ್ ಅನ್ಯಸ್ಯಾಯುಷ ಇತ್ಯಮುಮ್ ॥ 12 ॥

ಬ್ರಹ್ಮಾನಂದವಲ್ಲೀ, ಭೃಗುವಲ್ಲೀ ಎಂಬ ಉಪನಿಷತ್ತುಗಳ ಮೊದಲ ಅನುವಾಕಗಳನ್ನು ಮತ್ತೂ **ಆಯುಷಃ ಪ್ರಾಣಗ್ಂ.....,** ಮಂತ್ರವನ್ನು ಬ್ರಹ್ಮಜ್ಞರಿಗೆ ಅಂದರೆ ಆಹಿತಾಗ್ನಿಗಳಿಗೂ(ಅಗ್ನಿಹೋತ್ರಿಗಳಿಗೆ/ಮಹಾತ್ಮರುಗಳಿಗೆ) । **ಆಯುಷಃ ಪ್ರಾಣಗ್ಂ.....,** ಮಂತ್ರವನ್ನು ಅನಾಹಿತಾಗ್ನಿಗಳಿಗೆ ಬಲಕಿವಿಯಲ್ಲಿ ಹೇಳಬೇಕು ॥

4. ಸತ್ತಾಗ, ಕರ್ತೃಗಳು ಅನುಸರಿಸಬೇಕಾದ ಮೊದಲ ನಡವಳಿಕೆಗಳ ವಿಚಾರ

ಯದಿ ಪೈತಿ ಪ್ರೇತಾಮಾತ್ಯಾಹ ಪ್ರಾಚೀನಾವೀತಿನಃ ತದಾ ।
ಕೇಶಾನ್ ಪ್ರಕೀರ್ಯಾಥ ಪಾಂಸೂನಾವಪಂತೇ ಕಚೋಪರಿ ॥ 13 ॥

ಒಂದುವೇಳೆ ಆ ವ್ಯಕ್ತಿಯು ಸತ್ತರೆ, ಆ ವ್ಯಕ್ತಿಯ ಮಕ್ಕಳು ಅಥವ ಸಂಬಂಧಿಗಳು ಪ್ರಾಚೀನಾವೀತಿಗಳಾಗಿ । ತಲೆಕೂದಲನ್ನು ಬಿಚ್ಚಿ, ಹರಡಿಕೊಂಡು ಮನೆಯ ಹೊರಗೆ ಧೂಳನ್ನು ತಲೆಯಮೇಲೆ ಹಾಕಿಕೊಳ್ಳುತ್ತಾರೆ(ಎರಚಿಕೊಳ್ಳುತ್ತಾರೆ) ॥

ಅಥ ಕರ್ತಾ ನದೀಂ ಗತ್ವಾ ಸಚೇಲಮವಗಾಹ್ಯ ಚ ।
ಅಥೋದಕುಂಭಮಾಹೃತ್ಯ ಗೃಹಂ ಗತ್ವಾ ತತಃ ಪರಮ್ ॥ 14 ॥

ಆಮೇಲೆ ಕರ್ತೃವು ನದಿಯದಡಕ್ಕೆ ಹೋಗಿ ಉಟ್ಟಿರುವ ಬಟ್ಟೆಯ ಸಹಿತ ಮುಳುಗುಸ್ನಾನ ಮಾಡಬೇಕು । ಆಮೇಲೆ ಕೊಡದಲ್ಲಿ ನೀರನ್ನು ಮನೆಗೆ ತರಬೇಕು ॥

ಪ್ರಕ್ಷಾಳ್ಯ ಪಾದಾವಾಚಮ್ಯ ವಿಪ್ರಾನುಜ್ಞಾಪುರಸ್ಸರಮ್ ।
ಕರ್ಮಾಧಿಕಾರ ಸಿದ್ಧ್ಯರ್ಥಂ ತ್ರೀನ್ ಕೃಚ್ಛ್ರಾನ್ ಪಂಚ ಸಪ್ತ ವಾ ॥ 15 ॥

ಕಾಲನ್ನು ತೊಳೆದು, ಆಚಮನ ಮಾಡಿ, ಬ್ರಾಹ್ಮಣರ ಅನುಜ್ಞಾ ಪುರಸ್ಸರವಾಗಿ । ಕರ್ಮಾಧಿಕಾರ ಸಿದ್ಧಿಗಾಗಿ 3 ಅಥವ 5 ಅಥವ 7 ಕೃಚ್ಛ್ರಗಳನ್ನು ಮಾಡಬೇಕು ॥

ಚರೇದ್ಯದ್ವಾತು ದಾನಾದ್ಯೈಃ ಪೈತೃಮೇಧಿಕಂ ಆಚರೇತ್ ।
ತತಃ ಪವಿತ್ರಪಾಣಿಃ ಸನ್ನ್ ಉಪವಿಶ್ಯ ಯಥಾವಿಧಿ ॥ 16 ॥

ಅಲ್ಲದೇ ದಾನಾದಿಗಳನ್ನು ಮಾಡಿ, ಪೈತೃಮೇಧಿಕ ಕರ್ಮಗಳನ್ನು ಮಾಡಬೇಕು । ಆಮೇಲೆ ಪವಿತ್ರಪಾಣಿಯಾಗಿ, ಯಥಾವಿಧಿಯಾಗಿ ಕೂರಬೇಕು ॥

5. ಅಗ್ನಿ ಪುನಸ್ಸಂಧಾನ ವಿಚಾರ

ಪ್ರಾಣಾನಾಯಮ್ಯ ಸಂಸ್ಕರ್ತಾ ಪ್ರಾಚೀನಾವೀತ್ಯನಂತರಮ್ ।
ಪ್ರೇತ ನಾಮತು ಷಷ್ಠ್ಯೋಕ್ತ್ಯಾ ವಿಚ್ಛಿನ್ನೌಪಾಸನಸ್ಯತು ॥ 17 ॥

ನಂತರ ಪ್ರಾಣಾಯಾಮವನ್ನು ಮಾಡಿ, ಪ್ರಾಚೀನಾವೀತಿಯಾಗಿ । ಪ್ರೇತನ ಹೆಸರನ್ನು **ಷಷ್ಠಿ ವಿಭಕ್ತಿಯಿಂದ** ಹೇಳಿ, ಇವನ ವಿಚ್ಛಿನ್ನೌಪಾಸನದ ಸಂಧಾನವನ್ನು ಈಗ ಮಾಡುತ್ತೇವೆ ಎಂದು, ಅಗ್ನಿವಿಚ್ಛಿತ್ತಿಯಾದ ದಿನಗಳ ಹೋಮದ್ರವ್ಯವನ್ನು ಲೆಕ್ಕಮಾಡಿ, ದಾನಮಾಡಬೇಕು ॥

ಕರಿಷ್ಯೇಚಾದ್ಯ ಸಂಧಾನಂ ಹೋಮದ್ರವ್ಯಂ ಪ್ರದಾಯ ಚ ।
ಆಗೂರ್ಯೋಲ್ಲಿಖ್ಯ ಯಾಮ್ಯಾಂತಂ ಅವೋಕ್ಷ್ಯಾಗ್ನಿಂ ನಿಧಾಯ ಚ ॥ 18 ॥

ಅಲ್ಲಿಯವರೆಗಿನ ಮಾಡದಿರುವ ಔಪಾಸನದ ಪ್ರಾಯಶ್ಚಿತ್ತಕ್ಕಾಗಿ ಔಪಾಸನಹೋಮದ್ರವ್ಯ(ಅಕ್ಕಿತುಪ್ಪ)ಗಳನ್ನು ದಾನಮಾಡಿ, ಆಮೇಲೆ ಔಪಾಸನ ಸಂಕಲ್ಪಮಾಡಿ । ಮರಳಿನ ಚೌಕದಲ್ಲಿ ದಕ್ಷಿಣಾಂತವಾಗಿ ಉಲ್ಲೇಖಮಾಡಿ, ನೀರನ್ನು ಪ್ರೋಕ್ಷಿಸಿ, ಅಗ್ನಿಯನ್ನು ಇಟ್ಟುಕೊಳ್ಳಬೇಕು ॥

ವಿಪರೀತಂ ಪರಿಸ್ತೀರ್ಯ ದಕ್ಷಿಣೇ ಪಾತ್ರಸಾದನಮ್ ।
ದಕ್ಷಿಣಾಗ್ರೇಷು ದರ್ಭೇಷು ಸಾದಯೇದೇಕಶಃ ಕ್ರಮಾತ್ ॥ 19 ॥

ದಕ್ಷಿಣಾಗ್ರವಾಗಿ ಪರಿಸ್ತರಣ ಹಾಕಿ, ದಕ್ಷಿಣದಲ್ಲಿಯೇ ಪಾತ್ರೆಗಳನ್ನೂ (ಆಸಾದನ) ಇಡಬೇಕು। ದಕ್ಷಿಣಾಗ್ರವಾಗಿ ಹಾಸಿರುವ ದರ್ಭೆಗಳ ಮೇಲೆ ಕ್ರಮವಾಗಿ ಒಂದೊಂದನ್ನಾಗಿ ಪಾತ್ರೆಗಳನ್ನು ಇಡಬೇಕು ॥

ಪ್ರೋಕ್ಷಣೀಂ ಸ್ರುಕ್ ಸ್ರುವೌ ಚೈವಂ ಆಜ್ಯಸ್ಥಾಲೀಂ ತಥೈವ ಚ ।
ಉತ್ಪೂಯ ಪ್ರೋಕ್ಷಣೀಂ ಪ್ರೋಕ್ಷ್ಯ ಪಾತ್ರಾಣಿ ಚ ತತಃ ಪರಮ್ ॥ 20 ॥

ಅವು ಯಾವುವೆಂದರೆ, ಪ್ರೋಕ್ಷಣೀಪಾತ್ರೆ, ಸ್ರುಕ್ ಸ್ರುವ ಮತ್ತು ಆಜ್ಯಪಾತ್ರೆಗಳು । ಪ್ರೋಕ್ಷಣೀಪಾತ್ರೆಯಲ್ಲಿ ನೀರನ್ನು ಹಾಕಿ, ಉತ್ಪವನ ಮಾಡಿ, ಪಾತ್ರೆಗಳನ್ನು ಮೇಲ್ಮುಖವಾಗಿ ಮಾಡಿ ಅವುಗಳಿಗೆ ಪ್ರೋಕ್ಷಿಸಬೇಕು ॥

ಸಂಸ್ಕೃತ್ಯ ತೂಷ್ಣೀಂ ಆಜ್ಯಂ ಚ ಸಂಮೃಜ್ಯ ಸ್ರುಕ್ ಸ್ರುವೌ ತತಃ ।
ಪ್ರಸವ್ಯಂ ಪರಿಷಿಚ್ಯಾಥ ಜುಹುಯಾತ್ ಜಾತವೇದಸಿ ॥ 21 ॥

(ಅಮಂತ್ರಕವಾಗಿ) ಸುಮ್ಮನೆ ಆಜ್ಯಸಂಸ್ಕಾರಮಾಡಿ, ನಂತರ ಸ್ರುಕ್ ಸ್ರುವಗಳನ್ನೂ ಸುಮ್ಮನೆ ಸಂಸ್ಕಾರ ಮಾಡಬೇಕು । ಅಪ್ರದಕ್ಷಿಣೆಯಾಗಿ ಪರಿಷೇಚನ ಮಾಡಿ, ಆಮೇಲೆ ಅಗ್ನಿಯಲ್ಲಿ ಮುಂದೆ ಹೇಳುವಂತೆ ಹೋಮ ಮಾಡಬೇಕು ॥

ಗೃಹೀತ್ವಾ ದ್ವಾದಶಾಜ್ಯೇನ ಪ್ರಜಾಪತಿಮತಃ ಸ್ಮರನ್ ।
ತೂಷ್ಣೀಮೇವ ಜುಹೋತೀತಿ ಪ್ರೇತಾಧಾನಮುದೀರಿತಮ್ ॥ 22 ॥

12 ಸಲ ತುಪ್ಪವನ್ನು ಸ್ರುಕ್ಕಿಗೆ ಹಾಕಿಕೊಂಡು, ಪ್ರಜಾಪತಿಯನ್ನು ಸ್ಮರಿಸುತ್ತಾ । ಮೌನವಾಗಿ ಹೋಮಿಸಬೇಕು, ಇದು ಪ್ರೇತದಔಪಾಸನ ಆಧಾನವೆಂದು ಹೇಳಲ್ಪಟ್ಟಿದೆ ॥

ಬಹುಕಾಲಾತಿಪತ್ತೌ ಚಾಪಿ ಅಯಾಶ್ಚ ವ್ಯಾಹೃತೀರ್ ಹುವೇತ್ ।
ಪೂರ್ವವತ್ ಪರಿಷಿಚ್ಯಾಥ ಕೃಚ್ಛ್ರದಾನಂ ಸಮಾಚರೇತ್ ॥ 23 ॥

ಬಹಳಕಾಲ ಔಪಾಸನವು (ಬಿಟ್ಟಿದ್ದರೂ)ಅತಿಕ್ರಾಂತವಾಗಿದ್ದರೂ, **ಅಯಾಶ್ಚ ಮತ್ತು ವ್ಯಾಹೃತಿಗಳಿಂದಲೇ** ಹೋಮಿಸಬೇಕು । ಹಿಂದಿನಂತೆ ಅಪ್ರದಕ್ಷಿಣೆಯಾಗಿ ಪರಿಷೇಚನ ಮಾಡಿ, ಆಮೇಲೆ ಕೃಚ್ಛ್ರದಾನ ಮಾಡಬೇಕು ॥

6. ಯಾವಯಾವ ಆಶ್ರಮದವರಿಗೆ ಯಾವರೀತಿಯ ಅಗ್ನಿಗಳಿಂದ ದಹನ ಮಾಡಬೇಕೆನ್ನುವ ವಿಚಾರ

ತೂಷ್ಣೀಂ ಔಪಾಸನಂ ಹುತ್ವಾ ಪ್ರಸವ್ಯಂ ಪರಿಷಿಚ್ಯ ಚ ।
ಯತಿವ್ರತ್ಯೋಃ ಕಪಾಲಾಗ್ನಿಃ ತುಷಾಗ್ನಿರ್ಬಾಲ ಕನ್ಯಯೋಃ ॥ 24 ॥

ಕರ್ತೃವು ಸುಮ್ಮನೆ ಔಪಾಸನ ಹೋಮಮಾಡಿ ಅಪ್ರದಕ್ಷಿಣೆಯಾಗಿ ಪೂರ್ವೋತ್ತರ ಪರಿಷೇಚನ ಮಾಡಬೇಕು । ಈ ಕ್ರಮ ಗೃಹಸ್ಥ ಅಥವ ಅವನ ಪತ್ನೀಸತ್ತರೆ ಮಾತ್ರ, ಸನ್ಯಾಸಿಗೂ – ಬ್ರಹ್ಮಚಾರಿಗೂ ಕಪಾಲಾಗ್ನಿಯನ್ನು ಮಾಡಿಕೊಳ್ಳಬೇಕು, ಅನುಪನೀತರಿಗೂ, ಕನ್ಯೆಯರಿಗೂ ತುಷಾಗ್ನಿಯನ್ನು ಮಾಡಿಕೊಳ್ಳಬೇಕು, ॥

ವಿಧುರಂ ವಿಧವಾಂ ಚೈವ ದಹೇದುತ್ತಪನಾಗ್ನಿನಾ ।
ಯಾವತ್ತಪ್ತ ಕಪಾಲೇನ ಕೇವಲೇನ ಅಗ್ನಿ ಸಂಭವಃ ॥ 25 ॥

ವಿಧುರರಿಗೂ, ವಿಧವೆಗೂ ಉತ್ತಪನಾಗ್ನಿಯಿಂದ ಸುಡಬೇಕು । ಕಪಾಲವು (ಗಡಿಗೆಯು) ಚೆನ್ನಾಗಿ ಕಾದಮೇಲೆ ಅದರೊಳಗೆ ಅಗ್ನಿಉಂಟಾದಾಗ ಆ ಅಗ್ನಿಗೆ ಕಪಾಲದಿಂದ ಹುಟ್ಟಿದ ಅಗ್ನಿ ಎಂದು ಕರೆಯುತ್ತಾರೆ ॥

ತಾವತ್ಕಪಾಲ ಸಂಭೂತಃ ಪಾವಕಃ ಪರಿಕೀರ್ತಿತಃ ।
ಕಪಾಲಮಗ್ನೌ ನಿಕ್ಷಿಪ್ಯ ತಪ್ತಂ ಚೈವತು ನಿಕ್ಷಿಪೇತ್ ॥ 26 ॥

ಕಪಾಲದಿಂದ ಉಂಟಾದಂತಹ ಅಗ್ನಿಯು ಕಪಾಲಾಗ್ನಿಯೆಂದು ಹೇಳಲ್ಪಡುತ್ತದೆ । ಕಪಾಲವನ್ನು ಅಗ್ನಿಯಲ್ಲಿ ಹಾಕಿ ಅದು ಕಾಯುವವರೆಗೆ ಇಟ್ಟು, ಅದರಿಂದ ಕರ್ಮವನ್ನು ಮಾಡಿದರೆ ಅದು ಕಪಾಲಾಗ್ನಿಕರ್ಮವೆಂದು ಕರೆಯಲ್ಪಡುತ್ತದೆ ॥

ಕರೀಷೇವ ಸಮುದ್ಭೂತಃ ತುಷೇತು ತುಷಪಾವಕಃ ।
ದರ್ಭಮುಷ್ಟಿಂ ಪ್ರದೀಪ್ಯಾಗ್ನೌ ಲೌಕಿಕೇ ತತ್ರ ಚಾಪರಮ್ ॥ 27 ॥

ಬೆರಣಿಯಲ್ಲಿ ಹುಟ್ಟುವಂತೆ ಹೊಟ್ಟಿನಲ್ಲಿ ಅಗ್ನಿಯು ಹುಟ್ಟಿದರೆ ಅದಕ್ಕೆ ತುಷಾಗ್ನಿ ಎನ್ನುತ್ತಾರೆ । ಉತ್ತಪನಾಗ್ನಿ ಎಂದರೆ, ದರ್ಭೆಮುಷ್ಟಿಯನ್ನು ಅಗ್ನಿಯಲ್ಲಿ ಹಚ್ಚಿ, ಅದರಿಂದ

ಇನ್ನೊಂದು ದರ್ಭಮುಷ್ಟಿಯ ಬುಡಕ್ಕೆ ಹಚ್ಚಿ, ಆಮೇಲೆ ಇನ್ನೊಂದು ದರ್ಭಮುಷ್ಟಿಯ ಅಗ್ರಕ್ಕೆ ಹಚ್ಚಿದರೆ ಅದು ಉತ್ತಪನಾಗ್ನಿಯು ॥

ತತ್ರಾಪ್ಯಗ್ನಿಃ ತೃತೀಯಸ್ತು ವಹ್ನಿರುತ್ತಪನಃ ಸ್ಮೃತಃ ।
ಗೃಹ್ಯೇ ತರೇಷು ನಿರ್ಮಂಥ್ಯೇ ಕಪಾಲೋತ್ತಪನಾದಿಷು ॥ 28 ॥

ಈ ದರ್ಭೆಯ ಮುಷ್ಟಿಯಿಂದ 3 ನೇ ಸಲಕ್ಕೆ ಉಂಟಾದಂತಹ ಅಗ್ನಿಯನ್ನು ಉತ್ತಪಾಗ್ನಿ ಎನ್ನುತಾರೆ । ಅಥವ ಗೃಹ್ಯವಲ್ಲದ ಬೇರೇ ಅರಣಿಗಳಿಂದ ಕಡೆದ ಅಗ್ನಿಯಲ್ಲಿ ಕಪಾಲೋತ್ತಪನ ಅಗ್ನಿಗಳನ್ನು ಮಾಡಿಕೊಳ್ಳಬೇಕು ॥

ದ್ವಿಷಟ್ ಕೃತ್ವೋ ಗೃಹೀತ್ವಾಜ್ಯಂ ತೂಷ್ಣೀಮೇವ ಹಿ ಹೂಯತೇ ।
ನಿಶಾಯಾಂ ಕೃಷ್ಣಪಕ್ಷೇ ವಾ ದಕ್ಷಿಣೇವಾऽಯನೇ ಮೃತೌ ॥ 29 ॥

12 ಸಲ ತುಪ್ಪವನ್ನು ಸುಮ್ಮನೆ ತೆಗೆದುಕೊಂಡು ಆ ಅಗ್ನಿಗಳಲ್ಲೂ ಹೋಮಿಸ ಬೇಕು । ರಾತ್ರಿಯಲ್ಲಾಗಲೀ, ಕೃಷ್ಣಪಕ್ಷದಲ್ಲಾಗಲೀ, ದಕ್ಷಿಣಾಯನದಲ್ಲಾಗಲೀ ಸತ್ತರೆ ॥

ತಾ ಸೂರ್ಯಾ ಇತಿ ಷಣ್ಮಂತ್ರೈರ್ಜುಹುಯಾಚ್ಚ ಪೃಥಕ್ ಪೃಥಕ್ ।
ಏತತ್ ಗೋತ್ರಮಿಮಂ ಪ್ರೇತಂ ಪೈತೃಮೇಧಿಕ ಕರ್ಮಣಾ ॥ 30 ॥

ತಾ ಸೂರ್ಯಾ....., ಎಂಬ 6 ಮಂತ್ರಗಳಿಂದ ಬೇರೆಬೇರೆಯಾಗಿ(ಪ್ರತಿಮಂತ್ರದಿ ಂದ) ಹೋಮಿಸಬೇಕು । ಈ ಗೋತ್ರದ ಸತ್ತ ಈ ಪ್ರೇತನನ್ನು ಪೈತೃಮೇಧಿಕ ಕರ್ಮದಿಂದ ಸಂಸ್ಕಾರ ಮಾಡುತ್ತೇನೆ ಎಂದು ಸಂಕಲ್ಪವನ್ನು ಕರ್ತೃವು ಮಾಡಬೇಕು ॥

ಕರಿಷ್ಯಾಮೀತಿ ಸಂಕಲ್ಪಂ ಕುರ್ಯಾತ್ ಕರ್ತಾ ಸಮಾಹಿತಃ ।
ಅಪರೇಣಾಗ್ನಿಮೇತಂ ತು ಸರ್ವೇ ಸಂವೇಶಯಂತಿ ತೇ ॥ 31 ॥

ಕರ್ತೃವು ಸಮಾಧಾನವಾಗಿ, ಈ ಮೃತನಿಗೆ ಪೈತೃಮೇಧಿಕಕರ್ಮವನ್ನು ಮಾಡುತ್ತೇನೆಂದು ಸಂಕಲ್ಪಿಸಿ । ನಂತರ ಮೃತನನ್ನು ಅಗ್ನಿಯ ಪಶ್ಚಿಮಭಾಗದಲ್ಲಿ ಜ್ಞಾತಿಗಳು ಮಲಗಿಸುತ್ತಾರೆ ॥

ದಕ್ಷಿಣಾಗ್ರೇಷು ದರ್ಭೇಷು ದಕ್ಷಿಣಾಶಿರಸಂ ಮೃತಮ್ ।
ಸರ್ವಸ್ಯೇತ್ಯಥ ತಂ ಪ್ರೇತಂ ದಕ್ಷಿಣಾಗ್ರ ಕುಶಾಸ್ತೃತೇ ॥ 32 ॥

ಆಮೇಲೆ ಅಗ್ನಿಯ ಪಶ್ಚಿಮಭಾಗದಲ್ಲಿ, ಪ್ರೇತನನ್ನು ದಕ್ಷಿಣಾಗ್ರದರ್ಭೆಗಳ ಮೇಲೆ, ದಕ್ಷಿಣಕ್ಕೆ ತಲೆಯಾಗಿ ಮಲಗಿಸುವಾಗ **ಸರ್ವಸ್ಯ ಪ್ರತಿಶೀವರಿ.....**, ಮಂತ್ರದಿಂದ ಮಲಗಿಸಬೇಕು ॥

7. ಹೋಮ ವಿಚಾರ

ತಂ ತಮಗ್ನಿಂ ಪ್ರತಿಷ್ಠಾಪ್ಯ ಪರಿಸ್ತೀರ್ಯಾಪ್ರದಕ್ಷಿಣಮ್ ।
ದಕ್ಷಿಣೇ ಸ್ರುವಮಾಸಾದ್ಯ ಪ್ರೋಕ್ಷಣೇಮಾಜ್ಯಪಾತ್ರಕಮ್ ॥ 33 ॥

ಅಲ್ಲಿಯೇ ಅಗ್ನಿಯನ್ನು ಪ್ರತಿಷ್ಠಾಪನೆ ಮಾಡಿ, ಅಪ್ರದಕ್ಷಿಣೆಯಾಗಿ ಪರಿಸ್ತರಣ ಹಾಕಿ । ದಕ್ಷಿಣದಲ್ಲಿ ಸ್ರುವವನ್ನು, ಪ್ರೋಕ್ಷಣಿಯನ್ನೂ, ತುಪ್ಪದಪಾತ್ರೆಯನ್ನೂ ಇಡಬೇಕು ॥

ಏಕದರ್ಭ ಪವಿತ್ರೇಣ ಚ ಆಜ್ಯಸಂಸ್ಕಾರಮಾಚರೇತ್ ।
ಪ್ರಸವ್ಯಂ ಪರಿಷಿಚ್ಯಾಥ ಜುಹುಯಾತ್ ಜಾತವೇದಸಿ ॥ 34 ॥

ಒಂದೇ ದರ್ಭೆಯ ಪವಿತ್ರದಿಂದ ಆಜ್ಯಸಂಸ್ಕಾರ ಮಾಡಬೇಕು । ಅಪ್ರದಕ್ಷಿಣೆಯಾಗಿ ಪರಿಷೇಚನ ಮಾಡಬೇಕು ॥

ಅನ್ವಾರಬ್ಧೇ ಮೃತಂ ಚೈನಂ ಸ್ರುವಾಹುತಿಂ ಪರೇ ಇತಿ ।
ಯಮಾಯ ರಾಜ್ಞ ಇತ್ಯುಕ್ತ್ವಾ ಸ್ನಾಪಯಿತ್ವಾಥ ತಂ ಮೃತಮ್ ॥ 35 ॥

ಸತ್ತವನನ್ನು ದರ್ಭೆಯಿಂದ ಮುಟ್ಟಿಕೊಂಡು, ಸ್ರುವದಲ್ಲಿ ತುಪ್ಪವನ್ನು ತೆಗೆದುಕೊಂಡು **ಪರೇಯುವಾಗ್ಂ ಸಂ.....**, ಮಂತ್ರದಿಂದ ಅಗ್ನಿಯಲ್ಲಿ ಹೋಮಿಸಬೇಕು, ಯಮಾಯ ರಾಜ್ಞೇ ಎಂದು ಉದ್ದೆಶತ್ಯಾಗ ಹೇಳಬೇಕು ॥

8. ಶವಕ್ಕೆ ಮಾಡುವ ಅಲಂಕಾರ ಮತ್ತು ಮಲಗಿಸುವ ವಿಚಾರ

ಗ್ರಾಮ್ಯ ಅಲಂಕರಣೇನೈನಮಲಂ ಕೃತ್ವಾಥ ಮೌಂಜಿಕೈಃ ।
ಅಂಗುಷ್ಠೌ ಶುಕ್ಲ ಸೂತ್ರೇಣ ಬಧ್ವಾ ತು ನಲದ ಸ್ರಜಮ್ ॥ 36 ॥

ಗ್ರಾಮ್ಯವಾದ ಅಲಂಕಾರಗಳಿಂದ ಪ್ರೇತನಿಗೆ(ಶವಕ್ಕೆ) ಅಲಂಕಾರ ಮಾಡಿ, ಮೌಂಜಿ ಹುಲ್ಲು ಮತ್ತು ಬಿಳಿಯದಾರದಿಂದ । ಕಾಲುಗಳ ಹೆಬ್ಬೆಟ್ಟುಗಳನ್ನು ಕಟ್ಟಬೇಕು, ನಲದ ಹೂವಿನ ಮಾಲೆಯನ್ನು ಹಾಕಬೇಕು ॥

ಔದುಂಬರ್ಯಾಮಥಾಸಂದ್ಯಾಂ ಕೃಷ್ಣಾಜಿನಮಧೋ ಮುಖಮ್ ।
ದಕ್ಷಿಣಾಗ್ರೀವಮಾಸ್ತೀರ್ಯ ತಮುತ್ತಾನಂ ನಿಪಾತಯೇತ್ ॥ 37 ॥

ಉದುಬರ ಮರದಿಂದ ಮಾಡಿದ (ಚೆಟ್ಟ)ಕುರ್ಚಿಯಲ್ಲಿ ಅಧೋಮುಖವಾದ ಕೃಷ್ಣಾಜಿನವನ್ನು । ದಕ್ಷಿಣಕ್ಕೆ ಅದರ ಕತ್ತುಬರುವಂತೆ ಹಾಸಬೇಕು, ಅದರೆ ಮೇಲೆ ಶವವನ್ನು ಮೇಲ್ಮುಖವಾಗಿ ಮಲಗಿಸಬೇಕು ॥

ಪಾದಪ್ರದೇಶಾದಾರಭ್ಯ ನವೇನಾವೇಷ್ಟ್ಯ ವಾಸಸಾ ।
ಇದಂ ತ್ವೇತಿ ಚ ಮಂತ್ರೇಣಾಪ್ಯನ್ಯತ್ ಪರಿಹಿತಂ ಪುರಾ ॥ 38 ॥

ಕಾಲುಗಳಿಂದ ಆರಂಭಿಸಿ ಹೊಸದಾದ ಬಟ್ಟೆಯಿಂದ ಶವವನ್ನು ಮುಚ್ಚಬೇಕು । **ಇದಂ ತ್ವಾ ವಸ್ತ್ರಂ.....**, ಮಂತ್ರದಿಂದ, ಹಿಂದೆ ಹೊದಿಸಿದ ಬಟ್ಟೆಯನ್ನು ಮಕ್ಕಳೋ, ತಮ್ಮಂದಿರೋ, ಬಂಧುಗಳೋ ॥

ಅಪೈತದೂಹೇತ್ಯಾದತ್ತೇ ಪುತ್ರೋ ಭ್ರಾತಾಥ ಬಾಂಧವಃ ।
ತಸ್ಮಿನ್ನಗ್ನೌ ಚರುಂ ಪಕ್ತ್ವಾಭಿಘಾರ್ಯೋದ್ವಾಸಯೇದಥ ॥ 39 ॥

ಅಪೈತದೂಹ....., ಮಂತ್ರದಿಂದ ತೆಗೆಯಬೇಕು । ಅದೇ ಅಗ್ನಿಯಲ್ಲಿ ಅನ್ನವನ್ನು ಮಾಡಿಕೊಂಡು ಅಭಿಘಾರಮಾಡಿ, ತೆಗೆದಿಟ್ಟುಕೊಳ್ಳಬೇಕು ॥

9. ಸ್ಮಶಾನಕ್ಕೆ ತೆಗೆದುಕೊಂಡು ಹೋಗಬೇಕಾದ ವಸ್ತುಗಳ ವಿಚಾರ

ಅಗ್ನಿಂ ಚರುಮಥಾಜ್ಯಂ ಚ ಹಿರಣ್ಯಶಕಲಂ ತಥಾ ।
ಉದಕುಂಭಂ ತಂಡುಲಂ ಚ ತಿಲಂ ಮೇಕ್ಷಣಮೇವ ಚ ॥ 40 ॥

ಆಮೇಲೆ ಅಗ್ನಿಯನ್ನು, ಚರುವನ್ನೂ, ಆಜ್ಯವನ್ನೂ, ಚಿನ್ನದತಂತಿಗಳನ್ನೂ । ಉದಕುಂಭವನ್ನೂ, ಅಕ್ಕಿಯನ್ನೂ, ಎಳ್ಳನ್ನೂ, ಮರದ ಸೌಟನ್ನು ಹಾಗೆಯೇ ॥

ದರ್ಭಾನಶ್ಮಾನಂ ಆದಾಯ ಗಚ್ಛಂತ್ಯುಲ್ಮಕ ಪೂರ್ವಕಾಃ ।
ಹರತ್ಯಥಾಗ್ನಿಂ ಪುರತಶ್ಶವಸ್ಯ ಶವಂ ಚ ಪಶ್ಚಾತ್ ಬಿಭೃಯುಸ್ಸಪಿಂಡಾಃ ॥41॥

ದರ್ಭೆಗಳನ್ನೂ, ಕಲ್ಲನ್ನೂ, ತೆಗೆದುಕೊಂಡು ಕೊಳ್ಳಿಯನ್ನು ಮುಂದಿಟ್ಟುಕೊಂಡು ಸ್ಮಶಾನಕ್ಕೆ ಹೊರಡಬೇಕು । ಅಗ್ನಿಯು ಮುಂದೆ ಅದರ ಹಿಂದೆ ಶವ, ಅದರ ಹಿಂದೆ ಬಂಧುಗಳು ಹೀಗೆ ಹೊರಡಬೇಕು ॥

10. ಚೆಟ್ಟವನ್ನು ಎತ್ತಿಕೊಳ್ಳುವ ವಿಚಾರ

ಇಮೌ ಯುನಜ್ಮಿ ತೇ ವಹ್ನೀತ್ಯೇಷ ಮಂತ್ರೋ ನಿವರ್ತತೇ ।
ಮನುಷ್ಯ ಯಾನೇsಥಾದ್ಭರ್ಯುಃ ಪೂಷಾತ್ವೇತ ಇತಿ ತ್ವೃಚಾ ॥ 42 ॥

ಇಮೌಯುನಜ್ಮಿ ತೇ....., ಮಂತ್ರದಿಂದ ಶವವಾಹಕರನ್ನು ಕರೆಯಬೇಕು (ಅನುಮಂತ್ರಿಸಬೇಕು) । ಆಮೇಲೆ ಕರ್ತೃವು **ಪೂಷಾತ್ವೇತಃ.....**, ಎಂದು ಆರಂಭಿಸಿ 3 ಮಂತ್ರಗಳಿಂದ ಹೊರಡುವಾಗ ಪ್ರೇತನನ್ನು ಅಭಿಮಂತ್ರಿಸಬೇಕು ॥

ಆದೀಯಮಾನಂ ತಂ ಪ್ರೇತಮಭಿಮಂತ್ರ್ಯಾನಲಂ ಹರೇತ್ ।
ನಿವೀತಿನೋ ವಹೇಯುಸ್ತೇ ಜ್ಞಾತಯೋನ್ಯೇ ಚ ವಾಹಕಾಃ ॥ 43 ॥

ಎತ್ತಿಕೊಳ್ಳುವಾಗ, ಅಗ್ನಿಯನ್ನು ಮುಂದಿಟ್ಟುಕೊಂಡು, ನಿವೀತಿಗಳಾಗಿ । ಜ್ಞಾತಿಗಳೋ ಅಥವಾ ಬೇರೆ ವಾಹಕರೋ ಎತ್ತಿಕೊಂಡು ಹೋಗಬೇಕು ॥

11. ದಾರಿಯ ಮಧ್ಯದಲ್ಲಿ ಮಾಡಬೇಕಾದ ವಿಧಿಗಳ ವಿಚಾರ

ತುರೀಯಮಧ್ವನೋ ಗತ್ವಾ ನಿಧಾಯಾವರುಜೇತ್ತತಃ ।
ಲೋಷ್ಟಾನ್ ದಕ್ಷಿಣತಸ್ತೇಷು ಪ್ರತಿಷ್ಠಾಪ್ಯ ಚರುಂ ಸ್ವಯಮ್ ॥ 44 ॥

ದಾರಿಯ 4 ನೇ ಒಂದು ಭಾಗಕ್ಕೆ ಹೋಗಿ ಅಲ್ಲಿ ಶವವನ್ನಿಟ್ಟು, ನೆಲವನ್ನು ಗುಡಿಸಿ, ದಕ್ಷಿಣಭಾಗದಲ್ಲಿ 3 ಮಣ್ಣಿನ ಉಂಡೆಗಳನ್ನು ಇಟ್ಟುಕೊಂಡು ಚರುವನ್ನು ಆ ಉಂಡೆಗಳಮೇಲೆ ಹಾಕಬೇಕು ॥

ದಕ್ಷಿಣಾನ್ ಕೇಶ ಪಕ್ಷಾನ್ ಉದ್ಧೃತ್ಯ ಸವ್ಯಾನ್ ವಿಸೃಜ್ಯ ಚ ।
ದಕ್ಷಿಣಾನೂರೂನ್ ಆಘ್ನಾನಾ ಧೂನ್ವಂತಃ ಸಿಗ್ಭಿರೇವ ಚ ॥ 45 ॥

ಕೂದಲಿನ ಬಲಭಾಗದ ಅರ್ಧಭಾವನ್ನು ಗಂಟುಹಾಕಿ, ಎಡಭಾಗವನ್ನು ಬಿಚ್ಚಬೇಕು। ಬಲತೊಡೆಯನ್ನು ತಟ್ಟುತ್ತಾ, ಬಟ್ಟೆಯ ಅಂಚನ್ನು ಬೀಸುತ್ತಾ ಅಪ್ರದಕ್ಷಿಣೆಯಾಗಿ ಶವವನ್ನು 3 ಸಲ ಸುತ್ತಬೇಕು ॥

ಕನಿಷ್ಠ ಪ್ರಥಮಾಸ್ಸರ್ವೇ ಸ್ತ್ರಿಯಃ ಅಗ್ರೇ ಸರ್ವಕರ್ಮಸು ।
ಅಪನಶ್ಯೋಶುಚದಿತಿ ತ್ರಿಃ ಪ್ರಸವ್ಯಂ ಪರೀಯತೇ ॥ 46 ॥

ಚಿಕ್ಕವನನ್ನು ಮುಂದಿಟ್ಟುಕೊಂಡು ಅಥವಾ ಸ್ತ್ರೀಯರನ್ನು ಮುಂದಿಟ್ಟುಕೊಂಡು **ಅಪನಶ್ಯೋಶುಷತ್**....., ಎಂಬ ಮಂತ್ರವನ್ನು ಹೇಳುತ್ತಾ ಶವವನ್ನು ಸುತ್ತಬೇಕು ॥

ಸವ್ಯಾನುದ್ಧೃತ್ಯ ವಿಸ್ರಸ್ಯ ದಕ್ಷಿಣಾಂಸ್ತು ಪ್ರದಕ್ಷಿಣಮ್ ।
ಕುರ್ವಂತೋನಭಿ ಧೂನ್ವಂತೋ ಮಂತ್ರಮುಚ್ಚಾರ್ಯ ಪೂರ್ವವತ್ ॥ 47 ॥

ಹೀಗೆಯೇ ಎಡಭಾಗದ ಕೂದಲನ್ನು ಗಂಟುಹಾಕಿ ಬಲಭಾಗದ ಕೂದಲನ್ನು ಬಿಚ್ಚಿ। ಪ್ರದಕ್ಷಿಣೆಯಾಗಿ ಹಿಂದಿನಂತೆ ಬಟ್ಟೆಯ ಅಂಚನ್ನು ಬೀಸುತ್ತಾ, ಅದೇಮಂತ್ರವನ್ನು ಹೇಳುತ್ತಾ ಪ್ರದಕ್ಷಿಣೆಯಾಗಿ ಸುತ್ತಬೇಕು ॥

ಮೇಕ್ಷಣೇನಾಥ ಲೋಷ್ಟೇಷು ಸಂಸ್ಕರ್ತಾ ತ್ರಿಃಪ್ರಯೌತ್ಯಥ ।
ಚತುರ್ಥ್ಯಂತೇ ನ ವೈ ದದ್ಯಾತ್ ಪ್ರಥಮಾಧ್ವನಿ ಪಿಂಡಕಮ್ ॥ 48 ॥

ಮರದಸೌಟಿನಿಂದ ಮಣ್ಣಿನುಂಡೆಯಮೇಲೆ ಕರ್ತೃವು 3 ಸಲ ಚರುವನ್ನು ಕೂಡಿಸುತ್ತಾ, ಪ್ರೇತನಾಮದ ಚತುರ್ಥ್ಯಂತದಲ್ಲಿ ಮೊದಲನೆಯ ದಾರಿಯಭಾಗದಲ್ಲಿ ಪಿಂಡವನ್ನು (ಚರುವಿನ) ಕೊಡಬೇಕು ॥

ಅಧ್ವನೋರ್ದ್ವೇ ತೃತೀಯೇ ಚ ಗತ್ವಾ ಪೂರ್ವವದಾಚರೇತ್ ।
ಶವಾನುಮಂತ್ರಣಂ ದ್ವಾಭ್ಯಾಂ ಪೂಷೇಮಾ, ಆಯುರಿತ್ಯಥ ॥ 49 ॥

ಮುಂದಿನ ದಾರಿಯಲ್ಲೂ 3 ನೇ ಭಾಗದಲ್ಲೂ, ಹೋದಾಗ ಹೀಗೆಯೇ ಶವವನ್ನಿಟ್ಟುಕೊಂಡು ಮೊದಲನೇ ಭಾಗದಲ್ಲಿ ಮಾಡಿದಂತೆಯೇ ಅಷ್ಟೂ ಕ್ರಿಯೆಗಳನ್ನು ಮಾಡಬೇಕು । **ಪೂಷೇಮಾ..... ಮತ್ತು ಆಯುರ್ವಿಶ್ವಾಯುಃ.....,** ಎಂಬ 2 ಮಂತ್ರಗಳಿಂದ ಕರ್ತೃವು ಶವವನ್ನು ಅನುಮಂತ್ರಣೆ(ಮುಟ್ಟುವುದು) ಮಾಡಬೇಕು ॥

ಕಪಾಲಾನಿ ತಥಾ ಭಿಂದ್ಯಾದ್ಯಥೈಷ್ವಂಭೋ ನ ತಿಷ್ಠತಿ ।
ಚತುರ್ಥಮಧ್ವನೋ ದೇಶಂ ತೂಷ್ಣೀಂ ಗತ್ವಾ ನಿಧಾಯ ತಂ ॥ 50 ॥

ದಾರಿಯ 4 ನೇ ಭಾಗಕ್ಕೆ ಹೋದಾಗ ಆ ಚರುಗಡಿಗೆಯನ್ನು ನೀರು ನಿಲ್ಲದಂತೆ ಒಡೆದುಹಾಕಿ, ಸುಮ್ಮನೆ ಶವವನ್ನು ಕೆಳಗೆ ಇಡಬೇಕು(ದಹನದೇಶದ ಪಶ್ಚಿಮದಲ್ಲಿ) ॥

12. ಸ್ಮಶಾನವನ್ನು ಸಿದ್ಧಮಾಡಿಕೊಳ್ಳುವ ವಿಚಾರ

ಪಶ್ಚಾದ್ದಹನ ದೇಶಸ್ಯ ಸಮುತ್ಕ್ರಮಂತ್ಯುದನ್ ಮುಖಾಃ ।
ತತಃ ಪ್ರತ್ಯೇತ್ಯ ಸಂಸ್ಕರ್ತಾಪ್ಯಾರ್ದ್ರಯಾ ಪರ್ಣಶಾಖಯಾ ॥ 51 ॥

ಆಮೇಲೆ ಎಲ್ಲರೂ ಉತ್ತರಾಭಿಮುಖವಾಗಿ ದಹನದೇಶದಿಂದ ಹೊರಕ್ಕೆ ಹೋಗಬೇಕು । ನಂತರ ಕರ್ತೃವು ಪುನಃ ದಹನದೇಶಕ್ಕೆ ವಾಪಸ್ಸುಬಂದು, ಹಸಿಯಾದ (ಮುತ್ತುಗ/ಬನ್ನಿ) ಮರದ ಕೊಂಬೆಯಿಂದ ॥

ದೇಶಂ ಯಮಾಯ ಬುದ್ಧ್ಯಾತು ಶ್ಮಶಾನಾರ್ಥಂ ಸಮಂ ತತಃ ।
ಸಂಮಾಷ್ಟ್ಯಪೇತವೀತೇತಿ ಶಾಖಾಂ ದಕ್ಷಿಣತಃ ತ್ಯಜೇತ್ ॥ 52 ॥

ಯಮನ ಜಾಗವೆಂದು ನೆನೆಪಿಸಿಕೊಂಡು ಸ್ಮಶಾನಕ್ಕೋಸ್ಕರವಾಗಿ ಅಪೇತವೀತ ಮಂತ್ರದಿಂದ ಸಮತಲವಾಗಿ ಗುಡಿಸಬೇಕು । ಆ ಕೊಂಬೆಯನ್ನು ದಕ್ಷಿಣಕ್ಕೆ ಬಿಸಾಕ ಬೇಕು ॥

ಅಪೇತವೀತ ಮಂತ್ರಸ್ಸ್ಯಾತ್ ಪೈತೃಮೇಧಿಕ ಪಾಠತಃ ।
ಉಪಸ್ಪೃಶ್ಯಾಪ ಉದ್ಧತ್ಯಾಪ್ಯಭ್ರಿಯಾದ್ಭಿಃ ಪ್ರವೋಕ್ಷ್ಯ ಚ ॥ 53 ॥

ಅಪೇತವೀತ....., ಮಂತ್ರವನ್ನು ಪಿತೃಮೇಧಪಾಠದಂತೆ ಹೇಳಬೇಕು । ಆಮೇಲೆ ಕೈತೊಳೆದುಕೊಂಡು ಒಂದು ಚೂಪಾದ ಕೋಲಿನಿಂದ ನೆಲವನ್ನು ಕೊಚ್ಚಿ, ನೀರನ್ನು ಚುಮುಕಿಸಬೇಕು ॥

ಚಿತಿಂ ಸಮ್ಯಕ್ ಸುವರ್ಣಸ್ಯ ತನ್ಮಧ್ಯೇ ಶಕಲಂ ನ್ಯಸೇತ್ ।
ಸಂಸ್ತೀರ್ಯ ದರ್ಭಾನಿಹ ದಕ್ಷಿಣಾಗ್ರಾನ್
ಯಜ್ಞೀಯ ಕಾಷ್ಠೈರಪಿ ದಕ್ಷಿಣಾಗ್ರೈಃ ॥ 54 ॥

ಆ ಜಾಗದಲ್ಲಿ ದಾರುಚಿತಿ(ಮರದತುಂಡಗಳನ್ನು ಹಾಸಬೇಕು) ಮಾಡಬೇಕು । ಅದರ ಮಧ್ಯದಲ್ಲಿ ಚಿನ್ನದಚೂರನ್ನು ಇಡಬೇಕು । ದಕ್ಷಿಣಾಗ್ರವಾಗಿ ದರ್ಭೆಗಳನ್ನು ಹರಡ ಬೇಕು । ಯಜ್ಞೀಯ ಮರದ ತುಂಡುಗಳನ್ನೂ ದಕ್ಷಿಣಾಗ್ರವಾಗಿ ಜೋಡಿಸಬೇಕು ॥

ಚಿತಿಂ ಚಿತ್ವಾ ನಿಧಾಯಾಗ್ನಿಂ ಪುರಸ್ತಾದ್ವಿಪರೀತಕಮ್ ।
ಪ್ರಾಗ್ದಕ್ಷಿಣಾಗ್ರಕೈಃ ದರ್ಭೈಃ ಅಗ್ನಿಂ ದಾರುಚಿತಿಂ ತಥಾ ॥ 55 ॥

ಚಿತಿಯನ್ನು ಚಯನ(ಕೂಡಿಸಿದ)ಮಾಡಿದ ಮೇಲೆ ಔಪಾಸನಾಗ್ನಿಯನ್ನು ಅದರ (ಚಿತಿಯ) ಪೂರ್ವದಲ್ಲಿ(ಮುಂದೆ) ಇಡಬೇಕು । ಪೂರ್ವಾಗ್ರವಾಗಿ, ದಕ್ಷಿಣಾಗ್ರವಾಗಿ ಅಗ್ನಿ ಯನ್ನೂ ದಾರುಚಿತಿಯನ್ನೂ ಸೇರಿಸಿ ಪರಿಸ್ತರಣವನ್ನು ದರ್ಭೆಗಳಿಂದ ಹಾಕಬೇಕು ॥

ಪರಿಸ್ತೀರ್ಯಾಥ ಸಂಸ್ತೀರ್ಯ ದರ್ಭಾನ್ ದಕ್ಷಿಣತಃ ಚಿತೇಃ ।
ಪಶ್ಚಾದ್ವಾ ದಕ್ಷಿಣಾಗ್ರಾಂಸ್ತು ತೇಷು ಪಾತ್ರಾಣಿ ಸಾದಯೇತ್ ॥ 56 ॥

ಹೀಗೆ ದರ್ಭೆಗಳನ್ನು ಹಾಕಿದಮೇಲೆ ಚಿತಿಯ ದಕ್ಷಿಣದಕಡೆ ಅಥವ ಪಶ್ಚಿಮದಕಡೆಯಲ್ಲಿ ದಕ್ಷಿಣಾಗ್ರವಾಗಿ ದರ್ಭೆಗಳನ್ನು ಹರಡಿ, ಅವುಗಳಲ್ಲಿ ಪಾತ್ರಾಸಾದನ(ಇಡುವುದು) ಮಾಡುವುದು ॥

ಏಕೈಕಶೋ ಯಥಾಪೂರ್ವಂ ದಕ್ಷಿಣಾಪ್ರಾಂಚ್ಯಶೇಷತಃ ।
ಸ್ರುವಂ ಚ ಪ್ರೋಕ್ಷಣೀಂ ಚೈವ ಚಾಜ್ಯಸ್ಥಾಲೀಂ ನಿಧಾಯ ಚ ॥ 57 ॥

ಒಂದೊಂದಾಗಿ ಪಾತ್ರೆಗಳನ್ನು ಹಿಂದಿನಂತೆ ದಕ್ಷಿಣಾಪೂರ್ವಕ್ಕೆ (ಆಗ್ನೇಯಕ್ಕೆ) ಮುಗಿಯುವಂತೆ ಸ್ರುವವನ್ನೂ ಪ್ರೋಕ್ಷಣಿಯನ್ನೂ, ಆಜ್ಯಪಾತ್ರೆಯನ್ನೂ ಇಡಬೇಕು ॥

13. ಶವವನ್ನು ಚೆಟ್ಟದಿಂದ, ಚಿತೆಯಮೇಲೆ ಮಲಗಿಸುವ ವಿಚಾರ

ಅವಕೃತ್ಯ ತತೋ ರಜ್ಜೂರಾಸಂದೀಮಪವಿಧ್ಯ ಚ ।
ಕೃಷ್ಣಾಜಿನೇ ರಜ್ಜುಷು ಚ ದಕ್ಷಿಣಾಶಿರಸಂ ಮೃತಮ್ ॥ 58 ॥

ಆಮೇಲೆ ಶವಕ್ಕೆ ಕಟ್ಟಿದ ಹಗ್ಗಗಳನ್ನು ಕತ್ತರಿಸಿ, ಆಸಂದಿ(ಚೆಟ್ಟ)ಯಿಂದ ಸಡಿಲಮಾಡಿ ಕೃಷ್ಣಾಜಿನದಲ್ಲಿ ಹಗ್ಗದಮೇಲೆ ದಕ್ಷಿಣದಿಕ್ಕಿಗೆ ತಲೆಯಾಗುವಂತೆ ದಾರುಚಿತಿಯ ಮೇಲೆ ಮೇಲ್ಮುಖವಾಗಿ ಶವವನ್ನು ಇಡಬೇಕು ॥

ಉತ್ತಾನಂ ಸನ್ನಿಪಾತ್ಯೈನಂ ಪವಿತ್ರ ಕರಣಂ ತತಃ ।
ಪ್ರೋಕ್ಷಣೀಸ್ತೇನ ಸಂಸ್ಕೃತ್ಯ ಪ್ರೇತಂ ದಾರುಚಿತಿಂ ತಥಾ ॥ 59 ॥

ಒಂದು ದರ್ಭೆಯ ಪವಿತ್ರವನ್ನು ಮಾಡಿಕೊಂಡು, ಪ್ರೋಕ್ಷಣಿಯಲ್ಲಿ ನೀರನ್ನು ಹಾಕಿ ಉತ್ಪವನ(ಸಂಸ್ಕಾರಮಾಡಿ) ಮಾಡಿ ಆ ನೀರಿನಿಂದ ಪ್ರೇತವನ್ನೂ ದಾರುಚಿತಿಯನ್ನೂ ಪ್ರೋಕ್ಷಿಸಬೇಕು ॥

ಉತ್ತಾನೀಕೃತ್ಯ ಪಾತ್ರಾಣಿ ಪ್ರೋಕ್ಷೇತ್ ಸರ್ವಂ ನ ಶೇಷಯೇತ್ ।
ವಿಲಾಪ್ಯಾಗ್ನೌ ಗೃಹೀತ್ವಾಜ್ಯ ಸ್ಥಾಲ್ಯಾಂ ಸಂಸ್ಕಾರಮಾಚರೇತ್ ॥ 60 ॥

ಪಾತ್ರೆಗಳನ್ನು ಮೇಲ್ಮುಖಮಾಡಿ, ನೀರನ್ನು ಪೂರ್ಣವಾಗಿ ಆ ಪಾತ್ರೆಗಳಿಗೆ ಪ್ರೋಕ್ಷಿಸಬೇಕು ಉಳಿಸಬಾರದು । ಅಗ್ನಿಯಲ್ಲಿ ಆಜ್ಯವನ್ನು ಕರಗಿಸಿಕೊಂಡು, ಆಜ್ಯಸ್ಥಾಲಿಯಲ್ಲಿ ಸಂಸ್ಕಾರಮಾಡಬೇಕು ॥

14. ಚಿನ್ನವನ್ನು ಶವದ ಅಂಗಗಳ ಮೇಲೆ ಇಡುವ ವಿಚಾರ

ಹಸ್ತೌ ಸುವರ್ಣೇನ ಸಕೃತ್ ಸುವರ್ಣಂ ।
ಹಸ್ತಾದಿತಿ ಪ್ರೋಚ್ಯ ನಿಮಾರ್ಷ್ಟಿ ತಸ್ಯ ।
ಕ್ಷತ್ರಸ್ಯ ಹಸ್ತೌ ಧನುಷಾ ದ್ವಿತೀಯಯಾ ।
ವೈಶ್ಯಸ್ಯ ಹಸ್ತೌ ಮಣಿನಾ ತೃತೀಯಯಾ ॥ 61 ॥

ಶವದ 2 ಕೈಗಳನ್ನೂ ಚಿನ್ನದ ತಂತಿಯಿಂದ ಸುವರ್ಣಗ್ಂ....., ಮಂತ್ರವನ್ನು ಹೇಳುತ್ತಾ ತಿಕ್ಕಬೇಕು । ಸತ್ತವನು ಕ್ಷತ್ರಿಯನಾಗಿದ್ದರೆ ಧನುರ್ಹಸ್ತ....., ಮಂತ್ರದಿಂದ ಹಾಗೂ ಸತ್ತವನು ವೈಶ್ಯನಾಗಿದ್ದರೆ ಮಣಿಗ್ಂ....., ಮಂತ್ರದಿಂದಲೂ ತಿಕ್ಕಬೇಕು ॥

ದಕ್ಷಿಣಾ ಶಿರಸಂ ಪ್ರೇತಂ ಚಿತಾವಧ್ಯೂಹಯೇದಥ ।
ಪ್ರಾಣಸ್ಥಾನೇಷು ಸರ್ವೇಷು ಹಿರಣ್ಯ ಶಕಲಾನ್ ಕ್ಷಿಪೇತ್ ॥ 62 ॥

ಆಮೇಲೆ ಆ ಚಿತಿಯಮೇಲೆ ಪ್ರೇತನನ್ನು ದಕ್ಷಿಣದಿಕ್ಕಿಗೆ ತಲೆಯಾಗುವಂತೆ ಇಡಬೇಕು । ಇಂದ್ರಿಯಗಳ ಜಾಗಗಳಲ್ಲಿ ಚಿನ್ನದ ಚೂರುಗಳನ್ನು ಮುಂದಿನಮಂತ್ರಗಳನ್ನು ಹೇಳುತ್ತಾ, ಹಾಕಬೇಕು ॥

ಯಥಾ ದ್ರಪ್ಸಶ್ಚಸ್ಕಂದೇತಿ ಮಹಾಗ್ನಾವಾಸ್ಯತಃ ಕ್ರಮಾತ್ ।
ಅಭಾವೇತು ಹಿರಣ್ಯಸ್ಯ ಘೃತಬಿಂದೂನ್ ವಿನಿಕ್ಷಿಪೇತ್ ॥ 63 ॥

ಹೇಗೆಂದರೆ– ಮಹಾಗ್ನಿಚಯನವನ್ನು ಮಾಡಿದ ಆಹಿತಾಗ್ನಿಗೆ, ದ್ರಪ್ಸಶ್ಚಸ್ಕಂದ....., ಎಂಬ ಮಂತ್ರವನ್ನು ಹೇಳಿ, ಮುಖದಿಂದ ಕ್ರಮವಾಗಿ ಚಿನ್ನದಚೂರುಗಳನ್ನು ಹಾಕ ಬೇಕು । ಚಿನ್ನವಿಲ್ಲದಿದ್ದರೆ, ತುಪ್ಪದ ಬಿಂದುಗಳನ್ನು ಹಾಕಬೇಕು ॥

15. ಚಿತೆಗೆ ಯಾವ ರೀತಿ ಅಗ್ನಿಯನ್ನು ಹತ್ತಿಸಬೇಕೆನ್ನುವ ವಿಚಾರ

ತಂಡುಲಾನ್ ತಿಲಮಿಶ್ರಾನ್ ವೈ ಪ್ರೇತಸ್ಯಾಸ್ಯೇ ತು ನಿಕ್ಷಿಪೇತ್ ।
ಔಪಾಸನಾಗ್ನಿಮಾದಾಯ ಶವವತ್ಯಾಂ ಚಿತೌ ದಹೇತ್ ॥ 64 ॥

ಎಳ್ಳುಸೇರಿದ ಅಕ್ಕಿಕಾಳುಗಳನ್ನು ಪ್ರೇತನ ಮುಖದಲ್ಲಿ ಹಾಕಬೇಕು । ಔಪಾಸನಾಗ್ನಿಯನ್ನು ತೆಗೆದುಕೊಂಡು ಶವವಿರುವ ದಾರುಚಿತಿಯನ್ನು ಸುಡಬೇಕು ॥

ಅಗ್ನಿಕ್ಷೇಪೋ ನಾಧಿಶವಂ ಶ್ರುತಾವಾಹುತಿ ದರ್ಶನಾತ್ ।
ಆಹುತ್ಯುಪರಿ ವಿಕ್ಷೇಪಾತ್ತತ್ಕರ್ಮ ವಿಫಲಂ ಭವೇತ್ ॥ 65 ॥

ಶವದಮೇಲೆ ಅಗ್ನಿಯನ್ನು ಹಾಕಬಾರದು, ವೇದದಲ್ಲಿ ಶವವು ಆಹುತಿಸ್ಥಾನವೆಂದು ಹೇಳಿರುವುದರಿಂದ । ಆಹುತಿಯಮೇಲೆ ಅಗ್ನಿಯನ್ನು ಹಾಕಿದರೆ, ಆ ಕರ್ಮವು ವಿಫಲವಾಗುತ್ತದೆ ॥

ಚಿತೌ ದಹನಮೇತೇಷಾಂ ದ್ವಿಜಾನಾಂ ಸರ್ವಸೂತ್ರಿಣಾಂ ।
ತದ್ವಸಾದ್ದಹನಂ ಲಬ್ಧಾ ಮೃತಾ ಬ್ರಹ್ಮ ಸಮಾಪ್ನುಯುಃ ॥ 66 ॥

ಎಲ್ಲ ದ್ವಿಜರಿಗೆ(ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ) ಹೀಗೆ ಚಿತಿಯಲ್ಲಿ ದಹನ ಮಾಡಬೇಕು । ಹೀಗೆ ದಹನವನ್ನು ಪಡೆದವರೆಲ್ಲರೂ ಬ್ರಹ್ಮಲೋಕವನ್ನು ಸೇರುತ್ತಾರೆ ॥

16. ಉಪಸ್ಥಾನ

ಮೈನಮಗ್ನೇ, ಶೃತಮಿತಿ ಮಂತ್ರಾಭ್ಯಾಂ ಚ ಚಿತೌ ಕ್ಷಿಪೇತ್ ।
ಸೂರ್ಯಂತೇ ಚಕ್ಷುರಿತ್ಯೇನಮುಪಸ್ಥಾಯ ಮೃತಂ ತತಃ ॥ 67 ॥

ಮೈನಮಗ್ನೇ ಮತ್ತು ಶೃತಂಯದಾ....., ಎಂಬ 2 ಮಂತ್ರಗಳಿಂದ ಅಗ್ನಿಯನ್ನು ಚಿತಿಯಲ್ಲಿ ಇಡಬೇಕು । ಸೂರ್ಯಂತೇ ಚಕ್ಷುಃ....., ಎಂಬ ಮಂತ್ರದಿಂದ ಮೃತನನ್ನು(ಚಿತಿಯನ್ನು) ಉಪಸ್ಥಾನಮಾಡಬೇಕು ॥

17. ಚಿತೆಯ ಹೊಗೆಯಿಂದ, ಸತ್ತವನ ಮುಂದಿನ ಗತಿಯನ್ನು ತಿಳಿಯುವ ರೀತಿ

ಅತ್ರೈವತು ವಿಜಾನೀಯಾತ್ ಪ್ರೇತಧೂಮಸ್ಯ ನಿರ್ಗಮಮ್ ।
ಯದ್ಧೂಮೋರ್ಧ್ವೋ ಧೂಮ ಉತ್ತಿಷ್ಠೇದ್ಯುಸ್ಥೈಃ ದೇವೈಸ್ಸಹೇತ್ಯಯಮ್ ॥ 68 ॥

ಇಲ್ಲಿಯೇ ಪ್ರೇತಧೂಮದ ಮಾರ್ಗವನ್ನು ನೋಡಿ ಹೀಗೆ ತಿಳಿಯಬೇಕು । ಧೂಮವು ಮೇಲ್ಮುಖವಾಗಿ ಎದ್ದರೆ, ದ್ಯುಲೋಕದದೇವತೆಗಳ ಜೊತೆ ಇವನು ಸೇರುತ್ತಾನೆ ॥

ಯದ್ಯದಂತರಿಕ್ಷಂ ತತ್ರಸ್ಥೈಃ ಪೃಥಿವೀಂ ಪೃಥಿವೀತತೈಃ ।
ಜ್ಞಾತ್ವೈವಾಥ ಚಿತೇಃ ಪಶ್ಚಾತ್ ರಜ್ವಾ ದುರ್ಬಲ ಯಾಚಿತೌ ॥ 69 ॥

ಆಕಾಶದಲ್ಲಿ ಹೊಗೆಯು ಹರಡಿದರೆ ಅಲ್ಲಿರುವ ದೇವತೆಗಳಜೊತೆ ಇವನು ಸೇರುತ್ತಾನೆ । ಭುಮಿಯಲ್ಲಿ ಹರಡಿದರೆ, ಭೂಮಿಯಲ್ಲಿರುವವರ ಜೊತೆ ಸೇರುತ್ತನೆ ಎಂದು ತಿಳಿಯಬೇಕು । ಚಿತಿಯ ಪಶ್ಚಿಮಭಾಗದಲ್ಲಿ ದುರ್ಬಲವಾದ ಹಗ್ಗವನ್ನು ಚಿತಿಗೆ ಸೇರಿಸಿ ॥

18. ಆಡಿನ(ಮೇಕೆ) ಅವಶ್ಯಕತೆ

ಅಜಂ ಬಧ್ವಾ ದ್ರವಂತಂ ತಂ ಅಜ ಇತ್ಯನುಮಂತ್ರಯೇತ್ ।
ಅಗ್ನೇಃ ಪಶ್ಚಾತ್ ಸ್ಥಿತೋ ವಹ್ನಿಂ ಪರಿಷಿಚ್ಯ ಸ್ರುವಾಹುತೀಃ ।
ಪ್ರತಿಸ್ವಾಹಾಕೃತಂ ಹೋಮೋ ಯ ಏತಸ್ಯೇತಿ ಹಿ ಕ್ರಮಾತ್ ॥ 70 ॥

ಆಡನ್ನು ಕಟ್ಟಿದ್ದು, ಅದು ಬಿಚ್ಚಿಕೊಂಡು ಓಡುತ್ತಿರುವಾಗ ಅಜೋಭಾಗಃ....., ಎಂಬ ಮಂತ್ರವನ್ನು ಹೇಳಬೇಕು । ಅಗ್ನಿಯ ಪಶ್ಚಿಮದಲ್ಲಿ ಪೂರ್ವಾಭಿಮುಖವಾಗಿ ನಿಂತುಕೊಂಡು, ಶವಾಗ್ನಿಗೆ ಪೂರ್ವಪರಿಷೇಚನವನ್ನು ಮಾಡಿ । ನಂತರ ಸ್ರುವದಿಂದ ಆಜ್ಯವನ್ನು ತೆಗೆದುಕೊಂಡು ಶವಾಗ್ನಿಯಲ್ಲಿ ಯ ಏತಸ್ಯ....., ಎಂಬ ಅನುವಾಕ ಮಂತ್ರಗಳಿಂದ ಪ್ರತಿಸ್ವಾಹಾಕಾರಾಂತವಾಗಿ ಹೋಮಿಸಬೇಕು ॥

ಪ್ರಹೃತ್ಯಾತ್ರ ಸ್ರುವಂ ವಹ್ನೌ ಪಶ್ಚಾತ್ ದರ್ಭಾಂಸ್ತು ನಿಕ್ಷಿಪೇತ್ ।
ನಿರಸ್ಯ ತೂಷ್ಣೀಂ ಸ್ಪಷ್ಟ್ವಾಪಸ್ತೂಷ್ಣೀಂ ಹೋತೃ ವದಾಸನಮ್ ॥ 71 ॥

ಹೋಮ ಮಾಡಿದ ಸ್ರುವವನ್ನು ಅಗ್ನಿಯಲ್ಲಿ ಹಾಕಬೇಕು ಬಳಿಕ ದರ್ಭೆಯನ್ನು ಹಿಂದಕ್ಕೆ ಎಸೆಯಬೇಕು । ನಂತರ ಸುಮ್ಮನೆ ಕೈತೊಳೆದುಕೊಂಡು, ಸುಮ್ಮನೆ ಪದ್ಮಾಸನದಲ್ಲಿ ಕೂರಬೇಕು ॥

ಪ್ರಕೇತುನೇತಿ ಸೂಕ್ತೇನ ನವರ್ಚೇನಾನು ಶಂಸತಿ ।
ಅರ್ಧರ್ಚ ಶಸ್ತ್ವನಭ್ಯಸ್ಯ ಯಾಮ್ಯಸೂಕ್ತಮಿತಿ ಸ್ಮರನ್ ॥ 72 ॥

ಪ್ರಕೇತುನಾ ಎಂಬ 9 ಮಂತ್ರಗಳಿರುವ ಯಮಸೂಕ್ತವನ್ನು । ಪ್ರತಿವಾಕ್ಯಕ್ಕೂ ಉಸಿರನ್ನು ಎಳೆದುಕೊಂಡು, 18 ವಾಕ್ಯಗಳನ್ನೂ ಹೇಳಬೇಕು ॥

19. ಕರ್ಷು(ಗುಂಡಿ) ಸ್ನಾನ ವಿಚಾರ

ಪಶ್ಚಾತ್ ದಹನದೇಶಸ್ಯ ಕರ್ಷೂಃ ಪಶ್ಚಾತ್ ಸಮಾಪನಾಃ ।
ತಿಸ್ರಃ ಖಾತ್ವಾ ತತಸ್ತಾಸು ಸಿಂಚೇತ್ ಜಲಮಯುಘ್ಮಟೈಃ ॥ 73 ॥

ಕರ್ಷಸ್ನಾನಕ್ಕೋಸ್ಕರ ಚಿತಿಯ ಹಿಂಭಾಗದಲ್ಲಿ 3 ಗುಂಡಿಗಳನ್ನು ಮಾಡಿ । ನೀರನ್ನು ಬೆಸಸಂಖ್ಯೆಯ ಪಾತ್ರೆಗಳಿಂದ ಹಾಕಬೇಕು ॥

ಅಶ್ಮಭಿಃ ಸಿಕತಾಭಿಶ್ಚ ಸಂಪ್ರಕೀರ್ಯಾಥ ಬಾಂಧವಾಃ ।
ಅಶ್ಮನ್ವತೀರಿತ್ಯೇತಾಸು ಸರ್ವೇ ಕುರ್ಯುರಿದಂ ಕ್ರಮಾತ್ ॥ 74 ॥

ಆ ಗುಂಡಿಗಳಿಗೆ ಕಲ್ಲು ಮತ್ತು ಮರಳನ್ನು ಸ್ವಲ್ಪ ಹಾಕಬೇಕು । ನಂತರ ಅಶ್ಮನ್ವತೀ....., ಎಂಬ ಮಂತ್ರದಿಂದ ಎಲ್ಲರೂ ಪ್ರೋಕ್ಷಣೆಯನ್ನು(ಸ್ನಾನ) ಕ್ರಮವಾಗಿ ಮಾಡಿಕೊಳ್ಳಬೇಕು ॥

ಶಮೀಶಾಖೇ ಪಲಾಶಸ್ಯ ಶಾಖೇ ವಾ ಶುಲ್ಬ ಸಂಹಿತೇ ।
ಅಗ್ರೇ ತೋರಣವತ್ ನ್ಯಸ್ಯ ಯದ್ವೈ ದೇವಸ್ಯ ಇತಿ ಋಚಾ ॥ 75 ॥

ಶಮೀ(ಬನ್ನಿ) ಅಥವ ಪಲಾಶದ(ಮುತ್ತುಗ) ಕೋಲನ್ನು ನೆಟ್ಟು, ದರ್ಭೆಯಿಂದ ತೋರಣದಂತೆ ಕಟ್ಟಿ । ಯದ್ವೈದೇವಸ್ಯ....., ಎಂಬ ಮಂತ್ರದಿಂದ ಚಿಕ್ಕವರಿಂದ ಮೊದಲುಗೊಂಡು ಎಲ್ಲರೂ ॥

ನಿರ್ಗಚ್ಛಂತಿ ಅಂತರಾಸ್ಸರ್ವೇಥಾಧ್ವರ್ಯುಃ ಪೃಷ್ಠತಃಸ್ಥಿತಃ ।
ಯಾ ರಾಷ್ಟ್ರಾದಿತಿ ಶಾಖೇ ಜಘನೇನ ವ್ಯುದಸ್ಯತು ॥ 76 ॥

ಆ ತೋರಣದ ಅಡಿಯಲ್ಲಿ ನುಗ್ಗಬೇಕು, ಕರ್ತೃವು ಕೊನೆಯಲ್ಲಿ । ಯಾ ರಾಷ್ಟ್ರಾತ್....., ಎಂಬ ಮಂತ್ರವನ್ನು ಹೇಳುತ್ತಾ, ಆ ತೋರಣವನ್ನು ಕತ್ತರಿಸಬೇಕು ॥

20. ಸ್ನಾನ ಮತ್ತು ಸೂರ್ಯನ ಉಪಸ್ಥಾನ

ಉಪಸ್ಪೃಶ್ಯಾಪಸ್ಸರ್ವೇ ತೇ ಭೂತ್ವಾ ಯಜ್ಞೋಪವೀತಿನಃ ।
ಸ್ಪೃಷ್ಟ್ವಾಜಲಮಥಾದಿತ್ಯಂ ಉದ್ವಯಂ ತಮಸಸ್ಪರಿ ॥ 77 ॥

ಎಲ್ಲರೂ, ಯಜ್ಞೋಪವೀತವನ್ನು ಉಪವೀತಿಯಾಗಿ ಹಾಕಿಕೊಂಡು । ಕರ್ತೃವು ಕೈತೊಳೆದುಕೊಂಡು, ಉದ್ವಯಂ ತಮಸಸ್ಪರಿ....., ಎಂಬ ಮಂತ್ರವನ್ನು ಸೂರ್ಯನನ್ನು ನೋಡುತ್ತಾ, ಹೇಳಬೇಕು(ಉಪಸ್ಥಾನ) ॥

ಇತ್ಯುಪಸ್ಥಾಯ ತೋಯಾಂತಂ ಗತ್ವಾ ಧಾತೇತಿ ಗಾಹನಮ್ ।
ಕೃತ್ವಾ ಲೌಕಿಕಮಾಚಾರಂ ಜ್ಞಾತಯೋಥ ಜಲಾಶಯೇ ॥ 78 ॥

ಧಾತಾ....., ಎಂಬ ಮಂತ್ರದಿಂದ, ಜಲಾಶಯದಲ್ಲಿ ಸ್ಮಶಾನಕ್ಕೆ ಹೋಗಿದ್ದವರೆಲ್ಲಾ । ಪ್ರಾಚೀನಾವೀತಿಯಾಗಿ ಮುಳುಗುಸ್ನಾನ ಮಾಡಬೇಕು ॥

ಪ್ರಾಚೀನಾವೀತಿನೋ ಭೂತ್ವಾ ಸರ್ವೇ ಕೇಶಾನ್ ಪ್ರಕೀರ್ಯ ಚ ।
ಪಾಂಸೂನೋಪ್ಯೈಕ ವಸ್ತ್ರಾಶ್ಚ ದಕ್ಷಿಣಾಭಿಮುಖಾ ಜಲೇ ॥ 79 ॥

ಪ್ರಾಚೀನಾವೀತಿಯಾಗಿ, ಕೂದಲುಗಳನ್ನು ಕೆದರಿಕೊಂಡು । ಮಣ್ಣನ್ನು ದೇಹಕ್ಕೆ ತಿಕ್ಕಿಕೊಂಡು, ಒಂಟಿ ಬಟ್ಟೆಯಲ್ಲಿ, ದಕ್ಷಿಣದಿಕ್ಕನ್ನು ನೋಡುವರೀತಿಯಲ್ಲಿ ನಿಂತು ಎರಡನೆ ಮುಳುಗುಸ್ನಾನ ಮಾಡಬೇಕು ॥

ಉಪಮಜ್ಜ ಸಕೃದ್ಧಾತಾ ಪುನಾತ್ವಿತಿ ತತೋ ಜಲಾತ್ ।
ಉತ್ತೀರ್ಯ ಪೀಡಯಂತಶ್ಚ ವಾಸಾಂಸಿ ಉಪವಿಂಶತಿ ತೇ ॥ 80 ॥

ಪುನಃ ಧಾತಾಪುನಾತು....., ಮಂತ್ರವನ್ನು ಹೇಳುತ್ತಾ, ಮೂರನೆಯ ಸಲ ಮುಳುಗುಸ್ನಾನ ಮಾಡಿ ನೀರಿನಿಂದ ಮೇಲಕ್ಕೆ ಬಂದು । ಬಟ್ಟೆಯನ್ನು ಹಿಂಡಿಕೊಂಡು ಕುಳಿತುಕೊಳ್ಳಬೇಕು ॥

21. ಹತ್ತು ದಿನಗಳೂ ಮಾಡಬೇಕಾದ ಕರ್ಮದ ವಿಚಾರ

ತ್ರಿಃಕೃತ್ವಾ ಏವಮಪಾಮಂತೇ ಕೃತ್ವಾ ಉದಙ್ಮುಖಾಃ ।
ಅಪಿ ವಾ ಪ್ರಾಙ್ಮುಖಾ ವಿಪ್ರಾಃ ಸರ್ವೇ ವಾ ದಕ್ಷಿಣಾಮುಖಾಃ ॥ 81 ॥

3 ಸಲ ಹಿಂಡಿಕೊಂಡು, ಉತ್ತರದಿಕ್ಕಿಗೆ ಮುಖಮಾಡಿ, ಕೂರಬೇಕು । ಕರ್ತೃ ಹಾಗೂ ಜ್ಞಾತಿಗಳನ್ನು ಹೊರತುಪಡಿಸಿ ಉಳಿದ ಬ್ರಾಹ್ಮಣರು ಪೂರ್ವಕ್ಕೆ ಅಥವಾ ದಕ್ಷಿಣದಿಕ್ಕಿಗೆ ಮುಖಮಾಡಿ ಕೂರಬೇಕು ॥

ವಾಗ್ಯತಾ ಮನಸಾ ಪ್ರೇತಂ ಧ್ಯಾಯಂತೋ ಯಜ್ಞಶರ್ಮಣೇ ।
ಪ್ರೇತಾಯಾಮುಕ ಗೋತ್ರಾಯ ದದಾಮ್ಯುದಕ ಮಿತ್ಯತಃ ॥ 82 ॥

ಮೌನಿಗಳಾಗಿ, ಮನಸ್ಸಿನಿಂದ, ಸತ್ತವನನ್ನು ನೆನಪಿಸಿಕೊಳ್ಳುತ್ತಾ । ಈ ಹೆಸರಿನ, ಈ ಗೋತ್ರದ, ಸತ್ತವನಿಗೆ ನೀರನ್ನು ಅಂಜಲಿಗಳ ಮೂಲಕ ಕೊಡುತ್ತೇವೆ ಎಂದು ಸಂಕಲ್ಪಿಸಿ ॥

ತಿಲಮಿಶ್ರಂ ಜಲಂ ಸರ್ವೇ ತ್ರಿಃ ದತ್ವಾಂಜಲಿನಾ ವಟೇ ।
ಏತದೇಕೈಕಶೋ ವೃದ್ಧ್ಯಾ ಯಾವದಾಶೌಚಮಂಜಲಿಮ್ ॥ 83 ॥

ಸೂತಕವಿರುವವರೆಗೂ ತಿಲಾಂಜಲಿಯನ್ನು ಎಲ್ಲರೂ ಪ್ರತಿದಿನವೂ । ಒಂದೊಂದು ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತಾ, ಕೊಡಬೇಕು ॥

22. ದಕ್ಷಿಣೆಯ ವಿಚಾರ

ಕೃತ ಉದಕಾನ್ ಸಮುತ್ತೀರ್ಣಾನ್ ಮೃದುಶಾದ್ವಲ ಸಂಸ್ಥಿತಾನ್ ।
ಸ್ನಾತಾನ್ ಅಪವದೇಯುಸ್ತಾನ್ ಇತಿಹಾಸೈಃ ಪುರಾತನೈಃ ॥ 84 ॥

ಎಲ್ಲರೂ ಇದನ್ನು ಮಾಡಿದಮೇಲೆ, ನೀರಿನ ದಡದಲ್ಲಿನ ಹುಲ್ಲಿನಮೇಲೆ ಕುಳಿತು । ಸತ್ತವನ ಗುಣಗಾನ ಮಾಡಬೇಕು ॥

ವಿಪ್ರಾನ್ ಪ್ರದಕ್ಷಿಣೀಕೃತ್ಯ ದಂಡವತ್ ಪ್ರಣಮೇತ್ತತಃ ।
ವಿಭವಾನುಗುಣಂ ಬ್ರಹ್ಮದಂಡ ದ್ರವ್ಯಂ ಪ್ರದಾಪ್ಯ ಚ ॥ 85 ॥

ಕರ್ತೃವು, ಅಲ್ಲಿರುವ ಬ್ರಾಹ್ಮಣರನ್ನು ಪ್ರದಕ್ಷಿಣೆಮಾಡಿ, ನಮಿಸಿ । ತನ್ನ ದ್ರವ್ಯಕ್ಕೆ ಅನುಗುಣವಾಗಿ ಹಣವನ್ನು ದಾನಮಾಡಬೇಕು ॥

23. ವಪನ ಮತ್ತು ಮನೆಗೆ ಹೋಗುವಿಕೆ

ತೈರುಕ್ತಂ ಯಚ್ಚರಿತ್ರಂ ತತ್ ಕುರ್ಯಾತ್ ಸರ್ವಂ ವಿಚಾರ್ಯ ಚ ।
ತತಸ್ತು ವಪನಂ ಕುರ್ಯಾತ್ ಕಂಠಾದೂರ್ಧ್ವಂ ಶುಚಿಸ್ತದಾ ॥ 86 ॥

ಶಾಸ್ತ್ರಾದಿಗಳನ್ನು ತಿಳಿದಂತಹವರು ಹೇಳಿದಂತೆ ಎಲ್ಲವನ್ನೂ ವಿಚಾರಮಾಡಿ । ಆಮೇಲೆ ಕತ್ತಿನಿಂದ ಮೇಲಿನ ಭಾಗದ ಕೂದಲುಗಳನ್ನು ತೆಗಿಸಿಕೊಳ್ಳಬೇಕು(ಕ್ಷೌರ) ॥

ಪ್ರವಿಶೇಯುಸ್ತತೋಗ್ರಾಮಂ ಸರ್ವೇ ಬಾಲಪುರಸ್ಸರಾಃ ।
ವಿದಸ್ಯ ನಿಂಬಪತ್ರಾಣಿ ಸ್ಪೃಷ್ಟ್ವಾ ಸರ್ಷಪ ಗೋಮಯಮ್ ॥ 87 ॥

ಆಮೇಲೆ ಎಲ್ಲರೂ ಊರಿಗೆ ಹೋಗಿ ಮನೆಯ ಮುಂದೆ ಸಣ್ಣವರಿಂದ ಕ್ರಮವಾಗಿ । ಬೇವಿನ ಎಲೆಯನ್ನು ಮುಟ್ಟಿ, ಸಾಸಿವೆ ಮತ್ತು ಸಗಣಿಯನ್ನು ತಿಕ್ಕಿಕೊಂಡು, ಕೈಕಾಲುಗಳನ್ನು ಚೆನ್ನಾಗಿ ತೊಳೆದುಕೊಳ್ಳಬೇಕು ॥

ಗೃಹದ್ವಾರಿ ಸಹಾಮಾತ್ಯೈಸ್ತದೀಪಂ ಪ್ರವಿಶೇತ್ ಗೃಹಮ್ ।
ಸ ತಿಲಾನ್ ತಂಡುಲಾನ್ ಚೈವ ಮೃತದೇಶೇ ವಿಕೀರಯೇತ್ ॥ 88 ॥

ಮನೆಯ ಮುಂಬಾಗಿಲಿನಿಂದ ಪುರೋಹಿತರೊಡನೆ ದೀಪ ಹತ್ತಿಸಿರುವ ತನ್ನ ಮನೆಗೆ ಪ್ರವೇಶಿಸಬೇಕು । ವ್ಯಕ್ತಿಯು ಸತ್ತ ಜಾಗಕ್ಕೆ ಎಳ್ಳು ಮತ್ತು ಅಕ್ಕಿಗಳನ್ನು ಎರಚಬೇಕು ॥

3. ಯಜುರ್ವೇದ ಆಪಸ್ತಂಬಸೂತ್ರಾನುಸಾರಿ ಅನಾಹಿತಾಗ್ನಿ ಅಪರಪ್ರಯೋಗ ಕ್ರಮವು

1. ಮೊದಲಿಗೆ

**** ತಾಯಿತಂದೆಗಳ ಮರಣ ಸಂಶಯವು ಪ್ರಾಪ್ತವಾದಾಗ ಅಥವಾ ಮರಣವು ಸಂಭವಿಸಿದಾಗ, ಕರ್ತೃವು ಸ್ನಾನಮಾಡಿ । ಶವವನ್ನು ದರ್ಭೆಗಳ ಮೇಲೆ, ದಕ್ಷಿಣಕ್ಕೆ ತಲೆಬರುವಂತೆ ಮಲಗಿಸಿ, ಭಸ್ಮ–ರುದ್ರಾಕ್ಷಿಗಳಿಂದ ಅಲಂಕರಿಸಿ, ತುಳಸಿಯನ್ನೂ ಹಾಕಿ । ಸತ್ತವರ ದೇಹಶುದ್ಧಿಗಾಗಿ ಪುಣ್ಯಾಹವನ್ನು ಮಾಡಿ । ಆ ತೀರ್ಥದಿಂದ ಶವವನ್ನು ಪ್ರೋಕ್ಷಿಸಿ । ಅವನ ಬಾಯಿಗೆ ಆ ನೀರನ್ನು ಹಾಕಿ । ಬ್ರಾಹ್ಮಣರಿಂದ ಅನುಜ್ಞೆ(ಒಪ್ಪಿಗೆ)ಯನ್ನು ಕೇಳಬೇಕು । ಶಕ್ತಿಯಿದ್ದರೆ(ಮಂತ್ರಜ್ಞನಾಗಿದ್ದರೆ) ತಾನೇ(ಸಾಯುತ್ತಿರುವವನೇ) ಇವುಗಳನ್ನು ಮಾಡಬೇಕು । ಅಶಕ್ತನಾಗಿದ್ದರೆ ಅಥವಾ ಸತ್ತೇ ಹೋಗಿದ್ದರೆ, ಪುತ್ರಾದಿಗಳು ಮಾಡಬೇಕು ॥

ಪಿತ್ರೋರತ್ಯಾಸನ್ನ ಸಮಯೇ ಸ್ನಾಪಯಿತ್ವಾ । ಭಸ್ಮ ರುದ್ರಾಕ್ಷ ತುಳಸೀಂ ಚ ಧಾರಯಿತ್ವಾ । ಪಿತುಃ ಶರೀರಶುದ್ಧ್ಯರ್ಥಂ ಪುಣ್ಯಾಹಂ ವಾಚಯಿತ್ವಾ । ತತ್ತೀರ್ಥೇನ ಪ್ರೋಕ್ಷ್ಯ । ಪಾಯಯಿತ್ವಾ । ಪ್ರಾಯಶ್ಚಿತ್ತ ಅನುಜ್ಞಾಂ ಕುರ್ಯಾತ್ । ಶಕ್ತಶ್ಚೇತ್ ಸ್ವಯಮೇವ ಕುರ್ಯಾತ್ । ಯದಿ ಅಶಕ್ತಃ ಪುತ್ರಾದಿಃ ಕುರ್ಯಾತ್ ॥

2. ಮೃತವ್ಯಕ್ತಿಗೆ ಸಂಬಂಧಿಸಿದ ಕೃಚ್ಛ್ರ(ಪ್ರಾಯಶ್ಚಿತ್ತ) ಮತ್ತು ದಾನಗಳಿಗೆ ಬ್ರಾಹ್ಮಣರಲ್ಲಿ ಅನುಜ್ಞೆಯು

**** (ಉಪವೀತೀ) ಸಭೆಯನ್ನು ನೋಡಿ, ನಮಿಸಿ, ದಕ್ಷಿಣೆಯನ್ನು ಈ ಕೆಳಗಿನಂತೆ ಹೇಳಿ, ಕೊಟ್ಟು, ದೇವರನ್ನು ಸ್ಮರಿಸಿ । ಸಂಕಲ್ಪವನ್ನು ಪ್ರಾರಂಭಿಸಿ, ... (ಪ್ರಾಚೀನಾವೀತೀ)ಈ ಗೋತ್ರ, ಈ ನಕ್ಷತ್ರ, ಈ ರಾಶಿಯಲ್ಲಿ, ಈ ಹೆಸರಿನ ನನ್ನ(ನನ್ನ ತಂದೆಯ) ಎಲ್ಲಾ ರೀತಿಯ ಪಾಪಗಳ ಪರಿಹಾರಕ್ಕಾಗಿ, ಅಬ್ದಾದಿ ಕೃಚ್ಛ್ರ(ಪ್ರಾಯಶ್ಚಿತ್ತ) ಗಳನ್ನು ಹಾಗೆಯೇ ದಾನಾದಿಗಳನ್ನು ಮಾಡಲು ಯೋಗ್ಯತೆಯನ್ನು ಅನುಗ್ರಹಿಸಿರಿ ಎಂದು ಬ್ರಾಹ್ಮಣರ ಒಪ್ಪಿಗೆಯನ್ನು ಪಡೆಯಬೇಕು, (ಅಶಕ್ತತೆಯು ಇದ್ದಾಗ – ಕೃಚ್ಛ್ರಗಳಿಗೆ ಮತ್ತು ದಾನಗಳಿಗೆ ಬದಲಾಗಿ ಯಥಾಶಕ್ತಿ ದಕ್ಷಿಣೆಯನ್ನು ಕೊಡಬೇಕು) ॥

(ಉಪವೀತೀ) ಅಥ ಮಹದವಲೋಕನಂ ಕಾರ್ಯಂ । ತತೋ ಭಗವನ್ನಾಮ ಕೀರ್ತನಂ ಕಾರ್ಯೇತ್ । ಅಶೇಷೇ ಹೇ ಪರಿಷತ್, ಭವತ್ಪಾದಮೂಲೇ ಮಯಾ ಸಮರ್ಪಿತಾಂ ಇಮಾಂ ಸೌವರ್ಣೀಂ ಅಲ್ಪೀಯಸೀಂ ಅಪಿ ಸ್ವೀಕೃತ್ಯ । (ಪ್ರಾಚೀನಾವೀತೀ) .....ಗೋತ್ರಸ್ಯ (ಗೋತ್ರಾಯಾಃ), ...ಶರ್ಮಣಃ (ದಾಯಾಃ/ನಾಮ್ನ್ಯಃ), ಮಮ (ಮಮಪಿತುಃ/ಮಾತುಃ) ಜನ್ಮಾಭ್ಯಾಸಾಜ್ಜನ್ಮ ಪ್ರಭೃತ್ಯೇತತ್‌ಕ್ಷಣ ಪರ್ಯಂತಂ ಸಂಭಾವಿತಾನಾಂ ಸರ್ವೇಷಾಂ ಪಾಪಾನಾಂ ಸದ್ಯಃ ಅಪನೋದನದ್ವಾರಾ ಮಮ(ಮಮ ಪಿತುಃ/ಮಾತುಃ) ಸಮಸ್ತ ಪಾಪಕ್ಷಾಯಾರ್ಥಂ, ಪ್ರಾಜಾಪತ್ಯ, ಚಾಂದ್ರಾಯಣ, ದ್ವಾದಶಾಬ್ದಾದಿ ಕೃಚ್ಛ್ರಾಚರಣಂ ತಥಾ ಪ್ರಾಣೋತ್ಕ್ರಮಣ ಸಮಯೇ ಸುಖೋತ್ಕ್ರಮಣ ಸಿದ್ಧ್ಯರ್ಥಂ ಉತ್ಕ್ರಾಂತಿ ಗೋದಾನಂ, ತಥಾ ದಶದಾನ, ಷೋಡಶದಾನ, ಮನಃಕಲ್ಪಿತ ದಾನಾನಿ ಕರ್ತುಂ ಯೋಗ್ಯತಾಸಿದ್ಧಿಮನುಗೃಹಾಣ, ಇತಿ ಪ್ರಾರ್ಥ್ಯ (ಅಶಕ್ತಶ್ಚೇತ್ – ಕೃಚ್ಛ್ರ ಪ್ರತ್ಯಾಮ್ನಾಯತ್ವೇನ ತಥಾ ದಾನ ಪ್ರತಿನಿಧಿ ಯತ್ಕಿಂಚಿದ್ಧಿರಣ್ಯದಾನಂ ಕರ್ತುಂ....) ॥

3. ಮೃತನಿಗೆ ಸಂಬಂಧಿಸಿದ ಕೃಚ್ಛ್ರ – ದಶದಾನ – ಷೋಡಶದಾನ ಹಾಗೂ ಉತ್ಕ್ರಾಂತಿ ಗೋದಾನಗಳು

**** ಈ ಕೆಳಗಿನಂತೆ, ನನಗೆ (ಮೃತವ್ಯಕ್ತಿಗೆ) ಸಂಬಂಧಿಸಿದ ಜನನಕಾಲದಿಂದ ಇಲ್ಲಿಯವರೆವಿಗೆ ಬಾಲ್ಯ, ಕೌಮಾರ, ಯೌವನ ವೃದ್ಧಾಪ್ಯಗಳಲ್ಲಿ – ಜಾಗ್ರತೆ, ಕನಸು, ಗಾಢನಿದ್ದೆಯ ಅವಸ್ಥೆಗಳಲ್ಲಿ – ಮನಸ್ಸು, ಮಾತು, ದೇಹ, ಕರ್ಮೇಂದ್ರಿಯ, ಜ್ಞಾನೇಂದ್ರಿಯಗಳಿಂದ, ಕಾಮಕ್ರೋಧಾದಿಗಳಿಂದ ಉಂಟಾಗಿರುವ ಎಲ್ಲಾ ಪಾಪಗಳನ್ನು ಈಗ ನಿವಾರಿಸಿಕೊಳ್ಳುವುದಕ್ಕಾಗಿ, ಎಲ್ಲಾ ಜನ್ಮಗಳಲ್ಲೂ ಮಾಡಿರಬಹುದಾದ ಪಾಪಗಳ ಪರಿಹಾರಕ್ಕಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳಲು,

ಕೃಚ್ಛ್ರಾಚರಣೆಯನ್ನು ಮತ್ತು ಸುಖವಾಗಿ ಪ್ರಾಣವು ಹೋಗಲು ಉತ್ಕ್ರಾಂತಿ ಗೋದಾನವನ್ನೂ ಮತ್ತೂ ದಶದಾನ, ಷೋಡಶದಾನ ಮತ್ತು ಇತರ ದಾನಗಳನ್ನು ಮಾಡುತ್ತೇನೆ ಎಂದು ಕೆಳಗಿನಂತೆ ಸಂಕಲ್ಪಿಸಬೇಕು । (ಒಂದು ವೇಳೆ ಅಶಕ್ತತೆಯು ಇದ್ದರೆ – ಕೃಚ್ಛ್ರಾದಿಗಳಿಗೆ ಪ್ರತಿನಿಧಿಯಾಗಿ ಹಾಗೂ ಪ್ರತ್ಯಕ್ಷದಾನಗಳಿಗೆ ಪ್ರತಿನಿಧಿಯಾಗಿ ಹಾಗೂ ನದೀಸ್ನಾನಗಳಿಗೆ ಪ್ರತಿನಿಧಿಯಾಗಿ ಯಥಾಶಕ್ತಿ ಹಿರಣ್ಯದಾನ ಕೊಡುತ್ತೇನೆಂದು ಹೇಳಬೇಕು) ॥

1. ವ್ಯಕ್ತಿಯು ಸಾಯುವುದಕ್ಕೆ ಮೊದಲು ಅವನಾಗಲೀ ಅಥವಾ ಅವರ ಮಕ್ಕಳಾಗಲೀ ಕೃಚ್ಛ್ರ ಮತ್ತು ದಾನಗಳನ್ನು ಕೊಡುವಾಗ ಹೇಳುವ ಸಂಕಲ್ಪ –

(ಉಪವೀತೀ) ಶ್ರೀಗೋವಿಂದ, ಶ್ರೀಗೋವಿಂದ, ಶ್ರೀವಿಷ್ಣೋರಾಜ್ಞಯಾ, ಪ್ರವರ್ತಮಾನಸ್ಯ, ಅದ್ಯಬ್ರಹ್ಮಣಃ ದ್ವಿತೀಯಪರಾರ್ಧೇ, ವೈವಸ್ವತಮನ್ವಂತರೇ, ಅಷ್ಟಾವಿಂಶತಿತಮೇ ಕಲಿಯುಗೇ, ಪ್ರಥಮಪಾದೇ, ಜಂಬೂದ್ವೀಪೇ, ಭಾರತವರ್ಷೇ, ಭರತಖಂಡೇ, ದಂಡಕಾರಣ್ಯೇ, ಗೋದಾವರ್ಯಾಃ

ದಕ್ಷಿಣತೀರೇ, ಶಾಲಿವಾಹನಶಕೇ, ಬೌದ್ಧಾವತಾರೇ, ರಾಮಕ್ಷೇತ್ರೇ, ಅಸ್ಮಿನ್ ವರ್ತಮಾನೇ, ವ್ಯಾವಹಾರಿಕೇ, ಚಾಂದ್ರಮಾನೇನ ಪ್ರಭವಾದಿ ಷಷ್ಟಿಸಂವತ್ಸರಾಣಾಂ ಮಧ್ಯೇ, ಶ್ರೀಮತ್.....ಸಂವತ್ಸರಸ್ಯ, ...ಅಯನೇ, ... ಋತೌ, ...ಮಾಸೇ, ...ಪಕ್ಷೇ, ...ಪುಣ್ಯತಿಥೌ, (ಪ್ರಾಚೀನಾವೀತೀ) ..... ಗೋತ್ರಸ್ಯ(ಗೋತ್ರಾಯಾಃ),.....ಶರ್ಮಣಃ(ದಾಯಾಃ/ನಾವ್ನ್ಯಃ), ಮಮ(ಮಮಪಿತುಃ/ಮಾತುಃ) ಜನ್ಮಾಭ್ಯಾಸಾಜ್ಜನ್ಮ ಪ್ರಭೃತ್ಯೇತತ್‌ಕ್ಷಣ ಪರ್ಯಂತಂ ಬಾಲ್ಯೇವಯಸಿ ಕೌಮಾರೇ ಯೌವನೇ ವಾರ್ಧಕೇ ಚ ಜಾಗ್ರತ್ ಸ್ವಪ್ನ ಸುಷುಪ್ತ್ಯವಸ್ಥಾಸು ಮನೋವಾಕ್ಕಾಯ ಕರ್ಮೇಂದ್ರಿಯ ಜ್ಞಾನೇಂದ್ರಿಯ ವ್ಯಾಪಾರೈಃ ಕಾಮ ಕ್ರೋಧ ಲೋಭ ಮೋಹ ಮದ ಮಾತ್ಸರ್ಯಾದಿಭಿಶ್ಚ ಸಂಭಾವಿತಾನಾಂ ಸರ್ವೇಷಾಂ ಪಾಪಾನಾಂ ಸದ್ಯಃ ಅಪನೋದನದ್ವಾರಾ, ಮಮ(ಮಮಪಿತುಃ/ಮಾತುಃ) ಸಮಸ್ತ ಪಾಪಕ್ಷಯಾರ್ಥಂ,

ಪ್ರಾಜಾಪತ್ಯ, ಚಾಂದ್ರಾಯಣ, ದ್ವಾದಶಾಬ್ದಾದಿ ಕೃಚ್ಛ್ರಾಚರಣಂ ತಥಾ ಪ್ರಾಣೋತ್ಕ್ರಮಣ ಸಮಯೇ ಸುಖೋತ್ಕ್ರಮಣ ಸಿದ್ಧ್ಯರ್ಥಂ ಉತ್ಕ್ರಾಂತಿ ಗೋದಾನಂ, ತಥಾ ದಶದಾನ, ಷೋಡಶದಾನ, ಮನಃಕಲ್ಪಿತ ದಾನಾನಿ ಚ ಕರಿಷ್ಯೇ ॥ (ಅಶಕ್ತಶ್ಚೇತ್ – ಕೃಚ್ಛ್ರ ಪ್ರತ್ಯಾಮ್ನಾಯ, ತತ್ತದ್ದಾನ ಪ್ರತ್ಯಾಮ್ನಾಯತ್ವೇನ ತಥಾ ನದೀಸ್ನಾನ ಪ್ರತ್ಯಾಮ್ನಾಯ ಯತ್ಕಿಂಚಿದ್ಧಿರಣ್ಯದಾನಂ ಚ ಕರಿಷ್ಯೇ) ॥

2. ವ್ಯಕ್ತಿಯು ಸತ್ತನಂತರ ಅವನ ಪರವಾಗಿ ಮಕ್ಕಳು(ಕರ್ತೃ) ಕೃಚ್ಛ್ರ ಮತ್ತು ದಾನಾದಿಗಳನ್ನು ಕೊಡುವಾಗ ಹೇಳುವ ಸಂಕಲ್ಪ –

(ಉಪವೀತೀ) ಶ್ರೀಗೋವಿಂದ, ಶ್ರೀವಿಷ್ಣೋರಾಜ್ಞಯಾ, ಪ್ರವರ್ತಮಾನಸ್ಯ, ಅದ್ಯಬ್ರಹ್ಮಣಃ ದ್ವಿತೀಯಪರಾರ್ಧೇ, ವೈವಸ್ವತಮನ್ವಂತರೇ, ಅಷ್ಟಾವಿಂಶತಿತಮೇ ಕಲಿಯುಗೇ, ಪ್ರಥಮಪಾದೇ, ಜಂಬೂದ್ವೀಪೇ, ಭಾರತವರ್ಷೇ, ಭರತಖಂಡೇ,

ದಂಡಕಾರಣ್ಯೇ, ಗೋದಾವರ್ಯಾಃ ದಕ್ಷಿಣತೀರೇ, ಶಾಲಿವಾಹನಶಕೇ, ಬೌದ್ಧಾವತಾರೇ, ರಾಮಕ್ಷೇತ್ರೇ, ಅಸ್ಮಿನ್ ವರ್ತಮಾನೇ, ವ್ಯಾವಹಾರಿಕೇ, ಚಾಂದ್ರಮಾನೇನ ಪ್ರಭವಾದಿ ಷಷ್ಟಿಸಂವತ್ಸರಾಣಾಂ ಮಧ್ಯೇ, ಶ್ರೀಮತ್.....ಸಂವತ್ಸರಸ್ಯ, ...ಅಯನೇ, ...ಋತೌ, ...ಮಾಸೇ, ...ಪಕ್ಷೇ, ...ಪುಣ್ಯತಿಥೌ, (ಪ್ರಾಚೀನಾವೀತೀ)....ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ (ದಾಯಾಃ/ನಾಮ್ನ್ಯಃ), ಮಮಪಿತುಃ/ಮಾತುಃ ಜನ್ಮಾಭ್ಯಾಸಾಜ್ಜನ್ಮ ಪ್ರಭೃತ್ಯೇತತ್‌ಕ್ಷಣ ಪರ್ಯಂತಂ ಬಾಲ್ಯೇವಯಸಿ ಕೌಮಾರೇ ಯೌವನೇ ವಾರ್ಧಕೇ ಚ ಜಾಗ್ರತ್ ಸ್ವಪ್ನ ಸುಷುಪ್ತ್ಯವಸ್ಥಾಸು ಮನೋವಾಕ್ಕಾಯ ಕರ್ಮೇಂದ್ರಿಯ ಜ್ಞಾನೇಂದ್ರಿಯ ವ್ಯಾಪಾರೈಃ ಕಾಮ ಕ್ರೋಧ ಲೋಭ ಮೋಹ ಮದ ಮಾತ್ಸರ್ಯಾದಿಭಿಶ್ಚ ಸಂಭಾವಿತಾನಾಂ ಸರ್ವೇಷಾಂ ಪಾಪಾನಾಂ ಸದ್ಯಃ ಅಪನೋದನದ್ವಾರಾ, ಸಮಸ್ತ ಪಾಪಕ್ಷಯಾರ್ಥಂ,

ಮರಣಾತ್ ಪ್ರಾಕ್ ಪ್ರಾಜಾಪತ್ಯ, ಚಾಂದ್ರಾಯಣ, ದ್ವಾದಶಾಬ್ದಾದಿ ಕೃಚ್ಛ್ರಾಚರಣಂ ತಥಾ ದಶದಾನ, ಷೋಡಶದಾನ, ಮನಃಕಲ್ಪಿತ ದಾನಾನಾಂ ತಥಾ ಪ್ರಾಣೋತ್ಕ್ರಮಣ ಸಮಯೇ ಸುಖೋತ್ಕ್ರಮಣ ಸಿದ್ಧ್ಯರ್ಥಂ ಉತ್ಕ್ರಾಂತಿ ಗೋದಾನಾದೀನಾಂ, ಅಕರಣ ದೋಷ ಪ್ರಾಯಶ್ಚಿತ್ತದ್ವಾರಾ, ಇದಾನೀಂ ಪ್ರಾಜಾಪತ್ಯಾದಿಕೃಚ್ಛ್ರ, ತತ್ತದ್ದಾನಾನಿ ಚ ಕರಿಷ್ಯೇ, (ಅಶಕ್ತಶ್ಚೇತ್ – ಪ್ರಾಜಾಪತ್ಯಾದಿ ಕೃಚ್ಛ್ರ, ದಶದಾನ, ಷೋಡಶದಾನ, ಮನಃಕಲ್ಪಿತದಾನ, ಉತ್ಕ್ರಾಂತಿಗೋದಾನ, ಪ್ರತ್ಯಾಮ್ನಾಯತ್ವೇನ, ಯತ್ಕಿಂಚಿದ್ಧಿರಣ್ಯದಾನಂ ಕರಿಷ್ಯೇ) ॥

**** ನಂತರ ಕೈತೊಳೆದುಕೊಂಡು ಉಪವೀತಿಯಿಂದ । ಸಾಂಬಸದಾಶಿವ ಸ್ವರೂಪರಾದ, ಬ್ರಾಹ್ಮಣರನ್ನು ಆಸನದಲ್ಲಿ ಕೂರಿಸಿ, ಪೂಜಿಸಿ । ದಾನದ ವಸ್ತುಗಳನ್ನು ಅಥವಾ ಹಣವನ್ನು ತೆಗೆದುಕೊಂಡು, **ಹಿರಣ್ಯಗರ್ಭಃ**....., ಎಂಬ ಈ ಕೆಳಗಿನ ಶ್ಲೋಕದೊಂದಿಗೆ ಹಾಗೂ

ಕೆಳಗೆ ತಿಳಿಸಿರುವ ದಾನಶ್ಲೋಕಗಳನ್ನು ಮತ್ತೂ ವಾಕ್ಯಗಳಿಂದ, ಎಲ್ಲಾ ದಾನಗಳನ್ನು ಅಥವಾ ದಾನಗಳ ಪ್ರತಿನಿಧಿಯಾದ ಹಣವನ್ನು ಕೊಡಬೇಕು ॥

ಅಪ ಉಪಸ್ಪೃಶ್ಯ । (ಉಪವೀತೀ) ಸಾಂಬಶಿವ ಸ್ವರೂಪಸ್ಯ ಬ್ರಾಹ್ಮಣಸ್ಯ ಇದಮಾಸನಂ, ಸಕಲಾರಾಧನೈಃ ಸ್ವರ್ಚಿತಂ । ಕೃಚ್ಛ್ರದ್ರವ್ಯಾಣ್ಯಾದಾಯ,

ಸಮಸ್ತ ಸಂಪತ್ ಸಮವಾಪ್ತಿ ಹೇತವಃ ।
ಸಮುತ್ಥಿತಾಪತ್ಕುಲಧೂಮ ಕೇತವಃ ।
ಅಪಾರ ಸಂಸಾರ ಸಮುದ್ರಸೇತವಃ ।
ಪುನಂತು ಮಾಂ ಬ್ರಾಹ್ಮಣ ಪಾದಪಾಂಸವಃ ॥

ಹಿರಣ್ಯಗರ್ಭ ಗರ್ಭಸ್ಥಂ ಹೇಮಬೀಜಂ ವಿಭಾವಸೋಃ ।
ಅನಂತಪುಣ್ಯಫಲದಂ ಅತಶ್ಶಾಂತಿಂ ಪ್ರಯಚ್ಛಮೇ ॥

(ಪ್ರಾಚೀನಾವೀತೀ).....ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ (ದಾಯಾಃ/ನಾಮ್ನ್ಯಃ) ಮಮ (ಮಮಪಿತುಃ/ಮಾತುಃ) ಪೂರ್ವೋಕ್ತ ಸಮಸ್ತ ಫಲಸಿದ್ಧಿಂ ಕಾಮಯಮಾನಃ, ಅಬ್ದಾದಿ ಕೃಚ್ಛ್ರಂ (...ಕೃಚ್ಛ್ರಪ್ರತ್ಯಾಮ್ನಾಯತ್ವೇನ) – ಪ್ರತ್ಯಕ್ಷದಾನಂ (...ದಾನಪ್ರತ್ಯಾಮ್ನಾಯತ್ವೇನ) ಯತ್ಕಿಂಚಿದ್ಧಿರಣ್ಯಂ ನಾನಾ ಗೋತ್ರೇಭ್ಯಃ ಬ್ರಾಹ್ಮಣೇಭ್ಯಃ ತೇಭ್ಯಃ ತೇಭ್ಯಃ ಸಂಪ್ರದದೇ । (ಉಪವೀತೀ) ಕೃಚ್ಛ್ರದ್ರವ್ಯಾಣಿ ಬ್ರಾಹ್ಮಣೇಭ್ಯೋ ದದ್ಯಾತ್ ॥

4. ದಾನಗಳ ಮಂತ್ರಗಳು

**** ಈ ದಾನಾದಿಗಳನ್ನು, ಮರಣಸಂಶಯ ಉಂಟಾದ ವ್ಯಕ್ತಿಯು ಮಾಡಬೇಕು, ಅವನು ಅಶಕ್ತನಾದರೆ, ಕರ್ತೃಗಳೇ ಮಾಡಬೇಕು । ಶೌನಕರು ಈ ದಶದಾನಗಳನ್ನು ಈ ಕ್ರಮದಲ್ಲಿ ಹೇಳಿರುವರು । ಆ ಕ್ರಮವೇನೆಂದರೆ – ಗೋದಾನ, ಭೂದಾನ, ಹಿರಣ್ಯದಾನ,

ದಾಸೀದಾನ, ತಿಲದಾನ, ಹಾಸಿಗೆದಾನ, ತುಪ್ಪದದಾನ, ವಸ್ತ್ರದಾನ । ಧಾನ್ಯದಾನ, ಬೀಜದಾನ ॥ ಮತ್ತೂ ಹಸು, ಭೂಮಿ, ಎಳ್ಳು, ಚಿನ್ನ, ತುಪ್ಪ, ವಸ್ತ್ರ, ಧಾನ್ಯ, ಬೆಲ್ಲ । ಬೆಳ್ಳಿ, ಉಪ್ಪು ॥ ಮತ್ತೂ ಅನ್ನ, ನೀರು, ಕುದುರೆ, ಹಸು, ವಸ್ತ್ರ, ಭೂಮಿ, ಹಾಸಿಗೆ, ಆಸನ ದಾನಗಳು । ಪ್ರಾಣಹೋಗುವ ಸಮಯದಲ್ಲಿ ಅಥವಾ ಪ್ರಾಣಹೋದ ನಂತರವೂ ಕರ್ತೃಗಳು ಈ ಹತ್ತುದಾನಗಳನ್ನು ವಿಧಿಪೂರ್ವಕವಾಗಿ ಮಾಡಿದರೆ, ಮೃತನು ಪುಣ್ಯಲೋಕಗಳನ್ನು(ಪರಲೋಕ) ಸುಖವಾಗಿ ಪಡೆಯುತ್ತಾನೆ ॥

ಗೋ, ಭೂ, ಹಿರಣ್ಯ, ದಾಸೀಶ್ಚ, ತಿಲ, ಶಯ್ಯಾ, ಆಜ್ಯ, ವಸ್ತ್ರಕಂ ।
ಧಾನ್ಯ, ಬೀಜಂ ಇತಿ ಪ್ರೋಕ್ತಂ ದಶದಾನಾನಿ ವೈ ಕ್ರಮಾತ್ ॥

ಗೋ ಭೂ ತಿಲ ಹಿರಣ್ಯಾಜ್ಯ ವಸ್ತ್ರ ಧಾನ್ಯ ಗುಡಾನಿ ಚ ।
ರೌಪ್ಯಂ ಲವಣಮಿತ್ಯಾಹುಃ ದಶ ದಾನಾನಿ ಪಂಡಿತಾಃ ॥

ಅನ್ನಪಾನಾಶ್ವ ಗೋ ವಸ್ತ್ರ ಭೂಮಿ ಶಯ್ಯಾಸನಾನಿ ಚ ।
ಪ್ರೇತಲೋಕೇ ಪ್ರಶಸ್ತಾನಿ ದಾನಾನ್ಯಷ್ಟೌ ವಿಶೇಷತಃ ॥

ಯಸ್ಯೋತ್ಕ್ರಮಣ ವೇಳಾಯಾಂ ದಶೈತಾನಿ ವಿಧಾನತಃ ।
ದೀಯತೇ ಸ ನರೋ ಯಾತಿ ಪುಣ್ಯಾನ್ಲೋಕಾನ್ ಸುಖೇನ ವೈ ॥

ಗೋದಾನ

ಯೋ ಮೃತ್ಯುಕಾಲೇ ಸಂಪ್ರಾಪ್ತೇ ಗಾಂ ದದಾತಿ ಪಯಸ್ವಿನೀಮ್ ।
ಗವಾದರ್ಶಿತ ಮಾರ್ಗಸ್ತು ಬ್ರಹ್ಮಲೋಕೇ ಮಹೀಯತೇ ॥

ಸರ್ವದಾನಮಯೋ ದೋಗ್ಧ್ರೀ ಸರ್ವದೇವಮಯಾಯತಃ ।
ತೇನ ತ್ವಾಂ ಸಂಪ್ರದಾಸ್ಯಾಮಿ ಸರ್ವಪಾಪ ಕ್ಷಯಾಯ ಮೇ ॥

ಅಸ್ಮೈ ಬ್ರಾಹ್ಮಣಾಯ ಮತ್ಸ್ಯಪುರಾಣೋಕ್ತ ರುದ್ರದೇವತಾಮಿಮಾಂ ಗಾಂ ಸ್ವರ್ಚಿತಾಂ ಸಾಲಂಕಾರಾಂ ಸದಕ್ಷಿಣಾಂ ತುಭ್ಯಮಹಂ ಸಂಪ್ರದದೇ ನಮಮ ॥

ಭೂದಾನ

ಸರ್ವಸಸ್ಯಾಶ್ರಯೋ ಭೂಮಿಃ ವರಾಹೇಣ ಸಮುದ್ಧೃತಾ ।
ಅನಂತಪುಣ್ಯಫಲದಾ ಅತಶ್ಶಾಂತಿಂ ಪ್ರಯಚ್ಛ ಮೇ ॥

ಇಮಾಂ ಭೂಮಿಂ ವಿಷ್ಣುದೇವತಾಂ ಸದಕ್ಷಿಣಾಂ ತುಭ್ಯಮಹಂ ಸಂಪ್ರದದೇ ನಮಮ ॥

ಹಿರಣ್ಯದಾನ

ಸರ್ವಪಾಪಕ್ಷಯಕರಂ ಹಿರಣ್ಯಂ ಲೋಕಭೂಷಣಂ ।
ಅಗ್ನೇರ್ಬೀಜಂ ಪ್ರದಾಸ್ಯಾಮಿ ತಸ್ಮಾಚ್ಛಾಂತಿಂ ಪ್ರಯಚ್ಛ ಮೇ ॥

ಆಗ್ನೇಯಪುರಾಣೋಕ್ತಮಿದಂ ಹಿರಣ್ಯಂ ಅಗ್ನಿದೈವತ್ಯಂ ತುಭ್ಯಮಹಂ ಸಂಪ್ರದದೇ ನಮಮ ॥

ದಾಸೀದಾನ

ಏಷಾ ದಾಸೀ ಮಯಾ ತುಭ್ಯಂ ಶ್ರೀವತ್ಸಂ ಪ್ರತಿಪಾದಿತಾ ।
ಸದಾ ಕರ್ಮಕರೀ ಯೋಗ್ಯಾ ಯಥೇಷ್ಟಂ ಭದ್ರಮಸ್ತು ಮೇ ॥

ಇಮಾಂ ದಾಸೀಂ ಪ್ರಜಾಪತಿದೇವತಾಂ ತುಭ್ಯಮಹಂ ಸಂಪ್ರದದೇ ನಮಮ ॥

ತಿಲದಾನ

ತಿಲಾಃ ಪಾಪಹರಾನಿತ್ಯಂ ವಿಷ್ಣೋರ್ದೇಹ ಸಮುದ್ಭವಾಃ ।
ತಿಲದಾನಾದಸಹ್ಯಂ ಮೇ ಪಾಪಂ ನಾಶಯ ಕೇಶವ ॥

ತಿಲಾಃ ಕಾಶ್ಯಪ ಸಂಭೂತಾಃ ತಿಲಾಃ ಪಾಪಹರಾಶ್ಶುಭಾಃ ।
ತಿಲಾಃ ಪಾಪಹರಾ ನಿತ್ಯಂ ಶಾಂತಿಂ ಕುರ್ವಂತು ಮೇ ತತಃ ॥

ಯೋ ದೇವಃ ಪಿತೃರೂಪೇಣ ಹವ್ಯಕವ್ಯ ಭುಗವ್ಯಯಃ ।
ತಿಲಪಾತ್ರ ಪ್ರದಾನೇನ ಸ ಮೇ ವಿಷ್ಣುಃ ಪ್ರಸೀದತು ॥

ಮಹಾಭಾರತೋಕ್ತಮಿದಂ ತಿಲದಾನಂ ತುಭ್ಯಮಹಂ ಸಂಪ್ರದದೇ ನಮಮ ॥

ಶಯ್ಯಾದಾನ

ಮೃದುವಸ್ತ್ರಾವೃತಾಶುದ್ಧಾ ಮೃದುತಂತು ಪರಿಚ್ಛದಾ ।
ಶಯ್ಯಾಸುಖಪ್ರದಾ ನಿತ್ಯಮತಶ್ಶಾಂತಿಂ ಪ್ರಯಚ್ಛ ಮೇ ॥

ಇಮಾಂ ಶಯ್ಯಾಂ ಮಹಾಭಾರತೋಕ್ತಾಂ ತುಭ್ಯಮಹಂ ಸಂಪ್ರದದೇ ನಮಮ ॥

ಆಜ್ಯದಾನ

ತ್ವಂ ಪೂರ್ವಂ ಬ್ರಹ್ಮಣಾಸೃಷ್ಟಃ ಪವಿತ್ರಾತಿ ಪವಿತ್ರಕಃ ।
ತತ್ಪ್ರಮಾತಾ ಸ್ಥಿತಾ ಯಜ್ಞಾಃ ತಸ್ಮಾತ್ ಶಾಂತಿಂ ಪ್ರಯಚ್ಛ ಮೇ ॥

ಇಮಮಾಜ್ಯದಾನಂ ಆಗ್ನೇಯಪುರಾಣೋಕ್ತಂ ಅಗ್ನಿದೈವತಂ ತುಭ್ಯಮಹಂ ಸಂಪ್ರದದೇ ನಮಮ ॥

ವಸ್ತ್ರದಾನ

ಶೀತವಾತೋಷ್ಣ ಸಂತ್ರಾಣಂ ಲಜ್ಜಾಯಾ ರಕ್ಷಣಂ ಪರಮ್ ।
ಕರ್ಮಣಾಂ ಸಾಧನಂ ಯಸ್ಮಾತ್ ತಸ್ಮಾತ್ ಶಾಂತಿಂ ಪ್ರಯಚ್ಛ ಮೇ ॥

ವಿಷ್ಣುಧರ್ಮೋತ್ತರೋಕ್ತಮಿದಂ ವಸ್ತ್ರಂ ಬೃಹಸ್ಪತಿ ದೈವತಂ ತುಭ್ಯಮಹಂ ಸಂಪ್ರದದೇ ನಮಮ ॥

ಧಾನ್ಯದಾನ

ಜೀವನಂ ಸರ್ವಭೂತಾನಾಂ ಬಲಪುಷ್ಟಿ ವಿವರ್ಧನಮ್ ।
ಧೀನೋತೀತಿ ಚ ಯದ್ಧಾನ್ಯಂ ಅತಶ್ಶಾಂತಿಂ ಪ್ರಯಚ್ಛ ಮೇ ॥

ಇದಂ ಧಾನ್ಯಂ ಪ್ರಜಾಪತಿದೈವತಂ ತುಭ್ಯಮಹಂ ಸಂಪ್ರದದೇ ನಮಮ ॥

ಬೀಜದಾನ

ಯಸ್ಮಾನ್ಮದ್ಗಾದಿ ಬೀಜಾನಿ ಪ್ರಿಯಾಣಿ ಪರಮೇಷ್ಠಿನಃ ।
ತಸ್ಮಾದೇಷಾಂ ಪ್ರದಾನೇನ ಪ್ರೀತಿಸ್ಸಿಧ್ಯತು ಮೇ ಸದಾ ॥

ಇದಂ ಬೀಜಂ ಪ್ರಜಾಪತಿದೈವತಂ ತುಭ್ಯಮಹಂ ಸಂಪ್ರದದೇ ನಮಮ ॥

ಗುಡದಾನ(ಬೆಲ್ಲ)

ಗುಡಮಿಕ್ಷು ರಸೋದ್ಭೂತಂ ಮಂತ್ರಾಣಾಂ ಪ್ರಣವೋ ಯಥಾ ।
ದಾನೇನಾನೇನ ಚೈತಸ್ಯ ಪರಾಲಕ್ಷ್ಮೀಃ ಸ್ಥಿರಾಗೃಹೇ ॥

ಇದಂ ಗುಡಂ ಪ್ರಜಾಪತಿದೈವತಂ ತುಭ್ಯಮಹಂ ಸಂಪ್ರದದೇ ನಮಮ ॥

ರೌಪ್ಯದಾನ(ಬೆಳ್ಳಿ)

ಪ್ರೀತಿರ್ಯತಃ ಪಿತೃಣಾಂ ಚ ವಿಷ್ಣುಶ್ಶಂಕರ ಯೋಸ್ಸದಾ ।
ಶಿವ ನೋತ್ರೋದ್ಭವಂ ರೌಪ್ಯಂ ಅತಶ್ಶಾಂತಿಂ ಪ್ರಯಚ್ಛಮೇ ॥

ಇದಂ ರೌಪ್ಯಂ ರುದ್ರದೈವತಂ ತುಭ್ಯಮಹಂ ಸಂಪ್ರದದೇ ನಮಮ ॥

ಲವಣದಾನ(ಉಪ್ಪು)

ಯಸ್ಮಾದನ್ನ ರಸಾಸ್ಸರ್ವೇ ನೋತ್ಕೃಷ್ಟಂ ಲವಣಂ ವಿನಾ ।
ಶಂಭೋಃ ಪ್ರೀತಿಕರಂ ಯಸ್ಮಾದತಶ್ಶಾಂತಿಂ ಪ್ರಯಚ್ಛಮೇ ॥

ಇದಂ ಲವಣಂ ರುದ್ರದೈವತಂ ತುಭ್ಯಮಹಂ ಸಂಪ್ರದದೇ ನಮಮ ॥

ಕಾಂಸ್ಯಪಾತ್ರ ದಾನ

ಯಾನಿ ಪಾಪಾನ್ಯನೇಕಾನಿ ಕಾಮೋತ್ಥಾನಿ ಕೃತಾನಿ ವೈ ।
ಕಾಂಸ್ಯಪಾತ್ರ ಪ್ರದಾನೇನ ತಾನಿ ನಶ್ಯಂತು ಮೇ ಸದಾ ॥

ಅಸ್ಮೈ ಬ್ರಾಹ್ಮಣಾಯ ಕಾಂಸ್ಯಪಾತ್ರಂ ತುಭ್ಯಮಹಂ ಸಂಪ್ರದದೇ ನಮಮ ॥

ದಧ್ಯೋದನದಾನ

ಏಷ ಘರ್ಮಘಟೋ ದತ್ತಃ ದಧ್ಯೋದನ ಸಮನ್ವಿತಃ ।
ಪ್ರೀತಯೇ ಧರ್ಮರಾಜಸ್ಯ ಅಸ್ಯಸಂತು ಮನೋರಥಾಃ ॥

ಅಸ್ಮೈ ಬ್ರಾಹ್ಮಣಾಯ ದಧ್ಯೋದನಂ ತುಭ್ಯಮಹಂ ಸಂಪ್ರದದೇ ನಮಮ ॥

ಶ್ರೀಮೂರ್ತಿದಾನ

ಚತುಸ್ಸಾಗರ ಪರ್ಯಂತಂ ಸಶೈಲ ವನಕಾನನಾಮ್ ।
ದತ್ವಾ ಯತ್ಫಲಮಾಪ್ನೋತಿ ಸಾಲಗ್ರಾಮಾತ್ತದಶ್ನುತೇ ॥

ಸಾಲಿಗ್ರಾಮ ಶಿಲಾಚಕ್ರೇ ಭುವನಾನಿ ಚತುರ್ದಶ ।
ತಸ್ಮಾದಸ್ಯ ಪ್ರದಾನೇನ ಅತಶ್ಶಾಂತಿಂ ಪ್ರಯಚ್ಛ ಮೇ ॥

ಅಸ್ಮೈ ಬ್ರಾಹ್ಮಣಾಯ ಶ್ರೀಮೂರ್ತಿದಾನಂ ತುಭ್ಯಮಹಂ ಸಂಪ್ರದದೇ ನಮಮ ॥

ಶಿವಲಿಂಗ ದಾನ

ಬ್ರಹ್ಮಾಂಡಕೋಟಿ ದಾನೇನ ಯತ್ಫಲಂ ಭವತಿ ಪ್ರಭೋ ।
ತತ್ಫಲಂ ಸಮವಾಪ್ನೋತಿ ಶಿವಲಿಂಗ ಪ್ರದಾನತಃ ॥

ಅಸ್ಮೈ ಬ್ರಾಹ್ಮಣಾಯ ಶಿವಲಿಂಗದಾನಂ ತುಭ್ಯಮಹಂ ಸಂಪ್ರದದೇ ನಮಮ ॥

ಉತ್ಕ್ರಾಂತಿ ಗೋದಾನ

ಯಜ್ಞಸಾಧನ ಭೂತಾಯಾ ವಿಶ್ವಸ್ಯಾಘ ಪ್ರನಾಶಿನೀ ।
ವಿಶ್ವರೂಪಧರೋ ದೇವಃ ಪ್ರೀಯತಾಂ ಅನಯಾ ಗವಾ ॥

(ಸಾಯುವುದಕ್ಕೆ ಮುಂಚೆ ಈ ದಾನವನ್ನು ಕೊಡುವುದಿದ್ದರೆ ಆಗ ಮಾತ್ರ ಈ ಕೆಳಗಿನ ಶ್ಲೋಕವನ್ನು ಹೇಳಬೇಕು)

ಅತ್ಯುತ್ಕ್ರಾಂತೌ ಪ್ರವೃತ್ತಸ್ಯ ಸುಖೋತ್ಕ್ರಮಣ ಸಿದ್ಧಯೇ ।
ತುಭ್ಯಂ ಸಂಪ್ರದದೇ ಧೇನುಮಿಮಾಂ ಉತ್ಕ್ರಾಂತಿ ಸಂಜ್ಞಿಕಾಮ್ ॥

ಅಸ್ಮೈ ಬ್ರಾಹ್ಮಣಾಯ ಇಮಾಮುತ್ಕ್ರಾಂತಿ ಸಂಜ್ಞಿಕಾಂ ಗಾಂ ಸವತ್ಸಾಂ ಪಯಸ್ವಿನೀಮ್ ಸಾಲಂಕಾರಾಂ ಸದಕ್ಷಿಣಾಂ, ತುಭ್ಯಮಹಂ ಸಂಪ್ರದದೇ ನಮಮ ॥

5. ಕರ್ಣಮಂತ್ರ ಜಪವು

**** ಮಕ್ಕಳೇ ಮುಂತಾದ ಕರ್ತೃಗಳು, ತಾಯಿತಂದೆಗಳಿಗೆ ಸಾವು ಬರುವುದೆಂದು ತಿಳಿದಾಗ ಅಥವಾ ಸತ್ತನಂತರವೂ ಕೂಡ ತಮ್ಮ ಬಲ(ದಕ್ಷಿಣ)ತೊಡೆಯ ಮೇಲೆ ಮಲಗಿಸಿಕೊಂಡು । ಈ ಕೆಳಗಿನ **ಆಯುಷಃಪ್ರಾಣಗ್ಂ.....**, ಎಂಬ ಮಂತ್ರವನ್ನು

ಮೃತನ ಬಲಕಿವಿಯಲ್ಲಿ ಕರ್ತೃವು ಈ ಕೆಳಗಿನಂತೆ **ಪ್ರಾಚೀನಾವೀತಿಯಲ್ಲಿ** ಸಂಕಲ್ಪಿಸಿ, ಉಪವೀತಿಯಲ್ಲಿ ಮಂತ್ರವನ್ನು ಹೇಳಬೇಕು ॥

(ಉಪವೀತೀ)ಸಂಸ್ಕರ್ತಾ, ಓಂ ಓಂ ಓಂ ವಿಷ್ಣೋರಾಜ್ಞಯಾ....., ಏವಂಗುಣ ವಿಶೇಷಣ ವಿಶಿಷ್ಟಾಯಾಂ ವಿಷ್ಣುಪುಣ್ಯತಿಥೌ, (ಪ್ರಾಚೀನಾವೀತೀ)... ಗೋತ್ರಸ್ಯ (ಗೋತ್ರಾಯಾಃ), ...ಶರ್ಮಣಃ(ದಾಯಾಃ/ನಾಮ್ನ್ಯಃ), ಮಮ(ಪಿತುಃ/ಮಾತುಃ) ಸಮಸ್ತ ಪಾಪಕ್ಷಯದ್ವಾರಾ, ವಸ್ವಾದಿ ಪುಣ್ಯಲೋಕಾವಾಪ್ತ್ಯರ್ಥಂ, ಕರ್ಣಮಂತ್ರ ಪಠನಂ ಕರಿಷ್ಯೇ ॥ (ಉಪವೀತೀ), ದಕ್ಷಿಣಕರ್ಣೇ ಜಪೇತ್ ॥

ಓಂ ಆಯುಷಃ । ಪ್ರಾಣಗ್ಂ ಸಂತನು । ಪ್ರಾಣಾತ್ । ಅಪಾನಗ್ಂ ಸಂತನು । ಅಪಾನಾತ್ । ವ್ಯಾನಗ್ಂ ಸಂತನು । ವ್ಯಾನಾತ್ । ಚಕ್ಷುಸ್ಸಂತನು । ಚಕ್ಷುಷಃ । ಶ್ರೋತ್ರಗ್ಂ ಸಂತನು । ಶ್ರೋತ್ರಾತ್ । ಮನಸ್ಸಂತನು । ಮನಸಃ । ವಾಚಗ್ಂ ಸಂತನು । ವಾಚ ಆತ್ಮಾನಮ್ । ಸಂತನು । ಆತ್ಮನಃ ಪೃಥಿವೀಂ । ಸಂತನು । ಪೃಥಿವ್ಯಾಃ । ಅಂತರಿಕ್ಷಂ । ಸಂತನು । ಅಂತರಿಕ್ಷಾತ್ । ದಿವಗ್ಂ ಸಂತನು । ದಿವಸ್ಸುವಃ । ಸಂತನು ॥

**** ವ್ಯಕ್ತಿಯು ಸತ್ತನಂತರ ಕರ್ತೃ ಹಾಗೂ ಜ್ಞಾತಿಗಳು ಪ್ರಾಚೀನಾವೀತಿಯಾಗಿ, ತಲೆಕೆದರಿಕೊಂಡು, ಧೂಳನ್ನು ತನ್ನಮೇಲೆ ಎರಚಿಕೊಳ್ಳಬೇಕು ॥

ಯದಿ ಪ್ರೈತಿ ಪ್ರೇತೇಮಾತ್ಯಾಃ ಪ್ರಾಚೀನಾವೀತಿನಃ ಕೇಶಾನ್ ಪ್ರಕೀರ್ಯ ಪಾಂಸೂನಾವಂಪಂತೇ ॥

6. ಪಿತೃಮೇಧ ಕರ್ಮದ ಕರ್ತೃತ್ವ ಸಂಪಾದನೆಗೆ ಪ್ರಾಯಶ್ಚಿತ್ತ(ಕೃಚ್ಛ್ರ)ವನ್ನು ಪುತ್ರಾದಿಗಳು ಮಾಡಿಕೊಳ್ಳುವಿಕೆಯು

**** ಉಪವೀತದಿಂದ, ಈ ಕೆಳಗಿನಂತೆ ಸಂಕಲ್ಪವನ್ನು ಪ್ರಾರಂಭಿಸಿ, **ಪ್ರಾಚೀನಾವೀತಿಯಾಗಿ,** ಈ ಗೋತ್ರ, ಈ ನಕ್ಷತ್ರ, ಈ ಹೆಸರಿನ ಈ ವ್ಯಕ್ತಿಯನ್ನು ಪ್ರೇತನ(ಮೃತನ) ಔಪಾಸನಾಗ್ನಿಯಿಂದ ಪಿತೃಮೇಧಕ್ರಮದಿಂದ, ಸಂಸ್ಕಾರಮಾಡಲು ಯೋಗ್ಯತೆ–ಅಧಿಕಾರದ ಸಂಪಾದನೆಗಾಗಿ ಮತ್ತು ನನ್ನ ಇಲ್ಲಿಯವರೆಗಿನ ಎಲ್ಲಾ ಪಾಪಗಳ ಪರಿಹಾರಕ್ಕಾಗಿ, ಪ್ರಾಜಾಪತ್ಯಾದಿ ಕೃಚ್ಛ್ರಾಚರಣೆಯನ್ನು ಮಾಡಿಕೊಳ್ಳುತ್ತೇನೆ, ಎಂದು ಸಂಕಲ್ಪಿಸುವುದು ॥ (ಮಾಡಲು ಅಶಕ್ತತೆಯು ಇದ್ದಲ್ಲಿ, ಆಗ ಕೃಚ್ಛ್ರಗಳ ಪ್ರತಿನಿಧಿಯಾಗಿ ಹಣವನ್ನು ಕೊಡುತ್ತೇನೆಂದು ಸಂಕಲ್ಪಿಸುವುದು) ॥

(ಉಪವೀತೀ) ಓಂ ಓಂ ಓಂ ವಿಷ್ಣೋರಾಜ್ಞಯಾ....., ಏವಂಗುಣ ವಿಶೇಷಣ ವಿಶಿಷ್ಟಾಯಾಂ ವಿಷ್ಣುಪುಣ್ಯತಿಥೌ, (ಪ್ರಾಚೀನಾವೀತೀ), ... ಗೋತ್ರಂ(ಗೋತ್ರಾಂ), ...ಶರ್ಮಾಣಂ (ದಾಂ/ನಾಮ್ನೀಂ) ಪಿತರಂ(ಮಾತರಂ) ಪ್ರೇತಂ ಪ್ರೇತೌಪಾಸನಾಗ್ನಿನಾ ಪೈತೃಮೇಧಿಕೇನ ವಿಧಿನಾ ಸಂಸ್ಕರ್ತುಂ ಕರ್ತೃತ್ವ ಅಧಿಕಾರಯೋಗ್ಯತಾ ಸಿದ್ಧ್ಯರ್ಥಂ, ಮಮ ಸಮಸ್ತ ಪಾಪಕ್ಷಯಾರ್ಥಂ ಪ್ರಾಜಾಪತ್ಯಾದಿ ಕೃಚ್ಛ್ರಾಚರಣಂ ಕರಿಷ್ಯೇ ॥ (ಅಶಕ್ತಶ್ಚೇತ್ – ಪ್ರಾಜಾಪತ್ಯಾದಿ ಕೃಚ್ಛ್ರಪ್ರತ್ಯಾಮ್ನಾಯತ್ವೇನ ಯತ್ಕಿಂಚಿತ್ ಹಿರಣ್ಯದಾನಂ ಕರಿಷ್ಯೇ) ॥

**** ಕರ್ತೃವು ಉಪವೀತಿಯಾಗಿ, ಕೈಯಲ್ಲಿ ಹಣವನ್ನು ಹಿಡಿದುಕೊಂಡು, ಈ ಕೆಳಗಿನ ಶ್ಲೋಕವನ್ನು ಹೇಳಿ । **ಪ್ರಾಚೀನಾವೀತಿಯಾಗಿ,** ಈ ಕೆಳಗಿನಂತೆ– ಈ ಗೋತ್ರ, ಈ ನಕ್ಷತ್ರ, ಈ ಹೆಸರಿನ ಈ ವ್ಯಕ್ತಿಯನ್ನು ಪ್ರೇತನ(ಮೃತನ)ಔಪಾಸನಾಗ್ನಿಯಿಂದ ಪಿತೃಮೇಧಕ್ರಮದಿಂದ, ಸಂಸ್ಕಾರಮಾಡಲು ಕರ್ತೃತ್ವದ ಯೋಗ್ಯತೆ–ಅಧಿಕಾರ

ಸಂಪಾದನೆಗಾಗಿ ಮತ್ತು ನನ್ನ ಇಲ್ಲಿಯವರೆಗಿನ ಎಲ್ಲಾ ಪಾಪಗಳ ಪರಿಹಾರಕ್ಕಾಗಿ, ಪ್ರಾಜಾಪತ್ಯಾದಿ ಕೃಚ್ಛ್ರಾಚರಣೆಯ ಬದಲಾಗಿ ಈ ಅಲ್ಪವಾದ ಹಣವನ್ನು, **ಉಪವೀತಿಯಾಗಿ** ತಮ್ಮಲ್ಲಿ(ಬ್ರಾಹ್ಮಣರಲ್ಲಿ) ಸಮರ್ಪಿಸುತ್ತಿದ್ದೇನೆ ಎಂದು ಹೇಳಿ, ಕೊಡಬೇಕು ॥

(ಉಪವೀತೀ),

ಹಿರಣ್ಯಗರ್ಭ ಗರ್ಭಸ್ಥಂ ಹೇಮಬೀಜಂ ವಿಭಾವಸೋಃ ।
ಅನಂತಪುಣ್ಯಫಲದಂ ಅತಶ್ಶಾಂತಿಂ ಪ್ರಯಚ್ಛಮೇ ॥

(ಪ್ರಾಚೀನಾವೀತೀ), ...ಗೋತ್ರಂ(ಗೋತ್ರಾಂ), ...ಶರ್ಮಾಣಂ (ದಾಂ/ನಾಮ್ನೀಂ) ಪಿತರಂ(ಮಾತರಂ) ಪ್ರೇತಂ(ಪ್ರೇತಾಂ) ಪ್ರೇತೌಪಾಸನಾಗ್ನಿನಾ ಪೈತೃಮೇಧಿಕೇನ ವಿಧಿನಾ ಸಂಸ್ಕರ್ತುಂ, ಕರ್ತೃತ್ವ ಅಧಿಕಾರಯೋಗ್ಯತಾ ಸಿದ್ಧಿಂ ಕಾಮಯಮಾನಃ, ಪ್ರಾಜಾಪತ್ಯಾದಿ ಕೃಚ್ಛ್ರಪ್ರತ್ಯಾಮ್ನಾಯತ್ವೇನ ಇದಂ ಯತ್ಕಿಂಚಿತ್ ಹಿರಣ್ಯಂ, (ಉಪವೀತೀ), ತುಭ್ಯಮಹಂ ಸಂಪ್ರದದೇ ನಮಮ ॥

**** ಇದನ್ನು ಉದಾರತೆಯಿಂದ ಸ್ವೀಕರಿಸಿ, ಕರ್ತೃತ್ವ ಅಧಿಕಾರಯೋಗ್ಯತೆಯ ಸಂಪಾದನೆಗೆ ಅನುಗ್ರಹವನ್ನು ತಾವುಗಳು ಮಾಡಿರಿ ಎಂದು ಪ್ರಾರ್ಥಿಸಬೇಕು । ಸಂಸ್ಕಾರಮಾಡಲು ಕರ್ತೃತ್ವ ಯೋಗ್ಯತೆ–ಅಧಿಕಾರದ ಸಂಪಾದನೆ ಮತ್ತು ನಿನ್ನ ಇಲ್ಲಿಯವರೆಗಿನ ಎಲ್ಲಾ ಪಾಪಗಳ ಪರಿಹಾರವೂ ಆಗಲಿ ಎಂದು ಬ್ರಾಹ್ಮಣರು ಅನುಗ್ರಹವನ್ನು ಈ ಕೆಳಗಿನಂತೆ ಮಾಡಬೇಕು ॥

ಕರ್ತೃತ್ವ ಅಧಿಕಾರ ಯೋಗ್ಯತಾ ಸಿದ್ಧಿರಸ್ತು ಇತಿ ಭವಂತಃ ಅನುಗೃಹ್ಣಂತು ।
ಕರ್ತೃತ್ವ ಅಧಿಕಾರಯೋಗ್ಯತಾ ಸಿದ್ಧಿರಸ್ತು – ಇತಿ ಪ್ರತಿವಚನಂ ॥

7. ಪ್ರೇತಾಗ್ನಿ ಪುನಸ್ಸಂಧಾನದ ಯೋಗ್ಯತೆಗೆ ಮತ್ತು ಔಪಾಸನದ ಯೋಗ್ಯತೆಗೆ ಕೃಚ್ಛ್ರವು

****** ಪ್ರಾಚೀನಾವೀತಿಯಾಗಿ,** ಈ ಕೆಳಗಿನಂತೆ ಪ್ರೇತನ ಔಪಾಸನಾಗ್ನಿಯ ಪುನಸ್ಸಂಧಾನ ಕಾಲದಲ್ಲಿರಬಹುದಾದ ತಿಥಿವಾರನಕ್ಷತ್ರಯೋಗಕರಣಾದಿ ಎಲ್ಲಾ ದೋಷಗಳ ನಿವಾರಣೆಗಾಗಿ ಹಾಗೂ ಅನೇಕಕಾಲಗಳಿಂದ ಸಾಯಂ–ಪ್ರಾತಃ ಕಾಲಗಳ ಔಪಾಸನವನ್ನು ಬಿಟ್ಟಂತಹ ದೋಷಗಳ ನಿವಾರಣೆಗಾಗಿ, ಪ್ರಾಜಾಪತ್ಯ ಕೃಚ್ಛ್ರಾಚರಣೆಗೆ ಬದಲಾಗಿ ಯಥಾಶಕ್ತಿ ಹಣವನ್ನು ಬ್ರಾಹ್ಮಣರಿಗೆ ಕೊಡುತ್ತೇನೆ ಎಂದು ಸಂಕಲ್ಪಿಸಬೇಕು ॥

(ಪ್ರಾಚೀನಾವೀತೀ), ಪ್ರೇತಾಗ್ನಿಸಂಧಾನಕಾಲೇ ತಿಥಿ ವಾರ ನಕ್ಷತ್ರ ಯೋಗ ಕರಣಾದಿಭಿಃ ಸಂಸೂಚಿತ ಯೋಯೋ ದೋಷಃ ಸಮಜನಿ ತತ್ತದ್ದೋಷ ಪರಿಹಾರಾರ್ಥಂ, ತಥಾ ಅನೇಕಕಾಲ ಸಾಯಂಪ್ರಾತಃ ಔಪಾಸನ ಅಕರಣ ದೊಷ ಪ್ರಾಯಶ್ಚಿತ್ತಾರ್ಥಂ ಚ ಪ್ರಾಜಾಪತ್ಯ ಕೃಚ್ಛ್ರಪ್ರತ್ಯಾಮ್ನಾಯತ್ವೇನ ಹಿರಣ್ಯದಾನಂ ಕರಿಷ್ಯೇ ॥

******** ಈ ಕೆಳಗಿನಂತೆ, **ಉಪವೀತಿಯಾಗಿ,** ಬ್ರಾಹ್ಮಣರಿಗೆ ಉಪಚರಿಸಿ, ಹಣವನ್ನು ಹಿಡಿದುಕೊಂಡು, ಈ ಕೆಳಗಿನ ಶ್ಲೋಕವನ್ನು ಹೇಳಿ, **ಪ್ರಾಚೀನಾವೀತಿಯಾಗಿ,** ಪ್ರೇತನ ಔಪಾಸನಾಗ್ನಿಯ ಪುನಸ್ಸಂಧಾನ ಕಾಲದಲ್ಲಿರಬಹುದಾದ ತಿಥಿವಾರನಕ್ಷತ್ರಯೋಗಕರಣಾದಿ ಎಲ್ಲಾ ದೋಷಗಳ ನಿವಾರಣೆಗಾಗಿ, ಹಾಗೂ ಅನೇಕಕಾಲಗಳಿಂದ ಸಾಯಂ–ಪ್ರಾತಃ ಕಾಲಗಳ ಔಪಾಸನವನ್ನು ಬಿಟ್ಟಿದ್ದರಿಂದ ಉಂಟಾಗಿರುವ ಯಾವಯಾವ ದೋಷಗಳಿವೆಯೋ ಅವೆಲ್ಲವುಗಳ ನಿವಾರಣೆಯ ಅಪೇಕ್ಷೆಯಿಂದ, ಪ್ರಾಜಾಪತ್ಯ ಕೃಚ್ಛ್ರಾಚರಣೆಗೆ ಬದಲಾಗಿ ಯಥಾಶಕ್ತಿ ಹಣವನ್ನು ಬ್ರಾಹ್ಮಣರಿಗೆ ಕೊಡುತ್ತೇನೆ ಎಂದು ಹೇಳಿ, ಉಪವೀತಿಯಿಂದ ಆ ಹಣವನ್ನು ಬ್ರಾಹ್ಮಣರಿಗೆ ಕೊಡಬೇಕು ॥

(ಉಪವೀತೀ), ಮಹಾವಿಷ್ಣು ಸ್ವರೂಪಾಃ ಬ್ರಾಹ್ಮಣಾಃ ಗಂಧಾದಿ ಸಕಲಾರಾಧನೈಃ ಸ್ವರ್ಚಿತಂ ।

ಹಿರಣ್ಯಗರ್ಭ ಗರ್ಭಸ್ಥಂ ಹೇಮಬೀಜಂ ವಿಭಾವಸೋಃ ।
ಅನಂತಪುಣ್ಯಫಲದಂ ಅತಶ್ಶಾಂತಿಂ ಪ್ರಯಚ್ಛಮೇ ॥

(ಪ್ರಾಚೀನಾವೀತೀ) । ಪ್ರೇತಾಗ್ನಿಸಂಧಾನಕಾಲೇ ತಿಥಿ ವಾರ ನಕ್ಷತ್ರ ಯೋಗ ಕರಣಾದಿಭಿಃ ಸಂಸೂಚಿತ ಯೋಯೋ ದೋಷಃ ಸಮಜನಿ ತತ್ತದ್ದೋಷ ಪರಿಹಾರಂ ಕಾಮಯಮಾನಃ, ತಥಾ ಅನೇಕಕಾಲ ಸಾಯಂಪ್ರಾತಃ ಔಪಾಸನ ಅಕರಣೇನ ಯೋಯೋ ದೊಷಸ್ಸಮಜನಿ ತತ್ತದ್ದೋಷ ಪರಿಹಾರಂ ಕಾಮಯಮಾನಃ, ಪ್ರಾಜಾಪತ್ಯ ಕೃಚ್ಛ್ರಪ್ರತ್ಯಾಮ್ನಾಯತ್ವೇನ ಇದಂ ಹಿರಣ್ಯಂ, (ಉಪವೀತೀ) ನಾನಾ ಗೋತ್ರೇಭ್ಯೋ ಬ್ರಾಹ್ಮಣೇಭ್ಯೋ ತುಭ್ಯಮಹಂ ಸಂಪ್ರದದೇ ನಮಮ ನಮಮ ॥

**** ಇದನ್ನು ಉದಾರತೆಯಿಂದ ಸ್ವೀಕರಿಸಿ, ಪ್ರೇತನ ಔಪಾಸನಾಗ್ನಿಯ ಪುನಸ್ಸಂಧಾನ ಕಾಲದಲ್ಲಿರಬಹುದಾದ ತಿಥಿವಾರನಕ್ಷತ್ರಯೋಗಕರಣಾದಿ ಎಲ್ಲಾ ದೋಷಗಳ ನಿವಾರಣೆಯಾಗಲಿ ಹಾಗೆಯೇ ಅನೇಕಕಾಲಗಳಿಂದ ಸಾಯಂ–ಪ್ರಾತಃ ಕಾಲಗಳ ಔಪಾಸನವನ್ನು ಬಿಟ್ಟಿದ್ದರಿಂದ ಉಂಟಾಗಿರುವ ಯಾವಯಾವ ದೋಷಗಳಿವೆಯೋ ಅವೆಲ್ಲವುಗಳ ನಿವಾರಣೆಯಾಗಲಿ ಎಂದು ಬ್ರಾಹ್ಮಣರು ಅನುಗ್ರಹ ಮಾಡಬೇಕೆಂದು ಕರ್ತೃವು ಬ್ರಾಹ್ಮಣರಲ್ಲಿ ಪ್ರಾರ್ಥಿಸಬೇಕು ॥

ಇದಂ ಸ್ವೀಕೃತ್ಯ, ಪ್ರೇತಾಗ್ನಿಸಂಧಾನಕಾಲೇ ತಿಥಿ ವಾರ ನಕ್ಷತ್ರ ಯೋಗ ಕರಣಾದಿಭಿಃ ಸಂಸೂಚಿತ ಯೋಯೋ ದೋಷಃ ಸಮಜನಿ ತತ್ತದ್ದೋಷ ಪರಿಹಾರೋಸ್ತ್ವಿತಿ ತಥಾ ಅನೇಕಕಾಲ ಸಾಯಂಪ್ರಾತಃ ಔಪಾಸನ ಅಕರಣೇನ ಯೋಯೋ ದೊಷಸ್ಸಮಜನಿ ತತ್ತದ್ದೋಷ ಪರಿಹಾರೋಸ್ತ್ವಿತಿ ಭವಂತಃ ಅನುಗೃಹ್ಣಂತು ॥

**** ಪ್ರೇತನ ಔಪಾಸನಾಗ್ನಿಯ ಪುನಸ್ಸಂಧಾನ ಕಾಲದಲ್ಲಿರಬಹುದಾದ ತಿಥಿವಾರನಕ್ಷತ್ರಯೋಗಕರಣಾದಿ ಎಲ್ಲಾ ದೋಷಗಳ ನಿವಾರಣೆಯಾಗಲಿ ಮತ್ತು ಅನೇಕ ಕಾಲಗಳಿಂದ ಸಾಯಂ–ಪ್ರಾತಃ ಕಾಲಗಳ ಔಪಾಸನವನ್ನು ಬಿಟ್ಟಿದ್ದರಿಂದ ಉಂಟಾಗಿರುವ ಯಾವಯಾವ ದೋಷಗಳಿವೆಯೋ ಅವೆಲ್ಲವುಗಳ ನಿವಾರಣೆಯಾಗಲಿ ಎಂದು ಬ್ರಾಹ್ಮಣರು ಅನುಗ್ರಹ ಮಾಡಬೇಕು ॥

ಪ್ರೇತಾಗ್ನಿಸಂಧಾನಕಾಲೇ ತಿಥಿ ವಾರ ನಕ್ಷತ್ರ ಯೋಗ ಕರಣಾದಿಭಿಃ ಸಂಸೂಚಿತ ಯೋಯೋ ದೋಷಃ ಸಮಜನಿ ತತ್ತದ್ದೋಷ ಪರಿಹಾರೋಸ್ತು ತಥಾ ಅನೇಕಕಾಲ ಸಾಯಂಪ್ರಾತಃ ಔಪಾಸನ ಅಕರಣೇನ ಯೋಯೋ ದೊಷಸ್ಸಮಜನಿ ತತ್ತದ್ದೋಷ ಪರಿಹಾರೋಸ್ತು – ಇತಿ ಪ್ರತಿವಚನಂ ॥

8. ಮೃತನ ಔಪಾಸನಾಗ್ನಿಯ ಪುನಸ್ಸಂಧಾನಕ್ಕಾಗಿ ಮತ್ತು ಔಪಾಸನ ಹೋಮಕ್ಕಾಗಿ ಬ್ರಾಹ್ಮಣರಲ್ಲಿ ಅನುಜ್ಞೆ(ಒಪ್ಪಿಗೆ)ಯನ್ನು ಕೇಳುವಿಕೆಯು

**** ಉಪವೀತಿಯಾಗಿ ಸಂಕಲ್ಪವನ್ನು ಆರಂಭಿಸಿ, ಬ್ರಾಹ್ಮಣರಿಗೆ ದಕ್ಷಿಣೆಯನ್ನು ಕೊಟ್ಟು ನಂತರ ಪ್ರಾಚೀನಾವೀತಿಯಾಗಿ, ಮೃತನ ಶರೀರಕ್ಕೆ ಪೈತೃಮೇಧಿಕ ವಿಧಿಯಿಂದ ಸಂಸ್ಕಾರ ಮಾಡಲು, ಮೃತನ ಔಪಾಸನಾಗ್ನಿಯ ಪುನಸ್ಸಂಧಾನವನ್ನು(ಪುನಃ ಅಗ್ನಿಯನ್ನು ಸಿದ್ಧಗೊಳಿಸಲು) ಮಾಡಿಕೊಳ್ಳಲು ಹಾಗೂ ಔಪಾಸನ ಹೋಮವನ್ನು ಮಾಡಲು ಯೋಗ್ಯತೆಯನ್ನು ನೀಡಿರಿ, ಎಂದು ಈ ಕೆಳಗಿನಂತೆ ಬ್ರಾಹ್ಮಣರಲ್ಲಿ ಪ್ರಾರ್ಥಿಸಬೇಕು ॥

(ಉಪವೀತೀ), ಅಶೇಷೇ, ಹೇ ಪರಿಷತ್, ಭವತ್ಪಾದಮೂಲೇ ಮಯಾ ಸಮರ್ಪಿತಾಂ ಇಮಾಂ ಸೌವರ್ಣೀಂ ಅಲ್ಪೀಯಸೀಂ ಅಪಿ ಸ್ವೀಕೃತ್ಯ । (ಪ್ರಾಚೀನಾವೀತೀ) .....ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ (ದಾಯಾಃ/ನಾಮ್ನ್ಯಃ) ಮಮ ಪಿತುಃ(ಮಾತುಃ) ಪ್ರೇತಸ್ಯ(ಪ್ರೇತಾಯಾಃ) ಪೈತೃಮೇಧಿಕೇನ ವಿಧಿನಾ ಸಂಸ್ಕಾರಾರ್ಥಂ (ವಿಚ್ಛಿನ್ನ) ಪ್ರೇತಾಗ್ನಿಸಂಧಾನಂ ತಥಾ ಔಪಾಸನ ಹೋಮಂ ಕರ್ತುಂ ಯೋಗ್ಯತಾಸಿದ್ಧಿಂ ಅನುಗೃಹಾಣ ॥

**** ಮೃತನ ಬಿಟ್ಟುಹೋಗಿರುವ ಔಪಾಸನಾಗ್ನಿಯನ್ನು ಪುನಃ ಸಿದ್ಧಮಾಡಿಕೊಳ್ಳಲು ಯೋಗ್ಯತೆಯು ಸಿಗಲಿ ಎಂದು, ಈ ಕೆಳಗಿನಂತೆ ಆಶೀರ್ವದಿಸಬೇಕು ॥

ವಿಚ್ಛಿನ್ನ ಪ್ರೇತಾಗ್ನಿಸಂಧಾನ ಕರ್ಮ ಯೋಗ್ಯತಾಸಿದ್ಧಿರಸ್ತು, ಔಪಾಸನ ಹೋಮ ಯೋಗ್ಯತಾ ಸಿದ್ಧಿರಸ್ತು – ಇತಿ ಪ್ರತಿವಚನಂ ॥

9. ಮೃತನ ಔಪಾಸನಾಗ್ನಿಯ ಪುನಸ್ಸಂಧಾನದ ಸಂಕಲ್ಪ ಮತ್ತು ಪ್ರಯೋಗವು

**** **ಉಪವೀತಿಯಿಂದ** ಸಂಕಲ್ಪವನ್ನು ಆರಂಭಿಸಿ, ನಂತರ **ಪ್ರಾಚೀನಾವೀತಿಯಾಗಿ,** ಈ ಕೆಳಗಿನಂತೆ ಈ ಗೋತ್ರದ, ಈ ಹೆಸರಿನ ಮೃತನ ಪ್ರೇತತ್ವದ ನಿವಾರಣೆಗಾಗಿ ಮತ್ತು ಮೃತನಶರೀರ ಸಂಸ್ಕಾರಕ್ಕಾಗಿ ಅವನ ಔಪಾಸನಾಗ್ನಿಯನ್ನು ಪುನಃ ಸಿದ್ಧಿಸಿಕೊಳ್ಳುವ ಕರ್ಮವನ್ನು ಮಾಡುತ್ತಿದ್ದೇನೆ, ಎಂದು ಸಂಕಲ್ಪಿಸಬೇಕು ॥

(ಉಪವೀತೀ), ಓಂಓಂಓಂವಿಷ್ಣೋರಾಜ್ಞಯಾ....., ಏವಂಗುಣ ವಿಶೇಷಣ ವಿಶಿಷ್ಟಾಯಾಂ ವಿಷ್ಣುಪುಣ್ಯತಿಥೌ, (ಪ್ರಾಚೀನಾವೀತೀ) ...ಗೋತ್ರಸ್ಯ (ಗೋತ್ರಾಯಾಃ), ...ಪಿತುಃ(ಮಾತುಃ), ...ಶರ್ಮಣಃ(ದಾಯಾಃ/ನಾಮ್ನ್ಯಃ) ಪ್ರೇತಸ್ಯ(ಪ್ರೇತಾಯಾಃ), ಪ್ರೇತತ್ವ ವಿಮೋಕಾರ್ಥಂ, ಮರಣದಿನಾದಾರಭ್ಯ ಅದ್ಯ ಪ್ರಥಮೇsಹನಿ ಪ್ರೇತಸ್ಯ ವಿಚ್ಛಿನ್ನ ಔಪಾಸನಾಗ್ನೇಃ ಪುನಸ್ಸಂಧಾನಂ ಪ್ರೇತಾಗ್ನಿಸಂಧಾನ ವಿಧಿನಾ ಅದ್ಯಕರಿಷ್ಯೇ ॥

**** (ಗೃಹಸ್ಥ ಮತ್ತು ಸುಮಂಗಲಿಯರಿಗೆ ಔರ್ಧ್ವದೈಹಿಕ ಕರ್ಮವು ಔಪಾಸನಾಗ್ನಿಯಿಂದ । ವಿಧುರ ಮತ್ತು ವಿಧವೆಯರಿಗೆ ಉತ್ತಪನಾಗ್ನಿಯಿಂದ । ತ್ರಿದಂಡಿ ಸಂನ್ಯಾಸಿಗಳಿಗೆ ಹಾಗೂ ಬ್ರಹ್ಮಚಾರಿಗಳಿಗೆ ಕಪಾಲಾಗ್ನಿಯಿಂದ । ಸಂಸ್ಕಾರವಾಗದಿರುವ ಬಾಲಕ ಹಾಗೂ ಕನ್ಯೆಯರಿಗೆ ತುಷಾಗ್ನಿಯಿಂದ ಸಂಸ್ಕಾರವನ್ನು ಮಾಡಬೇಕು ॥)

(ಗೃಹಸ್ಥ, ಸುಮಂಗಲ್ಯೋಃ ಔಪಾಸನಾಗ್ನಿಃ । ವಿಧವಾ ವಿದುರಾಣಾಂ ಉತ್ತಪನಾಗ್ನಿಃ । ಯತೀನಾಂ ತಥಾ ಬ್ರಹ್ಮಚಾರಿಣಾಂ ಕಪಾಲಾಗ್ನಿಃ । ಸಂಸ್ಕಾರ ರಹಿತಾನಾಂ, ಬಾಲಾನಾಂ(ಅನುಪನೀತಾನಾಂ) ತಥಾ ಕನ್ಯಾನಾಂ(ಸಂಸ್ಕಾರ ರಹಿತಾನಾಂ) ತುಷಾಗ್ನಿಃ ॥)

ಅಗ್ನಿಸ್ಥಾಪನೆ – ಪರಿಸ್ತರಣ – ಪಾತ್ರಾಸಾದನ

**** ಪ್ರಾಚೀನಾವೀತಿಯಾಗಿ, ದಕ್ಷಿಣಕ್ಕೆ ಮುಗಿಯುವಂತೆ, ಕುಂಡದಲ್ಲಿ ರೇಖೆಗಳನ್ನು ಎಳೆದು, ನೀರಿನಿಂದ ಪ್ರೋಕ್ಷಿಸಿ । ಲೌಕಿಕವಾದ ಅಗ್ನಿಯನ್ನು ಕುಂಡದಲ್ಲಿ ಇಟ್ಟುಕೊಂಡು, ಅದನ್ನು ಚೆನ್ನಾಗಿ ಹತ್ತಿಸಿ । ದಕ್ಷಿಣಕ್ಕೆ ಮತ್ತು ಪೂರ್ವಕ್ಕೆ ಅಗ್ರವು ಬರುವಂತೆ ಪರಿಸ್ತರಣಹಾಕಿ, ಅಂದರೆ ಬಲ(ದಕ್ಷಿಣ)ದ್ದನ್ನು ಕೆಳಕ್ಕೂ, ಎಡ(ಉತ್ತರ)ದ್ದನ್ನು ಮೇಲಕ್ಕೂ, ಇರುವಂತೆ ಹಾಕಬೇಕು । ಅಗ್ನಿಯ ದಕ್ಷಿಣಭಾಗದಲ್ಲಿ, ದಕ್ಷಿಣಾಗ್ರವಾಗಿ ದರ್ಭೆಗಳನ್ನು ಹರಡಿ, ಅದರಮೇಲೆ ಒಂದೊಂದಾಗಿ ದಕ್ಷಿಣಕ್ಕೆ ಮುಗಿಯುವಂತೆ ಯಜ್ಞಪಾತ್ರೆಗಳನ್ನು ಇಡಬೇಕು । ಹೇಗೆಂದರೆ, ಸ್ರುಕ್ – ತುಪ್ಪದಪಾತ್ರೆ – ಪ್ರೋಕ್ಷಣೀಪಾತ್ರೆ – ಸ್ರುವ ಇವುಗಳನ್ನು ಕ್ರಮವಾಗಿ ಕೆಳಮುಖವಾಗಿ ಒಂದೊಂದಾಗಿ ಇಡುವುದು ॥

(ಪ್ರಾಚೀನಾವೀತೀ) ದಕ್ಷಿಣಾಪವರ್ಗಂ ಉಲ್ಲಿಖ್ಯ, ಅವೋಕ್ಷ್ಯ । ಲೌಕಿಕಾಗ್ನಿಂ ಪ್ರತಿಷ್ಠಾಪ್ಯ, ಪ್ರಜ್ವಾಲ್ಯ । ದಕ್ಷಿಣಾ ಪ್ರಾಗಗ್ರೈರ್ದರ್ಭೈಃ ಪರಿಸ್ತೀರ್ಯ, ದಕ್ಷಿಣಾನಧರಾನ್ ಉತ್ತರಾನ್ ಉತ್ತರಾನ್ ಕೃತ್ವಾ । ಅಗ್ನೇರ್ದಕ್ಷಿಣತಃ ದಕ್ಷಿಣಾಗ್ರೇಷು ದರ್ಭೇಷು ಏಕೈಕಶಃ ದರ್ವಿಂ, ಆಜ್ಯಸ್ಥಾಲೀಂ, ಪ್ರೋಕ್ಷಣೀಂ, ಇತರದರ್ವಿಂ ಚ ದಕ್ಷಿಣಾಪವರ್ಗಂ ಸಾದಯಿತ್ವಾ ॥

ಪ್ರೋಕ್ಷಣೀ ಪಾತ್ರೆಯ ಸಂಸ್ಕಾರ

**** ಪ್ರಾಚೀನಾವೀತಿಯಾಗಿ, 1 ದರ್ಭೆಯಿಂದ ಪವಿತ್ರಮಾಡಬೇಕು । ಆ ಪವಿತ್ರದಿಂದ ನೀರನ್ನು ಪ್ರೋಕ್ಷಣೀಪಾತ್ರೆಗೆ ಚುಮುಕಿಸಬೇಕು । ಪ್ರೋಕ್ಷಣೀಪಾತ್ರೆಯನ್ನು ತೆಗೆದುಕೊಂಡು, ತನ್ನಮುಂದೆ ಇಟ್ಟುಕೊಂಡು, ಅದರಲ್ಲಿ ದಕ್ಷಿಣಾಗ್ರವಾಗಿ ಈ ಪವಿತ್ರವನ್ನು ಇಟ್ಟು ।

ಎಳ್ಳನ್ನು ಹಾಕಿ, ನೀರನ್ನು ಹಾಕಿ, ಸುಮ್ಮನೆ 3 ಬಾರಿ ಆ ಪವಿತ್ರದಿಂದ ನೀರನ್ನು ಮೇಲಕ್ಕೆ ಚಿಮ್ಮ(ಹಾರಿಸ)ಬೇಕು। ನಂತರ ಕೆಳಮುಖವಾಗಿರುವ ಪಾತ್ರೆಗಳನ್ನು ಕೈಯಲ್ಲಿ ಪವಿತ್ರವನ್ನು ಹಿಡಿದುಕೊಂಡು ಮೇಲ್ಮುಖಮಾಡುವುದು । ಆ ಪಾತ್ರೆಗಳಿಗೆ ಪವಿತ್ರದಿಂದ, ಸಂಸ್ಕಾರವಾಗಿರುವ ಈ ಪ್ರೋಕ್ಷಣೀಪಾತ್ರೆಯ ನೀರನ್ನು 3 ಬಾರಿ ಚುಮುಕಿಸುವುದು । ನಂತರ ಪ್ರೋಕ್ಷಣೀಪಾತ್ರೆಯನ್ನು ಅಗ್ನಿಯ ಬಲಗಡೆ(ದಕ್ಷಿಣಕ್ಕೆ) ಪರಿಸ್ತರಣದ ಹೊರಗೆ ಇಡಬೇಕು ॥

(ಪ್ರಾಚೀನಾವೀತೀ)ಏಕದರ್ಭೇಣ ಪವಿತ್ರಂ ಕೃತ್ವಾ । ಅದ್ಭಿರನುಮೃಜ್ಯ, ಸಪವಿತ್ರೇಣ ಪಾಣಿನಾ ಪಾತ್ರಾಣಿ ಸಂಮೃಶ್ಯ । ಪ್ರೋಕ್ಷಣೀ ಪಾತ್ರಮಾದಾಯ, ಪುರತೋ ನಿಧಾಯ, ದಕ್ಷಿಣಾಗ್ರಂ ಪವಿತ್ರಂ ನಿಧಾಯ। ತಿಲಾನ್ ಅವಕೀರ್ಯ, ಅಪ ಆಸಿಚ್ಯ, ತೂಷ್ಣೀಂ ಪ್ರಾಕ್ ತ್ರಿರುತ್ಪೂಯ । ಉತ್ತಾನಾನಿ ಪಾತ್ರಾಣಿಕೃತ್ವಾ । ಸರ್ವಾಭಿರದ್ಭಿಃ ತ್ರಿಃ ಪ್ರೋಕ್ಷತಿ । ಅಗ್ನೇಃ ದಕ್ಷಿಣತಃ ನಿಧಾಯ ॥

ತುಪ್ಪದ ಸಂಸ್ಕಾರ

**** ನಂತರ ಪ್ರಾಚೀನಾವೀತಿಯಾಗಿ, ತುಪ್ಪವನ್ನು ಆಜ್ಯಪಾತ್ರೆಗೆ ಹಾಕಿ, ಆ ಪವಿತ್ರವನ್ನು ಅದರಲ್ಲಿ ಇಟ್ಟು, ಅಗ್ನಿಯ ದಕ್ಷಿಣಭಾಗದಲ್ಲಿ ಪರಿಸ್ತರಣದ ಹೊರಗೆ ಈ ಪಾತ್ರೆಯನ್ನು ಇಟ್ಟು । ಅಗ್ನಿಯ ದಕ್ಷಿಣಭಾಗದಿಂದ ಕೆಂಡಗಳನ್ನು ಹೊರತೆಗೆದು ದಕ್ಷಿಣದಲ್ಲಿ ತುಪ್ಪದಪಾತ್ರೆಯ ಕೆಳಗೆಇಟ್ಟು । ಕಾಯಿಸಿ । ದರ್ಭೆಯಿಂದ ಅವದ್ಯೋತನ ಮಾಡಿ । ದರ್ಭೆಗಳ ಅಗ್ರಗಳನ್ನು ತುಪ್ಪಕ್ಕೆ ಹಾಕಿ । ಪುನಃ 1 ದರ್ಭೆಗೆ ಅಗ್ನಿಯನ್ನು ಹತ್ತಿಸಿಕೊಂಡು, ಅಪ್ರದಕ್ಷಿಣವಾಗಿ 3 ಬಾರಿ ತುಪ್ಪದಪಾತ್ರೆಗೆ ಸುತ್ತಿಸಬೇಕು(ಪರ್ಯಗ್ನಿಕರಣ) । ಕೈತೊಳೆದು, ದಕ್ಷಿಣಕ್ಕೆ ತುಪ್ಪದಪಾತ್ರೆಯನ್ನು ತಳ್ಳಿ, ಕೆಂಡಗಳನ್ನು ಪುನಃ ಅಗ್ನಿಗೆಹಾಕಿ । ಆ ಆಜ್ಯಪಾತ್ರೆಯನ್ನು ತನ್ನಮುಂದೆ ಇಟ್ಟುಕೊಂಡು, ದಕ್ಷಿಣಾಗ್ರವಾಗಿ ಆ 1 ದರ್ಭೆಯ ಪವಿತ್ರದಿಂದ ತುಪ್ಪವನ್ನು 3 ಬಾರಿ ವಿಧಿಯಂತೆ ಕಲಕಬೇಕು(ಉತ್ಪವನ) । ನಂತರ ಆ ಪವಿತ್ರವನ್ನು ನೀರಲ್ಲಿ ತೊಳೆದು, ಬಿಚ್ಚಿ, ಅಗ್ನಿಯಲ್ಲಿ ಹಾಕಬೇಕು ॥

(ಪ್ರಾಚೀನಾವೀತೀ), ಆಜ್ಯಂ, ವಿಲಾಪ್ಯ, ದಕ್ಷಿಣೇನ ಅಗ್ನಿಂ ಪವಿತ್ರಾಂತರ್ಹಿತಾಯಾಂ ಆಜ್ಯಸ್ಥಾಲ್ಯಾಂ ಆಜ್ಯಂ ನಿರುಪ್ಯ । ದಕ್ಷಿಣತಃ ಅಂಗಾರಾನ್ ನಿರೂಹ್ಯ । ತೇಷ್ವಧಿಶ್ರಿತ್ಯ । ಜ್ವಲತಾವದ್ಯೋತ್ಯ । ದರ್ಭಾಗ್ರಂ ಪ್ರಚ್ಛಿದ್ಯ, ಪ್ರಕ್ಷಾಳ್ಯ, ಆಜ್ಯೇ ಪ್ರತ್ಯಸ್ಯ । ಅಪಸವ್ಯಂ ತ್ರಿಃ ಪರ್ಯಗ್ನಿ ಕೃತ್ವಾ । ಅಪ ಉಪಸ್ಪೃಶ್ಯ, ದಕ್ಷಿಣತಃ ಉದ್ವಾಸ್ಯ, ಅಂಗಾರಾನ್ ಪ್ರತ್ಯೂಹ್ಯ । ಅಪರೇಣಾಗ್ನಿಂ, ದಕ್ಷಿಣಾಗ್ರೇಣ ಪವಿತ್ರೇಣ ಪುನರಾಹಾರಮಾಜ್ಯಂ ತ್ರಿರುತ್ಪೂಯ । ಅದ್ಭಿಃ ಸಂಮೃಜ್ಯ, ಗ್ರಂಥಿಂ ವಿಸ್ರಸ್ಯ, ಪವಿತ್ರಮಗ್ನೌ ಪ್ರಹರತಿ ॥

ಸ್ರುಕ್, ಸ್ರುವ ಸಂಸ್ಕಾರ – ಪರಿಷೇಚನ

**** ನಂತರ, ಪ್ರಾಚೀನಾವೀತಿಯಾಗಿ, ಸ್ರುಕ್ ಸ್ರುವಗಳನ್ನು ಅಗ್ನಿಯಲ್ಲಿ ಕಾಯಿಸಿ, ದರ್ಭೆಗಳಿಂದ ವಿಧಿಯಂತೆ ಸಂಸ್ಕರಿಸಿ । ಪುನಃ ಅಗ್ನಿಯಲ್ಲಿ ಕಾಯಿಸಿ, ಅವುಗಳಿಗೆ ನೀರನ್ನು ಪ್ರೋಕ್ಷಿಸಿ, ಅವುಗಳನ್ನು ಆಜ್ಯಪಾತ್ರೆಯ ಪಕ್ಕದಲ್ಲಿಡಬೇಕು(ಆಜ್ಯಪಾತ್ರೆಯ ದಕ್ಷಿಣಕ್ಕೆ ಮುಗಿಯುವಂತೆ) । ಮತ್ತು ಸಂಸ್ಕಾರಕ್ಕೆ ಬಳಸಿದ ದರ್ಭೆಗಳನ್ನು ತೊಳೆದು ಅಗ್ನಿಗೆ ಹಾಕಬೇಕು । ಅಮಂತ್ರಕವಾಗಿ, ಅಪ್ರದಕ್ಷಿಣೆಯಾಗಿ 1 ಸಲ ನೀರಿನಿಂದ ಅಗ್ನಿಗೆ ಪೂರ್ವಪರಿಷೇಚನ ಮಾಡಬೇಕು ॥

(ಪ್ರಾಚೀನಾವೀತೀ)ಯೇನ ಜುಹೋತಿ ತದಗ್ನೌ ಪ್ರತಿತಪ್ಯ, ದರ್ಭೈಃ ಸಂಮೃಜ್ಯ । ಪುನಃ ಪ್ರತಿತಪ್ಯ, ಪ್ರೋಕ್ಷ್ಯ, ಆಜ್ಯಪಾತ್ರಾತ್ ದಕ್ಷಿಣತೋ ನಿಧಾಯ । ದರ್ಭಾನದ್ಭಿಃ ಸಂಸ್ಪೃಶ್ಯ, ಅಗ್ನೌ ಪ್ರಹರತಿ । ತೂಷ್ಣೀಂ ಸಮಂತಂ ಅಪ್ರದಕ್ಷಿಣಂ ಪರಿಷಿಚ್ಯ ॥

10. ಪುನಸ್ಸಂಧಾನ ಹೋಮವು

**** ಪ್ರಾಚೀನಾವೀತಿಯಾಗಿ, 12 ಸಲ ತುಪ್ಪವನ್ನು ಸ್ರುಕ್ಕಿಗೆ ಹಾಕಿಕೊಂಡು, ಪ್ರಜಾಪತಿದೇವತೆಯನ್ನು ಮನಸ್ಸಿನಲ್ಲಿ ಧ್ಯಾನಿಸಿ, ಅಮಂತ್ರಕವಾಗಿ ಹೋಮಿಸಬೇಕು ॥

(ಪ್ರಾಚೀನಾವೀತೀ)ದ್ವಾದಶಗೃಹೀತೇನ ಸ್ರುಚಂ ಪೂರಯಿತ್ವಾ, ಪ್ರಜಾಪತಿಂ ಮನಸಾ ಧ್ಯಾಯನ್, ತೂಷ್ಣೀಂ ಹುತ್ವಾ, ಪ್ರಜಾಪತಯ ಇದಂ ನಮಮ ॥

**** ಅನೇಕ ಕಾಲಗಳಿಂದ ಸಾಯಂ ಪ್ರಾತಃ ಕಾಲಗಳ ಔಪಾಸನವನ್ನು ಬಿಟ್ಟಂತಹ ದೋಷಗಳ ನಿವಾರಣೆಗಾಗಿ ಮತ್ತು ಅಗ್ನಿಸಿದ್ಧಿಗಾಗಿ, ಈ ಕೆಳಗಿನ ಮಂತ್ರಗಳಿಗೆ 4 ಸಲ ಸ್ರುಕ್ಕಿನಲ್ಲಿ, ತುಪ್ಪವನ್ನು ಹಾಕಿಕೊಂಡು ಹೋಮಿಸುತ್ತೇನೆ ಎಂದು ಹೇಳಿ । ಈ ಕೆಳಗಿನಂತೆ ಹೋಮಿಸಬೇಕು ॥

ಅನೇಕಕಾಲ ಸಾಯಂ ಪ್ರಾತರೌಪಾಸನಾಕರಣ ದೋಷ ಪರಿಹಾರಾರ್ಥಂ, ಅಗ್ನಿಸಿದ್ಧ್ಯರ್ಥಂ ಪ್ರಾಯಶ್ಚಿತ್ತಂ ಹೋಷ್ಯಾಮಿ ॥

**** ಪ್ರಾಚೀನಾವೀತಿಯಾಗಿ, ಪ್ರತಿಸಲವೂ 4 ಸಲ ತುಪ್ಪವನ್ನು ಸ್ರುಕ್ಕಿಗೆ ಹಾಕಿಕೊಂಡು, ಈ ಕೆಳಗಿನ ಮಂತ್ರದಿಂದ ಹೋಮಿಸಬೇಕು ॥

(ಪ್ರಾಚೀನಾವೀತೀ), ಪ್ರಧಾನದರ್ವ್ಯಾಂ ಚತುರ್ಗೃಹೀತೇನಾಜ್ಯೇನ ।

ಓಂ ಅಯಾಶ್ಚಾಗ್ನೇಸಿ । ಅನಭಿಶಸ್ತಿಶ್ಚ । ಸತ್ಯಮಿತ್ವಂ । ಅಯಾ ಅಸಿ ॥ ಅಯಸಾ ಮನಸಾ । ಧೃತೋಯಸಾ । ಹವ್ಯಮೂಹಿಷೇ । ಅಯಾನೋ ಧೇಹಿ । ಭೇಷಜಗ್ಂ ಸ್ವಾಹಾ ॥ ಅಗ್ನಯೇ ಅಯಸ ಇದಂ ನಮಮ ॥

ಓಂ ಭೂಃ ಸ್ವಾಹಾ ॥ ಅಗ್ನಯ ಇದಂ ನಮಮ ॥

ಓಂ ಭುವಸ್ಸ್ವಾಹಾ ॥ ವಾಯವ ಇದಂ ನಮಮ ॥

ಓಗ್ಂ ಸುವಸ್ಸ್ವಾಹಾ ॥ ಸೂರ್ಯಾಯ ಇದಂ ನಮಮ ॥

ಓಂ ಅನಾಜ್ಞಾತಂ । ಯದಾಜ್ಞಾತಂ । ಯಜ್ಞಸ್ಯ । ಕ್ರಿಯತೇ ಮಿಥು ॥ ಅಗ್ನೇ ತದಸ್ಯ । ಕಲ್ಪಯ । ತ್ವಗ್ಂ ಹಿ । ವೇತ್ಥ । ಯಥಾ ತಥಂ । ಸ್ವಾಹಾ ॥ ಅಗ್ನಯ ಇದಂ ನಮಮ ॥

ಓಂ ಪುರುಷ ಸಂಮಿತಃ । ಯಜ್ಞಃ । ಯಜ್ಞಃ । ಪುರುಷ ಸಂಮಿತಃ ॥ ಅಗ್ನೇ ತದಸ್ಯ । ಕಲ್ಪಯ । ತ್ವಗ್ಂ ಹಿ । ವೇತ್ಥ । ಯಥಾ ತಥಂ । ಸ್ವಾಹಾ ॥ ಅಗ್ನಯ ಇದಂ ನಮಮ ॥

ಓಂ ಯತ್ಪಾಕತ್ರಾ । ಮನಸಾ । ದೀನದಕ್ಷಾ ನ । ಯಜ್ಞಸ್ಯ । ಮನ್ವತೇ । ಮರ್ತಾಸಃ ॥ ಅಗ್ನಿಷ್ಟತ್ । ಹೋತಾ । ಕ್ರತುವಿತ್ । ವಿಜಾನನ್ । ಯಜಿಷ್ಠೋ ದೇವಾನ್ । ಋತುಷೋ ಯಜಾತಿ । ಸ್ವಾಹಾ ॥ ಅಗ್ನಯ ಇದಂ ನಮಮ ॥

**** ಉಪವೀತಿಯಾಗಿ, ಸರ್ವಪ್ರಾಯಶ್ಚಿತ್ತ ಸ್ವರೂಪವಾದ ಆಹುತಿಯನ್ನು ಸ್ರುವದಲ್ಲಿ ಒಮ್ಮೆ ಕೊಡುತ್ತೇನೆ ॥

(ಉಪವೀತೀ)ಸರ್ವಪ್ರಾಯಶ್ಚಿತ್ತಾಹುತಿಂ ಹೋಷ್ಯಾಮಿ । ಸ್ರುವೇಣಾಜ್ಯಂ ಗೃಹೀತ್ವಾ ।

ಓಂ ಭೂರ್ಭವಸ್ಸುವಸ್ಸ್ವಾಹಾ ॥ ಪ್ರಜಾಪತಯ ಇದಂ ನಮಮ ॥

**** ನಂತರ ಪ್ರಾಚೀನಾವೀತಿಯಾಗಿ, ಅಮಂತ್ರಕವಾಗಿ, ಅಪ್ರದಕ್ಷಿಣೆಯಾಗಿ ಉತ್ತರಪರಿಷೇಚನವನ್ನು ಮಾಡಬೇಕು ॥

(ಪ್ರಾಚೀನಾವೀತೀ)ತೂಷ್ಣೀಂ ಸಮಂತಂ ಅಪ್ರದಕ್ಷಿಣಂ ಪರಿಷಿಚ್ಯ ॥

11. ಸಂಜೆ ಮತ್ತು ಬೆಳಗಿನ ಔಪಾಸನ ಹೋಮವು

****** ಉಪವೀತಿಯಿಂದ** ಸಂಕಲ್ಪವನ್ನು ಆರಂಭಿಸಿ, ನಂತರ **ಪ್ರಾಚೀನಾವೀತಿಯಾಗಿ,** ಈ ಕೆಳಗಿನಂತೆ ಈ ಗೋತ್ರದ, ಈ ಹೆಸರಿನ ಮೃತನ ಪ್ರೇತತ್ವದ ನಿವಾರಣೆಗಾಗಿ ಮತ್ತು ಮೃತನಶರೀರ ಸಂಸ್ಕಾರಕ್ಕಾಗಿ ಅವನ ಔಪಾಸನ ಹೋಮವನ್ನು ಮಾಡುತ್ತಿದ್ದೇನೆ, ಎಂದು ಸಂಕಲ್ಪಿಸಬೇಕು ॥

(ಉಪವೀತೀ), ಓಂಓಂಓಂವಿಷ್ಣೋರಾಜ್ಞಯಾ....., ಏವಂಗುಣ ವಿಶೇಷಣ ವಿಶಿಷ್ಟಾಯಾಂ ವಿಷ್ಣುಪುಣ್ಯತಿಥೌ, (ಪ್ರಾಚೀನಾವೀತೀ) ...ಗೋತ್ರಸ್ಯ (ಗೋತ್ರಾಯಾಃ), ...ಪಿತುಃ(ಮಾತುಃ), ...ಶರ್ಮಣಃ(ದಾಯಾಃ/ನಾಮ್ನ್ಯಃ) ಪ್ರೇತಸ್ಯ(ಪ್ರೇತಾಯಾಃ), ಮೃತಸ್ಯ (ಪ್ರೇತಸ್ಯ) ಸಾಯಂಪ್ರಾತಃ ಔಪಾಸನಂ ಸಮಾನಂತಂತ್ರೇಣ ಹೋಷ್ಯಾಮಿ ॥

**** ಪ್ರಾಚೀನಾವೀತಿಯಿಂದ, ಅಮಂತ್ರಕವಾಗಿ ಅಗ್ನಿಗೆ, ಅಪ್ರದಕ್ಷಿಣೆಯಾಗಿ ಪೂರ್ವಪರಿಷೇಚನ ಮಾಡಬೇಕು । ಅಮಂತ್ರಕವಾಗಿ ಔಪಾಸನಾಗ್ನಿಯಲ್ಲಿ ಅಕ್ಕಿಯಿಂದ 4 ಸಲ ಹೋಮ ಮಾಡಬೇಕು । ಪ್ರಾಚೀನಾವೀತಿಯಾಗಿ, ಪುನಃ ಅಮಂತ್ರಕವಾಗಿ ಉತ್ತರಪರಿಷೇಚನ ಮಾಡಬೇಕು ॥

(ಪ್ರಾಚೀನಾವೀತೀ) ತೂಷ್ಣೀಂ ಅಪ್ರದಕ್ಷಿಣಂ ಪರಿಷಿಚ್ಯ । ತೂಷ್ಣೀಂ ಔಪಾಸನಂ ಹುತ್ವಾ । ಪೂರ್ವವತ್ ತೂಷ್ಣೀಂ ಅಪ್ರದಕ್ಷಿಣಂ ಉತ್ತರಂ ಪರಿಷಿಂಚತಿ ॥

12. ಆರು ರೀತಿಯ ದೋಷಯುಕ್ತ ಲಕ್ಷಣಗಳಿಂದ ಸತ್ತರೆ, ಆ ದೋಷದ ಪರಿಹಾರಕ್ಕಾಗಿ, ದಾನ ಮತ್ತು ಪ್ರಾಯಶ್ಚಿತ್ತಹೋಮವು

**** ಈ ಕೆಳಗಿನಂತೆ, ಉಪವೀತಿಯಿಂದ ಸಂಕಲ್ಪವನ್ನು ಪ್ರಾರಂಭಿಸಿ, ನಂತರ ಪ್ರಾಚೀನಾವೀತಿಯಾಗಿ, ದೇಹದ ಮೇಲ್ಭಾಗದ ವಾಂತಿ ಮುಂತಾದವುಗಳಿಂದ ಮತ್ತು ದೇಹದ ಕೆಳಭಾಗದ ಮಲಮೂತ್ರಾದಿಗಳಿಂದ ಮತ್ತು ಸ್ನಾನವಿಲ್ಲದೇ(ಅಶುಚಿ) ಇದ್ದಾಗ ಮತ್ತು ಭೂಸ್ಪರ್ಶವಿಲ್ಲದೇ ಇದ್ದಾಗ ಮತ್ತು ಮಂಚ ಮುಂತಾದವುಗಳ ಮೇಲೆ ಇದ್ದಾಗ ಮತ್ತು ಆಶೌಚಾದಿಗಳಿದ್ದಾಗ ಈ ರೀತಿಯ 6 ವಿಧದ ಲಕ್ಷಣಗಳಲ್ಲಿ ಪ್ರಾಪ್ತವಾಗಿರುವ ಮರಣಕ್ಕೆ, ಆಯಾಯಾ ಲಕ್ಷಣಗಳ ದೋಷಗಳಿಗೆ ಪ್ರತ್ಯೇಕವಾಗಿ ಪ್ರಾಯಶ್ಚಿತ್ತವನ್ನು ಯಥಾಶಕ್ತಿ ಹಿರಣ್ಯದಾನದ ಮೂಲಕ ಹಾಗೂ ಹೋಮದ ಮೂಲಕ ಮಾಡಿಕೊಳ್ಳುತ್ತೇನೆ, ಎಂದು ಸಂಕಲ್ಪಿಸುವುದು (ಹೋಮಗಳ ವಿವರಗಳನ್ನು ಇದೇ ಗ್ರಂಥದ **ವಿಶೇಷ ವಿಮರ್ಶಾ ವಿಭಾಗದಲ್ಲಿ** ಮುದ್ರಿಸಲಾಗಿದೆ) ॥

(ಉಪವೀತೀ)ಓಂಓಂಓಂ, ಗೋವಿಂದಗೋವಿಂದ ವಿಷ್ಣೋರಾಜ್ಞಯಾ .....ಏವಂಗುಣ.....ವಿಷ್ಣುಪುಣ್ಯತಿಥೌ, (ಪ್ರಾಚೀನಾವೀತಿ), ...ಗೋತ್ರಸ್ಯ (ಗೋತ್ರಾಯಾಃ), ಪಿತುಃ(ಮಾತುಃ), ...ಶರ್ಮಣಃ(ದಾಯಾಃ/ನಾಮ್ನ್ಯಃ), ಮರಣಸಮಯೇ ಊರ್ಧ್ವೋಚ್ಛಿಷ್ಟ – ಅಧೋಚ್ಛಿಷ್ಟ – ಅಸ್ನಾನ ಮರಣ – ಅಂತರಿಕ್ಷಮರಣ – ಖಿಟ್ವಾಮರಣ – ಪರ್ಯುಷಿತ ಮರಣ, ಏತೇಷಾಂ ಷಣ್ಣಿಮಿತ್ತ ದೋಷ ನಿವೃತ್ಯರ್ಥಂ, ಏಕೈಕಸ್ಯ ಪಾಪಸ್ಯ ಕೃಚ್ಛ್ರತ್ರಯ ಪ್ರತಿನಿಧಿ, ಯಥಾಸಂಭವ ಹಿರಣ್ಯದಾನಂ ತಥಾ ಪ್ರಾಯಶ್ಚಿತ್ತಹೋಮಂ ಚ ಕರಿಷ್ಯೇ ॥

**** ಇದೇ ಸಮಯದಲ್ಲಿ ಈಗ ವಿವಿಧ ರೀತಿಯ ಲಕ್ಷಣಗಳ ಮರಣಕ್ಕೆ ತಿಳಿಸಿರುವ ಹೋಮಗಳನ್ನು ಇದೇ ಅಗ್ನಿಯಲ್ಲಿ ಪರಿಷೇಚನ ಮಾಡಿಕೊಂಡು ಮಾಡಬೇಕು ॥

ನಂತರ ಈ ಕೆಳಗಿನಂತೆ, **ಉಪವೀತಿಯಾಗಿ,** ಬ್ರಾಹ್ಮಣರಿಗೆ ಉಪಚರಿಸಿ, ಹಣವನ್ನು ಹಿಡಿದುಕೊಂಡು, ಪ್ರಾಚೀನಾವೀತಿಯಾಗಿ, ಮೃತರಾದ ಇವರು ಸಾಯುವ ಸಮಯದಲ್ಲಿ ಮೇಲೆ ತಿಳಿಸಿರುವ 6 ರೀತಿಯ ಲಕ್ಷಣಗಳು ಕಂಡುಬಂದಿದ್ದರೆ, ಆ ಲಕ್ಷಣಗಳಿಂದ ಉಂಟಾಗುವ ದೋಷಗಳ ನಿವಾರಣೆಗಾಗಿ ಹಾಗೂ ಮೃತರಾದ ವ್ಯಕ್ತಿಯು ಉತ್ತಮಲೋಕಗಳನ್ನು ಪಡೆಯಲು, ಆ ಒಂದೊಂದು ಲಕ್ಷಣಗಳಿಗೂ ಕೃಚ್ಛ್ರಪ್ರತಿನಿಧಿಯಾದ ಈ ಹಣವನ್ನು ಬ್ರಾಹ್ಮಣರಿಗೆ ಸಮರ್ಪಿಸುತ್ತಿದ್ದೇನೆ ॥

(ಉಪವೀತೀ), ಮಹಾವಿಷ್ಣು ಸ್ವರೂಪಾಃ ಬ್ರಾಹ್ಮಣಾಃ ಗಂಧಾದಿ ಸಕಲಾರಾಧನೈಃ ಸ್ವರ್ಚಿತಂ ।

ಹಿರಣ್ಯಗರ್ಭ ಗರ್ಭಸ್ಥಂ ಹೇಮಬೀಜಂ ವಿಭಾವಸೋಃ ।
ಅನಂತಪುಣ್ಯ ಫಲದಂ ಅತಶ್ಶಾಂತಿಂ ಪ್ರಯಚ್ಛ ಮೇ ॥

(ಪ್ರಾಚೀನಾವೀತೀ), ...ಗೋತ್ರಸ್ಯ(ಗೋತ್ರಾಯಾಃ), ...ಪಿತುಃ(ಮಾತುಃ), ...ಶರ್ಮಣಃ(ದಾಯಾಃ/ನಾಮ್ನ್ಯಃ), ಮರಣಕಾಲೇ ಪೂರ್ವೋಕ್ತ ಷಣ್ಣಿಮಿತ್ತಾನಾಂ ಸರ್ವೇಷಾಂ ದೋಷಾಣಾಂ ಸದ್ಯಃ ಅಪನೋದನಂ ಕಾಮಯಮಾನಃ, ಮಮ ಪಿತುಃ(ಮಾತುಃ) ವಸ್ವಾದಿ ಪುಣ್ಯಲೋಕಂ ಕಾಮಯಮಾನಃ, ಏಕೈಕಸ್ಯ ಪಾಪಸ್ಯ ಯಥಾಶಕ್ತಿ ಕೃಚ್ಛ್ರಪ್ರತಿನಿಧಿ ಹಿರಣ್ಯಾನಿ, (ಉಪವೀತೀ), ನಾನಾ ಗೋತ್ರೇಭ್ಯಃ ಬ್ರಾಹ್ಮಣೇಭ್ಯಃ ತುಭ್ಯಮಹಂ ಸಂಪ್ರದದೇ ನಮಮ ನಮಮ ॥

**** ಇದನ್ನು ಉದಾರತೆಯಿಂದ ಸ್ವೀಕರಿಸಿ, ಮೃತಾರಾದ ಇವರು ಸಾಯುವ ಸಮಯದಲ್ಲಿ ಮೇಲೆ ತಿಳಿಸಿರುವ 6 ರೀತಿಯ ಲಕ್ಷಣಗಳು ಕಂಡುಬಂದಿದ್ದರೆ, ಆ ಲಕ್ಷಣದಿಂದ ಉಂಟಾಗುವ ದೋಷಗಳ ನಿವಾರಣೆಯಾಗಲಿ ಹಾಗೂ ಮೃತರಾದ ವ್ಯಕ್ತಿಯು ಉತ್ತಮಲೋಕಗಳನ್ನು ಪಡೆಯಲಿ ಎಂದು ತಾವುಗಳು ಅನುಗ್ರಹವನ್ನು ಮಾಡಿರಿ ಎಂದು ಪ್ರಾರ್ಥಿಸಬೇಕು ॥

ಮರಣಕಾಲೇ ಪೂರ್ವೋಕ್ತ ಷಣ್ಣೈಮಿತ್ತಾನಾಂ ಸರ್ವೇಷಾಂ ದೋಷಾಣಾಂ ಪರಿಹಾರೋಸ್ತ್ವಿತಿ, ವಸ್ವಾದಿ ಪುಣ್ಯಲೋಕಾವಾಪ್ತಿರಸ್ತ್ವಿತಿ ಭವಂತಃ ಅನುಗೃಹ್ಣಂತು ॥

**** ಮೃತಾರಾದ ಇವರು ಸಾಯುವ ಸಮಯದಲ್ಲಿ ಮೇಲೆ ತಿಳಿಸಿರುವ 6 ರೀತಿಯ ಲಕ್ಷಣಗಳು ಕಂಡುಬಂದಿದ್ದರೆ, ಆ ಲಕ್ಷಣದಿಂದ ಉಂಟಾಗುವ ದೋಷಗಳ ನಿವಾರಣೆಯಾಗಲಿ ಹಾಗೂ ಮೃತರಾದ ವ್ಯಕ್ತಿಯು ಉತ್ತಮಲೋಕಗಳನ್ನು ಪಡೆಯಲಿ ಎಂದು ಬ್ರಾಹ್ಮಣರು ಅನುಗ್ರಹವನ್ನು ಈ ಕೆಳಗಿನಂತೆ ಮಾಡಬೇಕು ॥

ಮರಣಕಾಲೇ ಪೂರ್ವೋಕ್ತ ಷಣ್ಣೈಮಿತ್ತಾನಾಂ ಸರ್ವೇಷಾಂ ದೋಷಾಣಾಂ ಪರಿಹಾರೋಸ್ತು, ವಸ್ವಾದಿ ಪುಣ್ಯಲೋಕಾವಾಪ್ತಿರಸ್ತು – ಇತಿ ಪ್ರತಿವಚನಂ ॥

13. ಮೃತನನ್ನು ಮಂತ್ರದಿಂದ ಮಲಗಿಸುವಿಕೆ

**** ಪ್ರಾಚೀನಾವೀತಿಯಾಗಿ, ದಕ್ಷಿಣದಿಕ್ಕಿಗೆ ತಲೆಮಾಡಿ ಮಲಗಿಸಲ್ಪಟ್ಟಿರುವ ಪ್ರೇತದ ಕೆಳಗೂ ದರ್ಭೆಗಳನ್ನು ಈ ಕೆಳಗಿನ ಮಂತ್ರದಿಂದ ದಕ್ಷಿಣಾಗ್ರವಾಗಿ ಹಾಕಬೇಕು ॥

(ಪ್ರಾಚೀನಾವೀತೀ)ತೇಷು ದಕ್ಷಿಣಾಶಿರಸಂ ಪ್ರೇತಂ ಸಂವೇಶಯಂತಿ ಸರ್ವಸ್ಯ ಪ್ರತಿಶೀವರಿ ಇತಿ ಮಂತ್ರೇಣ ।

ಓಂ ಸರ್ವಸ್ಯ । ಪ್ರತಿಶೀವರೀ । ಭೂಮಿ ಸ್ತ್ವಾ । ಉಪಸ್ಥೇ । ಆಧಿತ ॥
ಸ್ಯೋನಾಸ್ಮೈ । ಸುಷದಾಭವ । ಯಚ್ಛಾಸ್ಮೈ । ಶರ್ಮ । ಸಪ್ರಥಾಃ ॥

**** ಇದೇ ಮಂತ್ರವನ್ನು ಕೆಳಗಿನಂತೆ ಮೃತಸ್ತ್ರೀಯರಿಗೆ ಹೇಳಬೇಕು ॥

ಓಂ ಸರ್ವಸ್ಯ । ಪ್ರತಿಶೀವರೀ । ಭೂಮಿ ಸ್ತ್ವಾ । ಉಪಸ್ಥೇ । ಆಧಿತ ॥
ಸ್ಯೋನಾಸ್ಯೈ । ಸುಷದಾಭವ । ಯಚ್ಛಾಸ್ಯೈ । ಶರ್ಮ । ಸಪ್ರಥಾಃ ॥

14. ಹೋಮ ಪಾತ್ರೆಗಳ ಇಡುವಿಕೆ ಮತ್ತು ಪಾತ್ರೆಗಳ ಸಂಸ್ಕಾರ

**** ಪ್ರಾಚೀನಾವೀತಿಯಿಂದ, ಅಗ್ನಿಗೆ, ದಕ್ಷಿಣಾಗ್ರವಾಗಿ ಪರಿಸ್ತರಣವನ್ನು ಹಾಕಿ । ಅಗ್ನಿಯ ದಕ್ಷಿಣಭಾಗದಲ್ಲಿ ದರ್ಭೆಗಳನ್ನು ದಕ್ಷಿಣಾಗ್ರವಾಗಿ ಹರಡಿ । ಸ್ರುಕ್, ಆಜ್ಯಪಾತ್ರೆ, ಪ್ರೋಕ್ಷಣೀಪಾತ್ರೆ, ಸ್ರುವಗಳನ್ನು ದಕ್ಷಿಣಕ್ಕೆ ಮುಗಿಯುವಂತೆ ಒಂದೊಂದಾಗಿ ಇಡಬೇಕು । ಒಂದು ದರ್ಭೆಯ ಪವಿತ್ರದಿಂದ, ಪ್ರೋಕ್ಷಣೀ ಮತ್ತು ಆಜ್ಯಸಂಸ್ಕಾರಗಳನ್ನು ವಿಧಿಯಂತೆ ಮಾಡಬೇಕು । ಸ್ರುಕ್ ಸ್ರುವಗಳನ್ನೂ ಸಂಸ್ಕರಿಸಬೇಕು । ಅಪ್ರದಕ್ಷಿಣವಾಗಿ, ಅಮಂತ್ರಕವಾಗಿ ಅಗ್ನಿಗೆ ಪರಿಷೇಚನವನ್ನು ಮಾಡಬೇಕು । ಇವೆಲ್ಲವನ್ನೂ ಹಿಂದೆ ತಿಳಿಸಿದ ಔಪಾಸನಾಗ್ನಿಯ ಪುನಸ್ಸಂಧಾನ ಪ್ರಯೋಗದಂತೆಯೇ ಮಾಡಬೇಕು ॥

(ಪ್ರಾಚೀನಾವೀತೀ), ಅಗ್ನಿಂ ದಕ್ಷಿಣಾಗ್ರೈಃ ದರ್ಭೈಃ ಪರಿಸ್ತೀರ್ಯ । ಅಗ್ನೇಃ ದಕ್ಷಿಣತಃ ದರ್ಭಾನ್ ದಕ್ಷಿಣಾಗ್ರೈಃ ಆಸ್ತೀರ್ಯ । ಪಾತ್ರಾಸಾದನಂ, ದರ್ವೀಂ – ಆಜ್ಯಸ್ಥಾಲೀಂ – ಪ್ರೋಕ್ಷಣೀಂ –ಇತರದರ್ವೀಂ(ಚತುಷ್ಪಾತ್ರ ಪ್ರಯೋಗಃ) ಇತ್ಯೇಕೈಕಶಃ ಸಾದಯಿತ್ವಾ । ಏಕಪವಿತ್ರೇಣ ಪ್ರೋಕ್ಷಣ್ಯಾಜ್ಯ ಸಂಸ್ಕಾರಃ । ದರ್ವೀಂ ಚ ಸಂಮೃಜ್ಯ । ತೂಷ್ಣೀಂ ಪ್ರಸವ್ಯಮಗ್ನಿಂ ಪರಿಷಿಚ್ಯ ॥

**** ಸ್ರುವದಿಂದ ಸ್ರುಕ್ಕಿಗೆ ತುಪ್ಪವನ್ನು 4 ಸಲ ಹಾಕಿಕೊಂಡು, ಈ ಕೆಳಗೆ ತಿಳಿಸಿರುವ ಮಂತ್ರದಿಂದ ಹೋಮವನ್ನು ಪ್ರಾಚೀನಾವಿತದಿಂದ ಮಾಡಬೇಕು । ಪ್ರೇತನನ್ನು ಉದ್ದೇಶಿಸಿ, ದರ್ಭೆಯನ್ನು ಮುಟ್ಟಿಕೊಂಡು ಹೋಮಿಸಬೇಕು ॥

(ಪ್ರಾಚೀನಾವೀತೀ) ಪ್ರಧಾನದರ್ವ್ಯಾಂ ಚತುರ್ಗೃಹೀತೇನಾಜ್ಯೇನ । ಪ್ರೇತಮನ್ವಾರಭ್ಯ ಜುಹೋತಿ ।

ಓಂ ಪರೇಯುವಾಗ್ಂ ಸಂ । ಪ್ರವತಃ । ಮಹೀರನು । ಬಹುಭ್ಯಃ । ಪಂಥಾಂ ।
ಅನಪಸ್ಪಶಾನಮ್ ॥ ವೈವಸ್ವತಂ । ಸಂಗಮನಂ । ಜನಾನಾಂ । ಯಮಂ ।
ರಾಜಾನಂ । ಹವಿಷಾ । ದುವಸ್ಯತ । ಸ್ವಾಹಾ ॥ ಯಮಾಯರಾಜ್ಞೇ
ವೈವಸ್ವತಾಯೇದಂ (ಯಮಾಯೇದಮಿತಿ ವಾ) ॥

**** ಉಪವೀತಿಯಾಗಿ, ಸ್ರುವದಿಂದ ಸಮಸ್ತವ್ಯಾಹೃತಿಯಿಂದ ಹೋಮಿಸಬೇಕು ॥

(ಉಪವೀತೀ), ಸ್ರುವೇಣ ಆಜ್ಯಂ ಗೃಹೀತ್ವಾ, ಸರ್ವಪ್ರಾಯಶ್ಚಿತ್ತಾಹುತಿಂ ಹುತ್ವಾ ॥

ಓಂ ಭೂರ್ಭುವಸ್ಸುವಸ್ಸ್ವಾಹಾ – ಪ್ರಜಾಪತಯ ಇದಂ ನಮಮ ॥

**** ನಂತರ ಹಿಂದಿನಂತೆ, ಅಪ್ರದಕ್ಷಿಣೆಯಾಗಿ, ಅಮಂತ್ರಕವಾಗಿ ಅಗ್ನಿಗೆ ಉತ್ತರಪರಿಷೇಚನ ಮಾಡಬೇಕು ॥

ಪುನಃ ಪೂರ್ವವತ್ ಅಪ್ರದಕ್ಷಿಣಂ ತೂಷ್ಣೀಂ, ಪರಿಷಿಂಚತಿ ॥

15. ಚರುವನ್ನು ಮಾಡುವುದು

**** ಪ್ರಾಚೀನಾವೀತಿಯಾಗಿ, ಚರುವನ್ನು ಮಾಡಿಕೊಳ್ಳುವ ಭತ್ತವನ್ನು ಕುಟ್ಟಬೇಕು । ನಂತರ ಭತ್ತದ ಸಿಪ್ಪೆಯ ಹೊರತಾಗಿ ಬೇರೇ ಕಸಗಳನ್ನು ತೆಗೆದು, ಶುದ್ಧಮಾಡಿ । ನಂತರ ಬೇರ್ಪಟ್ಟಿರುವ ಸಿಪ್ಪೆ ಮತ್ತು ಅಕ್ಕಿಗಳನ್ನು ತೊಳೆಯದೇ, ಕೇವಲ ನೀರನ್ನು ಹಾಕಕೊಂಡು ಔಪಾಸನಾಗ್ನಿಯಲ್ಲಿ ಬೇಯಿಸಿ, ನಂತರ ಆ ಚರು ಪಾತ್ರೆಯನ್ನು ಶವದ ದಕ್ಷಿಣಕ್ಕೆ ಇಡುವುದು ॥

ಪ್ರಾಚೀನಾವೀತಿನಾ, ಚರುಸ್ಥಾಲ್ಯಾಂ ವ್ರೀಹೀಂ ನಿರುಪ್ಯ । ಅವಹತ್ಯ, ಪರಾಪೂಯ । ಔಪಾಸನಾಗ್ನೌ ಶ್ರಪಯಿತ್ವಾ । ದಕ್ಷಿಣತ ಉದ್ವಾಸಯೇತ್ ॥

16. ಮೃತನಿಗೆ ಕ್ಷೌರ – ಸ್ನಾನ – ಅಲಂಕಾರ ಹಾಗೂ ಚೆಟ್ಟದಲ್ಲಿ ಮಲಗಿಸುವಿಕೆ

**** ಪ್ರಾಚೀನಾವೀತಿಯಾಗಿ, ಔಪಾಸನಾಗ್ನಿಯ ದಕ್ಷಿಣಕ್ಕೆ, ಮರೆಮಾಡಿದ ಸ್ಥಳದಲ್ಲಿ, ಮೃತನ ತಲೆ–ಮುಖ–ದೇಹದಕೂದಲು–ಉಗುರುಗಳನ್ನು ತೆಗೆದು, ಸ್ನಾನಮಾಡಿಸಿ । ಗ್ರಾಮ್ಯ ಅಲಂಕಾರಗಳಿಂದ ಅಲಂಕರಿಸಿ । ಬಿಳಿದಾರದಿಂದ 2 ಕೈ, 2 ಕಾಲುಗಳ ಹೆಬ್ಬೆರಳುಗಳನ್ನು ಕಟ್ಟಿ । ನಲದ(ಒಂದು ಜಾತಿಯ ಹೂ) ಮಾಲೆಯನ್ನು ಕೊರಳಿಗೆ ಹಾಕಿ । ಅತ್ತಿ(ಔದುಂಬರ)ಮರದ ಕಟ್ಟಿಗೆಗಳಿಂದ ಮತ್ತು ಮೌಂಜೀಹುಲ್ಲಿನ ಹಗ್ಗದಿಂದ, ಹೇಳಿರುವ ಕ್ರಮದಲ್ಲಿಯೇ ಚೆಟ್ಟವನ್ನು ಸಿದ್ಧಪಡಿಸಿ, ಅದರಮೇಲೆ ಕೃಷ್ಣಾಜಿನವನ್ನು ದಕ್ಷಿಣಾಗ್ರವಾಗಿ, ಕೂದಲು ಕೆಳಗಾಗುವಂತೆ ಹಾಕಿ । ಅದರಮೇಲೆ ಮೃತನನ್ನು ದಕ್ಷಿಣಕ್ಕೆ ತಲೆ ಬರುವಂತೆ ಮೇಲ್ಮುಖವಾಗಿ ಮಲಗಿಸಿ, ಮೌಂಜೀಹಗ್ಗದಿಂದ ಕಟ್ಟಬೇಕು ॥

(ಪ್ರಾಚೀನಾವೀತೀ), ದಕ್ಷಿಣೇನೌಪಾಸನಾಗ್ನಿಂ ಪರಿಶ್ರಿತೇದೇಶೇ ಪ್ರೇತಸ್ಯ ಕೇಶಶ್ಮಶ್ರು ಲೋಮನಖಾನಿ ವಾಪಯಿತ್ವಾ, ಸ್ನಾಪಯಿತ್ವಾ । ಗ್ರಾಮ್ಯೇಣಾಲಂಕಾರೇಣ ಅಲಂಕೃತ್ಯ । ಶುಕ್ಲಸೂತ್ರೇಣ ಹಸ್ತಯೋಃ ಪಾದಯೋಶ್ಚ ಅಂಗುಷ್ಠೌ ಬಧ್ವಾ । ಶಿರಸಿ ನಲದಮಾಲಾಂ ಆಬಧ್ಯ । ಔದುಂಬರ್ಯಾಂ ಆಸಂದ್ಯಾಂ(ಮೌಂಜೀಭಿರೇವ ರಜ್ಜುಭಿಃ) ಕೃಷ್ಣಾಜಿನಂ ದಕ್ಷಿಣಾಗ್ರೀವಂ ಅಧರಲೋಮಾಸ್ತೀರ್ಯ । ತಸ್ಮಿನ್ ದಕ್ಷಿಣಾಶಿರಸಂ ಪ್ರೇತಮುತ್ತಾನಂ ನಿಪಾತ್ಯ ॥

17. ಮೃತನಿಗೆ ಹೊಸಬಟ್ಟೆಯನ್ನು ಹೊದಿಸಿ – ದೇಹದಲ್ಲಿರುವ ಹಳೇ ಬಟ್ಟೆಯನ್ನು ತೆಗೆಯುವುದು

**** ನಂತರ ಪ್ರಾಚೀನಾವೀತಿಯಾಗಿ, ಈ ಕೆಳಗಿನ ಮಂತ್ರದಿಂದ, ಹೊಸಬಟ್ಟೆಯನ್ನು ಕಾಲಿಂದ ತಲೆಯವರೆಗೂ ಹೊದಿಸಬೇಕು ॥

ಪ್ರಾಚೀನಾವೀತಿನಾ, ಪತ್ತೋದಶೇನಾಹತೇನ ವಾಸಸಾ ಪ್ರೋಣೋರ್ಮಿತಿ ಇದಂ ತ್ವಾ ಇತಿ (ಪಾದಪ್ರದೇಶಾದಾರಭ್ಯ, ನವವಸ್ತ್ರೇಣ ಆಚ್ಛಾದಯತಿ) ॥

ಓಂ ಇದಂ । ತ್ವಾ । ವಸ್ತ್ರಂ । ಪ್ರಥಮಂ । ನು । ಅಗನ್ ॥

**** ಪ್ರಾಚೀನಾವೀತಿಯಾಗಿ, ಹಳೆಯ ಬಟ್ಟೆಯನ್ನು ಕೆಳಗಿನ ಮಂತ್ರದಿಂದ ಮಂತ್ರವು ಮುಗಿಯುವುದಕ್ಕೆ ಮೊದಲೇ ತೆಗೆಯಬೇಕು ॥

(ಪ್ರಾಚೀನಾವೀತೀ), ಅಥಾಸ್ಯ ಪೂರ್ವಧಾರಿತ ವಸ್ತ್ರಮಪಾದತ್ತೇ ಅಪೈತದಿತಿ ॥

ಓಂ ಅಪೈತತ್ । ಊಹ । ಯದಿಹ । ಅಬಿಭಃ । ಪುರಾ ॥ ಇಷ್ಟಾಪೂರ್ತಂ ।
ಅನುಸಂಪಶ್ಯ । ದಕ್ಷಿಣಾಂ । ಯಥಾ ತೇ । ದತ್ತಂ । ಬಹುಧಾ । ವಿಬಂಧುಷು ॥

18. ಸ್ಮಶಾನಕ್ಕೆ ಹೊರಡುವಿಕೆ

**** ಆ ಬಟ್ಟೆಗಳನ್ನು, ಮಗ ಅಥವಾ ಸಹೋದರರು ಅಥವಾ ಜ್ಞಾತಿಗಳು ಆದರದಿಂದ ಉಪಯೋಗಿಸಬೇಕು। ದಕ್ಷಿಣಾಭಿಮುಖವಾಗಿ ಹೊರಡಬೇಕು। ಶವವನ್ನು ಹೊರುವವರು ನಿವೀತಿಯನ್ನು ಮಾಡಿಕೊಳ್ಳಬೇಕು । ಆ ಶವವನ್ನು(ಪ್ರೇತ) ಚೆಟ್ಟದ ಸಮೇತವಾಗಿ

ಎತ್ತಿಕೊಂಡು ಹೋಗಬೇಕು । ಆಗ ಕರ್ತೃವು, ಪ್ರಾಚೀನಾವೀತಿಯಾಗಿ, ಕೆಳಗಿನ ಮಂತ್ರವನ್ನು ಹೊರಡುತ್ತಿರುವ ಪ್ರೇತನನ್ನು ನೋಡಿ, ಹೇಳಬೇಕು ॥

ತದ್ವಸ್ತ್ರಂ ಪುತ್ರೋ ಭ್ರಾತಾ ವಾ ಆಸನ್ನಬಂಧುರ್ಧಾರಣಂ ಕುರ್ಯಾತ್ । ದಕ್ಷಿಣಾಭಿಮುಖಂ । (ನಿವೀತಿನೋ ವಹೇಯುಃ ತೇ ಜ್ಞಾತಯೋನ್ಯೇ ಚ ವಾಹಕಾ ಇತಿ) ಅಥ ವಾಹಕಾ ನಿವೀತಿನೋ ಭೂತ್ವಾ । ತಂ ಪ್ರೇತಂ ಆಸಂದ್ಯಾಸಹ ಆದದತೇ । ಕರ್ತಾ (ಪ್ರಾಚೀನಾವೀತೀ), ಆದೀಯಮಾನಂ ಪ್ರೇತಂ ಅನುಮಂತ್ರಯತೇ ।

ಓಂ ಪೂಷಾ । ತ್ವೇತಃ । ಚ್ಯಾವಯತು । ಪ್ರವಿದ್ವಾನ್ । ಅನಷ್ಟಪಶುಃ । ಭುವನಸ್ಯ ಗೋಪಾಃ ॥ ಸ ತ್ವೈಲ ತೇಭ್ಯಃ । ಪರಿದದಾತ್ । ಪಿತೃಭ್ಯಃ । ಅಗ್ನಿರ್ದೇವೇಭ್ಯಃ । ಸುವಿದತ್ರೇಭ್ಯಃ ॥

**** ಶವವನ್ನು ವಾಹನದಲ್ಲಿ ಒಯ್ಯುವುದಾದರೆ, ಆಗಮಾತ್ರ ಈ ಕೆಳಗಿನ ಮಂತ್ರವನ್ನು ಹೇಳಬೇಕು(ಮನುಷ್ಯರು ಹೊರುವುದಾದರೆ, ಈ ಮಂತ್ರವು ಇಲ್ಲ) ॥

ಅನೋವಹನ ಪಕ್ಷ ಏವ । ಇಮೌ ಯುನಜ್ಮೀತಿ ಮಂತ್ರಸ್ಯ ವಿನಿಯೋಗಃ ನ ಪುರುಷವಹನೇ ।

ಓಂ ಇಮೌ । ಯುನಜ್ಮಿ । ತೇ । ವಹ್ನೀ । ಅಸುನೀಥಾಯ । ವೋಢವೇ ॥ ಯಾಭ್ಯಾಂ । ಯಮಸ್ಯ । ಸಾದನಂ । ಸುಕೃತಾಂ । ಚಾಪಿ । ಗಚ್ಛತಾತ್ ॥

19. ಜೊತೆಯಲ್ಲಿ ತೆಗೆದುಕೊಂಡು ಹೋಗುವ ವಸ್ತುಗಳು

**** ನಡವಳಿಕೆಗಳಿಂದ ಹೀನರಾದ ವ್ಯಕ್ತಿ ಮತ್ತು ವಸ್ತುಗಳನ್ನು ಕರೆದು(ತೆಗೆದು)ಕೊಂಡು ಹೋಗಬಾರದು । ಕರ್ತೃವು, ಪ್ರಾಚೀನಾವೀತಿಯಾಗಿ, ಮಡಿಕೆಗೆ(ಮಣ್ಣಿನಪಾತ್ರೆ) ಔಪಾಸನಾಗ್ನಿಯನ್ನು ಸಂಪೂರ್ಣವಾಗಿ ಹಾಕಿಕೊಂಡು, ಅದನ್ನು ಜೋಪಾನವಾಗಿ ಹಿಡಿದುಕೊಂಡು ಅಗ್ನಿ ಮತ್ತು ಶವದಮಧ್ಯೆ ಕರ್ತೃವು ದಾರಿಯಲ್ಲಿ ಹೋಗಬೇಕು । ಎಳ್ಳಿನ ಪಾತ್ರೆ – ಅನ್ನವಿರುವ ಮಡಿಕೆ – ಅತ್ತಿಮರದ ಸೌಟು – ಮುಂದಿನ ಎಡಕಾಲಿಗೆ ಹಗ್ಗದಿಂದ ಕಟ್ಟಲ್ಪಟ್ಟಿರುವ ರಾಜಗವಿ(ಹಸು) – ಆಡು – ಪಲಾಶದ(ಮುತ್ತುಗ) ಎಲೆಸಹಿತ 4 ಕೋಲು – ಚಿನ್ನದ ಚೂರು – ತುಪ್ಪ – ಪಾತ್ರೆಗಳು – ದರ್ಭೆ – ಜಲ್ಲಿಕಲ್ಲು – ಮರಳು – ಮುತ್ತುಗದ 4 ಎಲೆ – ಹೋಮಪಾತ್ರೆಗಳು – ಪಂಚಪಾತ್ರೆ, ಉದ್ಧರಣೆ – ಚೊಂಬು(ಕಲಶ) – ಮಣ್ಣಿನ ಬಿಂದಿಗೆ – ಅಕ್ಕಿ – ಬೆಲ್ಲ – ಎಳ್ಳು – ಅವಶ್ಯಕತೆ ಇರುವ ಇನ್ನೂ ಬೇರೆ ವಸ್ತುಗಳನ್ನೂ ಸಹ, ಮರೆಯದೇ ತೆಗೆದುಕೊಂಡು ಜ್ಞಾತಿಗಳೂ ಮತ್ತು ಉಳಿದವರೂ ಶವದ ಹಿಂದೆ ಹೋಗಬೇಕು ॥

ನ ಹೀನಂ ಅನ್ವಾಹರೇಯುಃ । ಅಥ ಕರ್ತಾ ಅಗ್ನಿಂ ನಿಶ್ಶೇಷಮಾದಾಯ, ಅಗ್ನಿ ಶವಯೋರ್ಮಧ್ಯೇ ಕರ್ತಾ ಗಚ್ಛೇತ್ । ಸಂಭಾರಾನ್, ತಿಲಾನ್ – ಚರುಂ – ಚಮಸಂ – ಸವ್ಯೇಪದಿಬದ್ಧಾಂ ರಾಜಗವೀಂ – ಅಜಂ – ಪಲಾಶಶಾಖಾಂ – ಹಿರಣ್ಯಶಕಲಾನ್ – ಆಜ್ಯಂ – ಪಾತ್ರಾಣಿ – ದರ್ಭ – ಅಶ್ಮ – ಸಿಕತಾಃ ಚ ಆದಾಯ । ಜ್ಞಾತಯಃ ಅನುನಯಂತಿ ॥

20. ದಾರಿಯ 1 ನೇ ಭಾಗದಲ್ಲಿ ಮಾಡುವ ವಿಧಿಗಳು

**** (ಈ ಕೊಡಗಿಕೊಳ್ಳುವುದು – ಮುಟ್ಟುವುದು – ಮುಳುಗುಸ್ನಾನ ಮತ್ತು ಕೈತೊಳೆಯುವುದು ಈ ಎಲ್ಲಾ ಸಂದರ್ಭಗಳಲ್ಲೂ, ಕಿರಿಯಕರ್ತೃವಿನಿಂದಲೇ ಕ್ರಮವಾಗಿ ಆರಂಭಿಸಬೇಕು. ಸ್ತ್ರೀಯರಿದ್ದರೆ ಅವರು ಮೊದಲು ನಂತರ ಚಿಕ್ಕವನು.)

(ಧೂನ್ವನೇನ್ವಾರಂಭಣೇ, ಸಂಗಾಹನೇ, ಸಂಸ್ಪರ್ಶನ, ಉದಕೋಪಸ್ಪರ್ಶನ ಇತಿ । ಸರ್ವತ್ರ ಕನಿಷ್ಠ ಪ್ರಥಮಾ ಅನುಪೂರ್ವಾ ಇತರೇ ಸ್ತ್ರಿಯೋಗ್ರೇ – ಆ.ಅ.ಸೂ. – ಪ್ರ 1 – ಖಂ 3)

ಅಪ್ರದಕ್ಷಿಣೆ

**** ಪ್ರಾಚೀನಾವೀತಿಯಾಗಿ, ಗ್ರಾಮ ಮತ್ತು ಸ್ಮಶಾನದ ಮಧ್ಯದಾರಿಯಲ್ಲಿ, ನಾಲ್ಕನೇಒಂದು ಭಾಗದಷ್ಟು ಕ್ರಮಿಸಿ । ದಕ್ಷಿಣದಿಕ್ಕಿಗೆ ಶವದ ತಲೆಯಿರುವಂತೆ, ಚೆಟ್ಟವನ್ನು ನೆಲದಮೇಲೆ ಇಟ್ಟು । ದಕ್ಷಿಣದಕಡೆಗೆ 3 ಮಣ್ಣಿನ ಚೂರುಗಳನ್ನು ಅಗೆದು ತೆಗೆದು । ಆ ಮಣ್ಣಿನ ಚೂರುಗಳ ಮೇಲೆ ಚರುಪಾತ್ರೆಯನ್ನು ಇಟ್ಟು । ಕರ್ತೃವು ಅಂಚಿಲ್ಲದ, ಒಂಟಿವಸ್ತ್ರವನ್ನುಟ್ಟವನಾಗಿ ಶಿಖೆಯಲ್ಲಿ ದಕ್ಷಿಣಭಾಗದ ಕೂದಲುಗಳನ್ನು ಕಟ್ಟಿಕೊಂಡು । ಎಡಭಾಗದ ಕೂದಲುಗಳನ್ನು ಹಾಗೆಯೇಬಿಟ್ಟು । ದಕ್ಷಿಣದ(ಬಲ) ತೊಡೆಯನ್ನು ಬಲಕೈಯಿಂದ ತಟ್ಟಿಕೊಂಡು । ಉಟ್ಟಿರುವ ಬಟ್ಟೆಯನ್ನು ಕೊಡಗಿಕೊಳ್ಳುತ್ತಾ(ಬೀಸುತ್ತಾ) । ಆ ಶವವನ್ನು ಚಿಕ್ಕವನಿಂದ ಅನುಕ್ರಮವಾಗಿ, ಎಲ್ಲರೂ 3 ಸಲ ಅಪ್ರದಕ್ಷಿಣೆಯಾಗಿ ಸುತ್ತಬೇಕು, ಈ ಕೆಳಗಿನ ಮಂತ್ರದಿಂದ ॥

(ಪ್ರಾಚೀನಾವೀತೀ), ಗ್ರಾಮ ಸ್ಮಶಾನಯೋರ್ಮಧ್ಯೇ ಪ್ರಥಮಾರ್ಧ್ವನಿ ಭಾಗೇ ಗತ್ವಾ । ದಕ್ಷಿಣಾಶಿರಸಂ ಪ್ರೇತಂ ನಿಧಾಯ । ದಕ್ಷಿಣತಃ ತ್ರೀನ್ ಲೋಷ್ಟಾನ್ ಖನನೇನ ಗೃಹೀತ್ವಾ । ತೇಷು ಲೋಷ್ಟೇಷು ಚರುಂ ಪ್ರತಿಷ್ಠಾಪ್ಯ । ಏಕ ವಾಸಸೋ ದಕ್ಷಿಣಾನ್ ಕೇಶಪಕ್ಷಾನಾಬಧ್ಯ । ಸವ್ಯಾನ್ ವಿಸ್ರಸ್ಯ । ದಕ್ಷಿಣಾನೂರೂನ್ ಆಘ್ನಾನಾಃ (ದಕ್ಷಿಣೇನ ಪಾಣಿನಾ ತಾಡಯಂತಃ) । ಸಿಗ್ಭಿರಭಿಧೂನ್ವಂತಃ । ಕನಿಷ್ಠಪೂರ್ವಾಃ ತ್ರಿಃ ಪ್ರಸವ್ಯಂ (ಅಪ್ರದಕ್ಷಿಣಂ) ಪರಿಯಂತಿ ।

ಓಂ ಅ॑ಪನಃ । ಶೋ॑ಶುಚತ್ । ಅ॒ಘಂ । ಅ॒ಗ್ನೇ॒ । ಶು॒ಶು॒ದ್ಧ್ಯಾ । ರ॒ಯಿಮ್ ॥

ಅ॑ಪನಃ । ಶೋ॑ಶುಚತ್ । ಅ॒ಘಮ್ ॥

ಪ್ರದಕ್ಷಿಣೆ

**** ಪ್ರಾಚೀನಾವೀತಿಯಾಗಿ, ಕರ್ತೃವು ಶಿಖೆಯ ಎಡಭಾಗದ ಕೂದಲುಗಳನ್ನು ಕಟ್ಟಿ । ಬಲಭಾಗದ ಕೂದಲುಗಳನ್ನು ಹರಡಿಕೊಂಡು । ಎಡತೊಡೆಯನ್ನು ಎಡಕೈಯಿಂದ ತಟ್ಟುತ್ತಾ । ಬಟ್ಟೆಯನ್ನು ಕೊಡಗದೇ । 3 ಸಲ ಪ್ರದಕ್ಷಿಣೆಯಾಗಿ ಶವವನ್ನು ಈ ಕೆಳಗಿನ ಮಂತ್ರದಿಂದ ಸುತ್ತಬೇಕು । ಇಲ್ಲಿ ಕಿರಿಯವನು ಮೊದಲು ಎಂಬ ನಿಯಮವು ಇಲ್ಲ ॥

(ಪ್ರಾಚೀನಾವೀತೀ), ಸವ್ಯಾನ್ ಕೇಶಾನ್ ಆಬಧ್ಯ । ದಕ್ಷಿಣಾನ್ ವಿಸ್ರಸ್ಯ । ಸವ್ಯಾನೂರೂನಾಘ್ನಾನಾಃ (ಸವ್ಯೇನ ಪಾಣಿನಾ ತಾಡಯಂತಃ) । ಅನಭಿಧೂನ್ವಂತಃ(ವಸ್ತ್ರಪ್ರಾಂತೇನ ವೀಜನಮಕುರ್ವಂತಃ)। ತ್ರಿಃ ಪ್ರತಿಪರಿಯಂತಿ ಪ್ರದಕ್ಷಿಣಂ । ನಾತ್ರ ಕನಿಷ್ಠ ಪ್ರಥಮತ್ವಾದಿ ನಿಯಮಃ ।

ಓಂ ಅಪನಃ । ಶೋಶುಚತ್ । ಅಘಂ । ಅಗ್ನೇ । ಶುಶುದ್ಧಿ । ರಯಿಮ್ ॥

ಅಪನಃ । ಶೋಶುಚತ್ । ಅಘಮ್ ॥

ಬಲಿ

**** ಪ್ರಾಚೀನಾವೀತಿಯಾಗಿ, ಎಡಮಂಡಿಯನ್ನು ನೆಲಕ್ಕೆ ತಗುಲಿಸಿ । ಇಟ್ಟಿರುವ ಚರುಪಾತ್ರೆಯನ್ನು ತೆಗೆದುಕೊಂಡು, ಅಲ್ಲಿರುವ 3 ಮಣ್ಣಿನ ಚೂರುಗಳ ಮೇಲೆ ಎಳ್ಳುನೀರನ್ನು ಬಿಟ್ಟು । ಅತ್ತಿಮರದ ಸೌಟಿನಿಂದ, 3 ಸಲ ಚರುವನ್ನು ಅಪ್ರದಕ್ಷಿಣೆಯಾಗಿ ಕೂಡಿಸಿ । ಚರುವಿನ 3 ನೇ 1 ಭಾಗವನ್ನು ತೆಗೆದುಕೊಂಡು, ಅದನ್ನು 3 ಭಾಗ ಮಾಡಿ । **'ಪಥಿವಾಸಿಭ್ಯೋ ಭೂತೇಭ್ಯಃ ಏತಂ ಪಥಿ(ಪಿಂಡಂ) ಬಲಿಂ ದದಾಮಿ'**, ಎಂದು ಹೇಳಿ । 3 ಮಣ್ಣಿನ ಚೂರುಗಳ ಮೇಲೂ ಹಾಕುತ್ತಾನೆ । ಅದರಮೇಲೆ ಎಳ್ಳುನೀರನ್ನು ಬಿಟ್ಟು । **'ಪಥಿ ಗೋಪ್ತೃಭ್ಯಃ ಇದಂ'**, ಎಂದು ಉದ್ದೇಶತ್ಯಾಗವನ್ನು ಹೇಳಿ, ಅತ್ತಿಮರದ ಸೌಟಿನಿಂದ, 3 ಮಣ್ಣಿನ ಚೂರುಗಳ ಮೇಲೆ ಹಾಕಿರುವ ಬಲಿಯನ್ನು ಒಟ್ಟುಗೂಡಿಸ ಬೇಕು । ಪ್ರಧಾನ ಕರ್ತೃವೇ ಇವೆಲ್ಲವನ್ನು ಮಾಡಬೇಕು । ನಂತರ, ಈ ಕೆಳಗಿನ ಮಂತ್ರದಿಂದ ಪುನಃ ಶವವನ್ನು ಎತ್ತಿಕೊಳ್ಳಬೇಕು ॥

(ಪ್ರಾಚೀನಾವೀತೀ), ಸವ್ಯಂ ಜಾನ್ವಾಚ್ಯ । ತ್ರಿಷುಲೋಷ್ಟೇಷು ತಿಲೋದಕಂ ನಿನೀಯ । ಔದುಂಬರ ಮೇಕ್ಷಣೇನ ಚರೋಃ ತ್ರಿಃ ಪ್ರಯೌತಿ । ಚರೋಃ ತೃತೀಯಾಂಶಮಾದಾಯ, ತ್ರಿಧಾವಿಭಜ್ಯ । "ಪಥಿವಾಸಿಭ್ಯೋ ಭೂತೇಭ್ಯಃ ಏತಂ ಪಥಿ(ಪಿಂಡಂ) ಬಲಿಂ ದದಾಮಿ" ಇತಿ । ಲೋಷ್ಟೇಷು ಪ್ರಕ್ಷಿಪತಿ । ಉಪರಿ ತಿಲೋದಕಂ ನಿನೀಯ । 'ಪಥಿ ಗೋಪ್ತೃಭ್ಯ ಇದಂ ನಮಮ' ಇತಿ ಮೇಕ್ಷಣೇನ ಲೋಷ್ಟಾನಿ ತ್ರೀಣಿ ಮಿಶ್ರಯೇತ್ । ಅಗ್ನಿದಕೃತ್ಯಂ ಏತತ್ । ಆದೀಯಮಾನಂ ಅನುಮಂತ್ರಯತೇ ।

ಓಂ ಪೂಷೇಮಾ । ಆ॥ಶಾಃ । ಅನುವೇದ । ಸ॥ರ್ವಾಃ । ಸೋ ಅಸ್ಮಾನ್ । ಅಭಯತಂ । ಏನನೇಷತ್ ॥ ಸ್ವಸ್ತಿದಾಃ । ಅಘೃಣಿಃ । ಸರ್ವವೀರಃ । ಅಪ್ರಯುಚ್ಛನ್ । ಪುರಏತು । ಪ್ರವಿದ್ವಾನ್ ॥

21. ದಾರಿಯ 2 ನೇ ಭಾಗದಲ್ಲಿ ಮಾಡುವ ವಿಧಿಗಳು

ಅಪ್ರದಕ್ಷಿಣೆ

**** ಪ್ರಾಚೀನಾವೀತಿಯಾಗಿ, ಗ್ರಾಮ ಮತ್ತು ಸ್ಮಶಾನದ ಮಧ್ಯದಾರಿಯಲ್ಲಿ, ನಾಲ್ಕನೇಎರಡು ಭಾಗದಷ್ಟು ಕ್ರಮಿಸಿ । ದಕ್ಷಿಣದಿಕ್ಕಿಗೆ ಶವದ ತಲೆಯಿರುವಂತೆ, ಚೆಟ್ಟವನ್ನು ನೆಲದಮೇಲೆ ಇಟ್ಟು । ದಕ್ಷಿಣದಕಡೆಗೆ 3 ಮಣ್ಣಿನ ಚೂರುಗಳನ್ನು ಅಗೆದು ತೆಗೆದು । ಆ ಮಣ್ಣಿನ ಚೂರುಗಳ ಮೇಲೆ ಚರುಪಾತ್ರೆಯನ್ನು ಇಟ್ಟು । ಕರ್ತೃವು ಅಂಚಿಲ್ಲದ, ಒಂಟಿವಸ್ತ್ರವನ್ನುಟ್ಟವನಾಗಿ ಶಿಖೆಯಲ್ಲಿ ದಕ್ಷಿಣಭಾಗದ ಕೂದಲುಗಳನ್ನು ಕಟ್ಟಿಕೊಂಡು । ಎಡಭಾಗದ ಕೂದಲುಗಳನ್ನು ಹಾಗೆಯೇಬಿಟ್ಟು । ದಕ್ಷಿಣದ(ಬಲ) ತೊಡೆಯನ್ನು ಬಲಕೈಯಿಂದ ತಟ್ಟಿಕೊಂಡು । ಉಟ್ಟಿರುವ ಬಟ್ಟೆಯನ್ನು ಕೊಡಗಿಕೊಳ್ಳುತ್ತಾ(ಬೀಸುತ್ತಾ) । ಆ ಶವವನ್ನು ಚಿಕ್ಕವನಿಂದ ಅನುಕ್ರಮವಾಗಿ, 3 ಸಲ ಅಪ್ರದಕ್ಷಿಣೆಯಾಗಿ ಸುತ್ತಬೇಕು, ಈ ಕೆಳಗಿನ ಮಂತ್ರದಿಂದ ॥

(ಪ್ರಾಚೀನಾವೀತೀ), ಗ್ರಾಮ ಸ್ಮಶಾನಯೋರ್ಮಧ್ಯೇ ದ್ವಿತೀಯಾಧ್ವನಿ ಭಾಗೇ ಗತ್ವಾ । ದಕ್ಷಿಣಾಶಿರಸಂ ಪ್ರೇತಂ ನಿಧಾಯ । ದಕ್ಷಿಣತಃ ತ್ರೀನ್ ಲೋಷ್ಟಾನ್ ಖನನೇನ ಗೃಹೀತ್ವಾ । ತೇಷು ಲೋಷ್ಟೇಷು ಚರುಂ ಪ್ರತಿಷ್ಠಾಪ್ಯ । ಏಕ ವಾಸಸೋ ದಕ್ಷಿಣಾನ್ ಕೇಶಪಕ್ಷಾನಾಬಧ್ಯ । ಸವ್ಯಾನ್ ವಿಸ್ರಸ್ಯ । ದಕ್ಷಿಣಾನೂರೂನ್ ಆಘ್ನಾನಾಃ (ದಕ್ಷಿಣೇನ ಪಾಣಿನಾ ತಾಡ ಯಂತಃ)। ಸಿಗ್ಭಿರಭಿಧೂನ್ವತಃ। ಕನಿಷ್ಠಪೂರ್ವಾಃ ತ್ರಿಃ ಪ್ರಸವ್ಯಂ (ಅಪ್ರದಕ್ಷಿಣಂ) ಪರಿಯಂತಿ ।

ಓಂ ಅ॑ಪನಃ । ಶೋ॑ಶುಚತ್ । ಅ॒ಘಂ । ಅ॒ಗ್ನೇ॒ । ಶು॒ಶು॒ದ್ಧ್ಯಾ । ರ॒ಯಿಮ್ ॥
ಅ॑ಪನಃ । ಶೋ॑ಶುಚತ್ । ಅ॒ಘಮ್ ॥

ಪ್ರದಕ್ಷಿಣೆ

**** ಪ್ರಾಚೀನಾವೀತಿಯಾಗಿ, ಕರ್ತೃವು ಶಿಖೆಯ ಎಡಭಾಗದ ಕೂದಲುಗಳನ್ನು ಕಟ್ಟಿ । ಬಲಭಾಗದ ಕೂದಲುಗಳನ್ನು ಹರಡಿಕೊಂಡು । ಎಡತೊಡೆಯನ್ನು ಎಡಕೈಯಿಂದ ತಟ್ಟುತ್ತಾ । ಬಟ್ಟೆಯನ್ನು ಕೊಡಗದೇ । 3 ಸಲ ಪ್ರದಕ್ಷಿಣೆಯಾಗಿ ಶವವನ್ನು ಈ ಕೆಳಗಿನ ಮಂತ್ರದಿಂದ ಸುತ್ತಬೇಕು । ಇಲ್ಲಿ ಕಿರಿಯವನು ಮೊದಲು ಎಂಬ ನಿಯಮವು ಇಲ್ಲ ॥

(ಪ್ರಾಚೀನಾವೀತೀ), ಸವ್ಯಾನ್ ಕೇಶಾನ್ ಆಬಧ್ಯ । ದಕ್ಷಿಣಾನ್ ವಿಸ್ರಸ್ಯ । ಸವ್ಯಾನೂರೂನಾಘ್ನಾನಾಃ । (ಸವ್ಯೇನ ಪಾಣಿನಾ ತಾಡಯಂತಃ) । ಅನಭಿಧೂನ್ವಂತಃ(ವಸ್ತ್ರಪ್ರಾಂತೇನ ವೀಜನಮಕುರ್ವಂತಃ)। ತ್ರಿಃ ಪ್ರತಿಪರಿಯಂತಿ ಪ್ರದಕ್ಷಿಣಂ । ನಾತ್ರ ಕನಿಷ್ಠ ಪ್ರಥಮತ್ವಾದಿ ನಿಯಮಃ ।

ಓಂ ಅ॑ಪನಃ । ಶೋ॑ಶುಚತ್ । ಅ॒ಘಂ । ಅ॒ಗ್ನೇ॒ । ಶು॒ಶು॒ದ್ಧ್ಯಾ । ರ॒ಯಿಮ್ ॥
ಅ॑ಪನಃ । ಶೋ॑ಶುಚತ್ । ಅ॒ಘಮ್ ॥

ಬಲಿ

**** ಪ್ರಾಚೀನಾವೀತಿಯಿಂದ, ಎಡಮಂಡಿಯನ್ನು ನೆಲಕ್ಕೆ ತಗುಲಿಸಿ । ಇಟ್ಟಿರುವ ಚರುಪಾತ್ರೆಯನ್ನು ತೆಗೆದುಕೊಂಡು, ಅಲ್ಲಿರುವ 3 ಮಣ್ಣಿನ ಚೂರುಗಳ ಮೇಲೆ ಎಳ್ಳುನೀರನ್ನು ಬಿಟ್ಟು । ಅತ್ತಿಮರದ ಸೌಟಿನಿಂದ, 3 ಸಲ ಚರುವನ್ನು ಅಪ್ರದಕ್ಷಿಣೆಯಾಗಿ ಕೂಡಿಸಿ । ಪಾತ್ರೆಯಲ್ಲಿರುವ ಚರುವಿನ ಅರ್ಧ ಭಾಗವನ್ನು ತೆಗೆದುಕೊಂಡು, ಅದನ್ನು 3 ಭಾಗಮಾಡಿ । **'ಪಥಿವಾಸಿಭ್ಯೋ ಭೂತೇಭ್ಯಃ ಏತಂ ಪಥಿ(ಪಿಂಡಂ) ಬಲಿಂ ದದಾಮಿ'**, ಎಂದು ಹೇಳಿ । 3 ಮಣ್ಣಿನ ಚೂರುಗಳ ಮೇಲೂ ಹಾಕುತ್ತಾನೆ । ಅದರಮೇಲೆ ಎಳ್ಳುನೀರನ್ನು ಬಿಟ್ಟು । **'ಪಥಿ ಗೋಪ್ತೃಭ್ಯಃ ಇದಂ ನಮಮ'**, ಎಂದು ಉದ್ದೇಶತ್ಯಾಗವನ್ನು ಹೇಳಿ, ಅತ್ತಿಮರದ ಸೌಟಿನಿಂದ, 3 ಮಣ್ಣಿನ ಚೂರುಗಳ ಮೇಲೆ ಹಾಕಿರುವ ಬಲಿಯನ್ನು ಒಟ್ಟುಗೂಡಿಸಬೇಕು । ಪ್ರಧಾನ ಕರ್ತೃವೇ ಇವೆಲ್ಲವನ್ನು ಮಾಡಬೇಕು । ನಂತರ, ಈ ಕೆಳಗಿನ ಮಂತ್ರದಿಂದ ಪುನಃ ಶವವನ್ನು ಎತ್ತಿಕೊಳ್ಳಬೇಕು ॥

(ಪ್ರಾಚೀನಾವೀತೀ), ಸವ್ಯಂ ಜಾನ್ವಾಚ್ಯ । ತ್ರಿಷು ಲೋಷ್ಟೇಷು ತಿಲೋದಕಂ ನಿನೀಯ । ಔದುಂಬರ ಮೇಕ್ಷಣೇನ ಚರೋಃ ತ್ರಿಃ ಪ್ರಯೌತಿ । ಚರೋಃ ಅರ್ಧಾಂಶಮಾದಾಯ, ತ್ರಿಧಾವಿಭಜ್ಯ । "ಪಥಿವಾಸಿಭ್ಯೋ ಭೂತೇಭ್ಯಃ ಏತಂ ಪಥಿ(ಪಿಂಡಂ) ಬಲಿಂ ದದಾಮಿ" ಇತಿ । ಲೋಷ್ಟೇಷು ಪ್ರಕ್ಷಿಪತಿ । ಉಪರಿ ತಿಲೋದಕಂ ನಿನೀಯ । 'ಪಥಿ ಗೋಪ್ತೃಭ್ಯ ಇದಂ ನಮಮ' ಇತಿ ಮೇಕ್ಷಣೇನ ಲೋಷ್ಟಾನಿ ತ್ರೀಣಿ ಮಿಶ್ರಯೇತ್ । ಅಗ್ನಿದಕೃತ್ಯಂ ಏತತ್ । ಆದೀಯಮಾನಂ ಅನುಮಂತ್ರಯತೇ ।

ಓಂ ಆಯುಃ । ವಿಶ್ವಾಯುಃ । ಪರಿಪಾಸತಿ । ತ್ವಾ । ಪೂಷಾ ತ್ವಾ । ಪಾತು ।
ಪ್ರಪಥೇ । ಪುರಸ್ತಾತ್ ॥ ಯತ್ರಾऽಸತೇ । ಸುಕೃತಃ । ಯತ್ರ ತೇ । ಯಯುಃ ।
ತತ್ರತ್ವಾ । ದೇವಃ । ಸವಿತಾ ದಧಾತು ॥

22. ದಾರಿಯ 3 ನೇ ಭಾಗದಲ್ಲಿ ಮಾಡುವ ವಿಧಿಗಳು

ಅಪ್ರದಕ್ಷಿಣೆ

**** ಪ್ರಾಚೀನಾವೀತಿಯಾಗಿ, ಗ್ರಾಮ ಮತ್ತು ಸ್ಮಶಾನದ ಮಧ್ಯದಾರಿಯಲ್ಲಿ, ನಾಲ್ಕನೇಮೂರು ಭಾಗದಷ್ಟು ಕ್ರಮಿಸಿ । ದಕ್ಷಿಣದಿಕ್ಕಿಗೆ ಶವದ ತಲೆಯಿರುವಂತೆ, ಚೆಟ್ಟವನ್ನು ನೆಲದಮೇಲೆ ಇಟ್ಟು । ದಕ್ಷಿಣದಕಡೆಗೆ 3 ಮಣ್ಣಿನ ಚೂರುಗಳನ್ನು ಅಗೆದು ತೆಗೆದು । ಆ ಮಣ್ಣಿನ ಚೂರುಗಳ ಮೇಲೆ ಚರುಪಾತ್ರೆಯನ್ನು ಇಟ್ಟು । ಕರ್ತೃವು ಅಂಚಿಲ್ಲದ, ಒಂಟಿವಸ್ತ್ರವನ್ನುಟ್ಟವನಾಗಿ ಶಿಖೆಯಲ್ಲಿ ದಕ್ಷಿಣಭಾಗದ ಕೂದಲುಗಳನ್ನು ಕಟ್ಟಿಕೊಂಡು । ಎಡಭಾಗದ ಕೂದಲುಗಳನ್ನು ಹಾಗೆಯೇಬಿಟ್ಟು । ದಕ್ಷಿಣದ(ಬಲ) ತೊಡೆಯನ್ನು ಬಲಕೈಯಿಂದ ತಟ್ಟಿಕೊಂಡು । ಉಟ್ಟಿರುವ ಬಟ್ಟೆಯನ್ನು ಕೊಡಗಿಕೊಳ್ಳುತ್ತಾ(ಬೀಸುತ್ತಾ) । ಆ ಶವವನ್ನು ಚಿಕ್ಕವನಿಂದ ಅನುಕ್ರಮವಾಗಿ, 3 ಸಲ ಅಪ್ರದಕ್ಷಿಣೆಯಾಗಿ ಸುತ್ತಬೇಕು, ಈ ಕೆಳಗಿನ ಮಂತ್ರದಿಂದ ॥

(ಪ್ರಾಚೀನಾವೀತೀ), ಗ್ರಾಮ ಸ್ಮಶಾನಯೋರ್ಮಧ್ಯೇ ತೃತೀಯಾದ್ಧನಿ ಭಾಗೇ ಗತ್ವಾ । ದಕ್ಷಿಣಾಶಿರಸಂ ಪ್ರೇತಂ ನಿಧಾಯ । ದಕ್ಷಿಣತಃ ತ್ರೀನ್ ಲೋಷ್ಟಾನ್ ಖನನೇನ ಗೃಹೀತ್ವಾ । ತೇಷುಲೋಷ್ಟೇಷು ಚರುಂ ಪ್ರತಿಷ್ಠಾಪ್ಯ । ಏಕ ವಾಸಸೋ ದಕ್ಷಿಣಾನ್ ಕೇಶಪಕ್ಷಾನಾಬಧ್ಯ । ಸವ್ಯಾನ್ ವಿಸ್ರಸ್ಯ । ದಕ್ಷಿಣಾನೂರೂನ್ ಆಘ್ನಾನಾಃ (ದಕ್ಷಿಣೇನ ಪಾಣಿನಾ ತಾಡಯಂತಃ) । ಸಿಗ್ಭಿರಭಿಧೂನ್ವಂತಃ । ಕನಿಷ್ಠಪೂರ್ವಾಃ ತ್ರಿಃಪ್ರಸವ್ಯಂ (ಅಪ್ರದಕ್ಷಿಣಂ) ಪರಿಯಂತಿ ।

ಓಂ ಅ॑ಪನಃ । ಶೋ॑ಶುಚತ್ । ಅ॒ಘಂ । ಅ॒ಗ್ನೇ॒ । ಶು॒ಶು॒ದ್ಧ್ಯ । ರ॒ಯಿಮ್ ॥

ಅ॑ಪನಃ । ಶೋ॑ಶುಚತ್ । ಅ॒ಘಮ್ ॥

ಪ್ರದಕ್ಷಿಣೆ

**** ಪ್ರಾಚೀನಾವೀತಿಯಾಗಿ, ಕರ್ತೃವು ಶಿಖೆಯ ಎಡಭಾಗದ ಕೂದಲುಗಳನ್ನು ಕಟ್ಟಿ । ಬಲಭಾಗದ ಕೂದಲುಗಳನ್ನು ಹರಡಿಕೊಂಡು । ಎಡತೊಡೆಯನ್ನು ಎಡಕೈಯಿಂದ ತಟ್ಟುತ್ತಾ । ಬಟ್ಟೆಯನ್ನು ಕೊಡಗದೇ । 3 ಸಲ ಪ್ರದಕ್ಷಿಣೆಯಾಗಿ ಶವವನ್ನು ಈ ಕೆಳಗಿನ ಮಂತ್ರದಿಂದ ಸುತ್ತಬೇಕು । ಇಲ್ಲಿ ಕಿರಿಯವನು ಮೊದಲು ಎಂಬ ನಿಯಮವು ಇಲ್ಲ ॥

(ಪ್ರಾಚೀನಾವೀತೀ), ಸವ್ಯಾನ್ ಕೇಶಾನ್ ಆಬಧ್ಯ । ದಕ್ಷಿಣಾನ್ ವಿಸ್ರಸ್ಯ । ಸವ್ಯಾನೂರೂನ್ ಆಘ್ನಾನಾಃ (ಸವ್ಯೇನ ಪಾಣಿನಾ ತಾಡಯಂತಃ) । ಅನಭಿಧೂನ್ವಂತಃ (ವಸ್ತ್ರಪ್ರಾಂತೇನ ವೀಜನಮಕುರ್ವಂತಃ)। ತ್ರಿಃ ಪ್ರತಿಪರಿಯಂತಿ ಪ್ರದಕ್ಷಿಣಂ । ನಾತ್ರ ಕನಿಷ್ಠ ಪ್ರಥಮತ್ವಾದಿ ನಿಯಮಃ ।

ಓಂ ಅ॑ಪನಃ । ಶೋ॑ಶುಚತ್ । ಅ॒ಘಂ । ಅ॒ಗ್ನೇ॒ । ಶು॒ಶು॒ದ್ಧ್ಯಾ । ರ॒ಯಿಮ್ ॥
ಅ॑ಪನಃ । ಶೋ॑ಶುಚತ್ । ಅ॒ಘಮ್ ॥

ಬಲಿ

**** ಪ್ರಾಚೀನಾವೀತಿಯಾಗಿ, ಎಡಮಂಡಿಯನ್ನು ನೆಲಕ್ಕೆ ತಗುಲಿಸಿ । ಇಟ್ಟಿರುವ ಚರುಪಾತ್ರೆಯನ್ನು ತೆಗೆದುಕೊಂಡು, ಅಲ್ಲಿರುವ 3 ಮಣ್ಣಿನ ಚೂರುಗಳ ಮೇಲೆ ಎಳ್ಳುನೀರನ್ನು ಬಿಟ್ಟು । ಅತ್ತಿಮರದ ಸೌಟಿನಿಂದ, 3 ಸಲ ಚರುವನ್ನು ಅಪ್ರದಕ್ಷಿಣೆಯಾಗಿ ಕೂಡಿಸಿ । ಪಾತ್ರೆಯಲ್ಲಿರುವ ಉಳಿದ ಚರುವಿನಲ್ಲಿ, ಮೊದಲಸಲದ ಬಲಿಗೆ ಬೇಕಾದಷ್ಟು ಚರುವನ್ನು ತೆಗೆದುಕೊಂಡು, **'ಪಥಿವಾಸಿಭ್ಯೋ ಭೂತೇಭ್ಯಃ ಏತಂ ಪಥಿ(ಪಿಂಡಂ) ಬಲಿಂ ದದಾಮಿ'**, ಎಂದು ಹೇಳಿ । ಮಣ್ಣಿನ 1 ಚೂರಿನ ಮೇಲೆ ಹಾಕುತ್ತಾನೆ । ಅದೇರೀತಿ ಎರಡನೇಸಲದ ಬಲಿಗೆ ಬೇಕಾದಷ್ಟು ಚರುವನ್ನು ತೆಗೆದುಕೊಂಡು, **'ಪಥಿವಾಸಿಭ್ಯೋ ಭೂತೇಭ್ಯಃ ಏತಂ ಪಥಿ(ಪಿಂಡಂ) ಬಲಿಂ ದದಾಮಿ'**, ಎಂದು ಹೇಳಿ । ಮಣ್ಣಿನ 2 ನೇ ಚೂರಿನ ಮೇಲೆ ಹಾಕುತ್ತಾನೆ । ನಂತರ ಉಳಿದಿರುವ ಚರುವಿನೊಂದಿಗೇ, ಚರುವಿನ ಪಾತ್ರೆಯನ್ನೇ ಮಣ್ಣಿನ 3 ನೇ ಚೂರಿನ ಮೇಲೆ ಕೆಳಮುಖವಾಗಿ, **'ಪಥಿವಾಸಿಭ್ಯೋ**

ಭೂತೇಭ್ಯಃ ಏತಂ ಪಥಿ(ಪಿಂಡಂ) ಬಲಿಂ ದದಾಮಿ', ಎಂದು ಹೇಳಿ ಇಡಬೇಕು । ನಂತರ ಆ ಚರುಪಾತ್ರೆಯನ್ನು ಎತ್ತಿ, ಪಕ್ಕದಲ್ಲಿ ಇಟ್ಟು, ನೀರು ನಿಲ್ಲದಂತೆ, ಪುಡಿಯಾಗುವಂತೆ ಚೆನ್ನಾಗಿ ಒಡೆಯಬೇಕು । ಕೈ ತೊಳೆದುಕೊಂಡು, ನಂತರ ಆ ಬಲಿಗಳ ಮೇಲೆ ಎಳ್ಳುನೀರನ್ನು ಬಿಟ್ಟು । **'ಪಥಿ ಗೋಪ್ತೃಭ್ಯಃ ಇದಂ ನಮಮ'**, ಎಂದು ಉದ್ದೇಶತ್ಯಾಗವನ್ನು ಹೇಳಿ । ಅತ್ತಿಮರದ ಸೌಟಿನಿಂದ, 3 ಬಲಿಗಳನ್ನು ಒಟ್ಟುಗೂಡಿಸಬೇಕು । ಪ್ರಧಾನ ಕರ್ತೃವೇ ಇವೆಲ್ಲವನ್ನು ಮಾಡಬೇಕು । ನಂತರ, ಅಮಂತ್ರಕವಾಗಿ ಮತ್ತು ಮೌನವಾಗಿ ಶವವನ್ನು ಎತ್ತಿಕೊಂಡು, ಸ್ಮಶಾನಕ್ಕೆ ಹೋಗಬೇಕು ॥

(ಪ್ರಾಚೀನಾವೀತೀ), ಸವ್ಯಂ ಜಾನ್ವಾಚ್ಯ । ತ್ರಿಷುಲೋಷ್ಟೇಷು ತಿಲೋದಕಂ ನಿನೀಯ । ಔದುಂಬರ ಮೇಕ್ಷಣೇನ ಚರೋಃ ತ್ರಿಃ ಪ್ರಯೌತಿ । ವಿಧಿನಾ ಬಲಿಂ ದದ್ಯಾತ್ । "ಪಥಿವಾಸಿಭ್ಯೋ ಭೂತೇಭ್ಯಃ ಏತಂ ಪಥಿ(ಪಿಂಡಂ) ಬಲಿಂ ದದಾಮಿ" । ಇತಿ ವಿಧಿನಾ ಲೋಷ್ಟೇಷು ಪ್ರಕ್ಷಿಪತಿ । ಅಥಾಸ್ಯ ಕಪಾಲಾನಿ ಸುಸಂಭಿನ್ನಾನಿ ಸಂಭಿನತ್ತಿ । ಯಥೈಷೂದಕಂ ನ ತಿಷ್ಠೇತ್ ತಥಾ ಅವಾಗ್ಬಿಲಂ ಭಿಂದ್ಯಾತ್ । ಅಪ ಉಪಸ್ಪೃಶ್ಯ, ಉಪರಿ ತಿಲೋದಕಂ ನಿನೀಯ । 'ಪಥಿ ಗೋಪ್ತೃಭ್ಯ ಇದಂ ನಮಮ' ಇತಿ ಮೇಕ್ಷಣೇನ ಲೋಷ್ಟಾನಿ ತ್ರೀಣಿ ಮಿಶ್ರಯೇತ್ । ಅಗ್ನಿದಕೃತ್ಯಂ ಏತತ್ । ತೂಷ್ಣೀಂ ಪ್ರೇತಮಾದಾಯ, ಸ್ಮಶಾನಂ ಗತ್ವಾ ॥

23. ದಹನದೇಶಕ್ಕೆ ಹೋಗುವುದು

**** ನಂತರ, ಪ್ರಾಚೀನಾವೀತಿಯಾಗಿ, ದಹನಜಾಗದ ಹಿಂಭಾಗಕ್ಕೆ ಹೋಗಿ, ದಕ್ಷಿಣಕ್ಕೆ ಶವದ ತಲೆ ಇರುವಂತೆ ಇಟ್ಟು, ಅದರ ಪಕ್ಕದಲ್ಲಿ ಉತ್ತರಕ್ಕೆ ಅಗ್ನಿಯನ್ನು, ಹಸುವನ್ನು, ಆಡನ್ನು (ನಿಲ್ಲಿಸಿ) ಇಟ್ಟು, ಎಲ್ಲರೂ ಶವದ ದಕ್ಷಿಣದಲ್ಲಿ ನಿಂತು । ಕರ್ತೃವು, ಈ ಕೆಳಗಿನ ಮಂತ್ರದ ಅರ್ಥದಂತೆ (ಮಂತ್ರವನ್ನು ಹೇಳಬೇಕಿಲ್ಲ), ತನ್ನ ಜೊತೆ ಬಂದವರೊಡನೆ ಉತ್ತರದಿಕ್ಕಿಗೆ ಸ್ವಲ್ಪದೂರ ಹೋಗಬೇಕು ॥

(ಪ್ರಾಚೀನಾವೀತೀ) ದಹನದೇಶಸ್ಯ ಪಶ್ಚಾದ್ಭಾಗೇ ಪ್ರೇತಂ(ದಕ್ಷಿಣಾಶಿರಸಂ), ಅಗ್ನಿಂ, ರಾಜಗವೀಂ, ಅಜಂ ಚ ಉತ್ತರಾಪವರ್ಗಂ ನಿಧಾಯ । ಕರ್ತಾ ಸಹಾಮಾತ್ಯಾ ಉದೀಚೀಂ ದಿಶಂ ಗಚ್ಛೇಯುಃ ।

(ಓಂ ಏಷಾ ವೈ । ದೇವ ಮನುಷ್ಯಾಣಾಂ । ಶಾಂತಾದಿಕ್ । ತಾಂ । ಏವೈನಾಂ ।
ಅನೂತ್ಕ್ರಮಂತಿ(ಉತ್ಸೃಜತಿ) ॥ ಇತಿ ಅರ್ಥವಾದಶ್ರುತಿಃ ।)

24. ದಹನದ ಜಾಗವನ್ನು ಸ್ವಚ್ಛಗೊಳಿಸುವುದು

**** ನಂತರ ಪ್ರಾಚೀನಾವೀತಿಯಾಗಿ, ಪುನಃ ಹಿಂತಿರುಗಿ ಶವದ ಸಮೀಪಬಂದು । ಬರಡು ಭೂಮಿಯಲ್ಲದ ಜಾಗವನ್ನು, ಹಸಿಯಾದ ಪಲಾಶ(ಮುತ್ತುಗ) ಅಥವಾ ಶಮೀ(ಬನ್ನಿ) ಮರದ ಎಲೆಗಳಿರುವ ಕೊಂಬೆಯಿಂದ, ಸ್ಮಶಾನಸ್ಥಳವನ್ನು ಮತ್ತು ಅಗ್ನಿಯನ್ನಿಡುವ ಜಾಗವನ್ನೂ ಮತ್ತೂ ಚಿತೆಯನ್ನು ಮಾಡುವ ಜಾಗವನ್ನೂ ಸ್ವಚ್ಛಮಾಡಬೇಕು, ಈ ಕೆಳಗಿನ ಮಂತ್ರದಿಂದ ॥

ಪ್ರತ್ಯೇತ್ಯ । (ಪ್ರಾಚೀನಾವೀತೀ), ತತಃ ಕರ್ತಾ ಊಷರಾದಿ ರಹಿತಸ್ಥಲಂ ಆರ್ದ್ರಯಾ ಪಲಾಶಶಾಖಯಾ ಶಮೀಶಾಖಯಾ ವಾ ಸ್ಮಶಾನಾಯತನಂ ಅಗ್ನಿಭಾಂಡ ನಿಧಾನ ದಾರುಚಿತಿ ಯೋಗ್ಯಂ ದೇಶಂ ಚ ಸಂಮಾರ್ಷ್ಟಿ ।

ಓಂ ಅಪೇತವೀತ । ವಿಚಸರ್ಪತಾತಃ । ಯೇ ತ್ರಸ್ಥ । ಪುರಾಣಾಃ । ಯೇ ಚ ।
ನೂತನಾಃ ॥ ಅದಾದಿದಂ । ಯಮಃ । ಅವಸಾನಂ । ಪೃಥಿವ್ಯಾಃ । ಅಕ್ರನ್ನಿಮಂ ।
ಪಿತರಃ । ಲೋಕಮಸ್ಮೈ ॥

ಅಥವಾ

ಓಂ ಅಪೇತವೀತ । ವಿಚಸರ್ಪತಾತಃ । ಯೇ ತ್ರಸ್ಥ । ಪುರಾಣಾಃ । ಯೇ ಚ । ನೂತನಾಃ ॥ ಅಹೋಭಿಃ । ಅದ್ಭಿಃ । ಅಕ್ತುಭಿಃ । ವ್ಯಕ್ತಂ । ಯಮಃ । ದದಾತು । ಅವಸಾನಂ । ಅಸ್ಮೈ ॥

25. ಚಿತೆಯ ರಚನೆ

**** ನಂತರ, ಪ್ರಾಚೀನಾವೀತಿಯಾಗಿ, ದಕ್ಷಿಣಭಾಗಕ್ಕೆ, ಆ ಸ್ವಚ್ಛಮಾಡಲು ಉಪಯೋಗಿಸಿದ ಕೋಲುಗಳನ್ನು ಎಸೆಯಬೇಕು । ಕೈ ತೊಳೆದು । ನಂತರ ಚಿನ್ನದ ಕಡ್ಡಿಯಿಂದ ಕುಕ್ಕಿಕುಕ್ಕಿ ಅಗೆದು । ಕೈತೊಳೆದು । ಅಗೆದ ಜಾಗಕ್ಕೆ ನೀರನ್ನು ಪೋಕ್ಷಿಸಿ । ಅದರ ಮಧ್ಯದಲ್ಲಿ ಚಿನ್ನದ ಕಡ್ಡಿಯನ್ನಿಟ್ಟು । ಅಭಾವದಲ್ಲಿ, ಸ್ವಲ್ಪ ತುಪ್ಪವನ್ನು ಹಾಕಿ । ಅಲ್ಲಿ ದಕ್ಷಿಣಾಗ್ರವಾಗಿ ದರ್ಭೆಗಳನ್ನು ಹರಡಿ । ಅದರ ಮೇಲೆ ಯಜ್ಞವೃಕ್ಷಗಳ ಸೌದೆಗಳಿಂದ, ದಕ್ಷಿಣಾಗ್ರವಾಗಿ, ಚಿತೆಯನ್ನು ನಿರ್ಮಿಸಿ । ಚಿತೆಯ ಪೂರ್ವದಿಕ್ಕಿನಲ್ಲಿ, ಚಿತೆಯ ಕೆಳಗೆ ಔಪಾಸನಾಗ್ನಿಯನ್ನು ಇಟ್ಟು । ದಕ್ಷಿಣಪೂರ್ವಾಗ್ರವಾದ ದರ್ಭೆಗಳಿಂದ ಅಗ್ನಿಯನ್ನೂ ಚಿತೆಯನ್ನೂ ಬೇರೆ ಬೇರೆಯಾಗಿ ಪರಿಸ್ತರಣಮಾಡಿ । ಅಗ್ನಿಯ ದಕ್ಷಿಣ ಅಥವಾ ಪಶ್ಚಿಮದಲ್ಲಿ ಪಾತ್ರಾಸಾದನೆಗೆ ದರ್ಭೆಗಳನ್ನು ಹರಡಿ ॥

ನಂತರಂ (ಪ್ರಾಚೀನಾವೀತೀ), ದಕ್ಷಿಣತಃ ಶಾಖಾಂ ನಿರಸ್ಯ । ಅಪ ಉಪಸ್ಪೃಶ್ಯ । ಅಥ ಹಿರಣ್ಯಶಕಲೇನ ಉದ್ಧತ್ಯ । ಅಪ ಉಪಸ್ಪೃಶ್ಯ । ಅವೋಕ್ಷ್ಯ । ಮಧ್ಯೇ ಹಿರಣ್ಯಶಕಲಂ ನಿಧಾಯ । ಅಭಾವೇ ಆಜ್ಯಬಿಂದೂನ್ ವಾ । ತಸ್ಮಿನ್ ದಕ್ಷಿಣಾಗ್ರಾನ್ ದರ್ಭಾನ್ ಸಂಸ್ತೀರ್ಯ । ತೇಷು ಯಾಜ್ಞಿಕೈಃ ಕಾಷ್ಠೈರ್ದಕ್ಷಿಣಾಗ್ರೈಃ ದಾರುಚಿತಿಂ ಕಲ್ಪಯಿತ್ವಾ । ತಸ್ಯ ಪುರಸ್ತಾತ್ ಔಪಾಸನಂ ನಿಧಾಯ । ದಕ್ಷಿಣಾಪ್ರಾಗಗ್ರೈಃ ದರ್ಭೈಃ ಅಗ್ನಿಂ ದಾರುಚಿತಿಂ ಚ ಪೃಥಕ್ ಪರಿಸ್ತೀರ್ಯ । ದಕ್ಷಿಣತಃ ಪಶ್ಚಾದ್ವಾ ದರ್ಭಾನ್ ಸಂಸ್ತೀರ್ಯ ॥

26. ಚೆಟ್ಟದಿಂದ ಶವವನ್ನು ಬೇರ್ಪಡಿಸುವ ಕ್ರಮ ಹಾಗೂ ಹೋಮಕ್ಕಾಗಿ ಪಾತ್ರೆಗಳನ್ನು ಇಡುವುದು ಮತ್ತು ಅವುಗಳಿಗೆ ಸಂಸ್ಕಾರ

**** ಪ್ರಾಚೀನಾವೀತಿಯಾಗಿ, ಹರಡಿರುವ ಆ ದರ್ಭೆಗಳ ಮೇಲೆ ದಕ್ಷಿಣಕ್ಕೆ ಮುಗಿಯುವಂತೆ ಒಂದೊಂದಾಗಿ ಪಾತ್ರೆಗಳನ್ನು ಇಡಬೇಕು । ಕ್ರಮವಾಗಿ, ಸ್ರುಕ್ – ತುಪ್ಪದಪಾತ್ರೆ – ಪ್ರೋಕ್ಷಣೀಪಾತ್ರೆ – ಸ್ರುವ ಇವುಗಳನ್ನು ಒಂದೊಂದಾಗಿ ಇಟ್ಟು । ಚೆಟ್ಟದ ಹಗ್ಗವನ್ನು ಕತ್ತರಿಸಿ, ಚೆಟ್ಟವನ್ನು ಮಾತ್ರ ತೆಗೆದು, ಮುರಿದು, ಎಸೆದು । ನೆಲದಲ್ಲಿರುವ ಹಗ್ಗದ ಮೇಲೆ ಕೃಷ್ಣಾಜಿನದ ಸಹಿತ ಶವವನ್ನು ಇರಿಸಬೇಕು ॥

(ಪ್ರಾಚೀನಾವೀತೀ), ತೇಷ್ವೇಕೈಕಶಃ ದಕ್ಷಿಣಾಪವರ್ಗಂ ಪಾತ್ರಾಣಿ ಪ್ರಯುನಕ್ತಿ । ದರ್ವಿಂ – ಆಜ್ಯಸ್ಥಾಲೀಂ – ಪ್ರೋಕ್ಷಣೀಂ – ಇತರದರ್ವಿಂ ಇತಿ । ರಜ್ಜೂರವಕೃತ್ಯ ಆಸಂದೀಮಪವಿಧ್ಯಂತಿ, ಆಸಂದೀಂ ಛಿತ್ವಾಪಾಸ್ಯ । ರಜ್ಜುಷು ಚೈವ ಕೃಷ್ಣಾಜಿನಂ ಪ್ರಾಚೀನಾವೀತಿನಾ ಉತ್ತಾನಂ ಪ್ರೇತಂ ದಕ್ಷಿಣಾಶಿರಸಂ ನಿದಧಾತಿ ॥

**** ಪ್ರಾಚೀನಾವೀತಿಯಿಂದ, 1 ದರ್ಭೆಯ ಪವಿತ್ರದಿಂದ, ಪ್ರೋಕ್ಷಣೀಪಾತ್ರೆಯ ಸಂಸ್ಕಾರಮಾಡಿ । ಶವದ ಹೆಬ್ಬೆರಳುಗಳಿಗೆ ಕಟ್ಟಿರುವ ದಾರವನ್ನು ಕತ್ತರಿಸಿ । ಶವವನ್ನೂ(ಹವಿಸ್ಸುರೂಪವಾದ) ಪಾತ್ರೆಗಳನ್ನು ಮತ್ತೂ ಚಿತೆಯನ್ನೂ ಬೇರೆಬೇರೆಯಾಗಿ ಪ್ರೋಕ್ಷಣೀ ಜಲದಿಂದ ಪ್ರೋಕ್ಷಿಸಿ, ಅದನ್ನು ಚಿತೆಯ ದಕ್ಷಿಣದಲ್ಲಿ ಪರಿಸ್ತರಣದ ಹೊರಗೆ ಇಡಬೇಕು । ನಂತರ ಆಜ್ಯ ಸಂಸ್ಕಾರ ಮಾಡಬೇಕು । ನಂತರ ಸ್ರುಕ್ ಸ್ರುವಗಳನ್ನು ಅಗ್ನಿಯಲ್ಲಿ ಕಾಯಿಸಿ । ದರ್ಭೆಯಿಂದ ಸಂಸ್ಕರಿಸಿ, ಪ್ರೋಕ್ಷಿಸಿ, ಆಜ್ಯಪಾತ್ರೆಯ ದಕ್ಷಿಣಕ್ಕೆ ಸ್ರುವ–ಸ್ರುಕ್ ಗಳನ್ನು ಕೆಳಗಿಟ್ಟು । ದರ್ಭೆಯ ಅಗ್ರವನ್ನು ಅಗ್ನಿಯಲ್ಲಿ ಹತ್ತಿಸಿ, ಅಗ್ನಿಗೆ ಹಾಕಬೇಕು । ಇವೆಲ್ಲವನ್ನು ಹಿಂದಿನ ಪುನಸ್ಸಂಧಾನದ ಪ್ರಯೋಗದಂತೆಯೇ ಮಾಡಬೇಕು ॥

(ಪ್ರಾಚೀನಾವೀತೀ) ಏಕಪವಿತ್ರೇಣ ಪ್ರೋಕ್ಷಣೀಸ್ಸಂಸ್ಕೃತ್ಯ । ಅಂಗುಷ್ಠಬಂಧನ ಸೂತ್ರೇ ಛಿತ್ವಾ। ಮೃತಂ ಪಾತ್ರಾಣಿ ದಾರುಚಿತಿಂ ಚ ಪ್ರತ್ಯೇಕಂ ಪ್ರೋಕ್ಷ್ಯ, ಚಿತೇಃ ದಕ್ಷಿಣತೋ ನಿಧಾಯ । ಆಜ್ಯಸಂಸ್ಕಾರಂ ಕೃತ್ವಾ । ದರ್ವಿಂ ಅಗ್ನೌ ಪ್ರತಿತಪ್ಯ, ಸಂಸ್ಕೃತ್ಯ । ಪ್ರೋಕ್ಷ್ಯ, ಆಜ್ಯಪಾತ್ರಾತ್ ದಕ್ಷಿಣತೋ ನಿಧಾಯ (ದಕ್ಷಿಣಾವೃದ್ಧಿ ಪಿತೃಣಾಂ / ದಕ್ಷಿಣತಃ ಅಪವರ್ಗಃ) । ದರ್ಭಂ ಅಗ್ನಿಂ ಸಂಸ್ಪೃಶ್ಯ, ಅಗ್ನೌ ಪ್ರಹರತಿ ॥

27. ಸ್ಮಶಾನದಿಂದ ರಾಜಗವಿಯನ್ನು(ಹಸು) ಬಿಟ್ಟೋಡಿಸುವುದು

**** ಉತ್ಸರ್ಜನ(ಬಿಡುವ) ಮಾಡುವ ಪಕ್ಷದಲ್ಲಿ, ಪ್ರಾಚೀನಾವೀತಿಯಾಗಿ, ಅಪಶ್ಯಾಮ ಯುವತಿಂ....., ಎಂಬ 3 ಮಂತ್ರಗಳಿಂದ, 3 ಸಲ, ಚಿತೆಯಿಂದ ಉತ್ತರದಲ್ಲಿ ನಿಂತಿರುವ ರಾಜಗವಿ – ಅಗ್ನಿ ಮತ್ತು ಚಿತೆಗಳನ್ನು ಕರ್ತೃವು ಅಪ್ರದಕ್ಷಿಣೆಯಾಗಿ ಸುತ್ತಬೇಕು ॥

ಯತ್ ಉತ್ಸೃಜಂತಿ, (ಪ್ರಾಚೀನಾವೀತೀ), ಅಪಶ್ಯಾಮ ಯುವತಿಮಾಚರಂತೀಮ್ ಇತ್ಯೇತಾಭಿಃ ತಿಸೃಭಿಃ ತ್ರಿಃ ಪ್ರಸವ್ಯಂ ರಾಜಗವೀಂ, ಅಗ್ನೀನ್, ದಾರುಚಿತಿಂ, ಚ ಪರಿಣೀಯ ।

ಓಂ ಅಪಶ್ಯಾಮ । ಯುವತಿಂ । ಆಚರಂತೀಂ । ಮೃತಾಯ । ಜೀವಾಂ । ಪರಿಣೀಯಮಾನಾಮ್ ॥ ಅಂಧೇನ । ಯಾ ತಮಸಾ । ಪ್ರಾವೃತಾऽಸಿ । ಪ್ರಾಚೀಮವಾಚೀಂ । ಅವಯನ್ನರಿಷ್ಟ್ಯೈ ॥

ಓಂ ಮಯ್ಯೈತಾಂ । ಮಾಗ್ಸ್ತಾಂ । ಭ್ರಿಯಮಾಣಾ । ದೇವೀ ಸತೀ । ಪಿತೃಲೋಕಂ । ಯದೈಷಿ ॥ ವಿಶ್ವವಾರಾ । ನಭಸಾ । ಸಂವ್ಯಯಂತಿ । ಉಭೌ ನಃ । ಲೋಕೌ । ಪಯಸಾ । ಆವೃಣೇಹಿ ॥

ಓಂ ರಯಿಷ್ಠಾಮಗ್ನಿಂ । ಮಧುಮಂತಂ । ಊರ್ಮಿಣಂ । ಊರ್ಜಸ್ವಂತಂ ।
ತ್ವಾ । ಪಯಸಾ । ಉಪಸಗ್ಂ ಸದೇಮ ॥ ಸಗ್ಂರಯ್ಯಾ । ಸಮುವರ್ಚಸಾ ।
ಸಚಸ್ವಾನಃ । ಸ್ವಸ್ತಯೇ ॥

**** ನಂತರ ಪ್ರಾಚೀನಾವೀತಿಯಾಗಿ, ಯೇ ಜೀವಾ....., ಎಂಬ ಮಂತ್ರದಿಂದ ರಾಜಗವಿಯನ್ನು ಅಭಿಮಂತ್ರಣ ಮಾಡಬೇಕು(ಮುಟ್ಟಿ) ॥

(ಪ್ರಾಚೀನಾವೀತೀ), ಯೇ ಜೀವಾ ಇತ್ಯಭಿಮಂತ್ರ್ಯ ।

ಓಂ ಯೇ ಜೀವಾಃ । ಯೇ ಚ ಮೃತಾಃ । ಯೇ ಜಾತಾಃ । ಯೇ ಚ ಜಂತ್ಯಾಃ ।
ತೇಭ್ಯೋ ಘೃತಸ್ಯ । ಧಾರಯಿತುಂ । ಮಧುಧಾರಾ । ವ್ಯಂದತೀ ॥

**** ಪ್ರಾಚೀನಾವೀತಿಯಾಗಿ, ಮಾತಾ ರುದ್ರಾಣಾಂ....., ಎಂಬ 2 ಮಂತ್ರಗಳಿಂದ ಅದನ್ನು ಬಿಟ್ಟೋಡಿಸಬೇಕು ॥

(ಪ್ರಾಚೀನಾವೀತೀ), ಮಾತಾ ರುದ್ರಾಣಾಂ ಇತಿ ದ್ವಾಭ್ಯಾಂ ಉತ್ಸೃಜಂತಿ ।

ಓಂ ಮಾತಾ । ರುದ್ರಾಣಾಂ । ದುಹಿತಾ । ವಸೂನಾಂ । ಸ್ವಸಾssದಿತ್ಯಾನಾಂ ।
ಅಮೃತಸ್ಯ । ನಾಭಿಃ ॥ ಪ್ರಣು ವೋಚಂ । ಚಿಕಿತುಷೇ ಜನಾಯ । ಮಾಗಾಂ ।
ಅನಾಗಾಂ । ಅದಿತಿಂ ವಧಿಷ್ಟ ॥

ಓಂ ಪಿಬತೂದಕಂ । ತೃಣಾನ್ಯತ್ತು ॥ ಓಮುತ್ಸೃಜತ ॥

28. ಮೃತನ ಜೊತೆ ಅವನ ಪತ್ನಿಯು ಮಲಗಿ–ಏಳುವ ಕ್ರಮ

**** ನಂತರ, ಪ್ರಾಚೀನಾವೀತಿಯಾಗಿ, ಈ ಕೆಳಗಿನ ಮಂತ್ರದಿಂದ, ಮೃತನ ಪತ್ನಿಯನ್ನು ಮೃತನಜೊತೆ ಕರ್ತೃವು ಮಲಗಿಸಬೇಕು ॥

(ಪ್ರಾಚೀನಾವೀತೀ), ಅತ್ರ ಪತ್ನೀಂ ಪ್ರೇತೇನ ಸಹ ಶಾಯಯಿತ್ವಾ ।

ಓಂ ಇಯಂ । ನಾರೀ । ಪತಿಲೋಕಂ । ವೃಣಾನಾ । ನಿಪದ್ಯತ । ಉಪ ತ್ವಾ । ಮರ್ತ್ಯಪ್ರೇತಂ ॥ ವಿಶ್ವಂ ಪುರಾಣಂ । ಅನುಪಾಲಯಂತೀ । ತಸ್ಯೈ ಪ್ರಜಾಂ । ದ್ರವಿಣಂ । ಚೇಹ ಧೇಹಿ ॥

**** ಪ್ರಾಚೀನಾವೀತಿಯಾಗಿ, ಕೆಳಗಿನ ಮಂತ್ರದಿಂದ, ಮೃತನ ಹಿತವನ್ನು ಬಯಸುವವರು ಅಥವಾ ಬೇರೆ ಬ್ರಾಹ್ಮಣರು ಆ ಪತ್ನಿಯನ್ನು ಮತ್ತೆ ಮೇಲಕ್ಕೆ ಏಳಿಸಬೇಕು । ಇಲ್ಲಿ ಪತ್ನಿಯು, ಏಳಿಸಿದವರಿಗೆ ಅಥವಾ ಪುರೋಹಿರಿಗೆ 1000 ರೂ ಅಥವಾ ಯಥಾಶಕ್ತಿ ದಕ್ಷಿಣೆಯನ್ನು ಕೊಡಬೇಕು ॥

(ಪ್ರಾಚೀನಾವೀತೀ), ತಾಂ ಉತ್ಥಾಪಯತಿ । ಅತ್ರ ಪತ್ನೀ ಸಹಸ್ರಂ ವರಂ ದದಾತಿ ।

ಓಂ ಉದೀರ್ಷ್ವನಾರಿ । ಅಭಿಜೀವಲೋಕಂ । ಇತಾಸುಮೇತಂ । ಉಪಶೇಷ ಏಹಿ ॥ ಹಸ್ತಗ್ರಾಭಸ್ಯ । ದಿಧಿಷೋಃ । ತ್ವಮೇತತ್ । ಪತ್ಯುಃ । ಜನಿತ್ವಂ । ಅಭಿಸಂಬಭೂವ ॥

29. ಮೃತನ ಕೈಗಳನ್ನು ಸವರುವುದು

**** ಪ್ರಾಚೀನಾವೀತಿಯಾಗಿ, ಈ ಕೆಳಗಿನ ಮಂತ್ರದಿಂದ ಕರ್ತೃವು, ಚಿನ್ನದಿಂದ ಮೃತನ ಕೈಗಳನ್ನು(ಮೊದಲು ಬಲಕೈ) ತಿಕ್ಕುತ್ತಾನೆ ॥

(ಪ್ರಾಚೀನಾವೀತೀ), ಸುವರ್ಣೇನ ಪ್ರೇತಹಸ್ತೌ ಸಂಮಾರ್ಷ್ಟಿ ॥

ಓಂ ಸುವರ್ಣಂ । ಹಸ್ತಾತ್ । ಆದದಾನಾ । ಮೃತಸ್ಯ । ಶ್ರಿಯೈ । ಬ್ರಹ್ಮಣೇ । ತೇಜಸೇ । ಬಲಾಯ ॥ ಅತ್ರೈವ । ತ್ವಮಿಹ । ವಯಂ । ಸುಶೇವಾ । ವಿಶ್ವಾಸ್ಪೃಧಃ । ಅಭಿಮಾತೀಃ । ಜಯೇಮ ॥

30. ಮೃತನನ್ನು ಚಿತೆಯಮೇಲೆ ಮಲಗಿಸುವಿಕೆ – ಇಂದ್ರಿಯಗಳಲ್ಲಿ ಚಿನ್ನವನ್ನು ಹಾಕುವಿಕೆ ಮತ್ತು ಬಾಯಿಗೆ ಅಕ್ಕಿಯನ್ನು ಹಾಕುವಿಕೆ

**** ನಂತರ ಕರ್ತೃವು ಪ್ರಾಚೀನಾವೀತಿಯಾಗಿ ಹಾಗೂ ಜ್ಞಾತಿಗಳು(ವಾಹಕರು) ನಿವೀತಿಯಿಂದ, ಮೃತನನ್ನು ಹಗ್ಗ ಮತ್ತು ಕೃಷ್ಣಾಜಿನದ ಸಹಿತವಾಗಿ ಚಿತೆಯಲ್ಲಿ ದಕ್ಷಿಣಕ್ಕೆ ತಲೆ ಇರುವಂತೆ ಅಮಂತ್ರಕವಾಗಿ ಇಡುತ್ತಾರೆ । ನಂತರ ಪ್ರಾಚೀನಾವೀತಿಯಾಗಿ ಮೃತನ ಬಾಯಿ, ಕಣ್ಣುಗಳ, ಕಿವಿಗಳ, ಮೂಗಿನ ರಂಧ್ರಗಳ, ಮೇಲೆ ಚಿನ್ನದ ಕಡ್ಡಿಯನ್ನು ಅಥವಾ ಆಜ್ಯದ ಹನಿಗಳನ್ನು ಹಾಕಬೇಕು, ಎಲ್ಲಾ ಅಂಗಗಳ ದಕ್ಷಿಣ(ಬಲ)ಭಾಗಕ್ಕೆ ಮೊದಲು । ನಂತರ ಮೃತನ ಬಾಯಿಗೆ ಅಮಂತ್ರಕವಾಗಿ ಎಳ್ಳುಮಿಶ್ರಿತವಾದ ಅಕ್ಕಿಯನ್ನು ಹಾಕಬೇಕು ॥

ಅಥ ಕರ್ತೃ (ಪ್ರಾಚೀನಾವೀತೀ), ಅಮಾತ್ಯಾಃ(ವಾಹಕಾಃ) ನಿವೀತಿನಾ, ಪ್ರೇತಂ ಚಿತೌ ದಕ್ಷಿಣಾಶಿರಸಂ ತೂಷ್ಣೀಂ ಆರೋಪಯತಿ । (ಪ್ರಾಚೀನಾವೀತೀ)

ಅಸ್ಯ ಆಸ್ಯೇ ಚಕ್ಷುಷೋಃ ಕರ್ಣಯೋಃ ನಾಸಿಕಯೋಃ ಚ ಹಿರಣ್ಯಶಕಲಾನ್ ಆಜ್ಯಬಿಂದೂನ್ ವಾ ಪ್ರತ್ಯಸ್ಯತಿ, ಸರ್ವಸ್ಯ ದಕ್ಷಿಣಸ್ಯಾಗ್ರೇ । ಪ್ರೇತಸ್ಯಮುಖೇ ತೂಷ್ಣೀಂ ತಿಲ, ತಂಡುಲಾನ್ ಕ್ಷಿಪತಿ ॥

31. ಮೃತನನ್ನು ಅಗ್ನಿಯಿಂದ ದಹಿಸುವುದು

**** (ಈ ಹಿಂದೆ ಶವಕ್ಕೆ ಹೊದಿಸಿದ್ದ ವಸ್ತ್ರವನ್ನು ಈಗ ಕೆಲವರು ತೆಗೆದು, ಶವದ ಗುಪ್ತಾಂಗಕ್ಕೆ(ಸ್ತ್ರೀಯರಾದರೆ, ಎದೆಗೂ ಸಹಾ) ಮರೆಗಾಗಿ ಬಟ್ಟೆಯನ್ನು ಇಡುತ್ತಾರೆ) ನಂತರ ಪ್ರಾಚೀನಾವೀತಿಯಾಗಿ ಸಂಪೂರ್ಣವಾಗಿ ಅಲ್ಲಿರುವ ಔಪಾಸನಾಗ್ನಿಯನ್ನು ತೆಗೆದುಕೊಂಡು । ಪಶ್ಚಿಮಾಭಿಮುಖವಾಗಿ(ಮುಂದುಗಡೆಯಿಂದ) ನಿಂತುಕೊಂಡು । ನೇರವಾಗಿ ಶವಕ್ಕಲ್ಲದೇ, ಶವದ ಕೆಳಭಾಗದಲ್ಲಿರುವ ಚಿತೆಗೆ ಮಾತ್ರವೇ ಅಗ್ನಿಸ್ಪರ್ಶದ ಮೂಲಕ ಈ ಕೆಳಗಿನ 2 ಮಂತ್ರಗಳಿಂದ, ಚೆನ್ನಾಗಿ ದಹನಮಾಡಬೇಕು ॥

(ಆದರೆ ಇಲ್ಲಿ ಒಂದು ವಿಷಯವಿದೆ, ಅದೇನೆಂದರೆ – ಈ ವಿಷಯಕ್ಕೆ ಆಧಾರಗ್ರಂಥಗಳಾದ, ಪಿತೃಮೇಧಸೂತ್ರ ಹಾಗೂ ಭಾಷ್ಯಗಳಲ್ಲಿಯೂ ಸಹಾ, ಆಹವನೀಯಾಗ್ನಿಯಿಂದ ದಹಿಸುವಾಗ ಮೈನಮಗ್ನೇ....., ಎಂಬ ಮಂತ್ರವನ್ನೂ ಮತ್ತೂ ಗಾರ್ಹಪತ್ಯಾಗ್ನಿಯಿಂದ ದಹಿಸುವಾಗ ಶೃತಂ ಯದಾ....., ಎಂಬ ಮಂತ್ರವನ್ನೂ ಹೇಳಬೇಕು ॥ ಆದರೆ ಉಳಿದ ದಕ್ಷಿಣಾಗ್ನಿ – ಸಭ್ಯ – ಆವಸಥ್ಯ ಮತ್ತು ಔಪಾಸನಾಗ್ನಿಗಳಿಂದ ದಹಿಸುವಾಗ ಅಮಂತ್ರಕವಾಗಿಯೇ ದಹಿಸಬೇಕೆಂದು ನಿರ್ದೇಶಿಸಿದ್ದಾರೆ!!!)

ಅಥ (ಪ್ರಾಚೀನಾವೀತೀ) ನಿಶ್ಶೇಷಮಗ್ನಿಂ ಆದಾಯ । ಪಶ್ಚಿಮಾಭಿಮುಖಂ ಸ್ಥಿತ್ವಾ । ದಾರುಚಿತಿರೇವಾತ್ರ ಸಾಕ್ಷಾತ್ ಅಗ್ನಿಸಂಯೋಗಃ ಕಾರ್ಯಃ । ಏವಂ ಪ್ರೇತಂ ದಹತಿ ॥

ಓಂ ಮೈನಮಗ್ನೇ । ವಿದಹಃ । ಮಾಭಿಶೋಚಃ । ಮಾಸ್ಯ ತ್ವಚಂ । ಚಿಕ್ಷಿಪಃ ।
ಮಾ ಶರೀರಮ್ ॥ ಯದಾ ಶೃತಂ । ಕರವೋ ಜಾತವೇದಃ । ಅಥೇಮೇನಂ ।
ಪ್ರಹಿಣುತಾತ್ ಪಿತೃಭ್ಯಃ ॥

ಓಂ ಶೃತಂ ಯದಾ । ಕರಸಿ । ಜಾತವೇದಃ । ಅಥೇಮೇನಂ । ಪರಿದತ್ತಾತ್ ।
ಪಿತೃಭ್ಯಃ ॥ ಯದಾ ಗಚ್ಛಾತಿ । ಅಸುನೀತಿಮೇತಾಂ । ಅಥಾ ದೇವಾನಾಂ ।
ವಶನೀರ್ಭವಾತಿ ॥

**** ಮೇಲಿನ ರೀತಿಯಲ್ಲಿಯೇ ಆದರೆ ಈ ಕೆಳಗಿನ 3 ಮಂತ್ರಗಳಿಂದ, ಮೃತಸ್ತ್ರೀಯರನ್ನು ದಹಿಸಬೇಕು ॥

ಇತಿ ಸ್ತ್ರೀಣಾಂ ಊಹಃ ।

ಓಂ ಮೈನಮಗ್ನೇ । ವಿದಹಃ । ಮಾಭಿಶೋಚಃ । ಮಾಸ್ಯಾಸ್ತ್ವಚಂ । ಚಿಕ್ಷಿಪಃ ।
ಮಾ ಶರೀರಮ್ ॥ ಯದಾ ಶೃತಂ । ಕರವೋ ಜಾತವೇದಃ । ಅಥೇಮೇನಾಂ ।
ಪ್ರಹಿಣುತಾತ್ । ಪಿತೃಭ್ಯಃ ॥

ಓಂ ಶೃತಂ ಯದಾ । ಕರಸಿ । ಜಾತವೇದಃ । ಅಥೇಮೇನಾಂ । ಪರಿದತ್ತಾತ್ ।
ಪಿತೃಭ್ಯಃ ॥ ಯದಾ ಗಚ್ಛಾತಿ । ಅಸುನೀತಿಮೇತಾಂ । ಅಥಾ ದೇವಾನಾಂ ।
ವಶನೀರ್ಭವಾತಿ ॥

32. ಉಪಸ್ಥಾನ

**** ಪ್ರಾಚೀನಾವೀತಿಯಾಗಿ, ಚಿತೆಯ ಉತ್ತರದ ಕಡೆಯಲ್ಲಿ ದಕ್ಷಿಣಾಭಿಮುಖವಾಗಿ ಕರ್ತೃವು ನಿಂತು, ಈ ಕೆಳಗಿನ ಮಂತ್ರವನ್ನು ಉರಿಯುತ್ತಿರುವ ಶವವನ್ನು ನೋಡುತ್ತಾ ಹೇಳುತ್ತಾನೆ ॥

ಅಥ (ಪ್ರಾಚೀನಾವೀತೀ), ಚಿತೇರುತ್ತರತೋ ದಕ್ಷಿಣಾಮುಖಸ್ತಿಷ್ಠನ್ ಪ್ರೇತಮುಪತಿಷ್ಠತೇ ।

ಓಂ ಸೂರ್ಯಂ ತೇ । ಚಕ್ಷುಃ । ಗಚ್ಛತು । ವಾತಮಾತ್ಮಾ । ದ್ಯಾಂ ಚ ಗಚ್ಛ ।
ಪೃಥಿವೀಂ ಚ । ಧರ್ಮಣಾ ॥ ಅಪೋವಾಗಚ್ಛ । ಯದಿ ತತ್ರ । ತೇ ಹಿತಂ ।
ಓಷಧೀಷು । ಪ್ರತಿತಿಷ್ಠಾ ಶರೀರೈಃ ॥

33. ಆಡಿನ(ಮೇಕೆ) ವಿಷಯ

**** ಪ್ರಾಚೀನಾವೀತಿಯಾಗಿ, ಚಿತೆಯ ಹಿಂದೆ(ಪಶ್ಚಿಮ) ಆ ಚಿತೆಯಲ್ಲಿರುವ ಒಂದು ಕಟ್ಟಿಗೆಗೇ ಆಡನ್ನು ದರ್ಭೆಯಿಂದ ಮಾಡಿದ ದುರ್ಬಲವಾದ ಹಗ್ಗದಿಂದ, ಅಮಂತ್ರಕವಾಗಿ, ದುರ್ಬಲವಾಗಿರುವಂತೆ ಕಟ್ಟಬೇಕು । ಅಗ್ನಿಯ ಶಾಖಕ್ಕೆ ಹೆದರಿ, ಆ ಹಗ್ಗವನ್ನು ತುಂಡರಿಸಿ ಓಡುತ್ತಿರುವ ಆಡನ್ನು ನೋಡುತ್ತಾ, ಅಜೋಭಾಗಃ....., ಎಂಬ ಅನುವಾಕಶೇಷ ಮಂತ್ರಗಳಿಂದ ಅನುಮಂತ್ರಣ(ಹೇಳಬೇಕು) ಮಾಡಬೇಕು ॥

(ಪ್ರಾಚೀನಾವೀತೀ), ಜಘನೇನ ಚಿತಿಂ ತಸ್ಯಾ ಏವ ಚಿತೇಃ ಕಾಷ್ಠೇ ಅಜಮಬಲಯಾ ರಜ್ಜ್ವಾ ಬಧ್ನಾತಿ ತೂಷ್ಣೀಮ್ । ಉದ್ದ್ರವಂತಂ ದಾಹಭಯಾತ್ ಶುಲ್ಬಂ ವಿಚ್ಛಿದ್ಯ, ಪಲಾಯಮಾನಂ ಅಜಂ ಅಜೋಭಾಗಃ ಇತ್ಯನುವಾಕಶೇಷೇಣ ಅನುಮಂತ್ರಯತೇ ॥

ಓಂ ಅಜೋ ಭಾಗಃ । ತಪಸಾ । ತಂ ತಪಸ್ವ । ತಂ ತೇ । ಶೋಚಿಃ । ತಪತು ।
ತಂ ತೇ । ಅರ್ಚಿಃ ॥ ಯಾಸ್ತೇ । ಶಿವಾಃ । ತನುವಃ । ಜಾತವೇದಃ । ತಾಭಿಃ ।
ವಹೇಮಂ । ಸುಕೃತಾಂ । ಯತ್ರ ಲೋಕಾಃ ॥

ಓಂ ಅಯಂ ವೈ । ತ್ವಮಸ್ಮಾತ್ । ಅಧಿ । ತ್ವಮೇತತ್ । ಅಯಂ ವೈ ।
ತದಸ್ಯ । ಯೋನಿರಸಿ ॥ ವೈಶ್ವಾನರಃ । ಪುತ್ರಃ ಪಿತ್ರೇ । ಲೋಕಕೃತ್ । ಜಾತ
ವೇದಃ । ವಹೇಮಂ । ಸುಕೃತಾಂ । ಯತ್ರ ಲೋಕಾಃ ॥

34. ಹೋಮವು

**** ಪ್ರಾಚೀನಾವೀತಿಯಿಂದ, ಚಿತೆಯ ಹಿಂದೆ(ಪಶ್ಚಿಮದಲ್ಲಿ) ಪೂರ್ವಾಭಿಮುಖವಾಗಿ ನಿಂತು । ಅಮಂತ್ರಕವಾಗಿ, ಅಪ್ರದಕ್ಷಿಣೆಯಾಗಿ, ಪ್ರಾಚೀನಾವೀತಿಯಿಂದ, ಚಿತೆಗೆ ಪೂರ್ವಪರಿಷೇಚನವನ್ನು ಮಾಡಿ । ಅಮಂತ್ರಕವಾಗಿ ಚಿತೆಯನ್ನು ಅಲಂಕರಿಸಿ । ಉಪಹೋಮಗಳನ್ನು, ಸ್ರುವದಿಂದ, ತುಪ್ಪವನ್ನು ತೆಗೆದುಕೊಂಡು ಕೆಳಗಿನ 9 ಮಂತ್ರಗಳಿಂದ 9 ಹೋಮಗಳನ್ನು ಚಿತಾಗ್ನಿಯಲ್ಲಿ ಹೋಮಿಸಬೇಕು ॥

(ಪ್ರಾಚೀನಾವೀತೀ), ಅಥ ಜಘನೇನ ಚಿತಿಂ ಪ್ರಾಙ್ಮುಖಃ ಸ್ಥಿತ್ವಾ । ತೂಷ್ಣೀಂ, ಅಪ್ರದಕ್ಷಿಣಂ, ಚಿತಿಂ ಪರಿಷಿಚ್ಯ । ತೂಷ್ಣೀಂ ಅಲಂಕೃತ್ಯ । ನವಸ್ರುವಾಹುತೀಃ ಜುಹೋತಿ ।

1. ಓಂ ಯ ಏತಸ್ಯ(ಸ್ಯಾಃ) । ಪಥಃ । ಗೋಪ್ತಾರಃ । ತೇಭ್ಯಃ ಸ್ವಾಹಾ ॥ ಗೋಪ್ತೃಭ್ಯ ಇದಂ ನಮಮ ॥

2. ಓಂ ಯ ಏತಸ್ಯ(ಸ್ಯಾಃ) । ಪಥಃ । ರಕ್ಷಿತಾರಃ । ತೇಭ್ಯಃ ಸ್ವಾಹಾ ॥ ಪಥೋ ರಕ್ಷಿತೃಭ್ಯ ಇದಂ ನಮಮ ॥

3. ಓಂ ಯ ಏತಸ್ಯ(ಸ್ಯಾಃ) । ಪಥಃ । ಅಭಿರಕ್ಷಿತಾರಃ । ತೇಭ್ಯಃ ಸ್ವಾಹಾ ॥ ಅಭಿರಕ್ಷಿತೃಭ್ಯ ಇದಂ ನಮಮ ॥

4. ಓಂ ಆಖ್ಯಾತ್ರೇಸ್ವಾಹಾ ॥ ಆಖ್ಯಾತ್ರ ಇದಂ ನಮಮ ॥

5. ಓಂ ಅಪಾಖ್ಯಾತ್ರೇ ಸ್ವಾಹಾ ॥ ಅಪಾಖ್ಯಾತ್ರ ಇದಂ ನಮಮ ॥

6. ಓಂ ಅಭಿಲಾಲಪತೇ ಸ್ವಾಹಾ ॥ ಅಭಿಲಾಲಪತ ಇದಂ ನಮಮ ॥

7. ಓಂ ಅಪಲಾಲಪತೇ ಸ್ವಾಹಾ ॥ ಅಪಲಾಲಪತ ಇದಂ ನಮಮ ॥

8. ಓಂ ಅಗ್ನಯೇ । ಕವ್ಯವಾಹನಾಯ ಸ್ವಾಹಾ ॥ ಅಗ್ನಯೇ ಕವ್ಯವಾಹನ ಇದಂ ನಮಮ ॥

9. ಓಂ ಯಮತ್ರ ನಾಧೀಮಃ । ತಸ್ಮೈ ಸ್ವಾಹಾ ॥ ಯಮಾಯೇದಂ ನಮಮ ॥

**** ಸ್ತ್ರೀಯರಿಗೆ ಮೇಲಿನ 3 ಮಂತ್ರಗಳನ್ನು ಹೀಗೆ ಊಹಿಸಿ ಹೇಳಿ ಹೋಮಿಸಬೇಕು ॥

1. ಓಂ ಯ ಏತಸ್ಯಾಃ । ಪಥಃ । ಗೋಪ್ತಾರಃ । ತೇಭ್ಯಃ ಸ್ವಾಹಾ ॥ ಗೋಪ್ತೃಭ್ಯ ಇದಂ ನಮಮ ॥

2. ಓಂ ಯ ಏತಸ್ಯಾಃ । ಪಥಃ । ರಕ್ಷಿತಾರಃ । ತೇಭ್ಯಃ ಸ್ವಾಹಾ ॥ ಪಥೋ ರಕ್ಷಿತೃಭ್ಯ ಇದಂ ನಮಮ ॥

3. ಓಂ ಯ ಏತಸ್ಯಾಃ । ಪಥಃ । ಅಭಿರಕ್ಷಿತಾರಃ । ತೇಭ್ಯಃ ಸ್ವಾಹಾ ॥ ಅಭಿರಕ್ಷಿತೃಭ್ಯ ಇದಂ ನಮಮ ॥

**** ಈ ಪೈತೃಮೇಧಿಕ ಹೋಮಕರ್ಮದಲ್ಲಿ ಆಗಿರಬಹುದಾದ ಎಲ್ಲಾರೀತಿಯ ದೋಷಗಳ ನಿವಾರಣೆಗಾಗಿ ಸರ್ವಪ್ರಾಯಶ್ಚಿತ್ತಹೋಮವನ್ನು ಉಪವೀತಿಯಿಂದ, ಈ ಕೆಳಗಿನ ಮಂತ್ರದಿಂದ ಮಾಡಬೇಕೆಂದು ಕೆಲವರು ತಿಳಿದಿದ್ದರೂ ಸಹಾ, ವೆಂಕಟರಾಮಾವಧಾನೀಯ ಮತ್ತು ಯಲ್ಲಾಜೀಯ ಗ್ರಂಥಗಳಲ್ಲಿ ಅವರುಗಳು ಈ ಅಭಿಪ್ರಾಯವನ್ನು ಒಪ್ಪಿಲ್ಲವೆಂಬುದನ್ನು ಗಮನಿಸಬಹುದಾಗಿದೆ ॥

ಅಸ್ಮಿನ್ ಪೈತೃಮೇಧಿಕ ಹವನಕರ್ಮಣಿ ನಾನಾಪ್ರಕಾರೇಣ ಸಂಭಾವಿತ ಸಮಸ್ತ ದೋಷ ಪ್ರಾಯಶ್ಚಿತ್ತಾರ್ಥಂ, ಉಪವೀತಿನಾ, ಸರ್ವಪ್ರಾಯಶ್ಚಿತ್ತಾಹುತಿಂ ಹೋಷ್ಯಾಮಿ ।

ಓಂ ಭೂರ್ಭುವಸ್ಸುವಸ್ಸ್ವಾಹಾ – ಪ್ರಜಾಪತಯ ಇದಂ ನಮಮ ॥

35. ಸ್ರುಕ್, ಸ್ರುವ ಮತ್ತು ಆಜ್ಯಪಾತ್ರೆಯನ್ನು ಅಗ್ನಿಯಲ್ಲಿ ಹಾಕುವುದು

**** ನಂತರ, ಪ್ರಾಚೀನಾವೀತಿಯಿಂದ, ಸ್ರುಕ್ ಸ್ರುವ ಮತ್ತು ಆಜ್ಯಸ್ಥಾಲಿಯನ್ನೂ ಅಗ್ನಿಯಲ್ಲಿ ಅಮಂತ್ರಕವಾಗಿ, ಹಾಕಬೇಕು । ಹಾಗೆಯೇ ಅಪ್ರದಕ್ಷಿಣೆಯಾಗಿ, ಅಮಂತ್ರಕವಾಗಿ, ಉತ್ತರಪರಿಷೇಚನವನ್ನು ಮಾಡಬೇಕು ॥

(ಪ್ರಾಚೀನಾವೀತೀ)ದರ್ವೀಂ, ಇತರದರ್ವೀಂ, ಆಜ್ಯಸ್ಥಾಲೀಂ ಚ ಅಗ್ನೌ ತೂಷ್ಣೀಂ ಪ್ರಹರತಿ । ತಥಾ ಚ ತೂಷ್ಣೀಂ ಅಪ್ರದಕ್ಷಿಣಂ ಚಿತಿಂ ಪರಿಷಿಚ್ಯ ॥

36. ಮಡಿಕೆಯ ನೀರಿನೊಂದಿಗೆ ಚಿತೆಯನ್ನು ಸುತ್ತುವುದು

**** ಪ್ರಾಚೀನಾವೀತಿಯಾಗಿ, ಕರ್ತೃವು ತನ್ನ ಬಲಭುಜದಮೇಲೆ, ಔಪಾಸನಾಗ್ನಿಯನ್ನು ತಂದಂತಹ ಆ ಮಡಿಕೆಯಲ್ಲಿ ನೀರನ್ನು ತುಂಬಿಸಿ । ಅದರ ಹಿಂಭಾಗವನ್ನು ನೀರುಬೀಳುವಂತೆ ರಂಧ್ರಮಾಡಿ, ಅಗ್ನಿಯನ್ನು ಅಪ್ರದಕ್ಷಿಣೆಯಾಗಿ 3 ಸಲ ಅಮಂತ್ರಕವಾಗಿ ಸುತ್ತುತ್ತಾ, ನೀರಿನಿಂದ ಆ ಶವಾಗ್ನಿಯನ್ನು ಸುತ್ತುಗಟ್ಟಬೇಕು । ನಂತರ ಹಿಮ್ಮುಖವಾಗಿ ಬೀಳಿಸಿ ಒಡೆಯಬೇಕು ॥

(ಪ್ರಾಚೀನಾವೀತೀ), ತತಃ ಕರ್ತಾ ದಕ್ಷಿಣಭುಜೇ ಅಗ್ನಿಸ್ಥಘಟಂ ಜಲೇನ ಪೂರಯಿತ್ವಾ । ಚಿತಿಂ ಅಪ್ರದಕ್ಷಿಣಂ ರಂಧ್ರಾತ್ ತ್ರಿಃ ಜಲೇನ ಪರಿಷಿಚ್ಯ । ಘಟಂ ವಿನಾಶಯೇತ್ ॥

37. ಯಮಸೂಕ್ತ ಮಂತ್ರಗಳನ್ನು ಹೇಳುವಿಕೆ

**** ನಂತರ ಪ್ರಾಚೀನಾವೀತಿಯಿಂದ, ಚಿತೆಯ ಹಿಂದೆ(ಪಶ್ಚಿಮ), ಅಮಂತ್ರಕವಾಗಿ ಒಂದು ದರ್ಭೆಯನ್ನು ಎಸೆದು, ಕೈತೊಳೆದುಕೊಂಡು । ಅಲ್ಲೇ ಪೂರ್ವಕ್ಕೆ ಮುಖಮಾಡಿ

ಕುಳಿತು । ಎಡಕಾಲನ್ನು ಬಲತೊಡೆಯ ಮೇಲೆ ಹಾಕಿಕೊಂಡು । ಈ ಕೆಳಗೆ ಹೇಳಿದ, 9 ಋಕ್ ಗಳಿಂದ ಕೂಡಿದ ಯಮಸೂಕ್ತಮಂತ್ರಗಳನ್ನು ಸರ್ವ ಉದಾತ್ತಸ್ವರದಿಂದಲೇ (ಏಕಶ್ರುತಿಯಿಂದ) ಹೇಳಬೇಕು ॥

(ಪ್ರಾಚೀನಾವೀತೀ), ಅಥ ಚಿತೇಃ ಪಶ್ಚಾತ್ ತೂಷ್ಣೀಂ ತೃಣಂ ನಿರಸ್ಯ, ಅಪ ಉಪಸ್ಪೃಶ್ಯ । ಪ್ರಾಙ್ಮುಖ ಉಪವಿಶ್ಯ । ಸವ್ಯೋತ್ತರಂ ಉಪಸ್ಥಂ ಕೃತ್ವಾ । ಯಾಮ್ಯೇನ ಸೂಕ್ತೇನ ನವರ್ಚೇನ ಪರಾಚಾನುಶಂಸತಿ ಏಕಶ್ರುತ್ಯಾ ॥

ಓಂ ಪ್ರಕೇತುನಾ ಬೃಹತಾ ಭಾತ್ಯಗ್ನಿರಾವಿರ್ವಿಶ್ವಾನಿ ವೃಷಭೋ ರೋರವೀತಿ ।
ದಿವಶ್ಚಿದಂತಾದುಪ ಮಾಮುದಾನಡಪಾಮುಪಸ್ಥೇ ಮಹಿಷೋ ವವರ್ಧ(ಇ)
ಮಿದಂ ತ ಏಕಂ ಪರ ಊತ ಏಕಂ ತೃತೀಯೇನ ಜ್ಯೋತಿಷಾ ಸಂ ವಿಶಸ್ವ ।
ಸಂವೇಶನಸ್ತನುವೈ ಚಾರುರೇಧಿ ಪ್ರಿಯೋ ದೇವಾನಾಂ ಪರಮೇ ಸಧಸ್ಥೇ(ಇ)
ಂ – ನಾಕೇ ಸುಪರ್ಣಮುಪಯತ್ಪತಂತಗ್ಂ ಹೃದಾ ವೇನಂತೋ ಅಭ್ಯಚಕ್ಷತ
ತ್ವಾ । ಹಿರಣ್ಯಪಕ್ಷಂ ವರುಣಸ್ಯ ದೂತಂ ಯಮಸ್ಯ ಯೋನೌ ಶಕುನಂ ಭು
ರಣ್ಯೋ(ಇ) – ಮತಿದ್ರವ ಸಾರಮೇಯೌ ಶ್ವಾನೌ ಚತುರಕ್ಷೌ ಶಬಲೌ ಸಾಧುನಾ
ಪಥಾ । ಅಥಾ ಪಿತ್ಯಾನ್ಸ್ವಿದತ್ರಾಗ್ಂ ಅಪೀಹಿ ಯಮೇನಯೇ ಸಧಮಾದಂ
ಮದಂತೋ(ಇ)ಂ – ಯೌ ತೇ ಶ್ವಾನೌ ಯಮರಕ್ಷಿತಾರೌ ಚತುರಕ್ಷೌ ಪಥಿರಕ್ಷೀ
ನೃಚಕ್ಷಸಾ । ತಾಭ್ಯಾಗ್ಂ ರಾಜನ್ಪರಿದೇಹ್ಯೇನಗ್ಂ ಸ್ವಸ್ತಿಚಾಸ್ಮಾ ಅನಮೀವಂ ಚ
ಧೇಹೋ(ಇ) – ಮುರುಣಸಾವಸುತೃಪಾವುಲುಂ ಬಲೌ ಯಮಸ್ಯ ದೂತೌ
ಚರತೋವಶಾಗ್ಂ ಅನು । ತಾವಸ್ಮಭ್ಯಂ ದೃಶಯೇಸೂರ್ಯಾಯ ಪುನರ್ದತ್ತಾ
ವಸುಮದ್ಯೇಹ ಭದ್ರೋ(ಇ)ಂ – ಸೋಮ ಏಕೇಭ್ಯಃ ಪವತೇ ಘೃತಮೇಕ

ಉಪಾಸತೇ । ಯೇಭ್ಯೋ ಮಧು ಪ್ರಧಾವತಿ ತಾಗ್ಶ್ಚಿದೇವಾಪಿ ಗಚ್ಛತೋ(ಽ) – ಯೇ ಯುಧ್ಯಂತೇ ಪ್ರಧನೇಷು ಶೂರಾ ಸೋ ಯೇ ತನುತ್ಯಜಃ । ಯೇ ವಾ ಸಹಸ್ರ ದಕ್ಷಿಣಾಸ್ತಾಗ್ಶ್ಚಿದೇವಾಪಿ ಗಚ್ಛತೋ(ಽ)ಂ – ತಪಸಾ ಯೇ ಅನಾ – ಧೃಷ್ಯಾಸ್ತಪಸಾ ಯೇ ಸುವರ್ಗತಾಃ । ತಪ್ತೋ ಯೇ ಚಕ್ರಿರೇ ಮಹತ್ತಾಗ್ಶ್ಚಿ – ದೇವಾಪಿ ಗಚ್ಛತೋ(ಽ)ಮ್ ॥

38. ಸ್ಮಶಾನದಲ್ಲಿರುವ ಎಲ್ಲರಿಗೂ ಮೊದಲಸಲ ಸ್ನಾನ = ಕರ್ಷೂ(ಗುಂಡಿ)ಸ್ನಾನ

**** ಪ್ರಾಚೀನಾವೀತಿಯಾಗಿ, ದಹನದೇಶದ ಹಿಂದೆ, ವಿಸ್ತೀರ್ಣದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಉದ್ದವಾಗಿರುವಂತೆ, ದಕ್ಷಿಣೋತ್ತರ ಅಗಲವಿರುವಂತೆ । ಕ್ರಮವಾಗಿ ಪೂರ್ವ–ಮಧ್ಯ–ಪಶ್ಚಿಮದ 3 ಗುಂಡಿಗಳನ್ನು ತೆಗೆಯಬೇಕು । ಈ ಕರ್ಮವು ಪಿತೃಸಂಬಂಧವಾದ್ದರಿಂದ, ಎಲ್ಲಾ ಗುಂಡಿಗಳನ್ನೂ ದಕ್ಷಿಣಕ್ಕೆ ಮುಗಿಯುವಂತೆ ಅಗೆಯುವ ಕೆಲಸವನ್ನು ಮಾಡಬೇಕು । ಕಲ್ಲು, ಮರಳುಗಳನ್ನು ಅದಕ್ಕೆ ಹಾಕಿ । ಬೆಸಸಂಖ್ಯೆಯ ನೀರಿನಬಿಂದಿಗೆಗಳಿಂದ, ಗುಂಡಿಯ ಅರ್ಧಕ್ಕಿಂತ ಹೆಚ್ಚಿನಭಾಗ ತುಂಬುವಂತೆ ನೀರನ್ನು ಹಾಕಿ । ಗುಂಡಿಗಳ ಹಿಂದೆ, ಪಶ್ಚಿಮಭಾಗದಲ್ಲಿ, ಮೊದಲು ಉತ್ತರಕ್ಕೆ ನಂತರ ದಕ್ಷಿಣಕ್ಕೆ ಮುತ್ತುಗ ಅಥವಾ ಬನ್ನಿ ಮರದ ಎಲೆಸಹಿತ 2 ಕೊಂಬೆಗಳನ್ನು ನೆಟ್ಟು । ನಂತರ 2 ಶಾಖೆಗಳ ತುದಿಭಾಗದಲ್ಲಿ ದರ್ಭೆಯಿಂದ ಮಾಡಿದ ಹಗ್ಗವನ್ನು ತೋರಣದಂತೆ ಕಟ್ಟಬೇಕು। ನಂತರ ನೀರಿರುವ ಆ 3 ಗುಂಡಿಗಳಲ್ಲಿ ಸಣ್ಣವಯಸ್ಸಿನವರಿಂದ ಕ್ರಮವಾಗಿ, ಜ್ಞಾತಿಗಳು ಅವಗಾಹನ(ಮುಳುಗು)ಸ್ನಾನವನ್ನು ಈ ಕೆಳಗಿನ ಮಂತ್ರದಿಂದ ಮಾಡುತ್ತಾರೆ ॥

(ಪ್ರಾಚೀನಾವೀತೀ), ದಹನದೇಶಸ್ಯ ಪಶ್ಚಾತ್ ಉದಗಾಯತಾಸ್ತಿಸ್ರಃ ಕರ್ಷೂಃ ದೀರ್ಘಾವಟಾನ್ ಖಾತ್ವಾ । ತಾಸಾಂ ಪೂರ್ವಾ ಅಗ್ರೇ ಖನ್ಯತೇ, ತತೋ ಮಧ್ಯಮ, ತತಃ ಪಶ್ಚಿಮೇತಿ ಕ್ರಮೇಣ । ಸರ್ವಾಸ್ತಾಃ ದಕ್ಷಿಣಾಪವರ್ಗಾಃ

ಖನ್ಯಂತೇ ಪಿತೃತ್ವಾತ್ । ಅಶ್ಮಾಭಿಃ ಸಿಕತಾಭಿಶ್ಚ ಉಪಪ್ರಕೀರ್ಯ । ಅಯುಗ್ಭಿಃ ಉದಕುಂಭೈರಪಃ ಪರಿಪ್ಲಾವ್ಯ । ಕರ್ಷೂನಾಂ ಪಶ್ಚಿಮೇಭಾಗೇ ದ್ವೇ ಪಲಾಶಶಾಖೇ ಶಮೀಶಾಖೇ ವಾ ದಕ್ಷಿಣೋತ್ತರತೋ ಭೂಮೌ ಸ್ಥಾಪಯಂತಿ, ತಯೋಃ ಉತ್ತರಾ ಪ್ರಥಮಂ ಸ್ಥಾಪ್ಯತೇ । ತಯೋರಗ್ರೇ ದರ್ಭಮಯೇನ ಶುಲ್ಬೇನ ಬಧ್ವಾ, ತೋರಣವತ್ ಕೃತ್ವಾ । ತಾಸು ಕನಿಷ್ಠಪ್ರಥಮಾಃ ಜ್ಞಾತಯಃ ಮಂತ್ರೇಣ ಸಂಗಾಹಂತೇ ॥

ಓಂ ಅಶ್ಮನ್ವತೀ ರೇವತೀಃ । ಸಗ್ಂರಭಧ್ವಂ । ಉತ್ತಿಷ್ಠತ । ಪ್ರತರತಾ ಸಖಾಯಃ ॥ ಅತ್ರಾಜಹಾಮ । ಯೇ ಅಸನ್ನಶೇವಾಃ । ಶಿವಾನ್ ವಯಂ । ಉಭಿವಾಜಾನ್ । ಉತ್ತರೇಮ ॥

39. ಎಲ್ಲರೂ ತೋರಣದ ಒಳಗೆ ಹೋಗುವಿಕೆ

**** ನಂತರ ಪ್ರಾಚೀನಾವೀತಿಯಾಗಿ, ಆ 2 ಶಾಖೆಗಳ ನಡುವೆ ತೋರಣದ ಕೆಳಗೆ ಸಣ್ಣವರಿಂದ ಕ್ರಮವಾಗಿ(ಕಡೆಯಲ್ಲಿ ಕರ್ತೃಗಳು) ಕೆಳಗಿನ ಮಂತ್ರದಿಂದ ನುಸುಳಿ ಹೋಗಬೇಕು । ಎಲ್ಲರಿಗಿಂತ ಕೊನೆಯವನಾಗಿ ಪ್ರಧಾನಕರ್ತೃವು ಹೋಗಬೇಕು ॥

(ಪ್ರಾಚೀನಾವೀತೀ), ತಯೋಶ್ಶಾಖಯೋರ್ಮಧ್ಯೇ ಕನಿಷ್ಠಪ್ರಥಮಾ ಇತ್ಯಾದಿ, ಮಂತ್ರೇಣ ಗಚ್ಛಂತಿ ॥

ಓಂ ಯದ್ವೈ ದೇವಸ್ಯ । ಸವಿತುಃ ಪವಿತ್ರಂ । ಸಹಸ್ರಧಾರಂ । ವಿತತಂ । ಅಂತರಿಕ್ಷೇ ॥ ಯೇನಾಪುನಾತ್ । ಇಂದ್ರಮನಾರ್ತಂ । ಆತ್ಮೈ । ತೇನಾಹಂ ಮಾಂ । ಸರ್ವತನುಂ ಪುನಾಮಿ ॥

**** ಪ್ರಾಚೀನಾವೀತಿಯಾಗಿ, ಪ್ರಧಾನಕರ್ತೃವು ಕೆಳಗಿನ ಮಂತ್ರವನ್ನು ಪೂರ್ಣವಾಗಿ ಹೇಳಿ ನಂತರ ಆ ಕೋಲುಗಳನ್ನು ಕಿತ್ತು ತೆಗೆದು, ತೋರಣದ ಹಗ್ಗವನ್ನು ತುಂಡರಿಸಿ, ದಕ್ಷಿಣ ಅಥವಾ ನೈಋತ್ಯಕ್ಕೆ ಬೇರೆಬೇರೆಯಾಗಿ ಎಸೆಯಬೇಕು, ನಂತರ ಕೈ ತೊಳೆಯಬೇಕು ॥

(ಪ್ರಾಚೀನಾವೀತೀ)ಕರ್ತಾ ಮಂತ್ರಾಂತೇ, ಭೂಮೌ ನಿಖಾತೇ ಶಾಖೇ ಉತ್ಪಾಯ, ರಜ್ಜುಂ ಛಿತ್ವಾ, ದಕ್ಷಿಣಸ್ಯಾಂ ನೈಋತ್ಯಾಂ ವಾ ದಿಶಿ ಪೃಥಕ್ ಪೃಥಕ್ ಪರಿತ್ಯಜೇತ್, ಅಪ ಉಪಸ್ಪೃಶ್ಯ ॥

ಓಂ ಯಾ ರಾಷ್ಟ್ರಾತ್ । ಪನ್ನಾದಪಂಂತಿ । ಶಾಖಾಃ । ಅಭಿಮೃತಾ । ನೃಪತಿ ಮಿಚ್ಛಮಾನಾಃ ॥ ಧಾತುಸ್ತಾಸ್ಸರ್ವಾಃ । ಪವನೇನ ಪೂತಾಃ । ಪ್ರಜಯಾಸ್ಮಾನ್ । ರಯ್ಯಾ ವರ್ಚಸಾ । ಸಗ್ಂ ಸೃಜಾಥ ॥

40. ಸೂರ್ಯ ಉಪಸ್ಥಾನ

**** ನಂತರ ಎಲ್ಲರೂ ಉಪವೀತಿಗಳಾಗಿ, ಕೈ ತೊಳೆದುಕೊಂಡು । ಜ್ಯೋತಿರೂಪವಾದ ಸೂರ್ಯನನ್ನು ನೋಡುತ್ತಾ, ಕೆಳಗಿನ ಮಂತ್ರದಿಂದ ಉಪಸ್ಥಾನ ಮಾಡುತ್ತಾರೆ ॥

ಸರ್ವೇ ಯಜ್ಞೋಪವೀತೀಭೂತ್ವಾ, ಅಪ ಉಪಸ್ಪೃಶ್ಯ । ಜ್ಯೋತಿಸ್ತತಃ ಆದಿತ್ಯಮುಪತಿಷ್ಠಂತೇ ॥

ಓಂ ಉದ್ವಯಂ । ತಮಸಸ್ಪರಿ । ಪಶ್ಯಂತಃ । ಜ್ಯೋತಿರುತ್ತರಂ । ದೇವಂ ದೇವತ್ರಾ । ಸೂರ್ಯಮಗನ್ಮ । ಜ್ಯೋತಿರುತ್ತಮಮ್ ॥

41. ಸ್ಮಶಾನದಿಂದ ಹೊರಡುವಿಕೆ

**** ಪ್ರಾಚೀನಾವೀತರಾಗಿ, ಸಣ್ಣವರಿಂದ ಮೊದಲು ಸ್ತ್ರೀಯರನ್ನೂ, ಬಾಲಕರನ್ನೂ ಮುಂದೆ ಬಿಟ್ಟುಕೊಂಡು । ಸ್ಮಶಾನವನ್ನು ನೋಡದೇ, ಎಲ್ಲರೂ ಕೆಳಗಿನ ಶ್ಲೋಕವನ್ನು ಹೇಳಿ, ಹಿಂದಕ್ಕೆ ಕಲ್ಲನ್ನು ಎಸೆದು । ದಹನದ ಜಾಗವನ್ನು(ಶವ) ನೋಡದೇ, ಕ್ರಮವಾಗಿ ಸಣ್ಣವರಿಂದ ಮೊದಲು ಸ್ತ್ರೀಯರನ್ನೂ, ಬಾಲಕರನ್ನೂ ಮುಂದೆ ಬಿಟ್ಟುಕೊಂಡು ಕರ್ತೃವು ಸ್ಮಶಾನದಿಂದ ಹೊರಬಂದು, ಜಲಾಶಯಕ್ಕೆ ಹೋಗಬೇಕು ॥

(ಪ್ರಾಚೀನಾವೀತೀ), ಸ್ತ್ರೀ ಬಾಲಾನ್ ಪುರತಃ ಕೃತ್ವಾ । ಸ್ಮಶಾನಂ ಅನವೇಕ್ಷಮಾಣಾಃ ಸರ್ವೇ ಸ್ತ್ರೀ ಬಾಲ ಪುರಸ್ಸರಾನ್ ಪ್ರೇತಂ ಅನ್ವೀಕ್ಷಮಾಣಾಃ ಸರ್ವೇ ಜಲಾಶಯಂ ಗಚ್ಛೇಯುಃ ।

ಸ್ಮಶಾನವಾಸಿನೀದೇವೀ ಸರ್ವೋಪದ್ರವನಾಶಿನೀ ।
ಆಹಾರ ಪರಿಣಾಮಾರ್ಥಂ ಪಾಷಾಣಮುಪತಿಷ್ಠತು ॥

42. ಊರ ಹೊರಗಿರುವ ಕೆರೆ, ನದಿ.....ಗಳಲ್ಲಿ ಎಲ್ಲರಿಗೂ ಎರಡನೇ ಸ್ನಾನ

**** ಪ್ರಾಚೀನಾವೀತಿಯಾಗಿ, ಕೂದಲುಗಳನ್ನು ಬಿಚ್ಚಿಕೊಂಡು, ಮಣ್ಣನ್ನು ದೇಹಕ್ಕೆ ತಿಕ್ಕಿಕೊಂಡು, ದೇಹದಲ್ಲಿ ಒಂದುಬಟ್ಟೆಯನ್ನು ಮಾತ್ರ ಧರಿಸಿಕೊಂಡು, ದಕ್ಷಿಣಾಭಿಮುಖವಾಗಿ, ಕೆಳಗಿನ ಮಂತ್ರದಿಂದ ಒಂದುಸಲ ನೀರಿನಲ್ಲಿ ಮುಳುಗುಹಾಕಿ, ನಂತರ ಮೇಲಕ್ಕೆಬಂದು, ಪಕ್ಕಪಕ್ಕ ಕುಳಿತುಕೊಳ್ಳಬೇಕು । ಈ ಮೇಲೆ ಹೇಳಿದ ಎಲ್ಲ ವಿಧಿಗಳನ್ನೂ ದಕ್ಷಿಣಾಭಿಮುಖವಾಗಿಯೇ ಮಾಡಬೇಕು । ಇಲ್ಲಿ ಸ್ನಾನವೆಂದರೆ, ಮುಳುಗುಸ್ನಾನವೇ । ಕೇವಲ ಜಲಪ್ರವೇಶವಲ್ಲ । ಧಾತಾ ಪುನಾತು....., ಎಂಬ ಅನುವಾಕದ ಕೊನೆಯ ಮಂತ್ರದಿಂದ ಸ್ನಾನ ಮಾಡಬೇಕು । ಈ ರೀತಿಯಾಗಿ, ಕೂದಲುಗಳನ್ನು ಬಿಚ್ಚಿಕೊಳ್ಳುವುದರಿಂದ ಕುಳಿತುಕೊಳ್ಳುವವರೆಗೆ, ಎಲ್ಲರೂ 3 ಸಲ ಮಾಡಬೇಕು ॥

(ಪ್ರಾಚೀನಾವೀತೀ), ಕೇಶಾನ್ಪ್ರಕೀರ್ಯ, ಪಾಂಸೂನೋಪ್ಯ ಏಕವಾಸಸಃ, ದಕ್ಷಿಣಾಮುಖಾಃ, ಮಂತೇಣ ಸಕೃದುಪಮಜ್ಜ್ಯ, ಉತ್ತೀರ್ಯ ಉಪವಿಶಂತಿ । ಏತಾನಿ ಕರ್ಮಾಣಿ ದಕ್ಷಿಣಾಮುಖಾ ಏವ । ಅಪ್ಸೋವಗಾಹಂತ ಇತಿ ಸ ಶಿರೋವಮಜ್ಜನಾತ್ಮಕಂ ಸ್ನಾನಮುಚ್ಯತೇ । ನ ಜಲಪ್ರವೇಶಮಾತ್ರಂ । ಧಾತಾಪುನಾತು ಸವಿತಾಪುನಾತು ಇತ್ಯನುವಾಕಶೇಷಃ । ಏವಂ ತ್ರಿರಿತಿ ಕೇಶಾನ್ ಪ್ರಕೀರ್ಯೇತ್ಯಾದಿ ಉಪವೇಶನಾಂತಂ ।

ಓಂ ಧಾತಾ ಪುನಾತು । ಸವಿತಾಪುನಾತು ॥ ಅಗ್ನೇಸ್ತೇಜಸಾ । ಸೂರ್ಯಸ್ಯ । ವರ್ಚಸಾ ॥

43. ಕರ್ತೃ ಮತ್ತು ಜ್ಞಾತಿಗಳಿಗೆ ಕ್ಷೌರ ಹಾಗೂ ಮೂರನೇ ಸ್ನಾನ

ವ್ಯಾಸಃ

**** ದಹನಕ್ಕಿಂತ ಮೊದಲು ಕರ್ತೃವು ವಪನವನ್ನು ಮಾಡಿಸಿದರೆ, ಪಿತೃಘಾತಕ (ಕೊಂದಂತಾಗುತ್ತಾನೆ)ನಾಗುತ್ತಾನೆ । ಹಾಗಾಗಿ ಸರ್ವಪ್ರಯತ್ನದಿಂದಲೂ, ದಹನವಾದ ನಂತರವೇ ಕ್ಷೌರವನ್ನು ಮಾಡಿಸಿಕೊಳ್ಳಬೇಕು ॥

ವಪನಂ ದಹನಾತ್ಪೂರ್ವಂ ಕುರ್ಯಾತ್ ಚೇತ್ ಪಿತೃಘಾತಕಃ ।
ತಸ್ಮಾತ್ ಸರ್ವಪ್ರಯತ್ನೇನ ವಪನಂ ದಹನಾತ್ಪರಮ್ ॥

**** ಮೇರುಪರ್ವತ ಹಾಗೂ ಮಂದರಪರ್ವತಕ್ಕೆ ಸಮನಾದ ವಿವಿಧರೀತಿಯ ಪಾಪಗಳು ನಮ್ಮ ಕೂದಲನ್ನು ಆಶ್ರಯಿಸಿಕೊಂಡು ಇರುತ್ತವೆ. ಆದ್ದರಿಂದ ಕೂದಲುಗಳನ್ನು

ತೆಗೆಯಿಸುತ್ತೇನೆ, ಈ ರೀತಿ ಅರ್ಥವಿರುವ ಕೆಳಗಿನ ಶ್ಲೋಕವನ್ನು ಹೇಳಿ, ಪುತ್ರಾದಿ ಕರ್ತೃಗಳೂ ಮತ್ತೂ ಜ್ಞಾತಿಗಳು ಮಾತ್ರ, ಪ್ರಾಚೀನಾವೀತರಾಗಿ, ಕಂಠದಿಂದ ಮೇಲ್ಭಾಗದ ಕೂದಲುಗಳನ್ನು ತೆಗೆಸಿಕೊಂಡು, ನಂತರ ಕ್ಷೌರಾಂಗವಾಗಿ ಮುಳುಗುಸ್ನಾನವನ್ನು ಚೆನ್ನಾಗಿ ಮಾಡಬೇಕು ॥

ಅಥ ಪುತ್ರಾಸ್ಸರ್ವೇ, ಜ್ಞಾತಯಶ್ಚ ಪ್ರಾಚೀನಾವೀತಿನಾ, ಕಂಠಾದುಪರಿ ವಪನಂ ಕುರ್ಯುಃ । ಉಪ್ತಕೇಶಾಃ, ಸಕೃದುಪಮಜ್ಜ್ಯ ।

ಮೇರುಮಂದರ ತುಲ್ಯಾನಿ ಪಾಪಾನಿ ವಿವಿಧಾನಿ ಚ ।
ಕೇಶಾನಾಶ್ರಿತ್ಯ ತಿಷ್ಠಂತಿ ತಸ್ಮಾತ್ಕೇಶಾನ್ ವಪಾಮ್ಯಹಂ ॥

44. ತರ್ಪಣ

**** ಪ್ರಾಚೀನಾವೀತಿಯಾಗಿ, ಸ್ನಾನದ ಕೊನೆಯಲ್ಲಿ, ಆ ಮೃತನ(ಪ್ರೇತನ), ಹೆಸರನ್ನು ಮತ್ತು ಗೋತ್ರವನ್ನು ಹೇಳುತ್ತಾ । ಹೇಗೆಂದರೆ – **ವಿಷ್ಣುಶರ್ಮಣೇ ಕಾಶ್ಯಪ ಗೋತ್ರಾಯ ಉದಕಂ ದದಾಮಿ,** ಎಂದು । ಹೀಗೆ ಒಂದುಸಲ ಹೆಸರು–ಗೋತ್ರವನ್ನು ಹೇಳಿ, 3 ಸಲ ನೀರಿನಿಂದ ತರ್ಪಣವನ್ನು ಬಿಡಬೇಕು । ಕೆಲವರು 3 ಸಲವೂ ಹೆಸರು–ಗೋತ್ರವನ್ನು ಹೇಳಬೇಕೆನ್ನುತ್ತಾರೆ । ಹೀಗೆ ಪ್ರತಿದಿನ ನೀರಿನ ತರ್ಪಣವನ್ನು ಕರ್ತೃ ಮತ್ತು ಜ್ಞಾತಿಗಳೂ ಸಹಾ ಏಕೋತ್ತರವೃದ್ಧಿಯ ಕ್ರಮದಿಂದ 11 ದಿನಗಳವರೆಗೆ ಕೊಡಬೇಕು । ತರ್ಪಣವನ್ನು ಕೊಟ್ಟ ನಂತರ ಮೇಲಕ್ಕೆದ್ದು ಬಂದು ಕುಳಿತುಕೊಳ್ಳುತ್ತಾರೆ ॥

ಸ್ನಾನಾಂತೇ(ಪ್ರಾಚೀನಾವೀತೀ), ನಾಮಗೋತ್ರಯೋಃ ಗ್ರಹಣಂ । ಯಥಾ, ವಿಷ್ಣುಶರ್ಮಣೇ ಕಾಶ್ಯಪ ಗೋತ್ರಾಯ ಉದಕಂ ದದಾಮಿ ಇತಿ । ಸಕೃದೇವ ನಾಮಗ್ರಹಣಂ ತ್ರಿಃ ನಿನಯನಂ । ನಾಮಗ್ರಹಣಂ ಚ ತ್ರಿಃ, ಇತಿ ಕೇಚಿತ್ ಉಪದೇಶಃ । ಏವಂ ಅಹರಹರಂಜಲಿನಾ ಏಕೋತ್ತರವೃದ್ಧಿಃ ಏಕಾದಶಾಹಾತ್ । ಉತ್ತೀರ್ಯ ನಿಷ್ಕ್ರಮ್ಯೋಪವಿಶಂತಿ ॥

45. ಶ್ರೋತ್ರಿಯರಿಗೆ ದಕ್ಷಿಣೆ ಕೊಡುವ ವಿಷಯ

**** ಸ್ನಾನವಾದ ನಂತರ, ಎಲ್ಲರೂ ದಕ್ಷಿಣಾಭಿಮುಖವಾಗಿ, ಆ ಕೆರೆ/ನದೀ/ಬಾವಿಗಳ ದಂಡೆಯ ಒಂದು ಜಾಗದಲ್ಲಿ ಕುಳಿತುಕೊಂಡು, ಮೃತನ ಗುಣಗಾನವನ್ನು ಮಾಡ ಬೇಕು। ಆಮೇಲೆ ಕರ್ತೃವು, ಉಪವೀತಿಯಿಂದ, ವಿದ್ವಜ್ಜನರಿಗೆ (ಶ್ರೋತ್ರಿಯಬ್ರಾಹ್ಮಣರಿಗೆ) ಪ್ರದಕ್ಷಿಣೆ ಮಾಡಿ ನಮಸ್ಕರಿಸಿ । ಬ್ರಹ್ಮದಂಡರೂಪವಾದ ಅನುಜ್ಞೆಯನ್ನು ಕೇಳಬೇಕು । ಪ್ರಾಚೀನಾವೀತಿಯಿಂದ ಸಂಕಲ್ಪವನ್ನು ಈ ಕೆಳಗಿನಂತೆ ಹೇಳಿ । ಉಪವೀತಿಯಿಂದ ಭೂರಿ ದಕ್ಷಿಣೆಯನ್ನು ಕೊಡಬೇಕು ॥

ಸ್ನಾನಾನಂತರಂ, (ಉಪವೀತೀ), ಅಥ ಕರ್ತಾ ವಿದ್ವಜ್ಜನಂ ಪ್ರದಕ್ಷಿಣೀ ಕೃತ್ಯ, ನಮಸ್ಕೃತ್ವಾ । (ಬ್ರಹ್ಮದಂಡ) ಅನುಜ್ಞಾಂ ಕುರ್ಯಾತ್ । ಅಶೇಷೇ ಹೇ ಪರಿಷತ್.....ಸ್ವೀಕೃತ್ಯ, (ಪ್ರಾಚೀನಾವೀತೀ)....ಗೋತ್ರಸ್ಯ, ...ಶರ್ಮಣಃ ಮಮಪಿತುಃ(ಮಾತುಃ) ಮರಣಕಾಲೇ ದಹನಕಾಲೇ ಚ ಸಂಭಾವಿತಾನಾಂ, ಮಯಾ ಕೃತಸ್ಯ ದಹನಕರ್ಮಣಃ ಮಂತ್ರ, ತಂತ್ರ, ದ್ರವ್ಯ, ಭಕ್ತಿ, ಶ್ರದ್ಧಾ, ರಾಹಿತ್ಯೇನ ಸಂಭಾವಿತಾನಾಂ ಚ ಸಮಸ್ತದೋಷಾಣಾಂ ಅಪನೋದನದ್ವಾರಾ, (ಉಪವೀತೀ)ಮಮ ಪಿತುಃ(ಮಾತುಃ) ಅಕ್ಷಯ್ಯ ಪುಣ್ಯಲೋಕಾವಾಪ್ತಿರಸ್ತ್ವಿತಿ ಅನುಗೃಹಾಣ, ಇತಿ ಅನುಗ್ರಹಂ ಪ್ರಾಪ್ಯ , ಭೂರಿದಕ್ಷಿಣಾಂ ದದ್ಯಾತ್ ॥

**** ದಕ್ಷಿಣೆಯನ್ನು ತೆಗೆದುಕೊಂಡಂತಹ ಬ್ರಾಹ್ಮಣರು, ಸಮಸ್ತದೋಷಗಳೂ ಪರಿಹಾರವಾಗಿ, ಉತ್ತಮ ಲೋಕವು ಸಿಗಲಿ ಎಂದು, ಹೇಳಬೇಕು ॥

ಸ್ವೀಕೃತ್ಯ, ತಥಾಸ್ತು ಇತಿ ಪ್ರತಿಬ್ರೂಯುಃ ॥

46. ಮನೆಗೆ ಹೋಗುವಿಕೆ

**** ನಂತರ ಎಲ್ಲರೂ ಒದ್ದೇಬಟ್ಟೆಯಲ್ಲಿ ಮತ್ತೆ ಗ್ರಾಮಕ್ಕೆ ಬರಬೇಕು । ಮನೆಯಮುಂದೆ ಸಗಣಿಮಿಶ್ರಿತ ನೀರನ್ನು ಹಾಕುವುದು ಮತ್ತು ಕೈಕಾಲು ತೊಳೆದು, ಮನೆಯನ್ನು ಪ್ರವೇಶಿಸಿ, ಬೇವಿನಎಲೆ ತಿನ್ನುವುದು, ತುಪ್ಪವನ್ನು ಕುಡಿಯುವುದು ಹಾಗೂ ಅಗ್ನಿಯಲ್ಲಿ ಕಾಯಿಸಿಕೊಳ್ಳುವುದು ಹಾಗೂ ಸತ್ತ ಜಾಗವನ್ನು ಸಗಣಿಯಿಂದ ಬಳಿಯುವುದು ಹಾಗೂ ಹಸುವಿಗೆ ವಸ್ತ್ರವನ್ನು ಹೊದಿಸಿ, ಆಹಾರವನ್ನು ಕೊಡುವುದು, ಇವುಗಳನ್ನು ಶುದ್ಧಿಗಾಗಿ ಮಾಡಬೇಕು । ತುಪ್ಪದ ಅಭಾವದಲ್ಲಿ, ಗಾಯತ್ರೀಮಂತ್ರದಿಂದ 10 ಸಲ ಅಭಿಮಂತ್ರಿಸಿದ ಜಲವನ್ನು ಕುಡಿಯಬೇಕು । 3 ಪ್ರಾಣಾಯಾಮವನ್ನು ಮಾಡಬೇಕು, ಇದರಿಂದ ಎಲ್ಲರೂ ಶುದ್ಧರಾಗುತ್ತಾರೆ । ಆಮೇಲೆ ಈ ಮೃತನ ಪ್ರಾಣಹೋದ ಸ್ಥಾನದಲ್ಲಿ, ನೀರಿನಿಂದ ಕೂಡಿದ ಅಕ್ಕಿ ಮತ್ತು ಎಳ್ಳನ್ನು ಹಾಕಬೇಕು ॥

ಸೋದಕವಾಸಸಃ ಸರ್ವೇ ಗ್ರಾಮಂ ಗಚ್ಛಂತಿ । ಯಥಾ ಗೃಹಪ್ರದೇಶೇ ಗೋಮಯೋದಕ ಸೇಚನಂ, ನಿಂಬಪತ್ರ ಭಕ್ಷಣಂ, ಘೃತಪ್ರಾಶನಂ, ಅಗ್ನಿಸ್ಪರ್ಶನಂ, ಮೃತಪ್ರದೇಶಸ್ಯ ಗೋಮಯ ಲೇಪನಂ, ಗವಾಂಚೋಪರಿವಾಸನಂ, ಏವಂ ಆಚಾರಸಿದ್ಧಂ। ತತ್ಕುರ್ವಂತಿ। ಆಜ್ಯಾಭಾವೇ, ಗಾಯತ್ರ್ಯಾ ದಶಕೃತ್ವೋಭಿ ಮಂತ್ರ್ಯಾಪಃ ಪ್ರಾಸ್ಯ । ಪ್ರಾಣಾಯಾಮತ್ರಯಂ ಕೃತ್ವಾ । ಶುದ್ಧಾಭವಂತಿ । ಪ್ರಾಣೋತ್ಕ್ರಮಣದೇಶೇ ಉದಕಮಿಶ್ರಾನ್ ತಿಲತಂಡುಲಾನ್ ಸಂಪ್ರಕೀರ್ಯ ॥

47. ನಂತರದ ನಿಯಮಗಳು

**** ಉಪವಾಸ ಮುಂತಾದವುಗಳನ್ನು ವ್ಯಕ್ತಿಯು ಸತ್ತ ಸಮಯದಿಂದ ಮರುದಿನದ ಆ ಸತ್ತ ಸಮಯದವರೆಗೆ(24 ಗಂಟೆ) ಮಾಡಬೇಕು । ಊಟ ಮಾಡದಿರುವದು(ರಾತ್ರಿ), ಅನಧ್ಯಯನ(ಅಧ್ಯಯನ ಮಾಡದಿರುವಿಕೆ), ನೇರವಾಗಿ ನೆಲದಲ್ಲಿ (ಆಸನರಹಿತವಾಗಿ) ಮಲಗುವುದು, ಮುಳುಗುಸ್ನಾನ ಮಾಡುವುದು – ಇವುಗಳನ್ನು ಯಥಾಕಾಲದವರೆಗೆ ಮಾಡುವುದು ॥

ಅನಶನಾದೀನಿ ಆಕಾಲಂ ಅಪರಸ್ಮಿನ್ ಅಹನಿ ಆಮರಣಕಾಲಮ್ ।
ಅನಶನಾನಧ್ಯಯನ ಅಧಶ್ಶಯ್ಯಾ ಉದಕೋಪಸ್ಪರ್ಶನಾನಿ ಆಕಾಲಮ್ ॥

48. ಇಲ್ಲಿಯವರೆಗಿನ ವಿಧಿಗಳ ಆಚರಣೆಗೆ ಬೇಕಾದ ಪದಾರ್ಥಗಳ ಪಟ್ಟಿ

**** ಕರ್ತೃವಿಗೆ ಉಡಲು ಅಂಚಿಲ್ಲದ ಒಂಟಿವಸ್ತ್ರ 1 – ದರ್ಭೆ 5 ಕಟ್ಟು – ಭಸ್ಮ 5 ಪ್ಯಾಕೆಟ್ – ರುದ್ರಾಕ್ಷಿ 1 ಸರ – ತುಳಸಿ 3 ಮಾರು – ಕಲಶ 2 – 100 ರೂ ನೋಟು 10 – 50 ರೂ ನೋಟು 20 – 10 ರೂ ನೋಟು 50 – ದಾನವಸ್ತುಗಳು – ಸಣ್ಣ ಕುಂಡ – ಮರಳು 1 ಬಾಂಡ್ಲಿ – ಸಣ್ಣ ಸೌದೆ 2 ಮಣ – ಚಿತೆಗೆ ಬೇಕಾಗುವಷ್ಟು ಸೌದೆ(ಮುತ್ತುಗ, ಅರಳಿ, ಬನ್ನಿ, ಅತ್ತಿ....) – ಪಂಚಪಾತ್ರೆ 2 – ಉದ್ಧರಣೆ 2 – ದೊನ್ನೆ 50 – ಮುತ್ತುಗ ಮರದ ಸ್ರುಕ್ ಸ್ರುವ 2 ಅಥವಾ ಮುತ್ತುಗದ ಎಲೆ 4 – ತುಪ್ಪ 3 ಕೆ.ಜಿ – ನೀರು 1 ಲೀಟರ್(ಆಚಮನ, ಪರಿಷೇಚನಾದಿಗಳಿಗೆ) – ಅಕ್ಕಿ 2 ಕೆ.ಜಿ – ಭತ್ತ 2 ಕೆ.ಜಿ(ದಾರಿಯಲ್ಲಿ ಕೊಡುವ ಬಲಿಗಾಗಿ) – ದೊಡ್ಡ ಮಡಿಕೆ 2 – ಕ್ಷೌರಿಕ 2 ಸಲ – ಸೀಗೆಪುಡಿ, ಸೋಪು – ಬಿಳಿದಾರದ ಉಂಡೆ 1 – ಪುಂಸೆ ಮರದ ಹೂವಿನ ಅಥವಾ ಬೇರೇ ಹೂವಿನ ಹಾರ 1 – ಅತ್ತಿಮರದ ಚೆಟ್ಟ(ಬೊಂಬು, ಹಲಗೆ) – ದರ್ಭೆಯ ಹಗ್ಗ(ಮೌಂಜಿ), ಚೆಟ್ಟಕ್ಕೆ ಕಟ್ಟಲು ಬೇಕಾಗುವಷ್ಟು – ಕೃಷ್ಣಾಜಿನದ ಆಸನ – ಮೃತನ ದೇಹಕ್ಕೆ ಸಂಪೂರ್ಣವಾಗಿ ಹೊದಿಸಲು ಆಗುವಂತಹ ಬಿಳಿಬಟ್ಟೆ – ಎಳ್ಳು 1 ಕೆ.ಜಿ – ಅತ್ತಿಮರದ ಸೌಟು 1 – ಹಸು 1 – ಗಂಡು ಆಡು 1 – ಹಗ್ಗ 3 – ಮುತ್ತುಗದ ಹಸಿಯಾದ, ಎಲೆ ಸಹಿತವಾದ ಕೋಲು 3 – ಚಿನ್ನದ ತಂತಿ 1 – ಚಿನ್ನದ ಹೂ 8 – ಕತ್ತಿ + ಗುದ್ದಲಿ 1 – ಜಲ್ಲಿಕಲ್ಲು – ಮರಳು – ಅಡಿಕೆಪಟ್ಟೆಯ ತಟ್ಟೆ ಅಥವಾ ಬಾಳೆ ಎಲೆ 15 – ಸಣ್ಣಬಿಳಿಯ ಟವಲ್ 4 ॥

**** ದಹನದ ನಂತರ ಮನೆಗೆ ಬಂದಾಗ ಈ ವಸ್ತುಗಳು ಬೇಕಾಗುತ್ತವೆ –

ಸಗಣಿ 1 ಮುಷ್ಟಿ – ಗೋಮೂತ್ರ ಸ್ವಲ್ಪ – ಬೇವಿನ ಎಲೆ 4 – ತುಪ್ಪ 4 ಚಮಚ – ಅಕ್ಕಿ ಕಾಲು ಕೆ.ಜಿ – ಎಳ್ಳು ಕಾಲು ಕೆ.ಜಿ ॥

4. ಪ್ರಯೋಗದಲ್ಲಿ ಬರುವ ವಿಶೇಷ ವಿಮರ್ಶಾ ವಿಷಯಗಳು ಮತ್ತು ವಿವಿಧ ರೀತಿಯ ಮರಣಕ್ಕೆ ಪ್ರಾಯಶ್ಚಿತ್ತವು

1. ಕೃಚ್ಛ್ರದ ವಿಷಯ –

ಸರ್ವಜನ್ಮಾರ್ಜಿತಾನೀಹ ಭ್ರೂಣಹತ್ಯಾದಿಕಾನ್ಯಪಿ ।
ಸರ್ವಪಾಪಾನಿ ನಶ್ಯಂತಿ ಕೃಚ್ಛ್ರೈರ್ದ್ವಾದಶ ವಾರ್ಷಿಕೈಃ ॥
ಜನ್ಮಪ್ರಭೃತಿ ಯತ್ ಕಿಂಚಿತ್ ಪಾತಕಂ ಚ ಉಪಪಾತಕಮ್ ।
ಅರ್ವಾತ್ತು ಭ್ರೂಣಹತ್ಯಾಯಾಷ್ಷಡಬ್ದಾನಶ್ಯತಿ ಧ್ರುವಮ್ ॥

12 ವರ್ಷಗಳ ಪ್ರಾಯಶ್ಚಿತ್ತದಿಂದ, ಎಲ್ಲಾ ಜನ್ಮಗಳಲ್ಲೂ ಮಾಡಿರಬಹುದಾದ ಭ್ರೂಣಹತ್ಯಾದಿ ಪಾಪಗಳು ಹೋಗುತ್ತವೆ ॥ 6 ವರ್ಷಗಳ ಪ್ರಾಯಶ್ಚಿತ್ತದಿಂದ ಈ ಜನ್ಮದಲ್ಲಿ ಹುಟ್ಟಿದ ದಿನದಿಂದ ಇಲ್ಲಿಯವರೆಗೆ ಮಾಡಿರಬಹುದಾದ ಭ್ರೂಣಹತ್ಯಾದಿ ಎಲ್ಲಾ ಪಾತಕ – ಉಪಪಾತಕಗಳೂ ನಾಶವಾಗುತ್ತವೆ ॥

ಅದ್ಯಾಪ್ಯಸಕೃದಭ್ಯಸ್ಥಂ ಬುದ್ಧಿಪೂರ್ವಂ ಸಮಂ ಮಹತ್ । ತತ್ ಶುದ್ಧ್ಯತ್ಯಬ್ದ ಕೃಚ್ಛ್ರೇಣ ಹತಂ ಪಾತಕಾದೃತೇ । ತ್ರಿಂಶತ್ ಕೃಚ್ಛ್ರಾಃ ಅಬ್ದಕೃಚ್ಛ್ರಃ ಕೃಚ್ಛ್ರಃ ಪ್ರಾಜಾಪತ್ಯಃ । ಸ ಚ ಪ್ರತಿನಿಧಿನಾ ಕಾರ್ಯಃ, ದ್ವಾದಶಾಬ್ದಸಂಖ್ಯಾಕ ಪ್ರಾಜಾಪತ್ಯಕೃಚ್ಛ್ರಾಣಿ ಷಡಬ್ದ ಸಂಖ್ಯಾಕ ಪ್ರಾಜಾಪತ್ಯ ಕೃಚ್ಛ್ರಾಣಿ, ಅಬ್ದಸಂಖ್ಯಾಕ ಪ್ರಾಜಾಪತ್ಯ ಕೃಚ್ಛ್ರಾಣಿ ವಾ ಸ್ವರೂಪತಃ ಅನುಷ್ಠಾತುಮಶಕ್ಯತ್ವಾತ್ ತತ್ ಪ್ರತ್ಯಾಮ್ನಾಯತ್ವೇನ

ಕೃಚ್ಛ್ರೋಯುತಂ ತು ಗಾಯತ್ರ್ಯಾ ಉಪವಾಸಸ್ತಥೈವ ಚ ।
ಸಮುದ್ರಗಾ ನದೀಸ್ನಾನಂ ಸಮಮೇತತ್ ಚತುಷ್ಟಯಮ್ ॥

ಒಂದುಸಲ ಅಥವಾ ಅನೇಕಸಲ ಬುದ್ಧಿಪೂರ್ವಕವಾಗಿ ಮಾಡಿದಂತಹ ಪಾಪಗಳಿಗೆ ಈ ಕೃಚ್ಛ್ರಾದಿಗಳಿಂದ ಶುದ್ಧಿಯು । ಒಂದು ವರ್ಷದ ಕೃಚ್ಛ್ರದಿಂದ ಮಹಾಪಾತಕಗಳಿಗಿಂತ ಕಡಿಮೆಯಾದ ದೋಷಗಳು ಹೋಗುತ್ತವೆ । 30 ಕೃಚ್ಛ್ರಕ್ಕೆ 1 ಅಬ್ದಕೃಚ್ಛ್ರವು, ಒಂದು ಕೃಚ್ಛ್ರವೆಂದರೆ, ಒಂದು ಪ್ರಾಜಾಪತ್ಯ ಕೃಚ್ಛ್ರವು । ಇದಕ್ಕೆ ಪ್ರತ್ಯಾಮ್ನಾಯವಾಗಿ(ಪ್ರತಿನಿಧಿಯಾಗಿ) ಬೇರೆಯದನ್ನು ಮಾಡಬಹುದು । 12 ವರ್ಷಗಳ, 6 ವರ್ಷಗಳ ಅಥವಾ 1 ವರ್ಷದ ಪ್ರಾಜಾಪತ್ಯಕೃಚ್ಛ್ರಗಳನ್ನು ಮಾಡಿಕೊಳ್ಳಲು ಅಸಾಧ್ಯವಾದಾಗ, ಅದಕ್ಕೆ ಪ್ರತಿನಿಧಿಯಾಗಿ ಯಥಾಶಕ್ತಿ ದಕ್ಷಿಣೆ ಅಥವಾ 10ಸಾವಿರ ಗಾಯತ್ರೀಜಪವನ್ನೂ ಅಥವಾ ಉಪವಾಸವನ್ನೂ ಅಥವಾ ಸಾಗರವನ್ನು ಸೇರುವ ಮುಖ್ಯನದಿಗಳ ಸ್ನಾನವನ್ನೂ, ಮಾಡಬಹುದು । ಈ ನಾಲ್ಕು ವಿಧಾನಗಳೂ ಸಹಾ ಸಮಾನವಾದವುಗಳು ॥

2. ಉತ್ಕ್ರಾಂತಿ ಗೋದಾನವನ್ನು ಹೇಗೆ ಕೊಡುವುದು !? –

ವ್ಯಕ್ತಿಗೆ ತನ್ನ ಮರಣದ ಸಂಶಯವು ಬಂದಾಗ, ಪ್ರಾಣವು ತನ್ನ ದೇಹದಿಂದ ಸುಲಭವಾಗಿ, ಸುಖವಾಗಿ ಹೊರಹೋಗುವ ಪ್ರಾರ್ಥನೆಯೊಂದಿಗೆ ತನ್ನಿಂದಲೇ ಕೊಡಲ್ಪಡುವ ಹಸುವಿನ ದಾನಕ್ಕೆ **"ಉತ್ಕ್ರಾಂತಿ ಗೋದಾನ"** ಎಂದು ಕರೆಯುತ್ತಾರೆ.

ಈಗ ಯೋಚಿಸೋಣ, **ಸಂದರ್ಭದ ಉದ್ದೇಶವನ್ನೇ ಪ್ರಧಾನವಾಗಿ ಬಿಂಬಿಸುತ್ತಿರುವ ಮತ್ತೂ ಆ ಸಂದರ್ಭದ ಉದ್ದೇಶದ ಸಾಫಲ್ಯತೆಗಾಗಿಯೇ ಕೊಡಲ್ಪಡುವ** ಈ ದಾನವನ್ನು ಆ ಸಂದರ್ಭವೇ ಕಳೆದುಹೋದಮೇಲೆ ಕೊಡುವುದು ಉಚಿತವೇ ?, ಅಂದರೆ ವ್ಯಕ್ತಿಗೆ ತನ್ನ ಮರಣದ ಸಂಶಯವು ಬಂದಾಗ, ಪ್ರಾಣವು ತನ್ನ ದೇಹದಿಂದ ಸುಲಭವಾಗಿ, ಸುಖವಾಗಿ ಹೊರಹೋಗುವ ಪ್ರಾರ್ಥನೆಯೊಂದಿಗೆ ತನ್ನಿಂದಲೇ ಕೊಡಲ್ಪಡುವ ದಾನವನ್ನು, ಆ ವ್ಯಕ್ತಿಯೇ ಸತ್ತುಹೋದ ನಂತರ ಹೇಗೆ ಕೊಡುವುದು?, ಕರ್ತೃಗಳು ಮೃತನ ಪರವಾಗಿ ಕೊಡುವುದಾದರೂ ಸಹ, ಯಾವರೀತಿಯ ಸಂಕಲ್ಪವನ್ನು ಹೇಳುವುದು? ಸತ್ತು ಹೋಗಿರುವ ವ್ಯಕ್ತಿಯ ದೇಹದಿಂದ **"ಸುಖವಾಗಿ, ಸುಲಭವಾಗಿ ಪ್ರಾಣವು ಹೋಗಲಿ"** ಎಂಬ ಅರ್ಥದ ಸಂಕಲ್ಪವು ಮತ್ತು ಶ್ಲೋಕವು ಇಲ್ಲಿ ಹೇಗೆ ಹೊಂದುತ್ತದೆ?. ಹಾಗಾಗಿ ಸತ್ತನಂತರ ಕರ್ತೃವು ಈ ದಾನವನ್ನು ಕೊಡುವಾಗ **ಅತ್ಯುತ್ಕ್ರಾಂತೌ**...., ಶ್ಲೋಕವನ್ನು ಹೇಳದೇ ಮತ್ತು ಸಂಕಲ್ಪದಲ್ಲಿ ಸ್ವಲ್ಪ ವ್ಯತ್ಯಾಸ ಮಾಡಿ ಕೊಡುವುದೇ ಸೂಕ್ತವೆಂದು ತೋರುತ್ತದೆ. ಆದರೆ ಕೆಲವರು ಹಾಗಾಗಿಯೇ ನಾವು

ಮೊದಲು ಮೃತಶರೀರಕ್ಕೆ **"ಪ್ರಾಣಪ್ರತಿಷ್ಠೆಯನ್ನು"** ಮಾಡುತ್ತೇವೆ ಎಂದು ತಮ್ಮ ಅಭಿಪ್ರಾಯವನ್ನು ಹೇಳುತ್ತಾರೆ. ಹಾಗಾಗಿ ಪ್ರಾಣಪ್ರತಿಷ್ಠೆಯ ವಿಚಾರವನ್ನೂ ಇಲ್ಲಿ ವಿಮರ್ಶಿಸಬೇಕಾಗುತ್ತದೆ.

3. ಮೃತ ಶರೀರಕ್ಕೆ ಪ್ರಾಣಪ್ರತಿಷ್ಠೆ ಬೇಕೇ ? –

ಸಮಾಜದಲ್ಲಿ ಇಂದು ನಾವು ನೋಡುತ್ತಿರುವಂತೆ, ಕೆಲವರು(ಹಲವರಲ್ಲ!) ಈ ಅಪರಕರ್ಮದ ಪ್ರಯೋಗವನ್ನು ಪ್ರಾರಂಭಿಸುವಾಗ, ಆರಂಭದಲ್ಲಿ ಆ ನಿರ್ಜೀವಶರೀರಕ್ಕೆ **"ಪ್ರಾಣೋರಕ್ಷತಿ....., ಶಿರೋ ಮೇ ಶ್ರೀಃ.....,"** ಮುಂತಾದ ಮಂತ್ರಗಳಿಂದ ಪ್ರಾಣಪ್ರತಿಷ್ಠೆಯನ್ನು ಮಾಡುತ್ತೇವೆಂದು ಸಂಕಲ್ಪಿಸಿ, ಅದನ್ನು ಮಾಡುತ್ತಾರೆ. ಆದರೆ ಆ ಪ್ರಯೋಗವನ್ನು ಮುಂದುವರೆದು ನೋಡಿದಾಗ ಎಲ್ಲೂ ಆ ಪ್ರಾಣದ ಉದ್ವಾಸನೆ(ವಿಸರ್ಜನೆ) ಕಂಡುಬರುವುದೇ ಇಲ್ಲ!. ಪ್ರಾಣವನ್ನು ಕೊಡುತ್ತಿದ್ದೇವೆ ಎಂಬ ಭಾವನೆಯಿಂದ ಸಂಕಲ್ಪದೊಂದಿಗೆ ಮಂತ್ರ ಸಹಿತವಾಗಿ ಪ್ರಾಣಪ್ರತಿಷ್ಠೆಯನ್ನು ಮೃತಶರೀರಕ್ಕೆ ಮಾಡಿದಮೇಲೆ ಅದರಲ್ಲಿ ಪ್ರಾಣವಿದೆ ಎಂಬುದು ಭಾವ. ಹಾಗಿದ್ದಮೇಲೆ ಪುನಃ ಆ ಪ್ರಾಣವನ್ನು **ವಿಸರ್ಜನೆ** ಎಂಬ ವಿಧಾನದಿಂದ ತೆಗೆಯದೇ ಆ ದೇಹವನ್ನು ದಹನ ಮಾಡಿದರೆ ಸಜೀವದಹನವನ್ನು ಮಾಡಿದಂತಾಗುವುದಿಲ್ಲವೇ ?, ಆದರೆ ಇದಕ್ಕೆ ಕೆಲವರು **'ಕರ್ಣಮಂತ್ರ ಜಪವೇ ಪ್ರಾಣದ ಉತ್ಸರ್ಜನೆ'** ಎಂದು ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾರೆ. ಆದರೆ ಕರ್ಣಮಂತ್ರ ಜಪವೆಂಬುದು ವ್ಯಕ್ತಿಯ ಮರಣಸಂಶಯದಲ್ಲಿ, ಅಂದರೆ ದೇಹದಲ್ಲಿ ಪ್ರಾಣವು ಇರುವಾಗಲೇ ಅವನೇ ಅಥವಾ ಪರವಾಗಿ ಯಾರಾದರೂ ಮಾಡಬೇಕಾದ ಒಂದು ವಿಧಿಯಾಗಿದೆಯೇ ಹೊರತು, ಪ್ರಾಣವನ್ನು ತೆಗೆಯುವ(ವಿಸರ್ಜನೆಯ) ವಿಧಾನವಲ್ಲ ಎಂಬುದು ಸುಸ್ಪಷ್ಟವೇ. ಹಾಗಾಗಿ ಆವಾಹನೆ ಇದ್ದಮೇಲೆ ವಿಸರ್ಜನೆ ಬೇಡವೇ?,

ಅಲ್ಲದೇ, ಪ್ರಾಣಪ್ರತಿಷ್ಠೆಯ ಈ ಕ್ರಮಕ್ಕೆ ಋಷಿಗಳ ಮಾರ್ಗದರ್ಶನವು(ಆಧಾರವಾಕ್ಯ) ಇರಬೇಕಲ್ಲವೇ?, ಏಕೆಂದರೆ ಕರ್ಮದ ಪ್ರತಿಯೊಂದು ವಿಧಿಗಳನ್ನೂ ಹೀಗೆಯೇ ಮಾಡಬೇಕೆಂದು ತಿಳಿಸುವ ಋಷಿಗಳು ಈ ಶರೀರಕ್ಕೆ ಪ್ರಾಣಪ್ರತಿಷ್ಠಾಪನೆಯ ಅಗತ್ಯತೆಯನ್ನೂ ಮತ್ತು ಕ್ರಮವನ್ನೂ ಹೇಳುತ್ತಿದ್ದರು ಅಲ್ಲವೇ?, ಅಥವ ಅವರು ಮರೆತರೆ?!, ಸಮ(ವರ್ತಮಾನ)ಕಾಲದಲ್ಲೇ ಬಹುಜನರು ಆಚರಿಸದ ಆದರೆ ಕೆಲವರು

ಮಾತ್ರ ಆಚರಿಸುವ ಒಂದು ವಿಧಾನವನ್ನೇ ಸಮರ್ಥಿಸಿಕೊಳ್ಳಬೇಕಾದರೂ ಸಹ, ಅದನ್ನು ಆಚರಿಸುತ್ತಿರುವವರಲ್ಲಿ ಇದಕ್ಕೆ ಸಂಬಂಧಿಸಿದ ಋಷಿಪ್ರಣೀತವಾದ ಶಾಸ್ತ್ರವಾಕ್ಯಗಳು ಇರಲೇಬೇಕಲ್ಲವೇ?, ಪ್ರಸ್ತುತ ಅಲಭ್ಯ(ಕಳೆದುಹೋಗಿರುವ)ವಾಗಿರುವ ಗ್ರಂಥಗಳಲ್ಲಿ ಇದಕ್ಕೆ ಆಧಾರ ಇರಬಹುದಲ್ಲವೇ ? ಎಂಬಂತಹ ಊಹೆ ಹಾಗೂ ಕಲ್ಪನೆಗಳಿಂದ ಕೂಡಿದ ಸಮರ್ಥನೆಗಿಂತ, ಪ್ರಸ್ತುತ(ತತ್ಕಾಲದಲ್ಲಿ) ಲಭ್ಯವಿರುವ ಆಧಾರಗ್ರಂಥಗಳಲ್ಲಿನ ಋಷಿವಾಕ್ಯಗಳ ಮಾರ್ಗದರ್ಶನದಂತೆ ನಡೆಯುವುದೇ ಉತ್ತಮ ಪಕ್ಷವಲ್ಲವೇ??

ಶಾಸ್ತ್ರವಿರೋಧೇ ಶಿಷ್ಟಾಚಾರಂ ತ್ಯಾಜ್ಯಮೇವಾಮನಂತಿ ನ್ಯಾಯವಿದಃ ।
ಶ್ರುತಿ ಸ್ಮೃತ್ಯಲಾಭೇ ಹಿ ಶಿಷ್ಟಾಚಾರಃ ಪ್ರಮಾಣಂ ।

ಶಾಸ್ತ್ರಕ್ಕೆ ವಿರುದ್ಧವಾದರೆ ಅಂತಹ ಶಿಷ್ಟಾಚಾರವನ್ನು ಬಿಡಬೇಕೆಂದು ಹೇಳುತ್ತಾರೆ । ಯಾವ ವಿಷಯದಲ್ಲಿ ಶ್ರುತಿಸ್ಮೃತಿಗಳು ಸಿಕ್ಕುವುದಿಲ್ಲವೋ ಅಲ್ಲಿ ಮಾತ್ರ ಶಿಷ್ಟಾಚಾರವೇ ಪ್ರಮಾಣವಾಗುತ್ತದೆಯಷ್ಟೇ ।

ಆದರೆ ಭಾರದ್ವಾಜ – ಆಪಸ್ತಂಬ – ಬೋಧಾಯನ ಸೂತ್ರಗಳಲ್ಲಿ ಹಾಗೂ ಗೋಪಾಲಮುನಿಗಳ – ಕಪರ್ದಿಸ್ವಾಮಿಗಳ ಭಾಷ್ಯಗಳಲ್ಲಿ ಹಾಗೆಯೇ ಕಾರಿಕಾವಳಿಗಳಲ್ಲಿ ಹಾಗೂ ಮಹಾತ್ಮರುಗಳು, ಮಹಾವಿದ್ವಾಂಸರುಗಳು ಅನೇಕ ಋಷಿಗ್ರಂಥ(ವಾಕ್ಯ)ಗಳನ್ನು ಸಂಗ್ರಹಿಸಿ ರಚಿಸಿರುವ ವೈದ್ಯನಾಥೀಯಸ್ಮೃತಿ – ಯಲ್ಲಾಜೀಯ ಅನುಧರ್ಮಶಾಸ್ತ್ರ – ವೆಂಕಟರಾಮಾವಧಾನೀಯ ಪ್ರಯೋಗರತ್ನಾಕರದಂತಹ ಗ್ರಂಥಗಳಲ್ಲಿಯೂ ಸಹಾ ಈ ರೀತಿಯ ಕ್ರಮವನ್ನು ತಿಳಿಸಿಲ್ಲ. ಏಕೆಂದರೆ ಋಷಿಗಳ ಉದ್ದೇಶವು ಅದಲ್ಲ!.

ಕಾಯಿಕ, ವಾಚಿಕ ಮತ್ತು ಮಾನಸಿಕವಾಗಿ ಮಾಡಿರುವಂತಹ ಪಾಪಗಳ ಪರಿಹಾರಕ್ಕಾಗಿ(ಪ್ರಾಯಶ್ಚಿತ್ತ) ಅಷ್ಟದಾನ – ದಶದಾನ ಹಾಗೂ ಷೋಡಶದಾನಾದಿಗಳನ್ನು(ಹಾಗೆಯೇ ದ್ವಾದಶಾಬ್ದ, ಷಡಬ್ದಾದಿ ಕೃಚ್ಛ್ರಾಚರಣೆಗಳನ್ನೂ) ಮೃತನು ತಾನು ಇದ್ದಾಗಲೇ ಮಾಡಬೇಕು(ಕೊಡಬೇಕು) ಎನ್ನುವುದೇ ಮೊದಲದರ್ಜೆಯ ಆದ್ಯತೆಯ ನಿಯಮ–ಕರ್ತವ್ಯ. ಆದರೂ ವ್ಯಕ್ತಿಯ ಅಶ್ರದ್ಧೆ ಅಥವಾ ದುರ್ಬಲತೆ ಅಥವ ನಿಸ್ತೇಜತೆ ಅಥವಾ ಜ್ಞಾನದ ಕೊರತೆ, ಇನ್ನಿತರ ಕಾರಣಗಳಿಂದ ಮೊದಲ ಆದ್ಯತೆಯ ನಿಯಮಪಾಲನೆ ಸಾಧ್ಯವಾಗದಿದ್ದರೂ ಆತನ ಮರಣದ ನಂತರವೂ ಕರ್ತ್ಯಗಳು, **"ಮೃತನ ಹುಟ್ಟಿನಿಂದ.....ಸಾಯುವವರೆಗಿನ ಎಲ್ಲಾ ರೀತಿಯ ಪಾಪಗಳ**

ಮೊದಲು ಮೃತಶರೀರಕ್ಕೆ **"ಪ್ರಾಣಪ್ರತಿಷ್ಠೆಯನ್ನು"** ಮಾಡುತ್ತೇವೆ ಎಂದು ತಮ್ಮ ಅಭಿಪ್ರಾಯವನ್ನು ಹೇಳುತ್ತಾರೆ. ಹಾಗಾಗಿ ಪ್ರಾಣಪ್ರತಿಷ್ಠೆಯ ವಿಚಾರವನ್ನೂ ಇಲ್ಲಿ ವಿಮರ್ಶಿಸಬೇಕಾಗುತ್ತದೆ.

3. ಮೃತ ಶರೀರಕ್ಕೆ ಪ್ರಾಣಪ್ರತಿಷ್ಠೆ ಬೇಕೇ ? –

ಸಮಾಜದಲ್ಲಿ ಇಂದು ನಾವು ನೋಡುತ್ತಿರುವಂತೆ, ಕೆಲವರು(ಹಲವರಲ್ಲ!) ಈ ಅಪರಕರ್ಮದ ಪ್ರಯೋಗವನ್ನು ಪ್ರಾರಂಭಿಸುವಾಗ, ಆರಂಭದಲ್ಲಿ ಆ ನಿರ್ಜೀವಶರೀರಕ್ಕೆ "ಪ್ರಾಣೋರಕ್ಷತಿ....., ಶಿರೋ ಮೇ ಶ್ರೀಃ....." ಮುಂತಾದ ಮಂತ್ರಗಳಿಂದ ಪ್ರಾಣಪ್ರತಿಷ್ಠೆಯನ್ನು ಮಾಡುತ್ತೇವೆಂದು ಸಂಕಲ್ಪಿಸಿ, ಅದನ್ನು ಮಾಡುತ್ತಾರೆ. ಆದರೆ ಆ ಪ್ರಯೋಗವನ್ನು ಮುಂದುವರೆದು ನೋಡಿದಾಗ ಎಲ್ಲೂ ಆ ಪ್ರಾಣದ ಉದ್ವಾಸನೆ(ವಿಸರ್ಜನೆ) ಕಂಡುಬರುವುದೇ ಇಲ್ಲ!. ಪ್ರಾಣವನ್ನು ಕೊಡುತ್ತಿದ್ದೇವೆ ಎಂಬ ಭಾವನೆಯಿಂದ ಸಂಕಲ್ಪದೊಂದಿಗೆ ಮಂತ್ರ ಸಹಿತವಾಗಿ ಪ್ರಾಣಪ್ರತಿಷ್ಠೆಯನ್ನು ಮೃತಶರೀರಕ್ಕೆ ಮಾಡಿದಮೇಲೆ ಅದರಲ್ಲಿ ಪ್ರಾಣವಿದೆ ಎಂಬುದು ಭಾವ. ಹಾಗಿದ್ದಮೇಲೆ ಪುನಃ ಆ ಪ್ರಾಣವನ್ನು **ವಿಸರ್ಜನೆ** ಎಂಬ ವಿಧಾನದಿಂದ ತೆಗೆಯದೇ ಆ ದೇಹವನ್ನು ದಹನ ಮಾಡಿದರೆ ಸಜೀವದಹನವನ್ನು ಮಾಡಿದಂತಾಗುವುದಿಲ್ಲವೇ ?, ಆದರೆ ಇದಕ್ಕೆ ಕೆಲವರು **'ಕರ್ಣಮಂತ್ರ ಜಪವೇ ಪ್ರಾಣದ ಉತ್ಸರ್ಜನೆ'** ಎಂದು ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾರೆ. ಆದರೆ ಕರ್ಣಮಂತ್ರ ಜಪವೆಂಬುದು ವ್ಯಕ್ತಿಯ ಮರಣಸಂಶಯದಲ್ಲಿ, ಅಂದರೆ ದೇಹದಲ್ಲಿ ಪ್ರಾಣವು ಇರುವಾಗಲೇ ಅವನೇ ಅಥವಾ ಪರವಾಗಿ ಯಾರಾದರೂ ಮಾಡಬೇಕಾದ ಒಂದು ವಿಧಿಯಾಗಿದೆಯೇ ಹೊರತು, ಪ್ರಾಣವನ್ನು ತೆಗೆಯುವ(ವಿಸರ್ಜನೆಯ) ವಿಧಾನವಲ್ಲ ಎಂಬುದು ಸುಸ್ಪಷ್ಟವೇ. ಹಾಗಾಗಿ ಆವಾಹನೆ ಇದ್ದಮೇಲೆ ವಿಸರ್ಜನೆ ಬೇಡವೇ?,

ಅಲ್ಲದೇ, ಪ್ರಾಣಪ್ರತಿಷ್ಠೆಯ ಈ ಕ್ರಮಕ್ಕೆ ಋಷಿಗಳ ಮಾರ್ಗದರ್ಶನವು(ಆಧಾರವಾಕ್ಯ) ಇರಬೇಕಲ್ಲವೇ?, ಏಕೆಂದರೆ ಕರ್ಮದ ಪ್ರತಿಯೊಂದು ವಿಧಿಗಳನ್ನೂ ಹೀಗೆಯೇ ಮಾಡಬೇಕೆಂದು ತಿಳಿಸುವ ಋಷಿಗಳು ಈ ಶರೀರಕ್ಕೆ ಪ್ರಾಣಪ್ರತಿಷ್ಠಾಪನೆಯ ಅಗತ್ಯತೆಯನ್ನೂ ಮತ್ತು ಕ್ರಮವನ್ನೂ ಹೇಳುತ್ತಿದ್ದರು ಅಲ್ಲವೇ?, ಅಥವ ಅವರು ಮರೆತರೆ?!, ಸಮ(ವರ್ತಮಾನ)ಕಾಲದಲ್ಲೇ ಬಹುಜನರು ಆಚರಿಸದ ಆದರೆ ಕೆಲವರು

ಮಾತ್ರ ಆಚರಿಸುವ ಒಂದು ವಿಧಾನವನ್ನೇ ಸಮರ್ಥಿಸಿಕೊಳ್ಳಬೇಕಾದರೂ ಸಹ, ಅದನ್ನು ಆಚರಿಸುತ್ತಿರುವವರಲ್ಲಿ ಇದಕ್ಕೆ ಸಂಬಂಧಿಸಿದ ಋಷಿಪ್ರಣೀತವಾದ ಶಾಸ್ತ್ರವಾಕ್ಯಗಳು ಇರಲೇಬೇಕಲ್ಲವೇ?, ಪ್ರಸ್ತುತ ಅಲಭ್ಯ(ಕಳೆದುಹೋಗಿರುವ)ವಾಗಿರುವ ಗ್ರಂಥಗಳಲ್ಲಿ ಇದಕ್ಕೆ ಆಧಾರ ಇರಬಹುದಲ್ಲವೇ ? ಎಂಬಂತಹ ಊಹೆ ಹಾಗೂ ಕಲ್ಪನೆಗಳಿಂದ ಕೂಡಿದ ಸಮರ್ಥನೆಗಿಂತ, ಪ್ರಸ್ತುತ(ತತ್ಕಾಲದಲ್ಲಿ) ಲಭ್ಯವಿರುವ ಆಧಾರಗ್ರಂಥಗಳಲ್ಲಿನ ಋಷಿವಾಕ್ಯಗಳ ಮಾರ್ಗದರ್ಶನದಂತೆ ನಡೆಯುವುದೇ ಉತ್ತಮ ಪಕ್ಷವಲ್ಲವೇ??

ಶಾಸ್ತ್ರವಿರೋಧೇ ಶಿಷ್ಟಾಚಾರಂ ತ್ಯಾಜ್ಯಮೇವಾಮನಂತಿ ನ್ಯಾಯವಿದಃ ।
ಶ್ರುತಿ ಸ್ಮೃತ್ಯಲಾಭೇ ಹಿ ಶಿಷ್ಟಾಚಾರಃ ಪ್ರಮಾಣಂ ।

ಶಾಸ್ತ್ರಕ್ಕೆ ವಿರುದ್ಧವಾದರೆ ಅಂತಹ ಶಿಷ್ಟಾಚಾರವನ್ನು ಬಿಡಬೇಕೆಂದು ಹೇಳುತ್ತಾರೆ । ಯಾವ ವಿಷಯದಲ್ಲಿ ಶ್ರುತಿಸ್ಮೃತಿಗಳು ಸಿಕ್ಕುವುದಿಲ್ಲವೋ ಅಲ್ಲಿ ಮಾತ್ರ ಶಿಷ್ಟಾಚಾರವೇ ಪ್ರಮಾಣವಾಗುತ್ತದೆಯಷ್ಟೇ ।

ಆದರೆ ಭಾರದ್ವಾಜ – ಆಪಸ್ತಂಬ – ಬೋಧಾಯನ ಸೂತ್ರಗಳಲ್ಲಿ ಹಾಗೂ ಗೋಪಾಲಮುನಿಗಳ – ಕಪರ್ದಿಸ್ವಾಮಿಗಳ ಭಾಷ್ಯಗಳಲ್ಲಿ ಹಾಗೆಯೇ ಕಾರಿಕಾವಳಿಗಳಲ್ಲಿ ಹಾಗೂ ಮಹಾತ್ಮರುಗಳು, ಮಹಾವಿದ್ವಾಂಸರುಗಳು ಅನೇಕ ಋಷಿಗ್ರಂಥ(ವಾಕ್ಯ)ಗಳನ್ನು ಸಂಗ್ರಹಿಸಿ ರಚಿಸಿರುವ ವೈದ್ಯನಾಥೀಯಸ್ಮೃತಿ – ಯಲ್ಲಾಜೀಯ ಅನುಧರ್ಮಶಾಸ್ತ್ರ – ವೆಂಕಟರಾಮಾವಧಾನೀಯ ಪ್ರಯೋಗರತ್ನಾಕರದಂತಹ ಗ್ರಂಥಗಳಲ್ಲಿಯೂ ಸಹಾ ಈ ರೀತಿಯ ಕ್ರಮವನ್ನು ತಿಳಿಸಿಲ್ಲ. ಏಕೆಂದರೆ ಋಷಿಗಳ ಉದ್ದೇಶವು ಅದಲ್ಲ!.

ಕಾಯಿಕ, ವಾಚಿಕ ಮತ್ತು ಮಾನಸಿಕವಾಗಿ ಮಾಡಿರುವಂತಹ ಪಾಪಗಳ ಪರಿಹಾರಕ್ಕಾಗಿ(ಪ್ರಾಯಶ್ಚಿತ್ತ) ಅಷ್ಟದಾನ – ದಶದಾನ ಹಾಗೂ ಷೋಡಶದಾನಾದಿಗಳನ್ನು(ಹಾಗೆಯೇ ದ್ವಾದಶಾಬ್ದ, ಷಡಬ್ದಾದಿ ಕೃಚ್ಛ್ರಾಚರಣೆಗಳನ್ನೂ) ಮೃತನು ತಾನು ಇದ್ದಾಗಲೇ ಮಾಡಬೇಕು(ಕೊಡಬೇಕು) ಎನ್ನುವುದೇ ಮೊದಲದರ್ಜೆಯ ಆದ್ಯತೆಯ ನಿಯಮ–ಕರ್ತವ್ಯ. ಆದರೂ ವ್ಯಕ್ತಿಯ ಅಶ್ರದ್ಧೆ ಅಥವಾ ದುರ್ಬಲತೆ ಅಥವ ನಿಸ್ತೇಜತೆ ಅಥವಾ ಜ್ಞಾನದ ಕೊರತೆ, ಇನ್ನಿತರ ಕಾರಣಗಳಿಂದ ಮೊದಲ ಆದ್ಯತೆಯ ನಿಯಮಪಾಲನೆ ಸಾಧ್ಯವಾಗದಿದ್ದರೂ ಆತನ ಮರಣದ ನಂತರವೂ ಕರ್ತ್ಯಗಳು, **"ಮೃತನ ಹುಟ್ಟಿನಿಂದ.....ಸಾಯುವವರೆಗಿನ ಎಲ್ಲಾ ರೀತಿಯ ಪಾಪಗಳ**

ಪರಿಹಾರಕ್ಕಾಗಿ.....” ಎಂದು ಸಂಕಲ್ಪಿಸಿ, ಮೃತನ ಪರವಾಗಿ ದಾನಗಳನ್ನು ಕೊಡಬೇಕು, ಬಿಡುವಹಾಗಿಲ್ಲ ಎಂಬುದು (ಶಾಸ್ತ್ರಗಳ)ಋಷಿಗಳು ಅಭಿಪ್ರಾಯವೇ ಹೊರತು, ಆ ನಿರ್ಜೀವಶರೀರಕ್ಕೆ ಪ್ರಾಣವನ್ನು ತುಂಬುವ(ಪ್ರಾಣಪ್ರತಿಷ್ಠೆಯನ್ನು ಮಾಡುವ) ಅಭಿಪ್ರಾಯ ಅವರದ್ದಲ್ಲ.

ಸಂಜ್ಞಾಹಾನೌ ಮರಣೇऽಪಿ ವಾ ಹಿತೈಷಿ ಪುತ್ರಾದಿರ್ದದ್ಯಾತ್,
‘ಆತುರೋವಾऽಥ ಪುತ್ರೋ ವಾ ದದ್ಯುರಾಸನ್ನ ಬಾಂಧವಾಃ’ ಇತಿ ವ್ಯಾಸಃ ॥

.....ವೈತರಣ್ಯೈ ಚ ದಶದಾನಾನಿ ಚೈವ ಹಿ ।
ಪ್ರೇತೇऽಪಿ ಕೃತ್ವಾ ತಂ ಪ್ರೇತಂ ಶವಧರ್ಮೇ ನಿಯೋಜಯೇತ್
(ಸ್ಮೃತಿರತ್ನೇऽಪಿ) ॥

4. ಸರ್ವಸ್ಯ ಪ್ರತಿಶೀವರೀ....., ಎಂಬ ಮಂತ್ರದ ವಿನಿಯೋಗದ ವಿಚಾರ –

ಮೃತನನ್ನು ಯಾವಾಗಲೂ ದಕ್ಷಿಣದಿಕ್ಕಿಗೇ ಮಲಗಿಸಬೇಕು. ಹಾಗೆ ಮಲಗಿಸುವಾಗಲೆಲ್ಲಾ, ಅಂದರೆ ಮೊದಲಸಲ ಮಲಗಿಸುವಾಗ – ಚೆಟ್ಟದ ಮೇಲೆ ಮಲಗಿಸುವಾಗ – ದಾರಿಯ ಮಧ್ಯಗಳಲ್ಲಿ ಬಲಿಗಾಗಿ ಇಡುವಾಗ – ಸ್ಮಶಾನದಲ್ಲಿ ಇಡುವಾಗ – ಸ್ಮಶಾನದಲ್ಲಿ ಚೆಟ್ಟದಿಂದ ಬೇರ್ಪಡಿಸಿ ಇಡುವಾಗ – ಚಿತೆಯ ಮೇಲೆ ಇಡುವಾಗ, ಈ ಎಲ್ಲಾ ಸಂದರ್ಭಗಳಲ್ಲೂ ಸಹಾ ಸರ್ವಸ್ಯ ಪ್ರತಿಶೀವರೀ....., ಎಂಬ ಮಂತ್ರವನ್ನು ಹೇಳಬೇಕೆಂದು ಶ್ರೀಗೋಪಾಲಮುನಿಗಳು ಅಭಿಪ್ರಾಯಪಟ್ಟರೆ(ಪ್ರಶ್ನೆ 1, ಖಂಡ 1, ಸೂತ್ರ 17 ರ ಭಾಷ್ಯ), ಮೊದಲಸಲ ಮಲಗಿಸುವಾಗ ಮಾತ್ರ ಈ ಮಂತ್ರವನ್ನು ಹೇಳಿದರೆ ಸಾಕೆಂದು ಶ್ರೀಕಪರ್ದಿಸ್ವಾಮಿಗಳು ಅಭಿಪ್ರಾಯವನ್ನು ತಿಳಿಸುತ್ತಾರೆ(ಪ್ರಶ್ನೆ 1, ಖಂಡ 1, ಸೂತ್ರ 16 ರ ಭಾಷ್ಯ). ಹಾಗಾಗಿ ಇದನ್ನು ವಿಕಲ್ಪವಾಗಿ ಗ್ರಹಿಸಬಹುದೆಂದು ತೋರುತ್ತದೆ.

5. ಚರುವನ್ನು ಯಾವ ಅಗ್ನಿಯಲ್ಲಿ ಮಾಡಬೇಕು ? –

ಪ್ರಶ್ನೆ 1, ಖಂಡ 2, ಸೂತ್ರ 4 ಹಾಗೂ ಅದರ ಗೋಪಾಲಮುನಿಗಳ ಭಾಷ್ಯದಲ್ಲೂ ಸಹಾ ಚರುವನ್ನು ಆಹಿತಾಗ್ನಿಗಳ ಮರಣದಲ್ಲಿ, ದಕ್ಷಿಣಾಗ್ನಿಯಲ್ಲಿ ಅಮಂತ್ರಕವಾಗಿ ಬೇಯಿಸಬೇಕೆಂಬುದು ನಿಖರವಾಗಿ ತೋರುತ್ತದೆ. ಇಲ್ಲಿ ಸ್ಪಷ್ಟವಾಗುವ ವಿಷಯವೇನೆಂದರೆ, ಚರುವನ್ನು ಲೌಕಿಕಾಗ್ನಿಯಲ್ಲಿ ಮಾಡುವುದಲ್ಲ ಬದಲಿಗೆ ಮಂತ್ರಾಗ್ನಿಯಲ್ಲಿ ಎಂಬುದು!. ಅನಾಹಿತಾಗ್ನಿಗಳಿಗೆಂದು(ಲೌಕಿಕರು) ಒಂದು ಸ್ವತಂತ್ರವಾದ ಅಸ್ತಿತ್ವವುಳ್ಳ ಪಿತೃಮೇಧಸೂತ್ರಗಳು ರಚನೆಯಾಗಿಲ್ಲದೇ, . ಆಹಿತಾಗ್ನಿಗಳ(ಅಗ್ನಿಹೋತ್ರಿಗಳು) ಪಿತೃಮೇಧಸೂತ್ರಗಳನ್ನೇ ಅತಿದೇಶ ಮಾಡಿಕೊಂಡು ಆಚರಣೆಗೆ ಬಂದಿರುವುದೇ ಆಗಿದೆಯಾದ್ದರಿಂದ, ಆಹಿತಾಗ್ನಿಯ ವಿಷಯದಲ್ಲಿ 'ಚರುವನ್ನು ದಕ್ಷಿಣಾಗ್ನಿಯಲ್ಲಿ ಮಾಡಿ' ಎಂದು ತಿಳಿಸಿರುವುದು, ಲೌಕಿಕರಿಗೆ ಪುನಸ್ಸಂಧಾನವಾದ ಔಪಾಸನಾಗ್ನಿಯಲ್ಲೇ ಚರುವನ್ನು ಮಾಡಬೇಕೆಂಬ ಅರ್ಥಕ್ಕೇ ಬಲವನ್ನು ಒದಗಿಸುತ್ತದೆಯಲ್ಲವೇ ?, ಅಲ್ಲದೇ 39 ನೇ ಕಾರಿಕೆಯೂ ಸಹಾ, **ತಸ್ಮಿನ್ನಗ್ನೌ** ಎಂದು ಔಪಾಸನಾಗ್ನಿಯಲ್ಲೇ ಚರುವನ್ನು ಮಾಡಲು ತಿಳಿಸುತ್ತಿದೆ. ಏಕೆಂದರೆ ಔಪಾಸನ ಹೋಮವಾದ ತಕ್ಷಣವೇ **ತಸ್ಮಿನ್ನಗ್ನೌ** ಎಂಬ ಪದಪ್ರಯೋಗವಾಗಿರುವುದರಿಂದ ಮತ್ತು ಆಗ ಅಲ್ಲಿ ಔಪಾಸನಾಗ್ನಿಯನ್ನು ಬಿಟ್ಟು ಬೇರೇ ಅಗ್ನಿಗಳ ಅಸ್ತಿತ್ವವಿಲ್ಲದಿರುವುದರಿಂದ(ಅನಾಹಿತಾಗ್ನಿಗಳಿಗೆ) **ತಸ್ಮಿನ್ನಗ್ನೌ** ಎಂಬ ಶಬ್ದವು ಔಪಾಸನಾಗ್ನಿಯನ್ನೇ ಸೂಚಿಸುತ್ತಿದೆ ಎಂಬುದು ಸ್ಪಷ್ಟವೇ. ಅಲ್ಲದೇ ಯಲ್ಲಾಜೀಯ ಮತ್ತು ವೆಂಕಟರಾಮಾವಧಾನೀಯ ಅನಾಹಿತಾಗ್ನಿ ಅಪರಪ್ರಯೋಗದಲ್ಲೂ ಅವರುಗಳು ಇದೇ **ತಸ್ಮಿನ್ನಗ್ನೌ** ಶಬ್ದವನ್ನು ಬಳಸಿರುವುದೂ ಗಮನಿಸಬೇಕಾದ ಅಂಶವೇ. ಈ ಮೇಲೆ ತಿಳಿಸಿದ ಯಾವ ಆಧಾರವಾಕ್ಯಗಳಲ್ಲೂ ಲೌಕಿಕಾಗ್ನಿಯಲ್ಲಿ ಚರುವನ್ನು ಮಾಡಬೇಕೆಂದು ತೋರಿಬರುತ್ತಿಲ್ಲವೆಂಬುದೂ ಗಮನಾರ್ಹವೇ!!. ಹಾಗಾಗಿ ಮೃತ ಅಗ್ನಿಹೋತ್ರಿಗಳ ಕರ್ಮದಲ್ಲಿ ದಕ್ಷಿಣಾಗ್ನಿಯಲ್ಲಿ ಮತ್ತು ಮೃತ ಅನಾಹಿತಾಗ್ನಿಗಳ ಕರ್ಮದಲ್ಲಿ ಔಪಾಸನಾಗ್ನಿಯಲ್ಲಿಯೇ ಚರುವನ್ನು ಮಾಡುವುದು ಸೂಕ್ತವಾಗಿ ತೋರುತ್ತದೆ.

6. ಮೃತನು ಧರಿಸಿದ್ದ ಬಟ್ಟೆಯನ್ನು ಏನು ಮಾಡಬೇಕು ? –

ಹಲವರು ಆ ಮೃತನ ದೇಹದಲ್ಲಿದ್ದ ಬಟ್ಟೆಗಳನ್ನು ತೆಗೆದು, ಹೊಸಬಟ್ಟೆಯನ್ನು ಹೊದಿಸಿ, ತೆಗೆದ ಬಟ್ಟೆಯನ್ನು ಎಸೆಯುತ್ತಾರೆ ಅಥವಾ ಸ್ಮಶಾನದಲ್ಲಿ ವಾಸಿಸುವ ಅಥವಾ

ಬೇರೇ ಜನರಿಗೆ ಕೊಟ್ಟುಬಿಡುತ್ತಾರೆ. ಆದರೆ ಪ್ರಶ್ನೆ 1, ಖಂಡ 2, ಸೂತ್ರ 3 ರಲ್ಲಿ ಮತ್ತು ಅದರ ಭಾಷ್ಯದಲ್ಲಿ, ತೆಗೆದ ಆ ವಸ್ತ್ರವನ್ನು ಕ್ರಮವಾಗಿ ಮೃತನ ಮಕ್ಕಳು ಅಥವಾ ಸೋದರರು ಅಥವಾ ಮೃತನಿಂದ ಸಹಾಯಕ್ಕೆ ಒಳಗಾದವರು, ಮೃತನ ನೆನಪಿಗಾಗಿ ಗೌರವದಿಂದಲೂ, ಆದರದಿಂದಲೂ ಆ ವಸ್ತ್ರವು ಹರಿದುಹೋಗುವವರೆಗೂ ಕೂಡ ಧರಿಸಬೇಕು. ಅದಕ್ಕೆ ಮುಂಚೆ ಎಸೆಯಲೂಬಾರದು ಹಾಗೂ ಬೇರೆಯವರಿಗೆ ಕೊಡಲೂ ಬಾರದೆಂದು ಸ್ಪಷ್ಟವಾಗಿ ನಿರ್ದೇಶಿಸಿದ್ದಾರೆ ಎಂಬುದನ್ನು ನಾವು ಗಮನಿಸಬೇಕು. !!

7. ಅಪೇತವೀತ....., ಎಂಬ ಮಂತ್ರದ ವಿಷಯ –

ಕರ್ತೃವು ದಹನದ ಜಾಗವನ್ನು ಸ್ವಚ್ಛ ಮಾಡಬೇಕಾದರೆ, ಆರಣ್ಯಕದ 6 ನೇ ಪ್ರಶ್ನೆಯಲ್ಲಿ ಬರುವ ಈ ಮಂತ್ರವನ್ನೇ ಹೇಳಬೇಕು, ಸಂಹಿತೆಯಲ್ಲಿ ಬರುವ ರೀತಿಯಲ್ಲಿ ಅಲ್ಲ ಎಂದು ಶ್ರೀಗೋಪಾಲಮುನಿಗಳು ಶ್ರೀಬೋಧಾಯನರ ವಾಕ್ಯವನ್ನೂ ತೋರಿಸಿ ಹೇಳುತ್ತಿದ್ದಾರೆ. ಆದರೆ ಶ್ರೀಕಪರ್ದಿಸ್ವಾಮಿಗಳು ಇದೇ ಮಂತ್ರವನ್ನು ಸಂಹಿತೆಯ 4 ನೇ ಕಾಂಡದಲ್ಲಿ ಇರುವ ರೀತಿಯಲ್ಲಿಯೂ ಹೇಳಬಹುದು, ಅದರಿಂದ ಯಾವ ದೋಷವೂ ಆಗಲಾರದು ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಈ ವಿಷಯವನ್ನು ವಿಕಲ್ಪವಾಗಿ ಗ್ರಹಿಸಬಹುದೆಂದು ತೋರುತ್ತದೆ.

8. ರಾಜಗವಿಯ(ಹಸುವಿನ) ಮತ್ತು ಆಡಿನ ವಿಷಯ –

ಇಂದು ಕೆಲವರು ಮೃತ ಅನಾಹಿತಾಗ್ನಿಯ ಅಂದರೆ ಮೃತಲೌಕಿಕರ ಅಪರಕರ್ಮದಲ್ಲಿ ಹಸುವಿಗೆ ಮತ್ತು ಆಡಿಗೆ ಸಂಬಂಧಿಸಿದ ಪ್ರಯೋಗವನ್ನು ಮಾಡುತ್ತಿಲ್ಲ. ಅದಕ್ಕೆ ಅವರ(ವೆಂಕಟರಾಮಾವಧಾನೀಯ.....ಗ್ರಂಥ) ಅಭಿಪ್ರಾಯ, "ಆ ಪ್ರಯೋಗವು ಆಹಿತಾಗ್ನಿಗಳಿಗೆ(ಅಗ್ನಿಹೋತ್ರಿ) ಮಾತ್ರವೇ" ಎಂಬುದಾಗಿದೆ. ಆದರೆ ಭಾರದ್ವಾಜೀಯ/ ಆಪಸ್ತಂಬೀಯ ಪಿತೃಮೇಧ ಪ್ರಶ್ನೆ 1, ಖಂಡ 4, ಸೂತ್ರ 7 ರಲ್ಲಿ ಮತ್ತು ಅದರ ಭಾಷ್ಯದಲ್ಲಿ, ಆ ರಾಜಗವಿಯನ್ನು ಸಂಜ್ಞಪನ(ಕೊಲ್ಲುವಿಕೆ) ಅಥವಾ ಉತ್ಸರ್ಜನ(ಬಿಡುವಿಕೆ) ಮಾಡುವ ಎರಡೂ ಅವಕಾಶಗಳನ್ನೂ ತೋರಿಸಿದ್ದಾರೆ. ಮತ್ತೆ ಮುಂದುವರೆದು, ಈ ಎರಡು ಅವಕಾಶಗಳು(ವಿಕಲ್ಪವು) ಪಶುಬಂಧಯಾಗವನ್ನು ಮಾಡಿದವರಿಗೆ ಮಾತ್ರ ಅನ್ವಯಿಸುತ್ತದೆ. ಇನ್ನು ಯಜ್ಞಗಳ ಬೇರೆಬೇರೇ ಹಂತಗಳಲ್ಲಿ ತೊಡಗಿಸಿಕೊಂಡಿರುವವರಿಗೆ

ಹಾಗೂ ಔಪಾಸನಾಗ್ನಿ ಮೊದಲಾದ ಬೇರೆಬೇರೆ ಅಗ್ನಿಗಳ ಉಪಾಸಕರಿಗೆ ಅಂದರೆ, ಅನಾಹಿತಾಗ್ನಿಗಳಿಗೆ ಹಾಗೂ ಆಹಿತಾಗ್ನಿಗಳಾದ ಚಾತುರ್ಮಾಸ್ಯದವರೆಗೆ ಕರ್ಮವನ್ನು ಮಾಡಿದವರಿಗೆ(ಪಶುವನ್ನು ಮಾಡದವರಿಗೆ) ಉತ್ಸರ್ಗ(ಬಿಡುವ) ನಿಯಮವನ್ನೇ ಹೇಳುತ್ತಾರೆ. ಅಲ್ಲದೇ ಯಲ್ಲಾಜೀಯ ಅನಾಹಿತಾಗ್ನಿ ಅಪರಪ್ರಯೋಗದಲ್ಲಿ ಈ ರಾಜಗವಿ ಮತ್ತು ಆಡಿನ ಉತ್ಸರ್ಜನ(ಬಿಡುವ) ಕ್ರಮದ ಪ್ರಯೋಗವನ್ನು ಅವರು ಸೂಚಿಸಿದ್ದಾರೆ. ಹಾಗಾಗಿ ಈ ಮೇಲಿನ ವಿಮರ್ಶೆಯಲ್ಲಿ ಹೇಳಿದಂತೆಯೇ, ಮೃತ ಆನಾಹಿತಾಗ್ನಿಗಳ ಅಪರಪ್ರಯೋಗ ವ್ಯವಸ್ಥೆಯು ಸ್ವತಂತ್ರವಾಗಿಲ್ಲದೇ ಆಹಿತಾಗ್ನಿಗಳ ಸೂತ್ರಗಳಿಂದಲೇ ಅತಿದೇಶ ಮಾಡಲ್ಪಟ್ಟಿರುವುದಾದ್ದರಿಂದ, ಅನಾಹಿತಾಗ್ನಿಗಳ ಪ್ರಯೋಗದಲ್ಲೂ ಹಸು ಮತ್ತು ಆಡಿನ ಉತ್ಸರ್ಜನ(ಬಿಡುವ) ಕ್ರಮದ ಪ್ರಯೋಗವನ್ನು ಅಳವಡಿಸಿಕೊಳ್ಳುವುದು ಸೂಕ್ತವೇ ಆಗಿದೆಯೆಂದು ತೋರುತ್ತದೆ.

9. ದಹನಕ್ಕೆ ಮಂತ್ರವನ್ನು ಹೇಳಬೇಕೇ, ಬೇಡವೇ ? –

ವರ್ತಮಾನದ ಆಚರಣೆಯಲ್ಲಿ ದಹನದ ಅಂದರೆ, ಚಿತೆಗೆ ಅಗ್ನಿಯನ್ನು ಸ್ಪರ್ಶಿಸುವಾಗ, ಮೈನಮಗ್ನೇ....., ಮತ್ತು ಶೃತಂ ಯದಾ....., ಎಂಬ 2 ಮಂತ್ರಗಳನ್ನು ಹೇಳುವುದನ್ನು ನಾವು ನೋಡುತ್ತಿದ್ದೇವೆ. ಆದರೆ ಆಧಾರಗ್ರಂಥಗಳಾದ ಭಾರದ್ವಾಜ/ ಆಪಸ್ತಂಬ ಅಪರಸೂತ್ರ, ಪ್ರಶ್ನೆ 1, ಖಂಡ 7, ಸೂತ್ರ 2 ರಲ್ಲಿ ಹಾಗೂ ಗೋಪಾಲ ಮತ್ತು ಕಪರ್ದಿಮುನಿಗಳ ಭಾಷ್ಯಗಳಲ್ಲೂ ಈ ವಿಷಯದಲ್ಲಿ ಸ್ಪಷ್ಟವಾದ ನಿರ್ದೇಶನವನ್ನು ಮಾಡಿದ್ದಾರೆ. ಅದು ಹೇಗೆಂದರೆ – **"ಮೈನಮಗ್ನೇ....., ಮಂತ್ರದಿಂದ – ಪೂರ್ವದಿಕ್ಕಿನಿಂದ – ಆಹವನೀಯಾಗ್ನಿಯನ್ನು ಚಿತೆಗೆ ಹತ್ತಿಸಬೇಕು. ಹಾಗೆಯೇ ಶೃತಂ ಯದಾ....., ಮಂತ್ರದಿಂದ – ಪಶ್ಚಿಮದಿಕ್ಕಿನಿಂದ – ಗಾರ್ಹಪತ್ಯಾಗ್ನಿಯನ್ನು ಚಿತೆಗೆ ಹತ್ತಿಸಬೇಕು. ಹಾಗೆಯೇ ಅಮಂತ್ರಕವಾಗಿ – ದಕ್ಷಿಣದಿಕ್ಕಿನಿಂದ – ದಕ್ಷಿಣಾಗ್ನಿಯನ್ನೂ ಮತ್ತೂ ಅಮಂತ್ರಕವಾಗಿಯೇ – ಪೂರ್ವದಿಕ್ಕಿನಿಂದ – ಸಭ್ಯ, ಆವಸಥ್ಯ, ಔಪಾಸನಾಗ್ನಿಗಳನ್ನು ಚಿತೆಗೆ ಹತ್ತಿಸಬೇಕು"** ಎಂದು. ಇಲ್ಲಿ ಜಿಜ್ಞಾಸುಗಳು ಸೂಕ್ಷ್ಮವಾಗಿ ಗಮನಿಸಬೇಕಾದ ಅಂಶವೇನೆಂದರೆ, ಋಷಿಗಳು ಯಾವ ಅಗ್ನಿಯನ್ನು ಯಾವ ಮಂತ್ರದಿಂದ ಯಾವ ದಿಕ್ಕಿನಿಂದ ಚಿತೆಗೆ ಹತ್ತಿಸಬೇಕೆಂದು ಅಭಿಪ್ರಾಯಭೇದವಿಲ್ಲದೇ ನಿಖರವಾಗಿ ನಿರ್ದೇಶಿಸಿದ್ದಾರೆ. ಅದರ ಪ್ರಕಾರ ಆಹವನೀಯಾಗ್ನಿ ಮತ್ತು ಗಾರ್ಹಪತ್ಯಾಗ್ನಿಯನ್ನು ಹೊರತುಪಡಿಸಿ ಉಳಿದ ಅಗ್ನಿಗಳನ್ನು ಅಮಂತ್ರಕವಾಗಿಯೇ ಚಿತೆಗೆ ಸ್ಪರ್ಶ

ಮಾಡಬೇಕೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಹೀಗಿದ್ದಾಗ ಆಹವನೀಯ ಮತ್ತು ಗಾರ್ಹಪತ್ಯಾಗ್ನಿಗಳನ್ನು ಹತ್ತಿಸಬೇಕಾದಾಗ ಹೇಳಬೇಕಾದ ಮಂತ್ರಗಳನ್ನು ಔಪಾಸನಾಗ್ನಿಯನ್ನು ಹತ್ತಿಸುವಾಗ ಹೇಳುವುದೂ ಮತ್ತೂ ಔಪಾಸನಾಗ್ನಿಯನ್ನು ಅಮಂತ್ರಕವಾಗಿಯೇ ಚಿತೆಗೆ ಹತ್ತಿಸಬೇಕೆಂಬ ನಿಯಮವನ್ನು ಪಾಲಿಸದಿರುವುದೂ ಸಹಾ ಎಷ್ಟರಮಟ್ಟಿಗೆ ಸೂಕ್ತವಾಗುತ್ತದೆ ?. ಶ್ರೀವೈದ್ಯನಾಥ ದೀಕ್ಷಿತರೂ ಕೂಡ ಈ ಪ್ರಕರಣದಲ್ಲಿ ಮೇಲೆ ತಿಳಿಸಿದ ಋಷಿಗಳ ಮಾತುಗಳನ್ನೇ ಉಲ್ಲೇಖಿಸಿದ್ದಾರೆ ಎಂಬುದೂ ಗಮನಿಸಬೇಕಾದ ಅಂಶವಾಗಿದೆ.

10. ನೀರು ತುಂಬಿದ ಮಡಿಕೆಯೊಂದಿಗೆ, ಚಿತೆಯನ್ನು ಸುತ್ತುವ ವಿಷಯ –

ವರ್ತಮಾನದ ಆಚರಣೆಯಲ್ಲಿ ಮಡಿಕೆಯಲ್ಲಿ ನೀರನ್ನು ತುಂಬಿಸಿಕೊಂಡು, ಕರ್ತೃವು ಅದನ್ನು ತನ್ನ ಹೆಗಲಮೇಲೆ ಇಟ್ಟುಕೊಂಡು, ಚಿತೆಯನ್ನು ಸುತ್ತುವುದನ್ನು ನಾವು ನೋಡುತ್ತಿದ್ದೇವೆ. ಆದರೆ ಇದಕ್ಕೆ ಪ್ರಸ್ತುತ ಲಭ್ಯವಿರುವ ಯಾವ ಪ್ರಾಚೀನಗ್ರಂಥಗಳಲ್ಲೂ ಆಧಾರವು ಸಿಗುವುದಿಲ್ಲ. ಹಾಗಾಗಿ ಈ ಆಚರಣೆಯನ್ನು ಬಿಡುವುದರಿಂದ ಯಾವ ಶಾಸ್ತ್ರೀಯವಾದ ಲೋಪಗಳೂ ಇಲ್ಲವೆಂಬುದು ಸ್ಪಷ್ಟವೇ.

11. ಒಂಭತ್ತು ಸ್ರುವಾಹುತಿಗಳ ಜಿಜ್ಞಾಸೆ –

ದಹನವಾದ ನಂತರ 9 ಆಹುತಿಗಳಿಂದ ಹೋಮಮಾಡಬೇಕೆಂದು ಸೂತ್ರ, ಭಾಷ್ಯಗಳಿಂದ ನಾವು ತಿಳಿದುಕೊಳ್ಳಬಹುದು. ಆ ಸೂತ್ರ, ಭಾಷ್ಯಗಳಲ್ಲಿ ಯಸ್ತ ಇಧ್ಮಂ....., ಮತ್ತು ಅಸ್ಮಾತ್ತ್ವಮಧಿ....., ಎಂಬ ಅದೇ ಅನುವಾಕದ ಉಳಿದ 2 ಮಂತ್ರಗಳಿಗೆ ವಿನಿಯೋಗವನ್ನು ತಿಳಿಸಿಲ್ಲ. ಆದರೆ ಈ 2 ಮಂತ್ರಗಳಿಗೆ ಸಾಯಣಾಚಾರ್ಯರು ವಿನಿಯೋಗವನ್ನು ತಿಳಿಸುತ್ತಾ, "ಈ 2 ಮಂತ್ರಗಳಿಗೆ ಭಾರದ್ವಾಜ ಮತ್ತು ಬೋಧಾಯನ ಮಹರ್ಷಿಗಳು ವಿನಿಯೋಗವನ್ನು ತಿಳಿಸಿಲ್ಲ, ಆದರೆ ಪ್ರಕರಣದ ಬಲದಿಂದ ಈ ಎರಡು ಮಂತ್ರಗಳಿಂದಲೂ ಹೋಮಿಸಬೇಕೆಂದು", ತಿಳಿಸಿದ್ದಾರೆ. ಹಾಗಾಗಿ ಈ ವಿಷಯದಲ್ಲಿ ಶಾಸ್ತ್ರೀಯವಾದ ಚರ್ಚೆ ವಿದ್ವಾಂಸರಿಂದ ಆಗಬೇಕಾದ ಅಗತ್ಯವಿದೆ ಎನಿಸುತ್ತದೆ.

12. ಶವದ ಜೊತೆ ಯಾವ ರೀತಿ ಹೋಗಬೇಕೆನ್ನುವ ವಿಷಯ –

ಪ್ರೇತಸ್ಯ ಪಾರ್ಶ್ವಯೋಗ್ರೇ ವಾ ನ ಗಚ್ಛೇಯುಃ ಕದಾಚನ ।
ಯಸ್ಮಾದಗ್ರೇತು ಗಂತೃಣಾಂ ಆಯುಃ ಕ್ಷೀಣಂ ಪದೇಪದೇ ॥

ಶವದ ಅಕ್ಕಪಕ್ಕ ಮತ್ತು ಮಂದೆ ಯಾವಾಗಲೂ ಹೋಗಬಾರದು. ಏಕೆಂದರೆ, ಮುಂದೆಹೋಗುವವರ ಆಯಸ್ಸು ಕ್ಷೀಣವಾಗುತ್ತದೆ ॥

13. ಶವದಮೇಲೆ ಅಗ್ನಿಯೋ, ಅಗ್ನಿಯಮೇಲೆ ಶವವೋ ??!!

ಅಗ್ನಿಕ್ಷೇಪೋ ನಾಧಿಶವಂ ಶ್ರುತಾವಾಹುತಿ ದರ್ಶನಾತ್ ।
ಆಹುತ್ಯುಪರಿ ವಿಕ್ಷೇಪಾತ್ ತತ್ಕರ್ಮ ವಿಫಲಂ ಭವೇತ್ ॥

ಈ ಅಗ್ನಿಸ್ಪರ್ಶವಿಧಿಯಲ್ಲಿ, ಚಿತೆಯ ಮೇಲಿರುವ ಶವದ ಕೆಳಭಾಗದ ಸೌದೆಗಳಿಗೆ ಅಗ್ನಿಯನ್ನು ಸ್ಪರ್ಶಿಸಬೇಕು. ಏಕೆಂದರೆ **ವೇದದಲ್ಲಿ ಶವವನ್ನು ಹವಿಸ್ಸು** ಎಂದು ಹೇಳಿರುವುದರಿಂದ. ಹೀಗೆಮಾಡದೇ, ಶವದ(ಆಹುತಿಯ) ಮೇಲೆ ಅಗ್ನಿಯನ್ನು ಹಾಕಿದರೆ ಅದು ಹೋಮ(ಯಜ್ಞ)ವಾಗುವುದಿಲ್ಲ. ಹಾಗಾಗಿ ಆ ಕರ್ಮಕ್ಕೆ ಫಲವಿಲ್ಲದ್ದಾಗಿ ನಿಷ್ಫಲಕರ್ಮವಾಗುತ್ತದೆ. ಆದ್ದರಿಂದ ಶವದ(ಆಹುತಿಯ) ಕೆಳಭಾಗದ ಸೌದೆಗಳಿಗೆ ಅಗ್ನಿಯನ್ನು ಸ್ಪರ್ಶಿಸಬೇಕು ॥

14. ಕರ್ತೃವಿಗೆ ಕ್ಷೌರವು(ವಪನ) ದಹನಕ್ಕೆ ಮೊದಲೋ, ನಂತರವೋ?

ವರ್ತಮಾನ ಸಮಾಜದಲ್ಲಿ, ಯಜುರ್ವೇದಿಗಳಲ್ಲಿ, ಹಲವರು ದಹನದ ನಂತರ ಕ್ಷೌರವನ್ನು ಮಾಡಿಸಿಕೊಳ್ಳುವ ರೀತಿಯನ್ನು ಅನುಸರಿಸುತ್ತಿದ್ದರೆ, ಕೆಲವರು ದಹನವಿಧಿಗಳ ಪ್ರಾರಂಭದಲ್ಲಿಯೇ ಕ್ಷೌರವನ್ನು ಮಾಡಿಸಿಕೊಳ್ಳುವ ಕ್ರಮವನ್ನು ಅನುಸರಿಸುತ್ತಿದ್ದಾರೆ.

ಆದರೆ ಈ ಕರ್ಮಕ್ಕೆ ಆಧಾರಗ್ರಂಥಗಳಾದ ಯಜುರ್ವೇದಿಗಳಿಗೆ ಸಂಬಂಧಿಸಿದ ಶ್ರೀಭಾರದ್ವಾಜ ಮಹರ್ಷಿಗಳು ರಚಿಸಿರುವ ಹಾಗೂ ಯಜುರ್ವೇದದ ಶಾಖೆಗಳ

ಭಿನ್ನತೆಯಿಂದ ಅಸ್ತಿತ್ವದಲ್ಲಿರುವ, ಶ್ರೀಆಪಸ್ತಂಬ ಮತ್ತು ಶ್ರೀಬೋಧಾಯನ ಮತ್ತು ಶ್ರೀಸತ್ಯಾಷಾಢ ಮಹರ್ಷಿಗಳು–ಸೂತ್ರಕಾರರು ರಚಿಸಿರುವ ಈ ಅಪರಕರ್ಮಕ್ಕೆ ಸಂಬಂಧಿಸಿದ ಸೂತ್ರಗಳಲ್ಲಿ, ಅಲ್ಲದೇ ಈ ಸೂತ್ರಗಳಿಗೆ ವ್ಯಾಖ್ಯಾನವನ್ನು ಬರೆದಿರುವ ಶ್ರೀಗೋಪಾಲಮುನಿಗಳ ಮತ್ತು ಭಾಷ್ಯ ಹಾಗೂ ಕಾರಿಕೆಗಳನ್ನೂ ರಚಿಸಿರುವ ಶ್ರೀಕಪರ್ದಿಸ್ವಾಮಿಗಳ, ಅಭಿಪ್ರಾಯದಂತೆ ಈ ಎಲ್ಲಾ ಆಧಾರವಾಕ್ಯಗಳಲ್ಲೂ ಸಹಾ ದಹನದ ನಂತರವೇ ಕ್ಷೌರವೆಂಬುದನ್ನು ನಿಖರವಾಗಿ ತೋರಿಸಲಾಗಿದೆ. **'ಋಗ್ವೇದಕ್ಕೆ ಸಂಬಂಧಿಸಿದ, ಶ್ರೀಆಶ್ವಲಾಯನರು ರಚಿಸಿರುವ ಅಪರಕರ್ಮದ ಸೂತ್ರದಲ್ಲಿ ದಹನಕರ್ಮದ ಆರಂಭದಲ್ಲಿ ಕ್ಷೌರವನ್ನು ವಿಧಿಸಿದ್ದಾರೆ.', ಎಂದು ತೋರಿಸುತ್ತಾ,** ಶ್ರೀವ್ಯಾಸಮಹರ್ಷಿಗಳೂ ಸಹಾ ದಹನದ ನಂತರವೇ ಕ್ಷೌರವನ್ನು ಮಾಡಿಸಿಕೊಳ್ಳಬೇಕೆಂದು ಅಭಿಪ್ರಾಯಪಟ್ಟಿರುವುದನ್ನೂ ನಾವು ಗಮನಿಸಬೇಕು.

ವಪನಂ ದಹನಾತ್ಪೂರ್ವಂ ಕುರ್ಯಾಚ್ಚೇತ್ಪಿತೃ ಘಾತಕಃ ।
ತಸ್ಮಾತ್ ಸರ್ವಪ್ರಯತ್ನೇನ ವಪನಂ ದಹನಾತ್ಪರಮ್ ॥

ಹಾಗಾಗಿ ಈ ಮೇಲೆ ತಿಳಿಸಿದ ಯಜುರ್ವೇದಕ್ಕೆ ಸಂಬಂಧಿಸಿದ ಎಲ್ಲಾ ಆಧಾರಗಳನ್ನೂ ಗಮನಿಸಿದಾಗ, ಯಜುರ್ವೇದಿಗಳು ದಹನದ ನಂತರ ಕ್ಷೌರವನ್ನು ಮಾಡಿಸಿಕೊಳ್ಳುವುದೇ ಶಾಸ್ತ್ರೀಯತೆ ಎಂಬುದು ಅರ್ಥವಾಗುತ್ತದೆ.

15. ಪ್ರೇತಾಗ್ನಿ ಪುನಸ್ಸಂಧಾನ ವಿಷಯದ ಜಿಜ್ಞಾಸೆಯು –

ಈ ವಿಷಯದಲ್ಲಿ ಪ್ರಸ್ತುತ ಸಮಾಜದಲ್ಲಿ ಹಲವರು ಆಚರಿಸುತ್ತಿರುವ ವಿಭಿನ್ನವಾದ ಕ್ರಮಗಳನ್ನು ನೋಡಿದಾಗ ಆಶ್ಚರ್ಯದ ಜೊತೆಗೆ ವಿಷಾದವೂ ಉಂಟಾಗುತ್ತದೆ. ಏಕೆಂದರೆ ಇದನ್ನು ಹೇಗೆ–ಏಕೆ ಮಾಡಬೇಕೆಂಬುದನ್ನು ತಿಳಿಸುತ್ತಿರುವ ಸೂತ್ರಕಾರರ ವಾಕ್ಯಗಳಿರಬಹುದು ಅಥವಾ ವೇದದ ವಾಕ್ಯಗಳಿರಬಹುದು ಅಥವಾ ವ್ಯಾಖ್ಯಾನಕಾರರ ವಾಕ್ಯಗಳಿರಬಹುದು ಅಥವಾ ಬೇರೇ ಋಷಿಗಳ ವಾಕ್ಯಗಳಿರಬಹುದು, ಇವೆಲ್ಲವೂ ಯಾವುದೇ ಒಂದು ಕರ್ಮವನ್ನು ಹೀಗೆಯೇ ಮಾಡಬೇಕೆಂದು ವಿಧಾನವನ್ನು ನಿರ್ದೇಶಿಸಿದ್ದರೂ ಸಹಾ, ಅವೆಲ್ಲವನ್ನು ಬಿಟ್ಟು, ಬೇರೊಂದು ಕ್ರಮವನ್ನು ಅನುಸರಿಸುತ್ತಾ, ಅನುಸರಿಸುತ್ತಿರುವ ವಿಧಾನಕ್ಕೆ ಬೇಕಾದ ಆಧಾರಗಳನ್ನು ತಿಳಿದುಕೊಳ್ಳಲೂ ಹೋಗದೇ,

ಇರುವ ಶಾಸ್ತ್ರಾಧಾರಗಳನ್ನೂ ಮಾನ್ಯ ಮಾಡದೇ ಕರ್ಮಗಳನ್ನು ಆಚರಿಸುವುದರಿಂದ ಯಾವ ಸಾಧನೆಯೂ ಆಗುವುದಿಲ್ಲವಷ್ಟೇ ಅಲ್ಲ, ಶಾಸ್ತ್ರಗಳಿಂದ ನಿರ್ದೇಶಿಸಲ್ಪಟ್ಟ ವಾಕ್ಯಗಳನ್ನು ವಿರೋಧಿಸುವುದರಿಂದ ಅಥವಾ ನಿರ್ಲಕ್ಷಿಸುವುದರಿಂದ, ಪ್ರತ್ಯವಾಯ(ದೋಷ)ವಾಗುತ್ತದೆಯೇ ಹೊರತು ಮತ್ತೇನು ಅಲ್ಲ.

ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ ।
ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂಗತಿಮ್ ॥(ಗೀತೆ 16, 23)

ಈ ಪೀಠಿಕೆ ಏಕೆಂದರೆ!!, ಈ ಪ್ರೇತಾಗ್ನಿ ಸಂಧಾನದಲ್ಲಿ – ಎಷ್ಟು ಮಂತ್ರಗಳು ಎಂಬ ವಿಷಯದಲ್ಲಿ ಮತ್ತೂ ಉಪವೀತಿಯಾ, ಪ್ರಾಚೀನಾವೀತಿಯಾ ಎಂಬ ವಿಷಯದಲ್ಲಿ ಮತ್ತೂ ಔಪಾಸನ ಹೋಮದ ಆಹುತಿ ಮಂತ್ರಗಳನ್ನು ಹೇಳಬೇಕಾ, ಬೇಡವಾ ಎಂಬ ವಿಷಯದಲ್ಲಿ, ಎಷ್ಟೆಲ್ಲಾ ಗೊಂದಲಗಳು ಇರುವುದು ವಿದ್ವಾಂಸರಿಗೆ ಗೊತ್ತೇ ಇದೆ. ಹಾಗಾಗಿಯೇ ಅದಕ್ಕೆ ಸಂಬಂಧಿಸಿದಂತೆ ತಾರ್ಕಿಕವಾದ ಒಂದು ಶಾಸ್ತ್ರೀಯ ಉತ್ತರವನ್ನೂ ನಾವುಗಳು ತಿಳಿಯಲೇಬೇಕಾಗಿದೆ. ಅದರ ಪ್ರಯತ್ನವೇ ಈ ಮುಂದಿನ ಅಭಿಪ್ರಾಯಗಳು.

ವೇದವು.....,

ನಿವೀತಂ ಮನುಷ್ಯಾಣಾಂ ಪ್ರಾಚೀನಾವೀತಂ ಪಿತೃಣಾಂ ಉಪವೀತಂ ದೇವಾನಾಮ್ ॥

ದಕ್ಷಿಣಾವೃದ್ಧಿ ಪಿತೃಣಾಮ್ ॥

ಎಂಬ ಆದೇಶದ ಮೂಲಕ, ಕರ್ಮಗಳ ಭೇದಗಳಿಗನುಗುಣವಾಗಿ ಮನುಷ್ಯಸಂಬಂಧ ಕರ್ಮಗಳಿಗೆ ನಿವೀತಿಯೆಂದೂ, ಪಿತೃ/ಪ್ರೇತ ಸಂಬಂಧ ಕರ್ಮಗಳಿಗೆ ಪ್ರಾಚೀನಾವೀತಿಯೆಂದೂ ಮತ್ತು ದೇವತಾಸಂಬಂಧ ಕರ್ಮಗಳಿಗೆ ಉಪವೀತಿಯೆಂದೂ ಮತ್ತೂ ಪಿತೃಕರ್ಮವನ್ನು ದಕ್ಷಿಣಕ್ಕೇ ಮುಗಿಯುವಂತೆ(ವೃದ್ಧಿಯಾಗುವಂತೆ) ಮಾಡಬೇಕೆಂದು ಆದೇಶವನ್ನು ನೀಡಿದೆ. ಹಾಗೆಯೇ

ಆಪಸ್ತಂಬ ಗೃಹ್ಯಸೂತ್ರದಲ್ಲಿ.....,

ಪ್ರಸವ್ಯಮ್ । ದಕ್ಷಿಣತೋಽಪವರ್ಗಃ ॥

ಎಂದು ಹೇಳುತ್ತಾ, ಪಿತೃಕರ್ಮಗಳನ್ನು ಅಪ್ರದಕ್ಷಿಣೆಯಾಗಿ ಮಾಡಬೇಕು । ಹಾಗೆಯೇ ಪಿತೃಕಾರ್ಯಗಳನ್ನು ದಕ್ಷಿಣದ ಕಡೆಗೇ ಸಮಾಪ್ತಿಗೊಳಿಸಬೇಕು ಎಂದು ಸೂಚಿಸಿದೆ ॥

ಸ್ಮೃತಿಗ್ರಂಥದಲ್ಲಿ.....,

ಪ್ರಾಕ್ಶಾಂತಿ ಕರ್ಮಣಃ ಪ್ರಾಚೀನಾವೀತಂ ದಕ್ಷಿಣಾಮುಖತ್ವಂ । ಸಂಕಲ್ಪಪ್ರಭೃತಿ ದಶಾಹ ಹೋಮಾತ್ಪ್ರಾಚೀನೇಷು ಕರ್ಮಸು ಪ್ರಾಚೀನಾವೀತೀ ದಕ್ಷಿಣಾಮುಖಶ್ಚ ಭವೇತ್ ಕರ್ತಾ । 'ಪ್ರಾಚೀನಾವೀತಂ ಪಿತೃಣಾಂ', ಇತಿ ಶ್ರುತೇಃ ॥ ಪಿತೃಣಾಮಿತಿ ಮೃತಾನಾಮೇವೇದಮಿತಿ । ಪಿತೃಕಾರ್ಯೇಷ್ವಪಿ ಪ್ರಾಚೀನಾವೀತಪ್ರಾಪ್ತ್ಯರ್ಥಂ ಚ, ಪಿತೃಗ್ರಹಣಮ್ ॥

ಶಾಂತಿಕರ್ಮಗಳಿಗೆ ಮೊದಲು ಪ್ರಾಚೀನಾವೀತಿಯಾಗಿ ದಕ್ಷಿಣದಿಕ್ಕಿಗೆ ತಿರುಗ ಬೇಕು । ಸಂಕಲ್ಪದಿಂದ ಪ್ರಾರಂಭಿಸಿ 10 ನೇ ದಿನದ ಹೋಮದವರೆಗೂ ಮಾಡುವ ಕರ್ಮಗಳಲ್ಲಿ ಪ್ರಾಚೀನಾವೀತ ಮತ್ತು ದಕ್ಷಿಣಾಭಿಮುಖವೇ ಆದ್ಯತೆಯು । 'ಪಿತೃಗಳ ಕರ್ಮಗಳಿಗೆ ಪ್ರಾಚೀನಾವೀತಿಯು', ಎಂದು ವೇದದಲ್ಲಿ ಹೇಳಿದೆ । ಪಿತೃಗಳಿಗೆ ಎಂದರೆ, ಸತ್ತಿರುವವರಿಗೆ ಎಂದು ಅರ್ಥ । ಪಿತೃಶಬ್ದವನ್ನು ಬಳಸಿರುವುದು ಪಿತೃಕಾರ್ಯಗಳಲ್ಲಿ ಪ್ರಾಚೀನಾವೀತವನ್ನು ಮಾಡಿಕೊಳ್ಳಬೇಕೆಂದು ತಿಳಿಯುವುದಕ್ಕಾಗಿ ॥

ಶುನಃಪುಚ್ಛರೆಂಬ ಋಷಿಗಳು.....,

ಪ್ರೇತಕೃತ್ಯೇಷು ಪಿತ್ರ್ಯೇಷು ಪ್ರಾಚೀನಾವೀತಮಿಷ್ಯತೇ ।
ದಕ್ಷಿಣಾಗ್ರಾಶ್ಚ ದರ್ಭಾಸ್ಯುಃ ಸ ಚ ವೈ ದಕ್ಷಿಣಾಮುಖಃ ॥

ಮರಣದಿನದಿಂದ ಮಾಡುವ ಪಿತೃಕಾರ್ಯಗಳಲ್ಲಿ ಪ್ರಾಚೀನಾವೀತವನ್ನು ಮಾಡಿಕೊಳ್ಳಬೇಕು । ದಕ್ಷಿಣಾಗ್ರವಾಗಿ ದರ್ಭೆಗಳನ್ನು ಇಡಬೇಕು, ಕರ್ತೃವು ದಕ್ಷಿಣಾಭಿಮುಖವಾಗಿ ಈ ಕರ್ಮವನ್ನು ಮಾಡಬೇಕು ॥ ಎಂದು ತಿಳಿಸುತ್ತಿದ್ದರೆ,

ಮನುಮಹರ್ಷಿಗಳೂ ಕೂಡ.....,

ಪ್ರಾಚೀನಾವೀತಿನಾ ಸರ್ವಮಪಸವ್ಯಮತಂದ್ರಿಣಾ ।
ಪಿತೃಮಾನಿಧನಾತ್ ಕಾರ್ಯಂ ವಿಧಿವತ್ ದರ್ಭಪಾಣಿನಾ ।
ಆನಿಧನಾತ್ – ಮರಣಮಾರಭ್ಯೇತ್ಯರ್ಥಃ ॥

ತಂದೆತಾಯಿಗಳ ಮರಣದಲ್ಲಿ ಕೈಗೆ 1 ದರ್ಭೆಯ ಪವಿತ್ರವನ್ನು ಹಾಕಿಕೊಂಡು, ದಕ್ಷಿಣಾಭಿಮುಖನಾಗಿ, ಸತ್ತದಿನದಿಂದ ಪ್ರಾಚೀನಾವೀತಿಯಾಗಿ ಮಾಡಬೇಕು ॥ ಆನಿಧನಾತ್ ಎಂದರೆ ಸತ್ತದಿನದಿಂದ ಎಂದು ಅರ್ಥ ॥ ಎಂದು ತಿಳಿಸುತ್ತಿದ್ದಾರೆ.

ಬೋಧಾಯನರೂ ಸಹಾ.....,

ಪ್ರಾಚೀನಾವೀತಿನಾ ಕಾರ್ಯಂ ಪ್ರೇತಕರ್ಮ ಚ ಪೈತೃಕಮ್ ।
ನಿವೀತಿನೋ ವಹೇಯುಸ್ತೇ ಜ್ಞಾತಯೋऽನ್ಯೇ ಚ ವಾಹಕಾಃ ॥

ಮರಣದಿನದಿಂದ ಮಾಡುವ ಪಿತೃಕರ್ಮವನ್ನು ಪ್ರಾಚೀನಾವೀತಿಯಿಂದಲೇ ಮಾಡಬೇಕು । ಶವವನ್ನು ಹೊರುವವರು ಹಾರದಂತೆ(ನಿವೀತ) ಯಜ್ಞೋಪವೀತವನ್ನು ಹಾಕಿಕೊಂಡು ಹೊರಬೇಕು ॥ ಎಂದಿದ್ದಾರೆ.

ಇಷ್ಟೇ ಅಲ್ಲದೇ.....,

ವೆಂಕಟರಾಮಾವಧಾನಿಗಳ ಗ್ರಂಥದಲ್ಲಿಯೂ, ಈ ಪ್ರೇತಾಗ್ನಿ ಪುನಸ್ಸಂಧಾನವನ್ನು ಪ್ರಾಚೀನಾವೀತಿ–ಅಪ್ರದಕ್ಷಿಣೆ–ದಕ್ಷಿಣಾಪವರ್ಗ, ಕ್ರಮದಲ್ಲಿಯೇ ತಿಳಿಸಿದ್ದಾರೆ. ಮತ್ತೂ ಯಲ್ಲಾಜೀಯ ಗ್ರಂಥದಲ್ಲೂ ಇದಕ್ಕೆ ಪೂರವಾಗಿಯೇ ಇದೆ. ಹಾಗೆಯೇ ಕಪರ್ದಿಸ್ವಾಮಿಗಳ ಕಾರಿಕಾವಳಿಯ 17 ನೇ ಕಾರಿಕೆಯಿಂದ 23 ನೇ ಕಾರಿಕೆಯವರೆಗಿನ ವಿಷಯದಲ್ಲೂ ಅವರು ಇದನ್ನೇ ಹೇಳುತ್ತಿದ್ದಾರೆ.

ಇವೆಲ್ಲದರ ಜೊತೆಗೆ.....,

ವೈದ್ಯನಾಥೀಯ ಸ್ಮೃತಿಮುಕ್ತಾಫಲ ಶ್ರಾದ್ಧಕಾಂಡದಲ್ಲಿ ಅವರು ಬೋಧಾಯನ ಮತ್ತು ಆಪಸ್ತಂಬರ ಮೂಲ ಆಧಾರವಾಕ್ಯಗಳನ್ನೇ ತಿಳಿಸುತ್ತಾ, ಈ ಪ್ರೇತಾಗ್ನಿ ಪುನಸ್ಸಂಧಾನದ ವಿಧಾನವನ್ನೇ ತಿಳಿಸುತ್ತಿದ್ದಾರೆ. ಅದನ್ನೂ ನಾವು ಈ ಮುಂದೆ ನಮೂದಿಸಿದ್ದೇವೆ.

ಇಷ್ಟೆಲ್ಲಾ ಆಧಾರವಾಕ್ಯಗಳು ಇದ್ದರೂ ಸಹಾ, ಈ ಪ್ರೇತಾಗ್ನಿ ಸಂಧಾನದಲ್ಲಿ – ಎಷ್ಟು ಮಂತ್ರಗಳು ಎಂಬ ವಿಷಯದಲ್ಲಿ ಮತ್ತೂ ಉಪವೀತಿಯಾ, ಪ್ರಾಚೀನಾವೀತಿಯಾ ಎಂಬ ವಿಷಯದಲ್ಲಿ ಮತ್ತೂ ಔಪಾಸನ ಹೋಮದ ಆಹುತಿ ಮಂತ್ರಗಳನ್ನು ಹೇಳಬೇಕಾ, ಬೇಡವಾ ಎಂಬ ವಿಷಯದಲ್ಲಿ, ಎಷ್ಟೆಲ್ಲಾ ಗೊಂದಲಗಳು ಇರುವುದು ಸೋಜಿಗವೇ ಸರಿ!!.

ಆದರೆ ಒಂದಂತೂ ಸತ್ಯ, ಯಾವುದೇ ವಿಷಯದಲ್ಲಾರೂ, 'ಸರಿ–ತಪ್ಪುಗಳ' ಜಿಜ್ಞಾಸೆಗೆ ಭಗವಂತನ ಅಭಿಪ್ರಾಯವೇ ಆದ ಶಾಸ್ತ್ರಗಳಲ್ಲಿಯೇ ಉತ್ತರ ಕಂಡುಕೊಳ್ಳಬೇಕೇ ಹೊರತು ಬೇರೇ ಮಾರ್ಗವಿಲ್ಲ.! ಮತ್ತೂ ಆ ಉತ್ತರಕ್ಕೇ–ಅಭಿಪ್ರಾಯಕ್ಕೇ, ಎಲ್ಲರೂ ಗೌರವ ಕೊಡಲೇಬೇಕಾದದ್ದೂ ಸೂಕ್ತವೇ ಆಗಿರುತ್ತದೆ.!!!!!!

ವೈದ್ಯನಾಥೀಯೇ ಗೃಹ್ಯಸಂಗ್ರಹಕಾರಃ –

ತತ್ರ ಪ್ರೇತಾಧಾನಸ್ವರೂಪಂ ಆಹ । ಅಥಾತಃ ಪ್ರೇತಾಧಾನವಿಧಿಂ ವ್ಯಾಖ್ಯಾಸ್ಯಾಮೋ ವಿಚ್ಛಿನ್ನಾಗ್ನ್ಯಾದಿ ಮರಣೇ, ಪ್ರಾಚೀನಾವೀತೀ, ಅಗ್ನ್ಯಾಯತನಾನ್ಯುದ್ಧೃತ್ಯ, ಅವೋಕ್ಷ್ಯ, ವಿಹಾರಂ ಕಲ್ಪಯಿತ್ವಾ । ಪ್ರೇತಸ್ಯ ದಕ್ಷಿಣಂ ಹಸ್ತಂ ಅರಣ್ಯೋರನ್ವಾರಂಭಯಿತ್ವಾ । ಯಸ್ಯಾಗ್ನಯೋ ಜುಹ್ವತೋ ಮಾಂ ಸಕಾಮಾಃ ಸಂಕಂಪಯಂತೇ ಯಜಮಾನಂ ಮಾಂ ಸಂಜಾನಂತು ತೇ ಹವಿಷೇ ಸಾದಿತಾಯ ಸ್ವರ್ಗಂ ಲೋಕಂ ಪ್ರೇತಂ ನಯಂತ್ವಿತಿ ಮಥಿತ್ವಾ, ಗಾರ್ಹಪತ್ಯಾಯತನೇ ನಿಧಾಯ । ತೂಷ್ಣೀಂ ವಿಹೃತ್ಯ, ದಕ್ಷಿಣಾಗ್ನಿಂ ತತ ಆಹವನೀಯಂ ಪ್ರಣೀಯ । ದ್ವಾದಶಗೃಹೀತೇನ ಸ್ರುಚಂ ಪೂರಯಿತ್ವಾ,

ಪ್ರಜಾಪತಿಂ ಮನಸಾ ಧ್ಯಾಯನ್, ಆಹವನೀಯೇ ಜುಹುಯಾತ್ । ತತಃ ಸಂಸ್ಕಾರೋಪಕ್ರಮಃ ।

ಇಲ್ಲಿ ಅನಾಹಿತಾಗ್ನಿಗಳ ಹಾಗೂ ಆಹಿತಾಗ್ನಿಗಳ ಪ್ರೇತಾಧಾನದ ಸ್ವರೂಪವನ್ನು ಹೇಳುತ್ತೇವೆ. ಅನಂತರ – ಅಗ್ನಿಯು ವಿಚ್ಛಿನ್ನವಾದ ಸಮಯದಲ್ಲಿ ಮರಣವು ಬಂದರೆ, ಆಗ ಪ್ರಾಚೀನಾವೀತಿಯಾಗಿ ಅಗ್ನಿಯನ್ನು ಉಪಸಮಾಧಾನ ಮಾಡುವ ಸ್ಥಳವನ್ನು ಅಗೆದು, ಶುದ್ಧಿಗೊಳಿಸಿ, ಪ್ರೋಕ್ಷಿಸಿ, ಅಗ್ನಿಯ ವಿಹಾರ(ಕುಂಡ)ವನ್ನು ಮಾಡಿ. ಮೃತನ ಬಲಕೈಯಿಂದ ಅರಣಿಗಳನ್ನು ಮುಟ್ಟಿಸಿಕೊಂಡು, ಈ ಮೇಲೆ ಹೇಳಿದ **"ಯಸ್ಯಾಗ್ನಯಃ ಜುಹ್ವತಃ ಮಾಂ ಸಕಾಮಾಃ ಸಂಕಂಪಯಂತೇ ಯಜಮಾನಂ ಮಾಂ ಸಂಜಾನಂತು ತೇ ಹವಿಷೇ ಸಾದಿತಾಯ ಸ್ವರ್ಗಂ ಲೋಕಂ ಪ್ರೇತಂ ನಯಂತು"**, ಈ ಮಂತ್ರವನ್ನು ಹೇಳಿ, ಅಗ್ನಿಯ ಮಥನವನ್ನು ಮಾಡಿ, ಗಾರ್ಹಪತ್ಯ ವೇದಿಯಲ್ಲಿ ಆ ಅಗ್ನಿಯನ್ನಿಟ್ಟು, ಅಮಂತ್ರಕವಾಗಿ, ದಕ್ಷಿಣಾಗ್ನಿ ಮತ್ತು ಆಹವನೀಯಗಳಿಗೆ ಅಗ್ನಿ ವಿಹರಣವನ್ನು ಮಾಡಿ ಹಾಗೂ ಪ್ರಣಯನವನ್ನು(ಇಟ್ಟು) ಮಾಡಿ. 12 ಸಲ ತುಪ್ಪವನ್ನು ಸ್ರುಕ್ಕಿಗೆ ಹಾಕಿಕೊಂಡು, ಪ್ರಜಾಪತಿಯನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾ, ಆಹವನೀಯಾಗ್ನಿಯಲ್ಲಿ ಹೋಮಿಸಬೇಕು. ನಂತರ ಔರ್ಧ್ವದೈಹಿಕ ಸಂಸ್ಕಾರವನ್ನು ಆರಂಭಿಸಬೇಕು ।

ಆತ್ಮಾರೂಢೇಷ್ವಗ್ನಿಷು ದಕ್ಷಿಣಂ ಪಾಣಿಂ ಲೌಕಿಕೇऽಗ್ನೌ ವಿಧಾಯಾಧ್ವರ್ಯುಃ ಉಪಾವರೋಹೇತ್ಯವರೋಹಯೇತ್ । ತಂತ್ರೇಧಾ ಕೃತ್ವಾ, ದಾಹಯೇತ್ । ಅರಣ್ಯಾರೂಢೇಷು ತು ಮೃತಸ್ಯ ದಕ್ಷಿಣೇನ ಪಾಣಿನಾ ಅರಣಿಂ ಸ್ಪರ್ಶಯಿತ್ವಾ ಮಥಿತ್ವಾऽವರೋಹಯೇತ್ । ಆತ್ಮಸಮಾರೂಢೇಷ್ವಗ್ನಿಷು ಪತ್ನೀಮರಣೇ ಸ್ವಯಮೇವಾವರೋಹಯೇತ್ । ತಂತ್ರೇಧಾ ಕೃತ್ವಾ ದಾಹಯೇತ್ । ಶರೀರನಾಶೇ ಪಲಾಶಪರ್ಣೈಃ ಸಮೂಲೈಃ ಕೃಷ್ಣಾಜಿನೇ ಪುರುಷಾಕೃತಿಂ ಕುಶೈರ್ವೇಷ್ಟಯಿತ್ವಾ, ವಿಧಿವದ್ದಹೇತ್ ।

ಒಂದುವೇಳೆ ಮೃತನು ಅಗ್ನಿಗಳನ್ನು ಆತ್ಮಸಮಾರೋಪ ಮಾಡಿಕೊಂಡಿದ್ದರೆ – ಮೃತನ ಬಲಗೈಯನ್ನು ಲೌಕಿಕಾಗ್ನಿಯಲ್ಲಿಟ್ಟು ಕಾಯಿಸಿ, ಅಧ್ವರ್ಯುವು ಅಥವಾ ಕರ್ತೃವು ಉಪಾವರೋಹ....., ಎಂಬ ಮಂತ್ರವನ್ನು ಹೇಳಿ, ಅಗ್ನಿಯ ಉಪಾವರೋಹಣವನ್ನು

ಇವೆಲ್ಲದರ ಜೊತೆಗೆ.....,

ವೈದ್ಯನಾಥೀಯ ಸ್ಮೃತಿಮುಕ್ತಾಫಲ ಶ್ರಾದ್ಧಕಾಂಡದಲ್ಲಿ ಅವರು ಬೋಧಾಯನ ಮತ್ತು ಆಪಸ್ತಂಬರ ಮೂಲ ಆಧಾರವಾಕ್ಯಗಳನ್ನೇ ತಿಳಿಸುತ್ತಾ, ಈ ಪ್ರೇತಾಗ್ನಿ ಪುನಸ್ಸಂಧಾನದ ವಿಧಾನವನ್ನೇ ತಿಳಿಸುತ್ತಿದ್ದಾರೆ. ಅದನ್ನೂ ನಾವು ಈ ಮುಂದೆ ನಮೂದಿಸಿದ್ದೇವೆ.

ಇಷ್ಟೆಲ್ಲಾ ಆಧಾರವಾಕ್ಯಗಳು ಇದ್ದರೂ ಸಹಾ, ಈ ಪ್ರೇತಾಗ್ನಿ ಸಂಧಾನದಲ್ಲಿ – ಎಷ್ಟು ಮಂತ್ರಗಳು ಎಂಬ ವಿಷಯದಲ್ಲಿ ಮತ್ತೂ ಉಪವೀತಿಯಾ, ಪ್ರಾಚೀನಾವೀತಿಯಾ ಎಂಬ ವಿಷಯದಲ್ಲಿ ಮತ್ತೂ ಔಪಾಸನ ಹೋಮದ ಆಹುತಿ ಮಂತ್ರಗಳನ್ನು ಹೇಳಬೇಕಾ, ಬೇಡವಾ ಎಂಬ ವಿಷಯದಲ್ಲಿ, ಎಷ್ಟೆಲ್ಲಾ ಗೊಂದಲಗಳು ಇರುವುದು ಸೋಜಿಗವೇ ಸರಿ!!.

ಆದರೆ ಒಂದಂತೂ ಸತ್ಯ, ಯಾವುದೇ ವಿಷಯದಲ್ಲಾರೂ, 'ಸರಿ–ತಪ್ಪುಗಳ' ಜಿಜ್ಞಾಸೆಗೆ ಭಗವಂತನ ಅಭಿಪ್ರಾಯವೇ ಆದ ಶಾಸ್ತ್ರಗಳಲ್ಲಿಯೇ ಉತ್ತರ ಕಂಡುಕೊಳ್ಳಬೇಕೇ ಹೊರತು ಬೇರೇ ಮಾರ್ಗವಿಲ್ಲ.! ಮತ್ತೂ ಆ ಉತ್ತರಕ್ಕೇ–ಅಭಿಪ್ರಾಯಕ್ಕೇ, ಎಲ್ಲರೂ ಗೌರವ ಕೊಡಲೇಬೇಕಾದದ್ದೂ ಸೂಕ್ತವೇ ಆಗಿರುತ್ತದೆ.!!!!!!

ವೈದ್ಯನಾಥೀಯೇ ಗೃಹ್ಯಸಂಗ್ರಹಕಾರಃ –

ತತ್ರ ಪ್ರೇತಾಧಾನಸ್ವರೂಪಂ ಆಹ । ಅಥಾತಃ ಪ್ರೇತಾಧಾನವಿಧಿಂ ವ್ಯಾಖ್ಯಾಸ್ಯಾಮೋ ವಿಚ್ಛಿನ್ನಾಗ್ನ್ಯಾದಿ ಮರಣೇ, ಪ್ರಾಚೀನಾವೀತೀ, ಅಗ್ನ್ಯಾಯತನಾನ್ಯುದ್ಧೃತ್ಯ, ಅವೋಕ್ಷ್ಯ, ವಿಹಾರಂ ಕಲ್ಪಯಿತ್ವಾ । ಪ್ರೇತಸ್ಯ ದಕ್ಷಿಣಂ ಹಸ್ತಂ ಅರಣ್ಯೋರನ್ವಾರಂಭಯಿತ್ವಾ । ಯಸ್ಯಾಗ್ನಯೋ ಜುಹ್ವತೋ ಮಾಂ ಸಕಾಮಾಃ ಸಂಕಂಪಯಂತೇ ಯಜಮಾನಂ ಮಾಂ ಸಂಜಾನಂತು ತೇ ಹವಿಷೇ ಸಾದಿತಾಯ ಸ್ವರ್ಗಂ ಲೋಕಂ ಪ್ರೇತಂ ನಯಂತ್ವಿತಿ ಮಥಿತ್ವಾ, ಗಾರ್ಹಪತ್ಯಾಯತನೇ ನಿಧಾಯ । ತೂಷ್ಣೀಂ ವಿಹೃತ್ಯ, ದಕ್ಷಿಣಾಗ್ನಿಂ ತತ ಆಹವನೀಯಂ ಪ್ರಣೀಯ । ದ್ವಾದಶಗೃಹೀತೇನ ಸ್ರುಚಂ ಪೂರಯಿತ್ವಾ,

ಪ್ರಜಾಪತಿಂ ಮನಸಾ ಧ್ಯಾಯನ್, ಆಹವನೀಯೇ ಜುಹುಯಾತ್ । ತತಃ ಸಂಸ್ಕಾರೋಪಕ್ರಮಃ ।

ಇಲ್ಲಿ ಅನಾಹಿತಾಗ್ನಿಗಳ ಹಾಗೂ ಆಹಿತಾಗ್ನಿಗಳ ಪ್ರೇತಾಧಾನದ ಸ್ವರೂಪವನ್ನು ಹೇಳುತ್ತೇವೆ. ಅನಂತರ – ಅಗ್ನಿಯು ವಿಚ್ಛಿನ್ನವಾದ ಸಮಯದಲ್ಲಿ ಮರಣವು ಬಂದರೆ, ಆಗ ಪ್ರಾಚೀನಾವೀತಿಯಾಗಿ ಅಗ್ನಿಯನ್ನು ಉಪಸಮಾಧಾನ ಮಾಡುವ ಸ್ಥಳವನ್ನು ಅಗೆದು, ಶುದ್ಧಿಗೊಳಿಸಿ, ಪ್ರೋಕ್ಷಿಸಿ, ಅಗ್ನಿಯ ವಿಹಾರ(ಕುಂಡ)ವನ್ನು ಮಾಡಿ. ಮೃತನ ಬಲಕೈಯಿಂದ ಅರಣಿಗಳನ್ನು ಮುಟ್ಟಿಸಿಕೊಂಡು, ಈ ಮೇಲೆ ಹೇಳಿದ **"ಯಸ್ಯಾಗ್ನಯಃ ಜುಹ್ವತಃ ಮಾಂ ಸಕಾಮಾಃ ಸಂಕಂಪಯಂತೇ ಯಜಮಾನಂ ಮಾಂ ಸಂಜಾನಂತು ತೇ ಹವಿಷೇ ಸಾದಿತಾಯ ಸ್ವರ್ಗಂ ಲೋಕಂ ಪ್ರೇತಂ ನಯಂತು"**, ಈ ಮಂತ್ರವನ್ನು ಹೇಳಿ, ಅಗ್ನಿಯ ಮಥನವನ್ನು ಮಾಡಿ, ಗಾರ್ಹಪತ್ಯ ವೇದಿಯಲ್ಲಿ ಆ ಅಗ್ನಿಯನ್ನಿಟ್ಟು, ಅಮಂತ್ರಕವಾಗಿ, ದಕ್ಷಿಣಾಗ್ನಿ ಮತ್ತು ಆಹವನೀಯಗಳಿಗೆ ಅಗ್ನಿ ವಿಹರಣವನ್ನು ಮಾಡಿ ಹಾಗೂ ಪ್ರಣಯನವನ್ನು(ಇಟ್ಟು) ಮಾಡಿ. 12 ಸಲ ತುಪ್ಪವನ್ನು ಸ್ರುಕ್ಕಿಗೆ ಹಾಕಿಕೊಂಡು, ಪ್ರಜಾಪತಿಯನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾ, ಆಹವನೀಯಾಗ್ನಿಯಲ್ಲಿ ಹೋಮಿಸಬೇಕು. ನಂತರ ಔರ್ಧ್ವದೈಹಿಕ ಸಂಸ್ಕಾರವನ್ನು ಆರಂಭಿಸಬೇಕು ।

ಆತ್ಮಾರೂಢೇಷ್ವಗ್ನಿಷು ದಕ್ಷಿಣಂ ಪಾಣಿಂ ಲೌಕಿಕೇsಗ್ನೌ ವಿಧಾಯಾಧ್ವರ್ಯುಃ ಉಪಾವರೋಹೇತ್ಯವರೋಹಯೇತ್ । ತಂತ್ರೇಧಾ ಕೃತ್ವಾ, ದಾಹಯೇತ್ । ಅರಣ್ಯಾರೂಢೇಷು ತು ಮೃತಸ್ಯ ದಕ್ಷಿಣೇನ ಪಾಣಿನಾ ಅರಣಿಂ ಸ್ಪರ್ಶಯಿತ್ವಾ ಮಥಿತ್ವಾsವರೋಹಯೇತ್ । ಆತ್ಮಸಮಾರೂಢೇಷ್ವಗ್ನಿಷು ಪತ್ನೀಮರಣೇ ಸ್ವಯಮೇವಾವರೋಹಯೇತ್ । ತಂತ್ರೇಧಾ ಕೃತ್ವಾ ದಾಹಯೇತ್ । ಶರೀರನಾಶೇ ಪಲಾಶಪರ್ಣೈಃ ಸಮೂಲೈಃ ಕೃಷ್ಣಾಜಿನೇ ಪುರುಷಾಕೃತಿಂ ಕುಶೈರ್ವೇಷ್ಟಯಿತ್ವಾ, ವಿಧಿವದ್ದಹೇತ್ ।

ಒಂದುವೇಳೆ ಮೃತನು ಅಗ್ನಿಗಳನ್ನು ಆತ್ಮಸಮಾರೋಪ ಮಾಡಿಕೊಂಡಿದ್ದರೆ – ಮೃತನ ಬಲಗೈಯನ್ನು ಲೌಕಿಕಾಗ್ನಿಯಲ್ಲಿಟ್ಟು ಕಾಯಿಸಿ, ಅಧ್ವರ್ಯುವು ಅಥವಾ ಕರ್ತೃವು ಉಪಾವರೋಹ....., ಎಂಬ ಮಂತ್ರವನ್ನು ಹೇಳಿ, ಅಗ್ನಿಯ ಉಪಾವರೋಹಣವನ್ನು

ಮಾಡಬೇಕು. ನಂತರ ಆ ಅಗ್ನಿಯನ್ನು ದಕ್ಷಿಣಾಗ್ನಿ ಮತ್ತು ಆಹವನೀಯಕ್ಕೆ ಅಮಂತ್ರಕವಾಗಿ ಹಾಕಿಕೊಂಡು, ಔರ್ಧ್ವದೈಹಿಕ ಕರ್ಮದಿಂದ ಮೃತನನ್ನು ಸುಡಬೇಕು. ಒಂದು ವೇಳೆ ಮೃತನು ಅರಣಿಸಮಾರೋಪ ಮಾಡಿದ್ದರೆ – ಮೃತನ ಬಲಗೈಯಿಂದ 2 ಅರಣಿಗಳನ್ನು ಮುಟ್ಟಿಸಿ, ನಂತರ ಮಥನಮಾಡಿ, ಅಗ್ನಿಯನ್ನು ಗಾರ್ಹಪತ್ಯದಲ್ಲಿಡಬೇಕು. ನಂತರ ದಕ್ಷಿಣಾಗ್ನಿ ಮತ್ತು ಆಹವನೀಯಕ್ಕೆ ಅಮಂತ್ರಕವಾಗಿ ಹಾಕಿಕೊಂಡು ವಿಧಿಯಂತೆ ಸುಡಬೇಕು. ಒಂದುವೇಳೆ ಆತ್ಮಸಮಾರೋಪಣ ಮಾಡಿದಾಗ – ಯಜಮಾನನ ಪತ್ನಿಯ ಮರಣ ಸಂಭವಿಸಿದರೆ, ತಾನೇ ಸ್ವಯಂ ಆಗಿ(ಯಜಮಾನನೆ) ಅಗ್ನಿಯನ್ನು ಉಪಾವಹರಣ ಮಾಡಬೇಕು. ನಂತರ ಗಾರ್ಹಪತ್ಯದಲ್ಲಿಟ್ಟು, ಅಮಂತ್ರಕವಾಗಿ ದಕ್ಷಿಣಾಗ್ನಿ ಮತ್ತು ಆಹವನೀಯದಲ್ಲಿ ಬೇರೆಬೇರೆ ಮಾಡಿ ಇಟ್ಟು ಔರ್ಧ್ವದೈಹಿಕಕರ್ಮದಿಂದ ಪತ್ನಿಯನ್ನು ಸುಡಬೇಕು. ಒಂದುವೇಳೆ ಮೃತನ ಶರೀರವು ನಾಶವಾದರೆ – ಬೇರುಸಹಿತವಾದ ಮುತ್ತುಗದ ಎಲೆಗಳಿಂದ ಕೃಷ್ಣಾಜಿನದ ಮೇಲೆ ಪುರುಷಾಕೃತಿಯನ್ನು ರಚಿಸಿ, ಅದನ್ನು ದರ್ಭೆಗಳಿಂದ ಸುತ್ತಿ, ನಂತರ ವಿಧಿವತ್ತಾಗಿ ದಹನ ಮಾಡಬೇಕು ।

ದೇಶಾಂತರ ಮರಣಶ್ರವಣೇ ಅಸಂಸ್ಕಾರಾದಗ್ನಿ ಸಂರಕ್ಷಣಾರ್ಥಂ ಅಗ್ನಿಹೋತ್ರಂ ಜುಹುಯಾತ್ । ಮೃತಿಶ್ರವಣಾನಂತರಂ ಪಾಥಿಕೃತೀಮಿಷ್ಟಿಂ ಪೂರ್ಣಾಹುತಿಂ ವಾ ಜುಹುಯಾತ್ । ತದರ್ಥಂ ವಿಹೃತ್ಯಾಜಸ್ರಾಂ ಕುರ್ಯಾತ್ । ಯಾ ಗೌರ್ಮ್ಯತವತ್ಸಾ ವತ್ಸಾಂತರೇಣ ದುಹ್ಯತೇ ತಾಂ ದೋಹಯಿತ್ವಾ । ಪ್ರಾಚೀನಾವೀತೀ ಪರಿಸ್ತರಣ ದರ್ಭಾನ್ ಪ್ರಾಗಗ್ರಾನ್ ದಕ್ಷಿಣಾಗ್ರಾನ್ ಸ್ತೃಣೀಯಾತ್ । ಗಾರ್ಹಪತ್ಯಸ್ಯ ದಕ್ಷಿಣಾರ್ಧೇ ಶೀತೇ ಭಸ್ಮನ್ನ್ಯಧಿಶ್ರಿತ್ಯ ದಕ್ಷಿಣತ ಉದ್ವಾಸ್ಯ, ಸಕೃದೇವ ಸರ್ವೇ ಪರಿಷೇಚನಾದಿ ವರ್ಜ್ಯಂ ತೂಷ್ಣೀಂ ಜುಹುಯಾತ್ । ಪ್ರೇತಂ ತೈಲದ್ರೋಣ್ಯಾಂ ಅವದಾಯ, ಶಕಟೇನ ಗ್ರಾಮಮರ್ಯಾದಾಮಾನಯೇತ್ ನಿರ್ಮಂಥ್ಯೇನ ವಾ ದಗ್ಧ್ವಾ । ಅಸ್ಥೀನಿ ಕೃಷ್ಣಾಜಿನೇ ಸಂನಹ್ಯ, ಬ್ರಹ್ಮಚಾರೀ ನಿಯತ ಭೋಜ್ಯಧಶ್ಶಾಯೀ ನಯೇತ್ । ತ್ರೇತಾಗ್ನಿಂ ನೀತ್ವಾ ದಹೇತ್ ಇತಿ ॥

ಒಂದುವೇಳೆ ದೇಶಾಂತರದಲ್ಲಿ ಮರಣವು ಸಂಭವಿಸಿ, ಅದು ಗೊತ್ತಾಗಲ್ಪಟ್ಟರೆ – ಆ ಮೃತನ ಸಂಸ್ಕಾರವಾಗುವವರೆಗೆ ಅವನ ಅಗ್ನಿಯನ್ನು ರಕ್ಷಣೆ ಮಾಡಬೇಕು ಹಾಗೂ ಅಲ್ಲಿಯವರೆಗೆ ಅಗ್ನಿಹೋತ್ರವನ್ನು ಮಾಡಬೇಕು. ದೇಶಾಂತರದ ಮರಣದ ಸುದ್ದಿಯು ತಿಳಿದ ತಕ್ಷಣ ಪಥಿಕೃತೇಷ್ಟಿ ಅಥವಾ ಅದರಸ್ಥಾನದಲ್ಲಿ ಪೂರ್ಣಾಹುತಿಯನ್ನು ಮಾಡಿ. ಈ ಕರ್ಮಗಳಿಗಾಗಿ ಅಗ್ನಿಯನ್ನು ದಕ್ಷಿಣಾಗ್ನಿಯ ಮತ್ತು ಆಹವನೀಯಾಗ್ನಿಗಳ ವೇದಿಗಳಲ್ಲಿ ಬೇರೆಬೇರೆಯಾಗಿ ಇಟ್ಟುಕೊಂಡು, ಔರ್ಧ್ವದೈಹಿಕ ಕರ್ಮಮುಗಿಯುವವರೆಗೆ ಅಜಸ್ರ(ನಿರಂತರ) ಧಾರಣೆ ಮಾಡಬೇಕು. ಯಾವ ಹಸುವಿನ ಕರುವು ಸಾಯಲ್ಪಟ್ಟಿರುವುದೋ ಅದರ ಹಾಲನ್ನು ಬೇರೇ ಕರುವಿನ ಸಹಾಯದಿಂದ ಕರೆದು. ಪ್ರಾಚೀನಾವೀತಿಯಾಗಿ, ಪರಿಸ್ತರಣ ದರ್ಭೆಗಳನ್ನು ಪೂರ್ವಕ್ಕೆ ಮತ್ತು ದಕ್ಷಿಣಕ್ಕೆ ಅಗ್ರ ಬರುವಂತೆ ಹಾಕಿ. ಗಾರ್ಹಪತ್ಯದ ದಕ್ಷಿಣಾರ್ಧ ಭಾಗದಲ್ಲಿ ಶೀತವಾದ ಭಸ್ಮದ ಮೇಲೆ ಆ ಹಾಲನ್ನಿಟ್ಟು, ದಕ್ಷಿಣಕ್ಕೆ ಉದ್ವಾಸನೆ ಮಾಡಿ, ಪರಿಷೇಚನ ಮುಂತಾದವುಗಳನ್ನು ಮಾಡದೇ, ಒಂದೇಸಲ ಅಮಂತ್ರಕವಾಗಿ ಆ ಹಾಲನ್ನು ಆಹವನೀಯದಲ್ಲಿ ಹೋಮಿಸಬೇಕು. ಮೃತನನ್ನು ಎಣ್ಣೆಯ ಪಾತ್ರೆಯಲ್ಲಿಟ್ಟು, ವಾಹನಗಳಿಂದ ಅವನ ಗ್ರಾಮದ ಗಡಿಯವರೆಗೆ ತಂದು, ಮಥನಾಗ್ನಿ(ತ್ರೇತಾಗ್ನಿ)ಗಳನ್ನು ಒಯ್ದು ಔರ್ಧ್ವದೈಹಿಕ ಕರ್ಮದಿಂದ ದಹಿಸಬೇಕು. ನಂತರ ಅವನ ಅಸ್ಥಿಗಳನ್ನು ಕೃಷ್ಣಾಜಿನದಲ್ಲಿ ಒಟ್ಟುಗೂಡಿಸಿ, ಬ್ರಹ್ಮಚರ್ಯವ್ರತವನ್ನು ಪಾಲಿಸುತ್ತಿರುವ ಬ್ರಹ್ಮಚಾರಿಯು ಒಯ್ಯಬೇಕು ॥

ವೈದ್ಯನಾಥೀಯೇ ಆಪಸ್ತಂಬಃ –

ಪ್ರೇತಾಗ್ನಿಸಂಧಾನಮಾಹ ಆಪಸ್ತಂಬಃ । ದ್ವಾದಶಗೃಹೀತೇನ ಸ್ರುಚಂ ಪೂರಯಿತ್ವಾ, ತೂಷ್ಣೀಂ ಹುತ್ವಾ । ಪ್ರೇತೇಮಾತ್ಯಾ ಇತ್ಯಾದಿ ಕರ್ಮ ಪ್ರತಿಪದ್ಯತ ಇತಿ । ತದ್ವ್ಯಾಖ್ಯಾನೇ ತು – ದ್ವಾದಶ ಗೃಹೀತೇನಾಜ್ಯೇನ ವ್ಯಾಹೃತೀಭಿರಯಾಶ್ಚೇತಿ ಮಂತ್ರೇಣ, ಅನಾಜ್ಞಾತ ತ್ರಯೇಣಚಾಗ್ನಿ ಸಿದ್ಧಿರಿತಿ, ಭೂರ್ಭುವಸ್ಸುವರಿತಿ ಸರ್ವಪ್ರಾಯಶ್ಚಿತ್ತಂ ಇದಂ ಸರ್ವತ್ರ ಕ್ರಿಯತ ಇತ್ಯಾಶ್ಮರಥ್ಯ ಇತಿ ಚ ಅನುಗತೇಽಪಿ ವೋತ್ತರಯಾ ಜುಹುಯಾದಿತಿ ಚ । ಅನಾಜ್ಞಾತಮಿತಿ ತಿಸ್ರೋಽನಾಜ್ಞಾತೇತಿ ಜುಹುಯಾದಿತಿ ಚಾಪಸ್ತಂಬೇನೋಕ್ತತ್ವಾದಿತಿ । ಅಗ್ನೌ ನಷ್ಟೇ ತ್ರಯಃ ಕೃಚ್ಛ್ರಾಃ

ಕರ್ತವ್ಯಾವತ್ಸರಂ ಪ್ರತಿ । ಉಕ್ತ ಕೃಚ್ಛ್ರಾಚರಣಂ ಚ ತತ್ತದತೀತ ಕಾಲಾನುಗುಣಂ ಕಾರ್ಯಂ ।

ಪ್ರೇತಾಗ್ನಿಸಂಧಾನವನ್ನು, ಆಪಸ್ತಂಬಮಹರ್ಷಿಗಳು ಈ ರೀತಿ ಹೇಳುತ್ತಾರೆ. 12 ಸಲ ತುಪ್ಪವನ್ನು ಸ್ರುಕ್ಕಿಗೆ ಹಾಕಿಕೊಂಡು, ಅಮಂತ್ರಕವಾಗಿ ಹೋಮಿಸಬೇಕು. ಪ್ರೇತನಿಗೆ ಸಂಬಂಧಿಸಿದ ವಿಧಿಗಳನ್ನು ಆರಂಭಿಸಬೇಕು(ಪ್ರೇತೇಮಾತ್ಯಾ ಇತ್ಯಾದಿ....). ಇದರ ವ್ಯಾಖ್ಯಾನದಲ್ಲಿ – 12 ಸಲ ತುಪ್ಪ ತೆಗೆದುಕೊಂಡು, ಪ್ರಜಾಪತಿ ದೇವತಾಕವಾಗಿ ಹೋಮಿಸಿ, ನಂತರ ಬಿಡಿಸಿದ ವ್ಯಾಹೃತಿಗಳಿಂದಲೂ, ಅಯಾಶ್ಚ ಮತ್ತು ಅನಾಜ್ಞಾತ ತ್ರಯಗಳಿಂದಲೂ ಮತ್ತು ಸರ್ವಪ್ರಾಯಶ್ಚಿತ್ತವಾಗಿ ಸಮಸ್ತ ವ್ಯಾಹೃತಿಗಳಿಂದಲೂ ಹೋಮಿಸಬೇಕು । ಈ ರೀತಿ ಎಲ್ಲಕಡೆಗಳಲ್ಲೂ ಮಾಡಿದಾಗ, ಅಗ್ನಿಸಿದ್ಧಿಯಾಗಿ ಔರ್ಧ್ವದೈಹಿಕ ಕರ್ಮವನ್ನು ಮಾಡಲು ಅರ್ಹನಾಗುತ್ತಾನೆ ಎಂದು ಆಶ್ಮರಥ್ಯ ಮುನಿಗಳು ಹೇಳುತ್ತಾರೆ ಹಾಗೂ ಮೃತನ ಅಗ್ನಿಯು ಅನುಗತ(ನಾಶ)ವಾಗಿದ್ದರೂ ಹೀಗೇ ಮಾಡಬೇಕೆಂದು ಹೇಳುತ್ತಾರೆ. ಇದಕ್ಕೆ ಆಪಸ್ತಂಬಮುನಿಗಳ ಪ್ರಮಾಣವೂ ಇದೆ. ಹೇಗೆಂದರೆ – ಅನಾಜ್ಞಾತವೆಂದರೆ ಅನಾಜ್ಞಾತಾದಿ 3 ಮಂತ್ರಗಳ ಹೋಮವೆಂದರ್ಥವೆಂದು ಆಪಸ್ತಂಬರು ಹೇಳಿದ್ದಾರೆ. ಅಗ್ನಿನಷ್ಟವಾಗಿ 1 ವರ್ಷವು ಕಳೆದಿದ್ದರೆ, ಕೃಚ್ಛ್ರತ್ರಯವನ್ನು ಮಾಡಿಕೊಳ್ಳಬೇಕು. ಇಲ್ಲಿ ಹೇಳಿದ ಕೃಚ್ಛ್ರಾಚರಣೆಯನ್ನು ಆಯಾಯಾ ಕಾಲಾತೀತಕ್ಕೆ ಅನುಗುಣವಾಗಿ ಮಾಡಬೇಕು ॥

ವೈದ್ಯನಾಥೀಯೇ ಬೋಧಾಯನಃ –

ಅಥ ಯದಿಯದಿ ಗೃಹಸ್ಥಸ್ಯ ಔಪಾಸನಾಗ್ನಿಃ ವಿಚ್ಛಿದ್ಯೇತ, ಪ್ರಾಣೇಷೂತ್ಕ್ರಾಂತೇಷು ಶ್ರೋತ್ರಿಯ ವಚನಾದುದ್ಧರೇತ್ । ಶ್ರೋತ್ರಿಯಾಗಾರಾತ್ ಆಹೃತ್ಯಾಗ್ನಿಮುಪಸಮಾಧಾಯ, ಸಂಪರಿಸ್ತೀರ್ಯಾಜ್ಯಂ ವಿಲಾಪ್ಯೋತ್ಪೂಯ । ಸ್ರುಕ್ ಸ್ರುವಂ ನಿಷ್ಪಪ್ಯ ಸಂಮೃಜ್ಯ । ಸ್ರುಚಿಂ ಚತುರ್ಗೃಹೀತಂ ಗೃಹೀತ್ವಾ, ಸಪ್ತ ತೇ ಅಗ್ನ....., ಇತಿ ಸಪ್ತವ್ಯಾಹೃತಿಭಿಶ್ಚ ಹುತ್ವಾ । ಪೂರ್ವಂ ದೇವಾ ಅಪರೇಣ ಪ್ರಾಣಾಪಾನಾವಿತಿ....., ದ್ವಾಭ್ಯಾಂ । ಮಾ ತ್ವಾ ವೃಕ್ಷೌ ಸಂಬಾಧಿಷ್ಟಾಂ ಮಾ ತ್ವಾ ವೃಕ್ಷೌ ಸಂಬಾಧೇಥಾಂ....., ಇತಿ ಚ ದ್ವಾಭ್ಯಾಂ । ಅಗ್ನೇಭ್ಯಾವರ್ತಿನ್ನಗ್ನೇ

ಅಂಗಿರಃ....., ಇತಿ ದ್ವಾಭ್ಯಾಂ ಏಕೈಕಂ ಪ್ರತಿ ಚತುರ್ಗೃಹೀತಂ ಗೃಹೀತ್ವಾ, ಜುಹೋತಿ । ನ ಬ್ರಹ್ಮಾ, ನ ಪ್ರಣೀತಾ, ನ ಚರುಃ, ನ ಸ್ವಿಷ್ಟಕೃತ್ । ಅತ ಊರ್ಧ್ವಂ ಪೈತೃಮೇಧಿಕಂ ಕರ್ಮ ಪ್ರತಿಪದ್ಯತೇ ಇತಿ ॥

ಬೋಧಾಯನರು ಮರಣಕಾಲದಲ್ಲಿ ಒಂದುವೇಳೆ ಗೃಹಸ್ಥನ ಔಪಾಸನಾಗ್ನಿಯು ವಿಚ್ಛಿನ್ನವಾಗಿದ್ದರೆ, ಶ್ರೋತ್ರಿಯರ ಮಾತನ್ನನುಸರಿಸಿ ಅಗ್ನಿಯನ್ನು ಪ್ರತಿಷ್ಠಾಪನೆ ಮಾಡಿಕೊಳ್ಳಬೇಕು. ಅಥವಾ ಶ್ರೋತ್ರಿಯರ ಮನೆಯಿಂದ ಅಗ್ನಿಯನ್ನು ತಂದು ಪ್ರತಿಷ್ಠೆ ಮಾಡಿಕೊಂಡು, ಪರಿಸ್ತರಣವನ್ನು ಪೂರ್ವಾಗ್ರ, ದಕ್ಷಿಣಾಗ್ರವಾಗಿ ಹಾಕಿಕೊಂಡು, ಅಮಂತ್ರಕವಾಗಿ ಆಜ್ಯದ ಸಂಸ್ಕಾರವನ್ನು ಮಾಡಿ. ಸ್ರುಕ್ ಸ್ರುವಗಳನ್ನು ಕಾಯಿಸಿ, ಸ್ರುಕ್ ಸ್ರುವಗಳ ಸಂಮಾರ್ಜನೆ ಮಾಡಿ. ಚತುರ್ಗೃಹೀತ ಆಜ್ಯದಿಂದ ಸಪ್ತ ತೇ ಅಗ್ನೇ....., ಎಂಬ ಮಂತ್ರದಿಂದ ಹಾಗೂ 7 ವ್ಯಾಹೃತಿಗಳಿಂದ ಹೋಮಿಸಿ. ಹಾಗೂ ಪೂರ್ವಂದೇವಾ..... ಮತ್ತು ಅಪರೇಣ ಪ್ರಾಣಾಪಾನೌ....., ಎಂಬ ಮಂತ್ರಗಳಿಂದ ಹಾಗೂ ಮಾತ್ವಾ ವೃಕ್ಷೌ ಸಂಬಾಧಿಷ್ಟಾಂ....., ಹಾಗೂ ಮಾತ್ವಾ ವೃಕ್ಷೌ ಸಂಬಾಧೇಥಾಂ....., ಎಂಬ 2 ಮಂತ್ರಗಳಿಂದ ಹಾಗೂ ಅಗ್ನೇಭ್ಯಾವರ್ತಿನ್....., ಹಾಗೂ ಅಗ್ನೇ ಅಂಗಿರಃ....., ಎಂಬ ಮಂತ್ರಗಳಿಂದ ಚತುರ್ಗೃಹೀತ ಆಜ್ಯದಿಂದ ಹೋಮಿಸಬೇಕು. ಇಲ್ಲಿ ಬ್ರಹ್ಮನ ವರಣೆ – ಪ್ರಣೀತಾಪಾತ್ರೆ – ಚರು – ಸ್ವಿಷ್ಟಕೃತ್, ಇವು ಯಾವುವೂ ಇರುವುದಿಲ್ಲ. ನಂತರ ಪೈತೃಮೇಧಿಕಕರ್ಮವನ್ನು ಆರಂಭಿಸಬೇಕು ॥

16. ಅಗ್ನಿನಷ್ಟದ ವಿಷಯ –

ಅಗ್ನೌ ನಷ್ಟೇ ತ್ರಯಃ ಕೃಚ್ಛ್ರಾಃ ಕರ್ತವ್ಯಾವತ್ಸರಂ ಪ್ರತಿ । ಇತ್ಯುಕ್ತ ಕೃಚ್ಛ್ರಾಚರಣಂ ಚ ತತ್ತದತೀತ ಕಾಲಾನುಗುಣಂ ಕಾರ್ಯಮ್ ॥

ಅಗ್ನಿಯು ನಾಶವಾದರೆ, 3 ಕೃಚ್ಛ್ರಗಳನ್ನು ಮಾಡಬೇಕು. ಈ ರೀತಿಯ ಕೃಚ್ಛ್ರಗಳನ್ನು ಕಾಲಾತೀತವಾದಾಗ ಮಾತ್ರ ಮಾಡಬೇಕು ॥

17. ಅಗ್ನಿಸಂಧಾನ ಭೇದಗಳು –

ಯತಿ ವ್ರತ್ಯೋಃ ಕಪಾಲಾಗ್ನಿಃ ತುಷಾಗ್ನಿಃ ಬಾಲ ಕನ್ಯಯೋಃ ।
ವಿಧುರಂ ವಿಧವಾಂ ಚೈವ ದಹೇದುತ್ತಪನಾಗ್ನಿನಾ ॥

ಸಂನ್ಯಾಸಿ – ಮಹಾ(ದೀರ್ಘ)ವ್ರತಗಳನ್ನು ಮಾಡಿದವರಿಗೆ ಕಪಾಲಾಗ್ನಿಯಲ್ಲಿಯೂ (ಮಡಿಕೆ), 8 ವರ್ಷದ ಒಳಗಿನ ಹುಡುಗ, ಹುಡುಗಿಯರಿಗೆ ತುಷಾಗ್ನಿಯಿಂದಲೂ (ಭತ್ತದಹೊಟ್ಟು). ವಿಧುರ – ವಿಧವೆಯರಿಗೆ ಉತ್ತಪನಾಗ್ನಿಯಿಂದಲೂ ಸಂಸ್ಕಾರ ಮಾಡಬೇಕು ॥

18. ಉತ್ತಪನಾಗ್ನಿ ಸಂಧಾನ ಕ್ರಮ –

ದರ್ಭಮುಷ್ಟಿಂ ಪ್ರದೀಪ್ಯಾಗ್ನೌ ಲೌಕಿಕೇ ತತ್ರಚಾಪರಂ ।
ತತ್ರಾಪ್ಯಗ್ನಿಸ್ತೃತೀಯಸ್ಥೋ ವಹ್ನಿರುತ್ತಪನಸ್ಸ್ಮೃತಃ ॥

ಮೊದಲು ದರ್ಭೆಗಳನ್ನು ಲೌಕಿಕಾಗ್ನಿಯಲ್ಲಿ ಹೊತ್ತಿಸಿಕೊಂಡು, ಅದರಿಂದ ಇನ್ನೊಂದುಮುಷ್ಟಿ ದರ್ಭೆಗಳಿಗೆ ಹೊತ್ತಿಸಿಕೊಂಡು. ಅದರಿಂದಲೂ 3 ನೇ, ದರ್ಭೆಗಳಮುಷ್ಟಿಗೆ ಹತ್ತಿಸಿಕೊಂಡು ಅದರಿಂದ ಅಗ್ನಿಯನ್ನು ಸ್ಥಾಪಿಸಿಕೊಳ್ಳುವುದಕ್ಕೆ, ಉತ್ತಪನಾಗ್ನಿ ಎಂದು ಹೆಸರು ॥

ಪ್ರಾಚೀನಾವೀತಿನಾ .....ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ (ದಾಯಾಃ/ನಾಮ್ನ್ಯಃ), ಪಿತುಃ(ಮಾತುಃ) ಪ್ರೇತಸ್ಯ(ಪ್ರೇತಾಯಾಃ) ಪೈತೃಮೇಧಿಕೇನ ವಿಧಿನಾ ಸಂಸ್ಕಾರಾರ್ಥಂ ಉತ್ತಪನಾಗ್ನಿಸಂಧಾನಂ ಕರಿಷ್ಯೇ ಇತಿ ಸಂಕಲ್ಪ್ಯ । ಕೃಚ್ಛ್ರಂ ಚರಿತ್ವಾ । ಪ್ರಾಚೀನಾವೀತಿನಾ, ಉಕ್ತ ಪ್ರಕಾರೇಣಾಗ್ನಿ ಉತ್ಪಾದಯಿತ್ವಾ । ಉದ್ಧತ್ಯಾವೋಕ್ಷ್ಯ । ಅಗ್ನಿಂ ಪ್ರತಿಷ್ಠಾಪ್ಯ । ಪರಿಸ್ತರಣಾದಿ ದರ್ವೀಸಂಸ್ಕಾರಾಂತಂ ಕೃತ್ವಾ । ಪ್ರಾಚೀನಾವೀತಿನಾ, ತೂಷ್ಣೀಂ ಅಪ್ರದಕ್ಷಿಣಂ

ಪರಿಷಿಚ್ಯ । ದ್ವಾದಶ ಗೃಹೀತೇನ ಸ್ರುಚಂ ಪೂರಯಿತ್ವಾ, ಪ್ರಜಾಪತಿಂ ಮನಸಾಧ್ಯಾಯನ್ ತೂಷ್ಣೀಂ ಹುತ್ವಾ । ಅನಾಜ್ಞಾತ ತ್ರಯಂ ಭೂರಾದಿ ಚತುಷ್ಟಯಮ್ । ಸಂಭಾವಿತ – ದೋಷಪ್ರಾಯಶ್ಚಿತ್ತಾರ್ಥಂ, ಓಂಭೂರ್ಭುವ–ಸ್ಸುವಸ್ವಾಹಾ । ಪ್ರಜಾಪತಯ ಇದಂ । ಇತ್ಯುತ್ತಪನಾಗ್ನಿಸಂಧಾನಂ ॥

ಪ್ರಾಚೀನಾವೀತಿಯಾಗಿ, ಈ ಮೇಲಿನಂತೆ, ನನ್ನ ಮೃತತಂದೆಯನ್ನು ಪೈತೃಮೇಧಿಕ ವಿಧಿಯಿಂದ ಸಂಸ್ಕಾರಮಾಡಲು, ಉತ್ತಪನಾಗ್ನಿಯ ಸಂಧಾನವನ್ನು ಮಾಡುತ್ತೇನೆಂದು ಸಂಕಲ್ಪಿಸಬೇಕು । ಕೃಚ್ಛ್ರಾಚರಣೆಯನ್ನು ಮಾಡಿ । ಪ್ರಾಚೀನಾವೀತಿಯಾಗಿ, ಉತ್ತಪನಾಗ್ನಿಯನ್ನು ಮಾಡಿಕೊಂಡು, ಪ್ರತಿಷ್ಠೆಮಾಡಿ । ಪರಿಸ್ತರಣಾದಿ, ದರ್ವಿಸಂಸ್ಕಾರದವರೆಗೂ ಪ್ರಯೋಗ ಮಾಡಬೇಕು । ಪ್ರಾಚೀನಾವೀತಿಯಾಗಿ, ಅಪ್ರದಕ್ಷಿಣೆಯಾಗಿ, ಅಮಂತ್ರಕವಾಗಿ ಅಗ್ನಿಯನ್ನು ಪರಿಷೇಚಿಸಿ । 12 ಸಲ ತುಪ್ಪವನ್ನು ಸ್ರುಕ್ಕಿಗೆ ಹಾಕಿಕೊಂಡು, ಪ್ರಜಾಪತಿ ದೇವತೆಗಾಗಿ ಅಮಂತ್ರಕವಾಗಿ ಹೋಮಿಸಬೇಕು । ನಂತರ ಆನಾಜ್ಞಾತ 3 ಮಂತ್ರಗಳಿಂದಲೂ, ಬಿಡಿಸಿದ ವ್ಯಾಹೃತಿಗಳಿಂದಲೂ, ತುಪ್ಪದ ಹೋಮವನ್ನು ಮಾಡಬೇಕು । ಸರ್ವಪ್ರಾಯಶ್ಚಿತ್ತ ಹೋಮವನ್ನೂ ಪ್ರಜಾಪತಿದೇವತೆಗಾಗಿ ತುಪ್ಪದಿಂದ ಮಾಡಬೇಕು । ಇದು ಉತ್ತಪನಾಗ್ನಿಯ ಸಂಧಾನವು ॥

ಆಪಸ್ತಂಬಃ –

ಅಥ ಯದಿ ಉತ್ಸೃಷ್ಟಾಗ್ನಿಃ ವಿಧುರಾಗ್ನಿಃ ವಿಚ್ಛಿನ್ನಾಗ್ನಿರ್ವಾ ಪ್ರಮೀಯೇತ । ತಸ್ಯ ಪ್ರಾಚೀನಾವೀತ್ಯಗ್ನ್ಯಾಯತನಂ ಉದ್ಧತ್ಯಾವೋಕ್ಷ್ಯ । ಉಕ್ತ ಪ್ರಕಾರೇಣ ಅಗ್ನಿಮುತ್ಪಾದ್ಯ । ದ್ವಾದಶ ಗೃಹೀತೇನ ಸ್ರುಚಂ ಪೂರಯಿತ್ವಾ ಪ್ರಜಾಪತಿಂ ಮನಸಾ ಧ್ಯಾಯನ್ ತೂಷ್ಣೀಂ ಹುತ್ವಾ, ಪ್ರೇತೇಮಾತ್ಯಾ ಇತ್ಯಾದಿಕರ್ಮ ಪ್ರತಿಪದ್ಯತೇ ಇತಿ ॥

ಒಂದುವೇಳೆ ಅಗ್ನಿಯನ್ನು ಬಿಟ್ಟವನಾಗಿ ಅಥವಾ ವಿಧುರಾಗ್ನಿಯಿಂದ ಕೂಡಿದವನಾಗಿ ಅಥವಾ ವಿಚ್ಛಿನ್ನಾಗ್ನಿಯುಳ್ಳವನಾಗಿ ಸತ್ತರೆ । ಅವನಿಗೆ ಪ್ರಾಚೀನಾವೀತಿಯಿಂದ ಅಗ್ನ್ಯಾಯತನ(ಅಗ್ನಿಯಿರುವ ಜಾಗ)ವನ್ನು ಅಗೆದು, ಪ್ರೋಕ್ಷಣೆಮಾಡಿ । ಮೇಲೆಹೇಳಿದ ರೀತಿಯಿಂದ ಅಗ್ನಿಯನ್ನು ಉತ್ಪಾದನೆ ಮಾಡಿ

ಕೊಂಡು । 12 ಸಲ ತುಪ್ಪವನ್ನು ತೆಗೆದುಕೊಂಡು, ಪ್ರಜಾಪತಿಯನ್ನು ಮನಸ್ಸಿನಲ್ಲಿ ಧ್ಯಾನಿಸಿ, ಅಮಂತ್ರಕವಾಗಿ ಹೋಮಿಸಿ, ಪ್ರೇತೇಮಾತ್ಯಾ(ಪ್ರೇತಕರ್ಮವನ್ನು) ಆರಂಭಿಸಬೇಕು, ಎಂದು ಆಪಸ್ತಂಬರು ಹೇಳುತ್ತಾರೆ ॥

ಅಯಮುತ್ತಪನಾಗ್ನಿ ಸಂಸ್ಕಾರಃ – ತುಷಮಥಿತ ಕಪಾಲಾಗ್ನೀನಾಮಪಿ ಸಮಾನಃ । ಅತ್ರ ಬೋಧಾಯನ ಮಹರ್ಷಿಣಾ ಉತ್ತಪನಾಗ್ನಿ ವಿಧಾನಸ್ಥಲೇ ಪುರುಷಸೂಕ್ತೇನ ಹೋಮೋ ವಿಹಿತಃ । ತದಾಪಸ್ತಂಬಸ್ಯ ನಾಭಿಮತಂ । ಉತ್ತಪನಾಗ್ನಿ ಸಂಧಾನೇ ಕಪಾಲಾಗ್ನಿಸಂಧಾನೇ ತುಷಾಗ್ನಿಸಂಧಾನೇ ಚ ನಿತ್ಯೌಪಾಸನ ಹೋಮಸ್ಯ ವಿದ್ಧ್ಯಭಾವಾತ್ ನ ಕಾರ್ಯಃ ॥

ಈ ಉತ್ತಪನಾಗ್ನಿಯಿಂದ ಮಾಡಿದ ಸಂಸ್ಕಾರವು – ಭತ್ತದಹೊಟ್ಟಿನಿಂದ ಉತ್ಪತ್ತಿಮಾಡಿದ ಕಪಾಲಾಗ್ನಿಗೂ ಒಂದೇಸಮ । ಇಲ್ಲಿ, ಬೋಧಾಯನರು ಉತ್ತಪನಾಗ್ನಿ ವಿಧಾನಜಾಗದಲ್ಲಿ ಪುರುಷಸೂಕ್ತದಿಂದ ಹೋಮಿಸಬೇಕೆಂದಿದ್ದಾರೆ । ಆದರೆ ಆಪಸ್ತಂಬರಿಗೆ ಇದು ಒಪ್ಪಿಗೆ ಇಲ್ಲ । ಉತ್ತಪನಾಗ್ನಿ ಮತ್ತು ಕಪಾಲಾಗ್ನಿ ಮತ್ತು ತುಷಾಗ್ನಿಗಳ ಸಂಧಾನಗಳಲ್ಲಿ ನಿತ್ಯ ಔಪಾಸನ ಹೋಮಕ್ಕೆ ವಿಧಿಯಿಲ್ಲದಿರುವುದರಿಂದ ಮಾಡುವಂತಿಲ್ಲ ॥

19. ಕಪಾಲಾಗ್ನಿ ಸಂಧಾನ ಕ್ರಮ –

ಕಪಾಲಮಗ್ನೌ ನಿಕ್ಷಿಪ್ಯ ತಪ್ತಂ ಚೈವತು ನಿಕ್ಷಿಪೇತ್ ।
ಕರೀಷೇ ವಾ ಸಮುದ್ಭೂತಃ ತುಷೇತು ತುಷಪಾವಕಃ ॥

ಕಪಾಲಾಗ್ನಿ ವಿಷಯದಲ್ಲಿ, ಕಪಾಲ(ಮಡಿಕೆಯ ಚೂರು)ವನ್ನು ಅಗ್ನಿಗೆ ಹಾಕಿ, ಅದು ಸಂಪೂರ್ಣವಾಗಿ ಕಾಯುವವರೆಗೆ ಅಗ್ನಿಯಲ್ಲಿಯೇ ಇರಬೇಕು ಇದಕ್ಕೆ ಕಪಾಲಾಗ್ನಿ ಎನ್ನುತ್ತಾರೆ । ಬೆರಣಿಯಿಂದ ಉತ್ಪಾದನೆಯಾದ ಅಗ್ನಿಗೆ – ತುಷಾಗ್ನಿಯೆಂದು ಹೆಸರು ॥

ಸಂಕಲ್ಪಃ, (ಪ್ರಾಚೀನಾವೀತೀ) .....ಗೋತ್ರಸ್ಯ, ಪ್ರೇತಸ್ಯ ಪೈತೃಮೇಧಿಕೇನ ವಿಧಿನಾ ಸಂಸ್ಕಾರಾರ್ಥಂ ಕಪಾಲಾಗ್ನಿಸಂಧಾನಂ ಕರಿಷ್ಯೇ । ಕೃಚ್ಛ್ರಂ ಚರಿತ್ವಾ ।

ಕಪಾಲಮಗ್ನೌ ನಿಕ್ಷಿಪ್ಯ, ಕರೀಷಾದೀನ್ ಪ್ರಕ್ಷಿಪ್ಯ ಉದ್ಧತ್ಯ, ಅವೋಕ್ಷ್ಯ, ಕಪಾಲಾಗ್ನಿಂ ನಿಧಾಯ । ದ್ವಾದಶ ಗೃಹೀತೇನ ಸ್ರುಚಂ ಪೂರಯಿತ್ವಾ ಪ್ರಜಾಪತಿಂ ಮನಸಾ ಧ್ಯಾಯನ್ ತೂಷ್ಣೀಂ ಹುತ್ವಾ । ಅನಾಜ್ಞಾತತ್ರಯಂ – ಭೂರಾದಿ ಚತುಷ್ಟಯಂ – ಸಂಭಾವಿತ.....ಸರ್ವಪ್ರಾಯಶ್ಚಿತ್ತಾಹುತಿಂ ಹೋಷ್ಯಾಮಿ, ಓಂ ಭೂರ್ಭುವಸ್ಸುವಸ್ಸಾಹಾ – ಪ್ರಜಾಪತಯ ಇದಂ ॥ ತುಷಾಗ್ನಿಸಂಧಾನಂ ಅಪ್ಯೇವಮೇವ ಕುರ್ಯಾತ್ ॥

ನಂತರ ಪ್ರಾಚೀನಾವೀತಿಯಾಗಿ, ಈ ಕೆಳಗಿನಂತೆ ಕಪಾಲಾಗ್ನಿ ಸಂಧಾನಕ್ಕಾಗಿ ಸಂಕಲ್ಪಿಸಿ, ಅದರ ಅಂಗವಾಗಿ ಮಾಡುವ ಕೃಚ್ಛ್ರಕ್ಕೂ ಸಂಕಲ್ಪಿಸಿ, ಕಪಾಲಾಗ್ನಿಯನ್ನು ಸ್ಥಂಡಿಲದ ಮೇಲಿಟ್ಟು, ಬೆರಣಿ ಮುಂತಾದವುಗಳನ್ನು ತೆಗೆದು, ಅಗ್ನಿಯನ್ನು ಜ್ವಲಿಸಿ । 12 ಸಲ ತುಪ್ಪದಿಂದ ಕೆಳಗಿನಂತೆ ಹೋಮಿಸಿ । ಮತ್ತೂ ಕೆಳಗಿನ ಪ್ರಾಯಶ್ಚಿತ್ತ ಮಂತ್ರಗಳಿಗೂ ಕೂಡ ಹೋಮಿಸುವುದು । ಈ ರೀತಿ ತುಷಾಗ್ನಿ ಸಂಧಾನವನ್ನೂ ಮಾಡಬೇಕು ॥

20. ಪ್ರೋಷಿತ ಭರ್ತೃ ಭಾರ್ಯಯೋಃ ಅಗ್ನಿಸಂಧಾನ ವಿಧಿಃ –

(ಪ್ರಾಚೀನವೀತೀ), ...ಗೋತ್ರಸ್ಯ, ...ಪ್ರೇತಸ್ಯ ಪೈತೃಮೇಧಿಕೇನ ವಿಧಿನಾ ಸಂಸ್ಕಾರಾರ್ಥಂ ಪ್ರೋಷಿತ ಭರ್ತೃಕಾ ಪ್ರಾಯಶ್ಚಿತ್ತ ಪುರಸ್ಸರಂ ಪ್ರೇತಾಗ್ನಿಸಂಧಾನಂ ಕರಿಷ್ಯೇ । ಉಪವೀತಿನಾ, ಅಗ್ನಿಪ್ರತಿಷ್ಠಾಪನಾದಿ ಅಯಾಶ್ಚ ಹೋಮಾಂತಂ ಕೃತ್ವಾ, ಪ್ರಾಚೀನಾವೀತಿನಾ, ಪ್ರತ್ಯೇಕಂ ಚತುರ್ಗೃಹೀತೇನ ಷೋಡಶಾಜ್ಯಾಹುತೀಃ ಜುಹುಯಾತ್ ॥

ಪ್ರಾಚೀನಾವೀತಿಯಾಗಿ, ಈ ಗೋತ್ರದ, ಈ ಹೆಸರಿನ, ನನ್ನ ತಂದೆಯ ಪ್ರೇತಕ್ಕೆ ಪೈತೃಮೇಧಿಕ ರೀತಿಯಿಂದ ಸಂಸ್ಕಾರವನ್ನು ಮಾಡಲು ಅಪತ್ನೀಕನು /ಜೊತೆಯಲ್ಲಿಲ್ಲದಿರುವವನು ಅಥವಾ ವಿಧುರನು ಅಥವಾ ವಿಧವೆಯು ಅಥವಾ ಗಂಡ ಬಿಟ್ಟವಳು, ಸಂಸ್ಕಾರವನ್ನು ಮಾಡುವ ರೀತಿಯನ್ನು ಪ್ರಾಯಶ್ಚಿತ್ತಪೂರ್ವಕವಾಗಿ ಪ್ರೇತಾಗ್ನಿಸಂಧಾನ ಮಾಡುತ್ತೇನೆ ಎಂದು ಸಂಕಲ್ಪಿಸುವುದು । ನಂತರ ಉಪವೀತಿಯಾಗಿ, ಮೇಲಿನಂತೆ, ಅಗ್ನಿಪ್ರತಿಷ್ಠಾಪನೆಯಿಂದ

ಅಯಾಶ್ಚಹೋಮ ಪರ್ಯಂತವಾಗಿ ಮಾಡಿ, ಆಮೇಲೆ ಪ್ರಾಚೀನಾವೀತಿಯಾಗಿ, ಪ್ರತಿ ಮಂತ್ರಕ್ಕೂ 4 ಸಲ ತುಪ್ಪದಿಂದ, ಕೆಳಗಿನ 15 ಮಂತ್ರಗಳಿಗೆ ಹೋಮಿಸಬೇಕು ॥

ಓಂ ಭೂಸ್ಸ್ವಾಹಾ । ಓಂ ಭುವಸ್ಸ್ವಾಹಾ । ಓಗ್ಂ ಸುವಸ್ಸ್ವಾಹಾ । ಓಂ ಮಹಸ್ಸ್ವಾಹಾ । ಓಂ ಜನಸ್ಸ್ವಾಹಾ । ಓಂ ತಪಸ್ಸ್ವಾಹಾ । ಓಗ್ಂ ಸತ್ಯಗ್ಂ ಸ್ಸ್ವಾಹಾ । ತತ್ತದ್ದೇವತಾಭ್ಯ ಇದಂ ॥

ಓಂ ಪೂರ್ವಂ ದೇವಾಃ । ಅಪರೇಣ । ಅನುಪಶ್ಯನ್ । ಜನ್ಮಭಿಃ ॥ ಜನ್ಮಾನ್ಯವರ್ಯೈಃ । ಪರಾಣಿ ॥ ವೇದಾನಿದೇವಾಃ । ಅಯಮಸ್ಮೀತಿ । ಮಾಂ ॥ ಅಹಂ ವಿತ್ವಾ । ಶರೀರಂ । ಜರಸಃ । ಪರಸ್ತಾತ್ ॥ ಸ್ವಾಹಾ – ದೇವೇಭ್ಯ ಇದಂ ।

ಓಂ ಪ್ರಾಣಾಪಾನೌ । ಚಕ್ಷುಃ । ಶ್ರೋತ್ರಂ ॥ ವಾಚಂ । ಮನಸಿ । ಸಂಭೃತಾಮ್ ॥ ಹಿತ್ವಾ । ಶರೀರಂ । ಜರಸಃ । ಪರಸ್ತಾತ್ ॥ ಆಭೂತಿಮ್ । ಭೂತಿಂ । ವಯಂ ಅಶ್ನವಾಮಹೈ ॥ ಸ್ವಾಹಾ – ಪ್ರಾಣಾದಿಭ್ಯ ಇದಂ ॥

ಓಂ ಮಾತ್ವಾವೃಕ್ಷಿ । ಸಂಬಾಧಿಷ್ಟಾಂ । ಮಾ ಮಾತಾ । ಪೃಥಿವಿ । ತ್ವಂ ॥ ಪಿತೄನ್ ಹ್ಯತ್ರ । ಗಚ್ಛಾಸ್ಯೇಧಾ ಸಂ । ಯಮರಾಜ್ಯೇ ಸ್ವಾಹಾ – ವೈವಸ್ವತಾಯೇದಂ ॥

ಓಂ ಮಾತ್ವಾವೃಕ್ಷಿ । ಸಂಬಾಧೇಥಾಂ । ಮಾ ಮಾತಾ । ಪೃಥಿವೀ । ಮಹೀ ॥ ವೈವಸ್ವತಂ । ಹಿ । ಗಚ್ಛಾಸಿ । ಯಮರಾಜ್ಯೇ । ವಿರಾಜಸಿ ಸ್ವಾಹಾ – ವೈವಸ್ವತಾಯೇದಂ ॥

ಓಂ ಅಗ್ನೇ । ಅಭ್ಯಾವರ್ತಿನ್ । ಅಭಿ ನಃ । ಆವರ್ತಸ್ವ । ಆಯುಷಾ । ವರ್ಚಸಾ ।

ಸನ್ಯಾ । ಮೇಧಯಾ । ಪ್ರಜಯಾ । ಧನೇನ ಸ್ವಾಹಾ ॥

ಓಂ ಅಗ್ನೇ ಅಂಗಿರಃ । ಶತಂ ತೇ । ಸಂತ್ವಾವೃಧಃ । ಸಹಸ್ರಂ ತೇ । ಉಪಾವೃತಃ ॥ ತಾ ಸಾಂ । ಪೋಷಸ್ಯ । ಪೋಷೇಣ । ಪುನರ್ನಃ । ನಷ್ಟಮಾ । ಕೃಧಿ । ಪುನರ್ನಃ । ರಯಿಮಾ । ಕೃಧಿ ಸ್ವಾಹಾ ॥

ಓಂ ಪುನರೂರ್ಜಾ । ನಿವರ್ತಸ್ವ । ಪುನರಗ್ನೇ । ಇಷಾಯುಷಾ ॥ ಪುನರ್ನಃ । ಪಾಹಿ । ವಿಶ್ವತಃ ಸ್ವಾಹಾ ॥

ಓಂ ಸಹರಯ್ಯಾ । ನಿವರ್ತಸ್ವ । ಅಗ್ನೇ ಪಿನ್ವಸ್ವ । ಧಾರಯಾ ॥ ವಿಶ್ವಪ್ಸ್ನಯಾ । ವಿಶ್ವತಸ್ಪರಿ ಸ್ವಾಹಾ ॥ ಚತುರ್ಣಾಂ ಅಗ್ನಯೇ ಅಭ್ಯಾವರ್ತಿನ ಇದಂ ॥

ಅನಾಜ್ಞಾತಾದಿ....., ಹೋಮಶೇಷಂ ಸಮಾಪ್ಯ । ಸಪ್ತ ತೇ..... ಘೃತೇನ ಸ್ವಾಹಾ – ಅಗ್ನಯೇ ಸಪ್ತವತ ಇದಂ ನಮಮ ॥ ಯಥಾವಿಧಿ ಸಂಸ್ಕುರ್ಯಾತ್ । ಇತಿ ಭರ್ತೃ ಭಾರ್ಯಯೋಃ ಅನ್ಯತರಾಸನ್ನಿಧಾನಮರಣೇ ಅಗ್ನಿಸಂಧಾನವಿಧಿಃ ॥

ನಂತರ ಅನಾಜ್ಞಾತ ಹೋಮಗಳನ್ನು ಮಾಡಿ । ಸಪ್ತ ತೇ ಹೋಮವನ್ನು ಮಾಡಿ । ಕರ್ಮವನ್ನು ಮುಗಿಸುವುದು । ಈ ರೀತಿಯಾಗಿ ಗಂಡಹೆಂಡತಿಯರಲ್ಲಿ ಒಬ್ಬರು ಗೈರುಹಾಜರಾದಾಗ ಅಗ್ನಿಸಂಧಾನವನ್ನು ಮಾಡುವುದು ॥

ಓಂ ಅನಾಜ್ಞಾತಂ । ಯದಾಜ್ಞಾತಂ । ಯಜ್ಞಸ್ಯ । ಕ್ರಿಯತೇ ಮಿಥು ॥ ಅಗ್ನೇ ತದಸ್ಯ । ಕಲ್ಪಯ । ತ್ವಗ್ಂ ಹಿ । ವೇತ್ಥ । ಯಥಾತಥಂ ॥ ಸ್ವಾಹಾ – ಅಗ್ನಯ ಇದಂ ನಮಮ ॥

ಓಂ ಪುರುಷ ಸಮ್ಮಿತಃ । ಯಜ್ಞಃ । ಯಜ್ಞಃ । ಪುರುಷ ಸಮ್ಮಿತಃ ॥ ಅಗ್ನೇ ತದಸ್ಯ । ಕಲ್ಪಯ । ತ್ವಂ । ಹಿ । ವೇತ್ಥ । ಯಥಾತಥಮ್ ॥ ಸ್ವಾಹಾ – ಅಗ್ನಯ ಇದಂ ನಮಮ ॥

ಓಂ ಯತ್ಪಾಕತ್ರಾ । ಮನಸಾ । ದೀನದಕ್ಷಾ ನ । ಯಜ್ಞಸ್ಯ । ಮನ್ವತೇ । ಮರ್ತಾಸಃ ॥ ಅಗ್ನಿಸ್ತತ್ । ಹೋತಾ । ಕ್ರತುವಿತ್ । ವಿಜಾನನ್ । ಯಜಿಷ್ಠಃ । ದೇವಾನ್ । ಋತುಷಃ । ಯಜಾತಿ ॥ ಸ್ವಾಹಾ – ಅಗ್ನಯ ಇದಂ ನಮಮ ॥

ಓಂ ಸಪ್ತ ತೇ । ಅಗ್ನೇ । ಸಮಿಧಃ । ಸಪ್ತಜಿಹ್ವಾಃ । ಸಪ್ತ ಋಷಯಃ । ಸಪ್ತಧಾಮ । ಪ್ರಿಯಾಣಿ ॥ ಸಪ್ತಹೋತ್ರಾಃ । ಸಪ್ತಧಾ ತ್ವಾ । ಯಜಂತು । ಸಪ್ತಯೋನೀಃ । ಆಪೃಣಸ್ವಾ । ಘೃನೇನ ॥ ಸ್ವಾಹಾ । ಅಗ್ನಯೇ ಸಪ್ತವತ ಇದಂ ನಮಮ ॥

21. ರಜಸ್ವಲಾದಿಮಧ್ಯೇ ಭರ್ತೃಮರಣೇ ಅಗ್ನಿಸಂಧಾನ ವಿಧಿಃ –

ಮ್ರಿಯಮಾಣಸ್ಯಚೇದ್ಭಾರ್ಯಾ ಸೂತಿಕರ್ತ್ರುಮತೀತು ವಾ ।
ದುರ್ಗಾಂ ಮನಸ್ವತೀಂ ಹುತ್ವಾ ತತಃ ತಂತುಮತೀಮೃಚಂ ।
ಉದ್ಬುಧ್ಯಸ್ವ ತ್ರಯಸ್ತ್ರಿಂಶತ್ ವ್ಯಾಹೃತ್ಯಾ ಚ ಸಮಸ್ತಯಾ ।
ವ್ಯಾಹೃತ್ಯಾತ್ರಿಃ ಅನಾಜ್ಞಾತಂ ಮಹಾವ್ಯಾಹೃತಿಭಿಃ ತಥಾ ।
ಹುತ್ವಾ ಚತುರ್ಗೃಹೀತೇನ ಸರ್ಪಿಷಾಥ ಚ ಸಂಸ್ಕ್ರಿಯಾ ॥ ಇತಿ

ಪ್ರೇತಾಗ್ನಿಸಂಧಾನೇ ರಜಸ್ವಲಾಭರ್ತೃಮರಣ ಪ್ರಾಯಶ್ಚಿತ್ತ ಪೂರ್ವಕಂ ಪ್ರೇತಾಗ್ನಿಸಂಧಾನಂ ಕರಿಷ್ಯೇ ॥

ಹೆಂಡತಿಯು ಮುಟ್ಟಾದಾಗ, ಗಂಡನು ಸತ್ತರೆ, ಅಗ್ನಿಸಂಧಾನಮಾಡಿ । ದುರ್ಗಾಹೋಮ, ಮನಸ್ವತೀ, ತಂತುಮತೀ । ಉದ್ಬುಧ್ಯಸ್ವ ತ್ರಯತ್ತ್ರಿಂಶತ್ ಮತ್ತು ಬಿಡಿಸಿದ ವ್ಯಾಹೃತಿಗಳಿಂದ ಸಮಸ್ತ ವ್ಯಾಹೃತಿಗಳಿಂದ ಅನಾಜ್ಞಾತತ್ರಯಗಳಿಂದ ಮಹಾವ್ಯಾಹೃತಿಗಳಿಂದ । ಪ್ರತಿಮಂತ್ರವನ್ನೂ 4 ಸಲ ತುಪ್ಪವನ್ನು ತೆಗೆದುಕೊಂಡು, ಹೋಮಮಾಡುವುದು । ಮುಟ್ಟಾದಾಗ ಗಂಡನು ಸತ್ತರೆ ಪ್ರೇತಾಗ್ನಿಸಂಧಾನದಿಂದ ತಂದೆಯ ಸಂಸ್ಕಾರವನ್ನು ಮಾಡುತ್ತೇನೆಂದು ಸಂಕಲ್ಪಿಸಿ ॥

ಉಪವೀತಿನಾ, ಅಗ್ನಿಪ್ರತಿಷ್ಠಾಪನಾದಿ ಅಯಾಶ್ಚ ಹೋಮಾಂತಂ ಕೃತ್ವಾ । ಪ್ರಾಚೀನಾವೀತಿನಾ, ಪ್ರತ್ಯೇಕಂ ಚತುರ್ಗೃಹೀತೇನ ಜುಹೋತಿ ।

ಅಗ್ನಿಪ್ರತಿಷ್ಠೆಯೇ ಮೊದಲಾಗಿ, ಅಯಾಶ್ಚಹೋಮ ಪರ್ಯಂತವಾಗಿ ಈ ಹಿಂದೆ ತಿಳಿಸಿರುವಂತೆ ಪ್ರಯೋಗವನ್ನು ಮಾಡುವುದು । ಮತ್ತೂ ಪ್ರಾಚೀನಾವೀತಿಯಾಗಿ, ಕೆಳಗಿನ ಮಂತ್ರಗಳಿಗೆ ಪ್ರತ್ಯೇಕವಾಗಿ 4 ಸಲ ತುಪ್ಪದಿಂದ ಹೋಮಿಸಿ ॥

ಓಂ ಜಾತವೇದಸೇ । ಸುನವಾಮ । ಸೋಮಮ್ । ಅರಾತೀಯತಃ । ನಿಜಹಾತಿ ।
ವೇದಃ ॥ ಸ ನಃ । ಪರ್ಷತ್ । ಅತಿ ದುರ್ಗಾಣಿ । ವಿಶ್ವಾ । ನಾವೇವ ।
ಸಿಂಧುಮ್ । ದುರಿತಾತ್ಯಗ್ನಿಃ । ಸ್ವಾಹಾ – ಅಗ್ನಯೇ ಜಾತವೇದಸ ಇದಂ ॥

ಓಂ ಮನೋಜ್ಯೋತಿಃ । ಜುಷತಾಮ್ । ಆಜ್ಯಮ್ । ವಿಚ್ಛಿನ್ನಮ್ । ಯಜ್ಞಮ್ ।
ಸಮಿಮ್ । ದಧಾತು ॥ ಯಾ ಇಷ್ಟಾ । ಉಷಸಃ । ನಿಮ್ರುಚಶ್ಚ । ತಾಃ ।
ಸಂದಧಾಮಿ । ಹವಿಷಾ । ಘೃತೇನ । ಸ್ವಾಹಾ – ಮನಸೇ ಜ್ಯೋತಿಷ ಇದಂ ॥

ಓಂ ತಂತುಮ್ । ತನ್ವನ್ । ರಜಸಃ । ಭಾನುಮ್ । ಅನ್ವಿಃ । ಜ್ಯೋತಿಷ್ಮತಃ ।
ಪಥಃ । ರಕ್ಷ । ಧಿಯಾ । ಕೃತಾನ್ ॥ ಅನುಲ್ಬಣಮ್ । ವಯತ । ಜೋಗುವಾಮ್ ।

ಪಃ । ಮನುರ್ಭವ । ಜನಯಾ । ದೈವ್ಯಮ್ । ಜನಮ್ । ಸ್ವಾಹಾ – ಅಗ್ನಯೇ ತಂತುಮತ ಇದಂ ॥

ಓಂ ಉದ್ಬುಧ್ಯಸ್ವ । ಅಗ್ನೇ । ಪ್ರತಿಜಾಗೃಹಿ । ಏನಮ್ । ಇಷ್ಟಾಪೂರ್ತೇ । ಸಗ್ಂಸೃಜೇಥಾಮ್ । ಅಯಂ ಚ ॥ ಪುನಃ । ಕೃಣ್ವನ್ । ತ್ವಾ । ಪಿತರಮ್ । ಯುವಾನಮ್ । ಅನ್ವಾತಾಗ್ಂಸೀಃ । ತ್ವಯಿ । ತಂತುಮ್ । ಏತಮ್ । ಸ್ವಾಹಾ – ಅಗ್ನಯೇ ತಂತುಮತ ಇದಂ ॥

ಓಂ ತ್ರಯಸ್ತ್ರಿಂಶತ್ । ತಂತವಃ । ಯೇ । ವಿತತ್ನಿರೇ । ಯ ಇಮಮ್ । ಯಜ್ಞಮ್ । ಸ್ವಧಯಾ । ಮದಂತೇ । ತೇಷಾಂ । ಛಿನ್ನಮ್ । ಪ್ರತ್ಯೇತ್ । ದಧಾಮಿ । ಸ್ವಾಹಾ ಘರ್ಮಃ । ದೇವಾನ್ । ಅಪ್ಯೇತು । ಸ್ವಾಹಾ – ದೇವೇಭ್ಯ ಇದಂ ॥

ಓಂ ಭೂರಗ್ನಯೇ ಚ । ಪೃಥಿವ್ಯೈ ಚ । ಮಹತೇ ಚ । ಸ್ವಾಹಾ – ಅಗ್ನಯ ಪೃಥಿವ್ಯೈ ಇದಂ ॥

ಓಂ ಭುವಃ । ವಾಯವೇ ಚ । ಅಂತರಿಕ್ಷಾಯ ಚ । ಮಹತೇ ಚ । ಸ್ವಾಹಾ – ವಾಯವೇ ಅಂತರಿಕ್ಷಾಯ ಮಹತ ಇದಂ ॥

ಓಂ ಸುವಃ । ಆದಿತ್ಯಾಯ ಚ । ಮಹತೇ ಚ । ಸ್ವಾಹಾ – ಆದಿತ್ಯಾಯ ದಿವೇ ಮಹತ ಇದಂ ॥

ಓಂ ಭೂರ್ಭುವಃ । ಸುವಃ । ಚಂದ್ರಮಸೇ ಚ । ನಕ್ಷತ್ರೇಭ್ಯಶ್ಚ । ದಿಗ್ಭ್ಯಶ್ಚ । ಮಹತೇ ಚ । ಸ್ವಾಹಾ – ಚಂದ್ರಮಸೇ ನಕ್ಷತ್ರೇಭ್ಯೋ ದಿಗ್ಭ್ಯೋ ಮಹತ ಇದಂ॥

ಅನಾಜ್ಞಾತ ತ್ರಯಂ, ಪುನರ್ಭೂರಾದಿ ಚತುಷ್ಟಯಂ ಚ ಹುತ್ವಾ । ಪರಿಷಿಚ್ಯ । ಯಥಾವಿಧಿ ಸಂಸ್ಕಾರಂ ಕುರ್ಯಾತ್ ॥

ಹಾಗೆಯೇ ಅನಾಜ್ಞಾತತ್ರಯ ಮಂತ್ರಗಳಿಂದ ಮತ್ತು ಪುನಃ ಭೂರಾದಿ 4 ಮಂತ್ರಗಳಿಂದ ಹೋಮಿಸಿ । ಪರಿಷೇಚನಾಂತ ಪ್ರಯೋಗವನ್ನು ಮಾಡುವುದು । ನಂತರ ಯಥಾವಿಧಿಯಾಗಿ ಸಂಸ್ಕಾರವನ್ನು ಮಾಡಬೇಕು ॥

22. ರಜಸ್ವಲಾ(ಸೂತಿಕಾ)ಮರಣೇ –

ರಜಸ್ವಲಾಯಾಃ ಪ್ರೇತಾಯಾಃ ಸಂಸ್ಕಾರಾದೀನಿ ನಾಚರೇತ್ ।
ಊರ್ಧ್ವಂ ತ್ರಿರಾತ್ರಾತ್ ಸ್ನಾತಾಂ ತಾಂ ಶವಧರ್ಮೇಣ ದಾಹಯೇತ್ ॥

ಮುಟ್ಟಾದ, ಅಥವಾ ಪ್ರಸವದ 10 ದಿನಗಳ ಒಳಗಿನ ಹೆಂಗಸಿಗೆ ಸಂಸ್ಕಾರಾದಿಗಳನ್ನು ಮಾಡಬಾರದು । ಕ್ರಮವಾಗಿ 3 ದಿನಗಳು ಅಥವಾ 10 ಕಳೆದ ನಂತರ, ಅವಳನ್ನು ಶುದ್ಧಿಮಾಡಿ, ನಂತರ ಯಥಾಕ್ರಮದಂತೆ ಸಂಸ್ಕಾರ ಮಾಡಬೇಕು ॥

ಅಥವಾ ರಜಸ್ವಲಾಂ ಸೂತಿಕಾಂ ಚ ಮಲಂ ಪ್ರಕ್ಷಾಳ್ಯ, ಸ್ನಾಪಯಿತ್ವಾ । ಕಾಷ್ಠವತ್ ಅಮಂತ್ರಕಂ ದಗ್ಧ್ವಾ । ಚಾಂದ್ರಾಯಣ ತ್ರಯ ಪ್ರತ್ಯಾಮ್ನಾಯ ದಾನಂ ಕೃತ್ವಾ । ಅಸ್ಥೀನಿ ಯಥಾವಿಧಿ ಮಂತ್ರವತ್ ದಾಹಯೇತ್ । ಯದ್ವಾ ತದೈವ ಮಂತ್ರವತ್ ದಾಹಕರಣೇಚ್ಛಾಯಾಂ ತು ಪ್ರಾಯಶ್ಚಿತ್ತ ಪೂರ್ವಕಂ ದಾಹಯೇತ್॥

ಅಥವಾ ಮುಟ್ಟು – ಬಾಣತಿಯಾಗಿರುವಾಗ ಸತ್ತರೆ, ಆಗ ಅವಳ ದೇಹದ ಮಲಗಳನ್ನು ತೆಗೆದು, ತೊಳೆದು, ಸ್ನಾನಮಾಡಿಸಿ । ದೇಹವನ್ನು ಅಮಂತ್ರಕವಾಗಿ ಸುಡಬೇಕು । 3 ಚಾಂದ್ರಾಯಣ ಕೃಚ್ಛಕ್ಕೆ ಪ್ರತಿನಿಧಿಯಾಗಿ ದಕ್ಷಿಣೆ ಕೊಟ್ಟು । ಆಮೇಲೆ, ಅಸ್ಥಿಗಳನ್ನು ಪುನಃ ಯಥಾವಿಧಿಯಂತೆ ಮಂತ್ರಸಹಿತವಾಗಿ ದಹಿಸಬೇಕು । ಆಗಲೇ ಸುಡಬೇಕೆನ್ನುವ ಇಚ್ಛೆಯಿದ್ದಾಗ ಈ ರೀತಿ ಪ್ರಾಯಶ್ಚಿತ್ತ ಪೂರ್ವಕವಾಗಿ ಸುಡಬೇಕು ॥

ಪ್ರಾಚೀನಾವೀತಿನಾ, ...ಗೋತ್ರಾಯಾಃ, ...ಪ್ರೇತಾಯಾಃ, ರಜಸ್ವಲಾವಸ್ಥಾ ಮರಣ ನಿಮಿತ್ತ ಪ್ರತ್ಯವಾಯ ಪರಿಹಾರಾರ್ಥಂ ಔರ್ಧ್ವದೇಹಿಕ ಯೋಗ್ಯತಾ ಸಿದ್ಧ್ಯರ್ಥಂ ಚಾಂದ್ರಾಯಣತ್ರಯ ಪ್ರಾಜಾಪತ್ಯ ವಾರುಣ ತೀರ್ಥ ಕೃಚ್ಛ್ರ ಪ್ರತ್ಯಾಮ್ನಾಯ ದಾನಂ ಯದಂತಿ ॥

ಪ್ರಾಚೀನಾವೀತಿಯಾಗಿ, ಈ ಗೋತ್ರದಲ್ಲಿ, ಈ ಹೆಸರಿನ, ಮುಟ್ಟಾದ ಅಥವಾ ಪ್ರಸೂತಿಯಾದಾಗ ಸತ್ತಿರುವ ಪ್ರೇತೆಗೆ, ಮರಣನಿಮಿತ್ತ ಪ್ರಾಯಶ್ಚಿತ್ತ ಪರಿಹಾರಕ್ಕಾಗಿ ಔರ್ಧ್ವದೈಹಿಕ ಕರ್ಮವನ್ನು ಮಾಡಲು, ಯೋಗ್ಯತೆಗಾಗಿ ಕೆಳಗೆ ತಿಳಿಸಿರುವಂತೆ 3 ಚಾಂದ್ರಾಯಣ, ಪ್ರಾಜಾಪತ್ಯ ಕೃಚ್ಛ್ರಪ್ರತ್ಯಾಮ್ನಾಯ ದಾನವನ್ನು ಕೊಟ್ಟು, ಮುಂದೆಹೇಳುವಂತೆ ಸಂಸ್ಕರಿಸುತ್ತೇನೆ, ಎಂದು ಸಂಕಲ್ಪಿಸಿ ॥

ಯಚ್ಚೇತ್ಯಾದಿ ಪವಮಾನ.....,ಮಂತ್ರೈಃ ಶುದ್ಧೋದಕಾದಿ ಸ್ನಾನಂ ದುರ್ಗಾದಿ....., ದ್ವಾದಶಾಹುತೀಶ್ಚ ಹೋಷ್ಯಾಮಿ ಇತಿ ಸಂಕಲ್ಪ್ಯ । ತತಃ ಶುದ್ಧೋದಕೈಃ ಪಂಚಗವ್ಯೇನ ಗೋಮೂತ್ರೈಃ ಕುಶೋದಕೈಶ್ಚ ಪೃಥಕ್ ಪೃಥಕ್ ಸ್ನಾಪಯಿತ್ವಾ । ಕುಂಭಂ ಪ್ರತಿಷ್ಠಾಪ್ಯ, ತಸ್ಮಿನ್ ವರುಣಮಾವಾಹ್ಯ, (ಋತ್ವಿಕ್ ಮುಖೇನ) ಯದಂತಿಯಚ್ಚೇತ್ಯಾದಿಭಿಃ ಸಪ್ತಭಿಃ ಆಪೋಅಸ್ಮಾ.....,ನಿತಿ ದ್ವಾಭ್ಯಾಂ ಆಪೋಹಿಷ್ಠೇತಿ....., ತಿಸೃಭಿಃ, ಹಿರಣ್ಯವರ್ಣಾ....., ಇತಿ ಚತಸೃಭಿಃ, ಪವಮಾನಸ್ಸುವರ್ಜನ....., ಇತ್ಯನುವಾಕೇನ ವರುಣಸೂಕ್ತೇನ....., ಪುರುಷಸೂಕ್ತೇನ....., ಚ ಕುಂಭಮಭಿಮಂತ್ರ್ಯ, ಸ್ನಾಪಯಿತ್ವಾ । ಪಂಚಗವ್ಯೇನ ಯೋನಿಂ ಪ್ರಕ್ಷಾಳ್ಯ, ವಸ್ತ್ರಾಂತರೇಣ ಆಚ್ಛಾದ್ಯ। ಚಾಂದ್ರಾಯಣಾದಿ

ಕೃಚ್ಛ್ರ ಪ್ರತ್ಯಾಮ್ನಾಯ ದಾನಂ ಕೃತ್ವಾ । ಅಗ್ನೌ,

ಈ ಮೇಲೆ ತಿಳಿಸಿರುವಂತೆ, ಪವಮಾನಮಂತ್ರಗಳಿಂದ ಶುದ್ಧೋದಕಸ್ನಾನ, ದುರ್ಗಾದಿ 12 ಮಂತ್ರಗಳಿಂದ ತುಪ್ಪದ ಹೋಮವನ್ನು ಮಾಡುತ್ತೇನೆಂದು ಸಂಕಲ್ಪಿಸಿ । ಆಮೇಲೆ ಶುದ್ಧೋದಕದಿಂದ, ಪಂಚಗವ್ಯದಿಂದ, ಗೋಮೂತ್ರದಿಂದ, ಕುಶೋದಕದಿಂದ ಪ್ರತ್ಯೇಕವಾಗಿ ಸ್ನಾನಮಾಡಿಸಿ । ಕಲಶವನ್ನು ಇಟ್ಟು, ಅದರಲ್ಲಿ ವರುಣನನ್ನು ಪೂಜಿಸಿ, ಋತ್ವಿಜರ ಮುಖಾಂತರವಾಗಿ ಕೆಳಗೆ ತಿಳಿಸಿರುವ ಮಂತ್ರಗಳಿಂದ, ಆಯಾಯಾ ದೇವತೆಗಳನ್ನು ಕಲಶಕ್ಕೆ ಆವಾಹಿಸಿ ಪೂಜಿಸುವುದು । ಆ ಕಲಶದ ತೀರ್ಥದಿಂದ ಅವಳಿಗೆ ಸ್ನಾನಮಾಡಿಸಿ । ಪಂಚಗವ್ಯದಿಂದ ಅವಳಯೋನಿಯನ್ನು ತೊಳೆದು, ಅವಳ ಬಟ್ಟೆಯನ್ನು ತೆಗೆದು, ಬೇರೇ ಬಟ್ಟೆಯನ್ನು ಹೊದಿಸಿ । ಚಾಂದ್ರಾಯಣಾದಿ ಕೃಚ್ಛ್ರಕ್ಕೆ ಪ್ರತಿನಿಧಿಯಾಗಿ ದಾನಕೊಟ್ಟು । ಅಗ್ನಿಯಲ್ಲಿ ಮುಂದಿನ ಮಂತ್ರಗಳಿಂದ ಹೋಮಗಳನ್ನು ಮಾಡಬೇಕು ॥

ಓಂ ಜಾತವೇದಸೇ । ಸುನವಾಮ । ಸೋಮಮ್ । ಅರಾತೀಯತಃ । ನಿಜಹಾತಿ ।
ವೇದಃ ॥ ಸ ನಃ । ಪರ್ಷತ್ । ಅತಿ ದುರ್ಗಾಣಿ । ವಿಶ್ವಾ । ನಾವೇವ ।
ಸಿಂಧುಮ್ । ದುರಿತಾತ್ಯಗ್ನಿಃ ॥ ಸ್ವಾಹಾ – ಅಗ್ನಯೇ ಜಾತವೇದಸ ಇದಂ ॥

ಓಂ ತಾಮಗ್ನಿವರ್ಣಾಂ । ತಪಸಾ । ಜ್ವಲಂತೀಮ್ । ವೈರೋಚನೀಮ್ ।
ಕರ್ಮಫಲೇಷು । ಜುಷ್ಟಾಮ್ ॥ ದುರ್ಗಾಂ । ದೇವೀಮ್ । ಶರಣಮಹಮ್ ।
ಪ್ರಪದ್ಯೇ । ಸುತರಸಿ । ತರಸೇ । ನಮಃ ॥ ಸ್ವಾಹಾ – ದುರ್ಗಾಯಾ ಇದಂ
ನಮಮ ॥

ಓಂ ಅಗ್ನೇ ತ್ವಂ । ಪಾರಯ । ನವ್ಯಃ । ಅಸ್ಮಾನ್ । ಸ್ವಸ್ತಿಭಿಃ । ಅತಿದುರ್ಗಾಣಿ ।
ವಿಶ್ವಾ ॥ ಪೂಶ್ಚ । ಪೃಥ್ವೀ । ಬಹುಲಾ । ನ ಉರ್ವೀ । ಭವಾ ತೋಕಾಯ ।
ತನಯಾಯ । ಶಂ ಯೋಃ ॥ ಸ್ವಾಹಾ – ದುರ್ಗಾಯೈ ಇದಂ ನಮಮ ॥

ಓಂ ವಿಶ್ವಾನಿ ನಃ । ದುರ್ಗಹಾ । ಜಾತವೇದಃ । ಸಿಂಧುಮ್ । ನ ನಾವಾ । ದುರಿತಾ । ಅತಿಪರ್ಷಿ ॥ ಅಗ್ನೇ । ಅತ್ರಿವನ್ । ಮನಸಾ । ಗೃಣಾನಃ । ಅಸ್ಮಾಕಮ್ । ಬೋಧಿ । ಅವಿತಾ । ತನೂನಾಮ್ ॥ ಸ್ವಾಹಾ – ದುರ್ಗಾಯೈ ಇದಂ ನಮಮ ॥

ಓಂ ಪೃತನಾಜಿತಮ್ । ಸಹಮಾನಮ್ । ಉಗ್ರಂ । ಅಗ್ನಿಂ । ಹುವೇಮ । ಪರಮಾತ್ । ಸಧಸ್ಥಾತ್ ॥ ಸ ನಃ । ಪರ್ಷದತಿ । ದುರ್ಗಾಣಿ । ವಿಶ್ವಾ । ಕ್ಷಾಮದ್ದೇವಃ । ಅತಿದುರಿತಾ । ಅತ್ಯಗ್ನಿಃ ॥ ಸ್ವಾಹಾ – ದುರ್ಗಾಯೈ ಇದಂ ನಮಮ ॥

ಓಂ ಮನೋಜ್ಯೋತಿಃ । ಜುಷತಾಮ್ । ಆಜ್ಯಮ್ । ವಿಚ್ಛಿನ್ನಮ್ । ಯಜ್ಞಮ್ । ಸಮಿಮ್ । ದಧಾತು ॥ ಯಾ ಇಷ್ಟಾ । ಉಷಸಃ । ನಿಮ್ರುಚಶ್ಚ । ತಾಃ । ಸಂದಧಾಮಿ । ಹವಿಷಾ । ಘೃತೇನ ॥ ಸ್ವಾಹಾ – ಮನಸೇ ಜ್ಯೋತಿಷ ಇದಂ ॥ ಓಂ ಭೂರಗ್ನಯೇ ಚ । ಪೃಥಿವ್ಯೈ ಚ । ಮಹತೇ ಚ । ಸ್ವಾಹಾ – ಅಗ್ನಯೇ ಪೃಥಿವ್ಯಾ ಇದಂ ॥

ಓಂ ಭುವಃ । ವಾಯವೇ ಚ । ಅಂತರಿಕ್ಷಾಯ ಚ । ಮಹತೇ ಚ । ಸ್ವಾಹಾ – ವಾಯವೇ ಅಂತರಿಕ್ಷಾಯ ಮಹತ ಇದಂ ॥

ಓಂ ಸುವಃ । ಆದಿತ್ಯಾಯ ಚ । ಮಹತೇ ಚ । ಸ್ವಾಹಾ – ಆದಿತ್ಯಾಯ ದಿವೇ ಮಹತ ಇದಂ ॥

ಓಂ ಭೂರ್ಭುವಃ । ಸುವಃ । ಚಂದ್ರಮಸೇ ಚ । ನಕ್ಷತ್ರೇಭ್ಯಶ್ಚ । ದಿಗ್ಭ್ಯಶ್ಚ । ಮಹತೇ ಚ । ಸ್ವಾಹಾ – ಚಂದ್ರಮಸೇ ನಕ್ಷತ್ರೇಭ್ಯೋ ದಿಗ್ಭ್ಯೋ ಮಹತ ಇದಂ ॥

ಓಂ ಯೋಽಸ್ಯ । ಕೌಷ್ಮ್ಯಃ । ಜಗತಃ । ಪಾರ್ಥಿವಸ್ಯ । ಏಕಃ । ಇದ್ವಶೀ ॥ ಯಮಮ್ । ಭಂಗ್ಯಶ್ರವಃ । ಗಾಯ । ಯಃ । ರಾಜಾ । ಅನಪರೋಧ್ಯಃ । ಸ್ವಾಹಾ – ಯಮಾಯೇದಂ ॥

ಓಂ ಯಮಂಗಾಯ । ಭಂಗ್ಯಶ್ರವಃ । ಯಃ । ರಾಜಾ । ಅನಪರೋಧ್ಯಃ ॥ ಯೇನ । ಆಪಃ । ನದ್ಯಃ । ಧನ್ವಾನಿ । ಯೇನ । ದ್ಯೌಃ । ಪೃಥಿವೀ । ದೃಢಾ । ಸ್ವಾಹಾ – ಯಮಾಯೇದಂ ॥

ಇತಿ ಹುತ್ವಾ, ಸಂಸ್ಕುರ್ಯಾತ್ । ಸೂತಿಕಾಯಾಮಪ್ಯೇವಂ । ಅತ್ರ ಸೂತಿಕಾಯಾಃ ಆದ್ಯ ತ್ರ್ಯಹ ಮರಣೇ ತ್ರ್ಯಬ್ದಂ ಪ್ರಾಯಶ್ಚಿತ್ತಂ । ದ್ವಿತೀಯ ತ್ರ್ಯಹೇ ದ್ವ್ಯಬ್ದಂ । ತೃತೀಯ ತ್ರ್ಯಹೇ ಏಕಾಬ್ದಂ । ದಶಮದಿನೇ ತು ಕೃಚ್ಛ್ರತ್ರಯಂ ಇತಿ ವಿಶೇಷಃ । ಮಾಸಪರ್ಯಂತಮಪಿ ಕೃಚ್ಛ್ರತ್ರಯಮಿತಿ ಕೇಚಿತ್ । ಇತಿ ರಜಸ್ವಲಾ ಸೂತಿಕಯೋಃ ವಿಧಿಃ ॥

ಈ ಮೇಲಿನಂತೆ ಹೋಮಿಸಿ, ಸಂಸ್ಕಾರವನ್ನು ಮಾಡಬೇಕು । ಸೂತಕದಲ್ಲಿಯೂ ಈ ರೀತಿಯಾಗಿಯೇ ಸಂಸ್ಕರಿಸಬೇಕು । ಸೂತಕದಲ್ಲಿ, ಮೊದಲ 3 ದಿನದಲ್ಲಿ ಸತ್ತರೆ, 3 ವರ್ಷದ ಪ್ರಾಯಶ್ಚಿತ್ತವು । ನಂತರದ 3 ದಿನಕ್ಕೆ 2 ವರ್ಷದ ಪ್ರಾಯಶ್ಚಿತ್ತವು । ನಂತರದ 3 ದಿನಕ್ಕೆ 1 ವರ್ಷದ ಪ್ರಾಯಶ್ಚಿತ್ತವು । 10 ದಿನದಲ್ಲಿ 3 ಕೃಚ್ಛ್ರವು । 1 ಮಾಸದ ವರೆವಿಗೂ ಕೂಡ 3 ಕೃಚ್ಛ್ರವೆಂದು ಹೇಳುತ್ತಾರೆ । ಈ ರೀತಿಯಾಗಿ, ಮುಟ್ಟಾದ / ಸೂತಕದಲ್ಲಿ ಸತ್ತ ಮಹಿಳೆಗೆ ಶಾಂತಿಯು ॥

23. ದಕ್ಷಿಣಾಯನ ಮರಣ ಪ್ರಾಯಶ್ಚಿತ್ತಮ್ –

ಪ್ರಾಚೀನಾವೀತಿನಾ, ...ಗೋತ್ರಸ್ಯ, ...ಪ್ರೇತಸ್ಯ, ದಕ್ಷಿಣಾಯನೇ – ಕೃಷ್ಣಪಕ್ಷೇ – ರಾತ್ರೌ ಮರಣಸಂಭವೇನ ಯೋ ದೋಷಸ್ತಮಜನಿ, ತದ್ದೋಷಪರಿಹಾರಾರ್ಥಂ (ಬೋಧಾಯನೋಕ್ತ) ತಾ ಸೂರ್ಯಾ....., ಇತ್ಯಾದಿ ಷಡಾಹುತೀರ್ಹೋಷ್ಯಾಮಿ । ತತ್ಕಾಲೇ ಕೃಚ್ಛ್ರಪ್ರತ್ಯಾಮ್ನಾಯ ಹಿರಣ್ಯದಾನಂ ಚ ಕರಿಷ್ಯೇ ಇತಿ ಸಂಕಲ್ಪ್ಯ, ಕೃತ್ವಾ । ಅಪ್ರದಕ್ಷಿಣಮಗ್ನಿಂ ಪರಿಷಿಚ್ಯ । ಸರ್ವತ್ರ ಚತುರ್ಗೃಹೀತಂ ಆಜ್ಯಂ ಗೃಹೀತ್ವಾ ॥

ಪ್ರಾಚೀನಾವೀತಿಯಾಗಿ, ಈ ಗೋತ್ರದ, ಈ ಹೆಸರಿನ ವ್ಯಕ್ತಿಯು, ದಕ್ಷಿಣಾಯನದ ಕೃಷ್ಣಪಕ್ಷ ರಾತ್ರಿಯಲ್ಲಿ, ಸತ್ತರೆ ಯಾವ ದೋಷವು ಉಂಟಾಗುತ್ತದೋ, ಅದರ ಪರಿಹಾರಕ್ಕಾಗಿ, ಈ ಕೆಳಗಿನಂತೆ ಪ್ರಾಯಶ್ಚಿತ್ತ ಹೋಮವನ್ನು ಮಾಡಿಕೊಳ್ಳಬೇಕು ॥ ಅದಕ್ಕೆ ಮೊದಲು ಕೃಚ್ಛ್ರಕ್ಕೆ ಬದಲಾದ ದಕ್ಷಿಣೆಯನ್ನು ಕೊಡುತ್ತೇನೆಂದು ಸಂಕಲ್ಪಿಸಿ, ಕೊಡಬೇಕು । ನಂತರ ಅಪ್ರದಕ್ಷಿಣೆಯಾಗಿ ಪರಿಷೇಚನವನ್ನು ಮಾಡಿ । ಕೆಳಗಿನ ಮಂತ್ರಗಳಿಗೆ 4 ಸಲ ತುಪ್ಪವನ್ನು ತೆಗೆದುಕೊಂಡು ಹೋಮಿಸಬೇಕು ॥

ಓಂ ತಾ ಸೂರ್ಯಾ । ಚಂದ್ರಮಸಾ । ವಿಶ್ವಭೃತ್ತಮಾ । ಮಹತ್ ॥ ತೇಜಃ । ವಸುಮತ್ । ರಾಜತೋ ದಿವಿ ॥ ಸಾಮಾತ್ಮಾನಾ । ಚರತಃ । ಸಾಮಚಾರಿಣಾ ॥ ಯಯೋಃ । ವ್ರತಮ್ । ನ ಮ ಮೇ । ಜಾತು । ದೇವಯೋಃ ॥ ಸ್ವಾಹಾ – ಸರ್ವತ್ರ ಸೂರ್ಯಾಚಂದ್ರಮೋಭ್ಯಾಂ ಇದಂ ॥

ಓಂ ಉಭಾವಂತೌ । ಪರಿಯಾತ । ಅರ್ಮ್ಯಾ ॥ ದಿವೋ ನ । ರಶ್ಮೀನ್ । ತನುತಃ । ವ್ಯರ್ಣ್ವತೇ ॥ ಉಭಾ । ಭುವಂತೀ । ಭುವನಾ । ಕವಿಕ್ರತೂ ॥ ಸೂರ್ಯಾ । ನ ಚಂದ್ರಾ । ಚರತಃ । ಹತಾಮತೀ ॥ ಸ್ವಾಹಾ – ಮಂತ್ರೋಕ್ತ ದೇವತಾಭ್ಯ ಇದಂ ॥

ಓಂ ಪತೀದ್ಯುಮತ್ । ವಿಶ್ವವಿದಾ । ಉಭಾ । ದಿವಃ ॥ ಸೂರ್ಯಾ । ಉಭಾ । ಚಂದ್ರಮಸಾ । ವಿಚಕ್ಷಣಾ ॥ ವಿಶ್ವವಾರಾ । ವರಿವಃ । ಭಾ ವರೇಣ್ಯಾ ॥ ತಾ ನಃ । ಅವತಮ್ । ಮತಿಮಂತಾ । ಮಹಿವ್ರತಾ ॥ ಸ್ವಾಹಾ – ಮಂತ್ರೋಕ್ತ ದೇವತಾಭ್ಯ ಇದಂ ॥

ಓಂ ವಿಶ್ವವಪರೀ । ಪ್ರತರಣಾ । ತರಂತಾ ॥ ಸುವರ್ವಿದಾ । ದೃಶಯೇ । ಭೂರಿರಶ್ಮೀ ॥ ಸೂರ್ಯಾ । ಹಿ ಚಂದ್ರಾ । ವಸು । ತ್ವೇಷದರ್ಶತಾ ॥ ಮನಸ್ವಿನಃ । ಭಾನುಚರತಃ । ಅನು ಸಂದಿವಮ್ ॥ ಸ್ವಾಹಾ – ಮಂತ್ರೋಕ್ತ ದೇವತಾಭ್ಯ ಇದಂ ॥

ಓಂ ಅಸ್ಯಶ್ರವಃ । ನದ್ಯಃ । ಸಪ್ತ । ಬಿಭ್ರತಿ ॥ ದ್ಯಾವಾ ಕ್ಷಾಮಾ । ಪೃಥಿವೀ । ದರ್ಶತಮ್ । ವಪುಃ ॥ ಅಸ್ಮೇ । ಸೂರ್ಯಾಚಂದ್ರಮಸಾ । ಅಭಿಚಕ್ಷೇ ॥ ಶ್ರದ್ಧೇಕಮ್ । ಇಂದ್ರ । ಚರತಃ । ವಿಚರ್ತುರಮ್ ॥ ಸ್ವಾಹಾ – ಮಂತ್ರೋಕ್ತ ದೇವತಾಭ್ಯ ಇದಂ ॥

ಓಂ ಪೂರ್ವಾಪರಮ್ । ಚರತಃ । ಮಾಯಯೈತೌ ॥ ಶಿಶೂ । ಕ್ರೀಡಂತೌ । ಪರಿಯಾತಃ । ಅಧ್ವರಮ್ ॥ ವಿಶ್ವಾನಿ । ಅನ್ಯಃ । ಭುವನಾ । ಅಭಿಚಷ್ಟೇ ॥ ಋತೂನ್ । ಅನ್ಯಃ । ವಿದಧತ್ । ಜಾಯತೇ । ಪುನಃ ॥ ಸ್ವಾಹಾ – ಮಂತ್ರೋಕ್ತ ದೇವತಾಭ್ಯ ಇದಂ ॥

ಸಂಭಾವಿತ ಸಮಸ್ತದೋಷ ಪ್ರಾಯಶ್ಚಿತ್ತಾರ್ಥಂ, ಸರ್ವಪ್ರಾಯಶ್ಚಿತ್ತಂ ಹೋಷ್ಯಾಮಿ ।
ಪೂರ್ವವದಪ್ರದಕ್ಷಿಣಂ ಪರಿಷಿಂಚತಿ ॥

ಓಂ ಭೂರ್ಭುವಸ್ಸುವಸ್ಸ್ವಾಹಾ – ಪ್ರಜಾಪತಯ ಇದಂ ॥

24. ಕೃಷ್ಣಪಕ್ಷ ಮರಣ ಪ್ರಾಯಶ್ಚಿತ್ತಮ್ –

ಪ್ರಾಚೀನಾವೀತಿನಾ, ...ಗೋತ್ರಸ್ಯ, ...ಪ್ರೇತಸ್ಯ, ಕೃಷ್ಣಪಕ್ಷೇ ಮರಣಸಂಭವೇನ ಯೋದೋಷಃ ಸಮಜನಿ ತದ್ದೋಷ ಪರಿಹಾರಾರ್ಥಂ, (ಬೋಧಾಯನೋಕ್ತ) ತಾ ಸೂರ್ಯಾ....., ಇತ್ಯಾದಿ ಷಡಾಹುತೀಃ ಹೋಷ್ಯಾಮಿ । ತತ್ಕಾಲೇ ಕೃಚ್ಛ್ರ ಪ್ರತ್ಯಾಮ್ನಾಯ ಹಿರಣ್ಯದಾನಂ ಕರಿಷ್ಯೇ, ಕೃತ್ವಾ । ಪೂರ್ವವತ್ ಚತುರ್ಗೃಹೀತೇನೈವ ಷಡಾಹುತೀಃ ಜುಹುಯಾತ್ ॥

ಪ್ರಾಚೀನಾವೀತಿಯಾಗಿ, ಈ ಗೋತ್ರದ, ಈ ಹೆಸರಿನ, ಕೃಷ್ಣಪಕ್ಷದಲ್ಲಿ, ವ್ಯಕ್ತಿಯು ಸತ್ತರೆ ಯಾವ ದೋಷವು ಉಂಟಾಗುತ್ತದೋ, ಅದರ ಪರಿಹಾರಕ್ಕಾಗಿ, ಈ ಕೆಳಗಿನಂತೆ ಪ್ರಾಯಶ್ಚಿತ್ತ ಹೋಮವನ್ನು ಮಾಡಿಕೊಳ್ಳಬೇಕು ॥ ಅದಕ್ಕೆ ಮೊದಲು ಕೃಚ್ಛ್ರಕ್ಕೆ ಬದಲಾದ ದಕ್ಷಿಣೆಯನ್ನು ಕೊಡುತ್ತೇನೆಂದು ಸಂಕಲ್ಪಿಸಿ, ಕೊಡಬೇಕು । ನಂತರ ಈ ಮೇಲೆ ತಿಳಿಸಿರುವ, ತಾ ಸೂರ್ಯಾ....., ಇತ್ಯಾದಿ ಮಂತ್ರಗಳಿಗೆ 4 ಸಲ ತುಪ್ಪವನ್ನು ತೆಗೆದುಕೊಂಡು ಹೋಮಿಸಬೇಕು ॥

25. ನಿಶಿ(ರಾತ್ರಿ)ಮರಣ ಪ್ರಾಯಶ್ಚಿತ್ತಮ್ –

ಪ್ರಾಚೀನಾವೀತಿನಾ, ...ಗೋತ್ರಸ್ಯ, ...ಪ್ರೇತಸ್ಯ, ನಿಶಾಯಾಂ ಮರಣಸಂಭವೇನ ಯೋದೋಷಸ್ಸಮಜನಿ ತದ್ದೋಷ ಪರಿಹಾರಾರ್ಥಂ, (ಬೋಧಾಯನೋಕ್ತ) ತಾ ಸೂರ್ಯಾ....., ಇತ್ಯಾದಿ ಷಡಾಹುತೀಃ ಹೋಷ್ಯಾಮಿ । ತತ್ಕಾಲೇ ಕೃಚ್ಛ್ರ ಪ್ರತ್ಯಾಮ್ನಾಯ ಹಿರಣ್ಯದಾನಂ ಕರಿಷ್ಯೇ, ಕೃತ್ವಾ । ಪೂರ್ವವತ್ ಚತುರ್ಗೃಹೀತೇನೈವ ಷಡಾಹುತೀಃ ಜುಹುಯಾತ್॥

ಪ್ರಾಚೀನಾವೀತಿಯಾಗಿ, ಈ ಗೋತ್ರದ, ಈ ಹೆಸರಿನ, ಕೃಷ್ಣಪಕ್ಷದಲ್ಲಿ, ವ್ಯಕ್ತಿಯು ಸತ್ತರೆ ಯಾವ ದೋಷವು ಉಂಟಾಗುತ್ತದೋ, ಅದರ ಪರಿಹಾರಕ್ಕಾಗಿ, ಈ ಕೆಳಗಿನಂತೆ ಪ್ರಾಯಶ್ಚಿತ್ತ ಹೋಮವನ್ನು ಮಾಡಿಕೊಳ್ಳಬೇಕು ॥ ಅದಕ್ಕೆ ಮೊದಲು ಕೃಚ್ಛ್ರಕ್ಕೆ ಬದಲಾದ

ದಕ್ಷಿಣೆಯನ್ನು ಕೊಡುತ್ತೇನೆಂದು ಸಂಕಲ್ಪಿಸಿ, ಕೊಡಬೇಕು । ನಂತರ ಈ ಮೇಲೆ ತಿಳಿಸಿರುವ, ತಾ ಸೂರ್ಯಾ....., ಇತ್ಯಾದಿ ಮಂತ್ರಗಳಿಗೆ 4 ಸಲ ತುಪ್ಪವನ್ನು ತೆಗೆದುಕೊಂಡು ಹೋಮಿಸಬೇಕು ॥

26. ಊರ್ಧ್ವೋಚ್ಛಿಷ್ಟಾದಿ ಮರಣ ಪ್ರಾಯಶ್ಚಿತ್ತಮ್ –

ಪ್ರಾಚೀನಾವೀತಿನಾ, ...ಗೋತ್ರಸ್ಯ, ...ಪ್ರೇತಸ್ಯ ಮರಣಕಾಲೇ ಊರ್ಧ್ವೋಚ್ಛಿಷ್ಟಾಧೋಚ್ಛಿಷ್ಟ ಖಟ್ವಾದಿ ಮರಣ, ಅಶುಚಿ ಸ್ಪರ್ಶ, ನಿಯಮಲೋಪಾಖ್ಯ ಪಂಚನಿಮಿತ್ತ ಸಂಭವೇನ ಯೋ ದೋಷಸ್ತಮಜನಿ ತದ್ದೋಷ ಪರಿಹಾರಾರ್ಥಂ ಪ್ರತ್ಯೇಕಂ ಕೃಚ್ಛ್ರತ್ರಯ ಪ್ರತ್ಯಾಮ್ನಾಯ ಹಿರಣ್ಯದಾನಂ ಕರಿಷ್ಯೇ ಇತಿ ಸಂಕಲ್ಪ್ಯ, ಕೃತ್ವಾ ॥

ವ್ಯಕ್ತಿಯು, ಮೇಲ್ಮುಖವಾಗಿ – ಕೆಳಮುಖವಾಗಿ – ಮಂಚದಮೇಲೆ ಇದ್ದಾಗ– ಅಶುಚಿಯಾದ ವಸ್ತುಗಳೊಂದಿಗಿದ್ದಾಗ – ನಿಯಮಗಳನ್ನು ಲೋಪಮಾಡಿದಾಗ ಈ 5 ಸಂದರ್ಭಗಳಲ್ಲಿ ಸತ್ತರೆ, ಯಾವ ದೋಷ ಉಂಟಾಗುತ್ತದೋ ಆ ದೋಷ ಪರಿಹಾರಕ್ಕಾಗಿ ಪ್ರತ್ಯೇಕವಾಗಿ 3 ಕೃಚ್ಛ್ರಗಳನ್ನು ಪ್ರತ್ಯಾಮ್ನಾಯವಾಗಿ ಹಣದಿಂದ ಕೋಡುತ್ತೇನೆಂದು ಈ ಮೇಲಿನಂತೆ ಸಂಕಲ್ಪಿಸಿ, ಕೊಡಬೇಕು ॥

27. ಪರ್ಯುಷಿತ(ಹಳಸಿದ) ಶವ ಪ್ರಾಯಶ್ಚಿತ್ತಮ್ –

ವೈಖಾನಸ ಗೃಹ್ಯ ಪ್ರಾಯಶ್ಚಿತ್ತಸೂತ್ರೇ,(ಪ್ರಶ್ನ 7, ಖಂಡ 10) ಶವಸ್ಯದಹನೇ ಕಾಲಾತೀತೇ ಕ್ರಿಯಾಹೀನೇ ವಿಪರ್ಯಾಸೇ ಚ ಪ್ರೇತ ಕರ್ಮಣಿ ಸರ್ವತ್ರ । ತಿಲೈರೇವ ವೈಶ್ವದೇವ, ಯಾಮ್ಯಂ ಪೈತೃಕಂ ವ್ಯಾಹೃತೀಶ್ಚ ಪ್ರಾಯಶ್ಚಿತ್ತಂ ಜುಹೋತೀತಿ ।

ಪಂಚವಿಂಶಘಟೀ ಪೂರ್ವಂ ದಿವಾಪ್ರೇತೇಪ್ಯ ಸಂಸ್ಕೃತಿಃ ।
ದಿವಾ ವಾ ಯದಿ ವಾ ರಾತ್ರೌ ಶವಸ್ತಿಷ್ಠತಿ ಕರ್ಹಿಚಿತ್ ॥

ತತ್ ಪರ್ಯುಷಿತಮಿತ್ಯಾಹುಃ ॥

ವೈಖಾನಸ ಗೃಹ್ಯಪ್ರಾಯಶ್ಚಿತ್ತ ಸೂತ್ರದಲ್ಲಿ – ಶವವನ್ನು ದಹಿಸಲು ಕಾಲವು ಮೀರಿದರೆ ಮತ್ತು ಕ್ರಿಯೆಯನ್ನೇ ಮಾಡದಿದ್ದರೆ ಮತ್ತೂ ತಪ್ಪುತಪ್ಪಾಗಿ ಮಾಡಿದರೆ ಈ ಎಲ್ಲಾ ಸಂದರ್ಭಗಳಲ್ಲಿ । ಎಳ್ಳಿನಿಂದ ವಿಶ್ವೇದೇವರಿಗೆ, ಯಮನಿಗೆ ಸಂಬಂಧಿಸಿದ ಮಂತ್ರಗಳಿಂದ ಮತ್ತು ವ್ಯಾಹೃತಿಗಳಿಂದ ಪ್ರಾಯಶ್ಚಿತ್ತಹೋಮಗಳನ್ನು ಮಾಡಬೇಕು । ಹಗಲಲ್ಲಾಗಲೀ, ರಾತ್ರಿಯಲ್ಲಾಗಲೀ, ಸತ್ತಕ್ಷಣದಿಂದ 25 ಘಳಿಗೆ(10 ಗಂಟೆಗಳು) ಕಳೆದರೂ ಸಂಸ್ಕಾರವಾಗದಿದ್ದರೆ, ಆ ಶವಕ್ಕೆ ಹಳಸಿದ ಶವ ಎಂದು ಹೆಸರು ॥

ಪ್ರಾಚೀನಾವೀತಿನಾ, ...ಗೋತ್ರಸ್ಯ, ...ಪ್ರೇತಸ್ಯ ಅದ್ಯ ಪ್ರಥಮೇಹನಿ ಶವಸ್ಯ ಪರ್ಯುಷಿತತ್ವೇನ ಯೋದೋಷಸ್ಸಮಜನಿ ತದ್ದೋಷ ಪರಿಹಾರಾರ್ಥಂ (ವೈಖಾನಸೋಽದಿತ), ಪರ್ಯುಷಿತ ಪ್ರಾಯಶ್ಚಿತ್ತಂ ಕರಿಷ್ಯೇ । ತತ್ಕಾಲೇ ಕೃಚ್ಛ್ರತ್ರಯ ಪ್ರತ್ಯಾಮ್ನಾಯ ಹಿರಣ್ಯದಾನಂ ಕರಿಷ್ಯೇ – ಕೃತ್ವಾ ॥

ಮೊದಲನೇ ಹಗಲಿನಲ್ಲಿ ಈ ಹಳಸಿದ ಶವಕ್ಕೆ ಯಾವ ದೋಷ ಉಂಟಾಗಿದೆಯೋ, ಆ ದೋಷದ ಪರಿಹಾರಕ್ಕಾಗಿ, ವೈಖಾನಸರು ಹೇಳಿರುವಂತೆ ಪರ್ಯುಷಿತ ಪ್ರಾಯಶ್ಚಿತ್ತವನ್ನು ಮಾಡುತ್ತೇನೆಂದು ಸಂಕಲ್ಪಿಸಿ, ಈ ಕೆಳಗಿನಂತೆ ಮಾಡುವುದು । ಇದರ ಅಂಗವಾಗಿ ಕೃಚ್ಛ್ರದ ಪ್ರತಿನಿಧಿಯಾಗಿ ಹಣವನ್ನು ಕೊಡುತ್ತೇನೆಂದು ಈ ಮೇಲಿನಂತೆ ಸಂಕಲ್ಪಿಸಿ, ಕೊಡುವುದು ॥

ಪಚಗವ್ಯಂ ಸಂಯೋಜ್ಯ, ಪವಮಾನಃ ಸುವರ್ಜನಃ....., ಇತ್ಯೇತೇನಾನುವಾಕೇನಾಭಿಮಂತ್ರ್ಯ । ಶವಂ ಪಂಚಗವ್ಯೇನ ಕುಶತೋಯೈಶ್ಚ ಸ್ನಾಪಯೇತ್ । ಪ್ರಾಚೀನಾವೀತಿನಾ, ಅಗ್ನಿಂ ತೂಷ್ಣೀಂ, ಅಪ್ರದಕ್ಷಿಣಂ, ಪರಿಷಿಚ್ಯ, ತಿಲೈರ್ಜುಹುಯಾತ್ ।

ನಂತರ ಪಂಚಗವ್ಯವನ್ನು, ಆಯಾಯಾ ಮಂತ್ರಗಳಿಂದ ಸೇರಿಸಿ, ಪವಮಾನಸ್ಸುವರ್ಜನಃ... ಎಂಬ ಮಂತ್ರದಿಂದ ಅದನ್ನು ಅಭಿಮಂತ್ರಿಸಿ । ಶವವನ್ನು ಪಂಚಗವ್ಯ–ಕುಶೋದಕದಿಂದಲೂ ಸ್ನಾನಮಾಡಿಸಬೇಕು । ಪ್ರಾಚೀನಾವೀತಿಯಾಗಿ, ಅಗ್ನಿಯನ್ನು ಅಮಂತ್ರಕವಾಗಿ, ಅಪ್ರದಕ್ಷಿಣೆಯಾಗಿ ಪರಿಷೇಚನಮಾಡಿ, ಈ ಮೇಲಿನ 7 ಮಂತ್ರಗಳಿಗೆ ಎಳ್ಳಿನಿಂದ ಹೋಮಿಸಬೇಕು ॥

ಓಂ ವಿಶ್ವೇದೇವಸ್ಯ । ನೇತುಃ । ಮರ್ತಃ । ವೃಣೀತ । ಸಖ್ಯಮ್ ॥ ವಿಶ್ವೇ । ರಾಯಃ । ಇಷುಧ್ಯಸಿ । ದ್ಯುಮ್ನಮ್ । ವೃಣೀತ । ಪುಷ್ಯಸೇ । ಸ್ವಾಹಾ – ಕಾಲಾತ್ಮನೇ ಸವಿತ್ರ ಇದಮ್ ॥

ಓಂ ಯಮೋದಾಧಾರ । ಪೃಥಿವೀಮ್ । ಯಮಃ । ವಿಶ್ವಮ್ । ಇದಮ್ । ಜಗತ್ ॥ ಯಮಾಯ । ಸರ್ವಮಿತ್ರಃ । ತೇ । ಯತ್ಪ್ರಾಣತ್ । ವಾಯುಃ । ಅಕ್ಷಿತಮ್ । ಸ್ವಾಹಾ – ಯಮಾಯೇದಂ ನಮಮ ॥

ಓಂ ಉಶಂತಸ್ತ್ವಾ । ಹವಾಮಹೇ । ಉಶಂತಃ । ಸಮಿಧೀಮಹಿ ॥ ಉಶನ್ನುಶತ । ಆವಹ । ಪಿತೄನ್ । ಹವಿಷೇ । ಅತ್ತವೇ । ಸ್ವಾಹಾ – ಪಿತೃಭ್ಯ ಇದಂ ॥

ಓಂ ಭೂಸ್ಸ್ವಾಹಾ – ಅಗ್ನಯ ಇದಂ ।

ಓಂ ಭುವಸ್ಸ್ವಾಹಾ – ವಾಯವ ಇದಂ ॥

ಓಗ್ಂ ಸುವಸ್ಸ್ವಾಹಾ – ಸೂರ್ಯಾಯೇದಂ ॥

ಓಂ ಭೂರ್ಭುವಸ್ಸುವ ಸ್ಸ್ವಾಹಾ – ಪ್ರಜಾಪತಯ ಇದಂ ॥

28. ಅಪ್ಸುಮರಣ(ನೀರಿನಲ್ಲಿ ಸತ್ತರೆ) ಪ್ರಾಯಶ್ಚಿತ್ತಮ್ –

ಪ್ರಾಚೀನಾವೀತಿನಾ, ...ಗೋತ್ರಸ್ಯ, ...ಪ್ರೇತಸ್ಯ ಅಪ್ಸುಮರಣ ಪ್ರಾಯಶ್ಚಿತ್ತಂ ಕರಿಷ್ಯೇ । ಪ್ರತ್ಯೇಕಂ ಚತುರ್ಗೃಹೀತೇನ, ಇಮಂ ಮೇ ವರುಣ....., ತತ್ತ್ವಾಯಾಮೀತಿ....., ದ್ವೇ ಆಹುತೀ ಜುಹುಯಾತ್ ॥

ಪ್ರಾಚೀನಾವೀತಿಯಾಗಿ, ನೀರಿನಲ್ಲಿ ಸತ್ತರೆ, ಕೆಳಗಿನಂತೆ ಸಂಕಲ್ಪಿಸಿ, ಈ ಕೆಳಗಿನ 2 ಮಂತ್ರಗಳಿಗೆ, ಪ್ರತ್ಯೇಕವಾಗಿ 4 ಸಲ ತುಪ್ಪವನ್ನು ಸ್ರುಕ್ಕಿಗೆ ಹಾಕಿಕೊಂಡು, ಹೋಮಿಸಬೇಕು॥

ಓಂ ಇಮಂ । ಮೇ । ವರುಣ । ಶ್ರುಧೀಹವಮ್ । ಅದ್ಯಾ ಚ । ಮೃಡಯ ॥
ತ್ವಾಮ್ । ಅವಸ್ಯುಃ । ಆಚಕೇ ॥ ಸ್ವಾಹಾ – ವರುಣಾಯೇದಂ ನಮಮ ॥

ಓಂ ತತ್ತ್ವಾಯಾಮಿ । ಬ್ರಹ್ಮಣಾ । ವಂದಮಾನಃ । ತದಾಶಾಸ್ತೇ । ಯಜಮಾನಃ ।
ಹವಿರ್ಭಿಃ ॥ ಅಹೇಡಮಾನಃ । ವರುಣ । ಇಹಬೋಧಿ । ಉರುಶಗ್ಂಸಮಾನಃ ।
ಆಯುಃ । ಪ್ರಮೋಷೀಃ ॥ ಸ್ವಾಹಾ – ವರುಣಾಯೇದಂ ನಮಮ ॥

29. ಪಶ್ವಾದಿಭ್ಯೋ(ಪ್ರಾಣಿಗಳಿಂದ) ಮರಣೇ –

ಪ್ರಾಚೀನಾವೀತೀ, ...ಗೋತ್ರಸ್ಯ, ...ಪ್ರೇತಸ್ಯ ಪಶುಭಿರ್ಹತ ಪ್ರಾಯಶ್ಚಿತ್ತಂ ಕರಿಷ್ಯೇ । ಆಗಾವೋ ಅಗ್ಮನ್....., ಇಂದ್ರೋ ಯಜ್ವನ....., ಇತಿ ದ್ವಾಭ್ಯಾಂ ಪ್ರತ್ಯೇಕಂ ಚತುರ್ಗೃಹೀತೇನ ಜುಹುಯಾತ್ ॥

ಪ್ರಾಚೀನಾವೀತಿಯಾಗಿ, ಪ್ರಾಣಿಗಳಿಂದ ಸಾಯಲ್ಪಟ್ಟರೆ, ಕೆಳಗಿನಂತೆ ಸಂಕಲ್ಪಿಸಿ, ಈ ಮೇಲಿನ 2 ಮಂತ್ರಗಳಿಗೆ, ಪ್ರತ್ಯೇಕವಾಗಿ 4 ಸಲ ತುಪ್ಪವನ್ನು ಸ್ರುಕ್ಕಿಗೆ ಹಾಕಿಕೊಂಡು, ಹೋಮಿಸಬೇಕು ॥

ಓಂ ಆಗಾವಃ । ಅಗ್ಮನ್ । ಉತ । ಭದ್ರಮ್ । ಅಕ್ರನ್ ॥ ಸೀದಂತು । ಗೋಷ್ಠೇ । ರಣಯಂತು । ಅಸ್ಮೇ ॥ ಪ್ರಜಾವತೀಃ । ಪುರುರೂಪಾಃ । ಇಹ । ಸ್ಯುಃ ॥ ಇಂದ್ರಾಯ । ಪೂರ್ವೀಃ । ಉಷಸಃ । ದುಹಾನಾಃ ॥ ಸ್ವಾಹಾ – ಮಂತ್ರೋಕ್ತ ದೇವಾತಾಭ್ಯ ಇದಂ ॥

ಓಂ ಇಂದ್ರಃ । ಯಜ್ವನೇ । ಪೃಣತೇ ಚ । ಶಿಕ್ಷತಿ ॥ ಉಪೇತ್ । ದದಾತಿ । ನ ಸ್ವಮ್ । ಮುಷಾಯತಿ ॥ ಭೂಯೋಭೂಯಃ । ರಯಿಮ್ । ಇದಸ್ಯ । ವರ್ಧಯನ್ ॥ ಅಭಿನ್ನೇಖಿಲ್ಲೇ । ನಿದಧಾತಿ । ದೇವಯುಮ್ ॥ ಸ್ವಾಹಾ – ಇಂದ್ರಾಯೇದಂ ನಮಮ ॥

30. ದಂಷ್ಟ್ರಿಭ್ಯೋ(ಕೋಡು, ದಂತ, ಹಲ್ಲುಗಳು) ಮರಣೇ –

ಪ್ರಾಚೀನಾವೀತಿನಾ, ...ಗೋತ್ರಸ್ಯ, ...ಪ್ರೇತಸ್ಯ, ದಂಷ್ಟ್ರಿಣಾಹತ ಪ್ರಾಯಶ್ಚಿತ್ತಂ ಕರಿಷ್ಯೇ । ದಂಷ್ಟ್ರಾಭ್ಯಾಂ ಮಲಿಮ್ಲೂನ್....., ಯೇ ಜನೇಷು ಮಲಿಮ್ಲವ....., ಇತಿ ದ್ವಾಭ್ಯಾಂ ಪ್ರತ್ಯೇಕಂ ಚತುರ್ಗೃಹೀತೇನ ಜುಹುಯಾತ್ ॥

ಪ್ರಾಚೀನಾವೀತಿಯಾಗಿ, ಹಲ್ಲುಗಳಿಂದ ಕೊಲ್ಲಲ್ಪಟ್ಟರೆ, ಈ ಮೇಲಿನ 2 ಮಂತ್ರಗಳಿಗೆ, ಪ್ರತ್ಯೇಕವಾಗಿ 4 ಸಲ ತುಪ್ಪವನ್ನು ಸ್ರುಕ್ಕಿಗೆ ಹಾಕಿಕೊಂಡು, ಹೋಮಿಸಬೇಕು ॥

ಓಂ ದಗ್ಷ್ಟ್ರಾಭ್ಯಾಮ್ । ಮಲಿಮ್ಲೂನ್ । ಜಂಭ್ಯೈಃ । ತಸ್ಕರಾನ್ । ಉತ ॥ ಹನೂಭ್ಯಾಮ್ । ಸ್ತೇನಾನ್ । ಭಗವಃ । ತಾನ್ । ತ್ವಂ ಖಾದ । ಸುಖಾದಿತಾನ್ ॥ ಸ್ವಾಹಾ – ಮಂತ್ರೋಕ್ತ ದೇವತಾಭ್ಯ ಇದಂ ॥

ಓಂ ಯೇ ಜನೇಷು । ಮಲಿಮ್ಲವಃ । ತೇನಾಸಃ । ತಸ್ಕರಾಃ । ವನೇ ॥ ಯೇ ಕಕ್ಷೇಷು । ಅಘಾಯವಃ । ತಾಗ್ ಸ್ತೇ । ದಧಾಮಿ । ಜಂಭಯೋಃ ॥ ಸಾಹಾ – ಮಂತ್ರೋಕ್ತ ದೇವತಾಭ್ಯ ಇದಂ ॥

31. ಅಶನಿಪಾತ(ಸಿಡಿಲಿನಿಂದ) ಮರಣೇ –

ಪ್ರಾಚೀನಾವೀತೀ, ...ಗೋತ್ರಸ್ಯ, ...ಪ್ರೇತಸ್ಯ, ಅಶನಿಪಾತ ಮರಣ ಪ್ರಾಯಶ್ಚಿತ್ತಂ ಕರಿಷ್ಯೇ । ಚತುರ್ಗೃಹೀತೇನ, ಮೂರ್ಧಾನಂ ದಿವ....., ಇತ್ಯೇತಯರ್ಚಾ ಜುಹುಯಾತ್ ॥

ಪ್ರಾಚೀನಾವೀತಿಯಾಗಿ, ಸಿಡಿಲಿನಿಂದ ಸತ್ತರೆ, ಈ ಮೇಲಿನ 1 ಮಂತ್ರದಿದ, 4 ಸಲ ತುಪ್ಪವನ್ನು ಸ್ರುಕ್ಕಿಗೆ ಹಾಕಿಕೊಂಡು, ಹೋಮಿಸಬೇಕು ॥

ಓಂ ಮೂರ್ಧಾನಮ್ । ದಿವಃ । ಅರತಿಮ್ । ಪೃಥಿವ್ಯಾ । ವೈಶ್ವಾನರಮ್ । ಋತಾಯ । ಜಾತಮ್ । ಅಗ್ನಿಮ್ ॥ ಕವಿಮ್ । ಸಮ್ರಾಜಮ್ । ಅತಿಥಿಮ್ । ಜನಾನಾಮ್ । ಆಸನ್ನಾಪಾತ್ರಮ್ । ಜನಯಂತ । ದೇವಾಃ ॥ ಸ್ವಾಹಾ – ಅಗ್ನಯೇ ವೈಶ್ವಾನರಾಯೇದಂ ॥

32. ವಿಷದಷ್ಟ(ವಿಷದಿಂದ) ಮರಣೇ –

ಪ್ರಾಚೀನಾವೀತೀ, ...ಗೋತ್ರಸ್ಯ, ...ಪ್ರೇತಸ್ಯ, ವಿಷದಷ್ಟ ಮರಣಪ್ರಾಯಶ್ಚಿತ್ತಂ ಕರಿಷ್ಯೇ । ನಮೋ ಅಸ್ತು....., ಇತಿ ತಿಸೃಭಿಃ ಪ್ರತ್ಯೇಕಂ ಚತುರ್ಗೃಹೀತೇನ ಜುಹುಯಾತ್ ॥

ಪ್ರಾಚೀನಾವೀತೀ, ವಿಷದಿಂದ ಸತ್ತರೆ, ಈ ಕೆಳಗಿನ 3 ಮಂತ್ರಗಳಿಗೆ, ಪ್ರತ್ಯೇಕವಾಗಿ 4 ಸಲ ತುಪ್ಪವನ್ನು ಸ್ರುಕ್ಕಿಗೆ ಹಾಕಿಕೊಂಡು, ಹೋಮಿಸಬೇಕು ॥

ಓಂ ನಮೋ ಅಸ್ತು । ಸರ್ಪೇಭ್ಯಃ । ಯೇ ಕೇ ಚ । ಪೃಥಿವೀಮ್ । ಅನು ॥ ಯೇ । ಅಂತರಿಕ್ಷೇ । ಯೇ ದಿವಿ । ತೇಭ್ಯಃ । ಸರ್ಪೇಭ್ಯಃ । ನಮಃ । ಸ್ವಾಹಾ – ಸರ್ಪೇಭ್ಯ ಇದಂ ನಮಮ ॥

ಓಂ ಯೇಽದಃ । ರೋಚನೇ । ದಿವಃ । ಯೇ ವಾ । ಸೂರ್ಯಸ್ಯ । ರಶ್ಮಿಷು ॥ ಯೇಷಾಮ್ । ಅಪ್ಸುಸದಃ । ಕೃತಮ್ । ತೇಭ್ಯಃ । ಸರ್ಪೇಭ್ಯಃ ನಮಃ । ಸ್ವಾಹಾ – ಸರ್ಪೇಭ್ಯ ಇದಂ ನಮಮ ॥

ಓಂ ಯಾ ಇಷವಃ । ಯಾತುಧಾನಾನಾಮ್ । ಯೇ ವಾ । ವನಸ್ಪತೀನ್ । ಅನು ॥ ಯೇ ವಾ । ಅವಟೇಷು । ಶೇರತೇ । ತೇಭ್ಯಃ । ಸರ್ಪೇಭ್ಯಃ । ನಮಃ । ಸ್ವಾಹಾ – ಸರ್ಪೇಭ್ಯ ಇದಂ ನಮಮ ॥

33. ವಿಧಿಗಳನ್ನು ತಪ್ಪಾಗಿ ಅಥವಾ ವ್ಯತ್ಯಾಸವಾಗಿ ಮಾಡಿದರೆ –

ಪ್ರಥಮದಿನೇ ಯೇನ ದ್ರವ್ಯೇಣ ಪಿಂಡದಾನಂ ಕೃತಂ ತದ್ದ್ರವ್ಯೇಣೈವ ಆದಶಾಹಂ ಪಿಂಡಂ ದದ್ಯಾತ್ । ಪಿಂಡದ್ರವ್ಯ ವಿಪರ್ಯಾಸೇ ಚರುಪಾತ್ರ ವಿಪರ್ಯಾಸೇ ವಾ ಪೂರ್ವದತ್ತ ಪಿಂಡಬಲೀನ್ ಪುನರ್ದದ್ಯಾತ್ । ನವವಸ್ತ್ರ ವಿಪರ್ಯಾಸೇ ಪೂರ್ವದತ್ತ ವಾಸೋದಕ ದಾನಾನಿ ಪುನರ್ದದ್ಯಾತ್ । ಕುಂಭವಿಪರ್ಯಾಸೇ ಪೂರ್ವದತ್ತ ತಿಲೋದಕಾನಿ ಪುನರ್ದದ್ಯಾತ್ । ಕರ್ತೃ ವಿಪರ್ಯಾಸೇ ಪೂರ್ವದತ್ತ ವಾಸೋದಕಾದಿ ಶ್ರಾದ್ಧಾಂತಾನಿ ಪುನರ್ದದ್ಯಾತ್ ।

ಮೊದಲದಿನ ಯಾವ ದ್ರವ್ಯದಿಂದ ಪಿಂಡವನ್ನು ಕೊಡುತ್ತಾನೋ ಅದೇ ದ್ರವ್ಯದಿಂದ 10 ದಿವಸವೂ ಪಿಂಡವನ್ನು ಕೊಡಬೇಕು । ಪಿಂಡದ್ರವ್ಯ ಅಥವಾ ಚರುಪಾತ್ರೆ ವ್ಯತ್ಯಾಸವಾದರೆ ಹಿಂದೆಕೊಟ್ಟ ಪಿಂಡಬಲಿಗಳನ್ನು ಮತ್ತೆ ಕೊಡಬೇಕು । ವಾಸೋದಕವನ್ನು ಕೊಡುವ ಹೊಸಬಟ್ಟೆಯು ವ್ಯತ್ಯಾಸವಾದರೆ, ಹಿಂದೆ ಕೊಟ್ಟ ಅಷ್ಟೂ ವಾಸೋದಕಗಳನ್ನೂ ಪುನಃ ಕೊಡಬೇಕು । ತಿಲೋದಕವನ್ನು ಕೊಡುವ ಕಲಶವು ವ್ಯತ್ಯಾಸವಾದರೆ, ಹಿಂದೆ ಕೊಟ್ಟ ತಿಲೋದಕಗಳನ್ನೂ ಪುನಃ ಕೊಡಬೇಕು । ಕರ್ತೃವೇ ವ್ಯತ್ಯಾಸವಾದರೆ, ಹಿಂದೆ ಕೊಟ್ಟ ವಾಸೋದಕವೇ ಮೊದಲಾದ ಶ್ರಾದ್ಧಾಂತ ಕರ್ಮಗಳನ್ನೂ ಮತ್ತೇ ಮಾಡಬೇಕು ।

ಗೃಹದ್ವಾರಕುಂಡ, ತೀರಕುಂಡ ವಿಪರ್ಯಾಸೇ ಚ ಪೂರ್ವದತ್ತ ವಾಸೋದಕ ತಿಲೋದಕಾನಿ ಪುನಃ ದದ್ಯಾತ್ ।

ಮನೆಯ ಹೊರದ್ವಾರದ ಗುಂಡಿ ಮತ್ತು ನದೀತೀರದ ಗುಂಡಿಗಳು ವ್ಯತ್ಯಾಸವಾದರೆ, ಹಿಂದೆಕೊಟ್ಟ ವಾಸೋದಕ ತಿಲೋದಕಗಳನ್ನೂ ಮತ್ತೆ ಕೊಡಬೇಕು ।

ಗೃಹದ್ವಾರಕುಂಡ, ತೀರಕುಂಡ ಪಾಷಾಣನಾಶೇ ಚ ಅನ್ಯ ಪಾಷಾಣಂ ಆಯಾತು ಇತಿ ಮಂತ್ರೇಣ ಸ್ಥಾಪ್ಯ । ಪ್ರಾಚೀನಾವೀತಿನಾ । ಲೌಕಿಕಾಗ್ನಿಂ ಸ್ಥಾಪಯಿತ್ವಾ, ಯಮೇ ಇವ ಇತಿ ಮಂತ್ರೇಣ ಹುತ್ವಾ । ಪೂರ್ವದತ್ತ ವಾಸೋದಕಾದಿ ಶ್ರಾದ್ಧಾಂತಾನಿ ಪುನರ್ದದ್ಯಾತ್ ।

ಮನೆಯಪಕ್ಕದ ಗುಂಡಿಯಲ್ಲಿನ ಮತ್ತು ತೀರಕುಂಡದ ಗುಂಡಿಯಲ್ಲಿನ ಶಿಲೆಗಳು ನಾಶವಾದರೆ, ಬೇರೇ ಕಲ್ಲನ್ನು ತೆಗೆದುಕೊಂಡು, ಆಯಾತು....., ಎಂಬ ಮಂತ್ರದಿಂದ ಗುಂಡಿಯಲ್ಲಿಟ್ಟು । ಪ್ರಾಚೀನಾವೀತಿಯಿಂದ ಲೌಕಿಕಾಗ್ನಿಯನ್ನು ಸ್ಥಾಪಿಸಿಕೊಂಡು, ಆಜ್ಯಸಂಸ್ಕಾರಮಾಡಿ, ಈ ಕೆಳಗಿನ ಯಮೇ ಇವ.... ಮಂತ್ರದಿಂದ ಹೋಮಿಸಿ । ಹಿಂದೆಕೊಟ್ಟ ವಾಸೋದಕ ತಿಲೋದಕಗಳನ್ನು ಮತ್ತೆ ಕೊಡಬೇಕು ।

ಪಾಷಾಣಾಂತರೇ ಸ್ಥಾಪಿತೇ ನಷ್ಟಪಾಷಾಣ ದರ್ಶನೇ । ಪುನಃ ತತ್ಪಾಷಾಣಂ ತತ್ರೈವಕುಂಡೇ ಮಂತ್ರೇಣಸ್ಥಾಪ್ಯ । ಪುನಃ ಪ್ರಾಚೀನಾವೀತಿನಾ ।

ಲೌಕಿಕಾಗ್ನಿಂ ಸ್ಥಾಪಯಿತ್ವಾ, ಯಮೇ ಇವ ಇತಿ ಮಂತ್ರೇಣ ಹುತ್ವಾ । ಪೂರ್ವದತ್ತ ವಾಸೋದಕಾದಿ ಶ್ರಾದ್ಧಾಂತಾನಿ ಪುನರ್ದದ್ಯಾತ್ ।

ಹೊಸಕಲ್ಲನ್ನಿಟ್ಟಮೇಲೆ, ನಷ್ಟವಾದ ಕಲ್ಲು ಕಂಡರೆ, ಪುನಃ ಆಯಾತು....., ಎಂಬ ಮಂತ್ರದಿಂದ ಗುಂಡಿಯಲ್ಲಿಟ್ಟು । ಪ್ರಾಚೀನಾವೀತಿಯಿಂದ ಲೌಕಿಕಾಗ್ನಿಯನ್ನು ಸ್ಥಾಪಿಸಿಕೊಂಡು, ಆಜ್ಯ ಸಂಸ್ಕಾರಮಾಡಿ, ಈ ಕೆಳಗಿನ ಯಮೇ ಇವ.... ಮಂತ್ರದಿಂದ ಹೋಮಿಸಿ । ಅದೇ ಗುಂಡಿಯಲ್ಲೇ ಪುನಃ ಇಡಬೇಕು । ಹಿಂದೆಕೊಟ್ಟ ವಾಸೋದಕ ತಿಲೋದಕಗಳನ್ನು ಮತ್ತೆ ಕೊಡಬೇಕು ।

ಓಂ ಆಯಾತು । ದೇವಃ । ಸುಮನಾಭಿಃ । ಊತಿಭಿಃ । ಯಮಃ । ಹವೇಹ ।
ಪ್ರಯತಾಭಿಃ । ಅಕ್ತಾ ॥ ಆಸೀದತಾಮ್ । ಸುಪ್ರಯತಾ । ಇಹ । ಬರ್ಹಿಷಿ ।
ಊರ್ಜಾಯ । ಜಾತ್ಯೈ ಲ । ಮಮ । ಶತ್ರುಹತ್ಯೈ ಲ ॥

ಓಂ ಯಮೇ ಇವ । ಯತಮಾನೇ । ಯದ್ಯೈತಮ್ । ಪ್ರವಾಂಭರನ್ । ಮಾನುಷಾ ।
ದೇವಯಂತಃ ॥ ಆಸೀದತಮ್ । ಸ್ವಮುಲೋಕಮ್ । ವಿದಾನೇ । ಸ್ವಾಸಸ್ಥೇ ।
ಭವತಮ್ । ಇಂದವೇನಃ । ಸ್ವಾಹಾ ॥

5. ಪಿತೃಮೇಧ ಮಂತ್ರಗಳಿಗೆ ಶ್ರೀಸಾಯಣಾಚಾರ್ಯರ ಭಾಷ್ಯಾರ್ಥವು

1. ಮಂತ್ರ – (ಆರಣ್ಯಕ – 8, 1) (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ)

ಓಂ ಬ್ರಹ್ಮವಿದಾಪ್ನೋತಿ ಪರಮ್ । ತದೇಷಾಭ್ಯುಕ್ತಾ । ಸತ್ಯಂ ಜ್ಞಾನಮನಂತಂ ಬ್ರಹ್ಮ । ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ । ಸೋಽಶ್ನುತೇ ಸರ್ವಾನ್ಕಾಮಾನ್ತ್ಸಹ । ಬ್ರಹ್ಮಣಾ ವಿಪಶ್ಚಿತೇತಿ । ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಸ್ಸಂಭೂತಃ । ಆಕಾಶಾದ್ವಾಯುಃ । ವಾಯೋರಗ್ನಿಃ । ಅಗ್ನೇರಾಪಃ । ಅದ್ಭ್ಯಃ ಪೃಥಿವೀ । ಪೃಥಿವ್ಯಾ ಓಷಧಯಃ । ಓಷಧೀಭ್ಯೋಽನ್ನಮ್ । ಅನ್ನಾತ್ಪುರುಷಃ । ಸ ವಾ ಏಷ ಪುರುಷೋನ್ನರಸಮಯಃ । ತಸ್ಯೇದಮೇವ ಶಿರಃ । ಅಯಂ ದಕ್ಷಿಣಃ ಪಕ್ಷಃ । ಅಯಮುತ್ತರಃ ಪಕ್ಷಃ । ಅಯಮಾತ್ಮಾ । ಇದಂ ಪುಚ್ಛಂ ಪ್ರತಿಷ್ಠಾ । ತದಪ್ಯೇಷಶ್ಲೋಕೋ ಭವತಿ ॥

ವಿನಿಯೋಗ –

ಇದು ಮತ್ತು ಕೆಳಗಿನ ಮಂತ್ರವು, ಬ್ರಹ್ಮಜ್ಞಾನಿಗಳಾದ, ಉಪಾಸಕರಾದ, ಆಹಿತಾಗ್ನಿಗಳ ಮರಣಕಾಲದಲ್ಲಿ ಅವರ ಕಿವಿಯಲ್ಲಿ ಹೇಳುವ ಮಂತ್ರವೆಂದು ಸೂತ್ರಕಾರರು ಅಭಿಪ್ರಾಯಪಟ್ಟಿದ್ದಾರೆ ॥

ಅರ್ಥ –

ಬ್ರಹ್ಮಸ್ವರೂಪವನ್ನು ತಿಳಿದವನು(ತನ್ನ ಸ್ವರೂಪವನ್ನು), ಬ್ರಹ್ಮಸ್ವರೂಪವೇ ಆಗುತ್ತಾನೆ. ಆ ಬ್ರಹ್ಮಸ್ವರೂಪವನ್ನು ಇಲ್ಲಿ ವಿವರಿಸಿದೆ. ಹೇಗೆಂದರೆ – ಸತ್ಯವೂ, ಜ್ಞಾನವೂ, ಅನಂತವೂ ಆದದ್ದು ಬ್ರಹ್ಮವು. ನಮ್ಮ ಹೃದಯಪುಂಡರೀಕದಲ್ಲಿ ಇರುವ ಅತ್ಯಂತ ಗಹನವಾದ, ಶ್ರೇಷ್ಠವಾದ ಆಕಾಶದಲ್ಲಿ ತಿಳಿದುಬರುವುದಾಗಿದೆ, ಈ ಬ್ರಹ್ಮವು. ಎಂದರೆ ಅಲ್ಲಿ ಇಡಲ್ಪಟ್ಟಿದ್ದಾನೆ ಎಂದರ್ಥ. ಆ ಬ್ರಹ್ಮವನ್ನು ಯಾರು ಅರಿಯುತ್ತಾನೋ ಅವನು ಎಲ್ಲಾ ಕಾಮಗಳನ್ನೂ ಒಮ್ಮೆಗೇ ಪಡೆಯಲ್ಪಟ್ಟವನಾಗಿ ಬ್ರಹ್ಮನೇ ಆಗುತ್ತಾನೆ. ಆ ಬ್ರಹ್ಮನಾದ ಅತ್ಮನಿಂದ ಆಕಾಶವು ಉಂಟಾಯಿತು. ಆಕಾಶದಿಂದ ವಾಯುವು, ವಾಯುವಿನಿಂದ ಅಗ್ನಿಯು, ಅಗ್ನಿಯಿಂದ ನೀರು, ನೀರಿನಿಂದ ಪೃಥಿವಿಯು, ಪೃಥಿವಿಯಿಂದ ಓಷಧಿವನಸ್ಪತಿಗಳು, ಓಷಧಿವನಸ್ಪತಿಗಳಿಂದ ಅನ್ನವು, ಅನ್ನದಿಂದ ಮನುಷ್ಯನು, ಹೀಗೆ ಕ್ರಮವಾಗಿ ಸೃಷ್ಟಿಯು ಉಂಟಾಯಿತು. ಈ ಮನುಷ್ಯನು ಅನ್ನರಸದಿಂದ ಹುಟ್ಟಿದವನಾಗಿದ್ದಾನೆ. ಅವನಿಗೆ ಪ್ರಧಾನವಾದ ಅಂಗವೇ ಶಿರಸ್ಸು. ಅವನಿಗೆ ಪ್ರಸಿದ್ಧವಾದ ಬಲ ಮತ್ತು ಎಡಬಾಹುಗಳೇ ದಕ್ಷಿಣೋತ್ತರ ಪಕ್ಷಗಳು. ಅವನ ದೇಹದ ಮಧ್ಯವೇ ಆತ್ಮವು. ಅವನ ಶಿಶ್ನವೇ ಪುಚ್ಛವು. ಇದೇ ಅವನಿಗೆ ಪ್ರತಿಷ್ಠಾಸ್ಥಾನವು, ಅಂದರೆ ಮಗ ಮೊಮ್ಮಗ ರೂಪದಿಂದ ಈ ಲೋಕದಲ್ಲಿರಲು ಪ್ರತಿಷ್ಠಾಸ್ಥಾನವು. ಈ ಅರ್ಥದಲ್ಲಿ ಮುಂದೆ ಒಂದು ಮಂತ್ರವಿದೆ ॥

2. ಮಂತ್ರ – (ಆರಣ್ಯಕ – 9, 1) (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ)

ಓಂ ಭೃಗುರ್ವೈ ವಾರುಣಿಃ । ವರುಣಂ ಪಿತರಮುಪಸಸಾರ । ಅಧೀಹಿ ಭಗವೋ ಬ್ರಹ್ಮೇತಿ । ತಸ್ಮಾ ಏತತ್ಪ್ರೋವಾಚ । ಅನ್ನಂ ಪ್ರಾಣಂ ಚಕ್ಷುಶ್ಶ್ರೋತ್ರಂ ಮನೋವಾಚಮಿತಿ । ತಗ್ಂ ಹೋವಾಚ । ಯತೋ ವಾ ಇಮಾನಿ ಭೂತಾನಿ ಜಾಯಂತೇ । ಯೇ ನ ಜಾತಾನಿ ಜೀವಂತಿ । ಯತ್ಪ್ರಯಂತ್ಯಭಿಸಂವಿಶಂತಿ । ತದ್ವಿಜಿಜ್ಞಾಸಸ್ವ । ತದ್ಬ್ರಹ್ಮೇತಿ । ಸ ತಪೋತಪ್ಯತ । ಸ ತಪಸ್ತಪ್ತ್ವಾ ॥

ಅರ್ಥ –

ಭೃಗುವೆಂಬ ವರುಣನ ಮಗನು ಇದ್ದನು. ಅವನು ತನ್ನ ತಂದೆಯಾದ ವರುಣನ ಹತ್ತಿರ ಹೋದನು. ಅಲ್ಲಿ ಪೂಜ್ಯತಂದೆಯೇ ನನಗೆ ಬ್ರಹ್ಮನನ್ನು ತಿಳಿಸಿಕೊಡು ಎಂದು ಕೇಳುತ್ತಾನೆ. ಅವನಿಗೆ ಈ ಮುಂದಿನ ವಿಷಯವನ್ನು ತಂದೆಯು ಹೇಳುತ್ತಾನೆ. ಏನೆಂದರೆ – ಅನ್ನ, ಪ್ರಾಣ, ಕಣ್ಣು, ಕಿವಿ, ಮನಸ್ಸು ಮತ್ತು ವಾಕ್, ಇವುಗಳು ಬ್ರಹ್ಮನನ್ನು ತಿಳಿಯಲು ದ್ವಾರವಾಗಿವೆ ಎಂದು ಹೇಳಿದನು. ನಂತರ ತನ್ನ ಮಗನನ್ನು ಕುರಿತು ಹೀಗೆ ಹೇಳುತ್ತಾನೆ, ಯಾವುದರಿಂದ ಈ ಸಮಸ್ತ ಪ್ರಾಣಿಗಳೂ ಹುಟ್ಟಿವೆಯೋ ಹಾಗೂ ಹುಟ್ಟಿದ ಈ ಸಮಸ್ತ ಪ್ರಾಣಿಗಳು ಯಾವುದರಿಂದ ಜೀವಿಸುತ್ತವೆಯೋ ಹಾಗೂ ಕೊನೆಗೆ ಈ ಸಮಸ್ತ ಪ್ರಾಣಿಗಳೂ ಯಾವುದರಲ್ಲಿ ಲೀನವಾಗಿ ಒಂದಾಗುತ್ತವೆಯೋ ಅದನ್ನು ವಿಚಾರಮಾಡಿ ತಿಳಿದು ಅದೇ ಬ್ರಹ್ಮವೆಂದು ನಿಶ್ಚಯಿಸು. ಹೀಗೆ ತಂದೆಯಿಂದ ಹೇಳಲ್ಪಟ್ಟವನಾಗಿ ಆ ಭೃಗುವು ವಿಚಾರರೂಪವಾದ ತಪಸ್ಸನ್ನು ಹೀಗೆ ಮಾಡಿದನು ॥

3. ಮಂತ್ರ – (ಬ್ರಾಹ್ಮಣ 1–5–7) (ಅನಾಹಿತಾಗ್ನಿಗಳಿಗೆ)

ಓಂ ಆಯುಷಃ ಪ್ರಾಣಗ್ಂ ಸಂತನು । ಪ್ರಾಣಾದಪಾನಗ್ಂ ಸಂತನು । ಅಪಾನಾದ್ವ್ಯಾನಗ್ಂ ಸಂತನು । ವ್ಯಾನಾಚ್ಚಕ್ಷುಸ್ಸಂತನು । ಚಕ್ಷುಷಶ್ಶ್ರೋತ್ರಗ್ಂ ಸಂತನು । ಶ್ರೋತ್ರಾನ್ಮನಸ್ಸಂತನು । ಮನಸೋ ವಾಚಗ್ಂ ಸಂತನು । ವಾಚ ಆತ್ಮಾನಗ್ಂ ಸಂತನು । ಆತ್ಮನಃ ಪೃಥಿವೀಗ್ಂ ಸಂತನು । ಪೃಥಿವ್ಯಾ ಅಂತರಿಕ್ಷಗ್ಂ ಸಂತನು । ಅಂತರಿಕ್ಷಾದ್ದಿವಗ್ಂ ಸಂತನು । ದಿವಸ್ಸುವಸ್ಸಂತನು ॥

ವಿನಿಯೋಗ –

ಈ ಅನುವಾಕದಲ್ಲಿ(ಮಂತ್ರದಲ್ಲಿ) ಅಗ್ನಿಚಯನಕ್ಕೆ ಶೇಷವಾದ ಇಷ್ಟಕೋಪಧಾನ

ಮಂತ್ರವನ್ನು "ಪ್ರಾಚೀ ದಿಶಾಂ" ಎಂಬ ಅಪಾನಭೃತ್ ಇಷ್ಟಿಕೆಗಳ ನಂತರ ಹೇಳಿದೆ ॥ ಹಾಗೆಯೇ ಸೂತ್ರಕಾರರು ಈ ಮಂತ್ರವನ್ನು ಸ್ತ್ರೀ ಮತ್ತು ಲೌಕಿಕ ಪುರುಷರಾಗಿದ್ದು ಸಾಯುವ ಕಡೇಕ್ಷಣದಲ್ಲಿರುವ ವ್ಯಕ್ತಿಯ ಅಥವಾ ಮೃತನ ಕಿವಿಯಲ್ಲಿ ಹೇಳಬೇಕೆಂದು ತಿಳಿಸಿರುತ್ತಾರೆ ॥

ಅರ್ಥ –

ಎಲೈ ಇಷ್ಟಿಕೆಯೇ(ಚಯನದಲ್ಲಿ ಬಳಸುವ ಇಟ್ಟಿಗೆ) ನೀನು ಆಯಸ್ಸು ಮತ್ತು ಪ್ರಾಣಗಳ ಸಂತತಿಯನ್ನು ಅವೆರಡನ್ನೂ, ಒಂದುಗೂಡಿಸುವುದರ ಮೂಲಕ ವಿಚ್ಛೇದವಿಲ್ಲದಂತೆ ಮಾಡು । ಹಾಗೆಯೇ ಪ್ರಾಣದ ಜೊತೆ ಅಪಾನವನ್ನೂ । ಅಪಾನದ ಜೊತೆ ವ್ಯಾನವನ್ನೂ । ವ್ಯಾನದ ಜೊತೆ ಚಕ್ಷುವನ್ನು । ಚಕ್ಷುವಿನ ಜೊತೆ ಶ್ರೋತ್ರ ವನ್ನೂ । ಶ್ರೋತ್ರದ ಜೊತೆ ಮನಸ್ಸನ್ನು । ಮನಸ್ಸಿನ ಜೊತೆ ವಾಕನ್ನು । ವಾಕ್‌ನ ಜೊತೆ ಜೀವನನ್ನು(ಪರಮಾತ್ಮ) । ಜೀವದ ಜೊತೆ ಪೃಥಿವಿಯನ್ನೂ । ಪೃಥಿವಿಯ ಜೊತೆ ಅಂತರಿಕ್ಷವನ್ನೂ । ಅಂತರಿಕ್ಷದ ಜೊತೆ ದ್ಯುಲೋಕ(ಸ್ವರ್ಗ)ವನ್ನೂ । ದ್ಯುಲೋಕದ ಜೊತೆ ಸುವರ್ಲೋಕವನ್ನೂ । ಇವುಗಳ ಸಂತತಿಗಾಗಿ ಒಂದುಗೂಡಿಸಿ, ವಿಚ್ಛೇದವಿಲ್ಲದಂತೆ ಮಾಡು ॥

4. ಮಂತ್ರ (ಆಹಿತಾಗ್ನಿ+ಅನಾಹಿತಾಗ್ನಿಗಳಿಬ್ಬರಿಗೂ) –

ಓಂ ಸರ್ವಸ್ಯ ಪ್ರತಿಶೀವರೀ ಭೂಮಿಸ್ತ್ವೋಪಸ್ಥ ಆಧಿತ । ಸ್ಯೋನಾಸ್ಮೈ(ಸ್ಯೈ) ಸುಷದಾಭವ ಯಚ್ಛಾಸ್ಮೈ(ಸ್ಯೈ) ಶರ್ಮ ಸಪ್ರಥಾಃ ॥

ವಿನಿಯೋಗ –

ಈ ಮಂತ್ರವನ್ನು ಸೋಮಯಾಗ ಮುಂತಾದವುಗಳಲ್ಲಿ ಷೋಡಶೀಗ್ರಹದ ಗ್ರಹಣೆಗೆ ಹೇಳುವ ಮಂತ್ರ. ಆದರೆ ಇಲ್ಲಿ ಸೂತ್ರಕಾರರು ಈ ಮಂತ್ರವನ್ನು ಮೃತನನ್ನು ದಕ್ಷಿಣದಿಕ್ಕಿಗೆ ತಲೆ ಬರುವಂತೆ ಮಲಗಿಸುವಾಗ ಹೇಳಬೇಕೆಂದು ವಿಧಿಸಿದ್ದಾರೆ ॥

ಅರ್ಥ –

ಎಲ್ಲಾ, ಸಮಸ್ತ ಪ್ರಾಣಿಸಮೂಹಕ್ಕೆ ಅಭಿಮುಖವಾಗಿ ಮಲಗಿರುವ ಎಲೈ ಭೂಮಿಯೇ, ನಿನ್ನನ್ನು ಇಂದ್ರನು ಅತ್ಯಂತ ಶ್ರೇಷ್ಠಸ್ಥಾನದಲ್ಲಿ ಧರಿಸಲಿ. ಅಥವಾ ತನ್ನ ಸ್ಥಾನದಲ್ಲಿ ಧರಿಸಲಿ. ಎಲೈ ಭೂಮಿಯೇ ಈ ಇಂದ್ರನಿಗೆ ಸುಖಪ್ರದಳಾಗು. ಹಾಗೂ ಒಳ್ಳೆಯ ವಾಸಸ್ಥಾನವಾಗು. ಈ ಯಜಮಾನನಿಗೆ ತುಂಬಾ ವಿಸ್ತಾರವಾಗಿ ಸುಖವನ್ನು ಕೊಡುವವಳಾಗು ॥

5. ಮಂತ್ರ (ಇಬ್ಬರಿಗೂ) –

ಓಂ ಪರೇಯುವಾಗ್ಂ ಸಂ ಪ್ರವತೋ ಮಹೀರನು ಬಹುಭ್ಯಃ ಪಂಥಾಮನಪಸ್ಪ ಶಾನಂ । ವೈವಸ್ವತಗ್ಂ ಸಂಗಮನಂ ಜನಾನಾಂ ಯಮಗ್ಂ ರಾಜಾನಗ್ಂ ಹವಿಷಾ ದುವಸ್ಯತ ॥

ವಿನಿಯೋಗ –

ಈ ಮಂತ್ರದಿಂದ ಮೃತನಾದ ಯಜಮಾನನ ಬಲಕೈಯನ್ನು ಹಿಡಿದುಕೊಂಡು, ಯಜಮಾನನ ಗಾರ್ಹಪತ್ಯಾಗ್ನಿಯಲ್ಲಿ ತುಪ್ಪವನ್ನು ಕಾಯಿಸಿಕೊಂಡು, ಉತ್ಪವನಮಾಡಿ, ಸ್ರುಕ್ಕಿಗೆ 4 ಸಲ ಹಾಕಿಕೊಂಡು, ಆವಹನೀಯದಲ್ಲಿ ಹೋಮಿಸಬೇಕು ॥

ಅರ್ಥ –

ಎಲೈ ಪಿತೃಮೇಧ ಯಜ್ಞವನ್ನು ನಡೆಸುವವರಾದ ಪಿತೃದೇವತೆಗಳೇ, ನಿಮ್ಮ ರಾಜನಾದ, ಉತ್ಕೃಷ್ಟ ಕರ್ಮವನ್ನು ಮಾಡುವ ಭೂಲೋಕದಲ್ಲಿ ಅವರವರ ಪುಣ್ಯಪಾಪಕರ್ಮಗಳಿಗೆ ತಕ್ಕಂತೆ ಆಯಾಯಾ ಭೋಗಸ್ಥಾನಗಳಲ್ಲಿ ಮರಣಾನಂತರ ಆ ಸ್ಥಾನವನ್ನು ಕೊಡುವವನಾದ ಯಮರಾಜನಿಗೆ ಈ ಹೋಮವನ್ನು ಮಾಡುವುದರ ಮೂಲಕ ಪ್ರೀತಿಯನ್ನುಂಟುಮಾಡಿರಿ. ಸ್ವರ್ಗಾರ್ಥಿಗಳಿಗೆ ಅವರ ಪುಣ್ಯಫಲಗಳಿಗೆ ತಕ್ಕಂತೆ ಸ್ವರ್ಗಮಾರ್ಗವನ್ನು ತಿಳಿಸಿ, ಅದರಲ್ಲಿ ನಿರ್ವಿಘ್ನವಾಗಿ ಗತಿಯನ್ನು ಹೊಂದಿ, ಸ್ವರ್ಗವನ್ನು ಪಡೆಯುವಂತೆ ಮಾಡುವವನಾದ ಹಾಗೂ ಪಾಪಿಗಳಿಗೆ ನರಕಲೋಕವನ್ನು

ಕೊಡುವವನಾದ ನಿಮ್ಮ ಯಮರಾಜನಿಗೆ ಈ ಹೋಮದಿಂದ ಪ್ರೀತಿಯಾಗುವಂತೆ ಮಾಡಿರಿ ॥

6. ಮಂತ್ರ (ಇಬ್ಬರಿಗೂ) –

ಓಂ ಇದಂ ತ್ವಾ ವಸ್ತ್ರಂ ಪ್ರಥಮನ್ವಾಗನ್ ॥

ವಿನಿಯೋಗ –

ಈ ಮಂತ್ರದಿಂದ, ಅತ್ತಿಮರದ ಆಸಂದಿ(ಚೆಟ್ಟ)ಯಲ್ಲಿ ಕೃಷ್ಣಾಜಿನವನ್ನು ದಕ್ಷಿಣಾಗ್ರವಾಗಿ ಲೋಮ(ರೋಮ)ಗಳು ಕೆಳಬರುವಂತೆ ಹಾಸಿ, ಅದರಲ್ಲಿ ಈ ಮೃತನಾದ ಯಜಮಾನನ್ನು ಮೇಲ್ಮುಖವಾಗಿ ಮಲಗಿಸಿ, ಸಂಪೂರ್ಣ ದೇಹವನ್ನು ಈ ಮಂತ್ರದಿಂದ ವಸ್ತ್ರದಿಂದ ಮುಚ್ಚುತ್ತಾನೆ ॥

ಅರ್ಥ –

ಎಲೈ ಮೃತನಾದ ಯಜಮಾನನೇ, ಮೊದಲೇ(ಸಾಯುವುದಕ್ಕೆ ಮುಂಚೆಯೇ) ಈ ವಸ್ತ್ರವು ನಿನಗೆ ಪ್ರಾಪ್ತವಾಗಲಿ ॥

7. ಮಂತ್ರ (ಇಬ್ಬರಿಗೂ) –

ಓಂ ಅಪ್ಯೈತದೂಹ ಯದಿಹಾಬಿಭಃ ಪುರಾ । ಇಷ್ಟಾಪೂರ್ತಮನುಸಂಪಶ್ಯ ದಕ್ಷಿಣಾಂ ಯಥಾ ತೇ ದತ್ತಂ ಬಹುಧಾ ವಿಬಂಧುಷು ॥

ವಿನಿಯೋಗ –

ಈ ಮಂತ್ರದಿಂದ, ಮೃತನ ದೇಹದಲ್ಲಿರುವ ಹಳೆಯವಸ್ತ್ರವನ್ನು ಅವನ ಮಗನೋ, ಅಣ್ಣತಮ್ಮಂದಿರೋ, ಹತ್ತಿರದ ಬಂಧುವೋ ತೆಗೆದುಹಾಕಿ ಈ ಮೇಲೆಹೇಳಿದ ವಸ್ತ್ರವನ್ನು ಹೊದಿಸಬೇಕು ॥

ಅರ್ಥ –

ಎಲೈ ಮೃತನಾದ ಯಜಮಾನನೇ, ಮೊದಲು ನೀನು ಧರಿಸಿದ್ದ ವಸ್ತ್ರವನ್ನು ತೆಗೆದುಹಾಕು. ನೀನು ಅನುಷ್ಠಾನಮಾಡಿದ ಶ್ರೌತಸ್ಮಾರ್ತಾದಿ ಪುಣ್ಯಕರ್ಮಗಳನ್ನು ಕ್ರಮವಾಗಿ ಸ್ಮರಣೆಮಾಡಿಕೋ ಹಾಗೆಯೇ ಬ್ರಾಹ್ಮಣರಿಗೆ ಕೊಟ್ಟ ದಾನಧರ್ಮಗಳನ್ನೂ ನೆನೆಸಿಕೋ ಹಾಗೆಯೇ ನಿನ್ನ ಬಂಧುಗಳಿಗೆ ಪ್ರೀತಿಪೂರ್ವಕವಾಗಿ ಕೊಟ್ಟಂತಹ ಧನ ಮುಂತಾದವುಗಳನ್ನೂ ಸ್ಮರಿಸಿಕೋ. ಅದಕ್ಕನುಸಾರವಾಗಿ ಪುಣ್ಯಲೋಕವನ್ನು ನೀನು ಹೊಂದು ॥

8. ಮಂತ್ರ (ಇಬ್ಬರಿಗೂ – ವಾಹನದಲ್ಲಿ ಒಯ್ಯುವುದಾದರೆ) –

ಓಂ ಇ॒ಮೌ ಯು॒ನಜ್ಮಿ॑ ತೇ ವ॒ಹ್ನೀ ಅ॑ಸುನೀ॒ಥಾಯ॒ ವೋ॑ಢ॒ವೇ ॥ ಯಾಭ್ಯಾಂ॑ ಯ॒ಮಸ್ಯ॑ ಸಾ॒ದನ॒ಗ್ಂ॒ ಸು॒ಕೃ॒ತಾಂ ಚಾಪಿ॑ ಗಚ್ಛ॒ತಾತ್ ॥

ವಿನಿಯೋಗ –

ಈ ಮಂತ್ರದಿಂದ, ನಂತರ ಆಸಂದಿಯ ಜೊತೆ(ಚೆಟ್ಟ), ಅದಕ್ಕೆ ಹಾಸಿದ ಕಟದಿಂದಲೋ(ಚಾಪೆ/ಕೃಷ್ಣಾಜಿನ), ಈ ಮೃತನನ್ನು ಸುತ್ತಿ, ಕಟ್ಟಿ, ದಾಸರು (ಸಹಾಯಕರು) ಇವನನ್ನು ವಾಹನದಲ್ಲಿ ಕೊಂಡೊಯ್ಯಲು ಸಿದ್ಧರಾಗುತ್ತಾರೆ ॥

ಅರ್ಥ –

ಎಲೈ ಮೃತನೇ, ನಿನ್ನ ಪ್ರಾಣಸದೃಶವಾದ ಶರೀರವನ್ನು ಹೊರಲು, ಗಾಡಿಗೆ 2 ಎತ್ತುಗಳನ್ನು ಕಟ್ಟುತ್ತಿದ್ದೇನೆ. ಈ 2 ಎತ್ತುಗಳಿಂದ ಯಮನಸ್ಥಾನಕ್ಕೆ, ಪುಣ್ಯಕೆಲಸ ಮಾಡಿದ ಮನುಷ್ಯರ ಲೋಕವನ್ನು ಕುರಿತು ಸುಖವಾಗಿ ನೀನು ಹೋಗುವವನಾಗಿದ್ದೀಯೇ. ಅಂತಹಾ ಎತ್ತುಗಳನ್ನು ಕಟ್ಟುತ್ತಿದ್ದೇನೆ ॥

9. ಮಂತ್ರ (ಇಬ್ಬರಿಗೂ – ಚೆಟ್ಟದಲ್ಲಿ ಒಯ್ಯುವುದಾದರೆ) –

ಓಂ ಪೂಷಾ ತ್ವೇತಶ್ಯಾ ವಯತು ಪ್ರವಿದ್ವಾನನಷ್ಟಪಶುರ್ಭುವನಸ್ಯ ಗೋಪಾಃ । ಸ ತ್ವೈತೇಭ್ಯಃ ಪರಿದದಾತ್ ಪಿತೃಭ್ಯೋಗ್ನಿರ್ದೇವೇಭ್ಯಃ ಸುವಿದತ್ರೇಭ್ಯಃ ॥

ವಿನಿಯೋಗ –

ಈ ಮಂತ್ರದಿಂದ ಮೃತನನ್ನು ತೆಗೆದುಕೊಂಡು ಹೋಗುವ ಸಮಯದಲ್ಲಿ, ಅನುಮಂತ್ರಣ(ಹೇಳುವುದು) ಮಾಡುತ್ತಾರೆ ॥

ಅರ್ಥ –

ಎಲೈ ಮೃತನೇ, ಪೋಷಕನಾದ ದೇವನು(ಪೂಷದೇವನು), ನಿನ್ನನ್ನು ಈ ಸ್ಥಳದಿಂದ ಕದಲಿಸಲಿ. ಎಂತಹಾ ಪೂಷದೇವನೆಂದರೆ, ಹೋಗಬೇಕಾದ ಮಾರ್ಗವನ್ನು ತಿಳಿದಂತಹ ಹಾಗೂ ಹೊರುವ ಮನುಷ್ಯ ಹಾಗೂ ಎತ್ತುಗಳು ದ್ವಿಪಾತ್ ಚತುಷ್ಪಾತ್ ಪಶುಗಳು. ಅವರು ತೊಂದರೆಗೆ ಒಳಗಾಗದವರಾಗಿದ್ದಾರೆ. ಅಂತಹಾ ಪಶುಗಳನ್ನುಳ್ಳವನಾದ, ಎಲ್ಲಾ ಲೋಕವನ್ನೂ ರಕ್ಷಿಸುವವನಾದ, ಪೂಷದೇವನು ನಿನಗಿಂತ ಮೊದಲು ಪಿತೃಸ್ಥಾನವನ್ನು ಹೊಂದಿದವರಾದ ಪಿತೃಗಳಿಗೆ ನಿನ್ನನ್ನು ಕೊಡಲಿ. ಯಾವ ಅಗ್ನಿಯು ನಿನ್ನ ದಾಹವನ್ನು ಮಾಡುತ್ತದೋ ಆ ಅಗ್ನಿಯು ನಿನ್ನನ್ನು, ನಿನ್ನ ಪುಣ್ಯಕರ್ಮಗಳನ್ನು ತಿಳಿದ ದೇವತೆಗಳಿಗೆ ಕೊಡಲಿ ॥

10. ಮಂತ್ರ (ಇಬ್ಬರಿಗೂ) –

ಓಂ ಅಪನಶ್ಯೋಶುಚದಘಮಗ್ನೇ ಶುಶುದ್ಧ್ಯರಯಿಂ । ಅಪನಶ್ಯೋಶುಚದಘಮ್ ॥

ವಿನಿಯೋಗ –

ಪಿತೃಮೇಧ ಪ್ರಶ್ನೆಯಲ್ಲಿ 11 ನೇ ಅನುವಾಕದಲ್ಲಿ ಕೇವಲ ಮೊದಲ ಮಂತ್ರವನ್ನು ತೆಗೆದುಕೊಂಡಿರುವುದರಿಂದ, ಇದು ಹೋಮಕ್ಕಾಗಿ ಅಲ್ಲ, ತೊಡೆಯನ್ನು ತಟ್ಟಿಕೊಂಡು ಶವವನ್ನು ಸುತ್ತುವ ಕರ್ಮಕ್ಕೆ ವಿನಿಯೋಗಿಸಬೇಕೆಂಬುದು, ಭಾರದ್ವಾಜ ಮತ್ತು ಆಪಸ್ತಂಬಸೂತ್ರದ ಮತ್ತು ವ್ಯಾಖ್ಯಾನಕಾರರಾದ ಗೋಪಾಲಮುನಿಗಳ(2 ನೇ ಖಂಡ 15 ನೇ ಸೂತ್ರ) ಮತವು ॥

ಅರ್ಥ –

ನಮ್ಮ ಪಾಪಗಳನ್ನು ಎಲೈ ಅಗ್ನಿಯೇ ಸಂಪೂರ್ಣವಾಗಿ ನಾಶವಾಗುವಂತೆ ನೀನು (ಸುಡು)ಮಾಡು. ಎಲೈ ಅಗ್ನಿಯೇ ಅತಿಶಯವಾಗಿ ನಮ್ಮ ಐಶ್ವರ್ಯವನ್ನು ಪವಿತ್ರಗೊಳಿಸು ಹಾಗೂ ನಮ್ಮ ಪಾಪವು ಯಾವ ರೀತಿಯಾಗಿ ನಾಶವಾಗುವುದೋ ಹಾಗೆ ಮತ್ತೆ ಸಂಪೂರ್ಣವಾಗಿ ಸುಡು ॥

11. ಮಂತ್ರ (ಇಬ್ಬರಿಗೂ) –

ಓಂ ಪೂಷೇಮಾ ಆಶಾ ಅನುವೇದ ಸರ್ವಾಸ್ಸೋ ಅಸ್ಮಾಗ್ಂ ಅಭಯತಮೇನ ನೇಷತ್ । ಸ್ವಸ್ತಿದಾ ಅಘೃಣಿಸ್ಸರ್ವವಿರೋಪ್ರಯುಚ್ಛನ್ಪುರ ಏತು ಪ್ರವಿದ್ವಾನ್ ॥

ವಿನಿಯೋಗ –

ಮೃತನನ್ನು ಒಯ್ಯುವಾಗ ಹೇಳಬೇಕಾದ ಮಂತ್ರ ॥

ಅರ್ಥ –

ಈ ಪೂಷದೇವನು ಎಲ್ಲದಿಕ್ಕುಗಳನ್ನೂ ಬಲ್ಲವನಾಗಿದ್ದಾನೆ. ಆದ್ದರಿಂದ ಆ ದೇವನು ನಮ್ಮನ್ನು ಭಯರಹಿತವಾದ, ಅತ್ಯಂತ ಅನುಕೂಲವಾದ ಮಾರ್ಗದಲ್ಲಿ ಒಯ್ಯಲಿ. ಎಂತಹಾ ಪೂಷದೇವತೆಯೆಂದರೆ – ಎಲ್ಲರಿಗೂ ಕ್ಷೇಮವನ್ನು ಕೊಡುವವನಾದ ಯಾರನ್ನೂ ಸುಡದೇ ಇರುವವನಾದ ಹಾಗೂ ನಮ್ಮೆಲ್ಲರಿಗೂ ಅನುಗ್ರಾಹಕನಾದ

ಹಾಗೂ ಎಲ್ಲಾ ವಿಘ್ನಗಳನ್ನೂ ನಾಶಮಾಡಲು ಸಮರ್ಥನಾದ ಆ ದೇವನು, ಪ್ರಮಾದವನ್ನು ಮಾಡದೇ ಮಾರ್ಗವನ್ನು ಸ್ಪಷ್ಟವಾಗಿ ತಿಳಿದವನಾಗಿ ನಮ್ಮ ಮುಂದೆ ಹೋಗಲಿ ॥

12. ಮಂತ್ರ (ಇಬ್ಬರಿಗೂ) –

ಓಂ ಆಯುರ್ವಿಶ್ವಾಯುಃ ಪರಿಪಾಸತಿ ತ್ವಾ ಪೂಷಾ ತ್ವಾ ಪಾತು ಪ್ರಪಥೇ ಪುರಸ್ತಾತ್ । ಯತ್ರಾಸತೇ ಸುಕೃತೋ ಯತ್ರ ತೇ ಯಯುಸ್ತತ್ರ ತ್ವಾ ದೇವಸ್ಸವಿತಾ ದಧಾತು ॥

ವಿನಿಯೋಗ –

ಈ ಮಂತ್ರವನ್ನೂ ಸತ್ತವನನ್ನು ತೆಗೆದುಕೊಂಡು ಹೋಗುವಾಗ ಹೇಳುವುದು ॥

ಅರ್ಥ –

ಎಲ್ಲಾ ಕರ್ಮಗಳನ್ನೂ ವ್ಯಾಪಿಸಿರುವ ಅಗ್ನಿಯು ಮೃತನಾದ ನಿನ್ನನ್ನು ಪರಿಪಾಲನೆ ಮಾಡಲು, ಎಂದರೆ, ದಹನ ಮಾಡುವುದಕ್ಕಾಗಿ ಪ್ರತೀಕ್ಷೆಮಾಡುತ್ತಿದ್ದಾನೆ. ಪೂಷದೇವತೆಯು ಉತ್ಕೃಷ್ಟವಾದಂತಹ ಮೃತನಾದ ನಿನ್ನ ಮಾರ್ಗದಲ್ಲಿ ಅಗ್ರೇಸರನಾಗಿ ಎಲ್ಲಾ ಪ್ರತಿಬಂಧಕಗಳನ್ನೂ (ರಕ್ಷೋಬಾಧೆಯನ್ನು) ಪರಿಹರಿಸಲಿ. ಲೋಕದಲ್ಲಿ ಉತ್ತಮವಾದಂತಹ ಪುಣ್ಯಕರ್ಮ ಮಾಡಿದವರು ಇದ್ದಾರೋ, ಯಾವ ಮಾರ್ಗದಲ್ಲಿ ಆ ಪುಣ್ಯಕರ್ಮವನ್ನು ಮಾಡಿದವರು ಹೋದರೋ, ಆ ಮಾರ್ಗದಲ್ಲಿ ಪ್ರೇರಕನಾದ ಸವಿತೃದೇವನು ನಿನ್ನನ್ನು ತೊಡಗಿಸಲಿ ॥

13. ಮಂತ್ರ – (ಇಬ್ಬರಿಗೂ)

ಓಂ ಏಷಾ ವೈ ದೇವ ಮನುಷ್ಯಾಣಾಗ್ಂ ಶಾಂತಾದಿಕ್ ತಾಮೇವೈ ನಾಮನೂತ್ಕ್ರಮಂತಿ ॥

ವಿನಿಯೋಗ –

ಸ್ಮಶಾನಕ್ಕೆ ಹೋಗಿ, ಶವವನ್ನು ಇಟ್ಟು, ತನ್ನ ಮಂಗಳಕ್ಕಾಗಿ, ಶಾಂತಿ–ಪುಷ್ಟಿಗಾಗಿ ಉತ್ತರಕ್ಕೆ ಎಲ್ಲರೂ ಹೋಗಬೇಕು ॥

ಅರ್ಥ –

ಈ ಉತ್ತರದಿಕ್ಕೇ ದೇವತೆಗಳಿಗೆ ಮತ್ತು ಮನುಷ್ಯರಿಗೆ ಒಳ್ಳೆಯದನ್ನು ಮಾಡುವ ದಿಕ್ಕು ॥

14. ಮಂತ್ರ – (ಇಬ್ಬರಿಗೂ)

ಓಂ ಅಪೇತವೀತ ವಿಚಸರ್ಪತಾತೋ ಯೇ ತ್ರಸ್ಥ ಪುರಾಣಾ ಯೇ ಚ ನೂತನಾಃ । ಅದಾದಿದಂ ಯವೋsವಸಾನಂ ಪೃಥಿವ್ಯಾ ಅಕ್ರನ್ನಿಮಂ ಪಿತರೋ ಲೋಕಮಸ್ಮೈ ॥ (4ನೇ ಕಾಂಡ ಸಂಹಿತೆ)

ಅಥವಾ

ಓಂ ಅಪೇತವೀತ ವಿಚಸರ್ಪತಾತೋ ಯೇ ತ್ರಸ್ಥ ಪುರಾಣಾ ಯೇ ಚ ನೂತನಾಃ । ಅಹೋಭಿರದ್ಭಿರ ಕ್ತುಭಿರ್ವ್ಯಕ್ತಂ ಯವೋsದದಾತ್ವ ವಸಾನಮಸ್ಮೈ ॥ (6 ನೇ ಪ್ರಶ್ನೆ ಆರಣ್ಯಕ)

ವಿನಿಯೋಗ –

ಚಯನದಲ್ಲಿ ಗಾರ್ಹಪತ್ಯಚಯನವನ್ನು ಮಾಡುವ ಜಾಗವನ್ನು ಅಗೆಯಲು ಈ ಮಂತ್ರವನ್ನು ಹೇಳುತ್ತಾರೆ ॥ (4 ನೇ ಕಾಂಡ ಸಂಹಿತೆ)

ಹಸಿಯಾದ ಮುತ್ತಗದ ಟೊಂಗೆಯಿಂದಲೋ, ಬನ್ನಿಯ ಟೊಂಗೆಯಿಂದಲೋ ಈ ಶ್ಮಶಾನಜಾಗವನ್ನು ಈ ಮಂತ್ರದಿಂದ ಗುಡಿಸಿ, ಅಗೆದು, ಶುದ್ಧ ಮಾಡಬೇಕು ॥ (6 ನೇ ಪ್ರಶ್ನೆ ಆರಣ್ಯಕ)

ಅರ್ಥ –

ಎಲೈ ಯಮದೂತರೇ, ನೀವು ಭೂಮಿಯ ಎಲ್ಲಕಡೆ ಇದ್ದೀರಿ. ಈ ಗಾರ್ಹಪತ್ಯ ಚಯನ ಮಾಡುವ ಯಜ್ಞಭೂಮಿಯಿಂದ ನೀವು ಬೇರೇಕಡೆಗೆ ಹೋಗಿ. ಮೊದಲು ಈ ಜಾಗದಲ್ಲಿ ಇದ್ದ ಯಮದೂತರು ಹಾಗೂ ಹೊಸದಾಗಿ ಬಂದು ಸೇರಿರುವ ಯಮದೂತರೂ ಎಲ್ಲರೂ ಈ ಜಾಗದಿಂದ ದೂರಹೋಗಿ. ಮತ್ತೆ ಬರಲು ಆಗದರೀತಿ ದೂರಹೋಗಿ. ಹಾಗೂ ವಿವಿಧವಾಗಿ ನಾನಾಪ್ರದೇಶಗಳಿಗೆ ಹೋಗಿ. ಪೃಥಿವಿಯ ಈ ಜಾಗವನ್ನು ಯಮನು ನಮಗೆ ಕೊಟ್ಟಿದ್ದಾನೆ. ಪಿತೃದೇವತೆಗಳು ಈ ಯಜಮಾನನಿಗಾಗಿ ಈ ಚಯನಸ್ಥಾನವನ್ನು ಕಲ್ಪಿಸಿದ್ದಾರೆ. ಆದ್ದರಿಂದ ನೀವುಗಳು ಇಲ್ಲಿಂದ ದೂರಹೋಗಿ (4 ನೇ ಕಾಂಡ ಸಂಹಿತೆ) ॥

ಎಲೈ ಯಮದೂತರೇ ನೀವು ಭೂಮಿಯ ಎಲ್ಲಕಡೆ ಇದ್ದೀರಿ. ಈ ಗಾರ್ಹಪತ್ಯ ಚಯನ ಮಾಡುವ ಯಜ್ಞಭೂಮಿಯಿಂದ ನೀವು ಬೇರೇಕಡೆಗೆ ಹೋಗಿ. ಮೊದಲು ಈ ಜಾಗದಲ್ಲಿ ಇದ್ದ ಯಮದೂತರು ಹಾಗೂ ಹೊಸದಾಗಿ ಬಂದು ಸೇರಿರುವ ಯಮದೂತರೂ ಎಲ್ಲರೂ ಈ ಜಾಗದಿಂದ ದೂರಹೋಗಿ. ಮತ್ತೆ ಬರಲು ಆಗದರೀತಿ ದೂರಹೋಗಿ. ಹಾಗೂ ವಿವಿಧವಾಗಿ ನಾನಾಪ್ರದೇಶಗಳಿಗೆ ಹೋಗಿ. ಹಗಲು ಮತ್ತು ರಾತ್ರಿಗಳಿಂದ ಹಾಗೂ ನೀರಿನಿಂದ ವಿಶೇಷವಾಗಿ ಯಾವಾಗಲೂ ಸಂಬಂಧಪಟ್ಟ ಈ ಸ್ಮಶಾನಸ್ಥಾನವು ಈ ಯಜಮಾನನಿಗೆ ಯಮನು ಕೊಡಲಿ (6 ನೇ ಪ್ರಶ್ನೆ ಆರಣ್ಯಕ) ॥

15. ಮಂತ್ರ (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ) –

ಓಂ ಭುವನಸ್ಯಪತ ಇದಗ್ಂ ಹವಿಃ ॥

ವಿನಿಯೋಗ –

ಇಲ್ಲಿ, ಎಂದರೆ ಮಾರ್ಗಮಧ್ಯದಲ್ಲಿ ಮೃತನನ್ನು ಇಟ್ಟು, ರಾಜಗವಿಯನ್ನು(ಒಳ್ಳೆಯ ಹಸು) ಉಪಾಕರಣೆ ಮಾಡಬೇಕು. ಅಂದರೆ ಅದನ್ನು ವಿಧಿಯಂತೆ ಸಾಯಿಸಿ, ಅದನ್ನು ಹೋಮಿಸಬಹುದು. ಅಥವಾ ಪರ್ಯಗ್ನಿಕರಣ ಮಾಡಿ, ಬಿಡಬಹುದು. ಆ ಹಸುವು(ರಾಜಗವಿಯು) ಕೃಷ್ಣವರ್ಣದ್ದಾಗಿರಬೇಕು, ಕಪ್ಪು ಕಣ್ಣುಳ್ಳದ್ದಾಗಿರಬೇಕು, ಕಪ್ಪು

ಬಾಲದ್ದಾಗಿರಬೇಕು, ಕಪ್ಪುಗೊರಸುಳ್ಳದ್ದಾಗಿರಬೇಕು, ಹಾಗೆಯೇ ವಯಸ್ಸಾದ ಹಸುವಿನಿಂದ ಹುಟ್ಟಿರಬೇಕು. ಅಥವಾ ಕಣ್ಣು, ಬಾಲ ಮತ್ತು ಗೊರಸಗಳು ಕಪ್ಪಾಗಿದ್ದರೂ ಸಾಕು ॥

ಅರ್ಥ –

ಎಲೈ ಭುವನಸ್ಪತಿಯೇ(ಪಾಲಕನೇ) ಈ ರಾಜಗವಿರೂಪವಾದ ಹವಿಸ್ಸನ್ನು ನಿನಗೆ ಅರ್ಪಿಸುತ್ತೇನೆ ॥

16. ಮಂತ್ರ (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ) –

ಓಂ ಅಗ್ನ॑ಯೇ ರ॒ಯಿಮ॑ತೇ ಸ್ವಾ॒ಹಾ ॥

ವಿನಿಯೋಗ –

ಅಲ್ಲಿ, ಈ ರಾಜಗವಿರೂಪವಾದ ಹವಿಸ್ಸನ್ನು ಇಡಾಪಾತ್ರೆಯಿಂದಲೋ, ಚಮಸದಿಂದಲೋ ಅಗ್ನಿಗೆ ಈ ಮಂತ್ರದಿಂದ ಹೋಮಮಾಡಬೇಕು ॥

ಅರ್ಥ –

ಎಲೈ ಐಶ್ವರ್ಯವಂತನಾದ ಅಗ್ನಿಯೇ, ಈ ಹವಿಸ್ಸು ನಿನಗೆ ಅರ್ಪಿತವಾಗಲಿ ॥

17. ಮಂತ್ರ (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ) –

ಓಂ ಪು॒ರು॒ಷಸ್ಯ ಸಯಾ॒ವರ್ಯ॑ಪೇ॒ದಘಾ॑ನಿ ಮೃಜ್ಮಹೇ । ಯಥಾ॒ ನೋ॑ ಅತ್ರ॒ನಾ॒ಪರಃ॒ ಪುರಾ॒ ಜರ॑ಸ ಆ॒ಯತಿ ॥

ವಿನಿಯೋಗ –

ಆ ರಾಜಗವಿಯನ್ನು ಸಾಯಿಸುವಾಗ, ಸವ್ಯ(ಎಡ) ಮಂಡಿಯನ್ನು ತಟ್ಟಿಕೊಂಡು, ಮೃತನ ಧೂಳನ್ನು ಹೋಗಲಾಡಿಸುತ್ತಾನೆ ॥

ಅರ್ಥ –

ಮೃತನಿಗೆ ಸಂಬಂಧಿಸಿದ, ಪಾಪಗಳನ್ನು ಸಯಾವರಿಯೇ(ರಾಜಗವಿಗೆ ಸಯಾವರಿ ಎಂದು ಹೆಸರು) ಹೋಗಲಾಡಿಸಿ, ನಮ್ಮನ್ನು ಪವಿತ್ರಗೊಳಿಸಿಕೊಳ್ಳೋಣ. ನಮ್ಮ ಆಯಸ್ಸಿನ ಕ್ಷೀಣತೆಗೆ ಕಾರಣವಾದ ಯಾವ ಬೇರೇ ಪಾಪಗಳಿವೆಯೋ ಆ ಪಾಪಗಳು ನಮಗೆ ಪ್ರಾಪ್ತವಾಗದಂತೆ ನಾವು ಶುದ್ಧಿಗೊಳಿಸಿಕೊಳ್ಳೋಣ ॥

18. ಮಂತ್ರ (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ) –

ಓಂ ಪುರುಷಸ್ಯಸಯಾವರಿವಿತೇ ಪ್ರಾಣಮಸಿ ಸ್ರಸಮ್ । ಶರೀರೇಣ ಮಹೀಮಿಹಿ ಸ್ವಧಯೇಹಿ ಪಿತೃನುಪ ಪ್ರಜಯಾಸ್ಮಾನಿಹಾವಹ ॥

ವಿನಿಯೋಗ –

ನಂತರ, ಹಸುವಿನ(ರಾಜಗವಿಯ) ಪ್ರಾಣಗಳನ್ನು ತೆಗೆಯುವಾಗ ಹೇಳುವಂತಹ ಮಂತ್ರವು ॥

ಅರ್ಥ –

ಎಲೈ, ಈ ಮೃತನಿಗೆ ಸಂಬಂಧಿಸಿದ ರಾಜಗವಿಯೇ(ಸಯಾವರಿಯೇ) ನಿನ್ನ ಪ್ರಾಣಗಳನ್ನು ಹೋಗಲಾಡಿಸಿದ್ದೀನಿ. ನೀನು ಶರೀರದಿಂದ ಭೂಮಿಸ್ವರೂಪವನ್ನು ಹೊಂದು. ಹವಿರ್ರೂಪವಾದ ಅನ್ನದಿಂದ ಅಥವಾ (ಮೃತನಿಗೆ ಹೇಳುವ ಹೆಸರು ಸ್ವಧಾ ಎಂದು) ಅಮೃತರೂಪದಿಂದ(ಜೀವರೂಪ) ಪಿತೃಗಳನ್ನು ಕುರಿತು ಹೋಗು. ಈ ಲೋಕದಲ್ಲಿ ಪುತ್ರಾದಿ ಪ್ರಜೆಗಳೊಡನೆ ನಮ್ಮನ್ನು ಕ್ಷೇಮವಾಗಿರುವಂತೆ ಮಾಡು ॥

19. ಮಂತ್ರ (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ) –

ಓಂ ಮ್ಯೈವಂ ಮಾಗ್ ಸ್ತಾಪ್ರಿಯೇಽಹಂ ದೇವೀ ಸತೀ ಪಿತೃಲೋಕಂ ಯದೈಷಿ । ವಿಶ್ವವಾರಾ ನಭಸಾ ಸಂವ್ಯಯಂತ್ಯುಭೌ ನೋ ಲೋಕೌ ಪಯಸಾಽಭ್ಯಾವವೃತ್ಸ್ವ ॥

ವಿನಿಯೋಗ –

ಕರ್ತೃವು, ಈ ಮಂತ್ರದಿಂದ ಆ ಮೃತನ ಬಳಿಸಾರಿ, ಅವನ ಮೇಲಿರುವಂತಹ ಧೂಳುಗಳನ್ನು ಹೋಗಲಾಡಿಸುತ್ತಾನೆ ॥

ಅರ್ಥ –

ಎಲೈ ರಾಜಗವಿಯೇ, ನಾನು ಈ ರೀತಿಯಾಗಿ ಸಾಯಲ್ಪಟ್ಟೆ ಎಂದು ಯೋಚಿಸಬೇಡ. ಈ ಕಾರಣದಿಂದ ನೀನು ದೇವತಾಸ್ವರೂಪವಾಗಿ ಪಿತೃಲೋಕವನ್ನು ಹೊಂದಿದ್ದೀಯೆ. ಎಲ್ಲರಿಂದಲೂ ಬೇಡಲ್ಪಡುವವಳಾಗಿದ್ದೀಯೆ. ಆಕಾಶಮಾರ್ಗದಿಂದ ದ್ಯುಲೋಕವನ್ನು ಹೊಂದುತ್ತಾ, ಎಲೈ ರಾಜಗವಿಯೇ ಈ ಲೋಕವು ಮತ್ತು ಪರಲೋಕವು ಕ್ಷೀರಸಮೃದ್ಧಿಯಿಂದ ಕೂಡಿರುವಂತೆ ಮಾಡು ॥

20. ಮಂತ್ರ (ಆಹಿತಾಗ್ನಿ=ಅನಾಹಿತಾಗ್ನಿಗಳಿಬ್ಬರಿಗೂ)

ಓಂ ಅಪಶ್ಯಾಮ ಯುವತಿಮಾಚರಂತೀಂ ಮೃತಾಯ ಜೀವಾಂ ಪರಿಣೀಯಮಾನಾಮ್ । ಅಂಧೇನ ಯಾ ತಮಸಾ ಪ್ರಾವೃತಾऽಸಿ ಪ್ರಾಚೀಮವಾಚೀಮವಯನ್ನರಿಷ್ಟ್ಯೈ ॥

ವಿನಿಯೋಗ –

ಇದು ಮುಂದಿನ 2 ಮಂತ್ರಗಳಿಂದ ಅಪ್ರದಕ್ಷಿಣೆಯಾಗಿ, ರಾಜಗವಿಯನ್ನೂ ಹಾಗೂ ಅಗ್ನಿಯನ್ನೂ ಹಾಗೂ (ಮೃತನನ್ನು) ಮತ್ತೂ ಚಿತೆಯನ್ನೂ ಕರ್ತೃವು ಸುತ್ತಬೇಕು ॥

ಅರ್ಥ –

ಮೃತನಿಗಾಗಿ ತೆಗೆದುಕೊಂಡಿರುವ ಜೀವಂತವಾಗಿರುವ, ಯೌವನದ ಯುವತಿಯಂತೆ ದಷ್ಟಪುಷ್ಟವಾದ ಅಂಗಗಳನ್ನು ಹೊಂದಿರುವ, ನಮ್ಮ ಬಳಿಗೆ ಬರುತ್ತಿರುವ ಈ ರಾಜಗವಿಯನ್ನು ನಾವು ನೋಡುತ್ತಿದ್ದೇವೆ. ಯಾವ ರಾಜಗವಿಯಾದ ನೀನು

ಅತ್ಯಂತ ವಯಸ್ಸಾದ ಕಾರಣದಿಂದ ಅಥವಾ ಮರಣದ ಭೀತಿಯಿಂದ ಮಂಕಾದ ದೃಷ್ಟಿಯುಳ್ಳ, ಅತ್ಯಂತ ಗೂಢವಾದ ಕತ್ತಲೆಯಿಂದ ಆವರಿಸಿದ್ದೀಯೆ. ಅಹಿಂಸೆಗಾಗಿ ಪೂರ್ವದಿಕ್ಕಿಗೆ ಮುಖ ಮಾಡಿಕೊಂಡ, ಕೆಳಮುಖವಾದ, ಈ ರಾಜಗವಿಯನ್ನು ನಾವು ಚೆನ್ನಾಗಿ ಅರಿತವರಾಗಿದ್ದೇವೆ ॥

21. ಮಂತ್ರ (ಇಬ್ಬರಿಗೂ) –

ಓಂ ಮಯ್ಯೈತಾಂ ಮಾಗ್ಸ್ತಾಂ ಭ್ರಿಯಮಾಣಾ ದೇವೀ ಸತೀ ಪಿತೃಲೋಕಂ ಯದೈಷಿ । ವಿಶ್ವವಾರಾ ನಭಸಾ ಸಂವ್ಯಯಂತ್ಯಭೌ ನೋ ಲೋಕೌ ಪಯಸಾssವೃಣೇಹಿ ॥

ಅರ್ಥ –

ನನ್ನಿಂದ ಪೋಷಿಸಲ್ಪಡುತ್ತಿರುವ ರಾಜಗವಿಯು, ನನ್ನನ್ನು ಅದರ ರಕ್ಷಕನೆಂದು ತಿಳಿಯಲಿ. ಎಲೈ ರಾಜಗವಿಯೇ, ನಿನ್ನ ಉಪಾಕರಣದ(ದೇವತೆಗೆ ಹವಿಸ್ಸಾಗಿ ಮಂತ್ರಪೂರ್ವಕವಾದ ನಿರ್ದೇಶನ) ಮಾತ್ರದಿಂದಲೇ ಆ ದೇವತಾಸ್ವರೂಪವನ್ನು ಪಡೆದು, ಪಿತೃಲೋಕವನ್ನು ಕುರಿತು ನೀನು ಹೋಗುವೆ(ಬರುವೆ). ಎಲ್ಲರಿಂದ ಬೇಡಲ್ಪಡುವ ನೀನು ಆಕಾಶಮಾರ್ಗದಿಂದ ದ್ಯುಲೋಕ(ಪಿತೃಲೋಕ)ವನ್ನು ಹೊಂದಿ, ಎಲೈ ರಾಜಗವಿಯೇ ಅಂತಹಾ ನೀನು ನಮಗೆ ಎರಡು ಲೋಕಗಳಲ್ಲೂ(ಇಹ–ಪರ) ಹಾಲಿನಿಂದ ತುಂಬಿಸುವವಳಾಗು ॥

22. ಮಂತ್ರ (ಇಬ್ಬರಿಗೂ) –

ಓಂ ರಯಿಷ್ಠಾಮಗ್ನಿಂ ಮಧುಮಂತಮೂರ್ಮಿಣ ಮೂರ್ಜಸ್ವಂತಂ ತ್ವಾ ಪಯಸೋಪಸಗ್ಂ ಸದೇಮ । ಸಗ್ಂರಯ್ಯಾ ಸಮುವರ್ಚಸಾ ಸಚಸ್ವಾನಸ್ಸ್ವಸ್ತಯೇ ॥

ಅರ್ಥ –

ಎಲೈ ಅಗ್ನಿಯೇ, ನಾವು ನಿನ್ನನ್ನು ಹಾಲು ಮುಂತಾದ ಭೋಗ್ಯದ್ರವ್ಯಗಳಿಗಾಗಿ ಬಳಿಸಾರಿ ಪೂಜಿಸುವೆವು. ನೀನು ಅತ್ಯಂತ ಐಶ್ವರ್ಯವುಳ್ಳವನಾಗಿದ್ದೀಯೇ ಹಾಗೂ ಮಧುರವಾದ ಭೋಗ್ಯದ್ರವ್ಯಗಳಿಂದ ಕೂಡಿರುವವನಾಗಿದ್ದೀಯೆ. ಹಾಗೂ ಅತ್ಯಂತ ಉತ್ಕೃಷ್ಟಸ್ಥಾನದಲ್ಲಿರುವವನಾಗಿದ್ದೀಯೆ ಹಾಗೂ ಅತ್ಯಂತ ಬಲವುಳ್ಳವನಾಗಿದ್ದೀಯೆ. ಎಲೈ ಅಗ್ನಿಯೇ, ನಮ್ಮ ಯೋಗಕ್ಷೇಮಕ್ಕಾಗಿ ನಮ್ಮನ್ನು ಧನಾದಿ ಐಶ್ವರ್ಯಗಳಿಂದ ಹಾಗೂ ಕಾಂತಿಯಿಂದ ಕೂಡಿದವರನ್ನಾಗಿ ಮಾಡು ॥

23. ಮಂತ್ರ (ಇಬ್ಬರಿಗೂ) –

ಓಂ ಯೇ ಜೀವಾ ಯೇ ಚ ಮೃತಾ ಯೇ ಜಾತಾ ಯೇ ಚ ಜಂತ್ವಾಃ । ತೇಭ್ಯೋ ಘೃತಸ್ಯ ಧಾರಯಿತುಂ ಮಧುಧಾರಾ ವ್ಯಂದತೀ ॥

ವಿನಿಯೋಗ –

ಈ ಮಂತ್ರದಿಂದ ರಾಜಗವಿಯನ್ನು ಅಭಿಮಂತ್ರಣ(ಮುಟ್ಟುವುದು) ಮಾಡಬೇಕು॥

ಅರ್ಥ –

ಯಾವ ನಮ್ಮ ಕುಲದಲ್ಲಿ, ಜೀವಿಸಿರುವ ಪುರುಷರಿದ್ದಾರೋ ಹಾಗೂ ಮೃತರಾದವರಿದ್ದಾರೋ ಮತ್ತು ಯಾರು ಈಗ ಹುಟ್ಟಿದವರಾಗಿದ್ದಾರೋ ಮತ್ತು ಯಾರು ಮುಂದೆ ಹುಟ್ಟುವವರೋ ಅವರೆಲ್ಲರನ್ನೂ ಪೋಷಣೆ ಮಾಡಲು, ಸಮೃದ್ಧಿಗೊಳಿಸಲು ತುಪ್ಪ(ಆಜ್ಯ) ಸಂಬಂಧಿಯಾದ ಮಧುರವಾದ ರಸಗಳಿಂದ ಕೂಡಿದ ಧಾರೆಯಿಂದ ವಿಶೇಷವಾಗಿ ಎಲೈ ರಾಜಗವಿಯೇ ನೀನು ನೆನೆಯಲ್ಪಟ್ಟಿರುವವಳಾಗಿದ್ದೀಯೇ ॥

24. ಮಂತ್ರ (ಇಬ್ಬರಿಗೂ) –

ಓಂ ಮಾತಾ ರುದ್ರಾಣಾಂ ದುಹಿತಾ ವಸೂನಾಗ್ ಸ್ವಸಾssದಿತ್ಯಾನಾಮಮೃತಸ್ಯ ನಾಭಿಃ । ಪ್ರ ನು ವೋಚಂ ಚಿಕಿತುಷೇ ಜನಾಯ ಮಾಗಾಮನಾಗಾಮದಿತಿಂ ವಧಿಷ್ಟ ॥

ವಿನಿಯೋಗ –

ಇದು ಮತ್ತು ಮುಂದಿನ ಮಂತ್ರಗಳಿಂದ ರಾಜಗವಿಯನ್ನು ಉತ್ಸರ್ಜನ(ಬಿಡುವುದು) ಮಾಡಬೇಕು ॥

ಅರ್ಥ –

ಈ ರಾಜಗವಿಯು 11 ರುದ್ರದೇವತೆಗಳಿಗೆ ಮಾತೃಸ್ಥಾನೀಯವು ಹಾಗೂ ಅಷ್ಟವಸುಗಳಿಗೆ ಪುತ್ರೀಸ್ಥಾನೀಯವು. 12 ಜನ ಆದಿತ್ಯರಿಗೆ ತಂಗಿಯ ಸ್ಥಾನೀಯವು ಹಾಗೂ ಈ ಲೋಕದ, ಪರಲೋಕದ ಸುಖಕ್ಕೆ ನಾಭಿಸ್ಥಾನೀಯವು. ಈ ಕಾರಣದಿಂದಲೇ ಜ್ಞಾನಿಗಳಾದ, ಶಾಸ್ತ್ರಜ್ಞರಾದ, ಋತ್ವಿಜ ಸಮೂಹಗಳಿಗೆ ನಿನ್ನ ವಿಷಯವಾಗಿ ಹೆಚ್ಚಾಗಿ(ಉತ್ತಮವಾಗಿ) ಹೇಳುತ್ತೇನೆ. ಹೇಗೆಂದರೆ, ಅಪರಾಧ ರಹಿತಳಾದ, ತುಂಡಾಗದೇ ಇರುವವಳಾದ, ಅನುಸ್ತರಣೀ(ಶವದ ಹಿಂದೆ ಕರೆದುಕೊಂಡು ಹೋಗುವಿಕೆ) ರೂಪದಿಂದ ಉಪಾಕೃತಳಾದ, ರಾಜಗವಿಯಾದ ನಿನ್ನನ್ನು ಎಲ್ಲೆ ಜನರೇ ವಧೆ ಮಾಡಬೇಡಿರಿ ಎಂದು ಹೇಳುತ್ತೇನೆ ॥

25. ಮಂತ್ರ (ಇಬ್ಬರಿಗೂ) –

ಓಂ ಪಿಬತೂದಕಂ ತೃಣಾನ್ಯತ್ತು । ಓಮುತ್ಸೃಜತ ॥

ಅರ್ಥ –

ನಮ್ಮಿಂದ ಬಿಡಲ್ಪಟ್ಟ ಈ ರಾಜಗವಿಯು ಎಲ್ಲಾದರೂ ಸ್ವತಂತ್ರವಾಗಿ, ಸ್ವೇಚ್ಛೆಯಾಗಿ ನೀರನ್ನು ಕುಡಿಯಲಿ ಹಾಗೂ ಹುಲ್ಲು ಮುಂತಾದವುಗಳನ್ನು ತಿನ್ನಲಿ. ನಾವು ಅನುಮತಿಯನ್ನು ಓಂ ಕಾರದಿಂದ ನೀಡಿದ್ದೇವೆ. ಎಲೈ ಜನರೇ ಈ ರಾಜಗವಿಯನ್ನು ಬಿಡಿರಿ ॥

26. ಮಂತ್ರ (ಇಬ್ಬರಿಗೂ) –

ಓಂ ಇಯಂ ನಾರೀ ಪತಿಲೋಕಂ ವೃಣಾನಾ ನಿಪದ್ಯತ ಉಪ ತ್ವಾ ಮರ್ತ್ಯಪ್ರೇತಂ ।
ವಿಶ್ವಂ ಪುರಾಣಮನುಪಾಲಯಂತೀ ತಸ್ಯೈ ಪ್ರಜಾಂ ದ್ರವಿಣಂ ಚೇಹ ಧೇಹಿ ॥

ವಿನಿಯೋಗ –

ಅನಂತರ, ಈ ಮೃತನ ಹೆಂಡತಿಯನ್ನು, ದಹನದ ವೇದಿಯ ಮೇಲೆ ಮಲಗಿರುವ ಅವನಜೊತೆ ಮಲಗಿಸುವಾಗ ಹೇಳುವ ಮಂತ್ರ ॥

ಅರ್ಥ –

ಎಲೈ ಮೃತನಾದ ಮನುಷ್ಯನೇ, ಯಾವ ನಿನ್ನ ಹೆಂಡತಿ ಇದ್ದಾಳೋ ಅವಳೂ ಕೂಡ ಪತಿಯ ಲೋಕವನ್ನು ಇಚ್ಛಿಸುತ್ತಾ, ಸತ್ತ ನಿನ್ನನ್ನು ಬಳಿಸಾರಲು ಬಂದಿದ್ದಾಳೆ, ಈ ನಿನ್ನ ಹೆಂಡತಿಯು ಅನಾದಿಕಾಲದಿಂದಲೂ ಬಂದಿರುವ ಎಲ್ಲಾ ಸ್ತ್ರೀ ಧರ್ಮವನ್ನು ಅನುಕ್ರಮವಾಗಿ ಪಾಲಿಸುತ್ತಾ, ನಿನ್ನಲೋಕವನ್ನು ಹೊಂದಲು ಇಚ್ಛಿಸಿದ್ದಾಳೆ. ಇವಳಿಗೆ ನೀನು ಈ ಭೂ ಲೋಕದಲ್ಲಿ ಜೀವಿಸಿರಲು ಅನುಮತಿಯನ್ನು ಕೊಟ್ಟು, ನಿನ್ನಿಂದ ಪಡೆದ ಮಕ್ಕಳನ್ನು ಹಾಗೂ ಧನಾದಿಗಳನ್ನು ಸ್ವೀಕರಿಸಲು ಅನುಮತಿಯನ್ನು ಕೊಡು ॥

27. ಮಂತ್ರ (ಇಬ್ಬರಿಗೂ) –

ಓಂ ಉದೀರ್ಷ್ವನಾರ್ಯಭಿ ಜೀವಲೋಕಮಿತಾಸುಮೇತಮುಪಶೇಷ ಏಹಿ ।
ಹಸ್ತಗ್ರಾಭಸ್ಯ ದಿಧಿಷೋಸ್ತ್ವಮೇತತ್ ಪತ್ಯುರ್ಜನಿತ್ವಮಭಿ ಸಂ ಬಭೂವ ॥

ವಿನಿಯೋಗ –

ಆ ಮೃತನ ಬಳಿಸಾರಿದ ಅವಳ ಹೆಂಡತಿಯನ್ನು, ಮೃತನ ಎಡಕೈಯಿಂದ ಅವಳ ಕೈಯನ್ನು ಹಿಡಿಸಿ, ಅವನ ಅಣ್ಣತಮ್ಮಂದಿರೋ ಅಥವಾ ಬೇರೊಬ್ಬರಿಂದ ಏಳಿಸುವಾಗ ಹೇಳುವ ಮಂತ್ರ ॥

ಅರ್ಥ –

ಎಲೈ ನಾರಿಯೇ, ಗತಪ್ರಾಣನಾದ(ಸತ್ತಂತಹ) ಈ ನಿನ್ನ ಪತಿಯಜೊತೆ ಮಲಗಿದ್ದೀಯೇ. ಈ ನಿನ್ನ ಪತಿಯ ಸಮೀಪದಿಂದ ಮೇಲೇಳು. ಈ ಜೀವಂತವಾಗಿರುವ ಪ್ರಾಣಿಸಮೂಹವನ್ನು ಹೊಂದಿದ, ಭೂಲೋಕವನ್ನು ಕುರಿತು ಏಳು. ನೀನು ಇನ್ನೊಂದು ಪಾಣಿಗ್ರಹಣವನ್ನು ಮಾಡಲು ಯೋಗ್ಯನಾದ, ಈ ನಿನ್ನ ಪತಿಯ ಹೆಂಡತಿಯಾಗಿಯೇ, ಯಾವಾಗಲೂ ಇರುವಂತೆ ಆಗಲಿ ॥

28. ಮಂತ್ರ (ಇಬ್ಬರಿಗೂ) –

ಓಂ ಸುವರ್ಣಗ್ಂ ಹಸ್ತಾದಾದದಾನಾ ಮೃತಸ್ಯ ಶ್ರಿಯೈ ಬ್ರಹ್ಮಣೇ ತೇಜಸೇ ಬಲಾಯ । ಅತ್ರೈವ ತ್ವಮಿಹ ವಯಗ್ಂ ಸುಶೇವಾ ವಿಶ್ವಾಸ್ಪೃಧೋ ಅಭಿಮಾತೀರ್ಜಯೇಮ ॥

ವಿನಿಯೋಗ –

ಈ ಮಂತ್ರದ ಮೂಲಕ, ಚಿನ್ನದಿಂದ, ಮೃತನ 2 ಕೈಗಳನ್ನು ಸವರುತ್ತಾರೆ ॥

ಅರ್ಥ –

ಎಲೈ ನಾರಿಯೇ ನೀನು ಸಂಪತ್ತಿಗೋಸ್ಕರ, ಬ್ರಾಹ್ಮಣ್ಯಕ್ಕೋಸ್ಕರ, ಕಾಂತಿಗೋಸ್ಕರ, ದೇಹದ ಬಲಕ್ಕೋಸ್ಕರ ಮೃತಮನುಷ್ಯನ ಕೈಯಿಂದ ಚಿನ್ನವನ್ನು ತೆಗೆದುಕೊಳ್ಳುತ್ತಾ, ಈ ಲೋಕದಲ್ಲಿಯೇ ಇರು. ನಾವೂ ಕೂಡ ಈ ಲೋಕದಲ್ಲಿ ಸುಖವನ್ನು ಹೊಂದುತ್ತಾ, ನಮ್ಮಜೊತೆ ಸ್ಪರ್ಧಿಸುವ ಎಲ್ಲಾ ಶತ್ರುಗಳನ್ನೂ ಜಯಿಸೋಣ ॥

29. ಮಂತ್ರ (ಮೊದಲ ಮಂತ್ರ, ಕ್ಷತ್ರಿಯರಿಗೆ ಮತ್ತು ಎರಡನೆ ಮಂತ್ರ ವೈಶ್ಯರಿಗೆ) –

ಓಂ ಧನುರ್ ಹಸ್ತಾದಾದದಾನಾಮೃತಸ್ಯ ಶ್ರಿಯ್ಯೈ ಕ್ಷತ್ರಾಯೌಜಸೇ ಬಲಾಯ ।
ಅತ್ರೈವ ತ್ವಮಿಹ ವಯಗ್ಂ ಸುಶೇವಾ ವಿಶ್ವಾಸ್ಪೃಧೋ ಅಭಿಮಾತೀರ್ಜಯೇಮ ॥

ಓಂ ಮಣಿಗ್ಂ ಹಸ್ತಾದಾದದಾನಾಮೃತಸ್ಯ ಶ್ರಿಯ್ಯೈ ವಿಶೇ ಪುಷ್ಟ್ಯೈ ಬಲಾಯ ।
ಅತ್ರೈವ ತ್ವಮಿಹ ವಯಗ್ಂ ಸುಶೇವಾ ವಿಶ್ವಾಸ್ಪೃಧೋ ಅಭಿಮಾತೀರ್ಜಯೇಮ ॥

ವಿನಿಯೋಗ –

ಈ ಮೊದಲ ಮಂತ್ರದ ಮೂಲಕ, ಧನುಸ್ಸಿನಿಂದ 2 ಕೈಗಳನ್ನೂ ತಿಕ್ಕಬೇಕು ಮೃತನು ಕ್ಷತ್ರಿಯನಾಗಿದ್ದರೆ । ಹಾಗೆಯೇ ಎರಡನೇ ಮಂತ್ರದಿಂದ, ಮೃತನು ವೈಶ್ಯನಾಗಿದ್ದರೆ, ಮಣಿಯಿಂದ ಕೈಗಳನ್ನು ತಿಕ್ಕಬೇಕು ॥

ಅರ್ಥ –

ಎಲೈ ನಾರಿಯೇ, ನೀನು ಸಂಪತ್ತಿಗಾಗಿ, ಕ್ಷಾತ್ರ ಓಜಸ್ಸಿಗಾಗಿ ಮತ್ತು ಶರೀರದ ಬಲಕ್ಕಾಗಿ ಈ ಮೃತನ ಕೈಯಿಂದ ಧನಸ್ಸನ್ನು ಸ್ವೀಕರಿಸುತ್ತಾ ಈ ಲೋಕದಲ್ಲಿಯೇ ಇರು. ನಾವೂ ಕೂಡ ಈ ಲೋಕದಲ್ಲಿ ಸುಖವನ್ನು ಹೊಂದುತ್ತಾ, ನಮ್ಮಜೊತೆ ಸ್ಪರ್ಧಿಸುವ ಎಲ್ಲಾ ಶತ್ರುಗಳನ್ನೂ ಜಯಿಸೋಣ । ಇದು ಮೊದಲಮಂತ್ರದ ಅರ್ಥ ॥

ಹಾಗೆಯೇ, ಎಲೈ ನಾರಿಯೇ, ನೀನು ಸಂಪತ್ತಿಗಾಗಿ, ವೈಶ್ಯನ ಧರ್ಮವಾದ ವ್ಯಾಪಾರದಿಂದ ಸಮೃದ್ಧಿ ಹೊಂದುವುದಕ್ಕಾಗಿ ಹಾಗೂ ಶರೀರದ ಬಲಕ್ಕಾಗಿ ಮೃತನಾದ ಈ ಪುರುಷನ ಕೈಯಿಂದ ಮಣಿಯನ್ನು ಸ್ವೀಕರಿಸುತ್ತಾ ಈ ಲೋಕದಲ್ಲಿಯೇ ಇರು । ನಾವೂ ಕೂಡ ಈ ಲೋಕದಲ್ಲಿ ಸುಖವನ್ನು ಹೊಂದುತ್ತಾ, ನಮ್ಮಜೊತೆ ಸ್ಪರ್ಧಿಸುವ ಎಲ್ಲಾ ಶತ್ರುಗಳನ್ನೂ ಜಯಿಸೋಣ । ಇದು ಎರಡನೇ ಮಂತ್ರದ ಅರ್ಥ ॥

30. ಮಂತ್ರ (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ) –

ಓಂ ಇಮಮ॑ಗ್ನೇ ಚಮ॒ಸಂ ಮಾ ವಿ ಜೇಹ್ವರಃ ಮಿತ್ರೋ॑ ದೇ॒ವಾನಾ॒ಮುತ ಸೋ॑ಮ್ಯಾ॒ನಾಂ । ಏ॒ಷ ಯಶ್ಚ॑ಮ॒ಸೋ ದೇ॒ವಪಾ॑ನಸ್ತ॒ ಸ್ಮಿನ್ದೇವಾ ಅ॒ಮೃತಾ ಮಾದಯಂತಾಮ್ ॥

ವಿನಿಯೋಗ –

ಈ ಮಂತ್ರದಿಂದ, ಈ ಆಹಿತಾಗ್ನಿಯ ಯಜ್ಞಪಾತ್ರೆಗಳನ್ನು ದಧಿ ಮಿಶ್ರಿತ ತುಪ್ಪದಿಂದ ತುಂಬಿಸಿ, ಮೃತನ ಮುಖದಮೇಲೆ ಅಗ್ನಿಹೋತ್ರಹವಣಿಯನ್ನು – ಮೂಗಿನಮೇಲೆ, ಸ್ರುವಗಳನ್ನು – ಕಣ್ಣುಗಳಮೇಲೆ, ಚಿನ್ನದಕಡ್ಡಿಯನ್ನು ಅಥವಾ ಆಜ್ಯಪಾತ್ರೆಯನ್ನು – ಕಿವಿಗಳಮೇಲೆ, ಪ್ರಾಶಿತ್ರಹರಣವನ್ನು(ಬ್ರಹ್ಮನಿಗೆ ಪ್ರತೀಇಷ್ಟಿಯಲ್ಲಿ ಹವಿಸ್ಸನ್ನು ಕೊಡುವಪಾತ್ರೆ) – ಕಪಾಲಗಳನ್ನು(ಪುರೋಡಾಶವನ್ನಿಡುವ ಹೆಂಚಿನ ಚೌಕಾಕಾರದ ತುಂಡು) ಸ್ವಲ್ಪ ಒಡೆದು, ತಲೆಯಮೇಲೆ ಇಡಬೇಕು – ನೆತ್ತಿಯಮೇಲೆ, ಏಕಕಪಾಲವನ್ನು – ಬ್ರಹ್ಮರಂಧ್ರದ ಜಾಗದಲ್ಲಿ, ಪ್ರಣೀತಾ ಪ್ರಣಯನ ಮತ್ತು ಚಮಸಗಳನ್ನು ಇಡಬೇಕು ॥

ಅರ್ಥ –

ಎಲೈ ಅಗ್ನಿಯೇ, ಈ ಚಮಸವನ್ನು(ಸೋಮರಸವನ್ನು ಕುಡಿಯುವ ಪಾತ್ರೆ) ನಾಶವಾಗದಂತೆ ಮಾಡು. ಈ ಚಮಸವು ದೇವತೆಗಳಿಗೆ ಅತ್ಯಂತ ಪ್ರಿಯವಾದುದ್ದು. ಇದರಿಂದಲೇ ಸೋಮರಸವನ್ನು ಕುಡಿಯಲು ಇಷ್ಟಪಡುತ್ತಾರೆ. ಹಾಗೆಯೇ ಈ ಚಮಸವು ಸೋಮಯಾಗವನ್ನು ಮಾಡಲು ಯೋಗ್ಯರಾದ ಋತ್ವಿಜರಿಗೆ ಹಾಗೂ ಯಜಮಾನರಿಗೆ ಪ್ರಿಯವಾದದ್ದು. ಯಾವ ಚಮಸವು ದೇವತೆಗಳ ಸೋಮಪಾನಪಾತ್ರೆಯಾಗಿದೆಯೋ ಆ ಚಮಸದಿಂದ ದೇವತೆಗಳು ಈ ಮೃತಯಜಮಾನನನ್ನು ಸಂತೋಷಗೊಳಿಸಲಿ ॥

31. ಮಂತ್ರ (ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ) –

ಓಂ ಅಗ್ನೇರ್ವರ್ಮ ಪರಿಗೋಭಿರ್ವ್ಯಯಸ್ವ ಸಂಪ್ರೋರ್ಣುಷ್ವ ಮೇದಸಾ ಪೀವಸಾ ಚ । ನೇತ್ವಾಧೃಷ್ಣುರ್ ಹರಸಾ ಜಹ್ರ್ಯಷಾಣೋ ದಧದ್ವಿಧಕ್ಷ್ಯನ್ಪರ್ಯಂಖಯಾತ್ಯೈ ॥

ವಿನಿಯೋಗ –

ನಂತರ, ಈ ಮೃತನಾದ ಯಜಮಾನನ ಪಾದ, ಶಿರ ಸಹಿತವಾಗಿ(ಇಡೀ ದೇಹಕ್ಕೆ) ಈ ಮಂತ್ರದಿಂದ ಚರ್ಮದಹೊದಿಕೆಯನ್ನು, ಅದರ ಕೂದಲುಗಳು ಮೇಲ್ಮುಖವಾಗಿರುವಂತೆ, ಸಂಪೂರ್ಣವಾಗಿ ಹೊದಿಸಬೇಕು ॥

ಅರ್ಥ –

ಎಲೈ ಕವಚದಂತಿರುವ ಚರ್ಮದ ಹೊದಿಕೆಯೇ, ಅಗ್ನಿಯ ಜ್ವಾಲೆಗಳಿಂದ ಸುತ್ತಲೂ ಈ ಮೃತನನ್ನು ಆವರಿಸುವಂತೆ ಮಾಡು. ದಪ್ಪವಾದ ಮೇದಸ್ಸಿನಿಂದ ಕೂಡಿದ ಅವಯವಗಳಿಂದ ಎಲೈ ಚರ್ಮವೇ ಈ ಮೃತನನ್ನು ಸಂಪೂರ್ಣವಾಗಿ ಮುಚ್ಚು. ಅತ್ಯಂತ ತೀಕ್ಷ್ಣವಾದ ಜ್ವಾಲೆಯಿಂದ ಕೂಡಿದ ಅಗ್ನಿಯು, ಎಲೈ ಚರ್ಮವೇ ನಿನ್ನನ್ನು

ದಹಿಸುತ್ತಾ ತನ್ನ ತೇಜಸ್ಸಿನಿಂದ ವಿಶೇಷವಾಗಿ ಸುಡಲು ಹೊರಟದ್ದಾಗಿ, ಈ ಮೃತನಿಂದ ನೀನು ಪಕ್ಕಕ್ಕೆ ಸರಿಯದಂತೆ ಸುಡಲಿ ॥

32. ಮಂತ್ರ (ಆಹಿತಾಗ್ನಿಗಳಿಗೆ) –

ಓಂ ಮೈನಮಗ್ನೇ ವಿದಹೋ ಮಾಭಿಶೋಚೋ ಮಾಸ್ಯ ತ್ವಚಂ ಚಿಕ್ಷಿಪೋ ಮಾ ಶರೀರಮ್ । ಯದಾ ಶೃತಂ ಕರವೋ ಜಾತವೇದೋಽಥೇಮೇನಂ ಪ್ರಹಿಣುತಾತ್ ಪಿತೃಭ್ಯಃ ॥

ವಿನಿಯೋಗ –

ಈ ಮೃತನಿಗೆ ಈ ಮಂತ್ರದಿಂದ, ಅಗ್ನಿಯನ್ನು ಹತ್ತಿಸಿ, ಹೇಳಬೇಕು ॥

ಅರ್ಥ –

ಎಲೈ ಅಗ್ನಿಯೇ, ಈ ಮೃತನಾದ ಯಜಮಾನನನ್ನು ಅತ್ಯಂತವಾಗಿ ಸುಟ್ಟು, ಮಶೀ(ಕಪ್ಪು)ರೂಪದಂತೆ ಮಾಡಬೇಡ(ಸುಟ್ಟು ಕರಕಲಾಗುವಂತೆ ಮಾಡಬೇಡ, ಬಿಳೀಬೂದಿ ರೂಪದಂತೆ ಸುಡು) ಮತ್ತು ಇವನ ಬಂಧುಜನರಿಗೆ ಅಥವಾ ಇವನ ಪ್ರಾಣಗಳಿಗೆ ದುಃಖವಾಗದಂತೆ ಸುಡು. ಈ ಮೃತನ ಚರ್ಮವನ್ನು ಸ್ವಲ್ಪವೂ ಉಳಿಯದಂತೆ ಬೇರೇಕಡೆ ಹಾರದಂತೆ ಸುಡು. ಹಾಗೆಯೇ ಶರೀರವೂ ಕೂಡ, ಸ್ವಲ್ಪವೂ ಉಳಿಯದಂತೆ, ಹಾರಿಹೋಗದಂತೆ ಸುಡು. ಎಲೈ ಅಗ್ನಿಯೇ ಯಾವಾಗ ಈ ಮೃತನ ಶರೀರವು ಸಂಪೂರ್ಣವಾಗಿ ಸುಟ್ಟು ಪಕ್ವವಾಗುತ್ತದೆಯೋ ಅನಂತರ ಇವನನ್ನು ಪಿತೃಗಳ ಸಮೀಪಕ್ಕೆ ಹೋಗುವಂತೆ ಪ್ರೇರೇಪಿಸು ॥

33. ಮಂತ್ರ (ಆಹಿತಾಗ್ನಿಗಳಿಗೆ) –

ಓಂ ಶೃತ ಯದಾಕರಸಿ ಜಾತವೇದೋಽಥೇಮೇನಂ ಪರಿದತ್ತಾತ್ಪಿತೃಭ್ಯಃ । ಯದಾ ಗಚ್ಛಾತ್ಯಸುನೀತಿವೇತಾಮಥಾ ದೇವಾನಾಂ ವಶನೀರ್ಭವಾತಿ ॥

ವಿನಿಯೋಗ –

ಈ ಮಂತ್ರದಿಂದ, ಸಂಪೂರ್ಣ ಸುಟ್ಟು ಪ್ರಜ್ವಲಿಸಿದ ಈ ಮೃತನನ್ನು (ಕುರಿತು ಹೇಳುತ್ತಾನೆ)ಅನುಮಂತ್ರಿಸುತ್ತಾನೆ ॥

ಅರ್ಥ –

ಎಲೈ ಅಗ್ನಿಯೇ, ಯಾವಾಗ ಈ ಮೃತನ ಶರೀರವನ್ನು ಸಂಪೂರ್ಣಸುಟ್ಟು ಪಕ್ವ ಮಾಡಿದೆಯೋ ಆಗಲೇ(ಆ ಕ್ಷಣವೇ), ಇವನನ್ನು ಪಿತೃಗಳಿಗೆ ಕೊಟ್ಟುಬಿಡು. ಯಾವಾಗ ಈ ಸತ್ತ ಯಜಮಾನನು ನಿನ್ನಿಂದ ಪ್ರಾಣದ ಯಾತ್ರೆಯನ್ನು ಹೊಂದುತ್ತಾನೋ, ಆಗ ದೇವತೆಗಳ ವಶವನ್ನು ಹೊಂದುತ್ತಾನೆ.(ದೇವತೆಗಳ ಅಧೀನನಾಗುತ್ತಾನೆ) ॥

34. ಮಂತ್ರ (ಆಹಿತಾಗ್ನಿ + ಅನಾಹಿತಾಗ್ನಿಗಳಿಬ್ಬರಿಗೂ) –

ಓಂ ಸೂರ್ಯಂ ತೇ ಚಕ್ಷುರ್ಗಚ್ಛತು ವಾತಮಾತ್ಮಾ ದ್ಯಾಂ ಚ ಗಚ್ಛ ಪೃಥಿವೀಂ ಚ ಧರ್ಮಣಾ । ಅಪೋವಾಗಚ್ಛ ಯದಿ ತತ್ರ ತೇ ಹಿತಮೋಷಧೀಷು । ಪ್ರತಿತಿಷ್ಠಾ ಶರೀರೈಃ ॥

ವಿನಿಯೋಗ –

ಇಲ್ಲಿ, ಷಡ್ಧೋತೃ ಮಂತ್ರವನ್ನು(ಆರಣ್ಯಕದ 3ನೇ ಪ್ರಶ್ನೆ) ಹೇಳಬೇಕು. ದಹನವಾಗುತ್ತಿರುವ ಪ್ರೇತನನ್ನು ನೋಡುತ್ತಾ, ಈ ಮಂತ್ರವನ್ನು ಹೇಳಬೇಕು ॥

ಅರ್ಥ –

ಎಲೈ, ಪಶುವೇ(ಮೃತನಾದವನೇ), ಈ ಸೂರ್ಯನೇ ನಿನಗೆ ಕಣ್ಣು, ವಾಯುವೇ ಪ್ರಾಣ, ದ್ಯುಲೋಕ(ಪಿತೃಲೋಕ)ವೇ ಪೃಷ್ಠಭಾಗ, ಅಂತರಿಕ್ಷವೇ ನಿನ್ನ ಜೀವಾತ್ಮ, ಈ ನಿನ್ನ ಹೃದಯಾದಿ ಅಂಗಗಳಿಂದ ಯಜ್ಞಕ್ಕೆ ಹವಿಸ್ವರೂಪನಾಗಿದ್ದೀಯೇ. ಶರೀರದ

ಅಸ್ಥ್ಯಾದಿಗಳಿಂದ ಪೃಥಿವೀಸ್ವರೂಪವನ್ನು ಹೊಂದು. ಎಲೈ ಮೃತನಾದವನೇ, ನಿನ್ನ ಕಣ್ಣು ಇಂದ್ರಿಯಗಳು ಸೂರ್ಯನಿಗೆ ಹೋಗಿ ಸೇರಲಿ. ನಿನ್ನ ಪ್ರಾಣವು ವಾಯುವಿಗೆ ಹೋಗಿ ಸೇರಲಿ. ನಿನ್ನ ಪುಣ್ಯಕರ್ಮಗಳಿಂದ ದ್ಯುಲೋಕವನ್ನೂ, ಭೂಲೋಕವನ್ನೂ ಅಥವಾ ಅಪ್ ಲೋಕವನ್ನೂ ಕುರಿತು ಹೋಗು. ಯಾವ ಲೋಕದಲ್ಲಿ ನಿನಗೆ ಸುಖವು ಸಿಗುತ್ತದೋ ಆ ಲೋಕವನ್ನು ಹೊಂದಿ, ನಂತರ ಓಷಧಿಗಳನ್ನು ಅನುಶಯಿಯಾಗಿ(ಸೂಕ್ಷ್ಮಶರೀರಿಯಾಗಿ) ಪ್ರವೇಶಿಸಿ, ಆ ಓಷಧಿವನಸ್ಪತಿಗಳ ಮೂಲಕ, ಪಿತೃದೇಹವನ್ನು ಹೊಂದಿ(ಪುರುಷನ ರೇತೋರೂಪವಾಗಿ), ನಂತರ ತಾಯಿಯ ದೇಹವನ್ನು ಪ್ರವೇಶಿಸಿ(ಮೈಥುನದಿಂದ), ಅಲ್ಲಿ ನಿನಗೆ ಉಚಿತವಾದಂತಹ ದೇಹವನ್ನು ಪಡೆದು ಆ ಶರೀರದಿಂದ ಪ್ರತಿಷ್ಠೆಯನ್ನು ಹೊಂದು ॥

35. ಮಂತ್ರ (ಇಬ್ಬರಿಗೂ) –

ಓಂ ಅಜೋ ಭಾಗಸ್ತಪಸಾ ತಂ ತಪಸ್ವ ತಂ ತೇ ಶೋಚಿಸ್ತಪತು ತಂ ತೇ ಅರ್ಚಿಃ । ಯಾಸ್ತೇ ಶಿವಾಸ್ತನುವೋ ಜಾತವೇದಸ್ತಾಭಿರ್ವಹೇಮಗ್ಂ ಸುಕೃತಾಂ ಯತ್ರ ಲೋಕಾಃ ॥

ವಿನಿಯೋಗ –

ಈ ಚಿತಿಯ ಕೊನೆಯಲ್ಲಿ, ದುರ್ಬಲವಾದ ಹಗ್ಗದಿಂದ ಆಡನ್ನು ಕಟ್ಟಬೇಕು, ನಂತರ ಬೆಂಕಿಯ ಶಾಖಕ್ಕೆ ಹೆದರಿ ಓಡುವಾಗ ಈ ಮಂತ್ರವನ್ನು ಹೇಳಬೇಕು ॥

ಅರ್ಥ –

ಎಲೈ ಅಗ್ನಿಯೇ, ಈ ಆಡು ಭಾಗರಹಿತವಾಗಿದೆ, ಆದ್ದರಿಂದ ಈ ಆಡನ್ನು ನಿನ್ನ ಶಾಖದಿಂದ ತಪ್ತ(ಬಿಸಿ)ವಾಗುವಂತೆ ಮಾಡು ಹಾಗೆಯೇ ನಿನ್ನ ದುಃಖಕ್ಕೆ ಕಾರಣವಾದ ಜ್ವಾಲೆಯು ಈ ಆಡನ್ನು ತಪಿಸಲಿ(ಕಾಯಿಸಲಿ). ಹಾಗೆಯೇ ಬೆಳಗುವ ನಿನ್ನ ಜ್ವಾಲಾವಿಶೇಷವು ಈ ಆಡನ್ನು ತಪಿಸಲಿ. ಎಲೈ ಅಗ್ನಿಯೇ, ನಿನ್ನ ಸುಖಕ್ಕೆ ಕಾರಣವಾದ

ಜ್ವಾಲೆಗಳು ಈ ಮೃತನಾದ ಯಜಮಾನನನ್ನು ಪುಣ್ಯಕರ್ಮವನ್ನು ಮಾಡಿದವರು ಯಾವ ಲೋಕದಲ್ಲಿ ವಾಸವಾಗಿದ್ದಾರೋ, ಆ ಲೋಕಕ್ಕೆ ಕೊಂಡೊಯ್ಯಲಿ ॥

36. ಮಂತ್ರ (ಆಹಿತಾಗ್ನಿಗಳಿಗೆ) –

ಓಂ ಅಯಂ ವೈ ತ್ವಮಸ್ಮಾದಧಿ ತ್ವಮೇತದಯಂ ವೈ ತದಸ್ಯ ಯೋನಿರಸಿ । ವೈಶ್ವಾನರಃ ಪುತ್ರಃ ಪಿತ್ರೇ ಲೋಕಕೃಜ್ಜಾತವೇದೋ ವಹೇಮಗ್ಂ ಸುಕೃತಾಂ ಯತ್ರ ಲೋಕಾಃ ॥

ವಿನಿಯೋಗ –

ಈ ಮಂತ್ರದಿಂದ, ಒಂದು ಹೋಮವನ್ನು ಚಿತಿಯ ಮೇಲೆ ಮಾಡಬೇಕು ॥

ಅರ್ಥ –

ಎಲೈ ಅಗ್ನಿಯೇ, ಈ ಮೃತನಾದ ಯಜಮಾನನು ಹಾಗೂ ನೀನು ಇಬ್ಬರೂ ಒಂದೇ ಆಗಿದ್ದೀರಿ. ಈ ಮೃತನ ಶರೀರದ ಮೇಲೆ, ನೀನು ಒಂದಾಗಿ ಪ್ರತ್ಯಕ್ಷರೂಪದಿಂದ ಇದ್ದೀಯೇ. ಹೀಗೆ ಅತ್ಯಂತವಾಗಿ ಇಬ್ಬರೂ ಒಂದಾಗಿರುವ ಕಾರಣದಿಂದ ಈ ಮೃತನಾದ ಯಜಮಾನನಿಗೆ ಈ ವೈಶ್ವಾನರ ರೂಪನಾದ ನೀನೇ ಆಶ್ರಯನಾಗಿದ್ದೀಯೇ(ಕಾರಣನಾಗಿದ್ದೀಯೇ). ಲೋಕದಲ್ಲಿ ಮಗನು ತಂದೆಗೆ ಪುಣ್ಯಲೋಕಪ್ರದನಾಗಿರುತ್ತಾನೆ. ಈ ಯಜಮಾನನೂ ಕೂಡ ಜೀವಂತನಾಗಿದ್ದಾಗ ನಾನಾವಿಧವಾದ ಶಾಸ್ತ್ರೀಯ ಕರ್ಮಗಳಿಂದ ಅಗ್ನಿಯಾದ ನಿನ್ನನ್ನು ಪಾಲನೆ ಮಾಡಿದ್ದಾನಾದ್ದರಿಂದ ನಿನಗೇ ತಂದೆಯ ಸಮನಾಗಿದ್ದಾನೆ. ಆ ಕಾರಣದಿಂದ ಎಲೈ ಅಗ್ನಿಯೇ ಪುಣ್ಯವಂತರ ಲೋಕವನ್ನು ಈ ಮೃತನಾದ ಯಜಮಾನನಿಗೆ ಪ್ರಾಪ್ತವಾಗುವಂತೆ ಮಾಡು ॥

ಹೋಮದ ಮಂತ್ರಗಳು

37. ಮಂತ್ರ (ಇಬ್ಬರಿಗೂ) –

ಓಂ ಯ ಏತಸ್ಯ ಪಥೋ ಗೋಪ್ತಾರಃಸ್ತೇಭ್ಯಃ ಸ್ವಾಹಾ ॥

ವಿನಿಯೋಗ –

ಪರ್ಣಮಯವಾದ(ಎಲೆ), ಸ್ರುವದಿಂದ ತುಪ್ಪವನ್ನು ತೆಗೆದುಕೊಂಡು, ಈ ಮಂತ್ರವೂ ಸೇರಿ ಮುಂದಿನ 9 ಮಂತ್ರಗಳಿಂದ ಚಿತೆಯ ಅಗ್ನಿಯಲ್ಲಿ ಹೋಮಮಾಡಬೇಕು॥

ಅರ್ಥ –

ಮೃತನಾದ, ಈ ಯಜಮಾನನು ಸ್ವರ್ಗಲೋಕಕ್ಕೆ ಹೋಗುವಾಗ, ಮಾರ್ಗದಲ್ಲಿ 3 ವಿಧದ ದೇವತೆಗಳು ರಕ್ಷಕರಾಗಿರುತ್ತಾರೆ. ಅವರ ಹೆಸರು, ಗೋಪ್ತೃ – ರಕ್ಷಿತೃ – ಅಭಿರಕ್ಷಿತೃ. ಅವರು ಕ್ರಮವಾಗಿ 3 ಸ್ಥಾನಗಳಲ್ಲಿ ನಿಂತಿರುತ್ತಾರೆ. ಆ ಮೊದಲನೆಯ ಸ್ಥಾನದಲ್ಲಿ ನಿಂತಿರುವ ಮಾರ್ಗರಕ್ಷಕರಾದ ಗೋಪ್ತೃದೇವತೆಗಳಿಗೆ ಈ ತುಪ್ಪದ ಹವಿಸ್ಸು ಅರ್ಪಿತವಾಗಲಿ ॥

38. ಮಂತ್ರ (ಇಬ್ಬರಿಗೂ) –

ಓಂ ಯ ಏತಸ್ಯ ಪಥೋರಕ್ಷಿತಾರಸ್ತೇಭ್ಯಃ ಸ್ವಾಹಾ ॥

ಅರ್ಥ –

ಎರಡನೆಯ ಮಾರ್ಗರಕ್ಷಕ ಸ್ಥಾನದಲ್ಲಿ ನಿಂತಿರುವ ರಕ್ಷಕ ದೇವತೆಗಳಾದ ರಕ್ಷಿತೃಗಳಿಗೆ ಈ ಹವಿಸ್ಸು ಅರ್ಪಿತವಾಗಲಿ ॥

39. ಮಂತ್ರ (ಇಬ್ಬರಿಗೂ) –

ಓಂ ಯ ಏತಸ್ಯ ಪಥೋಽಭಿರಕ್ಷಿತಾರಸ್ತೇಭ್ಯಃ ಸ್ವಾಹಾ ॥

ಅರ್ಥ –

3 ನೆಯ ಮಾರ್ಗರಕ್ಷಕ ಸ್ಥಾನದಲ್ಲಿ ನಿಂತಿರುವ ಅಭಿರಕ್ಷಿತೃ ದೇವತೆಗಳಿಗೆ ಈ ಹವಿಸ್ಸು ಅರ್ಪಿತವಾಗಲಿ ॥

40. ಮಂತ್ರ (ಇಬ್ಬರಿಗೂ) –

ಓಂ ಆಖ್ಯಾತ್ರೇಸ್ವಾಹಾ ॥

ಅರ್ಥ –

ಯಜಮಾನನ ಸತ್ತನಂತರವೂ ಕೀರ್ತಿಯನ್ನು ಪ್ರಕಟಗೊಳಿಸುವ ಆಖ್ಯಾತೃದೇವತೆಗಳೇ, ನಿಮಗೆ ಈ ಹವಿಸ್ಸು ಅರ್ಪಿತವಾಗಲಿ ॥

41. ಮಂತ್ರ (ಇಬ್ಬರಿಗೂ) –

ಓಂ ಅಪಾಖ್ಯಾತ್ರೇ ಸ್ವಾಹಾ ॥

ಅರ್ಥ –

ಯಜಮಾನನ ಅಪಕೀರ್ತಿಯನ್ನು ಪ್ರಕಟಗೊಳಿಸುವ ಅಪಾಕ್ಯಾತೃದೇವತೆಗಳಿಗೆ ಈ ಹವಿಸ್ಸು ಅರ್ಪಿತವಾಗಲಿ(ಆ ಅಪಾಖ್ಯಾತೃದೇವತೆಗಳು ಸಂತೋಷಗೊಂಡವರಾಗಿ ನಿನ್ನ ಅಪಕೀರ್ತಿಯನ್ನು ಹೋಗಲಾಡಿಸಲಿ) ॥

42. ಮಂತ್ರ (ಇಬ್ಬರಿಗೂ) –

ಓಂ ಅಭಿಲಾಲಪತೇ ಸ್ವಾಹಾ ॥

ಅರ್ಥ –

ದೇವತೆಗಳ ಮುಂದೆ ಯಜಮಾನನ ಪುಣ್ಯಕರ್ಮಗಳನ್ನು ಸಂಪೂರ್ಣವಾಗಿ ಹೇಳುವ ಅಭಿಲಾಲಪ ದೇವತೆಗಳಿಗೆ ಈ ಹವಿಸ್ಸು ಅರ್ಪಿತವಾಗಲಿ ॥

43. ಮಂತ್ರ (ಇಬ್ಬರಿಗೂ) –

ಓಂ ಅಪಲಾಲಪತೇ ಸ್ವಾಹಾ ॥

ಅರ್ಥ –

ದೇವತೆಗಳಮುಂದೆ, ಯಜಮಾನನ ಪುಣ್ಯಕರ್ಮಗಳನ್ನು ಯಾವ ಅಪಲಾಲಪ ದೇವತೆಗಳು ಮುಚ್ಚಿಡುತ್ತಾರೋ, ಅವರಿಗೆ ಈ ಹವಿಸ್ಸು ಅರ್ಪಿತವಾಗಲಿ(ಅಪಲಾಲಪ ದೇವತೆಗಳು ಸಂತುಷ್ಟರಾಗಿ ಯಜಮಾನನ ಪುಣ್ಯಕರ್ಮಗಳನ್ನು ದೇವತೆಗಳ ಮುಂದೆ ಮುಚ್ಚದಂತೆ ಮಾಡುವುದಕ್ಕಾಗಿ) ॥

44. ಮಂತ್ರ (ಇಬ್ಬರಿಗೂ) –

ಓಂ ಅಗ್ನಯೇ ಕರ್ಮಕೃತೇ ಸ್ವಾಹಾ ॥

ಅರ್ಥ –

ಯಜಮಾನನು ಹಿಂದೆ ಮಾಡಿದ ಪುಣ್ಯಕರ್ಮಗಳ ಮತ್ತು ಈ ಔರ್ಧ್ವದೈಹಿಕ ಕರ್ಮದ ನಿಷ್ಪಾದಕರಾದ(ಉಂಟುಮಾಡುವವರಾದ), ಯಾವ ಕರ್ಮಕೃತ್ ಅಗ್ನಿದೇವನಿದ್ದಾನೋ, ಅವನಿಗೆ ಈ ಹವಿಸ್ಸು ಅರ್ಪಿತವಾಗಲಿ ॥

45. ಮಂತ್ರ (ಇಬ್ಬರಿಗೂ) –

ಓಂ ಯಮತ್ರ ನಾಧೀಮಸ್ತಸ್ಮೈ ಸ್ವಾಹಾ ॥

ಅರ್ಥ –

ಯಾವ ಬೇರೇ ದೇವತೆಗಳನ್ನು ಈ ಕರ್ಮದಲ್ಲಿ ಉಪಯುಕ್ತರಾದವರನ್ನು ನಾವು ಸ್ಮರಿಸಿಲ್ಲವೋ ಆ ದೇವತೆಗಳಿಗೆಲ್ಲಾ ಈ ಹವಿಸ್ಸು ಅರ್ಪಿತವಾಗಲಿ ॥

46. ಮಂತ್ರ (ಇಬ್ಬರಿಗೂ) –

ಓಂ ಯಸ್ತ ಇಧ್ಮಂ ಜಭರತ್ಸಿಷ್ವಿದಾನೋ ಮೂರ್ಧಾನಂ ವಾ ತತಪತೇ ತ್ವಾಯಾ । ದಿವೋ ವಿಶ್ವಸ್ಮಾತ್ಸೀಮಘಾಯತ ಉರುಷ್ಯಃ ॥

ವಿನಿಯೋಗ –

ಇದು ಮತ್ತು ಮುಂದಿನ ಮಂತ್ರಗಳ ವಿನಿಯೋಗವನ್ನು ಭಾರದ್ವಾಜ ಮತ್ತು ಬೋಧಾಯನ ಮಹರ್ಷಿಗಳು ಹೇಳಿಲ್ಲ. ಆದರೆ ಪ್ರಕರಣಬಲದಿಂದ ಇದು ಹೋಮಮಂತ್ರವೆಂದು ತಿಳಿದುಬರುತ್ತದೆ. ಆದ್ದರಿಂದ ಈ ಮಂತ್ರದಿಂದಲೂ ಹೋಮಿಸಬೇಕು ॥

ಅರ್ಥ –

ಎಲೈ ಅಗ್ನಿಯೇ, ಯಾವ ರಾಕ್ಷಸಾದಿಗಳು ನಿನಗೆ ಸಂಬಂಧಪಟ್ಟ ಇಧ್ಮವನ್ನು ಅಪಹರಿಸುತ್ತಾರೋ ಅಥವಾ ನಿನ್ನಿಂದ ಸುಡಲ್ಪಡಬೇಕಾದ ಮೃತಯಜಮಾನನ ತಲೆಯನ್ನು ಸ್ವಯಂ ನೀನು ಅತ್ಯಂತ ಬೆವರಿನಿಂದ ತಲೆಯನ್ನು ಒದ್ದೆಮಾಡಿ, ದಹಿಸುತ್ತೀಯೋ(ತನ್ನ ಬೆವರಿನಿಂದ ತಲೆಯನ್ನು ಒದ್ದೆಮಾಡುತ್ತಾ, ಶಾಸ್ತ್ರೀಯವಾದ ದಹನವು ಆಗದಂತೆ ಮಾಡಿ, ಸ್ವರ್ಗವು ಈ ಯಜಮಾನನಿಗೆ ಸಿಗದಂತೆ ಮಾಡುತ್ತೀಯೋ), ಮತ್ತು ಸ್ವರ್ಗಕ್ಕೆ ವಿಘ್ನರೂಪವಾದ ಪಾಪವನ್ನು ಏನು ಇಷ್ಟಪಡುತ್ತೀಯೋ, ಆ ಎಲ್ಲಾ

ಮೇಲೆ ಹೇಳಿದ ರಾಕ್ಷಸಾದಿ ವಿಘ್ನಗಳಿಂದ ಈ ಮೃತಯಜಮಾನನನ್ನು ನೀನು ರಕ್ಷಿಸಬೇಕು ॥

47. ಮಂತ್ರ (ಇಬ್ಬರೂ) –

ಓಂ ಅಸ್ಮಾತ್ತ್ವಮಧಿ ಜಾತೋಽಸಿ ತ್ವದಯಂ ಜಾಯತಾಂ ಪುನಃ । ಅಗ್ನಯೇ ವೈಶ್ವಾನರಾಯ ಸುವರ್ಗಾಯ ಲೋಕಾಯ ಸ್ವಾಹಾ ॥

ಅರ್ಥ –

ಎಲೈ ಅಗ್ನಿಯೇ, ಈ ಮೃತಯಜಮಾನನಿಂದ ನೀನು ಉತ್ಪತ್ತಿಯಾಗಿದ್ದೀಯೇ(ಈ ಮೃತಯಜಮಾನನು, ಜೀವಿಸಿದಾಗ ಮಾಡಿದ ಕರ್ಮಾನುಷ್ಠಾನದಿಂದ ನಿನ್ನನ್ನು ಸ್ವಾಮಿಯಾಗಿ ಪಡೆದಿದ್ದಾನೆ), ಆದ್ದರಿಂದ ಫಲವನ್ನು ಕೊಡುವ ಸಮಯದಲ್ಲಿ ಈ ಯಜಮಾನನು ಮತ್ತೆ ನಿನ್ನಿಂದ ಉತ್ಪತ್ತಿಯನ್ನು ಹೊಂದಲಿ(ಈ ಸ್ವರ್ಗಲೋಕದಲ್ಲಿ ಯಜಮಾನನನ್ನು ಉತ್ಪತ್ತಿಮಾಡು). ಈ ಉತ್ಪತ್ತಿಗಾಗಿ ಎಲ್ಲಾ ಮನುಷ್ಯರಿಗೂ ಹಿತವನ್ನುಂಟುಮಾಡುವ ವೈಶ್ವಾನರಾಗ್ನಿಯಾದ ನಿನಗೆ ಈ ಹವಿಸ್ಸು ಅರ್ಪಿತವಾಗಲಿ ॥

48. ಮಂತ್ರ (ಇಬ್ಬರಿಗೂ) –

ಓಂ ಪ್ರಕೇತುನಾ ಬೃಹತಾ ಭಾತ್ಯಗ್ನಿರಾವಿರ್ವಿಶ್ವಾನಿ ವೃಷಭೋ ರೋರವೀತಿ ।
ದಿವಶ್ಚಿದಂತಾದುಪ ಮಾಮುದಾನಡಪಾಮುಪಸ್ಥೇ ಮಹಿಷೋ ವವರ್ಧ ॥

ವಿನಿಯೋಗ –

ಇದೂ ಸೇರಿ ಕೆಳಗಿನ 9 ಯಮಸೂಕ್ತ ಮಂತ್ರಗಳಿಂದ ಕರ್ತೃವು ದೇಹವನ್ನು ಸುಡುತ್ತಿರುವ ಅಗ್ನಿಯನ್ನು ನೋಡುತ್ತಾ(ಉಪಸ್ಥಾನ) ಹೇಳುವ ಮಂತ್ರವು ॥

ಅರ್ಥ –

ಈ ಅಗ್ನಿಯು ಅತ್ಯಂತವಾದ ಧ್ವಜದಂತೆ ಕಾಣುವ ಜ್ವಾಲಾವಿಶೇಷದಿಂದ ಹೊಳೆಯುತ್ತಿದೆ. ಅಂತಹ ಈ ಅಗ್ನಿಯು ನಮ್ಮ ಎಲ್ಲಾ ಕಾಮನೆಗಳನ್ನೂ ಪೂರೈಸುವವನಾಗಿ, ಎಲ್ಲಾ ಫಲಗಳನ್ನುದ್ದೇಶಿಸಿ, ಅತಿಶಯವಾಗಿ ಶಬ್ದಮಾಡುತ್ತಾ, ನಮ್ಮ ಕಾಮನೆಗಳನ್ನು ಪೂರ್ಣಗೊಳಿಸುತ್ತಿದ್ದಾನೆ. ಸ್ವರ್ಗಕ್ಕಿಂತಲೂ ಮೇಲೆ ತಾನು ಇದ್ದವನಾಗಿ ನನಗೆ ಸಂಬಂಧಪಟ್ಟಂತಹ ಈ ಮೃತ ಯಜಮಾನನ ಅನುಗ್ರಹಕ್ಕಾಗಿ, ಇಲ್ಲಿಗೆ ಬಂದಿದ್ದಾನೆ. ಅಂತಹ ಈ ಅಗ್ನಿಯು ಪಡೆಯಬೇಕಾದಂತಹ ಫಲಗಳ ಸಮೀಪಕ್ಕೆ ನಮ್ಮನ್ನು ಕೊಂಡೊಯ್ದು, ಸ್ವತಃ ತಾನು ಅತ್ಯಂತ ವೃದ್ಧಿಯನ್ನು ಹೊದಿದ್ದಾನೆ ॥

49. ಮಂತ್ರ (ಇಬ್ಬರಿಗೂ) –

ಓಂ ಇದಂ ತ ಏಕಂ ಪರ ಊತ ಏಕಂ ತೃತೀಯೇನ ಜ್ಯೋತಿಷಾ ಸಂ ವಿಶಸ್ವ ।
ಸಂವೇಶನಸ್ತನುವೈ ಚಾರುರೇಧಿ ಪ್ರಿಯೋ ದೇವಾನಾಂ ಪರಮೇ ಸಧಸ್ಥೇ ॥

ಅರ್ಥ –

ಎಲೈ ಅಗ್ನಿಯೇ, ಸ್ವಾಭಾವಿಕವಾದಂತಹ ಇದು ನಿನ್ನ ಒಂದುತರಹದ ಜ್ವಾಲೆಯು, ಮತ್ತು ಮೃತನ ಶರೀರದ ಮೇಲಿರುವ ಜ್ವಾಲೆಯು ಇನ್ನೊಂದು ರೀತಿಯದು. ಈ ನಿನ್ನ 2 ಜ್ವಾಲೆಗಳನ್ನೂ ಕೂಡ ಪರಮಾತ್ಮರೂಪವಾದ ನಿನ್ನ ಸ್ವರೂಪದಲ್ಲಿ ಒಂದಾಗಿಸು. ನಿನ್ನ ಶರೀರದ ಈ 2 ಜ್ವಾಲೆಗಳನ್ನು ಪರಮಾತ್ಮರೂಪವಾದ ನಿನ್ನಲ್ಲಿ ಒಂದಾಗಿಸುತ್ತಾ, ದೇವತೆಗಳಿಗೆ ಅತ್ಯಂತ ಪ್ರಿಯನಾಗಿ ಹಾಗೂ ರಮಣೀಯನಾಗಿ ಇರು. ಅತ್ಯಂತ ಶ್ರೇಷ್ಠವಾದ ಪರಮಾತ್ಮನ ಸ್ಥಾನದಲ್ಲಿ ಇರುವವನಾಗು ॥

50. ಮಂತ್ರ (ಇಬ್ಬರಿಗೂ) –

ಓಂ ನಾಕೇ ಸುಪರ್ಣಮುಪಯತ್ಪತಂತಗ್ಂ ಹೃದಾ ವೇನಂತೋ ಅಭ್ಯಚಕ್ಷತ ತ್ವಾ । ಹಿರಣ್ಯಪಕ್ಷಂ ವರುಣಸ್ಯ ದೂತಂ ಯಮಸ್ಯ ಯೋನೌ ಶಕುನಂ ಭುರಣ್ಯುಮ್ ॥

ಅರ್ಥ –

ಎಲೈ ಅಗ್ನಿಯೇ, ನಿನ್ನನ್ನು ಋತ್ವಿಜರು ತಮ್ಮ ಮನಸ್ಸಿನಿಂದ ಕಾಮಿಸುತ್ತಾ, ಯಾವಾಗ ಎಲ್ಲ ಕಡೆಯಲ್ಲೂ ನಿನ್ನನ್ನು ಪ್ರಸಿದ್ಧಗೊಳಿಸುತ್ತಾರೋ, ಆಗ ನೀನು ಸಂತೋಷಗೊಳ್ಳುವವನಾಗು. ನೀನು ಸ್ವರ್ಗಲೋಕದ ಸಮೀಪದಲ್ಲಿ ಇರುವವನಾಗಿದ್ದೀಯೇ. ಆದ್ದರಿಂದಲೇ ಒಳ್ಳೆಯ ರೆಕ್ಕೆಗಳನ್ನುಳ್ಳವನಾಗಿದ್ದೀಯೆ. ಹಾಗೂ ಚಿನ್ನದ ರಕ್ಕೆಯುಳ್ಳವನಾಗಿದ್ದೀಯೆ. ವರುಣನಿಂದ ಪ್ರೇರೇಪಿಸಲ್ಪಟ್ಟವನಾಗಿ, ಯಮನ ಸ್ಥಾನದಲ್ಲಿ ಅಂದರೆ, ಮರಣಸ್ವಭಾವವಿರುವ ಜಾಗದಲ್ಲಿ ಭೋಗವನ್ನು ಸಂಪಾದಿಸುವವನಾಗಿ ಪಕ್ಷಿಯ ಆಕಾರದಿಂದ ಕೂಡಿದವನಾಗಿದ್ದೀಯೇ ॥

51. ಮಂತ್ರ (ಇಬ್ಬರಿಗೂ) –

ಓಂ ಅತಿದ್ರವ ಸಾರಮೇಯೌ ಶ್ವಾನೌ ಚತುರಕ್ಷೌ ಶಬಲೌ ಸಾಧುನಾ ಪಥಾ।
ಅಥಾ ಪಿತೄನ್ಸುವಿದತ್ರಾಗ್ಂ ಅಪೀಹಿ ಯಮೇನ ಯೇ ಸಧಮಾದಂ ಮದಂತಿ॥

ಅರ್ಥ –

ಎಲೈ ಅಗ್ನಿಯೇ, ಒಳ್ಳೆಯ ಮಾರ್ಗದಲ್ಲಿ, ಈ ಯಜಮಾನನನ್ನು ಯಮನ ಸಂಬಂಧಿಕರಾದ, ಜೀವಿಗಳನ್ನು ಪೀಡಿಸುವವರಾದ, 2 ನಾಯಿಗಳಿಂದ ಅತಿಕ್ರಮಿಸಿ, ಈ ಮೃತ ಯಜಮಾನನನ್ನು ಕೊಂಡೊಯ್ಯಿ. ಈ 2 ನಾಯಿಗಳು 'ಸರಮಾ' ಎಂಬ ಪ್ರಸಿದ್ಧವಾದ ನಾಯಿಯ ಮಕ್ಕಳು ಮತ್ತು 4 ಕಣ್ಣುಗಳುಳ್ಳವರಾಗಿದ್ದಾರೆ. ಒಳ್ಳೆಯ ಮಾರ್ಗದಲ್ಲಿ ಹೋದ ನಂತರ ಈ ಮೃತ ಯಜಮಾನನನ್ನು ಯಮನ ಜೊತೆ ಯಾವ ಪಿತೃಗಳು ಹರ್ಷಯುಕ್ತರಾಗಿ ಇರುತ್ತಾರೋ ಅಂತಹ ಒಳ್ಳೆಯ ಅಭಿಜ್ಞರಾದ ಪಿತೃಗಳನ್ನು ಸೇರುವಂತೆ ಮಾಡು ॥

52. ಮಂತ್ರ (ಇಬ್ಬರಿಗೂ) –

ಓಂ ಯೌ ತೇ ಶ್ವಾನೌ ಯಮರಕ್ಷಿತಾರೌ ಚತುರಕ್ಷೌ ಪಥಿರಕ್ಷೀ ನೃಚಕ್ಷಸಾ ।
ತಾಭ್ಯಾಗ್ಂ ರಾಜನ್ಪರಿದೇಹ್ಯೇನಗ್ಂ ಸ್ವಸ್ತಿಚಾಸ್ಮಾ ಅನಮೀವಂ ಚ ಧೇಹಿ ॥

ಅರ್ಥ –

ಎಲೈ ಯಮನೇ, ನಿನಗೆ ಸಂಬಂಧಿಸಿದ, ಯಾವ ಈ 2 ನಾಯಿಗಳಿವೆಯೋ, ಅವುಗಳಿಗೆ ರಾಜನಾದವನೇ, ಆ 2 ನಾಯಿಗಳಿಂದ ಈ ಮೃತ ಯಜಮಾನನನ್ನು ಬಿಡಿಸು. ಯಮಗೃಹ ರಕ್ಷಕರಾದ, 4 ಕಣ್ಣುಗಳಿಂದ ಕೂಡಿದ, ಮಾರ್ಗರಕ್ಷಕರಾದ, ಶ್ರುತಿಸ್ಮೃತಿ ಪುರಾಣಗಳನ್ನು ಅರಿತವರಾದ ವಿದ್ವಾಂಸರಿಂದ ಪ್ರಸಿದ್ಧಿಹೊಂದಿದ ಈ 2 ನಾಯಿಗಳಿಗೆ ಮೃತ ಯಜಮಾನನನ್ನು ರಕ್ಷಣೆಗೆಕೊಟ್ಟು, ಈ ಯಜಮಾನನಿಗೆ ಕ್ಷೇಮವನ್ನೂ, ರೋಗಾಭಾವವನ್ನೂ, ಉಂಟುಮಾಡು ॥

53. ಮಂತ್ರ (ಇಬ್ಬರಿಗೂ) –

ಓಂ ಉರುಣಸಾ ವಸುತೃಪಾವುಲುಂಬಲೌ ಯಮಸ್ಯ ದೂತೌ ಚರತೋವಶಾಗ್ಂ ಅನು । ತಾವಸ್ಮಭ್ಯಂ ದೃಶಯೇ ಸೂರ್ಯಾಯ ಪುನರ್ದತ್ತಾ ವಸುಮದ್ಯೇಹ ಭದ್ರಮ್ ॥

ಅರ್ಥ –

ಎಲೈ, ಯಮಸಂಬಂಧಿಯಾದ ದೂತರಿಬ್ಬರೇ, ಪರತಂತ್ರರಾದ ಪ್ರಾಣಿಗಳನ್ನು ಕುರಿತು ನೀವು ಎಲ್ಲ ಕಡೆ ಹೋಗುವವರಾಗಿದ್ದೀರಿ. ನೀವು ಉದ್ದನೆಯ ಮೂಗುಳ್ಳವರಾಗಿಯೂ, ಹಾಗೂ ಪ್ರಾಣಿಗಳ ಪ್ರಾಣವನ್ನು ಸ್ವೀಕರಿಸಿ, ಅದರಿಂದ ಸಂತೋಷಗೊಳ್ಳುವವರೂ ಅತ್ಯಂತ ಬಲಿಷ್ಠರಾದವರೂ ಆಗಿದ್ದೀರಿ. ಆ ದೂತರಾದ ನೀವಿಬ್ಬರು ಸೂರ್ಯನ ದರ್ಶನಕ್ಕಾಗಿ ಈ ದಿನ ಈ ಕರ್ಮದಲ್ಲಿ ಚೆನ್ನಾಗಿ ನಮಗೆ ಪ್ರಾಣವನ್ನು(ಶಕ್ತಿಯನ್ನು) ಕೊಡುವವರಾಗಿ ॥

54. ಮಂತ್ರ (ಇಬ್ಬರಿಗೂ) –

ಓಂ ಸೋಮ ಏಕೇಭ್ಯಃ ಪವತೇ ಘೃತಮೇಕ ಉಪಾಸತೇ । ಯೇಭ್ಯೋ ಮಧು ಪ್ರಧಾವತಿ ತಾಗ್ಶ್ಚಿದೇವಾಪಿ ಗಚ್ಛತಾತ್ ॥

ಅರ್ಥ –

ಕೆಲವು ಯಜಮಾನರಿಗೋಸ್ಕರವಾಗಿ, ವಸ್ತ್ರದಿಂದ ಶೋಧಿಸಿದ ಸೋಮವು(ಸೋಮರಸ) ಶುದ್ಧವಾಗುತ್ತದೆ. ಇನ್ನುಕೆಲವು ಯಜಮಾನರು, ತುಪ್ಪವನ್ನು ಹವಿಸ್ಸಾಗಿಉಳ್ಳಹವಿರ್ಯಜ್ಞವನ್ನುಮಾಡುತ್ತಾರೆ.ಯಾರಿಗೆಉಪನಿಷತ್ತಿನಲ್ಲಿ(ಬೃಹದಾರಣ್ಯಕ) ಹೇಳಿರುವ ಮಧುವಿದ್ಯೆಯು ಫಲಿಸಲ್ಪಟ್ಟಿದೆಯೋ(ಸಿದ್ಧಿ), ಆ ಎಲ್ಲಾ ಯಜಮಾನರನ್ನೂ ಕುರಿತು ಈ ಮೃತ ಯಜಮಾನನು ಹೋಗಿ ಸೇರಲಿ(ಸೋಮಯಾಜಿಗಳ, ದರ್ಶಪೂರ್ಣಮಾಸಯಾಜಿಗಳ ಹಾಗೂ ಉಪಾಸಕರ ಪುಣ್ಯಲೋಕವನ್ನು ಈ ಮೃತಯಜಮಾನನೂ ಹೊಂದಲಿ) ॥

55. ಮಂತ್ರ (ಇಬ್ಬರಿಗೂ) –

ಓಂ ಯೇ ಯುಧ್ಯಂತೇ ಪ್ರಧನೇಷು ಶೂರಾಸೋ ಯೇ ತನುತ್ಯಜಃ । ಯೇ ವಾ ಸಹಸ್ರ ದಕ್ಷಿಣಾಸ್ತಾಗ್ಶ್ಚಿದೇವಾಪಿ ಗಚ್ಛತಾತ್ ॥

ಅರ್ಥ –

ಯಾವ ಕ್ಷತ್ರಿಯರು, ಅತ್ಯಂತ ಐಶ್ವರ್ಯ ಸಂಪಾದನೆಗೆ ಯುದ್ಧವನ್ನು ಮಾಡುತ್ತಾರೋ, ಆ ಯುದ್ಧದಲ್ಲಿ ಯಾವ ಶೂರರಾದ ಭಟರು ಶರೀರತ್ಯಾಗ ಮಾಡುತ್ತಾರೋ, ಅಥವಾ ಯಾವ ಪುರುಷರು ವಿಶ್ವಜಿತ್ ಮುಂತಾದ ಯಾಗಗಳನ್ನು ಮಾಡಿ, ತಮ್ಮ ಸರ್ವಸ್ವವನ್ನೂ ದಕ್ಷಿಣೆಯಾಗಿ ಕೊಡುತ್ತಾರೋ, ಅವರ ಲೋಕವನ್ನೂ ಈ ಮೃತಯಜಮಾನನು ಸೇರಲಿ ॥

ದ್ವಾವಿಮೌ ಪುರುಷೌ ಲೋಕೇ ಸೂರ್ಯಮಂಡಲ ಭೇದಿನೌ ।
ಪರಿವ್ರಾಟ್ ಯೋಗಯುಕ್ತಶ್ಚ ರಣೇ ಚ ಅಭಿಮುಖೇ ಹತಃ ॥
ಧರ್ಮ್ಯಾದ್ಧಿ ಯುದ್ಧಾತ್ ಶ್ರೇಯೋನ್ಯತ್ ಕ್ಷತ್ರಿಯಸ್ಯ ನ ವಿದ್ಯತೇ ।(ಗೀತಾ)

ಲೋಕದಲ್ಲಿ, ಇಬ್ಬರು ಮಹಾಪುರುಷರು ಸೂರ್ಯಮಂಡಲವನ್ನು ಭೇದಿಸಿ, ಹಿರಣ್ಯಗರ್ಭಲೋಕವನ್ನು ಪಡೆದುಕೊಳ್ಳುತ್ತಾರೆ. ಪರಮಾರ್ಥಸ್ವರೂಪ ತತ್ವ ಚಿಂತನೆಯಲ್ಲಿ ಸದಾ ನಿರತನಾದ ಸಂನ್ಯಾಸಿಯು ಮತ್ತು ಯುದ್ಧದಲ್ಲಿ ಶತ್ರುಗಳಿಂದ ಹತನಾದವನು

ಇವರಿಬ್ಬರಿಗೆ ಈ ಲೋಕವು ದೊರಕುತ್ತದೆ ॥ ಕ್ಷತ್ರಿಯನಿಗೆ, ಯುದ್ಧಕ್ಕಿಂತ ಶ್ರೇಷ್ಠವಾದ ಧರ್ಮವು ಇನ್ನೊಂದಿಲ್ಲ ಎಂದು ಗೀತೆಯಲ್ಲಿ ಹೇಳಿದೆ ॥

56. ಮಂತ್ರ (ಇಬ್ಬರಿಗೂ) –

ಓಂ ತಪ॑ಸಾ ಯೇ ಅ॑ನಾಧೃಷ್ಯಾ॒ಸ್ತಪ॑ಸಾ ಯೇ ಸು॒ವರ್ಗ॑ತಾಃ । ತಪ॑ಸೋ ಯೇ ಚ॒ಕ್ರಿರೇ॑ ಮ॒ಹತ್ತಾ॒ಗ್ಶ್ಚಿದೇ॒ವಾಪಿ॑ ಗಚ್ಛ॒ತಾತ್ ॥

ಅರ್ಥ –

ಯಾವ ಪುರುಷರು ಈ ಲೋಕದಲ್ಲಿ ತಪಸ್ಸಿನಿಂದ ಕೂಡಿದವರಾಗಿ, ಯಾರಿಂದಲೂ ತಿರಸ್ಕರಿಸಲ್ಪಡದವರಾಗಿದ್ದಾರೋ, ಯಾವ ಬೇರೇ ಪುರುಷರು ತಾವು ಮಾಡಿದ ತಪಸ್ಸಿನಿಂದ ಸ್ವರ್ಗಲೋಕವನ್ನು ಹೊಂದಿದ್ದಾರೋ, ಇನ್ನು ಯಾರು ಅತ್ಯಂತ ಕಠಿಣ ತಪಸ್ಸನ್ನು ಮಾಡಿದ್ದಾರೋ ಅವರ ಲೋಕವನ್ನು ಈ ಮೃತ ಯಜಮಾನನು ಹೊಂದಲಿ ॥

57. ಮಂತ್ರ (ಇಬ್ಬರಿಗೂ)

ಓಂ ಅ॒ಶ್ಮ॒ನ್ವತೀ॑ ರೇವ॒ತೀಸ್ಸ್ಗ್ಂ ರ॑ಭಧ್ವ॒ಮುತ್ತಿ॑ಷ್ಠತ ಪ್ರ॒ತರ॑ತಾ ಸಖಾಯಃ । ಅ॒ತ್ರಾ ಜ॑ಹಾ॒ಮ॒ ಯೇ ಅ॒ಸನ್ನ॒ಶೇವಾ॒ಶ್ಮಿವಾ॑ನ್, ವ॒ಯ॒ಮ॒ಭಿವಾ॒ಜಾನು॑ತ್ತ॒ರೇಮ ॥

ವಿನಿಯೋಗ –

ದಹನದೇಶದ, ಹಿಂದೆ ಉತ್ತರಕ್ಕೆ 3 ಗುಂಡಿಗಳನ್ನು ಮಾಡಿ(ಕರ್ಷು), ಅದಕ್ಕೆ ಕಲ್ಲು ಮತ್ತು ಮರಳನ್ನು ಹಾಕಿ, ಬೆಸಸಂಖ್ಯೆಯ ನೀರಿನ ಕಲಶಗಳಿಂದ ಅದಕ್ಕೆ ನೀರನ್ನು ತುಂಬಿ, ಅಲ್ಲಿ ಜ್ಞಾತಿಗಳು ಮತ್ತು ಕರ್ತೃ ಈ ಮಂತ್ರದಿಂದ ಅವಗಾಹನ(ಮುಳುಗು) ಸ್ನಾನ ಮಾಡಬೇಕು ॥

ಅರ್ಥ –

(ಆ ಗುಂಡಿಯ ನೀರಿನಲ್ಲಿ ಸ್ನಾನಮಾಡಲು ಪರಸ್ಪರ ಜ್ಞಾತಿಗಳು ಈ ರೀತಿಯಾಗಿ ಹೇಳಿಕೊಳ್ಳುತ್ತಾರೆ), ಎಲೈ ಸಂಬಂಧಿಕರೇ (ಸ್ನೇಹಿತರೇ), ಐಶ್ವರ್ಯಕ್ಕೆ ಕಾರಣವಾದ, ಕಲ್ಲುಗಳಿಂದ ಕೂಡಿದ ಈ ಗುಂಡಿಯ ನೀರಿಗೆ ಹೋಗಿ, ಅಲ್ಲಿ ಸ್ನಾನಮಾಡಿ, ಉತ್ಸಾಹಯುಕ್ತರಾಗಿ ಮೇಲಕ್ಕೆ ಬನ್ನಿ. ಈ ಕ್ರಮದಿಂದಲೇ ಈ ಮೂರೂ ಗುಂಡಿಗಳಲ್ಲೂ ಸ್ನಾನಮಾಡಿ ಬನ್ನಿರಿ. ಈ ದಹನದ ಜಾಗದಲ್ಲಿ, ಸಹಿಸಲು ಅಸಾಧ್ಯವಾದ ಯಾವ ದುಃಖಗಳಿದ್ದವೋ, ಅವುಗಳನ್ನೆಲ್ಲವನ್ನೂ ನಾವು ತ್ಯಾಗ ಮಾಡಿದ್ದೇವೆ. ಸುಖಕ್ಕೆ ಕಾರಣವಾದ ಅನ್ನ ವಿಶೇಷಗಳನ್ನು ಕುರಿತು ನಾವು ಹೋಗುವವರಾಗೋಣ ॥

58. ಮಂತ್ರ (ಇಬ್ಬರಿಗೂ) –

ಓಂ ಯದ್ವೈ ದೇವಸ್ಯ ಸವಿತುಃ ಪವಿತ್ರಗ್ಂ ಸಹಸ್ರಧಾರಂ ವಿತತಮಂತರಿಕ್ಷೇ ।
ಯೇನಾಪುನಾದಿಂದ್ರಮನಾರ್ತಮಾರ್ತ್ಯೈ ತೇನಾಹಂ ಮಾಗ್ಂ ಸರ್ವತನುಂ
ಪುನಾಮಿ ॥

ವಿನಿಯೋಗ –

ಅಗೆದ ಗುಂಡಿಗಳ ಹಿಂದೆ, ಎಲೆಯಿರುವ ಕೋಲುಗಳನ್ನು ಹುದುಗಿಸಿ, ಗಟ್ಟಿಯಲ್ಲದ ಹಗ್ಗವನ್ನು ತೋರಣದಂತೆ ಕಟ್ಟಿ, ಅದರೊಳಗೆ ಜ್ಞಾತಿಗಳು ಈ ಮಂತ್ರದಿಂದ ನುಸುಳಿ ಹೋಗಬೇಕು ॥

ಅರ್ಥ –

ಪ್ರೇರಕನಾದ ಸೂರ್ಯದೇವನಿಗೆ ಸಂಬಂಧಪಟ್ಟ, ಶುದ್ಧಿಗೆ ಕಾರಣವಾದ ಈ ಹಗ್ಗವೇನಿದೆಯೋ, ಅದು ಸಾವಿರಾರು ರಂಧ್ರಗಳಿರುವ ಆಕಾಶದಲ್ಲಿ ಹರಡಿಕೊಂಡಿದೆ. ಸೂರ್ಯರೂಪನಾದ ಈ ತೋರಣರೂಪದ ಹಗ್ಗದಿಂದ, ಇಂದ್ರನು ಬಹಳ ಹಿಂದಿನ ಕಾಲದಲ್ಲಿ ದುಃಖದಿಂದ ಮತ್ತೆ ದುಃಖವನ್ನು ಹೊಂದದಂತೆ ಪವಿತ್ರಗೊಳಿಸಲ್ಪಟ್ಟನು. ಅಂತಹ ಈ ತೋರಣರೂಪವಾದ ಹಗ್ಗದಿಂದ ಮೃತನ ಜ್ಞಾತಿಯಾದ ನಾನು ಸಂಪೂರ್ಣಶರೀರದಿಂದ ಶುದ್ಧಿಗೊಳಿಸಲ್ಪಡುವೆನು ॥

59. ಮಂತ್ರ (ಇಬ್ಬರಿಗೂ) –

ಓಂ ಯಾ ರಾಷ್ಟ್ರಾತ್ಪನ್ನಾದಪಯಂತಿ ಶಾಖಾ ಅಭಿಮೃತಾ ನೃಪತಿಮಿಚ್ಛಮಾನಾಃ। ಧಾತುಸ್ತಾಸ್ಸರ್ವಾಃ ಪವನೇನ ಪೂತಾಃ ಪ್ರಜಯಾಸ್ಮಾನ್ರಯ್ಯಾ ವರ್ಚಸಾ ಸಗ್ಂ ಸೃಜಾಥ ॥

ವಿನಿಯೋಗ –

ಈ ಮಂತ್ರದಿಂದ, ಅಧ್ವರ್ಯುಕ್ರಮದಿಂದ ಎಲ್ಲರೂ ಕ್ರಮವಾಗಿ ಆ ತೋರಣದಲ್ಲಿ ನುಸುಳಿ ಹೋಗಬೇಕು(ಸ್ಮಶಾನಕ್ಕೆ ಬಂದಂತಹ ಎಲ್ಲರೂ), ಹಾಗೂ ಹಗ್ಗದ, ಒಳಗೆ ಯಾವ ಜ್ಞಾತಿಗಳು ನುಸುಳಿಹೋಗುತ್ತಾರೋ, ಅವರಲ್ಲಿ ಕೊನೆಯವನಾಗಿ ನುಸುಳಿಹೋಗುವ ದಹನ ಕರ್ತೃವು(ಮೃತನ ಮಗನು), ಎರಡು ಶಾಖೆಗಳನ್ನು ತೋರಣಸಹಿತವಾಗಿ ನುಸುಳಿದ ನಂತರ ಎಸೆಯಬೇಕು ॥

ಅರ್ಥ –

ಅನುಕ್ರಮವಾಗಿ, ಈ ಹಿಂದೆ ಸಮಾಜದಲ್ಲಿ ಮೃತರಾದ ಎಲ್ಲಾ ಮನುಷ್ಯರು, ತಮ್ಮ ಪಾಲನೆಯನ್ನು ಮತ್ತೂ ಯಜಮಾನಿಕೆಯನ್ನು ಇಚ್ಛೆಪಡುತ್ತಾ ಜೀವನವನ್ನು ನಡೆಸಿ, ಪ್ರಾಪ್ತವಾದ ರಾಷ್ಟ್ರದಿಂದ(ಪ್ರಾಂತ್ಯ/ಊರು), ತಮ್ಮ ಮರಣದ ಕಾರಣದಿಂದ, ಯಾವ ಶಾಖೆಗಳನ್ನು ತೊಲಗಿಸುತ್ತಾರೋ(ಎಸೆಯುತ್ತಾರೋ), ಆ ಶಾಖೆಗಳು ಶುದ್ಧಿಗೆ ಕಾರಣವಾದ ವಾಯುವಿನಿಂದ, ಪವಿತ್ರಗೊಳಿಸಲ್ಪಟ್ಟಿವೆ. ಅಂತಹಾ ಎಲೈ ಶಾಖೆಗಳೇ ನಮ್ಮನ್ನು ನಮ್ಮ ಪ್ರಜೆಗಳಜೊತೆ ಒಂದುಗೂಡಿಸಿ ॥

60. ಮಂತ್ರ (ಆಹಿತಾಗ್ನಿ+ಅನಾಹಿತಾಗ್ನಿಗಳಿಬ್ಬರಿಗೂ) –

ಓಂ ಉದ್ವಯಂ ತಮಸಸ್ಪರಿ ಪಶ್ಯಂತೋ ಜ್ಯೋತಿರುತ್ತರಂ । ದೇವಂ ದೇವತ್ರಾ ಸೂರ್ಯಮಗನ್ಮ ಜ್ಯೋತಿರುತ್ತಮಮ್ ॥

ವಿನಿಯೋಗ –

ಈ ಮಂತ್ರವನ್ನು ಸೂರ್ಯನನ್ನು (ನೋಡುತ್ತಾ)ಉಪಸ್ಥಾನ ಮಾಡುತ್ತಾ ಹೇಳಬೇಕು ॥

ಅರ್ಥ –

ನಾವೆಲ್ಲರೂ, ಕತ್ತಲೆಯ(ಅಜ್ಞಾನ) ಆಚೆಗಿರುವ ಮತ್ತು ಕತ್ತಲೆಯನ್ನು(ಅಜ್ಞಾನವನ್ನು) ನಾಶಪಡಿಸುವ ಉತ್ತಮವಾದ ಸೂರ್ಯನಿಗೆ ಸಂಬಂಧಪಟ್ಟ, ಆ ಜ್ಯೋತಿಯನ್ನು ನೋಡುತ್ತಾ, ದೇವತೆಗಳ ಮಧ್ಯೇ ಉತ್ತಮನಾದ ಸೂರ್ಯನ ಸಾಯುಜ್ಯವನ್ನು ಹೊಂದೋಣ ॥

61. ಮಂತ್ರ (ಇಬ್ಬರಿಗೂ) –

ಓಂ ಧಾತಾ ಪುನಾತು ಸವಿತಾಪುನಾತು । ಅಗ್ನೇಸ್ತೇಜಸಾ ಸೂರ್ಯಸ್ಯ ವರ್ಚಸಾ ॥

ವಿನಿಯೋಗ –

ಸ್ಮಶಾನ ಮತ್ತು ಚಿತೆಗಳನ್ನು ನೋಡದೇ, ಎಲ್ಲರೂ ಈ ಮಂತ್ರದಿಂದ ಸ್ನಾನ ಮಾಡುತ್ತಾರೆ ॥

ಅರ್ಥ –

ಜಗತ್ತಿನ ಸೃಷ್ಟಿಕರ್ತನಾದ ಪ್ರಜಾಪತಿಯು, ಅಗ್ನಿಗೆ ಸಂಬಂಧಿಸಿದ ತೇಜಸ್ಸಿನಿಂದ ನಮ್ಮನ್ನು ಶುದ್ಧಿಗೊಳಿಸಲಿ. ಹಾಗೆಯೇ ಪ್ರೇರಕದೇವನಾದ ಸವಿತೃದೇವನು ಸೂರ್ಯನಿಗೆ ಸಂಬಂಧಿಸಿದ ತೇಜಸ್ಸಿನಿಂದ ನಮ್ಮನ್ನು ಶುದ್ಧಿಗೊಳಿಸಲಿ ॥

ಅನಿತ್ಯಾನಿ ಶರೀರಾಣಿ ವಿಭವೋ ನೈವ ಶಾಶ್ವತಂ ।
ನಿತ್ಯಸ್ಸನ್ನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮ ಸಂಗ್ರಹಃ ॥

ಶರೀರಗಳು ಅನಿತ್ಯವಾಗಿವೆ, ಸಂಪತ್ತುಗಳು ಶಾಶ್ವತವಲ್ಲ.
ಮರಣವೂ ಸಹ ಹತ್ತಿರದಲ್ಲೇ ಇದೆ, ಆದ್ದರಿಂದ ಬುದ್ಧಿವಂತರಾದವರು
ಧರ್ಮವನ್ನು (ಪುಣ್ಯ) ಸದಾಕಾಲ ಸಂಗ್ರಹ ಮಾಡಿಕೊಳ್ಳಬೇಕು.

ಶ್ರೀ ಚೈತನ್ಯ ಗುರುನಾಥ ಪ್ರಕಾಶನ
ವೇದಬ್ರಹ್ಮ ಶ್ರೀ ಎ.ಸಿ. ಶಕ್ತಿಧರ ಶರ್ಮಾ
ಸಂಪಾದಕರು, ಅನುವಾದಕರು ಮತ್ತು ಪ್ರಕಾಶಕರು

C/o ಶ್ರೀಮಾನ್ ಸುಬ್ರಹ್ಮಣ್ಯ ಪ್ರಸಾದ್‌ರವರು
ನಿಸರ್ಗ ಬಡಾವಣೆ, ಭಾರತ್ ಪೆಟ್ರೋಲ್‌ಬಂಕ್ ಎದುರು
ಎಂ.ಆರ್.ಎಸ್. ಬೈಪಾಸ್ ರಸ್ತೆ,
ಶಿವಮೊಗ್ಗ – 577202, ಕರ್ನಾಟಕ
ಮೊ: 9686497982, ಈ-ಮೇಲ್: acs.shimoga@gmail.com

ಬೆಲೆ : ರೂ. 300/-